TIGHT BINDING BOOK

THE BOOK WAS DRENCHED

TEXT LITE WITHIN THE BOOK ONLY

UNIVERSAL LIBRARY
OU_200510
UNIVERSAL LIBRARY

OUP—43—30-1-71—5,000

OSMANIA UNIVERSITY LIBRARY

Call No. K81/C78A Accession No. 22 19

Author

Title

This book should be returned on or before the date last marked bel

KARNATAKA

Kavya Kalanidhi Series,

NO 9.

ABHINAVA DASAKUMARA CHARITE

BY

CHOUNDA RAJA.

Volume I (chapters I to VII inclusive)

ಚೌಂಡರಾಜ ವಿರಚಿತ

ಅಭಿನವದಶಕುಮಾರಚರಿತೆ.

ಪ್ರಥಮಸಂಪುಟಂ (ಅಧ್ಯಾಯ ೧—೭)

ಎಸ್. ಜಿ. ನರಸಿಂಹಾಚಾರ್
ಲೈಬ್ರೇರಿಯನ್ ಗವರ್ನಮೆಂಟು ಓರಿಯಂಟಲ್ ಲೈಬ್ರರಿ,
ಸಂಸ್ಕೃತ ಟ್ರಾನ್ಸ್ಲೇಟರ್ ಗವರ್ನಮೆಂಟ್ ಸೆಕ್ರೆಟೇರಿಯಟ್ ಆಫೀಸ್, ಮೈಸೂರು

ಮತ್ತು

ಎಂ. ಎ. ರಾಮಾನುಜಯ್ಯಂಗಾರಿ
ಅಸಿಸ್ಟೆಂಟ್ ಮಾಸ್ಟರ್ ಮಹಾರಾಜಾಸ್ ಹೈಸ್ಕೂಲ್ ಮೈಸೂರ್
ಇವರುಗಳಿಂದ ಶೋಧಿಸಲ್ಪಟ್ಟಿತು

ಮೈಸೂರ್.

ಸ್ಟೇಟ್ ಪ್ರೆಸ್ಸಿನಲ್ಲಿ ಮುದ್ರಿತವಾಯಿತು

1902.

ಪೀಠಿಕೆ

— ಕವಿಚರಿತ್ರೆ :

ಈ ಗ್ರಂಥಕರ್ತನಿಗೆ ಚೌಂಡರಾಜನೆಂದು ಹೆಸರು. ಈತನು ಭಾರದ್ವಾಜಗೋತ್ರದ ಮಧುಸೂದನನೆಂಬ ಬ್ರಾಹ್ಮಣನ ಮಗನು. ಈತನ ತಾಯಿ ಮಲ್ಲವ್ವೆ; ಪತ್ನಿ, ಲಕ್ಷ್ಮಿ. "ಸರಸಕವೀಶ್ವರ" ನೆಂಬವನು ಅಣ್ಣನೆಂದು ಹೇಳಿಕೊಳ್ಳುತ್ತಾನೆ. ಅಲ್ಲದೆ, ತಾನು "ಉದ್ದಂಡ ಮನೋಹರಪ್ರಚುರಶಿಷ್ಯಂ" ಎಂದು ಹೇಳುತ್ತಾನೆ. "ವಿಟ್ಠಲಪದಾಂಭೋಜಾತಭೃಂಗಂ" "ಹರಿಪಾದಶೋಣಸಂಕರುಹಮಧುವ್ರತಂ" ಎಂದು ಹೇಳಿಕೊಳ್ಳುವುದರಿಂದ, ಈತನು ವಿಷ್ಣುಭಕ್ತನೆಂದು ವ್ಯಕ್ತವಾಗುತ್ತದೆ. ಈತನು "ಪಂಡರೀರಾಯನಭಂಗವಿಟ್ಠಲಂ" ಎಂದು ತನ್ನ ಇಷ್ಟದೈವವನ್ನು ಸ್ತುತಿಸಿರುವುದರಿಂದ, ಬಹುಶಃ ಪಂಡರಾಪುರದವನೆಂದು ತೋರುತ್ತದೆ. ಈತನಿಗೆ "ಕವಿತಾವಿಲಾಸ," "ಕವಿರಾಜಶೇಖರ" ಎಂಬ ಬಿರುದುಗಳು ಇದ್ದಂತೆ ತೋರುತ್ತದೆ.

ಈತನು ಯಾವ ಕಾಲದಲ್ಲಿದ್ದನೋ ನಿಶ್ಚಯಿಸಿ ಹೇಳಲಾಗುವುದಿಲ್ಲ. ಈ ಕವಿಯನ್ನು ಇತರ ಕವಿಗಳು ಯಾರೂ ಸ್ತುತಿಸಿರುವಂತೆ ಕಾಣುವುದಿಲ್ಲ. ಈ ಗ್ರಂಥದಿಂದ ಉದ್ಧೃತವಾದ ಪದ್ಯಗಳೂ ಎಲ್ಲಿಯೂ ಉದಾಹೃತವಾಗಿಲ್ಲ. ಆದರೂ ಈ ಗ್ರಂಥವು ನಾಗವರ್ಮನ "ಕಾದಂಬರಿ" ಯನ್ನೂ, ನೇಮಿಚಂದ್ರನ ವಾಸವದತ್ತಾಖ್ಯಾಯಿಕಾನುರೂಪವಾದ "ಲೀಲಾವತಿ" ಯನ್ನೂ, ನೋಡಿ ಬರೆದಿರಬಹುದೆಂಬ ಊಹೆಗೆ ಅವಕಾಶವಿರುವುದರಿಂದಲೂ, ಈತನು ಕರ್ಣಾಟಕ ಪೂರ್ವಕವಿಗಳಲ್ಲಿ ಪಂಪ, ಪೊನ್ನ, ಚಂದ್ರ, ರುದ್ರಭಟ್ಟ— ಇವರುಗಳನ್ನು ಸ್ತುತಿಸಿರುವುದರಿಂದಲೂ, ಇವರುಗಳಲ್ಲಿ ಆಧುನಿಕನಾದ ರುದ್ರಭಟ್ಟನಿಗಿಂತಲೂ ಈಚೆಯವನಾಗಿರಬೇಕು.

ಈತನ ಬಂಧವು ಪೂರ್ವ್ವಕವಿಗಳ ಬಂಧವನ್ನು ಬಹುಮಟ್ಟಿಗೆ ಹೋಲುವುದರಿಂದ, ಆಕವಿಗಳ ಕಾಲಕ್ಕೆ ಸಮೀಪದಲ್ಲಿ,— ಎಂದರೆ ೧೮ನೆಯ ಶತಮಾನದಲ್ಲಿ— ಇದ್ದಿರಬಹುದು.

ಈಗ್ರಂಥವು ದಂಡಿಕವಿಯ ಸಂಸ್ಕೃತಗದ್ಯರೂಪವಾದ "ದಶಕುಮಾರಚರಿತ್ರೆ"ಯ ಕರ್ಣಾಟಕ ಚಂಪೂರೂಪವಾದ ಅನುವಾದವು. ಇದು ಲಲಿತವಾಗಿಯೂ, ಕಥಾಕೌತುಕದಿಂದ ಹೃದಯಂಗಮವಾಗಿಯೂ ಇದೆ.

ಓದುವವರ ಸೌಕರ್ಯಕ್ಕಾಗಿ ಈ ಗ್ರಂಥವನ್ನು ಎರಡು ಸಂಪುಟವಾಗಿ ಭಾಗಿಸಿ ಮುದ್ರಿಸಿದ್ದೇವೆ. ಈ ಪ್ರಥಮ ಸಂಪುಟದಲ್ಲಿ ಸಂಸ್ಕೃತ ದಶಕುಮಾರಚರಿತ್ರೆಯ ಪೂರ್ವ್ವಪೀಠಿಕೆಯ ಕಥಾಭಾಗವು ಅಡಕವಾಗಿದೆ.

ಈ ಗ್ರಂಥವನ್ನು ಎರಡು ಹಸ್ತಲಿಖಿತ ಪುಸ್ತಕಗಳ ಆಧಾರದಿಂದ ಮುದ್ರಿಸಿದ್ದೇವೆ. ಇವೆರಡೂ ಮೈಸೂರು ಗವರ್ನಮೆಂಟ್ ಓರಿಯಂಟಲ್ ಲೈಬ್ರೆರಿಯ ಪುಸ್ತಕಗಳು. ಇವುಗಳಲ್ಲಿ ಒಂದು ಓಲೆಯ ಪುಸ್ತಕ; ಮತ್ತೊಂದು ಕಾಗದದ ಪುಸ್ತಕ. ಇದು ಬಹಳ ಅಶುದ್ಧವಾದುದು. ಆದುದರಿಂದ ಓಲೆಯ ಪುಸ್ತಕದ ಆಧಾರದಿಂದಲೇ ಈ ಗ್ರಂಥವು ಅಚ್ಚಾಯಿತೆಂದು ಹೇಳಬೇಕು.

ಈ ಮಾತೃಕೆಗಳನ್ನು ನಮಗೆ ದಯೆವಿಟ್ಟು ಕೊಟ್ಟ ಗವರ್ನಮೆಂಟ್ ಓರಿಯಂಟಲ್ ಕ್ಯೂರೆಟರ್, ಮ|| ರಾ|| ಏ ಮಹದೇವಶಾಸ್ತ್ರಿ, ಬಿ. ಏ. ಯವರ ಉಪಕಾರವು ಚಿರಸ್ಮರಣೀಯವಾಗಿದೆ.

ವಿಷಯ ವಿವರಣಂ.

		ಪುಟಾದಿಸಂಖ್ಯೆ.
ಪ್ರಥಮಾಶ್ವಾಸಂ,	ಪೀಠಿಕಾಪ್ರಕರಣಂ	೧
ದ್ವಿತೀಯಾಶ್ವಾಸಂ,	ಮಗಧೇಶ್ವರಮಾಳವರಾಜಯುದ್ಧವರ್ಣನಂ, ರಾಜಕುಮಾರೋದಯವರ್ಣನಂ, ವಿದ್ಯಾಭ್ಯಾಸವರ್ಣನಂ	೧೭
ತೃತೀಯಾಶ್ವಾಸಂ,	ಮಾತಂಗಕ ರಾಜವಾಹನ ಪಾತಾಳಲೋಕವಿಜಯಂ, ಮಾತಂಗಕನಿಷ್ಟಸಿದ್ಧಿವರ್ಣನಂ	೫೦
ಚತುರ್ಥಾಶ್ವಾಸಂ,	ಪುಷ್ಪೋದ್ಭವಕಥಾವೃತ್ತಾಂತಂ	೬೨
ಪಂಚಮಾಶ್ವಾಸಂ.	ಸೋಮದತ್ತಕಥಾವೃತ್ತಾಂತಂ	೯೨
ಷಷ್ಠಾಶ್ವಾಸಂ,	ಅವಂತೀಸೌಂದರೀದರ್ಶನವರ್ಣನಂ	೧೧೪
ಸಪ್ತಮಾಶ್ವಾಸಂ,	ಭುವನಕೋಶವಿಸ್ತಾರವೃತ್ತಾಂತಂ.	೧೪೭

—:0:—

ಅಭಿನವದಶಕುಮಾರಚರಿತೆ.

॥ ಪ್ರಥಮಾಶ್ವಾಸಂ ॥

ಶ್ರೀಯನುದಾರದಿಂಪುರವೞೊಪ್ಪಿರೆ ತಾಳ್ದ ದಶಾವತಾರಸಂ ।
ಧಾಯಕದಿಂ ವಿರೋಧಿಬಲಮಂ ತವೆ ಗೆಲ್ದ ಮರುನ್ನಿಕಾಯಮುಮಂ ॥
ಸ್ವಾಯತಸತ್ವದಿಂ ಪೊರೆದ ಲೋಕಜನಸ್ತುತಿವೆತ್ತ ಪಂಡರೀ ।
ಕಾಯನನಘಂಗವಿಟ್ಠಲನಲಂಪಿನೊಳೀಗೆಮಗಿಷ್ಟಸಿದ್ಧಿಯಂ ॥ ೧

ತರಳಕಟಾಕ್ಷಮಾತ್ರಗತಿಯಿಂ ದಿವಿಜಾಸುರಮರ್ತ್ಯಪನ್ನಗೋ ।
ತ್ಕರಪರಿಖೇದಮಂ ಕಳೆದು ನಾಡೆ ಕೃತಾರ್ಥರೆನಲ್ಕೆ ಮಾಳ್ಪ ಭಾ ॥
ಸುರಸಿತಪದ್ಮಹಸ್ತೆ ಕಮಲಾಸನೆ ನೀರಜನೇತ್ರೆ ದುಗ್ಧಸಾ ।
ಗರಸುತೆ ಸಿದ್ಧಲಕ್ಷ್ಮಿ ನಮಗೀಗೆ ವಚೋವಿಭವಪ್ರಸಿದ್ಧಿಯಂ ॥ ೨

ಪಂಚಮುಖಪ್ರಸಿದ್ಧಿವಡೆದುಂ ಗಜವಕ್ತ್ರಸುಖಾವಹಂ ವಿಷೋ ।
ದಂಚಿತಕಂಠನಾಗಿಯುಮಣಂ ಖಗರಾಜವಿಲೋಚನಂ ಯುಪ ॥
ಸ್ಸಂಚಿತತಾರಕಾರಿಪದಮಂ ತಳೆದುಂ ಮಿಗೆ ತಾರಕಾಪ್ರಿಯು ।
ವ್ಯಂಜಿತಜೂಟನಾದಭವನೀಗೆಮಗುದ್ಘಮತಿಪ್ರಕಾಶಮಂ ॥ ೩

ಸಿತಗಳನಂ ದಿಗಂಬರನನಸ್ಥಿವಿಭೂಷಣನಂ ಪಿಶಾಚಸಂ ।
ತತಿಕೃತಸಂಗನಂ ಧವಳದೇಹನನುಗ್ರನನೊಲ್ದು ತನ್ನ ಸಂ ॥
ಗತಿಯೊಳತೀವಪೂಜ್ಯನನೆ ಮಾಡಿ ಜಗದ್ಗುರುವಾದ ದೇವಿ ಪಾ ।
ರ್ವತಿ ದಯೆಗೆಯ್ಗೆ ನಮ್ಮೊಳನುರಾಗದಿನೊಪ್ಪುವ ವಾಗ್ವಿಳಾಸಮಂ ॥ ೪

ಸೀಮಾತೀತಜಗನ್ನಿಕಾಯವಿಲಸನ್ನಿರ್ಮಾಣಕಂ ಋಗ್ಯಜು
ಸ್ಸಾಮಾದಿಪ್ರಚುರಾಗಮಪ್ರಭವವಕ್ತ್ರಂ ದೇವತಾವಂದಿತಂ ॥
ಹೇಮಾಂಭೋಜಸುತಂ ಮರಾಳಸುರಥಂ ವಿಖ್ಯಾತವಾಣೀಮನಃ
ಪ್ರೇಮಂ ಪದ್ಮಜನೆಮ್ಮೊಳೀಗೆ ಮುದದಿಂ ವಾಕ್ಛ್ರೀಸಮುತ್ಪತ್ತಿಯಂ ॥ ೫

ಜಲರುಹತಂತ್ರಸುಂದರವಿಲೋಚನೆ ಮುಗ್ಧೆ ಗಜಾಳಿಯಾನೆ ಕುಂ |
ತಳೆ ಮಣಿದರ್ಪಣಾಧರಕಪೋಲೆ ಸುಧಾಕಳಶೋಪಮಸ್ತನಂ ||
ಜಳಕುಚಯುಗ್ಮೆ ಶಂಖಲತಿಕಾಸಮಕಂಠಭುಜಪ್ರಸಿದ್ಧೆ ರು |
ಗ್ಮಿಳಿತಮರಾಳವಾಹಿನಿ ಸರಸ್ವತಿ ಮಾಳ್ಕೆ ಮದಿಷ್ಟಸಿದ್ಧಿಯಂ || ೬

ಕರುಣಂ ಕೈಮಿಕ್ಕು ಮಾಳ್ಕೆನ್ನಯ ಮತಿಗೆ ಮಹಾತೇಜಮಂ ದಿವ್ಯಗಂಗಾ
ಧರಪುತ್ರಂ ತುಂಗಗಂಡಸ್ಥಳಗಳಿತಮದಾಂಬುಪ್ರವಾಹಪ್ರಕಾಮೋ ||
ದ್ಗಾರಗಂಧಾಯಾತಭೃಂಗಾವಳಿಮೃದುಮಧುರಧ್ವಾನಸಂತೋಷಿತೋರ್ವ್ಯ |
ತ್ಕರಿವಕ್ತ್ರಂ ಸಂತತಾರಾಧಕಜನಬಹುವಿಘ್ನೌಘನಾಶಂ ಗಣೇಶಂ || ೭

ಮಣಿಮಕುಟಂ ತ್ರಿಶೂಲಡಮರೂದ್ಧೃತಖಡ್ಗಕಪಾಲಪಾಣಿ ಭೀ |
ಷಣವದನಂ ಕರೋಟಿವನಮಾಲೆ ಭಯಂಕರಫಾಳಲೋಚನಂ ||
ಫಣಿಕಟಕಂ ಕರಂ ತನಗೆ ರಂಜಿಸೆ ಭೈರವಮೂರ್ತಿ ದೇವತಾ |
ಗಣಪತಿಸೇವ್ಯೆ ಚಂಡಿಕೆ ಮನೋಮುದಮಂ ನಮಗೀಗೆ ಸಂತತಂ || ೮

ಬಿರುದಂ ಲೋಕವಿರುದ್ಧಮಂ ಕೃತಿಯೊಳಂತೇಕಾರಣಂ ಪೇಳ್ದ ಕೊ
ಳ್ವರೊ ಸಲ್ಲಕ್ಷಣಮಾಗಿ ಪೇಳ್ದ ಕೃತಿಯಂ ಕೇಳ್ದರ್ ಮನಂಗೊಂಡಿವ ||
ಚ್ಚರಿಯಾಯ್ತೆಂಬರಗಲ್ಕೆ ಮಾಡುವರುದಾಸೀನರ್ ರಸಾಸ್ತಂ[1] ರಸೇ |
ತರಮೆಂದಂದಿವು ತಾವೆ ಪೇಳುವೆ ವೃಥಾಸಂರಂಭಮೇಗೆಯ್ವುದೋ || ೯

ಕುಕವಿಯ ಕಾವ್ಯಮಂ ಸುಕವಿ ಕೇಳ್ದು ಕರಂ ತಲೆದೂಗಿ ಮೆಚ್ಚಿ ಭಾ |
ವಕನೆನಿಸಿರ್ಪುದಲ್ಲದೆ ರಸಾದ್ಭುತಮೊಪ್ಪುವ ಶಬ್ದವೃತ್ತಿ ಲೌ ||
ಕಿಕಪರಮಾರ್ಥವೆಂಬ ಕವಿತಾಗುಣಮಂ ಬೆದಕಲ್ಕೆ ರತ್ನಮು |
ಕ್ತಿಕೆಯನೊಱಲ್ದು ಪಾೞ್ಗುೞಿಯೊಳೀಕ್ಷಿಸುವಂಗೆಣೆಯಾಗದಿರ್ಕುಮೇ || ೧೦

ಅವಗುಣಕೋಟಿಯಂ ಮಱೆದು ಸದ್ಗುಣಮೊಳ್ಳಿನಿತುಳ್ಳೊಡಂತದಂ |
ಭುವನದೊಳೆಯ್ದೆ ಬಿಚ್ಚಳಿಸಿ ನಲ್ಮೆ ಮಿಗಲ್ ತಲೆದೂಗಿ ಮೆಚ್ಚಿ ಪೆ ||
ಚ್ಚುರ್ವ ನಿರಸೂಯರಂ ವಿಗತಮತ್ಸರರಂ ಸುಚರಿತ್ರರಂ ಬುಧ |
ಪ್ರವರರನರ್ಚಿಪೆಂ ವಿಮಲವಾಕ್ಕುಸುಮಾವಳಿಯಿಂದಮಾವಗಂ || ೧೧

---

1 ರಸೋಕ್ತಂ. ಕ. ಗ.

*ಪೊಗೞ್ವೆಂ ಲಕ್ಷ್ಮೀಲಕ್ಷಿತಾಪ್ಲುತನಚೋೞನಿಪ್ಪಂಪನಂ ಪಂಪನಂ |
ಜಗತೀಪ್ರೀತಿಕರಪ್ರಸಿದ್ಧಕವಿತಾಸಂಪನ್ನನಂ [1] ಪೊನ್ನನಂ[1] ||
ಸುಗಮಾರ್ಥಸ್ಫುಟಶಬ್ದಸುಂದರಕಿರದ್ವಾಕ್ಸಾಂದ್ರನಂ ಚಂದ್ರನಂ |
ಭಗವದ್ವಿಷ್ಣುಕಥಾವತಾರರಚಿತಶ್ರೀಭದ್ರನಂ ರುದ್ರನಂ || ೧೨

ದ್ವಿಜವಂಶಾಂಬುಧಿಪೂರ್ಣಚಂದ್ರನಸಮಖ್ಯಾತಂ ಭರದ್ವಾಜಗೋ |
ತ್ರಜನುದ್ದಂಡಮನೋಹರಪ್ರಚುರಶಿಷ್ಯಂ ದಾನಕಲ್ಪದ್ರುಮಂ ||
ತ್ರಿಜಗನ್ಮಂಗಳಮೂರ್ತಿ ವಿಟ್ಠಲಪದಾಂಭೋಜಾತಭೃಂಗಂ ಗುಣ |
ವ್ರಜಯುಕ್ತಂ ಕವಿತಾವಿಳಾಸನೆನಿಸಂ[2] ಚೌಂಡಂ ದಯಾಮಂಡನಂ || ೧೩

ವರಮಧುಸೂದನಂ ಜನಕನೊಪ್ಪುವ ಮಲ್ಲವೆ ಮಾತೆಯಗ್ರಜಂ |
ಸರಸಕವೀಶ್ವರಂ ತನಗೆ ವಲ್ಲಭೆ ಲಕ್ಷ್ಮಿಯೆನಿಪ್ಪ ಪೆಂಪು ಬಿ ||
ತ್ತರಿಸುಪ್ರೌಢಗಳಿಂ ನಿಜಮೆನಲ್ ಮಗನಂ ಪರಿಪಾಲಿಪೋಣಪಂ |
ಕರುಹಮಧುವ್ರತಂ ಸುಕವಿ ಚೌಂಡರಸಂ ಕವಿರಾಜಶೇಖರಂ || ೧೪

ದೊರಕಿದ ಶಬ್ದದಿಂ ನೆಗೞ್ದ ಕಾವ್ಯಮನೆನ್ನಱಿವಂತು ಪೇೞ್ದೆನಾ |
ಪರಿಸಿ ಸಮಂತು ತಿದ್ದುಗೆ ಬುಧರ್ ನವಾರ್ಥಕಿ ಗೇಹಮಾತ್ರಮಂ ||
ಸಿರವಿಸಲಂತವರ್ಕೆ ಪರಿಶೋಭೆಯುದಗ್ರಳಮಪ್ಪಿನಂ ನಿರಂ |
ತರಮೆಸಗಲ್ಕೆ ಕರ್ತೃ ಪರಿಭಾವಿಸೆ ಕೀಳ್ಯಜಮಾನನಲ್ಲವೇ || ೧೫

ಸಕಲಾಂತರ್ಯಾಮಿ ಜೀವಪ್ರಕರವಿವಿಧಚೈತನ್ಯರೂಪಂ ಜಗದ್ವ್ಯಾ |
ಪಕಭಾವಂ ವಿಷ್ಣುವೆಂದಾಗಮತತಿ ಸತತಂ ಸಾರ್ವ ಸಂಬಂಧದಿಂ ಕಾ ||
ತುಕದಿಂ ಪಾಪಾಪಹಂ ಬಣ್ಣಿಸಿದೊಡಮದು ಹರಿಸ್ತೋತ್ರಮೆಂದೀಗಳೀಚ |
ತ್ರಕಥಾವಿಸ್ತಾರಮಂ ಬಣ್ಣಿಸಲೊಡರಿಸಿದೆಂ ಸತ್ಕವಿಶ್ರೇಣಿ ಮೆಚ್ಚಲ್ || ೧೬

ಮೊದಲೊಳ್ ದಂಡಿಕವೀಶ್ವರಂ ದಶಕುಮಾರಾಖ್ಯಾತಚಾರಿತ್ರಮಂ |
ಪದೆಪಿಂ ಸಂಸ್ಕೃತಭಾಷೆಯಿಂ ರಚಿಸಿದಂ ಧಾತ್ರೀಜನಸ್ತೋತ್ರಸ ||
ಮ್ಮದವಪ್ಪಂತದನಾಂ ಪ್ರಸಿದ್ಧಿಯುಪತಾರಾಕಾರಮಂ ತಾಳ್ದಿ ಸ |
ದ್ವಿಧಿತಂ ರಂಗದೊಳಾಡಿ ತೋರ್ಪ ತೆಱದಿಂ ಪೇೞ್ವೆಂ ಸುಕರ್ಣಾಟದಿಂ ||

1. ರನ್ನನಂ. ಕ.   2. ವಳಂ. ಗ.

ಆದೆಂತೆನೆ:—

ವನಮಾಲಾಪರಿಶೋಭೆಯಿಂದನಿಮಿಷೋದ್ಯತ್ಪ್ರೀತಿಯಿಂ ಶಂಖಚ |
ಕ್ರನವೀನೋಜ್ಜ್ವಲದಿಂದನಂತಮಹಿಮಾಧಾರತ್ವದಿಂ ಶ್ರೀನಿವೇ ||
ಶನದಿಂ ಗೋತ್ರಸುಖಾಧಿವಾಸದೊಗವಿಂ ಮುಕ್ತಾದಿಜನ್ಮಪ್ರಕೀ |
ರ್ತನದಿಂ ವಾರಿಧಿ ಪಾರಿಜಾಕ್ಷನಪ್ರೋಲೇಂ ಚೆಲ್ವಾಯ್ತು ಭೂಭಾಗದೊಳ್ ||

ಆವಾರ್ಧಿಮೇಖಲೆಯಾದ ಭೂಮಧ್ಯದಲ್ಲಿ

ವಿವಿಧೋದ್ಯತ್ಸುರಗಂಗೆ ಪೂರ್ಣಸಲಿಲಂ ಚನ್ದ್ರಾರ್ಕಬಿಂಬಂ ತಳಿರ್ |
ನವತಾರಾನಿಕರಂ ಸಿತಾಕ್ಷತಚಯಂ ಸಪ್ತಾಬ್ಧಿ ಸುತ್ತಿರ್ಪ ಸೂ ||
ತ್ರವಿಶೇಷಂ ತನಗಾಗೆ ಲೋಕಜನನಪ್ರಾರಂಭದೊಳ್ ಪದ್ಮಸಂ |
ಭವನೊಲ್ದರ್ಚಿಪ ಹೇಮಕುಂಭಮೆನಿಸಲ್ ಸಾಲ್ದತ್ತು ಹೇಮಾಚಲಂ ||

ಆಮೇರುಗಿರಿಯ ದಕ್ಷಿಣದಿಗ್ಭಾಗದೊಳ್

ಕ್ಷೋಣಿಗೆ ವಿಶೇಷಪುಣ್ಯ |
ಶ್ರೇಣಿಯೆನಲ್ ಗ್ರಾಮನಗರಖರ್ವಡಪೇಟ ||
ದ್ರೋಣಾಮುಖಂಗಳಿಂದ |
ಕ್ಷೇಣಮೆನಲ್ ಮೆಱೆವುದಲ್ತೆ ಜಂಬೂದ್ವೀಪಂ || ೧೦

ಆಜಂಬೂದ್ವೀಪದಲ್ಲಿ,

ಸಕಲಾವನಿಗಿದೆ ಮಣಿಮಯ |
ಮುಕುರಮೆನಲ್ ಸಾನುರಾಗದಿಂ ಸುಕ್ಷೇತ್ರ ||
ಪ್ರಕರತೆಯಿಂದೆಸೆದಿರ್ಕುಂ |
ಸುಕವಿಸ್ತುತಮಗಧದೇಶಮಬ್ಧಿನಿವಾಸಂ || ೧೧

ಸತತಂ ಮಾಂಗಲ್ಯದಿಂದಚ್ಯುತಸುಖಭರದಿಂ ಸಂತತಂ ಪದ್ಮಪೀಠಾ |
ನ್ವಿತದಿಂ ಸೌಂದರ್ಯದಿಂ ಕೋಮಲಮೃದುತರದಿಂ ವಾರ್ಧಿಸಂಭೂತಸೀಮಾ
ಯುತದಿಂ ಸದ್ವೃಕ್ಷದಿವ್ಯಾಮೃತರಸಸಹಜಾತತ್ವದಿಂ ಕಾಮಜನ್ಮ |
ಸ್ಥಿತಿಯಿಂ ಚೆಲ್ವಾದ ದೇಶಂ ಪರಿಕಿಪ್ಪೊಡೆ ಮಹಾಲಕ್ಷ್ಮಿಯಂತೊಪ್ಪಿ
ತೋರ್ಕುಂ || ೧೨

ಮತ್ತಮುದ್ವೃತ್ತಪರಾರ್ಗಂ ಕವಿತೆಯೊಳ್, ಕಾಯ್ದೆರೆಯೆಂಬುದು ವೃಕ್ಷದೊಳ್, ಪುರೆಯೆಂಬುದು ಕುಕ್ಷಿಯೊಳ್, ಬಯ್ಪುದು ನಿಕ್ಷೇಪಭಾಷೆಯೊಳ್, ಕಟ್ಟೆಂಬುದು ರಸವಿಶೇಷದೊಳ್, ರಾಗದ್ವೇಷಂ ವಿರಹಿಗಳೊಳ್, ಖಲಪ್ರವರ್ತನಂ ತೈಲಿಗರೊಳ್, ತಮಸ್ಸಂಕುಳಂ ಬಹುಳಪಕ್ಷದೊಳ್, ಮಿತ್ರದ್ವೇಷಂ ಗೂಗೆಗಳೊಳ್, ವಿಶ್ವಾಸಭಂಗಂ ತ್ರಿದಿಗಳೊಳ್, ನಿಂದಿಸುವುದು ಯುದ್ಧದೊಳ್, ಭೋಗಭಂಗಂ ಹಾವಡಿಗರೊಳ್, ಹಿರಣ್ಯಾಕ್ಷವಧಂ ವರಾಹಾವತಾರದೊಳ್, ಆಕ್ಷೇಪಮಲಂಕಾರದೊಳ್, ಅರ್ಥವಾದಂ ಸ್ತೋತ್ರದೊಳಲ್ಲದೆ ತನ್ನೊಳಿಲ್ಲೆನಿಸಿರ್ಪುದು. ಅಂತುಮಲ್ಲದೆಯುಂ

ರತಿಲೀಲಾಭವನಂ ವನಂ ಸತತಸಾಚ್ಛ್ಯೋಜ್ಜೀವನಂ ಜೀವನಂ ।
ಶ್ರುತಿಚಿನ್ತಾಮತಿಭಾಜನಂ ಜನಮನಂಗಾಸ್ತ್ರಕುಲಂ ಸ್ತ್ರೀಕುಲಂ ॥
ನುತಸಸ್ಯಾದಿಸಮುದ್ಗತಂ ಧರಣಿ ಲಕ್ಷ್ಮೀಬಂಧುರಂ ಬಂಧುರಂ ।
ಜಿತರಾಜನ್ಯಕಮೆಂದೊಡಾವಿಷಯದೊಳ್ಪಂ ಬಣ್ಣಿಸಲ್ ಬರ್ಕುಮೇ ॥ ೨೩

ಅಂತಾಮಗಧದೇಶಕ್ಕೆ ಭೂಷಣಮೆನಿಸಿ,

ನಯನಾನಂದಕರಂ ಸುಖ ।
ಚಯಸಹಿತಂ ನಿಖಿಲದೇವತಾಯತನಸುಖ ॥
ಪ್ರಯುತಂ ಸಜ್ಜನಚಿತ್ತ ।
ಪ್ರಿಯಮೆನಲೆಸೆದಿರ್ಪುದಧಿಕಮೆನೆ ಕುಸುಮಪುರಂ ॥ ೨೪

ಪ್ರಕಟಂಬೆತ್ತಿರ್ಪ ಕೋಂಗೋಂಟೆಯ ತೆನೆಯೆಸಳ್ಗಳ್ ಕೇಸರಂ ಸೌಧಶಾಲಾ
ನಿಕರಂ ರಾಜಾಲಯಂ ಕರ್ಣಿಕೆ ವಿವಿಧಪುರಂಧ್ರೀಲಸತ್ಸೌಕುಮಾರ್ಯಂ ॥
ಮಕರಂದಂ ನಂದಿವೃಂದಂ ಮಧುಕರಪಟಲಂ ತಾನೆನಲ್ಕೊಪ್ಪುಗುಂ ಸಾ ।
ರ್ಥಕನಾಮಂ ರಂಜಿಸಲ್ ತತ್ಕುಸುಮಪುರಿ ಜಗತ್ಪ್ರೀತಿಯಿಂದಂ ನಿತಾಂತಂ

ತಳಿರ ತೋಡಂಬೆಯುಂ ತಳೆದ ಮಾಮರನಾಸುರನಳ್ಕೆಗೊಂಬಿನೊಳ್ ।
ಕಳರವದಿಂ ಕುಕಿಲ್ವ ಮಱಿಗೋಗಿಲೆ ಪೂಗುಡಿಭಾರದಿಂ ಪೊರ ॥
ಳ್ವೆಳಲತೆಯಾಲತಾವಳಿಯಿಡುಂಕುಱೊಳಾವಗಮಾಡಿ ಪಾಡುತಿ ।
ಪ್ಪಳಿಗಳ ಪಿಂಡು ರಂಜಿಸುವಿನಂ ಮೊಱೆಗುಂ ಪುರದಾಬಹಿರ್ವನಂ ॥ ೨೫

ಅದಲ್ಲದೆಯುಂ,

ದೆಸೆಗೆ ಕವಿಲ್ತು ಗಂಟಿಡಿದು ನುಣ್ಬಸಿಱಿಂ ಪೊರೆವೇಱಿ ಕೊಬ್ಬಿರ್ಯು ।
ಬಿರ್ಸಿ ಪೊಡೆದುಂಬಿ ಪಾಲ್ವೆಸೆಗಳುರ್ಬೆ ಕರಂ ತಲೆವಾಗಿ ಬಿಣ್ಪಿನಿಂ ॥
ದೆಸೆವ್ರುವು ನೀಳ್ದ ತಮ್ಮ ಮುಖದೊಪ್ಪಮನೊಪ್ಪಿರೆ ನೀಗರ್ಳೊಳ್ ನಿರೀ।
ಕ್ಷಿಸುವವೊಲಾವಗಂ ಕಣಿಶಸಂತತಿಗಳ್ ಕಳಮಪ್ರದೇಶದೊಳ್ ॥ ೨೭

ಕುಂದವ ಚಂದ್ರಲೇಖೆ ನಸುಗಂದದೆ ರಂಜಿಸ ಪುಷ್ಪವಾಳಿ ಕುಂ ।
ದೊಂದದ ಸೋಮಶಾಖೆ ತವಿಲಾಗದ ಕೆಂಗೊನೆವಾಳೆ ಸರ್ವಸಾ ॥
ಧ್ಯಂ ಪಲೆನಿಪ್ಪ ಕೇಸರಿ ನಿರಂತರಮೊಪ್ಪುವ ದಮ್ಮ್ರಗುತ್ತಿಯುಂ ॥
ಬಂದವನೇಕನಾಮಪೆಸೆಗುಂ ಮೃದುಬಂಧುರಗಂಧಶಾಲಿಗಳ್ ॥ ೨೮

ಸೆಳೆನಡು ಬಳ್ಕೆ ತೋಳ್ಕ್ಮ್ರವಲ ನುಣ್ಬೊಗರೊಪ್ಪೆ ಘನಸ್ತನಂಗಳ।
ವ್ವಳಿಸೆ ನಿಮಿರ್ದ್ದ ವೇಣಿ ಕದಪಂ ಪುಗೆ ಮುಂದೆಡವಜ್ಜೆ ವಿನ್ಯಾಜೆ ಕ್ಕೈ ॥
ಗಳ ಬಳೆ ಮೊಳ್ಪಿಸಿಂಪುಲಿಯೆ ಸಂಭ್ರಮದಿಂ ನಸುಬಾಗಿ ಬೀಸುಗ ।
ಲ್ಗಳನಿಡುತಿರ್ಪ ಪಾಮರಿಯರೊಪ್ಪವರಾಕಳಮಪ್ರದೇಶದೊಳ್ ॥ ೨೯

ಕಡುಚೆಲ್ವಿಂ ಮೆಱೆದಿರ್ಪ ಶಾಲಿವನಮಂ ಪಾಯುತ್ತೆ ಕೀರಂ ಮೃಗಂ ।
ಗಡಣಂಗೊಂಡು ಬರಲ್ಕೆ ಸೋವ ಬಗೆಯಿಂ ಪಾಮಾಱ್ಪರ್ಕೆಂಬಿನಪ್ ॥
ನುಡಿಯುಂ ನೋಟಮುಮೆಮ್ಮೊತ್ತಳೊಲ್ದು ಪದೆಪಿಂ ಮಂ ಕಲ್ತು ಲಂಪಿಂಗೆ ಬಂ ।
ದೊಡೆ ಬಿಮ್ಮಗಟಮೆಂಬ ನೇಪದೆಲವಿಂ ತತ್ಪಾಮರೀಸಂಕುಳಂ ॥ ೩೦

ಜಡಿಮ ಗಿಳಿಸೋವ ಪರಯುವ ।
ಮಡವಿಯರ ಶರೀರವರ್ಣರೂಪಂ ಗಂಧಂ ॥
ನಡುವಿನ ಸಣ್ಣಂ ತಮ್ಮೊಳ ।
ಮೆಡೆಗೊಂಡವೊಲಿರ್ಪ ನೆಲ್ಗಳೇನೊಪ್ಪಿದುವೋ ॥ ೩೧

ಅಲ್ಲಿಂ ಬೞಿಯುಂ,

ಇದಪೂರ್ವಂ ಪುರರಿಪುವೆಂ ।
ಬುಧನೀಶನೊಳೀಯುದಧಿಕಸಂಪದಮಂ ಮಾ ॥
ೞ್ಪುದೆನುತ್ತೆ ಗಂಗೆ ಪುರಮಂ ।
ಪ್ರದಕ್ಷಿಣಂಗೆಯ್ವುತಿರ್ಪಳೆನಲಗೞೆಸೆಗುಂ ॥ ೩೨

ಪುರದೊಳ್ ಭೋಗಿಗಳನಿತುಂ ।
ನೆರೆವಿರ್ದಪರಾನನಗೆ ರಕ್ಷಕನಪ್ಪಂ ॥
ತೆರಳದೆನುತ್ತುಂ ಶೇಷಂ ।
ಪರಿವೇಷ್ಟಿಸಿದಂತೆ ರಂಜಿಕುಂ ಪ್ರಾಕಾರಂ ॥ ೩೩

ಗಗನೇಚರಿಯರ್ ಪ್ರಮಮುಂ ।
ಮಿಗೆ ನೂಂಕಲ್ ನಿಲ್ವುದರ್ಕೆವೆಮ್ಮೆಸ್ಮೆಯು ದಾ ॥
ವ್ರಗಳೆಂದು ಕುಱುಪುಗೊಂಡಾ ।
ಬಗೆಗಿಟ್ಟಂತೆಸೆದ್ರವಿದಪ ಕೋಂಟೆಯ ತೆನೆಗಳ್ ॥ ೩೪

ಪಗೆಗಳ ಶೃಂಗಲಮುಂ ಡೊಣೆ ।
ಗೆಗೆತ್ತಿ ತತ್ಪುರವರೇಶನಾನಂದಲತಾ ॥
ಳಗೆಗಳ ಪಚಿಸ್ಪ್ರದೆಂತುಂ ।
ಬಗೆಗೆಸಿತುಂ ಬಿಂಕದಿಂದೆ ಸಿಡುವೆಂಕಣಿಗಳ್ ॥ (?) ೩೫

ಅಂತೆಸೆವ ಪುರದೊಳ್

ಬೆಟ್ಟವನೇಱ ನೀರೊಳಗೆ ಪೊಕ್ಕು ತೃಣಂಬಿಡಿದೆಂಜಲಾಗಿ ನಾ ।
ಣ್ಗೆಟ್ಟಸಿತಲ್ಲದೀಪುರಚತುಷ್ಪಥಮಧ್ಯದ ರತ್ನಶಾಲೆಯೊಳ್ ॥
ಕಟ್ಟಿಯದೇಕೆ ತೂಗುವರೊ ಮಾಣಿಕವಂ ಪ್ರಸವಿತ್ತನೊಳ್ಪು ನೇ ।
ವಟ್ಟಿರುನೀಲಮುಂ ತೊಳಪ ಪಚ್ಚೆಗಳಂ ಮಣಿಗಾಜರಾದಗ ॥ ೩೬

ಅಂತು ನೀಡೆಯುನಾಂತು ಸುತ್ತಿವೆತ್ತ ಮಣಿಗಾಜರ ಪಸರದಿಂ ಮುಂದೆ

ಸಲ್ಲಲಿತರಾಜಹಂಸ ।
ಗಲ್ಲವೆ ಸುತ್ತಲ್ಕುಸುರಿಪೆನಿಸ್ಪಂಬರಮುಂ ॥
ನಿಲ್ಲೆಂದು ನಿಲಿಸಿ ಪುರದವ ।
ರೆಲ್ಲರ್ ಕೊಳಲೆಸೆವುದಂಬರಂಗಳ ಪಸರಂ ॥ ೩೭

ಅತಿಶಯವೆನಲುತ್ಪತ್ತಿ ।
ಸ್ಥಿತಿಲಯಮುಂ ತೋರ್ಪೆವೀಗಳೆಂಬಂತೆ ಜನ ॥
ಪ್ರತಿಬಿಂಬನುನಾಂತದಧಿಕ ।
ದ್ಯುತಿಯಿಂದೊಪ್ಪಿದುದು ಕಂಚಗಾಱರ ಪಸರಂ ॥ ೩೮

ಬಿದಿಯುತ್ಪತ್ತಿಯ ಬೀಜಮಂ ಹರಿ ಜಗತ್ಸಂಪಾಲನಾರತ್ನಮಂ ।
ಮದನಾರತಿ ದಿಗಂಬರತ್ವಮುಱಿಯಲ್ ಸದ್ವಸ್ತ್ರಮಂ ಭಾಸ್ಕರಂ ॥
ಮೃದುಶೈತ್ಯೌಷಧಿಯಂ ಶಶಾಂಕನೊಲವಿಂದಂ ರಾಜಯಕ್ಷ್ಮಕ್ಕೆ ಪೂ ।
ಣಿದ ಮದರ್ಂ ಪಡೆದೃಷ್ಟ್ಯಗಂಪಳೆವರಂತಾಸೆಟ್ಟಿಗುತ್ತರ್ಕರ್ಗಳೊಳ್ ॥ ೩೯

ಅಲ್ಲಿಂ ಮುಂದೆ

ಪೂಗೊಳಲೆಂದು ಬಂದ ವಿಟಸಂತತಿಯುಳ್ಳಿರ್ದರ್* ಡಿಳ್ಳಸಪ್ಪಿನಂ ।
ಪೂಗಣೆಯುರ್ಕೆರ್ ಮೂರ್ಛೆಗೊಳಗಾಗತೊಡಂ ಕಡುಪಿಂ ಸಹಾಯಿಗಳ್ ॥
ಪೂಗೊಳದತ್ತಲುಯ್ದು ಮದನಾಗ್ನಿಯನಾಱಿಸುವಂತು ಮಾಡಿದಾ ।
ಪೂಗಳನೊಪ್ಪೆ ಕಟ್ಟಿ ಪೊಸಮಾಲೆಯನೆತ್ತುವ ಮಾಲಗಾರ್ತಿಯವರ್ ॥ ೪೦

ತರತರದಿಂದೆ ಬಾಹುಲತೆ ಪ್ರಸ್ಥಿತಮಾದುದೊ ಕಾಮಮಾರ್ಗಣಂ ।
ತರುಣಿಯರಿಂದೆ ಕಟ್ಟುವಡೆದಿರ್ಪುದೊ ಮೋಹನಜುಸುಯ್ಗೆ ಸೋಲ್ತು ಬಂ
ದುರುತರಭೃಂಗಮಾಲಿಕೆಯೊ ಪೇೞನೆ ದಿವ್ಯಸುಗಂಧದಿಂ ಮನೋ ।
ಹರಮೆನಿಸಿರ್ಪರ್ ಪೊಚ್ಚಪೊಸಮಾಲೆಯನೆತ್ತುವರತ್ತ ಬಾಲೆಯರ್ ॥ ೪೧

ಸಾರಸುಗಂಧದಿಂಬೆಸೆವ ಪೂವಿನ ಮಾಲೆಯನೀವೆನಿತ್ತ ಬಾ ।
ಬಾರೆಲೆ ಧೂರ್ತರೆಂಬವರ ತೋೞ ಮೊದಲ್ಗಳನುನ್ನತಸ್ತನಾ ॥
ಕಾರಮನೆಯ್ದೆ ಕಂಡು ನಡೆಗೆಟ್ಟಿರೆ ದೂರದೊಳಿರ್ಪರೇಕೆನಲ್ ।
ದೂರಿತರಲ್ತೆ ಪುಷ್ಪವತಿಯರ್ ಪರಿಭಾವಿಸೆ ನೀತಿಸಂತರೊಳ್ ॥ ೪೨

ಎಂಬ ವಿಟರ ಚತುರೋಕ್ತಿ ಪರಿವೃತವಾದ ಮಾಲೆಗಾಱವಸರದಿಂ ಮುಂದೆ

ರತಿರೂಪಾಂಚದ್ಧ್ವಜಂ ಮನ್ಮಥನಿಚಿತಪತಾಕಾಳಿ ಸೌಭಾಗ್ಯಘಂಟಾ ।
ಯುತಬದ್ಧದ್ವಾರಮಂಗೋಗ್ರ ಪಚರಿತಕಥಾಲೇಖ್ಯಸದ್ಭಿತ್ತಿ ಪಾರಾ ॥
ವತಕೀರಶ್ರೇಣಿವಿಭ್ರಾಜಿತಮಣಿಮಯಕೂಟಂ...ವಿಟಾ ।
ನ್ವಿತಶೋಭಾವೇದಿಕಾವಿಸ್ಮಯಮೆನಿಸುವುವಲ್ಲಲ್ಲಿ ವೇಶ್ಯಾಲಯಂಗಳ್ ॥ ೪೩

ಹದಿಱಿನ ಗೊಟ್ಟಿ ಹಂಗಿಸುವ ನಾಣ್ಣುಡಿ ಅಚ್ಚಿಯ ಮಾತು ಕೇಳ್ವನೋ ।
ಡವ ಬೆಲೆ ಟಕ್ಕಿನೊಲ್ಮೆ ಹೆರೆಹಚ್ಚಿದ ಮೋಹಮುಸತ್ಯದಾಸೆ ನಿ ॥
ಲ್ಲದ ಪುಸಿತೋಟಯುಲ್ಲದುಪತಾಪಮೆನಿಪ್ಪ ಸಮಸ್ತ ವೈಶಿಕಂ ।
ಸುದತಿಯರಾಗಮೊಲ್ ಸುಱುವದಾಪುರದೊಳ್ ಗಣಿಕಾಕದಂಬಕಂ ॥ ೪೪

ಆವೇಶ್ಯಾವಾಟಕ್ಕೆ ಸಮೀಪವಾಗಿ

ಸತತಂ ಸಂಗೀತಚಿತ್ರಂ ಸಕಲವಿವಿಧವಾದ್ಯೋತ್ಸವಂ ನೃತ್ಯವಿಭ್ರಾ ।
ಜಿತಮುದ್ಯದ್ಧೂಪಧೂಮಕ್ಷುಭಿತಮಖಿಲಪೌರಾಣಮಂತ್ರಾನುವಾದಂ ॥
ಚಿತರಮ್ಯಪುಷ್ಪತಲ್ಪವಂ ಮಂಜುಳಮಣಿಕಳಶಂ ಪೊಂಪುವೆತ್ತಿರ್ಪ ದೇವಾ।
ಯತನಂ ಕಣ್ಗೊಪ್ಪುಗುಂ ತತ್ಪುರವರದೊಳನೂನಪ್ರಸಾದಂಗಳಿಂದಂ ॥೧೪॥

ಅನಂತರಂ

ವಿಮಲಪ್ರಾಸಾದಭಿತ್ತಿಪ್ರಕಟಘನಸುಧಾಕಾಂತಿಗಳ್ ಚಂದ್ರಿಕಾವಿ ।
ಭ್ರಮಮೆಂಬಂತೊಪ್ಪೆ ನಾನಾಮಣಿಮಯಕಳಶಶ್ರೇಣಿಗಳ್ ತಾರಕಾಚಿ ॥
ತ್ರಮನೆತ್ತಂ ಬೀಱೆ ಭಾಸ್ವತ್ಕುಮುದವನಮನೊಲವಿಂ ಪೆರ್ಚಿಸುತ್ತಾವಗಂ ಸಂ
ಭ್ರಮದಿಂಚೆಲ್ವಾದರಾಜಾಲಯಮಭಿನವಪೂರ್ವಾದ್ರಿಯಂತೊಪ್ಪಿತೋರ್ಕುಂ

ಅಂತು ಪೊಗೞ್ತೆಗಳುಂಬಮಾಗಿರೆ,

ತತ್ಪುರಪತಿ ನೃಪಮೌಳಿ ।
ಸತ್ಪಾದಪಯೋಜನಖಿಳಜನತಾನಿಜಸಂ ॥
ಪತ್ಪೂರಕನಭಿಜನಹಿತ ।
ಸತ್ಪದನುಱೆ ರಾಜಹಂಸನೆಂಬ ನರೇಂದ್ರಂ ॥ ೧೫

ಆತಂಗೆ ಸಚಿವರಾದರ್ ।
ನೀತಿವಿದರ್ ಸದ್ಗುಣಪ್ರಸಿದ್ಧರ್ ವಿಶ್ವ ॥
ಖ್ಯಾತರೆನಿಪೇೞ್ವರುಂ ಧಾ ।
ತ್ರೀತಿಲಕರ್ ಬುದ್ಧಿವಿದರತೀವಸಮರ್ಥರ್ ॥ ೧೬

ಅವರಾರೆಂದೊಡೆ—ರತ್ನೋದ್ಭವ, ಪ್ರೇಮದತ್ತ, ಕಾಮಪಾಲ, ಸುಮಿತ್ರ, ಸುಮತಿ, ಸುಶ್ರುತ, ಸತ್ಯವರ್ಮನೆಂಬೇೞ್ವರ್. ಅವರೊಳ್ ರತ್ನೋದ್ಭವಂ ವ್ಯವಹಾರಕ್ಕೆ; ಪ್ರೇಮದತ್ತಂ ತೀರ್ಥಯಾತ್ರೆಗೆ, ಕಾಮಪಾಲಂ ದೇಶಾಂತರಕ್ಕೆ ಪೋಗೆ, ಮಿಕ್ಕ ನಾಲ್ವರ್ ಪ್ರಧಾನರುಂ ತಾನುಂ

ಜನಪಂ ತನ್ನ ಭುಜಪ್ರತಾಪದಿನಮಾತ್ಯಶ್ರೇಷ್ಠರಿಂ ರಾಜ್ಯವ ।
ರ್ಧನರಿಂ ಮಿತ್ರರಿನೊಪ್ಪುವಾಪ್ತಬಲದಿಂ ಭಂಡಾರದಿಂ ದುರ್ಗದಿಂ ॥

ಘನಸಪ್ತಾಂಗವಿಳಾಸಮಂ ಪಡೆದುಮಂತ್ರೇಕಾಂಗವೀರಂ ಬಲಂ ।
ಬಿನ[1]ವೊಪ್ಪಂಬಡೆವಂ[1] ನೃಪಾಲತಿಲಕಂ ಭೂಪಾಲವಿದ್ಯಾಧರಂ ॥ ೪೯

ಆತನ ಸತಿ ಗುಣವತಿ ಧೈ ।
ರ್ಯಾತಿವಿಳಾಸವರಿಮ(?)ಸೆವ ರತಿ ವರಹಂಸ ॥
ವ್ರಾತಗತಿ ಲೋಕನುತವಿ ।
ಖ್ಯಾತೆಯೆ ವಸುಮತಿಯೆನಿಪ್ಪ ವನಿತಾರತ್ನಂ ॥ ೫೦

ಆಕಾಂತೆ ಒಂದು ದಿನಂ ನಿಜಕಾಂತಸಹಿತಂ

ಎಳಮಾವಿಂ ಕೌಂಗಿನಿಂ ಸತ್ಕದಳಿಯಿನರಸೇಱಿಲ್ಗಳಿಂ ದಾಡಿಮೀಸಂ ।
ಕುಳದಿಂ ಚೆಂದೆಂಗಿನಿಂ ಸಂಪಗೆಯಿನಸುಕೆಯಿಂ ಬಕ್ಕಯಿಂ ಮಾತುಳಂಗಂ ॥
ಗಳಿನುದ್ಯದ್ದ್ರಾಕ್ಷೆಯಿಂ ಪಾದುಱುಗಲ ಲತೆಯಿಂ ಕೋಕಿಲಧ್ವಾನದಿಂ ಕಂ ।
ಗೊಳಿಪೊಂದುದ್ಯಾನಮಂ ಭೋಂಕನೆ ವನದೊಲವಿಂ ಕಾಂತೆ ಪೊಕ್ಕಳ್ ನಿ
ತಾಂತಂ ॥ ೫೧

ಅಲ್ಲಿ

ಮೃದುತರಮಾರ್ಗದಿಂ ಜಗವನಂಡಲೆವುದ್ಧತಸತ್ವವೃತ್ತಿಯಿಂ ।
ಮದನಶಿಲೀಮುಖಂಗಳೆನಿಸಿರ್ದ ಮೊಱಲ್ದ ಶಿಲೀಮುಖಪ್ರಜಾ ॥
ತದ ಕಡುಪಿಂಗೆ ಸಿಲ್ಕುವುದಿದಾವ ವಿಳಾಸಮೆನತ್ತೆ ತುಂಬಿಗ ।
ಳ್ಕದ ನಱುಗಂಪು ಪೊಂಪುಳಿಸೆ ಪೆಂಪೆಸೆದಿರ್ದುದು ಚಂಪಕವ್ರಜಂ ॥ ೫೨

ನಿರವಧಿಯಿಂ ಕುಳಿರ್ದುದಕಮಂ ನಡುನೆತ್ತಿಯೊಳಾಂತು ತನ್ನ ಕ ।
ಣ್ಣುರಿಗುಪಶಾಂತಿಯಂ ಪಡೆದನಿಲ್ಲಭವಂ ಬಿಸಿಲೊಳ್ ಪೊದಱ್ದು ಬಿ ।
ತ್ತರಿಪೆಳಸಿರ್ಗಳಂ ತಳೆದು ಶೈತ್ಯಮನೆಲ್ಲರೊಳೀವ ಪೆರ್ಮೆಗಾ ।
ದೊರೆಯೆಮಗೆಂಬವೊಲ್ ವನದೊಳಗ್ಗದ ತೆಂಗಿನ ಸಾಲ್ಗಳೊಪ್ಪುಗುಂ ॥

ಅಂತೆಸೆವ ಉಪವನದ ಮಧ್ಯದಲ್ಲಿ

ಇದೆಮೀಂಗಳ್ ಮೀಂಗಳುದ್ಯದ್ಭ್ರಮರಮನೊಳಕೊಂಡಬ್ಜಮಬ್ಜಂ ವಳಕ್ಷ
ಚ್ಛದಹಂಸಂ ಹಂಸಮುತ್ಯದ್ದ್ಯುತಲಲಿತಲಸತ್ಪುಷ್ಕರಂ ಪುಷ್ಕರಂ ಬೇ ॥
ಗದಿನೈಳಾಭಾಗಕ್ಕೆ ನೈರ್ಮಲ್ಯಮನೆಸಗೆ ಶರತ್ಕಾಲದಾಕಾಶಮೋಲಿತ್ತಂ ।
ದುದೆನಲ್ ಚೆಲ್ವಾದ ಪದ್ಮಾಕರಮನೊಲವಿನಿಂ ಕಂಡು ಕೊಂಡಾಡುತಿರ್ದಳ್ ॥

1. ಮೊಘಂಬಗೆವಂ, ಕ, ಗ.

ಶತಪತ್ರನೇತ್ರಹಸ್ತ |
ಸ್ಥಿತಿಯಂತಿರೆ ಚಕ್ರಸಂಯುತಂ ಮಾಸದವೋಲ್ ||
ಸಿತಪಕ್ಷಬಹುಳಪಕ್ಷಾ |
ಗತಿಯಿಂ ರಂಜಿಪುದಖಂಡಮಂಬುಜಷಂಡಂ || ೫೫

ಅಂತೆಸೆವ ಪುಂಡರೀಕಷಂಡಮಂ ವಸುಮತೀದೇವಿಯೆವೆಯಿಕ್ಕದೆ ನೋಳ್ಪನಮಲ್ಲಿ

ತಿಳಿಗೊಳದಿಂಬಿನಿಂ ಮುಱಿಯಿಸಿಟ್ಟು ಸರೋಜದ ಬೀಜರಾಜಿಯಂ |
ಫಳಿಲನೆ ತಂದು ಚಂಚುಪುಟದೊಳ್ ನಿಜಚಂಚುವನಿಟ್ಟು ಕೊಟ್ಟು ಕೋ |
ಮಳಸಿತಪಕ್ಷಮಂ ಪೊರ್ದಿಸಿ ಲಾಲಿಪ ಹಂಸೆಯ ಪುತ್ರಮೋಹಮಂ |
ಉಳನೆ ಸಮಂತು ಕಂಡು ಮಿಗೆ ಚಿಂತಿಸಿದಳ್ ಸುಕುಮಾರಲಾಭಮಂ || ೫೬

ಚಿಲಿಪಿಲಿಗುಟ್ಟು ನುಣ್ದನಿಗಳಿಂ ಕಿವಿಗಿಂಪನೊಡರ್ಚಿ ಗೆಜ್ಜೆಗಳ್ |
ಘಲಿಕೆನಿಪಂತಿರೆಯ್ದೆ ಬಿಗಿಯಪ್ಪಿ ಕುಚಂಗಳನಂದು ಸೋಂಕಿಲೊಳ್ ||
ಮಲಗಿ ಮನಕ್ಕೆ ಸನ್ಮುದಮನೀವ ಕುಮಾರಕನಂ ಮದೀಯಸ |
ತ್ಕುಲಗೃಹದೀಪನಂ ಪಡೆವ ಸೈಪಿನ ಸುಗ್ಗಿಯದೆಂದು ಸಾರ್ಗುಮೋ || ೫೭

ಪಕ್ಷಿ ಮೊದಲಾಗಿ ಭವನಂ |
ಲಕ್ಷ್ಯಕಾರಣಮಿದೆಂದು ತನ್ನಯ ಶಿಶುವಂ ||
ರಕ್ಷಿಸುತಿರ್ಪುದವಱಿನ |
ತ್ರಿಕ್ಷೀಣಮುದಾಯ್ತು ಭಾವಿಸಲ್ ಮತ್ಸ್ವಾಂತಂ || ೫೮

ಎಂದು ಮತ್ತಂ,

ಇಷ್ಟಸುಖಕಾಮಭೋಗಮ |
ನಿಷ್ಟಂ ಸುತರಿಲ್ಲದರ್ಗೆನುತ್ತತಿಚಿಂತಾ ||
ದಷ್ಟಾಂಗಿ ಸುಯ್ದು ಹಾ! ಹಾ! |
ಕಷ್ಟ ವಿಧಾತ್ರಾ! ಯೆನುತ್ತೆ ಮೂರ್ಛೆಗೆ ಸಂದಳ್ || ೫೯

ಅಂತು ಮೂರ್ಛೆವೋದರಸಿಯನರಸನೆಂತಾನುಮೆಚ್ಚಱಿಸಿ ನಿಜನಿವಾಸಮಂ ಪುಗಿಸೆ ತನ್ನ ಮನವನ್ನಳಪ್ಪ ಕಮಳನಿಯೆಂಬ ತಾಂಬೂಲಕರಂಕವಾಹಿನಿ ತತ್ಕಾಂತೆಯಂ ಸಂತೈಸುತ್ತಮಿರೆಯಿರೆ

ತರುಣಿಯ ಪೂಸಿದಂಗಲತೆ ಸೂಸಿದ ಕುಂತಳಮೊಯ್ಯನೊಯ್ಯನೋ ।
ಸರಿಸುವ ಭಂಗಿ ಕೈಯ ಸೆಳೆ ಬಾಡಿದ ಪೂಮುಡಿ ಶೋಸ್ಯಹಾರವು ॥
ಚ್ಚರಿಯೆನಿಸಂಗದಾಸೊಪಡು ಜಾಡ್ಯದ ಮೆಯ್ ಕಡುಲಜ್ಜೆ ಕಜ್ಜಳಂ ।
ಪರೆದಲರ್*ಗಣ್ಗಳಿಂಬಿಸಿತು ಪೇಟಿವೆ ಪೂಣಿಕವಾಂತ ಭಾವಮಂ ॥ ೬೦

ಅಂತು ವಸುಮತೀದೇವಿ ಪುಷ್ಪವತಿಯಾಗಿ ಚತುರ್ಥಸ್ನಾನಾನಂತರಂ

ಇಂದುಕಳಾಧಿದೇವತೆ ಮನೋಹರನಿರ್ಮಲಪೂರ್ಣಚಂದ್ರಿಕಾ ।
ಚಂದನದಣ್ಪನುತ್ಪಲತಾರಕಸಂಕುಳಪುಷ್ಪಮಾಲಿಕಾ ॥
ವೃಂದಮನಬ್ಧಿಫೇನಧವಳಾಂಬರಮಂ ಮನವೊಲ್ದು ತಾಳ್ದಳಂ ।
ಬಂದವೊಲಿರ್ಕೆ ಬೆಳ್ಪಸದನಂ ಮೆಱೆದಿರ್ದು ತಲ್ಲತಾಂಗಿಯಾ ॥ ೬೧

ಅಂತು ಬೆಳ್ಪಸದನಂಗೊಂಡು ನಯನಕಾಂತಿಕೌಮುದಿಯಿಂ ಪ್ರಿಯ ನಯನಕುಮುದಮಂ ವಿಕಾಸಮನೆಯ್ದಿಸುತ್ತುಂ, ಪಂತನುರೀಚಿದರ್ಪಣದಿಂ ಕಾಂತನ ಕಮನೀಯತೆಯಂ ಕವಲ್ಪರಿಸುತ್ತುಂ, ತನುಪ್ರಭೆಯಿಂ ಮನೋವಲ್ಲಭನ ಮುದಮನೊದವಿಸುತ್ತುಂ, ಮಂಗಳಪ್ರಚ್ಛದಾಚ್ಛಾದಿತ ಸಕಲಧೂಪಧೂಮಗಂಧಾಧಿವಾಸಿತಮಪ್ಪ ನಿಜವಲ್ಲಭನ ಶಯ್ಯಾತಳಕ್ಕೊಯ್ಯನೆ ಬರ್ಪುದುಂ

ಇಂದಿನ ನಡೆಯಿಂದಿನ ನುಡಿ ।
ಯಿಂದಿನ ನಿಜಮುಖವಿಕಾಸಮಿಂದಿನ ನಗೆಗ ॥
ಣ್ಣಿಂದಿನ ಮನದನುರಾಗಮಿ ।
ದೆಂದಿನ ಪರಿಯೆತ್ತನುತ್ತೆ ನೃಪನೀಕ್ಷಿಸಿಪಂ ॥ ೬೨

ಅಂತರಸು ಕಾಂತೆಯ ಮುಖಾರವಿಂದಮಂ ನೋಡಿ ಹರ್ಷವಾರ್ಧಿಪರಿಕಾಲೆಮಸಗೆ

ಮಿಸುನಿಯ ಕಡಗದ ಕೀಲಂ ।
ಕಸಿನಂಗೆಯ್ವಂತೆ ಪೊರೆದಲಕ್ತಕರಾಗಂ ॥
ಪೆಸರಿಸುವ ಹಸ್ತಮಂ ಪಿಡಿ ।
ದು ಸಮೀಪಕ್ಕೊಲ್ದು ಕರೆದನಬಲೆಯನರಸಂ ॥ ೬೩

ಅಂತು ಕರೆದು ಪರ್ಯಂಕದೊಳ್ ಕುಳ್ಳಿರಿಸಿ

ಸೊಗಸಿನ ಲಲ್ಲೆ ಕೋಮಲಕಚಗ್ರಹಣಂ ಪುಳಕಂಗಳುಣ್ಮುವ ।
ಪ್ಪುಗೆ ಮೃದುಚುಂಬನಂ ಸರಸತುಂಗರದಚ್ಛದಪೀಡನಂ ರುಚಿ ॥
ದ್ವಿಗುಣಿತಕಾಮಕೇಳಿಯೆನಿಪಿಂತಿವು ಚಿತ್ತಸುಖಾನುರಾಗಮಂ ।
ಬಗೆಗೊಳಿಸಲ್ಕೆ ಕೂಡುತತಿಸೌಖ್ಯಸುಧಾಂಬುಧಿಯೊಳ್ ಮುಳುಂಗಿದರ್ ॥ ೬೪

ಅಂತು ಸುಸಿಲೆಸಕದಿಂ ವಸುಮತೀವಲ್ಲಭೆಯುಂ ವಸುಧಾಧಿಪತಿಯುಂ ಬಳಲ್ದು

ವಿಳಸದಮರಾಪಗಾಸ ।
ತ್ಪುಳಿನಸ್ಥಳದಲ್ಲಿ ಹಂಸಿಹಂಸರ್ ನಿದ್ರಾ ॥
ವಿಳರಾಗಿರ್ಪಂತೆಸೆದರ್ ।
ಸುಳಳಿತಮೃದುತಲ್ಪದಲ್ಲಿ ತದ್ದಂಪತಿಗಳ್ ॥ ೬೫

ಅಂತು ನಿದ್ರಾಸಕ್ತರಾಗಿರ್ಪರ್ಗಳ್ ಬೆಳಗಪ್ಪ ಜಾವದೊಳ್ ವಸುಮತೀದೇವಿ

ಸುರಕರಿಯನಿಂದುವಂ ಕೇ ।
ಸರಿಯಂ ದುಗ್ಧಾಬ್ಧಿಯಂ ದಿವಾಕರನಂ ಬಂ ॥
ಧುರಪುಷ್ಪಮಾಲೆಯುಂ ವಾ ।
ರಿರುಹಾನನೆ ಕನಸಿನೊಳ್ ಮುದಂ ಮಿಗೆ ಕಂಡಳ್ ॥ ೬೬

ಅಂತು ಸುಸ್ವಪ್ನಮುಂ ಕಂಡು ಸುಖನಿದ್ರೆದಿಳಿದು ಕುಳ್ಳಿರ್ದರಸಂಗೆ ತದ್ವಿಶೇಷಮಂ ಪೇಳಲರಸಂ ಬೆಳಗಾಗಲೊಡಂ ಪುರೋಹಿತರಂ ಕರೆಯಿಸಿ ತದ್ವೃತ್ತಾಂತಮಂ ಪೇಳಲೊಡಂ

ಕರಿಯಿಂ ಶಶಿಯಿಂ ಹರಿಯಿಂ ।
ಶರನಿಧಿಯಿಂ ರವಿಯಿನೆಸೆವ ಪುಷ್ಪದಿನಧಿಕಂ ॥
ಕರುಣಿ ಪರಾಕ್ರಮಿ ಪ್ರಾಜ್ಯಂ ।
ಸ್ಥಿರತೇಜಂ ನೃಪತಿ ಪುಟ್ಟುಗುಂ ಸುಕುಮಾರಂ ॥ ೬೭

ಎಂದು ಸ್ವಪ್ನಫಲಮಂ ಪೇಳ್ದು ಪುರೋಹಿತಂಗೆ ಕರ್ಪೂರತಾಂಬೂಲಾದಿದಾನಸನ್ಮಾನದಿಂ ಕಳಿಪಿ ಬಳಿಕಾದಿನಂ ಮೊದಲಾಗಿ ವಸುಮತೀದೇವಿ ನಾನಾವ್ರತನಿಯಮದಿಂದಿರ್ಪನ್ನಂ ಪಲವು ದಿನಂ ಕಳೆಯೆ

ನಡೆಯೊಳಡಿಯಿಟ್ಟು ಪೆಂಪಿನ ।
ನಡುವಿನೊಳೆಸೆಗೆಯ್ದು ನುಡಿಯೊಳೆಸೆಸಂವಲಗೆ* ॥
ೞ್ಗಡೆವಿಡಿದು ನೆಲಸಿ ಚೆಲ್ವಂ ।
ಪಡೆದೆಸೆವತ್ತಲಸನ್ವೃತ್ತಿ ತತ್ಕ್ಷೋಣೀಮಲೆಯಾ ॥ ೬೮

ಅದಂ ಕಮಳಿನಿ ಕಂಡಿಳಾಪತಿಯು ಸಮುಮುಂಬಡೆದೇಕಾಂತಕ್ಕೆ ಬಂದು

ವನಿತೆಯ ಗರ್ಭಚಿಹ್ನಮತಿಕೌತುಕಮೆಂತೆನೆ ರತ್ನನೂಪುರ ।
ಧ್ವನಿಗಲಸಿತ್ತು ಮಂದಗತಿಯೊಳ್ನಡು ಕಾಂಚಿಗೆ ತಿಣ್ಣಮಾದುದಾ ॥
ನನರುಚಿ ಚಂದ್ರನೆಂಬುಪಮೆಗೊಪ್ಪಿದುದುಚ್ಚಕುಚಾಗ್ರಮುಕ್ಕೆ ಕ ।
ರ್ಪನುನಯಮಾಗುವಂಗಲತೆ ಕಾಂತಿಯನಾಂತುದಿಳಾಧಿನಾಯಕಾ ॥ ೬೯

ಎಂದು ನಿರ್ಭರಗರ್ಭವಾರ್ತೆಯಂ ಪೇೞ್ದು ಸೀಮಂತಸಮಯಮೆಂಬುದುಮರಸನವಳ್ಗೆ ಪಸಾಯನಂಗೊಟ್ಟು ಪರಮಾನಂದಮಂ ತಳೆದು,

॥ ಮನೋಜ್ಞ ॥

ಮಹೀತಳಾಧೀಶ್ವರಂ ನಿಜಮನೋರಮಾಗರ್ಭದಿಂ ।
ಮಹೋತ್ಸವಾನಂದಮಂ ತಳೆದು ಗರ್ಭಸೀಮಂತದಿಂ ॥
ಸುಹೃದ್ವಿಧಾನಪ್ರಿಯಾಸ್ಪದಮಿದಕ್ಕೆನುತ್ತಾಕ್ಷಣಂ ।
ಪ್ರಹಾರವರ್ಮಾಖ್ಯನಂ ಕರೆಯಲಟ್ಟಿದಂ ಭೂಭುಜಂ ॥ ೭೦

ಆತು ತನಗೆ ಪ್ರಾಣಮಿತ್ರನಪ್ಪ ಮಿಥಿಲಾಪತಿ ಪ್ರಹಾರವರ್ಮನಂ ನಿಜಕಾಂತೆ ಪ್ರಿಯಂವದೆ ಸಹಿತಂ ಬರ್ಪುದೆಂದು ಕರೆಯೆ ಕಳಿಪಿ

ಸಕಲಸುವಸ್ತ್ರಮಂ ಸಕಲನಿರ್ಮಲಸನ್ನುತರತ್ನಕೋಟಿಯಂ ।
ಸಕಲಸುವಸ್ತುಮಂ ತಳೆದು ತನ್ನ ಮನೋರಮೆಯುಂ ಸುತರ್ಕಳುಂ ॥
ಪ್ರಕಟಿತಸೇನೆಯುಂ ಬೆರಸು ಬಂದನನೇಕವಿಭೂತಿಯಿಂದೆ ಕೌ ।
ತುಕಮೆನಿಸಲ್ ನೆಗೞ್ದ ಮಿಥಿಲಾಪತಿ ಪುಷ್ಪಪುರಕ್ಕೆ ರಾಗದಿಂ ॥ ೭೧

ಅಂತು ಬಂದ ಪ್ರಹಾರವರ್ಮನಂ ರಾಜಹಂಸಂ ಪುರಪ್ರವೇಶಂಮಾಡಿಸಿ ವಸುಮತೀದೇವಿಯ ಸೀಮಂತಸಂಭ್ರಮದಿನಿರಲೊಡಂ

ಪದಸಂಘಟ್ಟನೆಯಿಂ ಶಿಲೋಚ್ಚಯಕುಲಂ ನುಗ್ಗಾಗೆ ಸೇನಾಸುಭಾ ।
ರದಿನುರ್ವೀತಳಮೞ್ಕೆ ದುರ್ದಮಧನುರ್ಜ್ಯಾರಾವದಿಂ ಸಿಂಧುಗಳ್ ॥

ಕೆದಡಲ್ ತುಂಗಪತಾಕೆಯಿಂ ಗಗನಮಾನಂ ತೀವೆ ಮೇಲೆತ್ತಿ ಮು |
ತ್ತಿದನೊತ್ತಂಬದೆ ರಾಜಹಂಸಪುರಮಂ ಶ್ರೀಮಾಳವಕ್ಷೋಣಿಪಂ || ೨೨

ಅಂತು ಪೂರ್ವವಿರೋಧಿ ಮಾಳವದೇಶಾಧೀಶ್ವರನಪ್ಪ ಮಾನಸಾರಂ ಕುಸುಮಪುರಮಂ ಮುತ್ತಿ

ಕವಿ ಕವಿ ನೂಂಕು ನೂಂಕಗಟಿ ಲಂಘಿಸಿ ಕೋಂಟೆಯನೇಱಿಯಾಳ್ಗಳಂ |
ತಿವಿ ತಿವಿಯೆಂದು ಲಗ್ಗೆವಱಿಯಂ ಪೊಡೆವಬ್ಬರಮುರ್ವಿದುರ್ವಿಯಂ ||
ಕಿವಿಗಿಡಿಸುತ್ತಿರಲ್ ವಸಿಯಿಪೇನೆನುತುಂ ಕಲಿ ರಾಜಹಂಸನ |
ಶ್ವವನೊಸದೇಱಿಯೆಕ್ಕತುಳದಿಂ ಪೊಱಮಟ್ಟಿರಿಯೊಳ್ ಪೊಣರ್ಚಿದಂ || ೨೩

ಆವ್ಯತಿಕರದೊಳ್ ತನ್ನಾಪ್ತಬಲಮೆಲ್ಲಮುಮಂ ಪೊಱಮಟ್ಟು ಸುಪ್ರದುಂ ಮೀಱಿದ ಮುಕ್ತ ಕರಮುಕ್ತ ಯಂತ್ರಮುಕ್ತ ಮುಕ್ತಾಮುಕ್ತವೆಂಬ ಶಸ್ತ್ರಾಸ್ತ್ರಪ್ರಯೋಗದಿಂ, ಕೇಶಾಕೇಶಿ ನಖಾನಖಿ ದಂತಾದಂತಿ ಕಚಾಕಚಿ ಮುಷ್ಟಾಮುಷ್ಟಿಯೆಂಬ ಸಂಕುಳಯುದ್ಧದಿಂ, ನಿರ್ವಿಚಾರಜೀವಿತರಾಗಿ ಕಾದುವಾಗಳ್ ಮಾಗಧೇಶ್ವರಂ ಮಾನಸಾರನನಭಿಮಾನಹೀನನಪ್ಪಂತು ವಿರಥನಂ ಮಾಡಿ ಮುಂದುಗಾಣದೆ ಬೆಂಗೊಟ್ಟೋಡುವಂತೆ ಭಂಗಂಬಡಿಸಿ ಪಡೆಯೆಲ್ಲಮಂ ಪಡಿಗುಟ್ಟಿ ಮುಂದುಗೆಡಿಸಿ ಬಂದ ಬಟ್ಟೆಯಂ ಪತ್ತಿಸಲನಂ ಕೈ ಪಱಿದ ಕರಿಯಂತೆ ಸತ್ವಂಗುಂದಿ ಪೋಗುತ್ತುಂ

ಬಲಮೆಲ್ಲಂ ಕಡಿಖಂಡಮಾಯ್ತು ಪಜಯಂ ವೈವಶಿರ್ದಲ್ ದುರ್ಯಶಂ |
ತಲೆವೊಱುತ್ತಭಿಮಾನಮೊರ್ಗುಡಸಿತಿನ್ನೇನೆಂದು ಮದ್ರಾಜ್ಯದೊಳ್ ||
ನೆಲಸಿರ್ಪೆಂ ಸುಡು ಜೀವದಾಸೆಯನೆನುತ್ತುಂ ಮಾನಸಾರಂ ವನ |
ಸ್ಥಲಮಂ ಪೊಕ್ಕತಿರೋಷದಿಂದೆ ಸತತಂ ತಾಳ್ದಂ ತಪೋನಿಷ್ಠೆಯಂ || ೨೪

ದುರ್ಗಮವೈರಿಜಯುಕ್ತಿದು |
ಮಾರ್ಗಂ ನಿಜವೆಂದು ಮಾನಸಾರನೃಪಾಲಂ ||
ದುರ್ಗೆಯನುಪಾಸ್ತಿಗೆಯ್ಯು |
ತ್ತಾರ್ಗಮಗೋಚರಮೆನಿಸಿಪ್ಪರಣ್ಯದೊಳಿರ್ದಂ || ೨೫

ಅಂತು ಮಾನಸಾರಂ ಕಾನನಮಂ ಪೊಕ್ಕಂ. ಇತ್ತಲಾ ರಾಜಹಂಸಂ ಸಿಧಿ

ಪುರುಷಂ ನೀತಿಯುಂ ಪೇೞ್ದಂತೆ ಮುನ್ನಮೆ ಉನ್ನತಪ್ರಭಾವದಿಂ ಸನ್ನುತಿ
ವಡೆದಿರ್ದಂಗೆ ಜಯಪ್ರಮೋದಂ ಸಮನಿಸುವುದುಂ

ಸುರಕರಿ ಬಂದು ಪರ್ಬಿದ ಸರೋವರಮುಂ ಮದಮುರ್ಕಿ ಪೊಕ್ಕು ಪು |
ಷ್ಕರದಿನೊಱಲ್ದು ಪುಷ್ಕರಮನೀಂಟಿ ಸರೋಜಮನೆತ್ತಿ ಕಿತ್ತು ನಿ |
ರ್ಭರನಿಜಲೀಲೆಯಿಂ ಮೆಱೆವವೋಲ್ ಪ್ರತಿಪಕ್ಷಬಲಾಬ್ಧಿಯುಂ ನೆಲಂ |
ಬಿರಿಯೆ ಕಲಂಕಿ ಸತ್ವದೊದವಂ ತಳೆವಂ ಕಲಿ ಮಾಗಧೇಶ್ವರಂ ‖ ೭೬

ತನ್ನೆಸೆವಿಂಗೆ ತನ್ನ ವಿಭವಕ್ಕೆ ನೆಗೞ್ತೆಯ ತನ್ನ ಚೆನ್ನ ಸಂ |
ಪನ್ನತೆಗಂಪು ತನ್ನ ಕುಲದಾಯತಿಗೊಪ್ಪುವ ಮಾಣ್ಕೆಯಿಂ ಕಳಾ ‖
ಸನ್ನತಮಾಪ್ತಬಂಧುಜನಮಚ್ಚರಿಯೆಂದೆನಲುತ್ಸವಂ ಮಿಗಲ್ |
ತನ್ನಯ ಚಿತ್ತವಲ್ಲಭೆಗೆ ಗೆಂಟಗೆಗಟ್ಟಿದನುರ್ವರಾಧಿಪಂ ‖ ೭೭

ಅಂತು ರಮಣೀಯಮಪ್ಪಂತು ನಿಜರಮಣಿಗೆ ಸೀಮಂತಮನೆಸಗಿ

ಸಕಲದಿಗಂತರಕ್ಕಖಿಳಗೂಢಚರರ್ಕಳನಟ್ಟಿ ಶಾತ್ರವ |
ಪ್ರಕರ[1]ದ ಸಪ್ಪ[1]ಲಾಬಲತೆಯುಂ ತಿಳಿಯುತ್ತನುರಾಗಲಕ್ಷ್ಮಿಯುಂ ‖
ಸುಕರಮೆನಲ್ ಮುಖಾಂಬುಜದೊಳಾಂತು ನೆಗೞ್ದ ನಿಜಾತ್ಮಮಿತ್ರನಂ |
ತಿಕದೊಳಿರಲ್ ಸುಖಂಬಡೆದು ರಂಜಿಸುತಿರ್ದನಭಂಗವಿಕ್ರಮಂ ‖ ೭೮

‖ ಗದ್ಯಂ ‖

ಇದು ನಿಖಿಲಬುಧಜನಮನೋವನಜವನದಿವಾಕರಕಿರಣಪ್ರತಿಮಪ್ರಸನ್ನ
ಶ್ರೀಮದಭಂಗವಿಟ್ಠಲಪದಾಂಭೋಜಮತ್ತಮಧುಕರ
ಮಧುಸೂದನನಂದನ ಸರಸಕವಿ ಚೌಂಡರಾಜ ವಿರಚಿತಮಪ್ಪ

ಅಭಿನವ ದಶಕುಮಾರಚರಿತೆಯೊಳ್

ಪೀಠಿಕಾಪ್ರಕರಣಂ

ಪ್ರಥಮಾಶ್ವಾಸಂ.

1. ಜವಬಲ. ಕ. ಗ.

॥ದ್ವಿತೀಯಾಶ್ವಾಸಂ॥

ಶ್ರೀವಸುಮತೀವರಂ ಸಕ ।
ಲಾವನಿಯುಂ ಪಾಲಿಸುತ್ತ ನೂನವಿಲಾಸಂ ॥
ಭೂವಿಸುತಿವೆತ್ತನರ್ಥಿಜ ।
ನಾವಾಸಂ ಪದೆದಭಂಗವಿಟ್ಠಲಭೃತ್ಯಂ ॥ ೧

ಅದಲ್ಲದೆಯುಂ

ಪೌರವಿಲಾಸಿನೀನಯನಕಾಂತಿ ಕವಲ್ವರಿದೊಪ್ಪುತಿರ್ಪ ಶೃಂ ।
ಗಾರರಸಪ್ರವಾಹದೊಳನಂತನೃಪಾಲಕಸತ್ಕಿರೀಟನೀ ॥
ರೇರುಹಜಾಳದೊಳ್ ವಿವಿಧಸತ್ಕವಿಸಂಕುಲಮಧ್ಯದೊಳ್ ಮಹೋ ।
ದಾರದೆ ರಾಜಹಂಸನೃಪನೇನೆಸೆದಿರ್ದನೊ ಸತ್ಸಭಾಗ್ರದೊಳ್ ॥ ೨

ಅಂತು ಮನೋನುರಾಗದಿಂ ವೈಮೊಸಡೆದು ಸಕಲರಾಜಪುತ್ರನೇತ್ರಪತ್ರಿಕೆಗಳಂ ಕೃತಾರ್ಥಂ ಮಾಡುತ್ತುಂ ಸುಖಸಂಕಥಾವಿನೋದದಿಂ ಸಭಾಭವನದೊಳ್ ಸಿಂಹಾಸನಾಸೀನನಾಗಿ ಕುಳ್ಳಿರ್ದುಮಾಸಮಯದೊಳೊರ್ವ ದೌವಾರಿಕಂ ಬಂದು ನಿಟಿಲತಟಘಟಿತಹಸ್ತಸಂಪುಟನಾಗಿ

ಪೊಸಜಡೆ ಮಿಂಚುವೋಲ್ ಕುಣಿವ ಕುಂಡಲಮಿಟ್ಟ ವಿಭೂತಿ ಸೆಳ್ಳುಗುರ್ ।
ಕುಸಿದೊಡಲಾಂತ ಲಾಕುಳಕಮಂಡಲುವುಟ್ಟಮಲಾಂಬರಂ ಶ್ರಮ ॥ ದಂಡಿ
ಪ್ರಸವನುಖಂ ಮನೋಹರವಿಲಾಸನನಾಂತಿರೆ ಚೆಲ್ವ ಮುಗ್ಧತಾ ।
ಪಸನತಿಸಂಭ್ರಮಂಬೆರಸು ಬಾಗಿಲೊಳಿರ್ದಪನುರ್ವರಾಧಿಪಾ ॥ ೩

ಎಂದು ದೌವಾರಿಕಂ ಬಿನ್ನಪಂಗೆಯ್ಯಲರಸನಾತನಂ ಬರಿಸೆಂಬುದುಂ

ಮೆಲ್ಲನಣಿಯಿಡುತೆ ತನ್ನಂ ।
ಬಲ್ಲವರಱಿದಪ್ಪರೆಂದು ಶಂಕಿಸುತೆ ಮುಗಂ ॥
ಪಲ್ಲವಿಸೆ ನಡೆದು ಬರೆ ಭೂ ।
ವಲ್ಲಭನಾಕ್ಷಣದೊಳಱಿದನಾತನ ಕುಱುಪಂ ॥ ೪

ಅಂತಱಿದುಮಱಿಯದಂತೆ

ನಸ ನಗುತೆ ಕೈಗಳಂ ಮುಗಿ |
ದೊಸೆದಿಲ್ಲಿಗೆ ಬನ್ನಿಮೆಂದು ಕುಳ್ಳಿರಿಸಿ ಸಭಾ ||
ವಸಥದೊಳೊಳ್ನುಡಿಯಿಂ ಮ |
ನ್ನಿಸಿದಂ ಕುಟಿಲೋಪಚಾರದಿಂ ಭೂಪಾಲಂ || ೫

ಅಂತು ಕಿಱಿದು ಬೇಗಮಿರ್ದು ರಾಜಲೋಕಮಂ ಬೀೞ್ಕೊಟ್ಟು ಓಲಗ ದಿಂದೆೞ್ದೇಕಾಂತಕ್ಕೆ ಕುಟಿಲತಾಪಸನಂ ಕರೆದಿದೇಂ ಚಟುಲಚರಣಾ! ಈಪರಿ ಯೊಳ್ ಬರ್ಪುದರ್ಕೆ ಕಾರಣಮೇನೆಂದು ಕೇಳ್ಪುದುಮವನಿಂತೆಂದಂ:—

ಅವನಿಪ ಬಿನ್ನಪಂ ನಿಜವಿರೋಧಿನೃಪಾಲಕರಾಜ್ಯದೊಳ್ ವಿಶೇ |
ಷವನಱಿದಾಗಳಾಗಳಱಿದರ್ಥವನೊಪ್ಪಿಸಲೆನ್ನ ನಟ್ಟಲಾಂ ||
ವಿವಿಧವಿಳಾಸದಿಂದೆಸೆವ ಮಾಳವದೇಶಮನೆಯ್ದಲಲ್ಲಿ ಮಾ |
ಳವನೃಪನೊಂದು ಕಾರ್ಯವನೊಡರ್ಚಿದೊಡಾನಱಿದಿಲ್ಲಿಗೆಯ್ದಿದೆಂ || ೬

ಅದಾವುದೆನೆ:—

ನಿನ್ನೊಡನಂದು ಕಾದಿ ಮುಱಿದೋಡಿದ ಬನ್ನದ ಬೇಗೆಯಿಂದಮಂ |
ತನ್ನ ಪುರಕ್ಕೆ ಪೋಗದೆ ಮಹಾವನಮಂ ತನೆ ಪೊಕ್ಕು ದುರ್ಗೆಯಂ ||
ಕೆನ್ನಮುಪಾಸ್ತಿಗೆಯ್ದು ಪಡೆದಂ ಗದೆಯಂ ಪದೆಪಿಂ ರಿಪುಕ್ಷಯಾ |
ರ್ಥನ್ನಿಜಸೇನೆಯಂ ನೆರಪಿ ಬಂದಪನಿಲ್ಲಿಗಿಳಾಧಿನಾಯಕಾ || ೭

ಎಂದೀವಿಶೇಷಮಂ ಪೇೞಲೆಂದೀವೇಷದಿಂ ಬಂದೆನೆಂಬುದುಮಾತನಂ ಪ್ರೀ ತಿಯಿಂ ಮನ್ನಿಸಿಯರಸಂ ಮಗುಳಿಂತೆಂದಂ:—

ಅಕ್ಕಟ! ಮಾಳವಂ ಮಗುಳ್ದು* ಚೇಷ್ಟಿಸಿ ಬರ್ಪೊಡೆ ಕೊಂದು ಬಾರದಿಂ
ತುಕ್ಕೆವದಿಂದೆ ನೀಂ ಬರಲಿದೇಕವರುಂ ಮುಳಿದಿಲ್ಲಿಗೆಯ್ತರಲ್ ||
ಸೊಕ್ಕಿದಿಭಂ ಮೃಗಾಧಿಪತಿಯಿರ್ಕೆಗೆ ಬಂದಪ್ಪೊಲಾಂತು ಸೀೞ್ದು ಪೋ |
ೞ್ಗಕ್ಕದೆ ಮಾಣ್ಬನೇ ಎನುತೆ ಗರ್ಜಿಸಿದಂ ಮಗಧಕ್ಷಿತೀಶ್ವರಂ || ೮

ಅಂತು ಕೋಪಮಂ ತಳೆದಾತನಂ ಕಳುಪಿಯನಂತರಂ ತನ್ನ ನಾಲ್ವರ್ ಸಚಿವರಂ ಕರೆಯಿಸಿ ತದ್ವೃತ್ತಾಂತಮಂ ಪೇೞ್ದುದರ್ಕೇನಂ ಮಾೞ್ಪೆಮೆಂದು ಸುಮಿತ್ರನ ಮೊಗಮಂ ನೋಡಲಾತನಿಂತೆಂದಂ:—

ಹಿಂದಣ ಸೋಲವೊಂದು ವನವಾಸದ ಸೇದೆಯದೊಂದು ಪೆಂಡಿರಂ । ಅ
ಸಂದನರಿಂದಗಲ್ದಿಲದೊಂದು ಮನೋಗತವೈರವೊಂದಿದೊಂ ॥
ದೊಂದತಿದುಃಖಕಾರಣಮಿವೆಲ್ಲವಱಿಂ ಕಡುನೊಂದು ದೈವದಿಂ ।
ದೊಂದು ಗದಾಯುಧಂಬಡೆದಸಿಂ ತಱಿದಿರ್ದನೆ ಮಾಗಧೇಶ್ವರಂ ॥ ೯

ಎಂದ ಮಾತಂಕೇಳ್ವ್ಪತಂಗಾತಂ ಮಿಗಿಲಾದವಿಲಾಪಮುಬ್ಬೆಗಮುಂ ಪುಟ್ಟೆ ಪ್ಪುದೆಂದು ನಸುನಗುತ್ತುಂ ಸುಮತಿಯ ಮುಖಮಂ ನೋಡಲಾತನಿಂತೆಂದಂ:—

ನುತಸಾಮಭೇದದಾನೋ ।
ದ್ಧತದಂಡಮೆನಿಪ್ಪನಾಲ್ಕುಮವಱೊಳ್ ಕಾಲೋ ॥
ಚಿತಮಪ್ಪುದಂತದಂ ನಿ ।
ಶ್ಚಿತಮಪ್ಪಂತೆಸಗು ದೇವ ನೀನಱಿಯದುದೇ ॥ ೧೦

ಎಂದ ಮಾತಂ ಮನದೆಗೊಂಡು ಸತ್ಯಧರ್ಮನ ಮೊಗಮಂ ನೋಡಲಾತನಿಂತೆಂದಂ:—

ಅಪಜಯಮಕ್ಕೆ ಮೇಣ್ವಿಜಯಮಕ್ಕೆ ವಿರೋಧಿನೃಪಾಲರೆತ್ತಿ ಬಂ ।
ದಪರೆನೆ ಕೇಳ್ದು ತನ್ನ ಪುರಮಂ ಪೊಱಮಟ್ಟವಟಂ ನಿಜಾರಿಭೂ ॥
ಮಿಪರೆರ್ದೆ*ಯಳ್ಕೆ ತಳ್ತಿಱಿದನೇಕಯುಗಂ ಪರಹಾ ಚಂದ್ರಮಾ ।
ತಪಸಮಕೀರ್ತಿಯಂ ಪಡೆದು ಬಾಳ್ವುದೆ ವಲ್ ನೃಪನೀತಿ ಭೂಪತೀ ॥ ೧೧

ಆಮಾತಂ ಕೇಳ್ದರಸಂ ಸಂತಸಂಬಟ್ಟು ಸುಶ್ರುತನ ಮುಖಮಂ ನೋಡಲಾತನಿಂತೆಂದಂ:—

ಎನಿತು ರಿಪುವಿಜಯಮಾಗಿ ।
ರ್ದ ನರೇಂದ್ರಂ ದುರ್ಗವರ್ಗಮಂ ಪಾಲಿಪುದೇ ॥
ಕನೆ ಸಿಂಹಂ ಗಜವಿದಳನ ।
ನೆನಿಸಿರ್ದುಂ ಬಹಳಗುಹೆಯನಾಶ್ರಯಿಸುವವೋಲ್ ॥ ೧೨

ಎಂದು ಪೇಳ್ದವರ ಮಾತೆಲ್ಲಮಂ ಕೇಳ್ದು ಅವರವರಿಚ್ಛೆಯುಂ ಮಾಳ್ಪೆನೆಂದು ರತ್ನಶಿಖರಿಯೆಂಬ ದುರ್ಗಕ್ಕೆ ಸ್ತ್ರೀಸಮೂಹಮಂ ಕಳುಪಿ ತಾಂ ಶುಭದಿನಶುಭಮುಹೂರ್ತದಿಂ ಪೊಱಮಟ್ಟು,

ದೆಸೆ ಬೆಸಲಾದುದೆಂಬೀ ಧರಣಿಯೊಂದುದೊ ಪನ್ನಗವಲ್ಲಭಂಗೆ ಲೆ ।
ಕ್ಕೆಸಲರಿದೆಂಬಿನಂ ಮದಗಜಾಳಿ ಹಯಾಳಿ ರಥಂ ಪದಾತಿ ಘೂ ॥
ರ್ಮಿಸೆ ಪಗೆಯುಂ ಪಡಲ್ವಡಿಸಲೆಂದು ಮಹಾದ್ಭುತದೇೞ್ಗೆಯಿಂ ನೆಲಂ ।
ಕುಸಿಯೆ ಚತುರ್ಬಲಂ ಬೆರಸು ತನ್ನಯ ರಾಜ್ಯದ ಸೀಮೆಗೆಯ್ದಿದಂ ॥೧೩

ಅಂತು ರಾಜಹಂಸನಿದಿರಾಗಿ ಬಿಟ್ಟುದಂ ಮಾನಸಾರಂ ಕೇಳ್ದು

ಪೂರ್ವವಿರೋಧದಿಂ ನಿಜಪರಾಕ್ರಮದಿಂ ಪರರಾಜ್ಯಕಾಂಕ್ಷೆಯಿಂ ।
ದೋರ್ವಲಮುಕ್ಕಿನಿಂ ವಿಭವಮತ್ಸರದಿಂ ಜಸದೇೞ್ಗೆಯಿಂ ಗದಾ ॥
ಗರ್ವದೊಳುರ್ಬಿ ದಿಗ್ವಿತತಿ ಕಂಪಿಸೆ ಮಾಳವಭೂಮಿಪಾಲಕಂ ।
ಸರ್ವಬಲಾನ್ವಿತಂ ನಡೆದು ಮಾಗಧನೊಳ್ ಮುಳಿದೊಡ್ಡನೊಡ್ಡಿದಂ ॥ ೧೪

ಅಂತುಭಯಬಲಂ ಪ್ರಭೂತಪ್ರಭವದಿಂದಭಿಮುಖಮಪ್ಪುದುಂ

ಕರಿಗೆ ಕರಿ ತುರಗದೊಳಗೆ ।
ತುರಂಗತತಿ ತೇರ್ಗೆ ತೇರ್ ಪದಾತಿಗೆ ಸುಭಟರ್ ॥
ತ್ಕರಮಣಿಯನೊಡ್ಡಿ ಕಾದ ।
ಲ್ಕುರವಣಿಸಿತ್ತಮಗೆ ತಮಗೆನುತ್ತುಭಯಬಲಂ ॥ ೧೫

ಅಂತುರವಣಿಪುದಂ ಕಂಡು

ಬಾಪುಲಿಯ ಕಾಲ ತೊಡರ ಮ ।
ಹಾವೀರರ ಚೂಣಿಬವರನಂ ಕೆಣಕಲ್ ಕೋ ॥
ಪಾವಿಷ್ಟರಾಗಿಯುಗ್ಗಡ ।
ರಾವುತರುರವಣಿಸಿ ಕುದುರೆಯಂ ಪೊಳೆಯಿಸಿದರ್ ॥ ೧೬

ಗಱಿಸನ್ನೆಯಿಂದೆ ಕರೆಕರೆ ।
ಮುಱುವಾಳ್ಗಳನುಭಯಬಲದ ಬಿರುವರ್ ಬಿಲ್ಲುಂ ॥
ಬೆಱಗಾಗಿ ನೋಡೆ ಕಣ್ಗಳ ।
ಬಱಿನಂ ಕಳೆಬೆಚ್ಚು ಮೆಚ್ಚಿಪರ್ ಬಿಲ್ಲಾಳ್ಗಳ್ ॥ ೧೭

ಕಿಱುಪುವ ಕಿವಿ ಕಡುವೊಗರಂ ।
ಪೆಱುವ ಮೊಗಂ ಸುರ್ಬಡದರ್ ವಾಳಾಗ್ರಂ ಮುಂ ॥

ದುಱುವಾಯ್ದು ತವಕವೊಪ್ಪುವ ।
ಕುಱುಪಿನ ಕುಮರಿಗಳನಾರ್ದು ಬಿಟ್ಟರ್ ಸುಭಟರ್ ॥ ೧೮

ಪುಷ್ಕರರಂಧ್ರದ ಘೋತ್ಕೃತಿ ।
ಪುಷ್ಕರಭಾಗಕ್ಕೆ ಪಾಱೆ ಸದ್ಭಟತತಿಯಂ ॥
ನಿಷ್ಕರುಣದಂತಘಾತಿಯಿಂ ।
ನಿಷ್ಕಂಟಕವಾಗಿ ಮಾಡಿದತ್ತಿಭಯೂಥಂ ॥ ೧೯

ರಣವಾರ್ಧಿಯೊಳರಿಯ ಶಿರೋ ।
ಮಣಿಯಂ ತವೆ ಮಾಱುಗೊಳ್ವ ಪೆರ್ಬಡಗಂಬಂ ॥
ತಣಿಯೊಡ್ಡಿದಾಳ್ಗಳೆಲ್ಲಂ ।
ಪೆಣನೊಡ್ಡಾಗಲ್ಕೆ ಪರಿದುವಗ್ಗದ ತೇರ್ಗಳ್ ॥ ೨೦

ಕಲಿಗಳನಮರಿಯರೊಡಸಿರೆ ।
ಕಳುಪುವ ತೇಜದಿಂದೆ ಕೊಂತದಿಂ ಕೋದು ನಭ ॥
ಸ್ಸ್ಥಳಕೆತ್ತಿ ತಮ್ಮ ಬಾಹಾ ।
ಬಳಮಂ ರಣದಲ್ಲಿ ಕೊಂತಕಾಱರ್ ಮೆಱೆದರ್ ॥ ೨೧

ಝಳಪಿಸಿ ಪೊಯ್ವ ಖಡ್ಗಲತೆ ಮಿಂಚು ಭಟರ್ಕಳ ಬೊಬ್ಬೆಯಬ್ಬರಂ ।
ಮೊಳಗು ವ್ರಣಸ್ರವಸಂಗಿ ಸುರಿತರ್ಪರುಣಾಂಬು ಸುವೃಷ್ಟಿ ಬಲ್ಪು ಪೆ ॥
ರ್ಚಳಸೆನೆ ಸಂಗರಾಂಗಣದೊಳಾಂತರ ಪಂದಲೆರಾಸಿಯುಂ ಮರು ।
ಳ್ಗಳ ಬಳಗಕ್ಕೆ ಬೀಱುತೆ ಪಡಿಂಬಿನರಿವರ್ಗಲಮರ್ವರಾಧಿಪರ್ ॥ ೨೨

ಅಂತು ಮಾಳವಮಾಗಧರ್ ಪೋಳಿಯಱಿದಾಳ ಕಾಳಗಮಂ ನಿಲಿಸಿ

ಮಾಲವನರಥವನುವೀರ್ ।
ಪಾಲಂ ಮಗಧೇಶ್ವರಂ ನಿಜಾಸ್ತ್ರಾಳಿಗಳಿಂ ॥
ಕೀಲಿಸುತೆ ಮುಟ್ಟೆವಂದರ್ ।
ಕಾಲಂ ಕಡುಮುಳಿದು ಬರ್ಪ ತೆಱದಿಂದಾಗಳ್ ॥ ೨೪

ಅಂತು ಬರ್ಪುದಂ ಕಂಡು ಮಾಳವಂ ತನಗೆ ಸೋಲಂ ಬರ್ಪುದೆಂದಾಳ ಮುಖಮಂ ನೋಡಿ ಘೋಳೆಂದು ಕವಿಯೆ ಮಾಗಧನಾಳ್ ಕಂಡು

ಮಾಳವನೆಂಬನನಲೆ ನ ।
ಮ್ಮಾಳವನೆಂದಾರ್ದು ಸುಭಟರೆಚ್ಚರ್ ಘಟೆಯುಮಂ ॥
ಗಾಳಿ ಮುಸಗಲ್ಕೆ ಮಗಧನ ।
ಧಾಟಿ ಮಹಾಮೇಘದಂತೆ ಪರೆದತ್ತಾಗಳ್ ॥ ೨೮

ಅಂತು ತೆರಳ್ದುದಂ ಕಂಡು ಮತ್ತೆ

ಪಿಂದಣ ಸೋಲಮಂ ಮಱೆದು ಲಜ್ಜೆಯನೊಲ್ಲದೆ ಮತ್ತೆ ಬಂದನೇ ।
ಪಂದೆಗಳೋಜನೆಂದು ಮಿಡುಕುಳ್ಳಭಟರ್ ಕಡುಕೆಯ್ದು ಬಾಣದಿಂ ॥
ಸ್ಯಂದನಮುಂ ತುರುಂಗಚಯಮುಂ ನಿಜದೇಹಮುಮೆಚ್ಚೊಡಾನೃಪಂ ।
ನೊಂದು ರಥಾಗ್ರದಿಂ ನೆಗೆದು ದಿವ್ಯಗದಾಯುಧಮಂ ತುಡುಂಕಿದಂ ॥ ೨೯

ಅಂತು ದೇವತೆ ಕೊಟ್ಟ ಗದಾದಂಡಮನುಚ್ಚರ್ದಮುರಿಯುಂ ಸಿಮಿಂಚಿರ್ಪ ಪುಲ್ಲಿಯಂ ತೆಲ್ಲೈಸಿ ಗೊಂಡೆಯುಮಂ ದಂಡೆಗೊಳಿಸಿ ಚಾರಣಾಕೃತಿಯಿಂ ಪಿಡಿದಾಗಳ್

ಕುಡುಮಿಂಚಂ ಸೂಸುತುಂ ಬಲ್ಸಿಡಿಲ ಬಳಗಮುಂ ಕಾಱುತುಂ ಕೇಡಮಂ ಸಾ
ಲಿಡುತುಂ ಸಂಹಾರಕಾಲಾಗ್ನಿಯನುಗುೞುತುಮೆಂಟುಂ ದಿಶಾಭಿತ್ತಿಯಂ ಘೇ
ಳಿಡಿಸುತ್ತುಂ ಕೋಟಿಸೂರ್ಯದ್ಯುತಿಯನೊದೆಯುತುಂ ಭೈರವಾಟೋಪಮಂ
ಕೇಳ್ಪಿಡಿಸುತ್ತುಂ ರೌದ್ರಮಾದತ್ತಧಿಕತರಗದಾದಂಡಮುದ್ವೃತ್ತಚಂಡಂ ॥

ಅಂತಿರ್ದ ಗದಾದಂಡಮಂ ಬೀಸಿ

ಕುದಿದುರ್ಕಲ್ವೇಡ ಮುನ್ನೆಮ್ಮನುಮಱಿಯದುದಾಸೀನದಿಂ ಕಾದಿಯಾಂ
ಸೋಲ್ತುದು ಮೋಘಂ ಪೋಗು ಪೋಗೆಂದೆನುತೆ ಗಜಘಟೆ ಬೊಬ್ಬಿಟ್ಟು ಧೀಂಕಿ
ಟ್ಟು ದುಷ್ಟಂ ॥ ಗದೆಯುಂ ಬೀಸಿಟ್ಟೊಡಾಮಾಗಧನೃಪನ ರಥಂ ಸುಗೆರ್
ಜಾತ್ಯಶ್ವಜಾಳಂ । ಮದಮಾತಂಗವ್ರಜಂ ಬೆಟ್ಟುಗಳ್ ಮಱೆದೊಱಗಲ್
ಬಿಟ್ಟು ಪತ್ತಿಪ್ರತಾನಂ ॥ ೩೧

ಅಂತು ಚಾತುರ್ಬಲಮುಂ ವಿಲಯಾಗ್ನಿ ಪರ್ವಿದಂತೆ ಸರ್ವಸಂಹಾರಂಮಾ
ಡಲರಸಂ ಶಿರೋಭಾಗದೊಳ್ ಗಾಯಂಬಡೆದು ಮೂರ್ಛೆವೋಗೆ

ರಥದೊಳೊಱಗಿರ್ದನರಸಂ ।
ಮಿಥಿಳಾಪತಿ ಸಿಲ್ಕಿದಂ ಪ್ರಧಾನರ್ ನಾಲ್ವರ್ ॥
ಪ್ರಧನದ ಬೆಸೆಯಿಂದುೞಿದರ್ ।
ಶಿಥಿಲವೆನಲ್ ಸೇನೆ ಪರಿದುಬೆಳ್ದೆಸೆಗಾಗಳ್ ॥ ೨೮

ಕಿಸಲಯರಾಜಿಯಂ ತಳೆದ ಕಲ್ಪಕುಜಂ ನವಸಾಂಧ್ಯರಾಗದಿಂ ।
ಮಿಸುಪುದಯಾಚಲಂ ವಿವಿಧವಿದ್ರುಮವಲ್ಲರಿಯಿಂ ಕರಂ ವಿರಾ ॥
ಜಿಸುವ ಮಹಾರ್ಣವಂ ಮೆಱೆವವೊಲ್ ಮೆಱೆದತ್ತು ಗದಾಭಿಘಾತದಿಂ ।
ಬಸವೞಿದಿರ್ದ ಭೂಪತಿಯನಾಂತ ರಥಂ ರಣಮಧ್ಯಭೂಮಿಯೊಳ್ ॥ ೨೯

ಪಟುಭಟರೞ್ಗದರರಸಂ ।
ನಿಟಿಲದ ಗಾಯಕ್ಕೆ ತೇಂಕಿ ಮೈಮಱೆದಂ ದು ॥
ರ್ಘಟವುಮುೞ್ವುದೆಂಬವೊಲ್ ಸಂ ।
ಕಟದಿಂ ರತ್ನಾಚಲಕ್ಕೆ ಸರಿದರ್ ಸಚಿವರ್ ॥ ೩೦

ಇತ್ತಲ್

ಇಂದು ತಪಃಫಲಂ ಸಫಲಮಾದುದು ಮದ್ಗದೆಯಿಂ ವಿರೋಧಿ ತೀ ।
ರ್ದಂ ದಟಿಮೆಯ್ಗೆ ಮುಗ್ಗಿತು ಜಯಂ ನಮಗಾಯ್ತೆನುತುರ್ಬಿ ಗರ್ಬದಿಂ ॥
ದುಂದುಭಿಶಂಖಕ ಹಳೆಯ ಗಾವರದಿಂ ನಿಜಪತ್ತನಕ್ಕೆ ಸಾ ।
ನಂದದಿನೆಯ್ದಿದಂ ಪುರಜನಂಗಳಿದಿರ್ವರೆ ಮಾಳವೇಶ್ವರಂ ॥ ೩೧

ಅಂತು ಮಾಳವೇಶ್ವರಂ ತನ್ನ ಪತ್ತನಮಂ ಪೊಕ್ಕು

ಅನುವರದೊಳ್ ಸಿಲ್ಕಿದನಂ ।
ಜನಪತಿಗಳ್ ಭಂಗವಡಿಸಲಾಗದೆನುತ್ತುಂ ॥
ಘನತರನೀತಿವಿದಂ ಭೋಂ ।
ಕನೆ ಬಿಟ್ಟಂ ಬೇಟ್ಪುದಿತ್ತು ಮಿಥಿಳೇಶ್ವರನಂ ॥ ೩೨

ಅಂತಾಮಾಳವೇಶ್ವರಂ ತನಗೆ ಸಿಲ್ಕಿದ ಪ್ರಹಾರವರ್ಮನಂ ಬಿಟ್ಟು ಕಳುಪಿ ಜಯಪ್ರಮೋದದಿಂದಿರಲಿತ್ತಲ್

ಮಾಗಧನ ಸಚಿವರಿತ್ತಲ್ ।
ಬೇಗದೆ ರತ್ನಾಚಲಕ್ಕೆ ಪೋಗಿ ನೃಪಂ ದೇ ॥
ವಾಗಾರಮನೆಯ್ದಿದನೆಂ ।
ದಾಗಳ್ ವಸುಮತಿಗೆ ಪೇೞ್ದರುಬ್ಬೆಗದಿಂದಂ ॥ ೩೩

ಅಂತು ಪ್ರೌಢವಿಪತಿ ಮಡಿದನೆಂದು ವಸುಮತಿಗೆ ಪೇೞ್ದುದುಂ ವಸುಮತಿ ಸುಮತಿಯುಪ್ಪದಱಿಂದಾಸಚಿವರ್ಗಿಂತೆಂದಳ್:—

ಭಂಡಣದೊಳ್ ಜಯಾ*ಪಜಯಮೆಂಬುದುಸಿದ್ಧಮದೊಂದು ಕಂಬಿ ಪೇೞ್
ಗಂಡಗುಣಂಗಳುಳ್ಳವರ್ಗದಂತಿರಲೊಪ್ಪುವ ಕೊಯ್ಯಲಾದೊಡೊ ॥
ಲ್ದಂಡುಱೆ ಪುಯ್ಯಲಾದೊಡೆ ಪಲಾಯನಪಂಡಿತರಾದ ಗಾದೆಯಂ ।
ಕಂಡಪೆವೀಗಳೆಂದಬಲೆ ಕೋಪಿಸಿದಳ್ ಸಚಿವಪ್ರಧಾನರಂ ॥ ೩೪

ಎಂದು ಮತ್ತಮವಂತಿರಲರಸನೊಡನೆ ಪೋಗಲ್ವೇೞ್ಕೆನಗಿಂಧನಸಂದೋಹಮಂ ಸಮಕಟ್ಟಿಮೆಂಬುದುಂ, ಸಚಿವರ್ ಸನ್ಮಾನಿಸಿ ದೇವಿಯರ ಗರ್ಭದರ್ಭಕಂ ನಿರ್ಭರರಾಜ್ಯಮನಾಳ್ವನೆಂದಾಗಾಮಿಕಾರ್ಯಮಂ ಪೇೞ್ದು ನಿಲಿಸಿದೊಡಂ ನಿಲ್ಲದೆ ಜೀವದಾಸೆಯನೊಲ್ಲೆನೆಂಬುದುಮವರ ಚರಣಕಮಲದೊಳ್ ಶಿರೋಭಾಗಮಂ ಸಾರ್ಚುವುದುಮಾಕೆ ತನ್ನೊಳಿಂತೆಂದಳ್:—

ಏಕೆ ದುರಾತ್ಮರ ಮಾತಂ ।
ನೂಕುವೆನಾಂ ಕಂಡ ಬುದ್ಧಿಯಂ ಕಾಣ್ಬೆಂ ನಿ ॥
ರ್ವ್ಯಾಕುಲದಿನಿಂದಿನಿರುಳೆಂ ।
ದಾಕಾಂತೆಯಮಾತ್ಯವಚನಮಂ ಮನ್ನಿಸಿದಳ್ ॥ ೩೫

ಅಂತು ಮನ್ನಿಸಿ ನೀಂ ಪೇೞ್ದುದಂ ಮಾಳ್ಪೆನೆಂದವರನತ್ತಲ್ ಕಳುಪಿದಳ್. ಇತ್ತಲ್

ಮಡುಗಟ್ಟಿ ಸುರಿವ ನೆತ್ತರ ।
ಕಡಲೊಳ್ ತೇಂಕಾಡುತಿರ್ಪ ರಥದೊಳ್ ಗಾಯಂ ॥
ಬಡೆದನಸು ಬೞಲುತಿರ್ದಂ ।
ಪಡುನೇಸಱ ತೆಱದೆ ರಾಜಹಂಸನರೇಂದ್ರಂ ॥ ೩೬

ಅಂತಿರ್ದರಸನ ವರೂಥನುಂ ತುರಗಂಗಳ್ ತರುಗಳಂ ದುರಂತರಮಪ್ಪರ
ಣ್ಯಮಾರ್ಗದೊಳ್ ತಮ್ಮಿಚ್ಛೆಯಿಂ ಕೊಂಡೋಡಿ ಪೋಗೆ ಮುಂದೆ

ಭೂಮಿಗೆ ಶರಸಿಧಿ [1]ಸೆಗಂ[1] ।
ಬಾನ್ನಾತಂತಿರ್ಕೆ ಪೆರ್ಚಿದೀವಟವೃಕ್ಷಂ ॥
ಸೀಮಾಸ್ಥಾನಮಿದೆನಲಟ ।
ವೀಮಧ್ಯದೊಳಿರ್ದುದಭ್ರಮಂ ಚುಂಬಿಸುತುಂ ॥ ೩೭

ರವಿರಥನುಪರಾಚಲಮಂ ।
ದಿನಸಾಂತ್ಯದೊಳೋಡಿ ಸಾರ್ದಪ್ಪೋಲ್ ವಟಕುಜದೊ ॥
ಪ್ಪವ ಬೀಡಿಲೊಗ್ಗಿನೊಳ್ ನೃಪ ।
ನ ವರೂಥಂ ಸಿಲ್ಕಿ ಪೋಗದಿರ್ದತ್ತಾಗಳ್ ॥ ೩೮

ಅಂತು ಸಿಲ್ಕಿದ ಸಮಯದೊಳ್

ಕಡೆವಗಲೊಳ್ ನಿಜಾಂಗಮತಿರಕ್ತದೊಳೊಪ್ಪಿರೆ ಬಳ್ಪುಗೆಟ್ಟು ತೇರ್ ।
ಪೊಡೆಗೆಡೆಯಲ್ ತುರಂಗತತಿ ಮುಗ್ಗೆ ಸರೋಜಮುಖಂ ನಿರೋಧಮಂ ॥
ಪಡೆದಿರೆ ಮಂಡಲಾಗ್ರಕರಮುಗ್ರತೆ ಕುಂದಿರೆ ರಾಜಹಂಸನಂ ।
ಗೆಡೆಗೊಳಲಾರ್ಪನೆಂಬ ಬಗೆಯಿಂದಿನನೆಯ್ದಿದನಸ್ತಶೈಲಮಂ ॥ ೩೯

ಅಂತಿನನಸ್ತಮಾಗಲೊಡಂ

ಏಕಲೆ ದೇವ ನಿನ್ನೊಳಿಡಗಣ್ ಬಲಗಣ್ ಸರಿಯೆನ್ನದಿಂತು ದೋ ।
ಷಾಕರನಂ ಸಮಂತು ತಱಗೇಯಿಸಿ ಕೊಂಡು ಮದೀಯಕಾಂತನಂ ॥
ಪ್ರಾಕೃತನಂತಿರಸ್ತಗಿರಿಗೆಯ್ದಿಪೆಯೆಂದಭವಂಗೆ ವಾಸರ ।
ಶ್ರೀ ಕರಕಂಜಮಂ ಮುಗಿವವೋಲ್ ಮುಗಿದಿರ್ದುವು ಪದ್ಮಸಂಕುಳಂ ॥ ೪೦

ಕುಜಮೆಲ್ಲಂ ಬಗೆಯಲ್ ತಮಾಲಮಗಮೆಲ್ಲಂ ನೀಲಶೈಲಂ ನದೀ ।
ವ್ರಜಮೆಲ್ಲಂ ಯಮುನಾಜಲಂ ಕಮಲಮೆಲ್ಲಂ ಕೋಮಲೇಂದೀವರಂ ॥
ಪ್ರಜೆಯೆಲ್ಲರ್ ಪುರುಷೋತ್ತಮರ್ ದೆಸೆಗಳೆಲ್ಲಂ ಕೃಷ್ಣವರ್ತ್ಮಾಶೆಯೆಂ ।
ದು ಜಗಂ ಬಣ್ಣಿಸಲುರ್ವಿ ಮುರ್ಮಿ ಪವೆಪಿಂ ಪರ್ವಿತ್ತು ಸರ್ವೋರ್ವಿಯಂ

1. ಸವಿಯುಂ. ಕ, ಗ.

ಬಗಿದು ಪುಗಲರಿದು ನೋಡ |
ಲ್ಬಗೆಯಲ್ ಕಣ್ ಸಲ್ಲದೊಯ್ಯನಡಿಯಿಡೆ ಚಿತ್ತ ||
ಕ್ಕೊಗೆಗುಮತಿಭೀತಿಯೆನಲು |
ಮಿಗೆ ದಟ್ಟೈಸಿರ್ದುದಂಧಕಾರಾಕಾರಂ || ೪೨

ಭುವನಕ್ಕೆ ಲೋಚನೇಂದ್ರಿಯ |
ವಿವಿಧವ್ಯಾಪಾರಮಿನ್ನದೇಕೆನಲಾಕಾ ||
ಶವನವನಿಯುಮೆಣ್ದೆಸೆಯುಂ |
ಕವಿದೆಸೆದತ್ತಂಧಕಾರಮುದ್ಧತಘೋರಂ || ೪೩

ನೋಡುವೊಡಂಜನಗಿರಿಯೀ |
ಸಾಡುವೊಡದು ಲವಣವಾರ್ಧಿ ಸಕಲಜನಂ ಕೊಂ ||
ಡಾಡುವೊಡೆ ರವಿಶಶಾಂಕರ |
ನೋಡಿಸಿ ಪೆಸರ್ವಡೆದ ತಿಮಿರಮೇನೊಪ್ಪಿದುದೋ || ೪೪

ಸೋಂಕಿಂ ಸ್ಥಾವರಮುಂ ಪೂ |
ತಂ ಕೇಳ್ವುದಱಿಂದೆ ಜಂಗಮಂಗಳನಱಿವರ ||
ತಾಂ ಕಾಣ್ಕೆಗರಿದೆನಲ್ ಬಗೆ |
ಗೇಂ ಕಡುಮಂದೈಸಿ ನಿಂದುದೋ ಘನತಿಮಿರಂ || ೪೫

ಅಂತು ದುಸ್ತರಮಪ್ಪ ಕತ್ತಲೆ ಪರ್ಬಿರಲಿತ್ತಲ್ ವಸುಮತೀದೇವಿ ಮರಣಾರ್ಥಮರಮನೆಯಂ ಪೊಱಮಟ್ಟು

ವನದೇವತೆ ವನದೊಪ್ಪಮ |
ನನುನಯದಿಂ ನೋೞ್ಪೆನೆಂದು ಬಂದಳೊ ಪೇೞಿಂ ||
ದನೆ ರಾತ್ರಿಯೊಳೊರ್ಬಳೆ ಕಾಂ |
ತನ ಸಹಗಮನಕ್ಕೆ ತಾವನಱಸುತೆ ಬಂದಳ್ || ೪೬

ಅಂತಱಸುತ್ತುಂ ಗಹನಗಹ್ವರದೊಳ್ ವಿಹ್ವಲೆಯಾಗಿ ಬರುತ್ತುಂ

ದೆಸೆಯೆಂಟಂ ಪಿಟ್ಗಿಸುತ್ತಗ್ಗಳಮೆನೆ ಪರೆದಿರ್ಪಳ್ಳಿಗೊಂಬೇೞ್ಗೆಯಿಂದಾ |
ಗಸಮಂ ಪೊತ್ತಿರ್ಪ ಮೇೞ್ಗೊಂಬಿನಶಶಿಕಿರಣಂ ಬಾರಿಸಲ್ ಬಾರದೆಂಬಂ ||
ತೆಸೆವ ಚ್ಛಾಯಾವಿಲಾಸಂ ತುಱುಗಿದ ತನಿವಣ್ ಸೈತು ಪಾತಾಳಮಂ ಭೇ |

ದಿಸೆ ಕಾಲೂಱಿಸ ಜೇೞ್ಗೆಱೆ ನಟಿಸುವ ವಟಭೂಜಾತನುಂ ಕಾಂತೆ ಸಾರ್ದೞ್ ‖ ೪೬

ಅಂತು ಸಾರ್ದಿದೆನ್ನ ಬಗೆಗೆ ತಕ್ಕ ಠಾವೆಂದು ವಟವಿಟಪಿಯ ಕೆಲದ ಕಿಱುಗೊಂಬಿನೊಳ್ ಸೆಱಗಂ ಕಟ್ಟಿಯುಱುಲಿಕ್ಕಿಕೊಳಲುಜ್ಜುಗಿಸುತ್ತುಮಿರಲಿತ್ತಲರಸಂ

ತಂಗಾಳಿ ಬೀಸಲಾಕ್ಷಣ ।
ಮುಂಗದೊಳಸು ಪಸರಿಸಲ್ಕೆ ನೃಪನೆೞ್ಚತ್ತಾ ‖
ವಂಗೆ ಪ್ರಗಲರಿವೆನಿಪ್ಪ ವ ।
ನಾಂಗಣದತ್ತೇಕೆ ಬಂದೆನೆಂಬವಸರದೊಳ್ ‖ ೪೭

ಆಂ ತನುವಂ ನಿವೇದಿಪೆನಿಲೇ ವನದೇವತೆಯನ್ನ ಜನ್ಮಜ ।
ನ್ಮಾಂತರದಲ್ಲಿ ಕೂರ್ತನಗೆ ನಚ್ಚಿನ ಮೆಚ್ಚಿನ ಮಾಗಧೇಶ್ವರಂ ‖
ಕಾಂತನೆಅಪ್ಪನಕ್ಕನುತೆ ಗೋೞ್ಣುಱುಲಿಕ್ಕಿ ಕೊಳುತ್ತುಮಿರ್ಪ ತ ।
ತ್ಕಾಂತೆಯ ಮಾತುಗೇಳಲಿನಿಸಾದುದು ಭೂಪತಿಗಾವನಾಂತದೊಳ್ ‖ ೪೮

ಅದಂ ಕೇಳ್ದು

ಈರಾತ್ರಿಯೊಳಂಜದೆ ಕಾಂ ।
ತಾರಕ್ಕೆಯ್ತಂದಳಾವಳೆಂಬರಸನ ಗಂ ‖
ಭೀರರವವನುಸ್ಕೆ ವಸುಮತಿ ।
ನಾರಿಯುದಂ ಕೇಳ್ದು ನೋಡಿದಳ್ ನಾಲ್ದೆಸೆಯುಂ ‖ ೪೯

ಅಂತು ಪೂರ್ವಪರಿಚಯಮಪ್ಪ ಗಂಭೀರಧ್ವನಿಯುಂ ವಸುಮತಿ ಕೇಳ್ದಾದೆಸೆಯುಂ ನೋಡಿ

ಈರವಮೆನ್ನರಸನ ಗಂ ।
ಭೀರಧ್ವನಿಯಂತೆ ತೋರ್ಪುದಲ್ಲದೊಡೇಂ ಘೋ ‖
ರಾರಣ್ಯದೊಳಗೆ[1]... ।
...[1]ಧ್ವನಿಯಾದೊಡಂ ಪರೀಕ್ಷಿಪೆನೆಂದಳ್ ‖ ೫೦

---

1. ದಿಪ್ಪ ಶರೀರೊರುಧ್ವನಿ. ಕ ; ಯಾನೆಸೆದಿರ್ಪಾರಧ್ವನಿ. ಗ.

ಪತೆಱದಿಂದೀತ್ರಾಣದೊ |
ಳೀತನುವಂ ಬಿಡುವೆನಂಜಲೇಕೆನಗಂತಾ ||
[1]ಭೂತ'ಪ್ರೇತಂಗಳೆನು |
ತ್ತಾತರುಣಿ ತದೀಯುರವಡ ದೆಸೆಗೈತಂದಳ್ || ೫೧

ಅಂತು ಬಂದು ನೋೞ್ಪನಂ

ನೀರ್ಗೆಳಸಿ ತೇಂಕುವಶ್ವಂ |
ಬೇರ್ಗಳ್ ಪರಿದಿರ್ಪ ಬೀೞಲೊಳ್ ಸಿಲ್ಕಿದ ಬ ||
ಲ್ದೇರ್ಗಱೆಯ ಘಾತಿಯಿಂ ನಸು |
ನುರ್ಗಿದ ತನುವೆಸೆನ ನೃಪನನವಳೀಕ್ಷಿಸಿದಳ್ || ೫೨

ಅಂತು ಮುಗುಳ್ದು ಮೂರ್ಛೆಯನೆಯ್ದಿದ ನೃಪನ ವರೂಥಮನಾಕೆಯೆಯ್ದಲೊಡಂ,

ತಲೆದೋಱಿ* ಪುಳಕಮಲರ್ಗ |
ಣ್ಗಳೊಳಾನಂದಾಶ್ರು ಪೊಣ್ಮೆ ದಟ್ಟೈಸಿದ ಕ ||
ಟ್ಟಲೆಯಾದೊಡಮೇಂ ಚಿತ್ರಮೇ |
ಜ್ಜ್ವಳವೋಹರಸಾತಿರೇಕಮಱಿಪಿತ್ತಾಗಳ್ || ೫೩

ಅಂತು ಶಂಕಿಸುವುದುಂಟಾದೊಡಂ ಸಾತ್ವಿಕಭಾವಂ ಶಂಕಿಸದೆ ಮುಂದೆವರಿದು ಪತಿಯೆಂಬುದನಱಿಪುತ್ತಿರೆ ಬಂದು ಕೋಮಳಕರದಿಂ ಭೂಮೀಶನ ಸಕಲಾವಯವಂಗಳನಂಟಿ ನೋಡಿ,

ಎನ್ನಂತೆ ಧನ್ಯಳಾವವ |
ಳೆನ್ನಧಿಪತಿ ತಪ್ಪದೆನ್ನ ನೋಂಪಿಯ ಫಲಮೋ ||
ಸನ್ನಿದಮಾಯ್ತೆನುತಂಗನೆ |
ತನ್ನರಸನನೊಲ್ದು ಕಂಡು ಹರ್ಷಮನಾಂತಳ್ || ೫೪

ಅಂತು ಹರ್ಷವಾರ್ಧಿಯೊಳ್ ಮುೞುಂಗಿ ಇಲ್ಲಿರ್ದೊಡೇನಿರ್ಪುದು, ಅರಸನಂ ನಮ್ಮಪುರಕ್ಕೆ ಕೊಂಡು ಪೋಪಂತೆ ಮಾಡಲ್ವೇೞ್ಪುದೆಂದು

1. ಯಾತ. ಕ.

ಅಡಿಗೆಱಮೆರ್ ಬೆಚ್ಚುರ್ತುಂ ಕ ।
ಣ್ಗುಡಿಮೆಳಗಿಂ ಮಬರ್ನೋಡಿಸುತ್ತುಂ ಮನದೊಳ್ ॥
ಗುಡಿಗಟ್ಟುತ್ತಿರುಳೊರ್ಬಳ್ ।
ನಡೆತಂದಳ್ ಕಾಂತೆ ರತ್ನಶೈಲಕ್ಕಾಗಳ್ ॥ ೫೫

ಶೋಕಾವೇಶಂ ಹರ್ಷೋ ।
ದ್ರೇಕಂ ಭಯರಸಮನೊತ್ತಲಪ್ಪುದಱಿಂ ಮ ॥
ತ್ತಾಕಾನನಮಂ ಕಳಿದವ ।
ಳೇಕಾಕಿನಿಯಾಗಿ ರತ್ನಗಿರಿಗೆಯ್ತಂದಳ್ ॥ ೫೬

ಅಂತು ಬಂದು ರತ್ನಗಿರಿಯಂ ಪೊಕ್ಕೆಲ್ಲರಂ ಕರೆಯಿಸಿ

ಇಂದುಕಳೆಯಾಂತರಣ್ಯದೊ ।
ಳೊಂದಾಲದ ಮರದ ಬೀೞಲೊಗ್ಗಿನೊಳರಸಂ ॥
ಸ್ಯಂದನಯುತನಲ್ಲಿರ್ದಪ ।
ನೆಂದೆಲ್ಲರ್ಗುಸಿರ್ವಳಬಲೆ ಸಂಭ್ರಮದಿಂದಂ ॥ ೫೭

ಅಂತುಸಿರ್ವುದುಂ ಸಚಿವರ್ ಸಂತಸಂಬಟ್ಟು ಪುರಜನಪರಿಜನಂ ಬೆರಸು,

ಜ್ಯೋತಿರ್ಮಯಮಾಯ್ತೆನಲವ ।
ನೀತಳಮೆಂಬಂತೆ ಮೆಱೆಯೆ ಕರದೀಪಮಸಂ ॥
ಖ್ಯಾತಂ ಜನವ್ರೈತಂದ ।
ತ್ತಾತರುವಿನೊಳಿರ್ದ ನೃಪನನಿದಿರ್ಗೊಳಲೊಲವಿಂ ॥ ೫೮

ಅಂತು ಪೊಱಮಟ್ಟು

ಶ್ರುತಿನಿಕರದಂತೆ ಶಾಖಾ ।
ನ್ವಿತದಿಂ ಸೇನಾಗ್ರದಂತೆ ನಾನಾಪತ್ರೋ ॥
ನ್ನತಿಯಿಂ ನರರಂತೆ ವಯ ।
ಸ್ಸ್ನಿಗ್ಧತಿಯಿಂ ಮೆಱೆದಿರ್ಪ ವಟಕುಜಕ್ಕೆಯ್ತಂದರ್ ॥ ೫೯

ಬಿಂಜದಡವಿಯೊಳಳಾರ್ತಿ |
ಸಂಜೆಮುಗಿಲ್ದುಱುಗಲಂತೆ ರುಧಿರಾರುಣದಿಂ ॥
ರಂಜಿಸುತಿರ್ಪನನೆಯ್ದಿ |
ತ್ತಂಜಲಿಹಸ್ತಂಗಳಿಂದಮಭಿಜನಮನಿತುಂ ॥ ೬೦

ಅಂತು ಸಚಿವರ್ ಬೆರಸು ಸರ್ವಜನಂ ಬಂದು,

ಗದ್ಗದಕಂಠಂ ನವರೋ |
ಮೋದ್ಗಮತನು ಬಾಷ್ಪಲುಳಿತಲೋಚನನನಿತಂ ॥
ತರ್ಗತಚಿಂತಂ ರಂಜಿಸೆ |
ಸದ್ಗುಣಿಯೆನಿಪರಸನಂ ನಮಸ್ಕರಿಸಿದರ್ ॥ ೬೧

ಅಂತು ನಮಸ್ಕರಿಸಿ ರಾಜಹಂಸರಾಜನಂ ಪರಿವೇಷ್ಟಿಸಿದ ತರಳತಾರಾನಿಕಾಯದಂತೆ ಪುರಜನಂ ಪರಿಜನಂ ಬಂದಾಲದ ಬೀೞಲೊಳ್ ಸಿಕ್ಕಿದ ಗಾಲಿಯಂ ತೆಗೆದರಸನಂ ರತ್ನಾಚಲಕ್ಕೆ ಕೊಂಡು ಬಂದು ಸಕಲೌಷಧಿಗಳಿಂ ಶಸ್ತ್ರವ್ರಣಮಂ ಮಾಣಿಸಲ್ ಬೞಿಕಂ

ಅಪಜಯದ ಚಿಂತೆ ಚಿತ್ತ |
ಕ್ಕುಪತಾಪಮನೆಸಗೆ ಪೋಗಿ ಗುರುಸನ್ನಿಧಿಯೊಳ್ ॥
ತಪಮಂ ಚರಿಸುವೆನೆಂದಾ |
ನೃಪನೆಯ್ದಿದನೊರ್ಮೆ ವಾಮದೇವರ ಗಿರಿಯಂ ॥ ೬೨

ಅಂತು ರಾಜಹಂಸಂ ತನ್ನ ಕುಲಗುರುವಪ್ಪ ವಾಮದೇವರಿರ್ಪ ಶಾಂತಾಚಲಕ್ಕೆ ಬಂದು ತದಾಶ್ರಮಮಂ ಪೊಕ್ಕು

ನಸುಮುಗಿದಕ್ಷಿ ನಾಸಿಕಟೊಳೊಂದಿರೆ ನಿಶ್ಚಲಚಿತ್ತವೃತ್ತಿ ನೀ |
ಳ್ದಸಿತಜಟಾಳಿ ನುಗಿರ್ದ ಬಹಿರ್ವಿಷಯಸ್ಥಿತಿ ನೂತ್ನಮೂರ್ತಿ ನೇ ॥
ಪೆರ್ಸೆದಿರೆ ನೈಷ್ಠಿಕವ್ರತಮನೋವಿ ಜನೌಘದ ಕಣ್ಗನಂಗತಾ |
ಪಸನಪ್ರೊಲಿದರ್ ತನ್ಮುನಿಗೆ ವಂದಿಸಿದಂ ಮಗಧಕ್ಷಿತೀಶ್ವರಂ ॥ ೬೩

ಅಂತು ವಂದಿಸಿ ಕೈಗಳಂ ಮುಗಿದು ನಿಂದಿರ್ಪುದುಂ ವಾಮದೇವರ್ ಕಾರುಣ್ಯಕಟಾಕ್ಷದಿಂ ನಿರೀಕ್ಷಿಸಿ ಪರಸಿಯರಸಂ ಬಂದ ಕಾರ್ಯಮೇನೆಂದು ಬೆಸ

ಗೊಳ್ವುದುಮಾತಂ ತನಗಾದಪಜಯವೃತ್ತಾಂತಮಂ ಪೇಳ್ದು ತಪಕ್ಕುಪದೇಶಂಗುಡಿಮೆಂಬುದುಮಾಮುನಿ ತನ್ನೊಳಿಂತೆಂದಂ:—

ಪೂಜಾಭಂಗಂ ತಪಸಿಗೆ ।
ತೇಜೋಭಂಗಂ ಬುಧರ್ಗೆ ಸಂಗರಭಂಗಂ ॥
ರಾಜರ್ಗೆ ಮರಣದಿಂ ಮಿಗಿ ।
ಲೀಜನ್ಮದೊಳೆಂದು ಮುನಿ ಮಗುಳ್ದಿಂತೆಂದಂ:— ॥ ೬೪

ಎಲೆಯರಸ ತಪದಿಂ ಕ್ಷಪಿಸಿ ರಿಪುವಂ ಸಾಧಿಸುವುಪದೇಶಮುಪದೇಶದಂ; ಅದಂ ಬಿಟ್ಟು

ಎಲ್ಲಾತಪದಿಂದಧಿಕಂ ।
ಬಲ್ಲರ್ಗೆ ಗೃಹಸ್ಥಮಾರ್ಗಮುದಯಿಂದೆಲೆ ಭೂ ॥
ವಲ್ಲಭ ನಿನ್ನಯ ಪುರದೊಳ್ ।
ಸಲ್ಲೀಲೆಯೊಳಿರ್ಪುದೆಂದು ಮುನಿಪತಿ ಪೇಳ್ದಂ ॥ ೬೫

ಎಂದು ಪೇಳ್ವುದುಂ ದುಮ್ಮಾನಂ ತೀರ್ದೊಡೆನಗೆ ರಿಪುಜಯೋಪಾಯಮಾವುದೆಂದರಸಂ ವಾಮದೇವರಂ ಬೆಸಗೊಳೆ

ಸುಮತಿ ವಸುಮತಿಯ ಗರ್ಭದ ।
ಕುಮಾರಕಂ ಸಕಲವೈರಿಯುಂ ತನ್ನ ಪರಾ ॥
ಕ್ರಮದಿಂದೆ ಗೆಲ್ದು ಮತ್ತಂ ।
ಸಮಸ್ತದೇಶಕ್ಕೆ ಮುಖ್ಯನಪ್ಪನಮೋಘಂ ॥ ೬೬

ಎಂದಾಗಾಮಿಕಾರ್ಯಮಂ ಪೇಳ್ದು ಮುನಿಪಂ ಜನಪನಂ ಬೀಳ್ಕೊಟ್ಟೊಡೆ ಆತಂ ಮುನಿವಾಕ್ಯಂ ತಪ್ಪದೆಂದು ಪ್ರೀತಿಯಿಂ ತನ್ನ ರತ್ನಾಚಲದೊಳಿರ್ದ ಜನಲೋಕಮಂ ಪುಷ್ಪಪುರಕ್ಕೆ ತಂದು ಪ್ರಹಾರವರ್ಮನಂ ಮನ್ನಿಸಿ ನಿಜರಾಜ್ಯಕ್ಕೆ ಕಳುಪಿ ಸುಖಸಂಕಥಾವಿನೋದದಿಂದಿರಲ್, ಇತ್ತ

ಚಾದಗೆ ಕಾರ್ಮುಗಿಲ್ಪನಿಮುನುಜ್ಜ್ವಲವರ್ಣಚಕೋರನೊಲ್ದು ಚಂ ।
ದ್ರೋದಯಮಂ ರಥಾಂಗಮನಿಶಂ ಪಗಲಂ ಪಿಕರಾಜಿ ಚೈತ್ರಮಾ ॥

ಸಾದಿಯುನೆಯ್ದೆ ಪಾರ್ವರ್ ತೆಱದಿಂ ನಿಜಕಾಂತೆ ಸುಖಪ್ರಸೂತೆಯು ।
ಪ್ಪಾದಿನನಂ ಕರಂ ಪಡೆದು ಪಾರ್ದೆಸೆದಂ ನೃಪರೂಪಮನ್ಮಥಂ ॥ † ೬೭

ಅಂತಿರ್ಪುರ್ದುಂ ವಸುಮತಿ ದೇವಿಗೆ ನವಮಾಸಂ ತುಂಬಿ

ಇಂದುವನಾಸುಧಾಂಬುನಿಧಿ ತಣ್ಗದಿರಂ ಶಶಿಲೇಖೆ ಚೈತ್ರನಂ ।
ನಂದನಲಕ್ಷ್ಮಿ ಕಾಮಶರಮಂ ಲತೆ ಪೂರ್ಣಸರಂ ಮರಾಳನಂ ॥
ಮಂದಸಮೀರನಂ ಮಳಯಮೇಖಲೆ ಪೆತ್ತವೊಲಾಕೆ ಪೆತ್ತಳಾ ।
ನಂದನನಂ ಕುಮಾರಹರಿಚಂದನನಂ ಸುಚರಿತ್ರವೃಂದನಂ ॥ ೬೮

ಜನಮಿತ್ರಂ ಪೂರ್ವರಾಜಂ ಭುಜಶಿಖರಲಸತ್ಸಾರ್ವಭೌಮಂ ಜಗನ್ಮೋ
ಹನಸೌಮ್ಯಂ ಲೋಕಜೀವಂ ಕವಿಕುಲವಿಭವಂ ರಾಜಹಂಸಾತ್ಮಜಂ ನ ॥
ಮ್ಮನಿಬಗೀರ್ತಂ ಪ್ರಿಯಂ ಮತ್ತಮನೆನುತೆ ಸಮಸ್ತಗ್ರಹಂ ತತ್ಕುಮಾರಂ।
ಗೆ ನಿತಾಂತಂ ಪ್ರೀತಿಯಂ ಸೈತೆಸಗುವವೆನಲಿನ್ನಾತನಿಂ ಖ್ಯಾತನಾಪ್ಪೊಂ॥೬೯

ಅಂತು ಸಮಸ್ತಗ್ರಹಾನುಗ್ರಹವಿಗ್ರಹಂ ಪುಟ್ಟಿರ್ಪುರ್ದುಂ ಪುರೋಹಿತರ್ ಬಂದು

ಅರಸಾ ನಿನ್ನ ಮನೋರಥ ।
ಮರಿಗಳ ಹೃಚ್ಛಲ್ಯಮಭಿಜನಂಗಳಭೀಷ್ಟಂ ॥
ಗುರುಜನದ ಕಾವ್ಯಫಲಮಂ ।
ಕುರಿಸಂದದಿನುದಯನಾದನಾತ್ಮತನೂಜಂ ॥ ೭೦

---

† ಈಕಡೆ "ಗ" ಪುಸ್ತಕದಲ್ಲಿ ಮಾತ್ರ — ಇದು ಸಿಖಿಲಬುಧಜನಮನೋವಸಜವನ ......ಅಭಿನವದಶಕುಮಾರಚರಿತೆಯೊಳ್ ಮಗಧೇಶ್ವರಮಾಳವರಾಜ ಯುದ್ಧಪ್ರಕರಣಂ ದ್ವಿತೀಯಾಶ್ವಾಸಂ ಸಮಾಪ್ತಂ.

॥ ತೃತೀಯಾಶ್ವಾಸಂ ॥

ಶ್ರೀಧರಣೀಮುಖತಿಲಕಂ ।
ಸೌಭಾಗ್ಯದಕಳಶಮೆನಲ್ ವಸುಮತಿಯುದರದೊ ॥
ಳಾದಯುವಾರಿಧಿಯುರಿನೃಪ ।
ಸೂದನಜಸಿಸಿವನಭಂಗವಿಟ್ಠಲಭೃತ್ಯಂ ॥

ಮೇಲಣ ಕಂದಪದ್ಯವು ಈ ಗ್ರಂಥಕರ್ತನದಲ್ಲವೆಂದು ತೋರಿ ಬರುವುದರಿಂದಲೂ, ಸಂಸ್ಕೃತ ದಶಕುಮಾರಚರಿತೆಯಲ್ಲಿ ಇಲ್ಲಿ ಅಧ್ಯಾಯವಿಭಾಗವಿಲ್ಲದುದರಿಂದಲೂ, ಈಭಾಗವನ್ನು ಕೆಳಗೆ ಕೊಟ್ಟಿದೆ.

ಎಂದು ಪುರೋಹಿತರ್ ಪೇೞ್ವುದುಂ

ಗುಡಿಯಂ ಕಟ್ಟಿರೊ ಭೇರಿಯಂ ಪೊಯಿಸಿರೊ ಕಾರಾಗೃಹಾಂತಸ್ಥರಂ ।
ಬಿಡಿರೋ[1] [ಮೋಕ್ಷಗಣಕಾಳಿಯಂ] ಕರೆಯಿರೋ ಬೇೞ್ಪರ್ಗೆ ಬೇೞ್ಪಿಷ್ಟಮಂ ॥
ಕುಡಿರೋ ಕುಂಕುಮಗಂಧದೋಕುಳಿಗಳಂ ಪೊಯ್ವುಯ್ಯನುತ್ತುತ್ಸವಂ ।
ಬಡೆಯುತ್ತಾಕ್ಷಣಮೆಯ್ದಿದಂ ನೃಪವರಂ ತತ್ಸೂತಿಕಾಗೇಹಮಂ ॥ ೩೦

ಬಾಗಿಲೊಳೆಲ್ಲರಂ ನಿಲಿಸಿ ಬಂದು ನಿಜಾನ್ವಯರತ್ನನಂ ಮಹಾ ।
ಭಾಗನನಾತ್ಮಸಂಭವನನೊಪ್ಪಿರೆ ಕಂಡನುರಾಗದಿಂ ಸುಧಾ ॥
ಸಾಗರದೊಳ್ ಮುೞುಂಗಿ ಪೊಸತೆಂದು ವಿಳಾಸಿನಿಯರ ಪಸಾಯಮಂ ।
ಬೇಗದೊಳೀವುದ್ದ ಕೊಳ್ವುಡವರ್ಗೆನಗುತೊಪ್ಪಿದನೋ ನೃಪಾಲಕಂ ॥ ೩೧

ಅಂತು ಸಂತೋಷಂ ಮುಖದೊಳ್ ತುಳುಂಕಲರಸಂ ತತ್ಕಾಲೋಚಿತ ಕರ್ಮಮಂ ಕೂರ್ಮೆಯಿನೆಸಗಿ ಸಕಲದಾನದಿಂ ಸರ್ವರಂ ಸನ್ಮಾನಂಗೆಯ್ದು ದ್ವಾದಶದಿನದೊಳ್ ರಾಜವಾಹನನೆಂದು ನಾಮಕರಣಮಂ ಮಾಡಲ್ ಬೞಿಯಂ

ಎಳವೆಱೆ ದಿವಸಕ್ರಮದಿಂ ।
ಬಳೆವಂತಿರೆ ಮಾತೃಪಿತರ ಹೃದಯಾಂತರದೊಳ್ ॥
ಬಳೆಯುತ್ತಿರೆ ಸಂತೋಷಂ ।
ಬಳೆಯುತ್ತಿರ್ದಂ ನೃಪಾತ್ಮಜಂ ಚೆಲ್ವೆಸೆಯಲ್ ॥ ೩೨

ಬೆಂಡೋಲೆ ಮುಕುಹು ಮಾಗಾಯ್ ।
ಪೆಂಡೆಯುಮರಳೆಲೆಯೆಱಲ್ವ ಕಿಱುಪುಲಿಯುಗುರ್ಗಳ್ ॥
ಗೊಂಡೆಯದುಡಿದಾರಂ ಭೂ ।
ಮಂಡಲಪತಿಯಾತ್ಮಜಂಗೆ ರಂಜಿಸುತಿರ್ಕುಂ ॥ ೩೩

॥ ಉತ್ಸಾಹವೃತ್ತ ॥

ಚೆಂದದಿಂದೆ ಚಿನ್ನ ಪೊನ್ನ ಗೆಜ್ಜೆಗಟ್ಟಿ ರಂಜಿಪೊಂ ।
ದೊಂದು ಕಾಲನಾಡಿಸೈ ಕುಮಾರ ಎಂದು ಕಾಂತೆಯರ್ ॥

---

1. ಮುಹೂರ್ತಿಕರ್. ಕ, ಗ.

ಮುಂದೆ ನಿಂದು ತಪ್ಪಳಿಕ್ಕಿಯಾಡಿಸಲ್ ವಿಲಾಸದಿಂ ।
ಮಂದಹಾಸಮಣ್ಮಿ ಪೊಣ್ಮಲಾಡಿದಂ ಕುಮಾರಕಂ ॥ ೭೪

ಅಂತೊಪ್ಪುವ ಕುಮಾರನ ಬಾಲಲೀಲೆಯಿಂದರಸಂ ಸುಖಂಬಡೆಯುತಿರ್ಪುದುಂ

ಪತಿಹಿತವರೆನಿಪ ಸಚಿವರ ।
ಸತಿಯರ್ ನಾಲ್ವರ್ ಮಹೋತ್ಸವಂ ಮಿಗೆ ದೈವ ॥
ಸ್ಥಿತಿಯಿಂ ಪುತ್ರರನೆರಡೆರ ।
ಡು ತಿಂಗಳಿಂ ಹಿಂಚೆ ಪಡೆದರನುನಯಮೊಸೆಯಲ್ ॥ ೭೫

ಅಂತು ನಾಲ್ವರ್ ಸಚಿವರ್ ತಂತಮ್ಮ ಪುತ್ರರ್ಗೆ ಜಾತಕರ್ಮಮುಮಂ ಮಾಡಿ ದ್ವಾದಶದಿನದೊಳ್ ಪ್ರಮತಿ, ಮಿತ್ರಗುಪ್ತ, ಮಂತ್ರಗುಪ್ತ, ವಿಶ್ರುತನೆಂದು ನಾಮಕರಣಮುಮಂ ಮಾಡಿ,

ಹಿಂದಣಪರಾಧಮದು ತ ।
ಮ್ಮಿಂದಂ ಪರಿಹರಿಸಲೆಂದು ಮಗಧೇಶಂಗಾ ॥
ನಂದದಿನಿತ್ತರ್ ತಮ್ಮಯ ।
ನಂದನರಂ ನಾಲ್ವರಂ ಮನಂ ಮಿಗೆ ಸಚಿವರ್ ॥ ೭೬

ಅಂತಿತ್ತು ಕುಮಾರರ್ವೆರಸು ಕುಸುಮಾಸ್ತ್ರಂ ಕುಸುಮಬಾಣಂಗಳಂ ಪೊರೆವಂತೆ ಪೊರೆಯುತಿರ್ದು

ಧನಿಕಂ ಸೌಜನ್ಯಮುಮಂ ಯೌವನಸುಭಗಲಸನ್ಮೂರ್ತಿ ಸದ್ವಿದ್ಯೆಯುಮಂ ಭೋ
ಗಿ ನಿತಾಂತಾರೋಗ್ಯಮುಮಂ ಭೂತಳಪತಿ ವಿವಿಧೌದಾರ್ಯಮುಮಂ ತ್ಯಾಗಿ ಸತ್ಪಾ ॥
ತ್ರನಿಧಾನಪ್ರಾಪ್ತಿಯುಂ ತಾಮೊಸೆವತಿಶಯದಿಂ ಪೆತ್ತವೋಲ್ ಪೆತ್ತನಾನಂ ।
ದಸಮೋಲ್ಲಾಸದಿಂ ನಂದನರನಧಿಕರಂ ರಾಜಹಂಸಕ್ಷಿತೀಶಂ ॥ ೭೭

ಅಂತಾನಂದಸಂದೋಹಂ ಸಂಪೂರ್ಣಮಾಗಿರ್ಪನಮಿತ್ತಲ್ ವಾಮದೇವರ ಶಿಷ್ಯಂ ವಿದ್ಯಾನಿಧಿಯೆಂಬನೊಂದು ದಿವಸಂ,

ನಿರ್ಭೇದ್ಯಚಿತ್ತನಿಂದ್ರಹ ।
ವಿಭಾಗಪ್ರದನಮೋಘವಾಙ್ಮನಿಶಿಷ್ಯಂ ॥

ದಭ್ರೇಂಧನಕ್ಕೆ ಪೋಗು ।
ತ್ತರ್ಭಕನಂ ತಳೆದ ವೃದ್ಧಸತಿಯಂ ಕಂಡಂ ॥ ೭೮

ಎಲೆ ವೃದ್ಧೆ ಘೋರಕಾನನ ।
ದೊಳೊರ್ಬಳೆಂ ತೊೞಲುತಿರ್ಪೆ ನೀನಾರ್ಗೆ ಕರ ॥
ಸ್ಥಳದ ಶಿಶುವಾವನೆಂದೊಡೆ ।
ತಳವೆಳಗಾಗುತ್ತೆ ಪೇೞಲುದ್ಯತೆಯಾದಳ್ ॥ ೭೯

ಅದೆಂತೆಂದೊಡೆ—

ರಿಪುರಾಜವ್ರಾತನಾನಾಮಣಿಮಕುಟರುಚಿಭ್ರಾಜಿತಾಂಘ್ರಿದ್ವಯಂ ದಿ ।
ಗ್ವಿವ್ಯಾಪಸತ್ಸಂ ಮೇರುಶೈಲೋಪಮಭುಜಶಿಖರಂ ಗೋತ್ರಭೃತ್ಸಾಮ್ಯಕಲ್ಯಾ
ಣಪರಂ ಸರ್ವಾವನೀಮಂಡಲಪತಿ ಸಮರಾರಂಭಕಾಮಾರಿ ಸತ್ಪು ।
ಷ್ಪಪುರೇಶಂ ರಾಜಹಂಸಂ ಮಗಧವಿಷಯಕಾಂತಾಮನೋಜೇವಿಶೇಶಂ ॥

ಆತಂಗೆಸೆವಂ ಸಚಿವಂ ।
ನೀತಿವಿದಂ ದೀರ್ಘದರ್ಶಿ ರತ್ನೋದ್ಭವನೆಂ ॥
ಖ್ಯಾತಂ ವ್ಯವಹಾರಪರ ।
ಪ್ರೀತಿಯಿನಂಭೋಧಿಪರಿಸರಕ್ಕೈತಂದಂ ॥ ೮೧

ಅಂತು ಸಮುದ್ರಮಧ್ಯದ ಸುವರ್ಣದ್ವೀಪಮನೆಯ್ದಿ ರತ್ನದತ್ತನೆಂಬ ವ್ಯವಹಾರಿಯ ಸಖ್ಯಂಮಾಡಿರ್ಪುದುಮಾತಂ ರತ್ನೋದ್ಭವನ ಸೌಜನ್ಯಸನ್ಮಾರ್ಗಕ್ಕೆ ಸಂತಸಂಬಟ್ಟು ತನ್ನ ಮಗಳ್ ಹೇಮಪ್ರಭೆಯಂ ಕರೆಸಿ,

ಶುಭದಿನಮುಹೂರ್ತದೊಳ್ ನಿಜ ।
ವಿಭವಂ ಕೈಗಣ್ಮೆ ಸಚಿವರತ್ನೋದ್ಭವನೆಂ ॥
ಬಭಿನವಮೂರ್ತಿಗೆ ಹೇಮ ।
ಪ್ರಭೆಯಂ ಗುಣಿ ರತ್ನದತ್ತನಿತ್ತನಲಂಪಿಂ ॥ ೮೨

ಅಂತು ರತ್ನದತ್ತಂ ತನ್ನ ಮಗಳಂ ಕುಡುವುದುಮಾತನಲ್ಲಿ ಕಿಱಿದುದಿನಮಿರ್ಪುದುಂ ಹೇಮಪ್ರಭೆಯಂತರ್ವತ್ನಿಯಾಗೆ ರತ್ನೋದ್ಭವಂ ರತ್ನದತ್ತಂಗಿಂತೆಂದಂ:—

ಕಿರಿದು ದಿನಮಾಯ್ತು ಬಂದೆ ।
ಪುಷ್ಕರಸನ ಸಾರಣ್ಗೆ ಪೋಗವೇೞ್ದುದುಮದಱಿಂ ॥
ಬಿರದೆನ್ನಂ ಕಳಿಪುವುಬೆಂ ।
ದುರುಮುದದಿಂ ಪೇೞ್ದಿನತ್ತ ಮುನಿಕುಲತಿಲಕಾ ॥ ೮೩

ಅಂತು ಪೇೞ್ದುದುಂ ರತ್ನದತ್ತಂ ರತ್ನೋದ್ಭವಂಗೆ ರತ್ನಖಚಿತಾಭರಣ ದಿವ್ಯವಸ್ತ್ರಮಂ ಕೊಟ್ಟು ಹೇಮಪ್ರಭೆಯ ಗರ್ಭದರ್ಭಕಂಗೆನ್ನಂ ದಾದಿಯಾಗಿ ಕಳುಪಲಿಂತು ಮೂವರುಂ ಬಂದು ವಹಿತ್ರಮನೇಱಿ ಬರುತಿರ್ಪನ್ನೆಗಂ ಸಮುದ್ರಮಧ್ಯದಲ್ಲಿ

ಪಡಗೊಡೆಯೆ ಪಲಗೆಯೊಂದಂ ।
ಪಿಡಿದಬಲೆಯುಮೆನ್ನ ಕಾಂಕ್ಷೆಯೊಳ್ ತಳ್ಕಿಸಿ ಕೊಂ ॥
ಡೆಱೆವಿಡದೆ ಪುಣ್ಯದಿಂದಂ ।
ತಡಿಗೆಯ್ದಿದೆನೆಯ್ದೆ ಕಾಳ್ಕರಿಪಾರ್ಕ್ಷಣದೊಳ್ ॥ ೮೪

ಆಹೇಮಪ್ರಭೆ ಗರ್ಭಘಾತದಿಂ ಪ್ರಸವವೇದನೆ ಮಸಂಗಿ ಮಗನಂ ಪಡೆಯಲಾಕೆಯುಮೊಂದು ತಮಾಲಗುಲ್ಮದೊಳಿರಿಸಿಯಾಕಾಸಿನ ಮೆಯ್ಯಮಾಸಂ ತೊಳೆಯೆ ಬಿಸುನೀರ್ಗೆಪೋಯುಮಂ ನೆನೆಯಲಿಲ್ಲಿಗೆ ಬಂದೆನೆಂದಾವೃದ್ಧೆ ಪೇೞ್ವ ಸಮಯದೊಳ್

ಕಟತಟದೊಳೊಸರ್ವ* ಮದದಿಂ ।
ವಿಟಪಿಗಳಂ ಕಿತ್ತು ಬಿಸುಡುತುಂ ತನ್ಮದದು ॥
ತ್ಕಟದಿಂದೊಂದಿಭಮುತ್ತರ ।
ಲಟವಿಯೊಳಾತಿಶುವನುಱಿದು ಪೋದಳ್ ಭಯದಿಂ ॥ ೮೫

ಅಂತಾವೃದ್ಧೆ ಹೇಮಪ್ರಭೆಯಿರ್ದಲ್ಲಿಗೆ ಪೋಗಿಯಲ್ಲಿಂದಾಕೆಸಹಿತಂ ಬೆದಱುತೋಡಿ ಪೋದಳ್. ಇತ್ತಲಾನೆ ಅರ್ಭಕನಂ ಪಿಡಿದಡಸುವೆನೆಂದನುಮಾನಿಸುವಾಗಳ್,

ವಾರಣಮನೊಂದು ರಿಪುಕಂ ।
ಠೀರವನಾರ್ದೆಱ್ದು ಪೊಯ್ದು ಕುಂಭಸ್ಥಳಮಂ ॥

ಕೂರುಗುರ್ಗ*ಳಿಂದಮುಂಕಿ ವಿ |
ದಾರಿಸಲಾಶಿಶುವನುಜಿದು ಬಿರ್ದಿತ್ತು ಗಜಂ || ೮೬

ಅಂತಾಗಜಂ ಬೀಳುತುಂ ಪಿಡಿದಿರ್ದ ಪೋತಕನಂ ಭೀತಿಯಿಂ ಮೇಗಣ್ಗೆ ಈಡಾಡಲಾಶಿಶುವೊಂದು ಮರನ ಕವಲ್ಗೊಂಬಿನೊಳ್ ಸಿಲ್ಕಲಲ್ಲಿ

ಪುಬಿರ್ಕ್ಕಿ ಪಲ್ಗಳಂ ಕಿಱು |
ದಿಬರ್ದಿಯುಂ ತುಱುಕಿ ಕಣ್ಣನರೆಮುಚ್ಚಿ ಬಿಸಿಲ್ ||
ಪಬರ್ರೆ ಕಾಯುತ್ತಿರ್ದುದು |
ಕೊರ್ಬಿದ ವೃಕ್ಷಾಗ್ರದಲ್ಲಿ ಮರ್ಕಟರಾಜಂ || ೮೭

ಅಂತಾಕೋಡಗಂ ಪಣ್ಣೆಂದೆತ್ತಂತಾಶಿಶುವಂ ತೆಗೆದು ಮಾಸಿಸಿ ನೋಡಿ ಪಣ್ಣಲ್ಲಮುದನಱಿದಲ್ಲಿಯೆ ಇರಿಸಿ ಕಾಪೇಯಗತಿಯಿಂದತ್ತಲ್ ಪೋದುದು. ಇತ್ತಲ್ ಮುನಿಶಿಷ್ಯಂ ನಿಂದಿವೆಲ್ಲಮನಲ್ಲಿಯೆ ಗುಲ್ಮದ ಮಱೆಯೊಳ್ ನೋಡುತಿರ್ದು ಸಿಂಹಂ ಪೋದುದನಱಿತು ಮರದ ಮೇಲಣ ಶಿಶುವಂ ತೆಗೆದು ವಾಮದೇವರ ಸಮೀಪಕ್ಕೆ ತರಲವರಿದೆಲ್ಲಿಯ ಶಿಶುವೆಂಬುದುಂ ತತ್ಪ್ರಪಂಚವಂ ಪೇಳಲಾಮುನಿಯೀಬಾಲಕನಂ ನೀಂ ನಮ್ಮರಸಂಗೆ ಕೊಟ್ಟು ಬಾಯೆಂಬುದುಮಾತಂ ಪೂರ್ವವಿಶೇಷಮಂ ಪೇಳ್ದರಸಂಗೆ ಕುಮಾರನಂ ಕೊಟ್ಟೊಡಾತಂ ಪ್ರೀತಿವಟ್ಟು ಪುಷ್ಪೋದ್ಭವನೆಂದು ಪೆಸರನಿಟ್ಟು ವಸುಮತೀದೇವಿಯ ಕೆಯ್ಯೊಳ್ ಕುಡೆ,

ಭೂದೇವತೆ ಷಡೃತುಗಳ |
ನಾದರದಿಂ ಸಲಿಪುವಂತೆ ವಸುಮತಿ ಚಿತ್ತಾ ||
ಮೋದದಿನಱುವರ್ ಕುವರರ |
ನೋದಿಸುತುಂ ಸಲಹುತಿರ್ದಳತಿಕೌತುಕದಿಂ || ೮೮

ಅಂತಿರ್ದ ವಸುಮತೀದೇವಿಯೊಂದು ದಿವಸಂ,

ಸರಸಿಜಲೋಚನಂ ಶಶಿಮುಖಂ ಹರಿಮಧ್ಯಮಿಭೇಂದ್ರಯಾನಮು |
ದ್ಧುರಕುಚಕೋಕಮಾತ್ತತಿಮಿರದ್ಯುತಿವೇಣಿ ಮದಾಳಿಕುಂತಳಂ ||
ಸುರುಚಿರಚಂಪಕಾಭತನುವೊಂದೆಡೆಯೊಳ್ ನೆಲಸಿರ್ಪುದಿಂತಿದ |
ಚರಿಯೆನಲೆಯ್ದಿದಳ್ ವಸುಮತೀವಧು ಕಾಂತಸಭಾಂತರಾಳಮಂ || ೮೯

ಅದಲ್ಲದೆಯುಂ

ನಳನಳಿಪ ಕಲ್ಪಲತೆ ಸ ।
ತ್ಫಳವುಂ ತಳೆದಿರ್ಪ ತೆಱದಿನೊಪ್ಪುವ ನನಕೋ ॥
ಮಳಬಾಳಕನೊರ್ಬನನತಿ ।
ವಿಳಾಸದಿಂದೆತ್ತಿಕೊಂಡು ನಗುತೆಯ್ತಂದಳ್ ॥ ೯೦

ಅಂತಾಕಾಂತೆ ಬಂದು ಕಾಂತನಂಕಮಲನಂಕರಸಿರ್ಪುದುಮರಸನೀಪ್ಪೊಸ ಕುಮಾರಕನೆತ್ತಣವನೆಂದು ಬೆಸಗೊಳ್ವುದುಂ,

ನಸುನಗೆ ಮಿನುಂಗೆ ಮೊಗದೊಳ್ ।
ಪಸರಿಸೆ ನಿಜದಂತಕಾಂತಿ ನೃಪವರಸಭೆಯೊಳ್ ॥
ವಸುಧಾಧಿಪಂಗೆ ನಲವಿಂ ।
ದುಸಿ*ರ್ದಳ್ ವಸುಮತಿ ಕುಮಾರಲಾಭದ ಹದನಂ ॥ ೯೧

ಅದೆಂತೆನೆ—

ತರಳತರತಾರಹಾರದ ।
ಕಿರಣಂ ಧವಳಿಸೆ ದಿಗಂತಮಂ ಯೌವನನಿ ॥
ಭರದೆಸೆವ ಕಾಂತೆಯೆನಗಿಂ ।
ದಿರುಳೊಲವಿಂ ಕನಸಿನಿಂದೆ ತೋಱಿದಳೊರ್ವಳ್ ॥ ೯೨

ಅದಲ್ಲದೆಯುಂ ಪಾರಿಜಾತಪ್ರಸೂನಾವತಂಸೆಯುಂ, ಪಳಿಕುವೆಸೆದ ಪಾದುಕೆಯುಂ, ನಿಸ್ತುಲಸ್ಥೂಲಮುಕ್ತಾಹಾರೆಯುಂ, ಕುಂಡಲಮಂಡಿತಗಂಡಸ್ಥಳೆಯುಂ, ಚಾರುಚಂದನಚರ್ಚಿತೆಯುಂ, ನವ್ಯದಿವ್ಯಶರೀರೆಯುಮೆನಿಪ ವನಿತೆ ಕನಸಿನೊಳ್ ಬರಲಾನದಂ ನೆನೆಸೆಂದು ಬಗೆದು ನೀನಾವಳಲ್ಲಿಗೇಕಾರಣಂ ಬಂದೆಯೆಂದೊಡೆ—

ದೇವಿಯರೇ ಚಿತ್ತವಿಸಿಂ ।
ಭಾವಿಸೆ ಗಂಧರ್ವಲೋಕಸಂಭವೆಯಾಂ ರ ॥
ತ್ನಾವಳಿಯೆಂಬೆನ್ನ ಪೆಸರ್ ।
ಭಾವಿಸಲಾಂ ಬಂದ ಕಾರ್ಯಮಂ ಬಿನ್ನವಿಪೆಂ ॥ ೯೩

ಎಂದಿಂತೆಂದಳ್ —

ನಿನ್ನಧಿನಾಥನ ಸಚಿವಂ ।
ಸನ್ನುತನುತಿ ಕಾಮಪಾಲನೆಂಬಾತಂ ಕೇ ॥
ಳ್ನಿನ್ನಯ ಕೆಯ್ಯೊಳ್ ಕೊಟ್ಟಂ ।
ಚೆನ್ನೆಸೆವೀಸುತನನೆಂದು ತೋಱಿದಳವನಂ ॥ ೩೪

ಅಂತು ತೋಱಿ ಮತ್ತಮಿಂತೆಂದಳ್ —

ಆಕಾಮಪಾಲನೆಮ್ಮೊಡ ।
ನೀಕುವರನನುಯ್ದು ರಾಜಹಂಸನ ನಿಜಕಾಂ ॥
ತಾಕರದೊಳೀವ್ರದೆಂದಂ ।
ಸಾಕಿದನಂ ದೇವಿ ಕೊಳ್ಳೆನುತ್ತುಂ ಕೊಟ್ಟಳ್ ॥ ೩೫

ಅಂತು ಕುಮಾರನನೆನ್ನ ಮಗ್ಗುಲೊಳಿರಿಸಿ ಪೋದಳ್. ಅನ್ನೆಗಂ

ಆರೊಡನೆ ಮಾತನಾಡಿದೆ ।
ನಾರಿಲ್ಲಿಗೆ ಬಂದರೆಂದು ನಿದ್ರೆಯಿನೆೞ್ದು ॥
ತ್ತಾರಂ ಕಾಣದೆ ಮಗ್ಗುಲೊ ।
ಳೋರಂತೆಸೆದಿರ್ದ ನಿನ್ನ ಸುತನಂ ಕಂಡೆಂ ॥ ೩೬

ಎಂದರಸಂಗರಸಿ ಪೇೞ್ವುದುಮರಸಂ ಸಂತುಷ್ಟನಾಗಿ ಕಾಮಪಾಲನೇ ನಾದನೋ ಎಂದು ಚಿಂತಿಸಿ ಕುಮಾರಂಗರ್ಥಪಾಲನೆಂದು ಪೆಸರಿಟ್ಟು ಸಪ್ತ ಸ್ವರಂಗಳಂ ಪರಿಪಾಲಿಸುವ ಭರತಜ್ಞನಂತೆ ಧರಣೀಶಂ ಪರಿತೋಷದಿಂದಿರಲ್ ಕಿಱಿದು ದಿನದಿಂ ಮೇಲೆ,

ಮತ್ತೊಂದು ದಿನಂ ಮುನಿಶಿ ।
ಷ್ಯೋತ್ತಮನರ್ಚನೆಗೆ ಪತ್ರಪುಷ್ಪಮನುಯ್ಯಲ್ ॥
ಮೊತ್ತದರಣ್ಯಕ್ಕೆಯ್ದುಂ ।
ದೆತ್ತಿಸಿ ಕೊಂಡಿರ್ದದೊಂದು ಶಿಶುವಂ ಕಂಡಂ ॥ ೩೭

ಅಂತೊರ್ವಳೆತ್ತಿ ಕೊಂಡಿರ್ದ ಶಿಶುವಂ ವಾಮದೇವರ ಶಿಷ್ಯಂ ಕಂಡು

ಎಲ್ಲಿಯುಮನೀಕುಮಾರಕ ।
ನೆಲ್ಲಿಯುಮಳ್ ನೀನರಣ್ಯಮಧ್ಯದೊಳಿರ್ಪೆ ॥
ಕೆಲ್ಲಿಗೆ ಪೋಪೆಯೆಂದು ಮ ।
ಹೋಲ್ಲಾಸದೊಳೆನಗೆ ಪೇೞ್ವುದೆಂದನಲಂಪಿಂ ॥ ೯೮

ಅಂತು ಕೇಳ್ವುದುಮವಳಿಂತೆಂದಳ್:—

ಮಗಧಧರಣೀಶ್ವರಂಗಾ ।
ವಗಮಾದಂ ಪ್ರೇಮದತ್ತನೆನಿಸುವ ಸಚಿವಂ ॥
ಜಗಮಱಿಯೆ ತೀರ್ಥಯಾತ್ರೆಯ ।
ಬಗೆಯಿಂದೊಂದಗ್ರಹಾರಮಂ ಸಾರ್ದಿರ್ದಂ ॥ ೯೯

ಅಂತಾಪ್ರೇಮದತ್ತಂ ತೀರ್ಥಯಾತ್ರೆಗೆ ಪೋಗುತ್ತುಂ ಧರ್ಮಪುರಮೆಂಬ ಅಗ್ರಹಾರಮಂ ಸಾರ್ದು ಯಜ್ಞಶರ್ಮನೆಂಬ ದ್ವಿಜೋತ್ತಮನ ಸಖ್ಯಂಮಾಡಿಕೊಳಲಾತಂ ಕೆಲವು ದಿನಸದಿಂ ಮೇಲೆ ತನ್ನ ಮಗಳ್ ಕಾಳಿಯೆಂಬಳಂ ಕುಡಲವಳ್ಗೆ ಪುತ್ರೋತ್ಪತ್ತಿಯಿಲ್ಲದಿರಲವಳಂ ಕಿಱಿಯಳಪ್ಪ ಕಾಳಿಂದಿಯುಂ ಮಗುಳ್ದು ಪ್ರೇಮದತ್ತಂಗೆ ವಿವಾಹಂಮಾಡಲವಳ್ಗೆ ಸುಕೃತಫಲದಿಂ ಸುತನಪ್ಪುದುಂ ಬೞಿಕ್ಕೆ ಪ್ರೇಮದತ್ತಂ ಯಜ್ಞಶರ್ಮನಿಂ ಕಳುಹಿಸಿಕೊಂಡು ಪೂರ್ವಸಂಕಲ್ಪಿತಮಪ್ಪ ತೀರ್ಥಕ್ಕೆ ಕಾಳಿ ಕಾಳಿಂದಿನಿ ತತ್ಕುಮಾರನಾತಂಗೆ ದಾದಿಯಪ್ಪನಾನಿಂತೆಲ್ಲರುಂ ಸರಯೂನದಿಗೆ ಪೋಗಿ ಸ್ನಾನಕ್ಕನುಗೈವ ಸಮಯದೊಳ್,

ತನಗೆ ತನೂಭವರಿಲ್ಲೆಂ ।
ಬನುಶಯದಿಂ ಮಗನನೆತ್ತಿ ಕೊಂಡಿರ್ದನ್ನಂ ॥
ಮುನಿದು ನದಿಯೊಳಗೆ ನೂಂಕಿದ ।
ಳನವರತಂ ಪರರ ಲೇಸನಾಂತಪರೊಳರೇ ॥ ೧೦೦

ಅಂತವಳ್ ಮಗನನೆನ್ನಂ ನದಿಯೊಳ್ ನೂಂಕಲಾನುಮಿವನುಂ ಮಡುವಿನೊಳ್ ಬಿೞ್ದಡಾನೀಶಿಶುವಂ ಬಿಡದಿರ್ಪಅವಸ್ಥೆಯೊಳೊಂದು ಭೀರ್ಪಱಿದು ಬಿದ್ದ ಮತ್ತಿಯ ಮರಂ ತೆಪ್ಪದಂತೆ ಬರ್ಪುದುಂ ಕಂಡದಂ ಪಿಡಿವನ್ನೆಗಂ

ಪೊೞಲೊಳಗಿರ್ದ ದುಷ್ಟ ।
ವ್ಯಾಳಂ ಮುಳಿದೆನ್ನ ಕೈಯನಾಡಲ್ ಮತ್ತೀ ॥
ಬಾಳಕನ ಪುಣ್ಯದಿಂ ತ ।
ತ್ಕ್ಷ್ವೇಳವಮನಾಂ ಸಾರ್ದೆನಿನ್ನು ಸೈರಿಸಲಾರೆಂ ॥ ೧೦೧

ಇನಿತು ಪೊೞ್ತುಮುದಕದೊಳಿರ್ದ ಕಾರಣಂ ವಿಷವೇಱದಿರ್ದುದು. ಈಗಳಸು ನೆತ್ತಿಗೇಱುವ ಪುದಿಱ ಕುಮಾರನಂ ರಕ್ಷಿಸುವುದೆಂದು ಮುನಿಕುಮಾರನ ಕಯ್ಯೊಳ್ ಕುಡಲಾತನೀಸಿಕೊಂಡು ನಿನಗೆ ವಿಷಾಪಹಾರಮಪ್ಪೌಷಧಿಯುಂ ತಂದೀವೆನೆಂದಾತಂ ಪೋಗಲ್ ವಿಷಮೂರ್ಛೆಯಿಂ ಸಮವರ್ತಿನಿಳಯಮನೆಯ್ದಲಾಮುನಿಶಿಷ್ಯಂ ಕುಮಾರನಂ ತಂದು ವಾಮದೇವರ್ಗೆ ತೋಱಿ ತದ್ವೃತ್ತಾಂತಮಂ ಪೇೞ್ದೊಡವರೀತನಂ ಭೂತಳೇಶ್ವರಂಗೆ ಕೊಟ್ಟು ಬಾಯೆಂದು ಕಳುಪಿದೊಡಾತಂ ರಾಜಹಂಸಂಗೆ ಕೊಟ್ಟು ಕುಮಾರಾಗಮಸಂಬಂಧಮಂ ಪೇೞ್ದೊಡರಸಂ ಪರಿತೋಷಚಿತ್ತನಾಗಿ ಈಕುಮಾರಂ ಪ್ರೇಮದತ್ತನ ಮಗನಪ್ಪುದಱಿಂ ಸೋಮದತ್ತನೆಂಬ ಪೆಸರನಿಟ್ಟು ಅಷ್ಟದಿಕ್ಪಾಲಕರಿಂ ಪರಿವೇಷ್ಟಿಸಿರ್ದ ಭೂಮಿಯಂತೆ ಭೂಮೀಶ್ವರಂ ಸುಖದೊಳಿರ್ಪನವೊಂದು ದಿನಂ

ಮೊಟ್ಟೆದ ಕೆಪ್ಪುರ್ಗೆ ಪೆರ್ಬಿದಿರ ಬಿಲ್ ಸುಲಿಪಲ್ ಕುಡಿಮೀಸೆ ಕಾಗಿನೊ ।
ಳ್ಪಟ್ಟೆಯ ಕುಪ್ಪಸಂ ತಲೆಯ ಸುತ್ತಿನ ನೇಣ್ ಪೆಱಗೆಯ್ದೆ ಬರ್ಪ ನಾಯ್ ॥
ಕಟ್ಟೆದ ಕಲ್ಲಿ ಕೆಂಗಱಿಯ ಕೋಲ್ ಬೆರಸೆಯ್ದಿದನೊರ್ಬ ಬೇಂಟೆಯೊಳ್ ।
ದಿಟ್ಟಗೆ ಚೆಲ್ವನಾಗಿ ನೃಪನೋಲಗಮಂ ಮೃಗಯಾನಿವೇದಕಂ ॥ ೧೦೨

ಅಂತೊರ್ವ ಬೇಂಟೆಗಾಱಂ ಬಂದು ರಾಜಹಂಸಂಗೆ ಪೊಡೆಮಟ್ಟು ಇಂತೆಂದಂ:—

ವ್ಯಾಧನಿವನೆನ್ನದಿರ್ ಭುವ ।
ನಾಧಿಪ ಮೃಗಸಮಿತಿ ಪೆರ್ಚಿ ಋಷ್ಯಾಶ್ರಮಮಂ ॥
ಬಾಧಿಸುತಿರ್ಪುದತಿನಿ ।
ರ್ಬಾಧೆಯೆನಲ್ ಮಾಱ್ಪುದಲ್ತೆ ಬೇಂಟೆಗೆ ಕಾಲಂ ॥ ೧೦೩

ಪಳ್ಳದ ನೀರ್ ಪರಿಗುಂದಿದು ।
ದೆಲ್ಲಾ ಬೆಳಸುಡುಗಿದತ್ತು ದಾವಾಗ್ನಿಯು ಬ ॥
ಲ್ಪಲ್ಲಲ್ಲಿ ತೋಱಿದುದು ಭೂ ।
ವಲ್ಲಭ ನಡೆ ಬೇಂಟೆಯಾಡಲಿಂತಿದು ಸಮಯಂ ॥ ೧೦೪

ಗಿರಿಗಳ ಪಕ್ಷಮಂ ಕಡಿದು ಗೋತ್ರವಿರೋಧಿಯೆನಿಪ್ಪ ನಾಮಮಂ ।
ಧರಿಸಿದ ದೇವವಲ್ಲಭನ ಪತ್ತನಕೀಗಳ ದಾೞಿಯಿಟ್ಟು ಸು ॥
ಟ್ಟುರಿಪ್ರವೆನೆಂದು ಪರ್ವತವರಂ ಕರದೀಪಸಹಸ್ರಸಂಖ್ಯೆಯಿಂ ।
ದಿರುಳೆಡೆಗಾಳೆಗಕ್ಕೆ ನಡೆವಂತೆವೊಲಿರ್ದುದು ದಾವಪಾವಕಂ ॥ ೧೦೫

ಎಂದು ಬಿನ್ನವಿಸಿದ ಬೇಂಟೆಕಾಱನನರಸಂ ಮನ್ನಿಸಿ ಕ್ರೂರಮೃಗಂಗಳ ಬಾಧೆಯುಂ ಪರಿಹರಿಸಿದೊಡೆ ದೋಷಮೇನುಂ ಬರ್ಪುದಿಲ್ಲೆಂದು ಭಾವಿಸಿ ಯಾಗಳ್ ಪೊಱಮಟ್ಟು ಕಾಪುಗಾಡ ಬೇಡವಡೆಯುಂ ಕರಸೆ,

ಸಿಂಗದ ಕೇಸರಂ ಪುಲಿಯುಗುರ್ ಚಮರೀಮೃಗವಾಳಜಂ ಮದೇ ।
ಭಂಗಳ ಮುತ್ತು ಪೀಲಿವೊಱೆ ಹೊತಿಯ ಬೆಕ್ಕಳುಮಂದಿಮುಳ್ ವರಾ ॥
ಹಂಗಳ ದಾಡೆ ಕತ್ತುರಿಯು [1]ಹುಲ್ಲೆ[1]ಗಳೊವೊರ್ದಲಾದ ವನ್ಯಸಾ ।
ರಂಗಳ ಭಾರದಿಂ ನಡೆದು ಬಂದನದೊರ್ವ ಪುಳಿಂದನಾಯಕಂ ॥ ೧೦೬

ಅಂತು ಬಂದು ಕಂಡ ಪುಳಿಂದನಾಯಕನಂ ಮನ್ನಿಸುವುದುಮವಂ ತಾಂ ಪಾಸದೊಳಿರ್ದ ಜಾಯಿಲನಂ ತೋಱಿಸಿ,

ರಾಹುವಿನಂತೆ ಋಕ್ಷಪತಿವೈರಿ ನಿಶೀಥಿನಿಯಂತೆ ಪುಂಡರೀ ।
ಕಾಹಿತಕಾರಿ ದುಷ್ಟಶಿಶುಪಾಲಕನಂತಿರೆ ಕೃಷ್ಣಸಾರತೇ ॥
ಜೋಹರಕಾರಣಂ ಕುರುಕುಲಾಧಿಪನಂತೆ ವೃಕೋದರಾರಿ ಕೇಳ್ ।
ಸಾಹಸಮಲ್ಲನೆನ್ನ ಗಟನಂಕದ ಜಾಯಿಲನುರ್ವರಾಧಿಪಾ ॥ ೧೦೭

ಎಂದು ಬಿನ್ನವಿಸಿದನಂ ಮನ್ನಿಸೆಯುನಂತರಂ

ತೊಗರಂ ಪಿಂಡುಗೆಲಂಕಿ ಸಾಳುವನಭಂಗಂ ಜಾಯಿಲಂ ಸೂಜಿವಾ ।
ಲಿಗನುದ್ದಂಡನೊಱಂಟನಂಟಬಟಿಲಂ ಜಾಗಂ ಜವಂ ರಕ್ಕಸಂ ॥

---

1. ಹುಂತಿ. ಕ॥

ಪೊಗೆಗೆಣ್ಣಂ ಕಲಿ ಬಂದಿಕಾಜನವಟಂ ವೇಗಾಯ್ಲ್ನೆಂದೆಂಬ ಕು ।
ನ್ನಿಗಳಂ ಪಾಸದೊಳಟ್ಟಿ ಕಾಡೊತೆಯರಂದೆಯ್ದಿತ್ತು ಕಾಂತಾರವಂ ॥೧೦೮

ಹಂದಿಗೆ ಸಾಳುವಂ ಮರೆಗೆ ಜಾಯಿಲನೇಣಕುಲಕ್ಕೆ ಚಂಚುವಾ ।
ಲಂ ದಣಿದಿರ್ದ ಕೊಂಡಗುಱಿಗೀತೊಗರಂ ರುರುಸಂಕುಳಕ್ಕೆ ಜಾ ॥
ಗಂ ದಿಟವುಲ್ಲು ಮಾರಿಯುಲೆ ಭೂಪತಿ ನೋಡಿ ಪೊಡೆ ತೋರ್ದನಿಂತು ನೋ ।
ಡೆಂದತಿಭಾಷೆಯಿಂ ನುಡಿಯುತಿರ್ದನಟೊರ್ಬ ಪುಳಿಂದನಾಯಕಂ ॥ ೧೦೯

ಅಂತು ಪಸಾಯಂಗೊಟ್ಟು ನಡೆವನ್ನೆಗಂ

ಇದೆ ಮರೆ ಪಿಕ್ಕೆಯಿಕ್ಕಿದೆಡೆ ಪುಲ್ಲೆಯ ಬಾಯ ಕಱಂಕೆ ಸೂಸಿದ ।
ತ್ತಿದೆ ಕೆಸಱೊಳ್ ಪೊರಳ್ದು ನಡೆಗೊಂಡುದು ಹಂದಿಯ ಹಿಂಡು ಮುಂದೆ ನೋ
ಡದೆ ಹೊಲಸಟ್ಟಿ ನಾತರ್ಪುದು ಪೆರ್ಬುಲಿಯಿರ್ದಪುದಕ್ಕೆನುತ್ತೆ ಪೆ ।
ರ್ಚಿದ ವನದಲ್ಲಿ ಪಜ್ಜೆವಿಡಿಯಿಂ ನಡೆಗೊಂಡುದು ಭಿಲ್ಲಸಂಕುಳಂ ॥ ೧೧೦

ಆಸಮಯದೊಳ್

ಮುರಿದ ಕೊರಲ್ ನಿಮಿರ್ದ ಕಿವಿ ಕೆತ್ತುವ ಮೆಯ್ ಕಡೆವಾಯ ಪುಲ್ಲೆಸಳ್ ।
ತರಳವಿಲೋಚನಂ ಸೊಪಡನಾಲಿಸಿ ಬೆಚ್ಚಿ ಬಿಗುರ್ತು ಬೇಗದಿಂ ॥
ಸರಳಿಸಿ ಮತ್ತೆ ನಿಂದು ಪೆಗಂ ನಡೆನೋಡುತಿಭೀತಿ ತಮ್ಮೊಳ ।
ಚ್ಚರಿವಡೆದಿರ್ಪ ಪುಲ್ಲೆಗಳನೀಕ್ಷಿಸಿದಂ ಭುವನಾಧಿನಾಯಕಂ ॥ ೧೧೧

ಅದಲ್ಲದೆಯುಂ

ಚರಿಸದೆ ಮೇಪುಗೊಳ್ಳದಿನಿಸಿಕ್ಕೆಯನೊಲ್ಲದೆ ನಿದ್ದೆಯಿಲ್ಲದೊ ।
ಳ್ಮರನ ನೆಟಿಲ್ಗೆ ಬಾರದೆ ಮೃಗಾಳಿಗೆ ಸೇರದೆ ಸೀರ್ಗೆ ಪಾರದು ।
ದ್ಗರವುದನಾಗ್ನಿಗಳ್ಕೆ ತನುತಾಪವ ಬೇಗೆಗೆ ಬಳ್ಕಿ ಪಲ್ಲಭಾ ।
ವಿರಹದೊಳಿರ್ಪದೊಂದು ಹರಿಣಂ ಬರೆದೊತ್ತಿದ ಚಿತ್ರಮೆಂಬಿನಂ ॥ ೧೧೨

ಪುಲ್ಲೆಯ ಹಿಂಡನೊಂದು ಪುಲಿ ಗೆಂಟಱೊಳೊಯ್ಯನೆ ಕಂಡು ಪಜ್ಜೆಯಂ ।
ಮೆಲ್ಲನೆ ಮೆಟ್ಟಿ ಪುಲ್ಲೊಳ್ ಹುದುಂಗಿ ಹದುಂಗಿದುದರ್ಕೆ ಲಂಘಿಸಲ್ ।
ತಲ್ಲಳದಿಂ ಕುನುಂಗಿ ನೆಱೆ ನಿಂಟಿಸಿ ನೀಳ್ದ ಕೊರಲ್ಗೆ ಪಾಯ್ದುದು ತ ।
ಳ್ಪಲ್ಲದೆ ನೆತ್ತರಂ ಪದೆದು ಪೀರ್ದೆಱೆದಿಕ್ಕಿದುದಿಕ್ಕೆದಾಣದೊಳ್ ॥ ೧೧೩

ಅದಂ ಕಂಡು

ಮೆಳೆಗಳನೊತ್ತು ಗಳ್ ಮರನನೇಱಿ ಕೆಲಂಬಿಡದಿತ್ತ ಜಾಱಿ ಬಂ ।
ದೊಳಪ್ಪಗದಿರೆ ಬಿಡೋ ಪಿಡಿದ ನಾಯ್ಗಳನಟ್ಟಿಱಿಯಿತ್ತಲಿತ್ತ ಪೋ ॥
ಯ್ತು ಲೆಲೆಲೆ ತಱೋಹಕಟ್ಟಿ ಕಡೆಪ್ರೋ ಬಲಗಾನಿರೆ ಸೋಹೆಸಿಪ್ಪ ತ ।
ತ್ಕಳಕಳವುಣ್ಮೆ ಬೇಡವಡೆ ಬೊಬ್ಬಿಱಿದಾಡಿಪುದಂದು ಬೇಂಟೆಯುಂ ॥ ೧೧೪

ಪುಲಿವಲೆ ಕೊಂಬು ಕಣ್ಣಿ ಮಿಡಿಗಣ್ಣಿ ತೊವಲ್ವಲೆ ಸಿಕ್ಕುದಕ್ಕು ಪೆ ।
ರ್ವೊರ್ಲವಲೆ ಸಂದ ಹಾಸುವಲೆ ನೀರ್ವಲೆ ಮೋಲ್ವಲೆ ಸೊಕರ್ಮುದ್ದು ಪೆ ॥
ರ್ಬಲೆ ಬಿಡುವಾರುಗೋಡುವಲೆಯೆಂಬಿನಿತಂ ಪುಱಿಗಟ್ಟಿ ಕಾನನ ।
ಸ್ಥಲದೊಳಗಲ್ದು ತೋಹುವಿಡಿದೊಡ್ಡಿದರೆಯ್ದೆ ಪುಳಿಂದನಾಯಕರ್ ॥ ೧೧೫

ಆಸಮಯದೊಳ್

ಮುಸ್ತಾಕಂದಮನೆತ್ತಿ ಬೇರ್ಗಳನಿತಂ ತಿಂದುಗ್ರದಾಹಂ ಮಿಗಲ್ ।
ವ್ಯಸ್ತಾಂಬುಪ್ಲವವಾದ ಪೆರ್ಗೆಱೆಗಳೊಳ್ ಪಾಯ್ದಲ್ಲಿ ಮಗ್ನಂ ನಾಯ್ಗಳಂ ॥
ಹಸ್ತಾಲಂಬಿತವಾದುವಂ ಬಿಡುಬಿಡೆಂದಾದಿರ್ದರ್ ಬೇಡರ್ಕಳಂ ।
ಹಸ್ತಿವ್ಯಾಜದೊಳೊಕ್ಕಲಿಕ್ಕಿ ಕೆಡಪಿತ್ತಂದೊಂಬೆ ನಿಂದೆಕ್ಕಲಂ ॥ ೧೧೬

ಅದಂ ಕಂಡು,

ಜವದಿಂ ಬೆಂಗೊಟ್ಟು ಪೋಪೆಕ್ಕಲನನಳವಿಯೊಳ್ ಕಂಡು ತದ್ರಾಜಹಂಸಂ ।
ಕವಲಂಬಿಂದೆಚ್ಚೊಡಂತುರ್ಬಿನ ನಡುಪಣೆಯೊಳ್ ಮೂಡೆ ನಾಲ್ದಾಡೆಯಾ
ದಂ ॥ ತೆವ್ರೊಲಾಬೇಡರ್ಕಳಂ ಸೀಟಿದ್ದಗಿಜಿಗಿಯೆ ನೃಪಂ ಕೊಂದಪಂ
ಪಂದಿಯುತ್ತಂ । ದು ವನಂ ಘೋಳೆಂಬಿನಂ ಬೊಬ್ಬಿಱಿದು ಕೆಡಪ್ರತಿರ್ದತ್ತು
ಭಿಲ್ಲಪ್ರತಾನಂ ॥ ೧೧೭

ಅದಲ್ಲದೆಯುಂ

ಮೆಳೆಯಿಂದಂ ಪೊಱಮಟ್ಟು ಮೆಯ್ಮುಱಿದು ಕೆಂಗಣ್ಣಿಕ್ಕಿ ಕಂಡಾಳ್ಗಳಂ ।
ನೆಲನಂ ಗರ್ಜಿಸಿ ಪೊಯ್ದು ಬಾಯ್ದೆಱೆದು ಪುರ್ಬಿಕ್ಕುತ್ತೆ ವಾಲಾಗ್ರಮಂ ॥
ಮುಳಿಸಿಂ ದಾಡೆಗಳಿಂದೆ ಕರ್ಚಿ ಸೆಳೆಯುತ್ತುತ್ಕ್ರೋಪದಿಂ ಪಾಯ್ವ ಪೆ ।
ರ್ಬುಲಿಯುಂ ದಂಡೆಯೊಳಾಂತು ನೂಂಕಿ ತಿವಿದಂ ವಿಕ್ರಾಂತಕಂಠೀರವಂ ॥

ವೃತ್ತಂ

ಕತ್ತಲಿಸಿರ್ದ ಪೇರಡವಿಯೊಳ್ ಸಲೆ ಕೋೞ್ಮಿಗಪೆೞ್ಮಿಗಂಗಳಂ
ಮಿತ್ತುವಿನಂದದಿಂ ತವಿಸಿ ಪನ್ನಗಲೋಕದ ಜೀವರಾಶಿಗಳ್ ॥
ಪೊತ್ತುವ ಮಾೞ್ಕೆಯಿಂ ತಿದಿಗಳಂ ಪೊಗೆದಪ್ಪರೊ ಭಿಲ್ಲರೆಂಬಿನಂ ।
ಪುತ್ತನಗುಬ್ಬಿದ ಪೆರ್ಗರಡಿಗಳ್ ಮೊಗಮಿಟ್ಟಸೆಗುಂ ವನಾಂತದೊಳ್ ॥ ೧೧೯

ಅಂತನೇಕವಿಧದಿಂದಿರ್ಪ ಮೃಗಂಗಳನರಸಂ ಬೇಂಟೆಯಾಡೆ

ಹರಿ ಕರಿ ಹಂದಿ ಬೆಳ್ಳಿರಲೆ ಪೆರ್ಬುಲಿ ಹುಲ್ಲೆ ಲುಲಾಯಸಂಕುಳಂ ।
ಮರೆ ಮೃಕರಾಜಿ ಗಂಡಮೃಗ ಶಾಲ್ಮಲಿಸಂತತಿ ಕೊಂಕ ಪೆರ್ಮೊಲಂ ॥
ಕರಡಿ ರುರುಪ್ರತಾನಮುಡು ಬೆಳ್ಳಲಿ ಪೆರ್ವರಿಯುಂಗಿ ಪೆರಣಿಲ್ ।
ಮರದಣಿಲೆಂಬಿವಂ ಕೆಡಪಿಯೇಂ ತಿರುಗಿತ್ತೊ ಕಿರಾತಸಂಕುಳಂ ॥ ೧೨೦

ಅಂತುಕಿರಾತವಶೇಸಹಿತಂ ಬೇಂಟೆಯಾಡಿಯರಸಂ ತಿರುಗುವಾಗಳ್ ಮುಂಬೆ,

ಬೇಂಟೆಗು ನಾಯ್ಗಳಂ ಪೊಱೆವ ಪೆರ್ಬಲೆಯುಂ ಸಮಕಟ್ಟುತಿರ್ಪ ಬ ।
ಲ್ಪುಂಟಗೆಗೋಲ್ಗಳಂ ಬಸಿವ ದೇಹವನೋವ್ರವ ನೇರ್ಪುವೆತ್ತ ಕೈ ॥
ದೋಂಟಿಯನೊಪ್ಪಿ ಕಟ್ಟುವ ಶರಂ ಪದನಾಗಿರೆ ಬಿಲ್ಲ ನಾರಿಯುಂ ।
ತಾಂಟಿಸಿ ನೋೞ್ಪ ಬೇವಸದೊಳಿರ್ದು ಪಳ್ಳಿಯ ಭಿಲ್ಲಸಂಕುಳಂ ॥ ೧೨೧

ಅಂತಿರ್ಪುದೊಂದು ಭಿಲ್ಲಪಳ್ಳಿಯುಂ ಕಂಡರಸಂ ನಿಲ್ವುದುಮಲ್ಲಿಯ ಪುಳಿಂದರ್

ಕತ್ತುರಿಯ ನಾಭಿಯುಂ ಪೊಸ ।
ಮುತ್ತುಗಳುಂ ಮತ್ತಹಸ್ತಿದಂತವನೊಲವಿಂ ॥
ದಿತ್ತರ್ ಕಣೆಗಳನರಸಂ ।
ಚಿತ್ತವಿಸೆಂದೆನುತೆ ಶಬರನಾಯಕರಾಗಳ್ ॥ ೧೨೨

ಅಂತು ಬಂದು ಕಂಡ ಬೇಡಪಡೆಯೊಳ್,

ಮುಗಿಲ ಮಱೆಯುಬ್ಜಮಿತ್ರಂ ।
ಪಗಲ ಸುಧಾಸೂತಿ ಮಸುಳಿಸಿರ್ಪಂತವರೊಳ್ ॥
ಸೊಗಸುವ ಶರೀರಕಾಂತಿಯೊ ।
ಳೊಗೆದಿರ್ಪಂ ನವಕುಮಾರಕಂ ನೃಪನಿದಿರೊಳ್ ॥ ೧೨೩

ಅಂತಿರ್ದ ಕುಮಾರನಂ ಕಂಡು—ಇವನೆಲ್ಲಿಯುವನೆತ್ತಣಿಂ ಬಂದನೀತಂ ನಿಮ್ಮ ಕುಲದೊಳ್ ಪುಟ್ಟಲ್ ತಕ್ಕಾತನಲ್ಲೆಂದರಸಂ ಬೆಸಗೊಳಲಲ್ಲಿಯೊರ್ಬಂ

ಜನಪಂ ಪ್ರಹಾರವರ್ಮಂ ।
ವನದೊಳ್ ಮುಂಗೆಟ್ಟು ಪೋಪ ಪದದೊಳ್ ಕಮಲಾ ॥
ನನೆಯೊರ್ಬಳ ಕೈಯೊಳ್ ಬ ।
ಲ್ಪಿನೊಳೀತನನೀೞ್ದು ಕೊಂಡೆವವನಿಪತಿಲಕಾ ॥ ೧೦೪

ಎಂದು ಮತ್ತಮಿಂತೆಂದಂ:—

ಈತಂ ದೇವರ್ಗೆಯೆ ತ ।
ಕ್ಕಾತಂ ಚಿತ್ತವಿಪ್ರದೆಂದು ತದ್ಬಾಲಕನಂ ॥
ಪ್ರೀತಿಯೊಳಿತ್ತಂ ಕೂರ್ತು ಕಿ ।
ರಾತವರಂ ನೃಪವರಂಗೆ ಮನದುತ್ಸವದಿಂ ॥ ೧೦೫

ಅಂತು ಕುಡುವುದುಂ ಕಿರಾತಂಗೆ ಅರಸಂ ಬೇಳ್ಪುದಂ ಕೊಟ್ಟು ಕುಮಾರನನೊಡಗೊಂಡು ಪುರಪ್ರವೇಶಮಂ ಮಾಡಿ ಬೇಡವಡೆಯುಂ ಕಳುಪಿ ಆಸ್ಥಾನಮಂಟಪಕ್ಕೆ ಬಂದು ವಸುಮತಿಯುಂ ಕರಸಿ ಕುಮಾರಂ ಬಂದ ವೃತ್ತಾಂತಮಂ ಪೇೞ್ದಾತನನಪಹಾರವರ್ಮನೆಂದು ಪೆಸರನಿಟ್ಟು ನವನಿಧಿಗಳಂ ಪಡೆದ ದಿವಸ್ಪತಿಯಂತವನೀಶಂ ಸುಖದೊಳಿರ್ಪುದುಂ ಮತ್ತೊಂದು ದಿನಂ

ಆ ವಾಮದೇವಶಿಷ್ಯಂ ।
ನೀವಾರಮನುಯ್ಯು ಬಗೆಯಿನೊಂದು ವನಸ್ತ್ರೀ ॥
ಮಾನಸಿಗೆ ಬಂದು ಕಂಡಾ ।
ಕೋವಿದನತಿದುಃಖಿಯಪ್ಪ ವೃದ್ಧಾಂಗನೆಯುಂ ॥ ೧೦೬

ಬಾಗಿದ ಬೆನ್ನೆಬಿಳ್ಪು ಕಿವಿ ಬತ್ತಿದ ಗಲ್ಲಮುದಿರ್ದ ಪಲ್ ಕರಂ ।
ತೂಗುವ ಮಂಡೆ ನೀರ್ಸುರಿವ ಕಣ್ಮಲರೆಯ್ದೆ ತೆರಳ್ಗ ತೋಳ್ಗಳಂ ॥
ಬಾಗಿರೆ ಮುಪ್ಪು ಮೆಯ್ಯೊಡೆದು ಬಿಂಜದೊಳಂಜದೆ ನಿ ದುದೆಂಬಿನಂ ।
ಬೇಗೆಯು ಬೆಂಕೆಗಳ್ಕಿ ಕುಳಿರ್*ಳ್ಳದೊಳಿರ್ದ ಮುಖಮಂ ಕಿಯೊಪ್ಪಿದಳ್ ॥ ೧೦೭

ಅಂತಿರ್ದ ವೃದ್ಧೆಯುಮಂ ಮುನಿಶಿಷ್ಯಂ ಕಂಡು

ಎಲೆ ವೃದ್ಧೆ ವನದೊಳೇಕಿಂ ।
ತಳುತೊರ್ಬಳೆ ಕುಳ್ಳಿರಿರ್ಪೆಯೆಂದೊಡೆ ಮತ್ತಂ ॥
ಬಳಲುತ್ತೆ ಸುಯ್ದು ಮನನಂ ।
ನಿಲಿಸಿ ಬಱಿಕ್ಕಸಿರ್ದದರ್ಕೆ ಬಗೆಯಂ ತಳೆದಳ್ ॥ ೧೨೮

ಅದೆಂತೆಂಬೊಡೆ:—

ಸಕಲಧರಾಧಿನಾಥನವರತ್ನಕಿರೀಟವಿರಾಜಿತಾಂಘ್ರಿಪಂ ।
ದುಕನತಿಮಿತ್ರರಾಜರಮಣೀಯಫಲಪ್ರದನುತ್ರ್ಯಪೌರಿಜಂ ॥
ತಕನಭಿಯಾತಿಭೂಪಗಜವಾಜಿರಥಾಪ್ತಪದಾತಿದರ್ಪಭಂ ।
ಜಕನೆನಲೊಪ್ಪುವಂ ಮಗಧವಲ್ಲಭನುಗ್ರವಿರೋಧಿದುರ್ಲಭಂ ॥ ೧೨೯

ಅಂತಾಮಗಧವಲ್ಲಭನಪ್ಪ ರಾಜಹಂಸಂ ತನ್ನರ್ಧಾಂಗಿಯಪ್ಪ ವಸುಮತಿಯ ಸೀಮಂತಕ್ಕೆಮ್ಮರಸನಪ್ಪ ಪ್ರಹಾರವರ್ಮನಂ ತನಗತಿಮಿತ್ರನಪ್ಪದಱಿಂ ಕರಸಲಾತಂ ತನ್ನರಸಿಯಪ್ಪ ಪ್ರಿಯಂವದೆಯುಮಿರ್ವರ್ ಕುಮಾರರ್ ಸಹಿತ ಸಕಲಬಲಮುಂ ಕೂಡಿಕೊಂಡು ಪುಷ್ಪಪುರಕ್ಕೆ ಬರ್ಪುದುಂ,

ಅರಿಮಾಳವೇಶ್ವರಂ ನಿಜ ।
ವಿರೋಧದಿಂ ಬಂದು ಮುತ್ತೆ ಮಗಧೋರ್ವೀಶಂ ॥
ಧುರದೊಳ್ ಮೆಯ್ಮಱೆದಂ ನ ।
ಮ್ಮರಸಂ ಸಿಕ್ಕಲ್ಕೆ ಬಿಟ್ಟು ಕಳುಪಿದನಾತಂ ॥ ೧೩೦

ಅಂತು ಬಿಟ್ಟು ಕಳುಪಲೆಮ್ಮರಸಂ ಕುಟುಂಬಸಹಿತಂ ತನ್ನ ಮಿಥಿಲಾಪುರಕ್ಕೆ ಪೋಗುತಿರ್ದಾಗಳೊರ್ಬ ದೂತನಿದಿರ್ವಂದು

ದುರುಳಂ ಪ್ರಹಾರವರ್ಮಂ ।
ಪರನೃಪತಿಯ ಕೆಯ್ಗೆ ಸಿಕ್ಕಿದಂ ರಾಜ್ಯಕ್ಕಾ ॥
ನರಸೆಂದು ವಿಕಟವರ್ಮಂ ।
ಬರವಸದಿಂ ಪಟ್ಟಬದ್ಧನಾದನಿಳೇಶಾ ॥ ೧೩೧

ಅಂತು ನಿನ್ನ ದಾಯಾದ್ಯನಪ್ಪ ವಿಕಟನವರ್ಮಂ ಪಟ್ಟವಂ ಕಟ್ಟಿಕೊಂಡು ದಲ್ಲದೆಯುಂ ನೀಂ ಬರ್ಪುದಂ ಕೇಳ್ದು ಬಲವಂ ಕೂಡಿಕೊಂಡು ಕೊಲಲ್ ಬರುತಿರ್ಪನೆಂದು ಬಂದ ದೂತಂ ಪೇೞಲರಸಂ ರಾಜಮಾರ್ಗಂಬಿಟ್ಟು ಅರಣ್ಯಮಾರ್ಗದೊಳ್ ಪೋಗುತಿರ್ಪಾಗಳ್

ಕ್ರೂರವ್ಯಾಘ್ರವನೇಭಕೇಸರಿಮಹಾಕೋಳಾಹಳಾಂದೋಳಘೋ ।
ರಾರಣ್ಯಾಂತದೊಳುದ್ಧಭೇದದೊದವಿಂ ಬರ್ಪನ್ನೆಗಂ ಕಾರ್ಮುಕ ॥
ಜ್ಯಾರಾವಂ ಮಿಗೆ ಬಾಣಮಂ ಸುರಿಯುತುಂ ವ್ಯಾಧರ್ಕಳೆಯ್ತಂದು ಸಂ ।
ಹಾರಂಮಾಡಿದರೆಮ್ಮ ಭೂಪಬಲಮಂ ಬೆಂಬತ್ತಿ ಬೆಂಬೀೞ್ವನಂ ॥ ೧೩೨

ಅಂತು ಬೆಂಬತ್ತೆ

ಭಿಲ್ಲರ್ಕಳ್ಕದ ಮೃಗಮುಡು ।
ವಲ್ಲಭನಂ ಸಾರ್ದಡಲ್ಲಿ ಪಾವಿನ ಭಯದಿಂ ॥
ತಲ್ಲಣಿಸುವಂತಿರಾಯ್ತೆನ ।
ಗಿಲ್ಲಿ ವಿಪತ್ತೆಂದು ನೃಪತಿ ದುಃಖಿತನಾದಂ ॥ ೧೩೩

ಅಂತು ದುಃಖಿತನಪ್ಪಂತು ಕಿರಾತವತೆ ಪ್ರಹಾರವರ್ಮನ ಬಲಮಂ ನಿರ್ಮೂಲಮಂ ಮಾೞ್ಪಾಗಳಾನಂಬೆಯೆನ್ನ ಕೈಯ್ಯೊಳಿರ್ದ ಕುಮಾರಸಹಿತಮೋಡಿ ಬಂದಿಲ್ಲಿರ್ಪುದುಂ,

ಆರ್ದೊಂದು ಘೋರವಕ್ತ್ರಂ ।
ಶಾರ್ದೂಲಂ ಮೇಲೆವಾಯಲಾನಂಜಿ ಕರಂ ॥
ಸಾರ್ದು ವನದಿಂ ಕರಾಗ್ರದೊ ।
ಳಿರ್ದ ಕುಮಾರನನರಣ್ಯದೊಳ್ ಬಿಸುಡಲೊಡಂ ॥ ೧೩೪

ಅಂತಾಶಿಶು ಸಮೀಪದೊಳಿರ್ದ ಕಪಿಲಾಸವದೊಳ್ ಪುಗುವುದುಮಲ್ಲಿಗಾ ಪುಲಿ ಪಾಯಲೊಡಂ

ಮುನ್ನಂ ಶರಯಂತ್ರಮನ ।
ತ್ಯುನ್ನತಿಯಿಂ ಶಬರರೊಲ್ದು ಕಪಿಲಾಸವದೊಳ್ ॥
ಚೆನ್ನೆಸೆಯೆ ಮಾಡಿರಲ್ ಯಂ ।
ತ್ರಂ ನೆಳ್ಕನೆ ಪುಲಿಯ ಗೋಣನಱಿಯಿತ್ತಾಗಳ್ ॥ ೧೩೫

ಅವಂ ಮಱೆಯೊಳ್ ನೋಡುತ್ತಿರ್ದ ಶಬರರ್ ಬಂದು ಪುಲಿ ಕೆಡೆದುದಂ ಕಂಡು ಕುಮಾರನಂ ಕೊಂಡು ಪೋದರೆಂದು ವೃದ್ಧೆ ಪೇೞಲ್ ಮುನಿಶಿಷ್ಯಂ ಕೇಳ್ದಾಶ್ಚರ್ಯಂಬಟ್ಟಾಬೇಡರ್ ಪೋದ ದಾರಿಯಂ ತೋಱುಮೆನಲಲ್ಲಿಯೆ ಪೋದರೆಂದು ವೃದ್ಧೆ ಪೇೞಲಾಮಾರ್ಗದೊಳಾಂ ಪೋಗಿ ನೋೞ್ಪೆನೆಂದು ಮುನಿಶಿಷ್ಯಂ ಪೋಗಿ ನೋಡೆ

ಎಲ್ಲಿಂದ ಬಂದೆಯೆಂಬರೊ !
ಕೊಲ್ಲಿವನಂ ಬೇಹುಕಾಱನೆಂಬರೊ ಪಾವರ್ಗಂ ||
ಮೆಲ್ಲಿವನೆಂಬರೊ ಧರೆಯೊಳ್ |
ಭಿಲ್ಲರ್ ಕಡುಮೂರ್ಖರೆಂದು ಚಿಂತಿಸುತಿರ್ದಂ || ೧೩೬

ಅಂತು ಚಿಂತಿಸುತ್ತುಂ ನಡೆಯೆ ಮುಂದೆ

ಅಡವಿಯೊಳಾವರ್ಗ ಬೇಡನಡೆ ಬೇಂಟೆಯನಾಡಿ ಶರಪ್ರಘಾತದಿಂ |
ಕೆಡೆಪಿದ ಬೆಳ್ಮಿಗಂಗಳ ಕಳೇವರಮಂ ಪೊಸಕಿರ್ಚಿನಿಂದಮಂ ||
ಸುಡು ಕಡಿ ಬಿರ್ಚು ಬಳ್ಪಿಡಿದು ಕೊಯ್ ಕೊಱೆ ತನ್ನವರ್ಗೀ*ಯೆನಿಪ್ಪ ನಾ |
ಣ್ನುಡಿಗಳನಾಲಿಸುತ್ತುಮಿರದೆಯ್ದಿದನಾಮುನಿ ಭಿಲ್ಲಸಂಘಮಂ || ೧೩೭

ಅಂತೆಯ್ದುವನ್ನೆಗಮಾಬೇಡನಡೆಯೊಳ್ ಕೆಲಂಬರ್

ಚಿಕ್ಕವನಂ ಬೇಂಟೆಗೆ ಬಲಿ |
ಯಿಕ್ಕುವಮೋ ಗುಱಿಯನೊಡ್ಡಿ ಕೆಡೆಪುವಮೋ ಪೇೞ್ ||
ಲಕ್ಕೆ ಬಿಸುಟಸಿಯನಾನ್ಪೆಮೊ |
ಚಿಕ್ಕನೆ ಯೆರೆದಾಗಿ ಸೀೞ್ಪುವಮೋ ಎನುತಿರ್ದರ್ || ೧೩೮

ಅದೆಂತೆಂಬುದಂ ಕೇಳ್ದಲ್ಲಿಗೊಂದುಪಾಯಮಂ ಕಾಣಲ್ವೇೞ್ಕುಮೆಂದು ಪರಪ್ರಾಣಾರ್ಥಂ ಪುಸಿದೊಡೆ ದೋಷಮಿಲ್ಲೆಂದು

ಎಲೆ ಮಗನೆ ಪಡೆದೊಡಲ್ಗದ |
ವಡಲಂ ಪುಟ್ಟಿಸುತುಮಲ್ಲಿಗೆಯ್ದಿದೆಯೊ ಎಂ ||

ದಱಿಂತೆ ಪಡೆದಂತೆ ದುಃಖದೊ |
ಳಳವಡಿಸಿದನೊಂದು ನಟನೆಯಿಂ ಮುನಿಶಿಷ್ಯಂ ॥ ೧೩೯

ಅಂತೞಲುತ್ತೆ ಬರುತಿರ್ದುದಂ ಕಂಡು ಕಿರಾತಪಡೆ ಈಕುಮಾರಕನೀತನ ಮಗನಾಗದೆ ಮಾಣನೆಂದಲ್ಲಿ ಕೆಲಬರ್ ಕರುಣಿಸಿ ಕಣ್ಣಾಸಿಯುಂ ತೊಡೆದು ಕುಮಾರನಂ ಕುಡಲಾಮುನಿಕುಮಾರಂ ಕೊಂಡು ಬಂದು ವೃದ್ಧೆಯಿರ್ದ ತಾಣದೊಳವಳಂ ನೋಡಿ ಕಾಣದೆ ವಾಮದೇವರ ಸಮೀಪಕ್ಕೆ ಕೊಂಡು ಬಂದು ತಚ್ಚರಿತ್ರಮಂ ಪೇೞ್ದೊಡೆಯಾತಂ ರಾಜಹಂಸನ ಮಿತ್ರಪುತ್ರನೀತನನಾತಂಗೆ ಕೊಟ್ಟುಬಾಯೆಂದು ಕಳುಪಲಾತಂ ಬಂದು ಮಾಗಧಂಗೆ ಕೊಟ್ಟು ತದಾಶ್ಚರ್ಯಮಂ ಪೇೞ್ದೊಡರಸಂ ಸಂತಸಂಬಟ್ಟು ಪ್ರಹಾರವರ್ಮನ ದೆಸೆಗೆ ಸುಯ್ದು ಕುಮಾರಂಗುಪಹಾರವರ್ಮನೆಂದು ಪೆಸರಿಟ್ಟು ವಸುಮತಿಯ ಕೈಯೊಳ್ ಕೊಟ್ಟು ದಶದಿಙ್ಮಂಡಲದಿಂ ಪ್ರಸಿದ್ಧಿವಡೆದಿರ್ದಂತೆ ದಶಕುಮಾರರಂ ಪಡೆಯೆ

ಖಗಭೂಪರ್ ಸಲೆ ದಕ್ಷಯಾಗದೊದವಿಂ ಭಂಗಕ್ಕೆ ಪಕ್ಕಾಗಲಿಂ |
ಬೊಗೆದಿರ್ದರ್ ದಶಸೂರ್ಯರೆಂಬ ತೆಱದಿಂ ಪದ್ಮಾನುರಾಗಪ್ರಭೂ ॥
ತಗುಣಂ ವಿಶ್ರುತದೇಹದೀಪ್ತಿ ಪರರಾಜದ್ವೇಷಮೊಪ್ಪಲ್ ಪ್ರತಾ |
ಪಿಗಳೇಂ ಪೆಂಪೆಸೆದಿರ್ದರೋ ದಶಕುಮಾರರ್ ಕೌತುಕಪ್ರೇಮದಿಂ ॥ ೧೪೦

ಅಂತು ದಶಕುಮಾರರ್ ರಾಜವಾಹನ, ಪ್ರಮತಿ, ಮಿತ್ರಗುಪ್ತ, ಮಂತ್ರಗುಪ್ತ, ಸುಶ್ರುತ, ಪುಷ್ಪೋದ್ಭವ, ಅರ್ಥಪಾಲ, ಸೋಮದತ್ತ, ಪ್ರಹಾರವರ್ಮ, ಉಪಹಾರವರ್ಮರ್. ಅಂತಿರ್ದ ದಶಕುಮಾರರಂ ಭೃಂಗಿ ಭೇತಾಳ ವೈತಾಳಿ ಮಾರುಜರಿಯೆಂಬ ಶಸ್ತ್ರವಿದ್ಯೆಯೊಳಂ ಸಮಪಾದ ವೈಷಮ ಮಂಡಲಾಲೀಢ ಪ್ರತ್ಯಾಲೀಢ ಮೆಂಬ ಧನುರ್ವಿದ್ಯೆಯೊಳಂ, ಚತುರಶೀತಿಪದವಿಧಾನವಾದ ಗಜಶಿಕ್ಷೆಯೊಳಂ, ಪಂಚಧಾರಾಸಂಚಿತಮಾದಶ್ವಾರೋಹಣದೊಳಂ, ಸ್ವರ್ಣನಾಭ ಚಿತ್ರಕವಾತ್ಸ್ಯಾಯನವಿರಚಿತಕಾಮಶಾಸ್ತ್ರದೊಳಂ, ಶಬ್ದಾರ್ಥಾಲಂಕಾರವ್ಯಾಕರಣಚ್ಛಂದೋವಿಲಾಸಮೆಸೆವ ಶಬ್ದಶಾಸ್ತ್ರದೊಳಂ, ಮತ್ತಮನೇಕನೀತಿಶಾಸ್ತ್ರದೊಳಂ, ಪ್ರವೀಣರಪ್ಪಂತು ಮಾಡಿ ರಾಜಹಂಸಂ ಸುಖದೊಳಿರ್ದಂ. ಅದೆಂತೆನೆ —

ಸುಲಲಿತಮಪ್ಪಿನಂ ದಶಕುಮಾರಕರೊಪ್ಪುವ ಬಾಲಲೀಲೆಯಂ ।
ನಲವಿನೊಳಾವಗಂ ಪದೆದು ಭಾವಿಸಿ ತನ್ನಯ ಚಿತ್ತದುತ್ಸವಂ ॥
ಫಲಭರಮಾಗಿ ಚೆಲ್ವೆಸೆಯಲಿಂದ್ರಿಯಪಕ್ಷಕುಲಂ ನಿರಂತರಂ ।
ಚಲಿಸದೆ ರಂಜಿಸಿದ-ನಿಳೆಯೊಳ್ ನಿಜವಾಗಲಭಂಗವಿಕ್ರಮಂ ॥ ೧೪೧

॥ ಗದ್ಯಂ ॥

ಇದು ನಿಖಿಲಬುಧಜನಮನೋವನಜವನದಿವಾಕರಕಿರಣಪ್ರತಿಮಪ್ರಸನ್ನ
ಶ್ರೀಮದಭಂಗನಿಟಿಲಪದಾಂಭೋಜಮತ್ತಮಧುಕರ
ಮಧುಸೂದನನಂದನ ಸರಸಕವಿ ಚೌಂಡರಾಜ ವಿರಚಿತಮಪ್ಪ

ಅಭಿನವ ದಶಕುಮಾರಚರಿತೆಯೊಳ್

ಮಗಧೇಶ್ವರ ಮಾಳವರಾಜ ಯುದ್ಧವರ್ಣನಂ,
ದಶಕುಮಾರೋದಯವರ್ಣನಂ, ವಿದ್ಯಾಭ್ಯಾಸವರ್ಣನಂ,
ದ್ವಿತೀಯಾಶ್ವಾಸಂ.

॥ ತೃತೀಯಾಶ್ವಾಸಂ ॥

ಶ್ರೀಮನ್ಮಗಧಮಹೀರತಿ ।
ಕಾಮಂ ರಿಪುರಾಜಮೌಳಿಮಾಣಿಕ್ಯರುಚಿ ॥
ಸ್ತೋಮಾಂಘ್ರಿದ್ವಿತಯಂ ನಿ ।
ಸ್ಸೀಮದಿನೊಪ್ಪಿದನಭಂಗವಿಟ್ಠಲಭೃತ್ಯಂ ॥ ೧

ಅದಲ್ಲದೆಯುಂ

ಸುತಸೇವಾಯಾತವೀರಾದ್ಭುತರಸಜಲದೊಳ್ ಚಾಮರಗ್ರಾಹಿಣೀಪ ।
ಸ್ತುತರಂಗಶ್ರೇಣಿಯೊಳ್ ಪಾತಕಜಯಜಯಕೋಲಾಹಳಧ್ವಾನದೊಳ್ ಸ ॥
ನ್ನುತನಾನಾಭೂಪಮೌಳಿವ್ರಜಸರಸಿಜದೊಳ್ ಬಂಧುಸಂದೋಹಗಂಭೀ ।
ರತೆಯೊಳ್ ಸೌಭಾಗ್ಯಶೋಭಾಪುಳಿನದೊಳೆಸೆದಂ ರಾಗದಿಂ ರಾಜಹಂಸಂ ॥ ೨

ಅಂತು ಸಕಲರಾಜಲೋಕಂಬೆರಸೊಡ್ಡೋಲಗಂಗೊಟ್ಟಿರ್ದ

ಸಮುಚಿತಯೌವನೇಭಮದಲೇಖೆಯೊ ಯೌವನಪುಷ್ಪಭೃಂಗಕಾ ।
ಳಿಮಸ್ರೋ ವಿಲಾಸಯೌವನಸುಧಾಕರಲಕ್ಷ್ಮಿಯೊ ಪೇಳೆನಲ್ ಕರಂ ॥
ವಿಮಳಮುಖಾಬ್ಜದೊಳ್ ಮೊಳೆವ ತುಪ್ಪುಳಿ ನಾಸೆಯೊಳೊಪ್ಪುತಿರ್ಪ ವಿ।
ಕ್ರಮಯುತನಂ ನಿಜಾತ್ಮಸುತನಂ ಪದೆದೀಕ್ಷಿಸಿದಂ ನೃಪಾಲಕಂ ॥ ೩

ಅಂತರಸಂ ಕುಮಾರನಂ ನೋಡಿ ಯುವರಾಜಪಟ್ಟಕ್ಕೆ ಕಾಲಮಾದುದೆಂದು ಮನದೊಳ್ ಭಾವಿಸಿ ಮಂತ್ರಿಗಳ್ವೆರಸು ಶುಭದಿನಶುಭಮುಹೂರ್ತದೊಳ್

ಕಂದರ್ಪಂಗೆದಲೇಳೆ ಮಂದಪವನಂ ಸಂತೋಷಮಂ ಪೇಳೆ ಮಾ ।
ಕಂದಂ ಪೂಗುಡಿದೋಳೆ ಸಂತತವಸಂತಂ ಸೌಖ್ಯಮಂ ಬೀಳೆ ಸಾ ॥
ನಂದಂ ಮಂತ್ರಿಗಳಪ್ಪುದಾಯ್ತೆನೆ ಕುಮಾರಂಗಾರ್ಪಿನಿಂ ತನ್ನ ಪೆಂ ।
ಪಿಂದಾರ್ಯರ್ಗಂ ಯುವರಾಜಪಟ್ಟಮನಲಂಪಿಂ ಕಟ್ಟಿದಂ ಭೂಭುಜಂ ॥ ೪

ಅಂತು ರಾಜಹಂಸಂ ರಾಜವಾಹನಂಗೆ ಯುವರಾಜಪಟ್ಟಮಂ ಕಟ್ಟಿ ದಶಕುಮಾರರಂ ದಿಗ್ವಿಜಯಕ್ಕೆ ಕಳಿಪಲೆಂದು

ದಿಗಿಭಂ ಘೀಳಿಡೆ ನಾಗಲೋಕದಹಿಗಳ್ ಬೆಂಡೇಳೆ ಭೂಭಾಗದೊಳ್ ।
ಭಗಣಂ ಬೀಳೆ ಮರುತ್ತರಂಗಿಣಿ ಮಗುಳ್ ತೊಳಲ್ ತುಳುಂಕಾಡೆ ಗೋ ॥
ತ್ರಗಿರಿವ್ರಾತಮಳುಂಕೆಗೆಟ್ಟು ನಡುಗಲ್ ಶ್ರೀರಾಜಹಂಸಾಜ್ಞೆಯಿಂ ।
ದೊಗೆವತ್ತಂದು ಸುವರ್ಣಕೋಣಹತಿಯಿಂ ಪ್ರಸ್ಥಾನಭೇರೀರವಂ ॥ ೫

ಅಂತು ಪ್ರಯಾಣಭೇರಿಯಂ ಪೊಯಿಸಿ,

ಗುಡಿ ಗೂಡಾರಂ ಪಟಂ ಕೊಟ್ಟಗೆ ಪೆಗಲ್*ವೊಱೆ ಪೆರ್ಬಂಡಿಗಳ್ ಪೆಂಪುವೆತ್ತಂ
ಗಡಿ ನಾನಾವಸ್ತ್ರರತ್ನಾಭರಣವಿತತಿ ವೈದ್ಯರ್ ಪೊಲಂ ಬಲ್ಲವರ್ಗಳ್ ॥
ಬಿಡುದಾಣಕ್ಕಾಪ್ತವರ್ಗಂ ಸಹಿತಮನಿಪನುಂ ಸೇನೆಯಂ ಕೊಟ್ಟು ತೇಜಂ ।
ಬಡೆಯಲ್ ತತ್ಪುತ್ರರಂ ದಿಗ್ವಿಜಯಮನೆಸಗಲ್ ಕೂರ್ತು ಬೀಳ್ಕೊಟ್ಟನಾಗಳ್

ಮತ್ತಂ

ಕರಿತುರಗರಥಪದಾತಿಯ ।
ನರಸಂ ನಲವಿಂ ಕುಮಾರಕರ್ಗಿತ್ತು ಬಿಸಾಂ ॥
ತರಸಂ ಜಯಿಸಿಮೆನುತ್ತಾ ।
ದರದಿಂ ಬೀಳ್ಕೊಟ್ಟನಾರ್ಪಿನಿಂ ಶುಭದಿನದೊಳ್ ॥ ೬

ಅಂತು ಬೀಳ್ಕೊಡಲ್ ದಶಕುಮಾರರನೇಕಸೇನಾಸಮನ್ವಿತರ್ ಶುಭಶಕುನದಿಂ ಪೊಱಮಟ್ಟು ಬರ್ಪಾಗಳ್

ಇದು ದಲ್ ದಿಗ್ವಿಜಯಕ್ಕುಪಕ್ರಮಮೆನಲ್ ಸೇನಾಪದೋದ್ಧೂತಧೂ ।
ಳಿ ದಿನಾಧೀಶ್ವರರಾಜಮಂಡಲಮನಾರ್ಪಿಂ ಮುತ್ತಿ ಬೆಂಕೊಂಡು ನೀ ॥
ರದಮಾರ್ಗಕ್ಕೆರಬೆತ್ತಿ ಧೂಳಿಸುಯಮಾಗಲ್ ಮಾಡಿ ಬಲ್ಪಿಂ ವಿಯ ।
ನ್ನದಿಯಂ ಪೊಲ್ದುಱೆ ಸತ್ಯಲೋಕದೊಪವಂ ಮಾಱಿತ್ತುಗುರ್ಬಪ್ಪಿನಂ ॥

ಸುರಪತಿ ಬೆಚ್ಚಲಗ್ನಿ ಸೆಡೆಯಲ್ ಯಮನಳ್ಕಿರಲುಗ್ರರಾಕ್ಷಸಂ ।
ದೊರೆಗಿಡಲಬ್ಧಿಪಂ ಬೆದಱಲೇಣಧರಂ ನಡೆಗುಂದಲೆಯ್ದೆ ಕಿ ॥
ನ್ನರಪತಿ ಬಳ್ಕಲೀಶನತಿಭೀತಿಮೊಳೊಂದಿರೆ ದಿಗ್ಗಜಕ್ಕೆ ಭೀ ।
ಕರಮೆನೆ ರಾಜವಾಹನನೃಪಂ ನಡೆಗೊಂಡತೆಯೊಳ್ ನಿರಂತರಂ ॥ ೭

ಪಟುಭಟಪದೋತ್ಥಧೂಳಿ ।
ಪಟಳಂ ಕವಿದಂಧಕಾರಮುಂ ಪುಟ್ಟಿಸೆ ವಿ ॥
ಸ್ಫುಟಮಕುಟರತ್ನರುಚಿಯಿಂ ।
ಕಟಕಂ ನಡೆಗೊಂಡುದಖಿಳಧಾತ್ರೀಪತಿಯಾ ॥ ೧೦

ಅಂತು ನಡೆಗೊಂಡು ತನ್ನ ರಾಜ್ಯಮುಂ ಕಳೆದು ಹೇಮಕೂಟದ ತಪ್ಪಲ ಮಧ್ಯಸ್ಥಾನದೊಳ್ ಬೀಡಂಬಿಟ್ಟಿರ್ದು ಲಗಂಗೊಟ್ಟು ಕುಳ್ಳಿರ್ದಾಗಳ್

ನೊಸಲೊಳಗಿಟ್ಟ ಚೆಲ್ವ ತಿಲಕಂ ಪಿಡಿದಗ್ಗದ ಸೇಡುಗೋಲ್ ವಿಲಂ ।
ಬಿಸುವುಪವೀತಮೆತ್ತಿ ಬಿಱುಗಾಯದ ಪೋರೆಯೆಬಿಲ್ವ ಧೋತ್ರಮೋ ॥
ಱಸಿವೆಡಗೈಯ ಬಿಲ್ ಬೆರಳ ದರ್ಭೆ ಮಹಾದ್ಭುತಮಂ ಮನಕ್ಕೆ ಸೂ ।
ಚಿಸಲತಿಸಂಭ್ರಮಂ ಬೆರಸು ಬಂದನದೊರ್ವಸಮುಂ ದ್ವಿಜಾಧಮಂ ॥ ೧೧

ಅಂತೊರ್ವ ಬ್ರಾಹ್ಮಣಂ ಬಂದು ಮಂತ್ರವಿಲ್ಲದಕ್ಷತೆಯುಂ ಕೊಟ್ಟೊಡೆ—ಇದೇನ್ಯೆ ವಿಪರೀತವೇಷಮೆಂದಾತನಂ ರಾಜವಾಹನಂ ಕೇಳ್ವುದುಮಾತನಿಂತೆಂದಂ:—

ಅಜುನೀರ್ವಗ್ಗಂ ನೆಟಿಲ್ಗುಂಬಿದ ತರುನಿಚಯಮುಂ ಧೂಳಿಡರ್ದುರ್ಬಿ ನಿಚ್ಚಂ ।
ಪಱಿಗೆಟ್ಟೆರ್ಪಸೆ ನಿಶ್ಶೇಷ್ಟೆಯ ತನುವನಿಶಂ ಬೋಧನಾಧ್ಯಾನವೇನುಂ ॥
ಮಱಿದುಂ ಮಾಡಲ್ಕನಂ ಬಾರದ ಬಗೆ ಮಿಗೆ ಸಪ್ರೋರ್ವಿಯೊಳ್ ಕೂಡೆ ನೊಡಲ್ । ಬಟನಾಗಲ್ ಪಾರ್ವರಾಗಲ್ ಕೆಲಬರೊಲವರಣ್ಯಕ್ಕೆ ಪಕ್ಕಾಗಿ ಬಂದರ್ ॥ ೧೨

ಅಂತು ಬಱಿನಱಿಯುಟ್ಟ ಕಂದಮೂಲಫಲಂಗಳಂ ಮೆಲ್ದು ಜೀವಿಪೆವೆಂದು ಕೆಲಂಬರ್ ಬ್ರಾಹ್ಮಣರೊಡಗೂಡಿ ಶಿಶುವಾಗಿರ್ದೆನ್ನನೆತ್ತಿ ಕೊಂಡೆಮ್ಮ ತಾಯ್ತಂದೆಗಳರಣ್ಯಕ್ಕೆ ಬಂದು

ಮಾತಂಗವೈರಿಸತ್ವಂ ।
ಮಾತಂಗಕನೆಂಬನಿರ್ಪ ನಾವನದೊಳ್ ಮ ॥
ತ್ತಾತನ ಪೆಸರಿಟ್ಟಂ ಮ ।
ತ್ತಾತಂ ಪೊರೆದೆನ್ನನೊಲ್ದು ನರಪತಿತನಯಾ ॥ ೧೩

ಅಂತು ಪೆಸರಿಡಲಾಪಮಾತಂಗಕನೆಮ್ಮೆಲ್ಲರ್ಗಮ್ಪ ಜೀವನೋಪಾಯಮುಮಂ ಮಾಡುತಿರ್ಪನ್ನಂ ಕೆಲವುದಿನದಿಂ ಮೇಲೆ

ಜನಕಂ ಮಾತೆ ಸಹೋದರರ್ ಕುಲಜರಾಪ್ತರ್ ಬಂಧುಗಳ್ ಸಂತತಂ ।
ವನವಾಸವ್ಯಥೆಯಿಂದವರ್ ಮಡಿದರಾನೀಬೇಡರೊಳ್ ಕೂಡಿ ಕಾ ॥
ನನದೊಳ್ ಬೇಂಟೆಯನಾಡಿ ಕಳ್ದುಣಿದು ದುಷ್ಕರ್ಮಕ್ಕೆ ಪಕ್ಕಾದ ಜೀ ।
ವನದಿಂದಿರ್ಪೆನುವರ್ರಾಧಿಪತಿ ಕೇಳ್ ಸಂಸರ್ಗಮೇಗೆಯ್ಯದೋ ॥ ೧೪

ಎಂದಾದ್ವಿಜಾಧಮಂ ಪೇಳ್ದೊಡೆ ಮತ್ತಮರಸನನಿತುಂ ಗಾಯದ ಕಲೆಗೆ ಕಾರಣಮೇನೆಂದು ಕೇಳಲಾತನಿಂತೆಂದಂ:—

ನೆರೆದಿರ್ದ ಪುರವನಿಱಿಯಲ್ ।
ಕಿರಾತತತಿ ಪೋಪ ಪದದೊಳಿದಿರೊಳ್ ಪಾರ್ವಂ ॥
ಬರುತಿರ್ದನೊರ್ಬನಾತನ ।
ನರವರಿಸದೆ ಕೊಲ್ವೆವೆಂದು ಮುತ್ತಿದ ಪದದೊಳ್ ॥ ೧೫

ಗೋವಿಂಗಂ ಪಾರ್ವಂಗಂ ।
ಸಾವಡಸಲ್ ತನ್ನ ಜೀವದಾಸೆಯನುೞಿದೊ ॥
ಲ್ದಾವಂ ಕಾಪಪನಾತಂ ।
ಕೈವಲ್ಯಾಂಗನೆಯ ಕಾಂತನಪ್ಪನಮೋಘಂ ॥ ೧೬

ಎಂಬುದಂ ಕೇಳ್ದಱಿವೆನಪ್ಪುದಱಿಂದಾತನಂ ಕೊಲಲೀಸದೆ ಮೇಲೆ ಬಿದ್ದೊರ್ಡಾತನಂ ಬಿಟ್ಟೆನ್ನನಿಱಿಯಲಾಂ ಗತಜೀವಿತನಾಗೆ

ಸಲೆ ಕಾಯ್ದುರ್ಕಿನ ದಾರೆಯುಂ ಬಿಡು ನವದ್ವಾರಂಗಳೊಳ್ ಕಾಯ್ದು ಕಾ ।
ವಲಿಯೊಳ್ ಕುಳ್ಳಿರಿಸೊಯ್ದು ಬಾಲವುಱುತ್ತಂ ಕೀವಾಗಿ ತೀವಿರ್ದ ಸೀಂ ॥
ಬುೞುವಂ ಬಾಯ್ಗೆಱೆ ನೂಂಕು ಪಾಕುಳದೊಳೇೞಲ್ದೋಱು ಶಸ್ತ್ರಾ
ಸ್ತ್ರದು । ಯ್ಯಲೆಯುಂ ಕೊಯ್ ಕೊಱೆಯೆಂಬ ಕಾಲಯುವನಂ ಕಂಡೆಂ
ಧರಾಧೀಶ್ವರಾ ॥ ೧೭

ಪಂಚಮಹಾಪಾತಕಿಯುಂ ।
ವಂಚಕನಂ ನುಡಿದು ಪ್ರಸಿವನಂ ಸಂಗರದೊಳ್ ॥

ಪೆಂಚುವನಂ ಪುಟಿಗೊಂಡವ ।
ಸಂಚದೊಳಕ್ಕಾವ ಕಾಲನೋಟದ ತೆಱದಿಂ ॥ ೧೮

ಎಂಬ ಘೋರಮುಖನಪ್ಪ ಕಾಲನ ಸಮೀಪಕ್ಕಾಂ ಪೋಗಲಾತನೆನ್ನಂ ನೋಡಿ —

ಈತಂ ಬ್ರಾಹ್ಮಣನಂ ಕಾ ।
ದಾತಂ ಕೃತಕೃತ್ಯನೀತನಂ ತಂದವರಾರ್ ॥
ಭೂತಳಕೆ ಪೋಗೆನುತ್ತುಂ ।
ಪ್ರೇತೇಶಂ ಮಗುಳ್ದು* ಕಳುಪಿದಂ ಪದೆದೆನ್ನಂ ॥ ೧೯

ಅಂತಾಯುಮನೆನ್ನಂ ಕಳುಪಲಾಂ ಬರ್ಪಾಗಳ್ ಮುಂದೆ ನಾಂ ಕಾದ ಬ್ರಾಹ್ಮಣನೆನ್ನ ಕಳೇವರಮಂ ಸಂಸ್ಕರಿಸಲೆಂದಿರ್ಪಾಗಳ್

ಗಣನೆಗರಿದೆನಿಪ ದುಷ್ಕೃತ ।
ಗಣಮಂ ಪರಿಹರಿಸುವಿಷ್ಟದೈವಕ್ಕೆ ಸಲ ॥
ಕ್ಷಣಭಜನೆಯೆಸೆಯೆ ದಂಡ ।
ಪ್ರಣುತಂ ತಾನಾದನೇಳ್ವ ತೆಱದಿಂದೆಳ್ದಂ ॥ ೨೦

ಅಂತಾನೆೞ್ದುದಂ ಕಂಡಾಬ್ರಾಹ್ಮಣಂ ತನಗೆ ಪ್ರಾಣಮಿರ್ಮಡಿಸಿದಂತೆ ಸಂತಸಂಬಟ್ಟಾತನೆನ್ನಂ ಮನೆಗೆ ಕೊಂಡೊಯ್ದು ಶಸ್ತ್ರಹತಿವ್ರಣಮಂ ಮಾಣಿಸೆ ಬೞಿಕ್ಕೆ ನಾಂ ಪೋಪಪೆನೆನೆ ಮತ್ತಂ ಕಿಱಿದು ದಿನಮಿರಿಸಿಯಾತನಿಂ ಮಂತ್ರೋಪದೇಶಮಂ ಕೈಕೊಂಡು ಆತನಂ ಕಳುಪಿ ಬೞಿಕ್ಕೆನಗೆ ವೈರಾಗ್ಯಂ ಪುಟ್ಟಲೀಹೇಮಕೂಟಪ್ರದೇಶಕ್ಕೆ ತಪಂಬಡಲ್ ಬಂದಿರ್ದಪೆಂ. ಇನ್ನೇಕಾಂತದೊಳೊಂದು ಕಾರ್ಯಮಂ ಪೇೞ್ದಪೆನೆನಲರಸಂ ವಿಸ್ಮಯಂಬಟ್ಟು ಏಕಾಂತಮಂ ಬೞಿಕ ಪೇೞೆಂದಾತನಂ ಕಳುಪೆ

ದಿನಯಾತ್ರಾನಿಗಮಕ್ರಮಕ್ಕೆ ವಿಷಮಂ ಸಪ್ತಾಶ್ವಮಿನ್ನೊಂದು ವಾ ।
ಹನಮಂ ತಂದು ಸಮಂ ತುರಂಗಮೆನಿಪಂತಾಂ ಮಾಳ್ಪೆನೆಂಬೊಂದು ಭಾ ॥
ವನೆಯಿಂದುತ್ಸವರಾಗಮಂ ತಳೆದು ಸೂರ್ಯಂ ಪಶ್ಚಿಮಾಂಭೋಧಿಯಂ ।
ಮನವೊಲ್ದೆಯ್ದಿದನೆಂದು ಬಣ್ಣಿಸೆ ಜಗಂ ಚೆಲ್ವಾಯ್ತು ಸಂಧ್ಯಾಗಮಂ ॥ ೨೧

ಮಾಣಿಕ್ಯ ವಾರ್ಧಿಯೊಳೊಪ್ಪುವ ।
ಬಾಡಬಶಿಖಿ ಪಶ್ಚಿಮಾಬ್ಧಿಯೌರ್ವಾನಳನಂ ॥
ನೋಡಲ್ ಬರ್ಪಂತಿರ್ದುದು ।
ನೀಡುಂ ಕೆಂಪಡರ್ದು* ಸಂಜೆಯೊಳ್ ರವಿಬಿಂಬಂ ॥ ೨೧

ಅಂತು ಸಂಧ್ಯಾಕಾಲದೊಳೋಲಗವಂ ವಿಸರ್ಜಿಸಿ ಸಂಧ್ಯಾವಂದನಾದಿ ಕ್ರಿಯೆಗಳಂ ಮಾಡಿ ಕುಳ್ಳಿರ್ದು ದೌವಾರಿಕನಂ ನೋಡಿ ಏಕಾಂತಮಂ ಬೇಳ್ಪೆನೆಂದ ಬ್ರಾಹ್ಮಣನಂ ಕರೆಯೆನಲವನಾತನಂ ಕರೆವುದುಂ

ಮೆಯ್ಯೊ ಕೃತಪ್ರಣ್ಯವೆನುತೆನು ।
ತೊಯ್ವನೆ ಪದವಿ ಡುತೆ ಬಂದು ನೃಪತಿಗೆ ನಲವಿಂ
ಕೈಯೆತ್ತಿ ಪರಸಿ ನಿನಗೀ ।
ಗೆಯ್ವಲ್ಪೇಳ್ಕೆಂದೊಡರಸ ಚಿತ್ತವಿಸೆಂದಂ ॥ ೨೨

ಅಂತರಸಂಗಾಬ್ರಾಹ್ಮಣನಿಂತೆಂದಂ:—

ಸಕಲಾಭರಣಾನ್ವಿತೆ ಕ ।
ನ್ನಿಕೆಯೊರ್ಬಳ್ ನನ್ನ ಬಳಿಗೆ ಬಂದೆನಗೀಮಾ ॥
ಣಿಕವಂ ಕೊಟ್ಟೆನ್ನಿದಿರೊಳ್ ।
ಮುಕುಳಿತಕರಕಮಳೆಯಾಗಿ ಮತ್ತಿಂತೆಂದಳ್ ॥ ೨೩

ನಾಳೆ ಮಗಧೇಶನಣುಗನ ।
ಮಾಳೆಯುಮೀತಾವನೆಯ್ದಿ ಬಿಡುಗುಂ ತದ್ಭೂ ॥
ಪಾಳಂ ಸತ್ಕ್ರಮದಿಂ ಪಾ ।
ತಾಳಕ್ಕೆಯ್ತಂದು ನಿನಗೆ ರಾಜ್ಯಮನೀವಂ ॥ ೨೪

ಅವಲ್ಲದೆಯುಂ,

ನಿನ್ನ ಶರೀರಂ ವಂಶಂ ।
ಚೆನ್ನಾದಪ್ರದೆನಗೆ ನೀನೆ ಪತಿಯಾದಪೆ ಮ ॥
ತ್ತನ್ನಗಲೋಕಂ ನಿನಗ ।
ಕ್ಕುಂ ನೆಟ್ಟನೆ ನಂಬು ಮದ್ವಚೋವೃತ್ತಕಮಂ ॥ ೨೫

ಎಂದಾ ಕನ್ಯಕೆ ಪೇೞ್ದೊಡೆನ್ನ ಶರೀರಂ ವಂಶಂ ಪೊಸತಪ್ಪವೋಯುಂ ನಾಗಲೋಕದ ರಾಜ್ಯಮಪ್ಪ ಕ್ರಮಂ ನಿನಗಮೆನಗಂ ಸಂಗಮಮಪ್ಪನುವೇತಱಿಂದಪ್ಪುದೆಂದಾಂ ಕೇಳಲ್ ಮಗುಳಿಂತೆಂದಳ್—

ಈಗುಹೆಯೊಳ್ ಮಹಾಗ್ನಿತ್ರಿತಯಂ ನೆಲಸಿರ್ದಪುದಲ್ಲಿ ಮಂತ್ರನಾ ।
ನಾಗಮುಮಿರ್ದ ಪುಸ್ತಕಮುಮುಂಟದಱಾದಿಯ ಮಂತ್ರಜಾಪ್ಯದಿಂ ॥
ಬೇಗದೊಳಗ್ನಿಯಂ ಪುಗು ಮಗುಳ್ದು ತದುರ್ವಿಪನೊಂದು ಮಂತ್ರಸಂ ।
ಯೋಗದೊಳೆತ್ತುವಂ ನಿಜಶರೀರಮನಿಂತಿದಮೋಘವಾಚಕಂ ॥ ೨೭

ಅಂತು ನಿನ್ನ ಶರೀರಂ ಪೊಸತಾಗೆ ತತ್ಕುಮಾರಂ ತನ್ಮಾರ್ಗದೊಳೆ ನಿನಗೀವನೆಂದವಳ್ ಪೇೞ್ದೊಡವಂ ನೀನಱಿನಂದಮೆಂತೆಂದೊಡೆ ಅವಳ್ ಮಗುಳ್ದಿಂತೆಂದಳ್—

ಇನಿತಂ ಮದೀಯಪಿತನೊ ।
ಲ್ದೆನಗಱಿಪಿ ತಪಕ್ಕೆ ಪೋದನಾನೀಹದನಂ ॥
ನಿನಗಱಿಪಿದೆನೆಂದು ತವಂ ।
ಗನೆ ಪೋದಳ್ ಬೞಿಕ ನಾಗಲೋಕಕ್ಕರಸಾ ॥ ೨೮

ಅಂತವಳ್ ಪೋದಳ್. ಅವಳ್ ಪೇೞ್ದ ತೆಱದಿಂ ಬೇವರ್ ಬಿಜಯಂಗೆಯ್ದರ್. ಮೇಲಪ್ಪ ಕಾರ್ಯಮಂ ನೀವೆ ಬಲ್ಲಿರೆಂದು ಬ್ರಾಹ್ಮಣಂ ಪೇೞ್ದೊಡರಸನದಂ ಮನದೆಗೊಂಡು

ಎನ್ನಿಂ ಸಜ್ಜನ್ಮವೆನ್ನಿಂ ಮದನಸಮಶರೀರಂ ಲಸತ್ಪ್ರಾಯಮೆನ್ನಿಂ ।
ದೆನ್ನಿಂದುದ್ವಾಹಮೆನ್ನಿಂ ಭುಜಗಭುವನನಾಥತ್ವಮಾಯ್ತೆಂಬ ಪೋಲ್ ಮಾ
ಪ್ಪೆನ್ನಿಸ್ಸಂದೇಹಮೀತಂಗಿನಿತು ಘನಯಶೋಲಾಭಮುತ್ಕೀರ್ಣಧರ್ಮಂ ।
ತನ್ನಿಂ ತಾನೆೞ್ತರಲ್ ನೋಂಕುವರೊಳರೆ ಎನುತ್ತು ಬೆರ್ದಂ ರಾಜಪುತ್ರಂ ॥

ಅದಲ್ಲದೆಯುಂ,

ಮಾನವಜನ್ಮದೊಳ್ ಜನಿಸಿ ನಿತ್ಯಮನಿಂದ್ಯಪರೋಪಕಾರಮಂ ।
ದಾನಮುನರ್ಥಪಾಲನೆಯುಮಂ ಮಿಗಲ್ ಮಿಗೆ ಮಾಡದಿರ್ದವಂ ॥
ಮಾನವನಲ್ತವಂ ತೊವಲ ಬೊಂಬೆ ತೆರಳ್ದದ ಲೆಪ್ಪದಸ್ತೆಡು ।
ಸ್ಸ್ಥಾನದ ಹುಲ್ಲ ಹಾಹೆ ಪಟಗೋಡೆಯ ಚಿತ್ರಮೆನಲ್ಕೆ ಸಾಲದೇ ॥ ೩೦

ತರುಲತೆಗಳಖಿಲಸ್ರಷ್ಟ್ರಂ ।
ಪರೋಪಕಾರಕ್ಕೆ ಸಲ್ವುದಂ ಕಂಡು ನರರ್ ॥
ಪರಹಿತಮನೆಸಗದಿರ್ದೊಡೆ ।
ಮರದಿಂದತಿಕಷ್ಟರಲ್ತೆ ಧರಣೀತಳದೊಳ್ ॥ ೩೦

ಪಾತಾಳಲೋಕವಿಜಯಂ ।
ಮಾತಂಗಕನಿಷ್ಟಸಿದ್ಧಿಯಿಾಯೆರಡುಂ ಮ ॥
ತ್ಪ್ರೀತಿಸಕಲಾವನೀಪ ।
ಖ್ಯಾತಿಯೆನುತ್ತಮಸಿಪಾಲತನಯಂ ನಲಿವಂ ॥ ೩೧

ಅನ್ನೆಗಂ

ಪದೆಪಿಂದಂಬರಲಕ್ಷ್ಮಿ ಕ್ರಯೆಚ್ಚಿಕೊಳಲೆಂದೌತ್ಸುಕ್ಯದಿಂ ಕಜ್ಜಳಂ ।
ಪ್ರದಿವೆಪ್ಪಿರ್ದ ಕರಂಡಮಂ ತೆಗೆದು ತನ್ನುತ್ಸಾಹದಿಂ ಮುಚ್ಚುಳಂ ॥
ಮುದದಿಂದಂ ತೆಗೆಯುತ್ತುಮಿರ್ಪ ಪದದೊಳ್ ಕೈತಪ್ಪಿ ಬಿಟ್ಟಿಂಜನಂ ।
ಕೆದಱಿತ್ತೆಂಬಿನಮುರ್ಬಿ ಮರ್ಬು ಪರಿವತ್ತೆತ್ತಂ ದಿಶಾಭಿತ್ತಿಯೊಳ್ ॥ ೩೨

ಅಂತು ಪರ್ಬಿದ ಕತ್ತಲೆಯೊಳ್

ಸೋವರರಂ ವಂಚಿಸಿ ಸ ।
ತ್ಪ್ರೋದಯದಿಂ ನಿರ್ವಿಚಾರದಿಂ ಪರಚಿತ್ತಾ ॥
ಹ್ಲಾದಮನೆಸಗಲ್ ನೃಪಸುತ ।
ನಾವರದಿಂದಾಯುಧಾನ್ವಿತಂ ಪೊಱಮಟ್ಟಂ ॥ ೩೩

ಅಂತು ಪೊಱಮಟ್ಟಾಬ್ರಾಹ್ಮಣಂ ಪೇೞ್ದ ಮಹಾಗುಹಾದ್ವಾರಕ್ಕೆ ಬಂದು

ಧಾತ್ರೀತಳಪತಿ ಕಡುಪಿಂ ।
ರಾತ್ರಿಯೊಳಾಬ್ರಾಹ್ಮಣಾನ್ವಿತಂ ಗುಹೆಯಂ ಪೊ ॥
ಕ್ಕಾತ್ರೇತಾಗ್ನಿಯ ಕುಂಡದ ।
ಮತ್ರಂಗಳ್ಗೆಱಗಿ ಪುಸ್ತಕಮನೀಕ್ಷಿಸಿದಂ ॥ ೩೪

ಅಂತು ಗುಹೆಯೊಳಿರ್ದಗ್ನಿಯುಂ ಕೆಲದ ಪುಸ್ತಕಮಂ ಕಂಡು ಮಾತಂಗಕನಂ ನೋಡಿ ನೀಂ ಕನ್ಯಾಸೂಚಿತಮಪ್ಪ ಕಾರ್ಯಮನುದ್ಯೋಗಿಸೆನೆ

ಮನಸಿಜನ ರೂಪು ನಿಜಯುತಿ ।
ವನದೇವಿಗೆ ವಿವಾಹಸಿದ್ಧಿ ರಾಜ್ಯದ ಲಾಭಂ ॥
ತನಗಪ್ಪುದೆಂಬ ಹರ್ಷದೊ ।
ಳನುಮಾನಿಸದಗ್ನಿಯಲ್ಲಿ ಭೋಂಕನೆ ಬಿೞ್ದಂ ॥ ೩೬

ಮಾತಂಗಕದ್ವಿಜಂ ಕ ।
ನ್ಯಾತತ್ವಮೆನಿಪ್ಪ ಮಂತ್ರದಿಂದುರಿಯುಂ ನಿ ॥
ರ್ಭೀತಿಯಿನಪ್ಪಲ್ ಕಿಚ್ಚಿಂ ।
ದಾತನು ಭಸ್ಮಾವಶೇಷನಾದನಾಗಳ್ ॥ ೩೭

ಅದನರಸಂ ಕಂಡು ವಿಸ್ಮಯಸ್ವಾಂತನಾಗಿ ತತ್ಪುಸ್ತಕದೊಳಿರ್ದ ಮಂತ್ರಮಂ ನೋಡಿ

ಮೃತಸಂಜೀವನಮಂತ್ರದಿಂ ನೃಪಸುತಂ ದಿವ್ಯಾಂಬುವಂ ಮಂತ್ರಿಸು ।
ತ್ತತಿಶೀಘ್ರಂ ಮಿಗಲಗ್ನಿಯೊಳ್ ತಳಿಯೆ ನಿದ್ರಾಸಕ್ತನಾಗಿರ್ದವಂ ॥
ಮತಿವೆತ್ತೇಳ್ವವೊಲಂಗಸೌಷ್ಠವವಿಲಾಸಂ ಯೌವನಂ ನಿರ್ಮಲಾ ।
ಕೃತಿಯೊಪ್ಪತ್ತಿರಲಗ್ನಿಕುಂಡದೊಳಗಿಂದೆೞ್ದಂ ನಗುತ್ತಾದ್ವಿಜಂ ॥ ೩೮

ಅಂತೆೞ್ದು ಬಂದ ಮಾತಂಗಕದ್ವಿಜನನರಸಂ ತಳ್ಕೈಸಿ ಕೊಂಡು ಸಂತೈಸಿ ಪಾತಾಳಭುವನಮಾರ್ಗಮಂ ನೋಡಿ

ಪ್ರತಿಪಕ್ಷಪ್ರಚುರಾವನೀಶವಿಸಚ್ಚಾತುರ್ಬಲಪ್ರಾಣಮಾ ।
ರುತಪೀತಾಹಿ ವಿರೋಧಿಭೂಪತಿಮನೋವೇಶ್ಯಾಭುಜಂಗಂ ರಿಪು ॥
ಕ್ಷಿತಿನಾಥಾನ್ವಯಚಂದ್ರರಾಹು ಸುಖಸಂಪದ್ಯೋಗಿ ಪಾತಾಳಮಂ ।
ನುತಮಾತಂಗಕಕಂಧರಸ್ಥಿತಕರಂ ಪೊಕ್ಕಂ ಮಹೀಪಾಳಕಂ ॥ ೩೯

ಅಂತರಸಂ ಮಾತಂಗಕಸಹಿತಂ ಪಾತಾಳಭುವನಮಂ ಪೊಕ್ಕು ತನ್ನಾಗಕನ್ಯಾಭವನಮನೆಯ್ದಿ

ಮಕರಪತಾಕನಾರ್ಪ ವನಿತಾಕೃತಿವೆತ್ತುದೊ ಪೂರ್ಣಚಂದ್ರಚಂ |
ದ್ರಿಕೆ ಸತಿರೂಪನಾಂತುದೊ ವಸಂತವಿಲಾಸಮಗಣ್ಯಪುಣ್ಯಕ ||
ನ್ಯಕೆಯೆನಿಸಿರ್ದುದೋ ಸಕಲಮೋಹನವಿದ್ಯೆ ಭುಜಂಗರಾಜಬಾ |
ಲಿಕೆವೆಸರಿಂ ನೆಗೞ್ದುದೆನೆ ಕಣ್ಗೆಸೆದಿರ್ದುದು ರೂಪು ಕಾಂತೆಯಾ || ೪೦

ಪಾಱುವ ತುಂಬಿಯುಂ ಕಳಿನ ಪೂಗಣೆಯುಂ ಮುಗಿವಬ್ಜಮುಂ ತಮಂ |
ದೋಱಲಗಲ್ವ ಚಕ್ರಯುಗಮುಂ ನಸುಬಾಡುವ ಕಲ್ಪವಲ್ಲಿಯುಂ ||
ನೀಱೆಯ ಕುಂತಳಕ್ಕೆ ನಯನಕ್ಕೆ ಮುಖಕ್ಕೆ ಕುಚಕ್ಕೆ ತೋಳ್ಗೆ ಕೈ |
ಮೀಱಿ ಸಮಾನಮೆಂದೊಡುಪಮಾಪರಿಹೀನಮದಾಗದಿರ್ಪುದೇ || ೪೧

ಅಂತು ರೂಪಿಂಗಗ್ಗಳಮಾದ ನಾಗಕನ್ಯೆಯಂ ಕಂಡರಸಂ ನೀಂ ಪೇೞ್ದ ಬಾಲಕಿಯೀಕೆಯಾಗದೆ ಮಾಣಳೆಂದು ಮಾತಂಗಕನಂ ಕೇಳ್ದೊಡಾತಂ ಲಜ್ಜೆಯಿಂ ತಲೆವಾಗಿರಲದಱಿನಱಿದು ಮುನ್ನಮೆ ತಾಂ ಪೇೞ್ದಿಳಸ್ಪದಱಿಂದಾ ಕನ್ಯೆಯುಂ ಮಾತಂಗಕಂಗೆ ವಿವಾಹಮಂ ಮಾಡಿ ತದ್ರಾಜ್ಯದೊಳ್ ಪಟ್ಟಮುಂ ಕಟ್ಟಿ ಯನಂತರಂ ತನ್ಮಾತಂಗಕನಿಂದರಸಂ ಕಳುಪಿಸಿ ಕೊಳ್ವಾಗಳಾಮಾತಂಗಕನಿಂತೆಂದಂ:—

ನಿನ್ನಿಂದಾವಿರ್ಬರುಂ ಕೂಡಿದೆವಹಿಭುವನಂ ಕೈಗೆ ಸಾರ್ದತ್ತು ದೇವ |
ರ್ಗಿನ್ನೊಂದಂ ಬಿನ್ನಪಂಗೈದಪೆನೆನಿತು ಪಿಪಾಸೋದಯಂ ಕ್ಷುದ್ಭಯಂ ಕ್ಲೇ ||
ಶನ್ನಿದ್ರಾಬಾಧೆ ಪಿಂಗಿರ್ಪವು ನಿಜಮಿವಱಿಂ ಸಂತಸಂ ದಿವ್ಯಮಾಣಿ |
ಕ್ಯನ್ನೀನೇ ಭಾಜನಂ ಚಿತ್ತವಿಸೆನುತೊಲವಿಂ ರತ್ನಮುಂ ಕೊಟ್ಟನಾಗಳ್ ||

ನಾಡಾಡಿಯ ಮಾಣಿಕಮೆಂ |
ದೀಡಾಡದಿರಲೆ ಕುಮಾರ ಮನಮುತ್ಸವದಿಂ ||
ಚೂಡಾಮಣಿಯಂ ಮಾಡ್ಪುದು |
ಪಾಣಿಪದೇಳ್ವೆಱೆಯನಾಂತ ರುದ್ರನ ತೆಱದಿಂ || ೪೩

ಎಂದು ಪೇೞ್ದು ಮಾತಂಗಕಂ ತನಗೆ ನಾಗಕನ್ಯಕೆ ಕೊಟ್ಟ ಮಾಣಿಕ್ಯಮಂ ಕುಡಲದಂ ಕೈಕೊಂಡು ಆತನಿಂ ಕಳುಪಿಸಿಕೊಂಡು ರಾಜವಾಹನಂ ತಳರಲುದ್ಯುಕ್ತನಾಗಿ ಖಡ್ಗದ್ವಿತೀಯನಾಗಿ

ಉದಯದೊಳೇೞ್ಗೆವೆತ್ತ ರವಿ ವಾರಿಧಿಯಂ ಪೊಱಮಟ್ಟನೆಂಬಿನಂ ।
ಮದವದರಿಪ್ರತಾನವನಿತಾನಯನೋತ್ಪಲಚಂಡಭಾಸ್ಕರಂ ॥
ವಿದಿತಪರೋಪಕಾರನಿಧಿ ಸಾಹಸಕೇಸರಿ ಶಸ್ತ್ರಶಾಸ್ತ್ರಕೋ ।
ವಿದನಹಿಲೋಕದಿಂ ಪಡೆಪಿನಿಂ ಪೊಱಮಟ್ಟನಭಂಗವಿಕ್ರಮಂ ॥ ೪೪

॥ ಗದ್ಯಂ ॥

ಇದು ನಿಖಿಲಬುಧಜನಮನೋವನಜವನದಿವಾಕರಕಿರಣಪ್ರತಿಮಪ್ರಸನ್ನ
ಶ್ರೀಮದಭಂಗವಿಟ್ಠಲಪದಾಂಭೋಜಮತ್ತಮಧುಕರ
ಮಧುಸೂದನನಂದನ ಸರಸಕವಿ ಚಾವುಂಡರಾಯ ವಿರಚಿತಮಪ್ಪ

ಅಭಿನವ ದಶಕುಮಾರಚರಿತೆಯೊಳ್

ಮಾತಂಗಕರಾಜಮಾನಸಪಾತಾಳಲೋಕವಿಜಯಂ

ಮಾತಂಗಕನಿಷ್ಟಸಿದ್ಧಿವರ್ಣನಂ

ತೃತೀಯಾಶ್ವಾಸಂ.

॥ ಚತುರ್ಥಾಶ್ವಾಸಂ ॥

- ಪುಷ್ಪೋದ್ಭವಚರಿತಂ -

ಶ್ರೀಲೀಲಾವಸಥಂ ಪಾ ।
ತಾಲದಿನೇಕಾಕಿಯಾಗಿ ಪೊಱಮಟ್ಟು ಮಹೀ ॥
ಪಾಲಂ ಕುಳ್ಳಿರ್ದನುಪಮ ।
ಲೀಲೆಯೊಳೊಪ್ಪಿದನಭಂಗವಿಟ್ಠಲಭೃತ್ಯಂ ॥ ೧

ಅಂತು ಪೊಱಮಟ್ಟೊಂದು ಚಂದ್ರಕಾಂತಶಿಲಾತಳದೊಳ್ ಕುಳ್ಳಿರ್ದು ಮನತಿದೂರದೊಳ್

ವ್ಯಾಯಾಮಶ್ರಮದಿಂ ಸಡಿಲ್ದವಯವಂ ಸ್ವೇದಾಂಬು ತಳ್ತಂಗಮು ।
ತ್ಯಾಯಾಸವ್ಯಥೆಯಂ ನಿರೂಪಿಸುವ ವಕ್ತ್ರಾಬ್ಜಂ ಸಮುತ್ಖಾತಕಾ ॥
ಕ್ಷೇಯಂ ರಂಜಿಸುವೊರ್ಬ್ಬ ವಿಕ್ರಮಭುಜಂ ಸಂರಂಭದಿಂ ಬರ್ಪ್ಪುದುಂ ।
ಶ್ರೀಯುತಕಾಯನಿದಾವನೆಂದು ನರಪಂ ಸಂಪ್ರೀತಿಯಿಂ ನೋಡಿದಂ ॥ ೨

ಅಂತು ನೋಡಿ ಮತ್ತಂ

ಅವಯವಸೌಷ್ಠವಮಂಗ ।
ಚ್ಛವಿ ಶೌರ್ಯವಿಲಾಸಗಮನಮನುಜಿಸುವೆಂಬಿಂ ॥
ತನಕವಿಮಂ ದಲ್ ಪುಷ್ಪೋ ।
ದ್ಭವನೆಂಬುದನಱಿಪದಿರದು ಮನ್ಮಾನಸದೊಳ್ ॥ ೩

ಎಂದು ಬಗೆಯುತ್ತೆ ನೋಡಲ್ ।
ಮುಂದರಸಂಗಧಿಕಸೌಖ್ಯಮಿದಿರ್ವರ್ಪ್ಪವೊಲಾ ॥
ನಂದದೆ ನಲಿದೀಕ್ಷಿಸುತುಂ ।
ಬಂದಂ ಪುಷ್ಪೋದ್ಭವಂ ಮುದಶ್ರುಗಳೊಗೆಯಲ್ ॥ ೪

ಅಂತು ಪುಷ್ಪೋದ್ಭವಂ ಬಂದು ಪಾತಾಳದ್ವಾರದ ಚಂದ್ರಕಾಂತಶಿಲಾತಳದೊಳಿರ್ದ ರಾಜವಾಹನನಂ ಕಂಡು,

ನಯನದೊಳಶ್ರುವಾರಿ ಪುಳಕಂ ನಿಜದೇಹದೊಳುತ್ಸವಂ ಮನೋ |
ಜಯದೊಳನೂನಕಾಂತಿ ಮುಖಮಂಡಲದೊಳ್ ಗುರುಭಕ್ತಿ ಚಿತ್ತದೊಳ್ ||
ಪ್ರಿಯಮಖಿಳಾಂಗದೊಳ್ ನಲಿಯೆ ಸಿದ್ಧಮನೋರಥನಿಂದು ದೇವರಂ |
ಪ್ರಿಯನೊಸೆದೀಕ್ಷಿಸಲ್ ಪಡೆದೆನೆಂದು ಮನಂ ಮಿಗೆ ಮೆಯ್ಯನಿಕ್ಕಿದಂ || ೫

ಅಂತು ಮೆಯ್ಯಿಕ್ಕಲೊಡಂ

ಆನಂದಾಶ್ರು ತುಱುಂಕೆ ನಿ |
ಜಾನನದೊಳ್ ರೋಮಪುಳಕಮುಣ್ಮೆ ಶರೀರಂ ||
ತಾನುಱೆ ಪೊರೆಯೇಱಲ್ ನೃಪ |
ಸೂನು ನಿಜಾನುಜನನಪ್ಪಿಕೊಂಡನಲಂಪಿಂ || ೬

ಅಂತರಸನಪ್ಪಿಕೊಂಡೊಡೆ ಪುಷ್ಪೋದ್ಭವನಿಂತೆಂದಂ:—

ದೇವಗೆ ದಾಸನಲ್ಲದೆ |
ಭಾವಿಸೆ ಮತ್ತೊರ್ಬನಲ್ತು ತಳ್ಕೈಸಿಕೊಳ ||
ಲ್ಕಾವ ಸಮನೆಂದು ಮತ್ತೆ ಪ |
ದಾವನತಮುಖಾಬ್ಜನಾಗಲೆತ್ತಿದನರಸಂ || ೭

ಅಂತರಸಂ ಪರಮೋತ್ಸಾಹದಿಂ ಶಿರಮಂ ಪಿಡಿದೆತ್ತಿ ಪತ್ತಿರೆ ಕುಳ್ಳಿರಿಸಿ

ನಿಷ್ಪಂದದೃಷ್ಟಿಯಿಂ ಸುಖ |
ಬಾಷ್ಪಾಂಬು ತುಱುಂಕೆ ದಶನರುಚಿ ಹರ್ಷಲತಾ ||
ಪುಷ್ಪದವೊಲ್ ಪಸರಿಸಲೀಂ |
ಪುಷ್ಪೋದ್ಭವ ಸುಖಮೆ ಎಂದು ನರಪತಿ ಕೇಳ್ದಂ || ೮

ಅಂತು ಕೇಳಲೊಡಂ

ಧರೆಯೊಳ್ ಜ್ಯೇಷ್ಠಭ್ರಾತೃವೆ |
ಗುರು ದೈವಂ ಮಾತೃ ಪಿತೃವೆನಿಪ್ಪುದಱಿಂ ದೇ ||
ವರನಗಲ್ದಿ*ರ್ದನಗೆ ಸುಖಂ |
ದೊರೆಕೊಳ್ವುದುಮುಂಟೆ ದೇವ ನೀನಱಿಯದುದೇ || ೯

ಎಂದು ಪೇೞ್ದೊಡರಸಂ ಪರಿತೋಷಂಬಟ್ಟು ಬಟುಕಿಂತೆಂದಂ:—

ಆನಲ್ಲಿಂ ಪೋದ ಬೞಿ ।
ಕ್ಕೇನಂ ಬಗೆದಿರ್ದಿರೆಲ್ಲರೆಲ್ಲಿಗೆ ಪೋದಿರ್ ॥
ನೀನೆಲ್ಲಿರ್ದಪೆ ಪೇೞೆಂ ।
ದಾನರಪತಿ ಕೇಳ್ದನಲ್ತು ಪುಷ್ಪೋದ್ಭವನಂ ॥ ೧೦

ಅಂತು ಕೇಳಲೊಡಂ ಪುಷ್ಪೋದ್ಭವನಿಂತೆಂದಂ:—

ದೇವರ ಕೆಯ್ಯಿಂ ಬೀೞ್ಕೊಂ ।
ಡಾವೆಲ್ಲರ್ ಪೋಗಿಯಾಯಿರುಳ್ ಸಲೆ ಸುಖನಿ ॥
ದ್ರಾವಿಷ್ಟರಾಗಿ ಬೆಳಗಿನ ।
ಜಾವದೊಳೆರ್ದೆರ್ವೈದೆ ಬೆಳಗಾಯ್ತಾಗಳ್ ॥ ೧೧

ಅಂತು ಬೆಳಗಾಗಲೊಡಂ ಸಂಧ್ಯಾವಂದನಾದಿಕ್ರಿಯೆಗಳಂ ಮಾಡಿ,

ಕಮಳಾನಂದಕರಂ ತಮೋವ್ರಜಹರಂ ಚಕ್ರಪ್ರತಿಷ್ಠಾಪರಂ ।
ಸುಮನಃಪ್ರೀತಿಯುತಂ ಮಹೋದಯನುತಂ ಪೀತಾಂಬರಾಲಂಕೃತಂ ॥
ನಮಿತಾಶಾಮುಖಶೋಭಿತಂ ಬಹಳದೋಷಾರಾತಿ ಲಕ್ಷ್ಮೀಶನಂ ।
ತಮಿತಪ್ರಾಭವಮೂರ್ತಿ ಸೂರ್ಯನುದಯಂಗೆಯ್ದಂ ಧರಾಧೀಶ್ವರಾ ॥ ೧೨

ಕುಮುದಿನಿಗೆ ದಿವಾಖ್ಯಾಸಂ ।
ಸಮನಿಸೆ ಕಮಳಿನಿ ನಗುತ್ತೆ ಕೋಕಂಗಳ್ಗ ॥
ದ್ಭ್ರಮರಧ್ವನಿಯುಂ ತೋಱಿಸೆ ।
ಸಮಸುಖಮಾಯ್ತುಂ ವಳತಿರಜೋಗುಣಮೊಸೆಯಲ್ ॥ ೧೩

ಕಾಯಕ್ಲೇಶಮದೆನ್ನೊಳಾಗೆ ಜಗದೊಳ್ ಮಬ್ಬುರ್ಬಿ ಮೆಯ್ವೆರ್ಚಿದ ।
ನ್ಯಾಯಂ ಕೈಮಿಗಲೆನ್ನ ಕಾಂತನನಲಂಪಿಂ ಕೂಡಿದಳ್ ಪಶ್ಚಿಮಾ ॥
ಶಾಯೋಷಿತ್ಕುಟಿಲಾತ್ಮೆಯೆಂದು ದಿವಸಶ್ರೀ ಬೈದು ಬೆಂಬತ್ತಿದಳ್ ।
ಛಾಯಾಸಂಕುಳದಿಂದೆನಲ್ಕೆ ಪಡುವಲ್ ಮುಂತಾದುವೆಲ್ಲಾ ನೆೞಲ್ ॥ ೧೪

ಅಂತುದಯಮಾಗಲೊಡಂ ನಿಮ್ಮಡಿಗಳಂ ನೋಡಲಾಸ್ಥಾನಮಂಟಪಕ್ಕೆ ಬಂದು ಕಾಣದೆ ಸಜ್ಜೆವನೆಯುಂ ನೋಡಿಯಲ್ಲಿಯುಂ ಕಾಣದೆ

ಸಂಗಸುಖಕ್ಕೆ ಕೂರ್ತು ವನದೇವತೆಯೊಯ್ದಳೊ ಮೇಣ್ ಭುಜದ್ವಯಾ |
ಲಿಂಗನದಾಸೆಯಿಂ ಖಚರಕಾಂತೆಯರೊಯ್ದರೊ ಯೌವನಕ್ಕೆ ಮೇ ||
ಣಂಗವಿಸಲ್ಕೆ ಕಿನ್ನರಿಯರೊಯ್ದರೊ ಮೇಣ್ ಕಡುಪಿಂ ನಿಶಾಟರೊಳ್ |
ಸಂಗರಮಾಯ್ತೊ ಪೇಳೆನುತೆ ಚಿಂತಿಸುತಿರ್ದವಿಳಾಧಿನಾಯಕಾ || ೧೫

ದಿಗಧಿಪರಂ ತೆರಳ್ಚುವೆನೊ ನಾಗನಿವಾಸದ ಶೇಷನಂ ಬರಲ್ |
ತೆಗೆವೆನೊ ಗೋತ್ರಪರ್ವತಮನಿರ್ಕಡಿಮಾಳ್ಪೆನೊ ಮೇಘಮಾರ್ಗಮಂ |
ಬಗಿವೆನೊ ವಾರ್ಧಿಯಂ ಮುಳಿದು ಪೀರ್ವೆನೊ ಭೂಮಿಯನೆಯ್ದೆ ಪೊಳ್ವೆ
ನೋ | ಬಗೆಮಿಗೆ ಪೇಳಿಮೆಂಬ ಕಡುಪಂ ತಳೆದಿರ್ದವಿಳಾಧಿನಾಯಕಂ ||

ಎಂದಾಮಾತಿಂಗರಸನ ಮೊಗದೊಳ್ ಮುಗುಳ್ನಗೆ ಮಿನುಂಗಲದನಱಿದು ಪುಷ್ಪೋದ್ಭವನಿಂತೆಂದಂ:—

ಆಪವನಾರದವಂ ಸೇ |
ನಾಪತಿಯೇಕಾಕಿ ಬಡವನಧಿಕಂ ಕಿಱಿಯಂ ||
ತಾಪಸನುದ್ಧತನೆನ್ನದೆ |
ಕೋಪಂ ಸಮಮಲ್ತೆ ಜೀವರಾಶಿಯೊಳೆಲ್ಲಂ || ೭

ಅಂತಸ್ತಾಪದಿಂದಾದ ಕೋಪಮಂ ತಗ್ಗಿಸಿ ಕೊಂಡು

ಸರ್ವೋಪಾಯದೊಳಱಿಯಲ್ |
ನಿರ್ವಾಹಮದಲ್ಲದಿಲ್ಲಮೆಂತೆನಲಾವಿ ||
ನ್ನೊರ್ವೊರ್ವರೆಯ್ದಿ ದೆಸೆಗಳೊ |
ಳುರ್ವೀವಲ್ಲಭನನಱಸೆ ಪೋಪುದೆ ಕಜ್ಜಂ || ೧೮

ಅಂತು ದೇವರನಱಸಪೋಪುದಂ ನಿಶ್ಚಯಂಮಾಡಿ ಮಗಧೇಶ್ವರಂಗೆ ತದ್ವಿಶೇಷಮಂ ಪೇಳ್ದಿಟ್ಟ ಬಲಮೆಲ್ಲಮಂ ಪುಷ್ಪಪುರಕ್ಕೆ ಕಳಪಿ

ಎಣ್ಬಟ್ಟೆಗಳೊಳ್ ನೃಪನಂ |
ಕಾಣ್ಬನ್ನಂ ತೊಟಿಲಿಮೆಂದು ಮನದೊಳಗೞಲಿಂ ||
ದೆಣ್ಬರುಮನಪ್ಪಿಯುಂ ಬಿಸು |
ಗಣ್ಬನಿಯಿಂದೊಂದು ದೆಸೆಗೆ ಪೋಜಮಟ್ಟಾಗಳ್ || ೧೯

ಎಲ್ಲೆಡೆಯೊಳಱಸಿ ಕಾಣದೊ ।
ಡೆಲ್ಲರ್ ಚಂಪಾಪುರಕ್ಕೆ ಬಂದೊಲವಿಂ ಮ ॥
ತ್ತಲ್ಲಿಂ ಮೇಲಣ ಕಾರ್ಯಮ ।
ನುಲ್ಲಾಸದೊಳಱಿಸಲೆಂದು ಕಳಿಪಿದೆನವರಂ ॥ ೨೦

ಅಂತವರೆಲ್ಲರಂ ಕಳಿಪಿಯಾನೊಂಬೆಸಗೆ ಪೊಱಮಟ್ಟಾಗಳ್

ಸರಸೀಜಾತಸಖಂ ಸಹಸ್ರಕರದಿಂ ಸರ್ವೋರ್ವಿಯೊಳ್ ಕೆಂಡಮಂ ।
ಪರಪುತ್ತಿರ್ದನೊ ಮೇಣ್ ದವಾನಳಶಿಖಾಸಂತಾನಮಿಂತೀಗಳು ॥
ರ್ವರೆಯೊಳ್ ಮೂರ್ತಿಯನಾಂತು ನಿಂದುದೊ ದಿಟಂ ಪೇೞೆಂಬಿನಂ ಕಾ
ಯ್ಪ ನಿ । ರ್ಭರದಿಂ ಕೈಮಿಗೆ ಬಂದುದಗ್ಗಳನಿದಾಘಂ ಮಾಘಸಂಹಾರಕಂ ॥

ಖರಕರತಾಪದಿಂದವನಿ ಹೊಪ್ಪಳಿಸಿತ್ತಖಿಳಾದ್ರಿಗಳ್ ಭಯಂ ।
ಕರಮೆನೆ ಕಾಯ್ದು ಕರ್ಬುನದವೋಲ್ ಕಿಡಿವೆತ್ತು ವನೋಕಹವ್ರಜಂ ॥
ಮರುಟಿದುವಧ್ವಗರ್ ಮಿಡುಕಿ ಕಿಚ್ಚಿನ ಕೀಡೆವೊಲಾದರಾದಿಶಾಂ ।
ತರಮನಲಾಶೆಯಾದುವೆನಲೇಪೊಗಳ್ವೆಂ ಕಡುಪಂ ನಿದಾಘದಾ ॥ ೨೧

ವನಮೃಗರಾಜಿಗಳ್ ತೃಷೆಯ ಕೋಟಲೆಯಿಂ ವನವೆಲ್ಲಮಂ ತೊೞ ।
ಲ್ದಿನಕಿರಣಂಗಳಂ ಕಡೆಮ ಚೇಷ್ಟಿಸಿ ಕಂಡು ಮರೀಚಿಕಾಜಲ ॥
ಕ್ಕನುನಯದಿಂ ಕರಂ ಪರಿದು ಲಂಘಿಸಿ ತಮ್ಮಿ*ರ್ದಯಾಱೆ ತಾಱುತ ।
ಟ್ಟನಲಸುವಿಂಪಗಲ್ದುವೆನಲಿಲ್ಲಿ ದುರಾಸೆಯೊಳಾರೊ ಬೀೞದರ್ ॥ ೨೨

ನಿರವಧಿನಿದಾಘದುರ್ಭರ ।
ಪರಿತಾಪದೊಳುರಿದು ಕರಿದು ವನಗಜಕುಂಭಂ ॥
ಬಿರಿಯೆ ತಳತಳಿಸಿದುವು ರವಿ ।
ಕಿರಣದ ತತ್ತಿಗಳೆನಲ್ಕೆ ಮುತ್ತುಗಳಾಗಳ್ ॥ ೨೩

ಅಂತುಗ್ರವಾದ ನಿದಾಘದೊಳಾಂ ಪೋಗುತ್ತೆ

ಮೆಯ್ಮಱಸುಂದಿ ಪಲ್ಲೊಣಗಿ ಕಣ್ ಕುಳಿದುಗ್ರನಿದಾಘತಾಪದಿಂ ।
ಬಾಯ್ಮಿಗೆ ಬತ್ತಿ ನಾಲಗೆ ಸುರುಳ್ದಿ*ರ್ದೆಯಾಱು ಮನಂ ಕಟಿಲ್ದು ಮ ॥
ಲ್ಸಿಯ್ಮಿಗಿಲಾಗಿ ದೃಷ್ಟಿ ಪಡಿಗುಂದಿ ಸಮಂತಸು. ಪೋಪರಂದದಿಂ ।
ಕೆಯ್ಮಿಡಿಸನ್ನೆಯೊನ್ನೊಳೆಸೆಯಲ್ ಕಡುನೀರಡಸಿರ್ದೆನುರ್ವಿಪಾ ॥ ೨೪

ಅಂತು ತೃಷಾಪೀಡಿತನಾಗಿ ಪ್ರೋಪಾಗಳ್ ಮುಂದೆ

ಇಭಸಂಚಾರಿರವಪ್ರತಿಧ್ವನಿಗುಹಾರಮ್ಯಂ ಜರತ್ತಾಪಸ ।
ಕ್ಷುಭಿತಂ ಕ್ರೂರಮೃಗಪ್ರಕೀರ್ಣಕಟಕಂ ನಿತ್ಯಾಂಧಕಾರಂ ಮಣಿ ॥
ಪ್ರಭವಸ್ಥಾನನಿಕುಂಜಮೆನ್ನಿದಿರೊಳೆಂದೊಪ್ಪಿರ್ದುದೌನ್ನತ್ಯದಿಂ ।
ನಭಮಂ ಚುಂಬಿಸುತಿರ್ದುದೊಂದು ಕುಧರಂ ಭೂಪಾಲವಿದ್ಯಾಧರಾ ॥ ೨೬

ಮತ್ತಮಾಪರ್ವತಂ ಸರ್ವಜ್ಞನಂತೆ ಬಹಳಗುಹಾನ್ವಿತಮುಂ, ರಾಜಧಾನಿಯಂತೆ ಚಿತ್ರಶಾಲಾಭಿರಾಮಮುಂ, ಋಷಿಸಭಾಮಂಡಲದಂತೆ ಭೃಗುವಿರಾಜಿತಮುಂ, ರಂಗಶೋಭೆಯಂತೆ ಶೃಂಗಾರವಿಲಾಸಮುಂ, ದ್ವಿಜರಾಜಿಯಂತೆ ಸದ್ವಂಶಭೂಷಣಮುಂ, ವಿಳಾಸಿನೀಜನದಂತೆ ತಮಾಳಪತ್ರವಿರಾಜಿತಮುಂ, ಕೈಲಾಸಗಿರಿಯಂತೆ ಪಂಚಾಸ್ಯಸಂಚಿತಮುಂ, ನಭೋತ್ಪಾತಕದಂತೆ ಪ್ರತಿಸೂರ್ಯವಿಜೃಂಭಿತಮುಂ, ಭಾರತದಂತೆ ಸಕಲಮುಖಮಂಡಿತವ್ಯಾಳಮುಂ, ದಿವಸಶ್ರೀಯಂತೆ ಪತಂಗಪಥರಂಜಿತಮುಮೆನಿಸಿರ್ದುದು. ಅಂತುಮಲ್ಲದೆಯುಂ,

ಬೆತ್ತದ ಕಂಕಣಂ ಬಳಪದೋಲೆ ಕುರುಳ್ಗಳವಟ್ಟ ಕಾಡ ಹೂ ।
ಕತ್ತರಿಪೀಲಿಯುಳ್ಳುಡೆ ಮನೇಭಜಮೌಕ್ತಿಕಹಾರಮುಷ್ಟ್ರ ಬಾ ॥
ಗೊತ್ತಿದ ಬಿಲ್ಸರಲ್ ಕದಕದಿಪ್ಪ ಕುಚಂ ಸುಲಿಪಲ್ಲ ಕಾಂತಿ ಚೆ ।
ಲ್ವೆತ್ತಧರಂ ಮನಂಗೊಳೆ ಪುಳಿಂದಿಯರೊಪ್ಪುವರಾಮಹಾದ್ರಿಯೊಳ್ ॥ ೨೭

ಮಱಿಸಿಂಗಂಗಳ ಪಾಸಮಂ ತಿವಿದು ಮತ್ತೇಭಕ್ಕೆ ಬಿಟ್ಟಂತವಂ ।
ತಱಿಸಲ್ವನ್ನೆಗಮಾಗಳಾಗಜದಕುಂಭಸ್ಥಾನದೊಳ್ ನೆತ್ತರಂ ॥
ಸುಱಿಸುಟ್ಟಿಂದಿರದೀಂಟಿ ದೋರೆಸಸಿಮುತ್ತಂ ಸುತ್ತಲುಂ ಚೆಲ್ಲಿ ಕಾ ।
ಡೆಱೆಯಂ ಬಂದೊಸೆದಾಯ್ದುಮಂ ಶಬರಿ ಮೆಚ್ಚಲ್ ಮಾಡುವಳ್ ಹಾರಮಂ ॥

ಅರುಣಾಕ್ಷಂ ರೌದ್ರರೂಪಂ ಘುರುಘುರಿತಮುಖಂ ಶೀರ್ಣಶೃಂಗಂ ಶಿಲಾನಿ ।
ಷ್ಠುರದೇಹಂ ದೀರ್ಘವಾಳಂ ಕಠಿನಖುರಪುಟಂ ರೇಣುಭಾಳಸ್ಥಳಂ ಘ ॥
ರ್ಘರನಾದಂ ವೃತ್ತಕಂಠಂ ಕುಸುಮಧವಳರೋಮಂಥಫೇನಂ ಕರಂ ಭೀ ।
ಕರಮಾಗಲ್ಕೊಪ್ಪುಗುಂ ಕಾನನದೊಳಿಭಸಮಾನಂ ಲುಲಾಯಪ್ರತಾನಂ ॥

ಪುತ್ತಡರ್ದಿರ್ದ ಮೆಯ್ ಪೊದಱುಗೊಂಡ ಜಟಾವಳಿ ಕೆಯ್ಯ ಕಾಲುಗುರ |
ಸುತ್ತಿ ಕಟಂಕಟೀಯುಮೆನಲಾದ ಬಸಿಷ್ಠ ಪರಮಾತ್ಮರೂಪದೊಳ್ ||
ಪತ್ತಿದ ಶಾಂತದೃಷ್ಟಿ ಶಶಿಕಾಂತಶಿಲಾಬೃಸಿ ಕಷ್ಟಮೌನವೊ |
ಪೊತ್ತಿರೆ ಜೀರ್ಣ ತಾಪಸಕುಲಂ ಮೆಱೆದಿರ್ಪುದು ತನ್ಮಹಾದ್ರಿಯೊಳ್ || ೩೦

ಅಂತು ಪೊಗೞ್ತೆಗೞಿಂಬಮಾದ ಪರ್ವತಮಂ ಕಂಡು

ತಪ್ಪಿಲ ತರುತತಿ ನೋಡಲ |
ನಳ್ಪವೆನಲ್ ಕುಸುಮಫಲಮನಾಂತುಪವನಮಂ ||
ಕೇಳ್ಪಿಡಿಸುತಿರ್ದುದಲ್ಲಿಯೆ |
ನೋೞ್ಪಂ ನೀರಿರದೆ ಮಾಣದೆಂದೆಯ್ದಲೊಡಂ || ೩೧

ಮತ್ಪ್ರಾಣಸಮೂಹಕ್ಕೆ ಲ |
ಸತ್ಪ್ರೀತಿಯನೊದವಿಸುತ್ತುಮಿರ್ಪುದನಾನು ||
ದೃತ್ಪ್ರಮದಮೆಸೆಯೆ ಕಂಡೆಂ |
ತತ್ಪ್ರಸ್ತದೊಳಮರನದಿಗೆ ಸೆಣಸುವ ಕೊಳನಂ || ೩೨

ಜಳಪಕ್ಷಿಧ್ವಾನದಿಂ ಲಕ್ಷ್ಮ್ರಿಯ ವಿವಿಧಸುಖಾಸೀನದಿಂ ಕೋಕಕೋಳಾ |
ಹಳಶೋಭಾಯಾನದಿಂ ಪಂಕಜಕುವಲಯಸಂತಾನದಿಂ ತೀರಪುಷ್ಪಾ ||
ವಿಳಲೀಲೋದ್ಯಾನದಿಂ ನಿರ್ಮಳಮಣಿಮಯಸೋಪಾನದಿಂ ಖೇಚರೀಸಂ |
ಕುಳಕೇಳೀಸ್ಥಾನದಿಂ ರಂಜಿಪುದು ಲಹರಿಕೋದ್ದಂಡಮಂಭೋಜಷಂಡಂ ||

ಅಂತೆಸೆವ ಸರೋವರಮಂ ಕಂಡು

ಪಿರಿಯಕೊಳನುದಕಮಂ ಕಂ |
ಡುರವಣೆಯಿಂ ಪೊಕ್ಕು ತೀಂಕಿ ಮೊಗೆಮೊಗೆದೊಲವಿಂ ||
ದೆರಡಳ್ಳೆ ಪಿೞ್ಗಿ ತೀಗು |
ಬ್ಬರಿಸಲ್ ಕುಳಿರ್ವಮಳಜಲಮನೀಂಟಿದೆನರಸಾ || ೩೩

ಕರಚರಣಂಬೊಳೆದು ಮನಂ |
ಪರಿತೋಷಮನೆಯ್ದೆ ತಂಪು ದೇಹದೊಳೊಬ್ಬಾ ||
ವರಿಸಿ ಕುಳಿಕೊರ್ಡೆ ಸುಖೋ |
ತ್ಕರದಿಂ ಕುಳ್ಳಿರ್ದೆನೊಂದು ನಿಮಿಷಮಿಳೇಶಾ || ೩೪

ಅಂತು ಕುಳ್ಳಿರ್ದು ರಮಣೀಯದಿಂದರಲ್ದರುಣಸರೋಜದೊಳ್ ಮೊರೆವ ಮಧುಕರಗಾನಕ್ಕೆ ಕುಣಿವಂತೆ ಸುಳಿವ ಕಳಹಂಸೆಗಳುಂ, ಕಲ್ಹಾರಕಿಂಜಲ್ಕಪರಾಗದಿಂ ಮಂಜು ಮಸಗೆ ಸಂಜೆಯಾಯ್ತೆಂದಂಜುವ ಚಕ್ರವಾಕಂಗಳುಂ, ಬೆಳ್ಮುಗಿಲ್ದುಟುಗಲಂ ತರತರದಿಂ ತೀರಯಿಸುವ ತೆರೆಗಳುಂ, ಪಥಿಕಪರಿಶ್ರಾಂತಿಯುಂ ಪರಿಹರಿಸಲ್ ಕರೆವಂತೆ ರವಂ ಮಿಗುವ ನೀರ್ವಕ್ಕಿಗಳ ಕೂಜಿತಂಗಳುಂ, ಹಿಮಶೈಲಂ ಕರಗಿ ಸರಸಿಯಾದಂತೆಸೆವ ಪೂಗೊಳದ ರಮಣೀಯತೆಯುಂ ಮನಂ ದಣಿಯೆ ನೋೞ್ಪಾಗಳ್

ಅತಿಕಾಯಂ ಸಾಹಸಾಂಕಂ ಮುಕುಳಿತಕರಸೀರೇರುಹಂ ತೀವ್ರಚಿಂತಾ
ನ್ವಿತಚಿತ್ತಂ ಬದ್ಧವೇಣೀಜಟಿಲಿತನಭಯಂ ಸಂತತಂ ಕುಂಡಲಾಂದೋ ।
ಳಿತಕರ್ಣಂ ದಿವ್ಯತೇಜೋಮಯನಭಿನವರೂಪಂ ಲಸಚ್ಛ್ರೀಲಶೃಂಗ ।
ಸ್ಥಿತನಿರ್ದಂ ಛಾಯೆ ನೀರೊಳ್ ಪೊಳೆಯೆ ಪದೆಪಿನಿಂ ಕಂಡೆನಾಗಳ್ ನರೇಂದ್ರಾ ॥

ಅಂತು ನೀರೊಳ್ ಪೊಳೆದ ನೆೞಲಂ ಕಂಡು ಪರ್ವತಮಂ ನೋೞ್ಪುದುಂ

ಶೃಂಗಾಗ್ರದಿಂ ನೆಲಕ್ಕೆ ಮ ।
ನಂಗುಂದದೆ ಬಿರ್ದು ಜೀವಮಂ ತೊಱೆವೆನೆನು ॥
ತ್ತುಂಗವಿಸಿ ಬೀೞುತಿರ್ದನ ।
ನಂಗೆಯ್ದಿಂದಾಂತೆನೊರ್ವನಂ ನೃಪತಿಲಕಾ ॥ ೩೭

ಅಂತು ಬೀೞ್ವಾತನಂ ನಾಂ ಕೆಯ್ನೀಳಾಂಪ್ರದುಂ

ಪಿಕಿಲೆ ತುಂಬೆಯಾಂತೆ ಗತಭಾಗ್ಯನನೂರ್ಜಿತಪಾಪಕರ್ಮನಂ ।
ಭೀಕರಜೀವವಂಚಕನನುಗ್ರನನಿಷ್ಟಸುಹೃದ್ವಿಯೋಗಿಯಂ ॥
ಲೌಕಿಕಬಾಹ್ಯನಂ ಬಗೆಯೆ ಕಲ್ಲೆ*ರ್ದೆಯನಂ ಮಿಗೆ ಕಷ್ಟಚಿತ್ತನಂ ।
ಶೋಕಶರೀರನಂ ಸುಖವಿದೂರನನುತ್ಕಟದುಃಖಭಾರನಂ ॥ ೩೮

ಭಾವಿಸೆ ಚಿಂತಾನಳನಿಂ ।
ಬೇವುದಱಿಂ ಪ್ರಿಯರ ಸಂಗದಿಂದಗ*ಲ್ದು ಕರಂ ॥
ನೋವುದಱಿಂದಡವಿಗಳೊಳ್ ।
ಸಾವುದೆ ಲೇಸಲ್ತೆ ನೀತಿವಂತರ ಮತದಿಂ ॥ ೩೯

ಅದಱಿಂದಂ ಪೋತಕನಂ ।
ಬರ್ದುಕಿಸದಿರ್ ಮರಳಿ ನೂಂಕೆನುತ್ತಾತಂ ಮ ॥
ತ್ಪದಯುಗಳಕ್ಕೆಱಗಿದೊಡೆ ।
ತ್ತಿದೆನೆನ್ನಯ ಕಣ್ಣೊಳುದಕಮುಳ್ಳಿಡುವಿನಂ ॥ ೪೦

ಅಂತಾಮರಣನಿಶ್ಚಯದಿಂ ಮಿಗಿಲಾದ ದುಃಖಮೆನ್ನೊಳಾಗಲೆಂತಾನುಂ ಸಂತೈಸಿಕೊಂಡಾತನನಾನಿಂತೆಂದೆಂ:—

ಇನಿತಱಲೇತಱಿಂ ನಿನಗೆ ಸಂಭವಿಸಿತ್ತಲೆ ತಂದೆ ಪೇೞೆನಲ್ ।
ಮನದೊಳಱಲ್ದು ನಿಂದು ಬಿಸುಸುಯ್ದು ಕರಂ ಬೆಱಗಾಗಿ ಪೂರ್ವಮಂ ॥
ನೆನೆದು ವಿಧಾತೃಕಲ್ಪನೆಯನಾವನೊ ಮೀಱುವನೆಂದು ಮತ್ತೆ ಭೋಂ ।
ಕನೆ ತಿಳಿದೆನ್ನನೀಕ್ಷಿಸಿ ನಿಜಸ್ಥಿತಿಯಂ ನುಡಿಯಲ್ಕೊಡರ್ಚಿದಂ ॥ ೪೧

ಸಕಲಧರಣೀಶಮಣಿಮಯ ।
ಮಕುಟಸ್ಥಿತಪಾದಪೀಠನಭಿನವಲಕ್ಷ್ಮೀ ॥
ಮುಕುರಂ ಮಗಧೋರ್ವೀಪಾ ।
ಲಕನೆಸೆವಂ ರಾಜಹಂಸನೆಂಬ ನರೇಂದ್ರಂ ॥ ೪೨

ಆತನ ಸಚಿವರೊಳತಿವಿ ।
ಖ್ಯಾತಂ ರತ್ನೋದ್ಭವಂ ದಲೆಂದೆನ್ನ ಪೆಸರ್ ॥
ಮಾತೇಂ ರತ್ನವ್ಯವಹಾ ।
ರಾತುರದಿಂ ವಾರ್ಧಿಗೆಯ್ದಿದೆಂ ನಲವಿಂದಂ ॥ ೪೩

ಹರಿ ತನ್ನಳಿಯಂ ತಾನಾ ।
ಹರಿಯುಳಿಯಂ ತನ್ನೊಳೊಲ್ದು ಹರಿಯಿರ್ಪಂ ತಾಂ ॥
ಹರಿಯೊಳಗಿರ್ಪನೆನಲ್ ಸಾ ।
ಗರದಾಧಿಕ್ಯಮನಂದಾವನಭಿವರ್ಣಿಸುವಂ ॥ ೪೪

ಅಂತೆಸೆವ ಸಮುದ್ರಮಧ್ಯದಲ್ಲಿ ಸುವರ್ಣದ್ವೀಪಮನೆಯ್ದಿರ್ಪುದುಮಲ್ಲಿ ರತ್ನದತ್ತನೆಂಬ ವಣಿಗ್ವರಂ ತನ್ನ ತನುಜೆಯಪ್ಪ ಹೇಮಪ್ರಭೆಯನೆನಗೆ ಕುಡಲವಳ್ಗಮೆನಗಮನುದಿನಂ ನವಪ್ರಿಯಮಾಗಿ,

ಸಮಯೌವನಂ ಸಮಶ್ರೀ ।
ಸಮಸೌಖ್ಯಂ ಸಮಗುಣಂ ಸಮಪ್ರೀತಿ ಸಮ ॥
ಪ್ರಮದಂ ಸಮಸತ್ವಂ ಸಲೆ ।
ಸಮನಿಸಿತಿವರ್ಗ್ಗೆ ಕೇಳ್ ದಯಾಂಬುನಿಧಾನಾ ॥ ೪೫

ಅಂತು ಸಮಸುಖದಿಂದಿರಲ್ ಕಿಱಿದು ದಿನದಿಂ ಮೇಲೆ ತತ್ಕಾಂತೆಯುಮಂತರ್ವರ್ತ್ತಿನಿಯಾಗಲಾರತ್ನದತ್ತನಿಂ ಕಳಿಪಿಸಿಕೊಂಡು ಮನೋವಲ್ಲಭೆಯುಮಾಕೆಯ ದಾದಿಯುಮಾನುಮಿಂತು ಮೂವರುಂ ಪಡಂಗನೇಱಿ ನಡುವಗಲೊಳ್ ಬರ್ಪಾಗಳ್,

ಇನ್ನೇವೇೞ್ದಪೆಣ್ಣ ಬಲ್ಲಿಡಿಲಪ್ರೊಯ್ಲಂ ಮಾರಿಯುದ್ರೇಕಮುಂ ।
ಖಿನ್ನಪ್ರೀತಿಯುಮೆಯ್ದೆ ಪೆರ್ಚಿದೆರ್ದೆಗಿಚ್ಚುಂ ವಾರ್ಧಿಯೊಳ್ ತಪ್ಪಹಿ ॥
ತ್ರನ್ನೀರ್ಪೊಯ್ದು ಮುೞುಂಗಲಾಂ ಬರ್ದುಕಿದೆಂ ಪಾಪಿಷ್ಠನಾಗಿರ್ದನ ।
ನ್ನೆನ್ನರ್ಧಾಂಗಿ ಬೞಿಕ್ಕ ತೀರ್ದ ಬಗೆಯಂ ಕೈಕೊಂಡೆನಾಂ ತೀರದೊಳ್ ॥

ಪ್ರಿಯತಮೆಯುಮಗಲ್ದ ಶರೀ ।
ರಿಯ ಜೀವನವೇವುದೆಂದು ಮರಣಮನಾಂ ನಿ ॥
ಶ್ಚಯಮಂ ಮಾಡುವೆ ಪದದೊಳ್ ।
ಬಯಲ ರವಂ ಪುಟ್ಟಿತಂತರಿಕ್ಷದೊಳಾಗಳ್ ॥ ೪೬

ಅದೆಂತೆನೆ:—

ಪದಿನಾಱು ವರ್ಷದಿಂದೀ ।
ಮದನಾದ್ರಿಯೊಳೊಲ್ದು ಕಾಣ್ಬೆ ರತ್ನೋದ್ಭವ ನೀಂ ॥
ಸುದತಿಯನೆಂದೆಂದಾಕಾ ।
ಶದ ವಾಕ್ಯಂ ಪುಟ್ಟಿತದ್ಭುತಧ್ವನಿಯಿಂದಂ ॥ ೪೭

ಅದುಕಾರಣಮೀಕಾಮಗಿರಿಗೆ ಬಂದು ಪದಿನಾಱು ವರ್ಷಂ ತುಂಬಿತ್ತಿನ್ನಿನ್ನು ಮರಣಮೆ ಶರಣಮೆಂಬನ್ನೆಗಂ

ಪಿತನೆಂಬುದನಱಿದತಿದುಃ ।
ಖಿತನಾದೆಂ ದೇಸೆಗೆಟ್ಟು ಮಚ್ಚಿತ್ತದೊಳೀ ॥

ಕತೆಯುಂ ಕೇಳ್ದವರಳ್ಳಿದೆರ್* ।
ಧೃತಿಗುಂದದೆ ಬಲ್ಪುವಿಡಿದು ಸೈರಿಸದಾರುಂ ॥ ೪೯

ಅಂತು ತತ್ಪ್ರಪಂಚಮಂ ಪೂರ್ವದೊಳ್ ಕೇಳ್ದುಱಿವೆನದಱಿಂದಾತನೆನ್ನ ಪಿತನೆಂದಱಿದು ಆಶ್ವಾಸಿಸುವೆನೆಂದನುಮಾನಿಸುವಾಗಳ್ ಮತ್ತೊಂದು ದೆಸೆಯಲ್ಲಿ

ಎನಗಾರಿರ್ದಪರಕ್ಕ ಮುಳ್ಪಿನವಳಂ ಕಣ್ಗಟ್ಟಿ ಬಿಟ್ಟಂತು ಕಾ ।
ನನದೊಳ್ ವಹ್ನಿಮುಖಕ್ಕೆ ಸಲ್ವ ಬಗೆಯಂ ಕೈಕೊಳ್ವರೇ ಪೇೞಿಳಾ ॥
ವನಿತಾರತ್ನಮೆ ಕಾಮರಾಜವಿಜಯಂ ಕೈಸೂಱಿಪ್ರೋಯುತ್ಕಟಂ ।
ಬಿನಿತಾರ್ತಧ್ವನಿ ಕೇಳಲಾಯ್ತೆನಗೆಲೇ ರಾಜಾಧಿರಾಜೋತ್ತಮಾ ॥ ೫೦

ಅಂತು ಪೊದಱ್ಪುತಧ್ವನಿಯುಂ ಕೇಳ್ದು ರತ್ನೋದ್ಭವನನೊಂದಶೋಕತರುವಿನ ನೆೞಲೊಳ್ ಕುಳ್ಳಿರಿಸಿಯಾಧ್ವನಿಯ ಬೞಿವಿಡಿದ್ಯೈದಿ ನೋಳ್ಪನ್ನೆಗಂ

ಜಗುಳ್ದ* ಕಚಾಗ್ರಮಂ ಸಸಿನೆಗೈದು ಕುಚಂಗಳನುತ್ತರೀಯದಿಂ ।
ಬಿಗಿದು ಪೊದಱ್ದು ಮುಂಜೆಱಗನೊಪ್ಪಿರೆ ಸೆಕ್ಕಿಯುಳುವರ್ ಕುಂಡದ ॥
ಗ್ನಿಗೆ ಬಲವಂದು ತನ್ನ ನಿಜದೇವತೆಯುಂ ನೆನೆದಿರ್ಕರಂಗಳಂ ।
ಮುಗಿದು ಚಿತಾಗ್ನಿಯುಂ ಪುಗುವಳಂ ಮಿಗೆ ಕಂಡೆನಿಳಾಧಿನಾಯಕಾ ॥ ೫೧

ಅಂತಗ್ನಿಪ್ರವೇಶನಮಂ ಮಾಳ್ಪಳಂ ಕಂಡು
ಭರವಸದಿಂದೆಯ್ದಿ ಪೊದ ।
ಱ್ದರಿಯೊಳ್ ಬೀೞ್ವವಳ ಬಾಹುಲತೆಯುಂ ಪಿಡಿಯಲ್ ॥
ತರಳತರಭೀತಿರಸಮಂ ।
ಕುರಿಸಲ್ ತತ್ತರುಣಿಯೆನ್ನನಂದಿಂತೆಂದಳ್ ॥ ೫೨

ಅಡವಿಯೊಳಂತು ಬಂದು ಪರನಾರಿಯನಗ್ನಿಮುಖಪ್ರವೇಶಿಯಂ ।
ಪಿಡಿವುದು ನೀತಿಯಲ್ತು ಬಿಡು ತಮ್ಮ ಮನಃಪ್ರಿಯನಂಗಸಂಗಮಂ ॥
ಪಡೆದಪೆನಿಂದು ವಾಸವನಿವಾಸದೊಳೆಂದುಸಿರ್ವನ್ನೆಗಂ* ಕೆಲಂ ।
ಬಿಡಿದಬಿತಿರ್ದ ವೃದ್ಧಸತಿಯೆನ್ನಡಿಯೊಳ್ ಪೊರಳ್ದಳ್ ನೃಪೇಶ್ವರಾ ॥ ೫೩

10

ಅಂತಾವೃದ್ಧಸತಿಯೆನ್ನಡಿಯೊಳ್ ಪೊರಳೆ
ಪೆಱ್ತ್ತಾಯೆ ಕಿಱಿಯನಡಿಯೊಳ್ ।
ಬೀೞ್ತ್ತಿರ್ಪುದನುಚಿತಮೀಸರೋಜಾನನೆ ತಾ ॥
ನೇೞ್ತ್ತಿಂದಳೇಕೆ ಶಿಖರಿಗೆ ।
ಪೇೞ್ತ್ತಡೆಯುದೆನಲ್ಕೆ ಪೇೞಲುದ್ಯತೆಯಾದಳ್ ॥ ೫೪

ಅದೆಂತೆನೆ:—

ಭೂ ಪೊಗೞಲ್ಕೆ ಸುವರ್ಣ ।
ದ್ವೀಪಂ ಶರನಿಧಿಯ ನಡುವೆ ಮೆಱೆದಿರ್ಪುದು ತ ॥
ದ್ದ್ವೀಪದೊಳಿರ್ಪಂ ಸಕಳಕ ।
ಳಾಪತಿ ಸಲೆ ರತ್ನದತ್ತನೆಂಬ ಧನಾಢ್ಯಂ ॥ ೫೫

ಆಧನಿಕನಣುಗಿಯೀಪು ।
ಣ್ಯಾಧಿಕೆ ಪೊಂಪೆಸೆವ ಪೆಸರ ಹೇಮಪ್ರಭೆ ಬಿಂ ॥
ಬಾಧರೆ ಲಾವಣ್ಯರಸಾಂ ।
ಭೋಧಿ ಕಳಾವತಿ ನೆಗೞ್ದ ಕನ್ಯಾರತ್ನಂ ॥ ೫೬

ಇವಳನುೞಿ ರತ್ನದತ್ತಂ ।
ವಿವಿಧಾಲಂಕಾರಸಹಿತಮೊಲವಿಂ ರತ್ನೋ ॥
ದ್ಭವನೆಂಬ ಮಗಧನೃಪಸಚಿ ।
ವವರಂಗಿತ್ತಂ ಜಸಂ ಪದಿರ್ಮಡಿಸುವಿನಂ ॥ ೫೭

ಅಂತು ರತ್ನದತ್ತನೀಕನ್ಯಕೆಯಂ ರತ್ನೋದ್ಭವಂಗೆ ಕುಡಲಿರ್ವರ್ಗ ನ್ಯೋನ್ಯಸ್ನೇಹಂ ಕೈಮಿಕ್ಕಿರೆ

ಕಾಮನ ತೂಣೀರಂ ಸುಮ ।
ನೋಮಾರ್ಗಣಗರ್ಭದಿಂ ಮನಂಗೊಳಿಪಂತೀ ॥
ಶ್ಯಾಮೆಗೆ ಗರ್ಭಂ ಮೆಱೆಯಲ್ ।
ಕಾಮಿಸಿದಂ ಕಾಂತನೆಸೆವ ತನ್ನಯ ಪುರಮಂ ॥ ೫೮

ಅಂತೀಕೆ ಪೂರ್ಣಗರ್ಭವಂ ತಳೆಯಲೀಕೆಯ ವಲ್ಲಭನಪ್ಪ ರತ್ನೋದ್ಭವಂ ತನ್ನ ಪತ್ತನಕ್ಕೆ ಪೋಗಲ್ ರತ್ನದತ್ತನಿಂ ಕಳಿಪಿಸಿ ಕೊಂಡುಮೀಕೆಯ ನೊಡಗೊಂಡಾಂ ಸಹಿತಮಂಭೋಧಿಯೊಳ್ ಬಹಿತ್ರಮನೇಱಿ ಬರ್ಪಾಗಳ್

ವೈನಾಕಗಿರಿ ಮಹಾಂಬುನಿ ।
ಧಾನದೊಳಳ್ದಂತೆ ತಪ್ಪ ಬಹಿತ್ರಂ ಮುೞುಗಲ್ ॥
ಮಾನಿನಿಯುಂ ತಳ್ಪಿಸಿಕೊಂ ।
ಡಾನೊಯ್ಯನೆ ಪುಣ್ಯದಿಂದೆ ತಡಿಗೇಱಿಂದಂ ॥ ೫೯

ಅಂತು ತಡಿಗೆ ಬಂದೀಕೆಯು ಬಱಿಲ್ಕೆಯುಂ ನಾನಾಱಿಸುತ್ತಿರೆ ತನ್ನ ಪತಿಯುಂ ಕಾಣದೆ ಮುೞುಂಗಿದನೆಂದನುಮಾನಿಸಿ

ಗಹಗಹನೆ ನಕ್ಕು ನೋಡಾ ।
ಸಿಹಪರಸೌಖ್ಯಕ್ಕೆ ಬಾಹ್ಯವಾಗಿಯುಮಿನ್ನುಂ ॥
ಮ್ಮಹದಿಂ ಜೀವಿಪೆನೆಂದೇ ।
ಕೆ ಹೀನಬುದ್ಧಿಯನೊಡರ್ಚಿದಪೆನೊ ವಿಧಾತ್ರಾ ॥ ೬೦

ಎಂದು ರತ್ನೋದ್ಭವಂ ಮುೞುಂಗಿ ತಾನುಱಿದಿರ್ದುದರ್ಕೆ ಪೇಸಿ ಮರಣೋಪಾಯಮಂ ನೆನೆಯುತ್ತಿರೆ,

ಹೇಮಪ್ರಭೆ ನೀಂ ಕೂಡುವೆ ।
ಕಾಮಾದ್ರಿಯೊಳಧಿಕನಪ್ಪ ರತ್ನೋದ್ಭವನಂ ॥
ವಾಮೆ ಪದಿನಾಱು ವರ್ಷ ।
ಕ್ಕೀಮಾತಂ ನಂಬಿರೆಂದುದಾಕಾಶರವಂ ॥ ೬೧

ಅಂತಶರೀರವಾಕ್ಯಮಂ ಕೇಳ್ದು ದಱಿನೀಕೆಯು ಮರಣಚಿಂತೆಯುಂ ಬಿಡಿಸಿ ಕಾಮಶೈಲಕ್ಕೆ ಪೋಗಲೆಂದಿರ್ಪಾಗಳ್

ನೀರೊಳ್ ಬಂದ ಬಱಿಲ್ಕೆಯಿ ।
ನೋರಂತಿರೆ ಬೇನೆ ಮಸಗಿ ಹೇಮಪ್ರಭೆ ವಿ ॥
ಸ್ತಾರದಿನಾಗಳ್ ಪಡೆದಳ್ ।
ವಾರಿಜಸಖನಂತಿರೆಸೆವ ಪುತ್ರನನೊಲವಿಂ ॥ ೬೨

ಅಂತು ಪಡೆದು

ಇನ್ನುಸಿರ್*ದೇನೊ ತತ್ಸುತ ।
ನನ್ನೋಡಲ್ ಪಡೆದಳಿಲ್ಲ ಪಾಪಿಷ್ಠೆಯೆನ ॥
ಪೆನ್ನಯು ಕೆಯ್ಯೊಳ್ ಕುಡಲಾಂ ।
ಬೆನ್ನೀರ್ಗೆಂದೊಂದು ಪುರವನಱಸಲ್ ಪೋದೆಂ ॥ ೬೩

ಅಂತಾಶಿಶುವಿನ ಮೆಯ್ಯ್ ಮಾಸಂ ತೊಳೆಯಲ್ ಬಿಸುನೀರಂ ದೊರಕಿಸಲೆಂದೊಂದು ಪುರದ ದಾರಿಯೊಳ್ ಬರುತ್ತಿರ್ಪಾಗಳ್

ಪಾಪಹರಮೂರ್ತಿ ಕಟ್ಟಿದ ।
ಕೌಪೀನಂ ಮಿಱುಪ ಜಡೆಗಳೊಪ್ಪುವ ಹರಯಂ ॥
ಲೇಪನವಿಭೂತಿ ರಂಜಿಸ ।
ತಾಪಸಸುತನೆನ್ನನಂದು ಭೋಂಕನೆ ಕಂಡಂ ॥ ೬೪

ಅಂತೆನ್ನಂ ಕಂಡೀಬಾಲಕನೆಲ್ಲಿಯವನೆಂದಾಮುನಿಕುಮಾರಂ ಕೇಳ್ದ ಸಮಯದೊಳ್

ಕಾಡಾನೆ ಸೊರ್ಕಿ ತರುಗಳ ।
ನೀಱಿಯುತ್ತಿನ್ನಿದಿರ್ಗೆ ಬರಲೆನಗೆ ಭಯಂ ॥
ಮೂಡೆ ಕರದೆಳೆಯುಮಗನಂ ।
ನೋಡದೆ ಬಿಸುಟೀಕೆಯಿರ್ದ ತಾಣಕ್ಕೊಗೆದೆಂ ॥ ೬೫

ಅಂತಾಮಗನಂ ಬಿಸುಟೀಕೆಯ ಸಮೀಪಕ್ಕೆ ಬಂದೆಲ್ಲಿಯುಮಿರಲಣ್ಮದಾಕಾಶವಾಕ್ಯಮಂ ಕೇಳ್ದೀಕಾಮಶೈಲಕ್ಕೆ ಬಂದೀಕೆಯ ಕಾಂತಾಗಮನಮಂ ಚಿಂತಿಸುತ್ತಿರ್ದೀಪ್ರೌಢೆಗೆ ಪದಿನಾಱು ವರ್ಷಂ ತುಂಬೆ

ನನ್ನಿಯ ಬರಿಸಂ ತುಂಬಿ ।
ತೆನ್ನರಸಂ ಬಾರನೆಂದು ಶಿಖಿಯಂ ಪುಗುವಳ್ ॥
ತನ್ನ ಮನದುರಿಗೆ ಸೈರಿಸ ।
ದಿನ್ನೇನಂ ಪೇೞ್ವೆನೆಂದು ಸುಜ್ಞನೆ ಸುಯ್ದಳ್ ॥ ೬೬

ಎಲೆಯರಸ ವೃದ್ಧೆ ಪೇೞ್ದುದಱಿಂದೆಮ್ಮ ತಾಯೆಂದಱಿದಾಕೆಯನೆಂತಾನುಂ ಸಂತಯಿಸಿ ನಿನ್ನ ವಲ್ಲಭನಂ ತೋಱುವೆಂ ಬಾಯೆಂದಶೋಕತರುವಿನ ತಲದೊಳಿರ್ದ ರತ್ನೋದ್ಭವನಂ ತೋಱಿಸೆ

ಭೋಂಕೆನಲೊರ್ಬರೊರ್ಬರ ಮುಖಂಗಳನೀಕ್ಷಿಸಿ ಬಾಷ್ಪವಾರಿಯೊಳ್
ತೇಂಕಿದರಪ್ಪಿಕೊಂಡರತಿಸಮ್ಮದದಿಂ ಮಿಗೆ ದುಃಖಭಾರಮಂ ॥
ನೂಂಕಿವರಂತರಿಕ್ಷವಚನಂ ದಿಟಮಾಯ್ತು ಸಮಸ್ತಭಾಗ್ಯಮಿಂ ।
ದಂಕುರಿಸಿತ್ತೆನುತ್ತೆ ಮಗುಳ್*ದಿನ್ನು ಮುಖಾಬ್ಜಮನೊಲ್ದು ನೋಡಿದರ್ ॥ ೬೭

ಅಂತು ನೋಡಿ ಎಲೆ ಮಹಿಮ ನೀನಾರೆಂದೆನ್ನಂ ಬೆಸಗೊಳೆ

ವಾರಣಮಂ ಕಂಡಂಜಿ ಮ ।
ಹಾರಣ್ಯದೊಳೀಕೆ ಬಿಸುಟು ಪೋದ ಕುಮಾರಂ ॥
ಕಾರಣದೊಳಲ್ಲಿಗೆಯ್ದಿದೆ ।
ನಾರಯ್ಯಲ್ ನಿಮ್ಮ ಪುತ್ರನೆಂದಱಿಗಿರ್ದಂ ॥ ೬೮

ಇದನೇವೇೞ್ವುದೊ ಭಾಗ್ಯದೇೞ್ತರವಸಾನಂದಾರ್ಣವಂ ಮೇರೆದ ।
ಪ್ಪಿದ ಚೆಲ್ವಂ ನಿಜಪುಣ್ಯಪುಂಜವನಸುಂ ಕೈಸಾರ್ದುದಂ ಮಂಗಳಾ ॥
ಸ್ಪದಸಂಸಾರಸುಖಂ ಫಲಂಬಡೆದುದಂ ಚಿತ್ತೋತ್ಸವಂ ಕೆಚ್ಬುಗ ।
ಟ್ಟಿದುದಂ ಮಾನಸಜನ್ಮಸಾರದೊದವಂ ನೇತ್ರಾಬ್ಜಸಾಫಲ್ಯಮಂ ॥ ೬೯

ಇಂದಿನ ಸೌಖ್ಯಮಿಂದಿನ ಮಹೋನ್ನತಿಯಿಂದಿನ ಭಾಗ್ಯದೇೞ್ಗೆ ಮ ।
ತ್ತಿಂದಿನ ಚಿತ್ತದುಜ್ಜ್ವಳಿಕೆಯಿಂದಿನ ಪುಣ್ಯಫಲಂ ಸಮಂತು ನ ॥
ಮ್ಮಿಂದಿನ ಮೆಯ್ಮೆಯಿಂದಿನನುರಾಗಸುಖಂ ಪರಿಭಾವಿಸಲ್ ಕರಂ ।
ಚೆಂದಮದಾಯ್ತೆನುತ್ತೆ ಮನದುತ್ಸವವಾರಿಧಿಯೊಳ್ ಮುಳುಂಗಿದರ್ ॥ ೭೦

ಅಂತೆನ್ನಂ ತೆಗೆಸು ಮುಹುರ್ಮುಹುರಾಲಿಂಗನಮೂರ್ಧಘ್ರಾಣನಂ ಗೆಯ್ದು ಸಂಪೂರ್ಣಮನೋರಥರಾದ ತಾಯ್ತಂದೆಗಳ್ಬೆರಸು ಚಿತ್ತೋತ್ಸವಂ ಮುಂದುವರಿಯಲಲ್ಲಿಂದೆ ತೆರಳ್ದು ಬರ್ಪಾಗಳ್ ಮುಂದೆ

ನುತಸಾಮಧ್ವನಿ ಹೋಮಧೂಮಪವನಂ ಸಂಭಾಷಣಂ ಮಂತ್ರಹೂಂ ।
ಕೃತಿಯಾಹ್ವಾನವಿಸರ್ಜನಸ್ಥಿತಿ ಮಹಾದೇವಾರ್ಚನಂ ತಾಪಸ ॥

ಪ್ರತಿಪತ್ತಿವ್ರತಮಾತ್ತನಿತ್ಯನಿಯಮಂ ಕಾಲತ್ರಯಜ್ಞಾನಮು ।
ಗ್ರತಪಂ ಶಾಂತರಸಪ್ರವಾಹಮೆಸೆಯಲ್ ಚೆಲ್ವಾಯ್ತು ಋಷ್ಯಾಶ್ರಮಂ ॥ ೩೧

ಮತ್ತಮಲ್ಲಿ ಮೃಗರಾಜಿಯ ಮೊಯ್ಯನುರ್ಗುರ್ಗಳಂ ತುಱಿಸಿ ಕಂಡೂತಿಯಂ ಕಳೆವ ಪುಂಡರೀಕಂಗಳಂ, ಕಂಠೀರವಕಿಶೋರಂಗಳಂ ಕರದೊಳಟ್ಟೊಯ್ಯನುಯ್ಯಲಾಡಿಸುವ ಕಾಡಾನೆಗಳಂ, ಬಿಸಿಲುರವಣೆಗೆ ಬಸವಳಿವ ವಿಷಾಹಿಗೆ ಪತತ್ರಪಲ್ಲವಮಂ ಜಲ್ಲರಿವಿಡಿವ ಕಲಾಪಿಗಳಂ, ಜರತ್ತಾಪಸರ್ಗೆ ಚರಣಪರಿಚರ್ಯೆಯಂ ಮಾಳ್ಪ ವನಚರಂಗಳಂ, ಮುನಿಕುಮಾರರ ಕೆಯ್ಯಂ ಪಿಡಿದು ಮೆಲ್ಲನಡಿಯಿಡಿಸುವ ಭಲ್ಲೂಕಂಗಳಂ, ಕವಲ್ಗೊಂಬಿನೊಳ್ ಕಮಂಡಲುವಂ ನೇಱಲ್ ತುಱುಂಕದಂತೆ ತಳೆದಿರ್ಪ ಸಾರಂಗಂಗಳಂ, ಋಷಿಕುಮಾರಿಯರ್ಗೆ ನೆರವಾಗಿ ಚರಿಯಿಪ ಹರಿಣಿಗಳಂ, ಪರ್ಣಶಾಲೆಯೊಳ್ ಪರೆದ ಪುಷ್ಪರಜಮಂ ಸಮೆದು ತೊಡೆವ ಚಮರೀಮೃಗಂಗಳಂ, ಹೋಮಧೇನುವಂ ಕ್ಷೇಮಮಪ್ಪಂತು ಕಾದಿರ್ಪ ಗೋಲಾಂಗೂಲಂಗಳಂ, ತಾಪಸಕುಮಾರರೊಡನೆ ಚಾಪಳತೆಯಿಂ ಶಾಸ್ತ್ರಾನುವಾದನಂಗೆಯ್ವ ರಾಜಕೀರಂಗಳಂ, ಅಗ್ನಿಹೋತ್ರರಕ್ಷಣಾರ್ಥಂ ಬಾಳ್ವೇಲಿಯಂತಿರ್ಪ ಎಯ್ಯಪಂದಿಗಳಂ, ನೀವಾರಾಂಕುರಕ್ಕೆ ತಾವಪ್ಪಂತು ಲಾಂಗೂಲಪದ್ಧತಿಯಂ ಮಾಳ್ಪ ವರಾಹಂಗಳಂ, ಶಾಂತರಸವಾರ್ಧಿ ಮೇರೆದಪ್ಪಿದಂತಿರ್ದುದು. ಅಂತುಮಲ್ಲದೆಯುಂ

ಶ್ರುತಿಮಾರ್ಗಶ್ರವಣಂ ಪುರಾಣಕಥನಂ ಷಟ್ತರ್ಕಸಂಭಾಷಣಂ ।
ಸ್ಮೃತಿಚಿಂತಾವ್ಯಸನಂ ಸಮಸ್ತಪುರುಷಾರ್ಥಾಳಾಪಕಂ ಪೆಂಪ್ರವೆ ॥
ತ್ತಿತಿಹಾಸಸ್ಮೃತಿವಿಸ್ಮಯಂ ಸಕಲಧರ್ಮಾಧರ್ಮನೈರೂಪಣ ।
ಸ್ಥಿತಿ ವೈಶೇಷಿಕದಿಂದಮೇಂ ಮೆಱೆದುದೋ ಚೆಲ್ವಾಗಿ ಋಷ್ಯಾಶ್ರಮಂ ॥

ಅಂತೆಸೆವ ಋಷ್ಯಾಶ್ರಮಮುಮಂ ಪುಗಲದಱೊಳ್

ಉರಿಗಣ್ದೋಱಿದ ಶಂಕರಂ ಫಣಿಕುಲಂ ತಳ್ತುರ್ವರ್ದೀಶಂ ಮಹಾ ।
ಗರಳಂ ಪೂರ್ದದ ಶಂಭು ಚರ್ಮವಸನಂ ಮೆಯ್ವೆರ್ಚಿದಂಧಾರಿ ಕೂ ॥
ರ್ಪರಿವೇಣ್ಣಾಗದ ರುದ್ರನೆಂಟೆರ್ದೆಯನಂಟರ್ಪಂಗಮಂ ತಾಳದಂ ।
ಬರಗಂಗಾಧರನೆಂಬ ಪೆಂಪುವಡೆದಂ ಸರ್ವಜ್ಞಯೋಗೀಶ್ವರಂ ॥ ೩೨

ಅಂತಿರ್ದ ಸರ್ವಜ್ಞರೆಂಬ ಯೋಗೀಶ್ವರರಂ ಕಂಡವರಿಂ ಪ್ರಸಾದಮಂ ಪಡೆದು ನಿರವಧಿಪರಿಚರ್ಯೆಯಮಂ ಮಾಡುತ್ತಿರಲಾಂ ಸಂಸಾರಿಯುಪ್ಪುದಱಿಂದ ರ್ಥಸಂಬಂಧದಿಂ ಜೀವಿಸುವನೆಂಬುದನವರಱಿತು ಕರುಣಿಸಿ

ಕರುಣಾಳುಗಳಪ್ಪುದಱಿಂ ।
ಪರಿಚರ್ಯೆಯ ತುಷ್ಟಿಯಿಂ ಮುನಿಶ್ರೇಷ್ಠಂ ನಿ ॥
ರ್ಭರಶಾಂತದೃಷ್ಟಿಯಿಂದಾ ।
ದರದಿಂ ಕರೆದೆನಗೆ ಕೊಟ್ಟರೊಂದೌಷಧಿಯಂ ॥ ೭೪

ಅಂತೌಷಧಿಯಂ ಕೊಟ್ಟು ಮತ್ತಮಿಂತೆಂದರ್:—

ಅಡಿಗಡಿಗೆ ನಿಧಾನಂಗಳ್ ।
ಪೊಡವಿಯೊಳಡಿದಿರ್ಪುವದಱನೀಯೌಷಧಿಯಿಂ ॥
ಪಡೆದಂಜನದಿಂ ಧನಮಂ ।
ತಡೆಯದೆ ಪಡೆಯೆಂದು ಬೆಸಸಿದರ್ ಮುನಿಮುಖ್ಯರ್ ॥ ೭೫

ಅದಕಾಂ ಮಹಾಪ್ರಸಾದಮೆಂದು ಔಷಧಿಯಿಂದಂಜನಂಬಡೆದು ನೋಟ್ಟಾಗಳ್

ನೋಡಿದ ತಾಣಂ ಕನಕದ ।
ಬೀಡಾಗಿರೆ ಕಂಡು ಚಿತ್ತದಾರ್ತಂ ಪಿಂಗಲ್ ॥
ತೋಡಿದೆನರ್ಥಮನೇನಂ ।
ಮಾಡದೊ ಸನ್ಮುನಿಪಸಂಗಮಾಪದ್ಧ್ವಂಗೆಂ ॥ ೭೬

ಅಂತು ಭರತಕುಲದಂತೆ ಗಾಂಗೇಯಸಂಪತ್ತಿಯಂ ಪಡೆದು ದೇವರಂ ಕಾಣ್ಬುಪಾಯಮಂ ಚಿಂತಿಸುತಿರ್ಪನ್ನೆಗಮೊಂದು ದಿವಸಂ

ಮಿಸುಸಿಯ ಗಗ್ಗರಂ ಸುಸಿನಗೊಂಬಿನ ಚಾರಿಯೆಬಿಲ್ವ ಗಂಟೆಗಳ್ ।
ಮಿಸುಪುರಗೆಜ್ಜೆ ಮಿಂಡಿಗೆಗಳಂ ಮಿಗೆ ಚುಂಬಿಪ ವಾಲಮೊಪ್ಪೆ ನಿಂ ॥
ದೆಸೆವೆಳಸಣ್ಣರೋಮತತಿ ಕೊರ್ಬಿದ ಮೆಯ್ ಮಿಗೆ ಹೇಱುವೆತ್ತ ನ ।
ಡ್ವಸಹಿತಮಾವನಸ್ಥಳಮನೆಯ್ದಿದನೊರ್ವ ಮಹಾವಣಿಗ್ವರಂ ॥ ೭೭

ದಾವಣಿಗೊಂಟಿನಮಂ ಪೊಡೆವ ಕಾಪಿನ್ಕರುಳ್ಗಂ ಪರಿದಾಯ್ವ ಪೋರ್ಗಳ್ಗಂ |
ತಾವಱಿದೊಟ್ಟಲೊಟ್ಟುವ ಸಮಸ್ಥಳದೊಳ್ ಗುಡಿಗ್ರೊಯ್ವ ಬನ್ನಸ್ರ ॥
ಕ್ಕೋತ್ರವ ನೀರ್ಗೊಳಕ್ಕೆ ಬಟಿಲ್ವೆಟ್ಟುಗಳ್ಗಂ ಪೊಡೆವಕ್ಕಿಯುಂ ಕರಂ |
ಭಾವಿಸೆ ಸೆರೆಗೊಂಡಡುವ ದೋಲಿಗರಿಂದೆಸೆವಂ ವಣಿಗ್ವರಂ ॥ ೭೮

ಅಂತಲ್ಲಿಗೊರ್ಬ ವಸ್ತ್ರವ್ಯವಹಾರಿ ಬಂದು ಬೀಡುಬಿಡುವುದುಮದಱೊೞೊರ್ಬನನೀತನಾರೆಂದಾಂ ಕೇಳ್ವುದುಮಾತನಿಂತೆಂದಂ:—

ವಿಭವಧನೇಶಂ ಪದ್ಮ |
ಪ್ರಭನೆಂಬಂ ಹೇಮದತ್ತನಣುಗನ ಪರದಂ ॥
.... |
ಶುಭಚರಿತಂ ಸಲೆ ಪರೋಪಕಾರಚರಿತ್ರಂ ॥ ೭೯

ಎಂದು ಪೇೞ್ವುದುಮಾನಾತನಲ್ಲಿಗೆ ಪೋಗಿ ಮೃದುಸಂಭಾಷಣಂಗೆಯ್ಯಲಾತಂ ಪ್ರೀತಿವಟ್ಟು ಕಿಱಿದು ದಿನಮಿರ್ದಲ್ಲಿಂ ತಳರ್ದು ಪೋಪಾಗಳೆನ್ನಂ ಕರೆದು

ಎನ್ನ ನಿಜಮಿತ್ರನಾದೊಡ |
ಮೆನ್ನೊಗೊರ್ಡವಂದು ತತ್ಪುರಶ್ರೀಯನಲಂ ॥
ಪಿನ್ನೋಡಿಯುವಂತೀಶ್ವರ |
ನುನ್ನತಸಂಪದಮನೀಕ್ಷಿಪುದು ನಲವಿಂದಂ ॥ ೮೦

ಎಂದು ಪೇೞ್ದುದಂತೆಗೆಯ್ವೆನೆಂದಾತನಿಂ ಕೇವೆತ್ತುಗಳನೀಸಿಕೊಂಡು ಅಸಂಖ್ಯಾತವಸ್ತುವಂ ತುಂಬಿ ಸರ್ವಜ್ಞರಂ ಬೀೞ್ಕೊಂಡು ಪದ್ಮಪ್ರಭನೊಡನೆ ಬಂದವಂತೀಪುರಮಂ ಕಂಡು

ಅತನು ಪುರಾಧಿಪಂ ತಳವಱಂ ಶಶಿ ಪೆಗ್ಗಡೆ ಮಂದಮಾರುತಂ |
ರತಿ ನಗರಾಧಿದೇವತೆ ವಸಂತನಶೇಷಗುಣಪ್ರಬೋಧಕಂ ॥
ಕೃತಕನಗಾಳಿ ಕೋಂಟೆ ಮಕರಂದರಸಂ ನದಿಯಾದ ತತ್ಪುರ |
ಸ್ಥಿತಿಯ ವಿಲಾಸಮಂ ಬಗೆದು ಬಣ್ಣಿಸುವಂ ಶುಕರೂಪನಲ್ಲವೇ ॥ ೮೧

ಆರಮಣೀಯಪುಷ್ಪಪುರಮಧ್ಯದೊಳೊಪ್ಪುವ ದೇವತಾಗೃಹ ।
ದ್ವಾರಸಮುಚ್ಚಳದ್ವಿಮಳಗುಗ್ಗುಳಧೂಪದ ಧೂಮ ಮಂಡಲಾ ॥
ಕಾರಮನಾಂತು ವಾರವನಿತಾಮಣಿಮಂಟಪಗೋಪುರಂಗಳೊಳ್ ।
.... ಮೆಱೆಗುಂ ಕಳಕಂಠಸಹಾಯಮೆಂಬಿನಂ ॥ ೮೨

ಮಲ್ಲಿಗೆವಳ್ಳಿ ಪರ್ಬಿದೆಳಮಾವೆಳಮಾವಿನ ಕೆಂದಳಿರ್ಗಳಂ ।
ಮೆಲ್ಲನೆ ಚಂಚುವಿಂ ಕ*ರ್ದುಕಿ ಬಗ್ಗಿಪ ಕೋಕಿಲೆ ಕೋಕಿಲಸ್ವನ ॥
ಕ್ಕಲ್ಲಿಯೆ ಮೂರ್ಛೆವೋಪ ವಿರಹಿಪ್ರಕರಂ ವಿರಹಿಪ್ರತಾನಮಂ ।
ಫುಲ್ಲಶರಂಗಳಿಂದಿಸುವ ಮನ್ಮಥನಿಂದೆಸೆಗುಂ ಬಹಿರ್ವನಂ ॥ ೮೩

ಅಂತು ಪೊಗೞ್ತೆ ನೆಗೞ್ತೆವಡೆದವಂತೀಪುರಮಂ ಪೊಕ್ಕು ಪದ್ಮಪ್ರಭನಂ ಕಾಣಿಸಿಕೊಂಡಾತನಿಂ ಕೃತಪ್ರೀತನಾಗಿ ಪರಿತೋಷಮನೆಯ್ದಿ ತಾಯ್ತಂದೆಗಳಂ ಸಕಲವಸ್ತುವಂ ಕ್ಷೇಮವಲ್ಲಿರಿಸಿ ಪ್ರತಿದಿನಂ ಹೇಮದತ್ತನನನುವರ್ತಿಸಿ ಕೊಂಡಿರ್ಪಿನಮಾಹೇಮದತ್ತಂ

ಸ್ವರಗತಿಚೇಷ್ಟೆಗಳತ್ಯಾ ।
ದರದೀಪ್ತಸ್ಥಾನಶಾಂತಿದಿಙ್ಮಂತ್ರಮನೋ ॥
ಹರಕಾಲವೆಂಬ ಶಕುನದ ।
ಪರಿವಿಡಿಯಂ ಹೇಮದತ್ತನೋದುತ್ತಿರ್ದಂ ॥ ೮೪

ಅಂತಾಹೇಮದತ್ತಂ ಶಕುನಶಾಸ್ತ್ರಮನೋದುವುದಂ ಕೇಳ್ದೀತನಿಂದೆ ಮ್ಮಗ್ರಜನ ವಾರ್ತೆಯನಱಿಯಲ್ಬರ್ಪುದೆಂದಾತನನಿಂತೆಂದೆಂ:—

ಎಮ್ಮರಸನೆಂದು ಬಂದಪ ।
ನೆಮ್ಮ ಮನೋರಥವದೆಂದು ನೆರೆವಪುದೆಂದೀ ॥
ನಿಮ್ಮ ನಿಮಿತ್ತದಿನಱಿದೆನ ।
ಗುಮ್ಮಹಮಂ ಹೇಮದತ್ತ ಮಾೞ್ಪುದು ನಲವಿಂ ॥ ೮೫

ಎಂದೊಡಾತನಂತೆಗೆಯ್ವೆನೆಂದೊಂದು ದಿನಮೆನ್ನನೊಡಗೊಂಡೊಂದು ವನಕ್ಕೆ ಪೋಗಿ ಪಕ್ಷಿಯ ನಿಮಿತ್ತಮಂ ಹೇಮದತ್ತಂ ನೋೞ್ಪಾಗಳಾನಾವನವಿಸ್ತಾರವಂ ನೋೞ್ಪೆನೆಂದು ತೊೞಲ್ವಾಗಳ್

ಮನಸಿಜಮತ್ತವಾರಣಮೊ ಕಾಮನ ಕಾರ್ಮುಕಗೇಹಮೋ ಮನೋ ।
ಜನ ಕೃತಕಾದ್ರಿಯೋ ಕುಸುಮಬಾಣನ ಸಜ್ಜೆಯೊ ಕಂತುರಾಜನಿಂ ॥
ಬಿನ ರತಿಶಾಲೆಯೋ ಮದನನೊಡ್ಡಿದ ಕಾಮುಕಕಂಠಪಾಶಮೋ ।
ನನೆಕೊನೆವೋದ ಮಾಮರನೊ ಪೇಟೆನೆ ರಂಜಿಸಿದತ್ತು ಮಾಮರಂ॥ ೮೬

ಮತ್ತಮದು ರಾಜಭವನದಂತು ಜಾಳಕವಿಳಾಸಮುಂ, ಗ್ರಹಚಾರದಂತುಪರಾಗಸಂಪೂರ್ಣಮುಂ, ಮುನಿಸಭಾಮಂಡಳದಂತು ಶುಕಪರಿಪ್ರೀತಿಯುಂ, ವಿಳಾಸಿನೀಜನದಂತು ದ್ವಿಜಚ್ಛೇದಮನೋಹರಮುಂ, ಕಲ್ಯಪಾನಗೃಹದಂತು ಮಧುಪಪರೀತಮುಂ, ವಿಕಸಿತಕಮಳದಂತು ವನಮಧ್ಯಸ್ಥಿತಮುಮೆನಿಸಿರ್ಪುದು. ಅಂತುಮಲ್ಲದೆಯುಂ

ಆಸಹಕಾರದ ಕೆಲದೊಳ್ ।
ವಾಸವನಂತನಿಮಿಷಾವೃತಂ ಗಗನದವೊಲ್ ॥
ದೇಸೆ ಮಿಗುವಬ್ಜಹಂಸಾ ।
ವಾಸಂ ಮೆಱೆದಿರ್ಪ ಪೂಗೊಳಂ ರಂಜಿಸುಗುಂ ॥ ೮೭

ಅಂತು ನೈರ್ಮಲ್ಯವಿಲಾಸಮಾದ ಪೂಗೊಳನ ತಡಿಯೊಳ್

ವನಲಕ್ಷ್ಮಿ ತನ್ನ ಘನಲೋ ।
ಚನದೊಪ್ಪಮನಂಬುಜಕ್ಕೆ ಮಿಾಂಗಳ್ಗೀಯು ॥
ಲ್ಕನುನಯದಿಂ ಬಂದಿರ್ದಪ ।
ಳೆನೆ ಪೊಗೊಳನಲ್ಲಿ ಕಾಂತೆ ಸಂತಸಮಿರ್ದಳ್ ॥ ೮೮

ವದನಸರೋಜಿನೀಪರಿಮಳಕ್ಕೆಱಗಿರ್ದಳಿಯೆಂಬ ಚೆಲ್ವನೊ ।
ಲ್ದೊದವಿಪ ಕುಂತಳಂ ಚಿಕುರಬಂಧುರಬಂಧಮಹಾಂಧಕಾರಮುಂ ॥
ಬೆದಱಿಸುತಿರ್ಪಪಾಂಗಮರುಣಾಧರಧಾತುರಸಾನುಲೇಪನಂ ।
ಪುದಿದ ಕಪೋಲಭಿತ್ತಿ ಮೆಱೆಗುಂ ಪದೆಪಿಂ ಮೃಗಶಾಬನೇತ್ರೆಯಾ ॥ ೮೯

ಅಂತಿರ್ದ ಕಾಂತೆಯುಂ ಮೆಲ್ಲನೆ ಸಾರ್ದು

ಅನುರಾಗಂ ಮುಖಪದ್ಮದೊ ।
ಳನುತಾಪಂ ಚಿತ್ತದೊಳ್ ವಿಳಾಸಾದಿಗುಣಂ ॥

ತನುವಿನೊಳತಿಚಿಂತಾಸ್ಥಿತಿ |
ಮನದೊಳ್ ಪೆರ್ಚಿರ್ದ ಸತಿಯನೊಸೆದೀಕ್ಷಿಸಿದೆಂ ॥ ೯೦

ಅಂತಾಕಾಂತೆಯಂ ಕಂಡು ನೀನಿಲ್ಲಿಯೊರ್ವಳೆ ಇರ್ಪುದರ್ಕೆ ಕಾರಣಮೇನೆಂದಾಂ ಕೇಳಲೊಡಂ

ನಯನತ್ರಿಭಾಗದಿಂದೆ |
ನ್ನಯ ಮೊಗಮಂ ನೋಡಿ ಮಗುಳ್ದು* ಮಱವಟ್ಟಂತಾ ॥
ಶ್ರಯಮಿಲ್ಲದ ಲತೆ ತೆಂಗಾ |
ಳಿಯೊಳಲ್ಲಾಡುವವೊಲಾಕೆ ಕಣ್ಗೆಸೆದಿರ್ದಳ್ ॥ ೯೧

ಅಂತೆನ್ನಂ ನೋಡಿ ಲಜ್ಜೆಯೊಳ್ ಮುಱುಂಗಿ ಬಿಸುಸುಯ್ದಿಂತೆಂದಳ್:—

ಕೇಳೆಲೆ ಪರೇಂಗಿತಜ್ಞಾ |
ನಾಲಯ ಬಳ್ಪಿಂದವಂತಿದೇವಂ ಗುಣಸ ॥
ಲ್ಲೀಲಂ ತನ್ನಯ ಮಗನಾ |
ಜ್ಞಾಲಂಬದಿನಿರ್ದನಲ್ತೆ ಕಾಪಿನ ಮನೆಯೊಳ್ ॥ ೯೨

ಅಂತವಂತೀಶ್ವರನ ಮಗನಪ್ಪ ದರ್ಪಸಾರಂ ತನ್ನ ತಂದೆಯಪ್ಪವಂತೀಶ್ವರನಂ ಸೆಱೆಯೊಳಿಟ್ಟು ತನ್ನ ಪ್ರಧಾನಿಯಪ್ಪ ಚಂಡವರ್ಮನ ಮೇಲೆ ರಾಜ್ಯಭಾರಮಂ ನಿಲಿಸಿ ತಾನಖಿಳಭೂಮಿಯಂ ಪಡೆವೆನೆಂದು ತಪಂಗೆಯ್ಯಲ್ ಪೋದಂ. ಈಗಳ್

ಜನಮಱಿಯೆ ಚಂಡವರ್ಮಂ |
ಗನುಜನೆನಲ್ ಮೆಱೆವ ದಾರುವರ್ಮಂ ಪದೆಪಿಂ ॥
ತನಗೆ ವಧುವಾಗಬೇಕೆಂ |
ದನುನಯದಿಂ ಕಾಡುತಿರ್ಪನಾನೊಲ್ಲದೊಡಂ ॥ ೯೩

ಯುವತಿಯರುಂ ಕವಿತೆಯುಮು |
ತ್ಸವದಿಂ ಸ್ವೇಚ್ಛೆಗಳನೆಯ್ದಲತಿಸುಖಮಕ್ಕುಂ ॥
ತವಕದ ಬಳ್ಪಿಂದೆಱೆಯಲ್ |
ಭುವನದೊಳತಿವಿರಸಮಾಗದಿರ್ಪುದೆ ಕೆಳೆಯಾ ॥ ೯೪

ನಲವಿಂ ಬೆರಸದೆ ಭೀತಿಯು ।
ಬಲದಿಂ ಬೆರಸಲ್ಕೆ ಕಾಂತೆಯರ್ಗನುರಾಗಂ ॥
ಪೞಿದಾಗೆ ಪುರುಷನೌಷಧಿ ।
ಗುಳಿಗೆಯವೊಲ್ ಮನಕ್ಕೆ ಹೇಯಮುಮಂ ಪುಟ್ಟಿಸುಗುಂ ॥ ೯೫

ಎಂದು ಮತ್ತಮಿಂತೆಂದಳ್:—

ಬಂದೆಡೆಗೆಱಗಿದ ಚಿತ್ತಮು ।
ನೊಂದೆಡೆಗೆೞೆದುಯ್ವೆನೆಂದು ಬಯಸುವ ಮನುಜಂ ॥
ಬಂದ ತೊಱೆಯುದಕಮಂ ಬ ।
ಲ್ಪಿಂದಂ ಶೈಲಾಗ್ರಮಕ್ಕೆ ತಿರ್ವದೆ ಮಾಣಂ ॥ ೯೬

ಅದಂ ಕೇಳ್ದಾಂ ನಿನ್ನ ಚಿತ್ತಮೆಲ್ಲಿರ್ದಪ್ಪುದು, ನೀನಾರ, ಪೆಸರೇನೆಂದು ಕೇಳ್ವುದುಮಾಕೆ ಲಜ್ಜೆಯಿಂ ತಲೆಗುತ್ತಿಂತೆಂದಳ್:—

ವಿನಯನಿಧಿ ಹೇಮಗುಪ್ತನ ।
ತನೂಜೆಯಾಂ ಬಾಲಚಂದ್ರಿಕಾಖ್ಯೆಯೆನುತ್ತಾ ॥
ನನಮಂ ಬಾಗಿ ಮಗುಳ್ದ ।
ಯ್ಯನೆ ಮನ್ಮುಖಮಂ ನಿರೀಕ್ಷಿಸುತ್ತಿಂತೆಂದಳ್:— ॥ ೯೭

ಎಲೆ ಸೊಬಗ ನಿನ್ನನೆಮ್ಮಯ ।
ನಿಲಯದೊಳಂದೊರ್ಮೆ ಕಂಡೆನೆಂದು ಮೊದಲ್ಗೊಂ ॥
ಡಲರಂಬನೆನ್ನನುಱೆ ಕೋ ।
ಟಲೆಗೊಳಿಸುತ್ತಿರ್ಪನೆಂದು ಲಜ್ಜಿತೆಯಾದಳ್ ॥ ೯೮

ಅಂತು ಲಜ್ಜಿತೆಯಾದುದಂ ಕಂಡು ಮತ್ತಮಾನಿಂತೆಂದೆಂ:—

ಸತಿಯರ ಚಿತ್ತಮನಱಿಯಲ್ ।
ಪಿತಾಮಹಂಗರಿದು ಮನುಜರಳವಲ್ತೆಂಬು ॥
ನ್ನತಿಯುಳ್ಳೊಡೇನೊ ನಾಂನಿ ।
ನ್ನ ತೀವ್ರಚಿಂತೆಯನಗಲ್ಚುವೆಂ ಕಮಳಾಕ್ಷೀ ॥ ೯೯

ಎಂದೆಂತಾದೊಡಂ ನಿನ್ನ ಚಿತ್ತಕ್ಲೇಶಮಂ ಪರಿಹರಿಸುವಂತು ದಾರುವರ್ಮನಂ ಕಾಲನಿಳಯಮನೆಯ್ದುವಂತೊಂದುಪಾಯಮಂ ಪೇಳ್ವೆನದೆಂತೆನೆ-

ಇಂದು ಮೊದಲಾಗಿ ನಿನ್ನೊಡ ।
ಮಂದಿರ್ಪಂ ಬೊಮ್ಮರಕ್ಕಸಂ ಮತ್ತಾರಂ ॥
ಕಂಡೆಱೆವು ನೋಡಲೀಸಂ ।
ಸಂದೆಗಮಿಲ್ಲೆಂದು ಪೇೞ್ವುದೆಲ್ಲರೊಳಬಲೇ ॥ ೧೦೦

ಅದಲ್ಲದೆಯುಂ

ಇಂದುಮುಖಿ ನಿನ್ನ ಸಂಗದೊ ।
ಳೊಂದಿರುಳಿರ್ದುೞಿದನಾದೊಡಾತಂ ನಿನಗೊ ॥
ಲ್ದಂದಿಂಗಂ ನಿಜವಲ್ಲಭ ।
ನೆಂದುಸಿರ್ದ*ನೆನುತ್ತೆ ಪೇೞ್ವುದೆಲ್ಲರೊಳಬಲೇ ॥ ೧೦೧

ಇದಂ ಕೇಳ್ದು ದಾರುವರ್ಮನಂಜಿದೊಡಂಜಲಿ ಅಂಜದಿರ್ದೊಡೆ ಬೞಿಕಂ

ಕರಿಕಳಭನನುದ್ಧತಕೇ ।
ಸರಿ ಸೀೞ್ದು ಸಿಱುಂಬುಳಾಡುವಂತಿರೆ ಖಳನಂ ॥
ಕರಚರಣಘಾತದಿಂ ಸಂ ।
ಹರಿಸಿ ಯಮಾಲಯಮನೆಯ್ದಿಪೆಂ ಕಮಳಾಕ್ಷೀ ॥ ೧೦೨

ಎಂದಾಕೆಗೆ ಪೇೞ್ದು ಕಳಪಿಯಾಂ ಹೇಮದತ್ತನ ಸಮೀಪಕ್ಕೆ ಪೋಗಿ ಶಕುನವೃತ್ತಾಂತಮಂ ಕೇಳ್ದೊಡಾತನಿಂತೆಂದಂ:—

ಭೋರನೆ ಮುಟ್ಟಿನ್ನತಗತಿ ।
ಚಾರವನೆನ್ನಿದಿರೊಳೆಸಗಿದತ್ತದಱಿಂ ನೀ ॥
ನೀರೈದು ದಿವಸದೊಳ್ ವಿ ।
ಸ್ತಾರಮೆನಲ್ ಕಾಣ್ಬೆಯಲ್ತೆ ನಿಮ್ಮಗ್ರಜನಂ ॥ ೧೦೩

ಎಂದು ಪೇೞ್ದೊಡಾಮಾತಿಂಗನುರಾಗಂ ಮನದೊಳುರ್ಕೆ ಯಾಹೇಮದತ್ತನುಮಾನುಂ ನಿಜನಿವಾಸಕ್ಕೆ ಬರ್ಪುದುಂ,

ಮನೆಯೊಳ್ ಮಂತಣದೊಳ್ ಪುರ ।
ವನಿತೆಯೊಳುರ್ವೀಶಭವನದೊಳ್ ಸಚಿವನಿಕೇ ॥
ತನದೊಳ್ ಬೇಗಂ ಪರೆದುದು ।
ವನಜಾನನೆ ಬಾಲಚಂದ್ರಿಕೆಯ ವೃತ್ತಾಂತಂ ॥ ೧೦೪

ಅಂತಾಸುದ್ದಿ ಪರೆದೊಡಂ ದಾರುವರ್ಮನದಂ ವಿಚಾರಿಸದೆ ಬಾಲಚಂದ್ರಿಕೆಯ ಧ್ಯಾನದೊಳಿರ್ಪನದೆಂತೆನೆ:-

ಕಳವಿಂದಿರ್ಪಂಗಂ ಸತಿ ।
ಯುಳಪಿಂದಿರ್ಪಂಗಮತಿದರಿದ್ರಂಗಂ ಕ ॥
ಳ್ಗಳಸಿರ್ಪಂಗಂ ಮಿಗೆ ತಾ ।
ನಱಿವ ಭಯಂ ತೋಱದೆಂಬುದಿದು ಸಿದ್ಧಾಂತಂ ॥ ೧೦೫

ಇದು ಶಾವಿದು ಶಾವಲ್ತಿಂ ।
ತಿದು ಸೌಮ್ಯಮಸೌಮ್ಯವಿದು ಗುಣಂ ದುರ್ಗುಣಮು ॥
ಪ್ಪುದಿದಾಗದಿದೆಂಬ ವಿವೇ ।
ಕದ ಬಗೆಯಂ ಬಗೆಯರಲ್ತೆ ಕಾಮುಕರಿಳೆಯೊಳ್ ॥ ೧೦೬

ಅದು ಕಾರಣಮಾಗೆ ಭಯರಸಂ ತೋಱದೆ ಪ್ರಿಯರಸಂ ಮೀರೆದಪ್ಪೆ ಮೆಯ್ಮಱೆದು ಮಱೆದಿರಲ್ ಮಱುದಿವಸಂ

ಕಿರಣಸಮೂಹಮನೊಲವಿಂ ।
ಭರದಿಂ ಪೊಱಗಟ್ಟಿ ಪದೆಪಿನಿಂದಂಬರಮಂ ॥
ಪರಿಹರಿಸಿ ಪಡುವಣಬ್ಧಿಯ ।
ನರವಿಂದಸಖಂ ವಿಲಾಸದಿಂದಂ ಪೊಯ್ದಂ ॥ ೧೦೭

ಅಂತಸ್ತಮಾನಮಾಗಲೊಡಂ,

ಕಪ್ಪುರವೀಳೆಯಂ ಕುಸುಮಮಾಲಿಕೆ ಕತ್ತುರಿಗಂಧದಣ್ಕೆ ಚೆ ।
ಲ್ವಪ್ಪಮಳಾಂಬರಂ ಮಣಿಮಯಾಭರಣಂ ಪುದಿದುದ್ಘಚಿತ್ರದಿಂ ॥
ದೊಪ್ಪುವ ಪಟ್ಟೆಯಂ ಪದೆಪಿನಿಂ ಸತಿಗಿತ್ತೊಡಗೊಂಡು ಬೇಗದಿಂ ।
ಬಪ್ಪುದನುತ್ತಮಂ ಕೆಲನರಿಂ ಕರೆದಟ್ಟಿದನಾಕುಮಾರಿಯಂ ॥ ೧೦೮

ಅಂತಾಕೆಯುನವಂ ಕರೆಯಲಟ್ಟಿದುದನಾನಱಿದು

ಮಿಗೆ ಸಪ್ಪುರಸೀರೆಯುಂ ಮ ।
ಲ್ಲಗಂಟೆನಿಂದುಟ್ಟು ಮೇಲೆ ಪೆಣ್ತೊಡೆಯುಂ ದಿ ॥
ಟ್ಟಿಗೆ ಸೊಗಸಲುಟ್ಟು ಬೞಿಕೊ ।
ಯ್ಯಗೆ ಸಾರ್ದೆಂ ಬಾಲಚಂದ್ರಿಕಾಂತಃಪುರಮಂ ॥ ೧೦೯

ಅಂತು ಸಾರ್ದು ನಾನಾಕೆಯುಮಂ ದಾರುವರ್ಮನಲ್ಲಿಗೆ ನಡೆಯಲ್ ಪೇೞ್ದು

ಮೃಗಶಾಬನೇತ್ರೆಗಾನಡ ।
ಪಗಿತ್ತಿಯೆಂಬಂತಿರೆಲೆಯು ಮಡಿಸಿ ಕುಡುತ್ತುಂ ॥
ಮೊಗದೊಳ್ ಮುಳಿಸೊಗೆಯಲ್ ಪಿಂ ।
ದುಗೊಂಡು ಪೋಗಿರ್ದೆನವನ ಬಾಗಿಲೊಳರಸಾ ॥ ೧೦೧

ಅಂತಾವಿರ್ಬರುಂ ಬಾಗಿಲೊಳಪುದುಂ ದೌವಾರಿಕರ್ ಪೋಗಿ ಪೇೞೆ ರಕ್ಕಸನ ಭಯಕ್ಕಂಜಿ ಸಕಳಪರಿವಾರಮಂ ಕಾಪುವೇೞ್ದು ದಾರುವರ್ಮನೆಮ್ಮಂ ಕರಸೆ

ಮೃದುಚಿತ್ರಂ ಜಾಳಕಂ ಪುತ್ರಿಕೆ ಶುಕತತಿ ಪಾರಾವತಂ ರಾಜಹಂಸ ।
ಚ್ಛದತಲ್ಪಂ ತಾಳವೃಂತಂ ಕುಸುಮವಿತತಿ ತಾಂಬೂಲಕಂ ಕಂಪುನೀರ್ ತೀ॥
ವಿದ ಚಂದ್ರಗ್ರಾವಕುಂಭಂ ಮೆಱೆದು ಸೊಗಸಿನಿಂದಿರ್ಪ ತತ್ಕಾಮಕೇಳೀ ।
ಸದನಕ್ಕಾವೇೞ್ತರಲ್ ಭೋಂಕನೆ ಮನದೊಲವಿಂ ಕಂಡನಾದಾರುವರ್ಮಂ॥

ಅಂತು ಕಂಡು

ಮೊಗದೊಳ್ ಪಸರಿಸೆ ರಾಗಂ ।
ನಗೆ ಮೊಳೆಯಲ್ ಕರಣವಿತತಿ ತವಕಿಸೆ ಧೃತಿಯುಂ ॥
ಮಿಗೆ ಕುಂದಲಾತನಂಗದೊ ।
ಳೊಗೆಯಲ್ ಬಹುವಿಧವಿಕಾರಮಾನದನಱಿದೆಂ ॥ ೧೧೨

ಅಂತು ಮನದೊಳ್ ತವಕಂಗೆಯ್ದುಱದು ಕಣ್ಸನ್ನೆಯಿಂ ಸಕಲನಾರನಾರಿಯರಂ ಕಳುಪಿಯಾನಿರ್ದೊಡಂ ನಾಣ್ಚದೆ

ಇನಿತು ದಿನಂ ಕಾಡಿದೆ ಧೂ ।
ರ್ತೆ ನಿನ್ನನಾನಿಂದು ಬಿಡುವೆನೇ ಎನುತುಂ ಭೋಂ ॥
ಕೆನೆ ನಿಱುಗೆ ಪಾಯಲಾನಿ ।
ನ್ನೆನಿತಂ ಸೈರಿಸುವೆನೆಂದು ಮುಸುಕಂ ಮಾಣ್ದಂ ॥ ೧೧೩

ಅಂತೆನ್ನ ಮುಸುಕಂ ತೆಗೆದು ಅಡಪವಂ ಕೆಲದೊಳಿಟ್ಟು

ಇಂದು ಕೃತಾಂತಮಂದಿರಮನೆಯ್ದುವೆನೆಂದ ಱಿ ದಾರುವರ್ಮನಂ ।
ಮೊದಲೆವಾಯ್ದು ಮುನ್ನುರವನೊತ್ತಿ ನೆಲಕ್ಕೆಱೆದಿಕ್ಕಲವಂತನಂ ॥
ನೊಂದು ಕರುಳ್ಗಳಂ ರುಧಿರಮಂ ನೆಱೆ ಕಾಱು ಬಱಿಲ್ದು ಬಿದ್ದಿನೆ ।
ನ್ನಿಂದವನಲ್ಕೆ ಕೊಂದು ಬಱಿಕಾಂ ಪೊಱಮಟ್ಟೆನಿಳಾಧಿನಾಯಕಾ ॥ ೧೧೪

ಅಂತು ಪೊಱಮಡುತುಂ

ತರುಣಿಗೆ ಝೋಂಪಿಸಿದೊಡೆ ಬೊ ।
ಮ್ಮರಕ್ಕಸಂ ದಾರುವರ್ಮನಂ ಮುಳಿಸಿಂ ಸಂ ॥
ಹರಿಸಿದನೆನುತಾಂ ಪೊಱಮಡೆ ।
ನೆರೆದಿರ್ದವರತ್ತಲಿತ್ತಲೋಡಿವರೆಲ್ಲರ್ ॥ ೧೧೫

ಆಕೆಳಕಳದೊಳ್ ಬಾಲಚಂದ್ರಿಕೆಯುಮಾನುಂ ಪೊಱಮಟ್ಟು ಪೋದೆ ವು. ಆತನ ಮರಣವಾರ್ತೆ ಕರ್ಣಪರಂಪರೆಯಿಂ ಚಂಡವರ್ಮನ ಕಿವಿಗೆಯ್ದೆ

ಮುನಿದೆಯ್ದೆ ಬಾಲಚಂದ್ರಿಕೆ ।
ನೆನೆದಳ್ ಹಾ! ದಾರುವರ್ಮ ನಿನ್ನಯ ಸಾವಂ ॥
ಮನಸಿಜನಿಭಾಂಗ ಹಾ! ಹಾ! ।
ಎನುತುಂ ಗುಣಿ ಚಂಡವರ್ಮನಂದೆಯ್ತಂದಂ ॥ ೧೧೬

ಅಂತು ಬಾಯಱಿಯುತ್ತುಂ ಬಂದಾತನ ಕಳೇಬರನುಂ ಕೃಶಾನುವಿಂ ಗೊಪ್ಪಿಸಿ ಬಱಿಯಂ

ಕನತನಗೆ ಬೇಡಬೇಡೆಂ ।
ದೆನ್ನೆ ಸೋರ್ಕಿರ್ದಂ ಬಾಲಚಂದ್ರಿಕೆಯನಾರ್ಭಟದಿಂ ॥
ಬಿನೋಳರಿಸಿ ಬೊಮ್ಮರಕ್ಕಸ ।
ನನುವಮಾನಿಸದೊದೆಯೆ ದಾರುವಮರ್ದಂ ತೀರ್ದಂ ॥ ೧೧೭

ಎಂದು ಜನವಾದಂ ನೆಲೆಗೊಂಡಿರಲಾಂ ವಿಪ್ರವೇಷದೊಳಿರ್ದು ಕೆಲವು ದಿನದಿಂ ಮೇಲೆ ಹೇಮದತ್ತನಂ ಸಾರ್ದು ಬಾಲಚಂದ್ರಿಕೆಯುಂ ಬೇಡಲಾತ ನಿಂತೆಂದಂ:—

ಈಕನ್ಯಕೆಯನದೊರ್ಬಂ ।
ಸೋಂಕಿರ್ದಂ ಬೊಮ್ಮರಕ್ಕಸಂ ಬ್ರಾಹ್ಮಣ ನೀ ॥
ನೇಕೆ ಮರುಳಾಗಿ ಪರಿಣಯ ।
ನಾಕಾಂಕ್ಷೆಯೊಳೀವೆ ಜೀವವಂ ವಿಧಿಗೊಲವಿಂ ॥ ೧೧೮

ಎಂದು ಪೇೞ್ದೊಡೆ ಆಬ್ರಹ್ಮರಾಕ್ಷಸನನೆಂತಾದೊಡಂ ಸಂತವಿಟ್ಟು ಕನ್ಯೆಯನೆೞವೆನೆಂದೊಡಾಂ ಕುಡುವೆನೆಂದು ಹೇಮದತ್ತಂ ಶುಭಲಗ್ನವಂ ನಿಶ್ಚಯಂಮಾಡಿ,

ತಳಿರ್ವಂದರ್ ತೋರಣಂ ವೇದಿಕೆ ವಿವಿಧಪತಾಕಾಳಿ ಭೃಂಗಾರುಕುಂಭಂ।
ಕಳಸಂ ಮೇಲ್ಕಟ್ಟು ವಾದ್ಯಪ್ರತತಿ ಸಕಲಧಾನ್ಯಾಂಕುರಂ ಸತ್ಸಭಾವಂ ॥
ಕಳವೇಚೋಚ್ಚಾರಣಂ ಮಂಗಳಜಯನಿನದಂ ಪೆರ್ಚಲತ್ಯುತ್ಸವಂ ಕಂ ।
ಗೊಳಿಸಲ್ ಗೃಹೋದ್ಯೋಕ್ತದಿಂ ಕನ್ಯಕೆಯನೊಲವಿನಿಂದೀಯಲುದ್ಯುಕ್ತನಾದಂ॥

ಅಂತನುಗೆಯ್ದುಂ ಲಗ್ನಕಾಲಂ ಬಂದು ಮಜ್ಜನಂಬುಗುವಾಗಳ್

ಕುಸುಮಿತವಾದ ಪದ್ಮಲತೆಯೊಳ್ ಪೊಸಕೇದಗೆಯೊಳ್ಪಸಳ್ಗಳೊ ।
ಳ್ಪೊಸವಿನಮುಣ್ಮಿ ಪೊಣ್ಮಿದನಿತಲ್ಲದೆ ತುಂಬಿಗಳುಂ ಪೊದಲ್ದಲಾ ॥
ಲಿಸಿದಪುವೆಂಬಿನಂ ಸುದತಿಯರ್ ಪದೆದೆಣ್ಣೆಯ ದೇಹಮೊಯ್ದು ಘೋಲಂ ।
ಪಿಸುತಿರೆ ಪೊಸೆದರ್ ಮೃದುಕರಾಂಬುಜದಿಂ ನವಗಂಧತೈಲಮಂ ॥ ೧೨೦

ಅನಂತರಂ

ಹರಜೂಟದೊಳ್ ಒಲವಿಂದಂ ।
ಬರಗಂಗಾವಾರಿ ಸುರಿವ ತೆಱದಿಂದಂ ಮ ॥

ಚ್ಚಿರದೊಳ್ ಪೊಂಗೆಳಸಂಗಳ |
ನರುಣಾಧರೆಯರ ಜಲಾಭಿಷೇಕಂಗೆಯ್ದರ್ ‖ ೧೨೧

ಅಂತು ಮಜ್ಜನಂಗೆಯ್ಸಿ ಮಧುಪರ್ಕಮಂ ಮಾಡಿಸಿ

ಸೌಭಾಗ್ಯಪಟ್ಟಮಂ ತಾ |
ಳ್ವ ಭಾಳದೊಳೆಂದು ಕುಂಭಿಕುಂಭದ ಪಾಂಗಿಂ ‖
ಶೋಭೆವಡೆದಿರ್ದ ನೊಸಲೊಳ್ |
ಶ್ರೀಭೂಸುರರೊಲ್ದು ಕಟ್ಟಿದರ್ ಬಾಸಿಗಮಂ ‖ ೧೨೨

ಅಂತು ಬಾಸಿಗಂಗಟ್ಟಿ

ಸತಿಯು ಪದನಖದ ದೀಧಿತಿ |
ಸಿತಾಕ್ಷಿನವಕಾಂತಿ ನಡುವೆ ಪಟ್ಟೆಸಿತ್ತಂ ‖
ಬತಿಶಯಗುಣದಿಂ ಮೃದುಶು |
ಭ್ರತೆಯಿಂ ಮೆಱೆದಿರ್ಪ ಸೀರೆಯಂ ತೆಱೆವಿಡಿದರ್ ‖ ೧೨೩

ಅಂತು ತೆಱೆವಿಡಿದು

ಆಯುತವೇ ಆಯತವ |
ತ್ಯಾಯತವೇ ಆಯತಂ ಸಮಂತಾಯತವೇ ‖
ಆಯತಪುಣ್ಯಾಹಮೆನ |
ಲ್ಕಾಯುವತಿಯು ಮೊಗಮನೊಲ್ದು ನೋಡುತ್ತಿರ್ದಂ ‖ ೧೨೪

ಅಂತು ತೆಱೆದೆಗೆಯಲೊಬ್ಬರೊಬ್ಬರ ಮೊಗಮಂ ನೋಡಿ ಸಮಯ
ದೊಳ್ ಹೇಮದತ್ತಂ ಕೈನೀರೆಱೆಯೆ

ಇನನುದಯಂಗೆಯ್ಯಲೊಡಂ |
ವನಜಂ ನೀರೇಱುವಂತೆ ತತ್ಕೋಮಳೆಯಾ ‖
ನನಕಮಳವರಳಲಿನ್ನಯ |
ಮನಮೆಂಬುದ್ಭ್ರಮರಮೆಱಗಲೆಳಸಿತ್ತಾಗಳ್ ‖ ೧೨೫

ಎಡೆವಿಡದೆ ಪುಳಕಮುಣ್ಮಲ್ |
ಕಡುಲಜ್ಜೆಯೆನಿಪ್ಪ ಮಡುವಿನೊಳ್ ಕಂಪಿಸುತುಂ ‖

ದಡದಡಿಸಿ ಬೀಳ್ವೆನೆನ್ನಂ ।
ಪಿಡಿಯೆಂಬಂತಾಕೆ ನೀಡಿದಳ್ ನಿಜಕರವಂ ॥ ೧೦೬

ಸುದತೀರತ್ನಂ ಕೈಸಾ ।
ರ್ದುದು ಪುಣ್ಯದ ಫಲಮೆನುತ್ತೆ ಪದೆಪಿಂ ಕಾಂತಾ ॥
ಮೃದುಕರತಳಮಂ ಪಿಡಿದಂ ।
ಮದನಂ ತಿರುಪ್ಪೊಯ್ದು ಕರ್ಬುವಿಲ್ಲಂ ಪಿಡಿಯಲ್ ॥ ೧೦೭

ಅಂತು ಪಾಣಿಗ್ರಹಣಂಮಾಡಿ ಯಥೋಕ್ತ ಹೋಮಂಬೇಳ್ದನಂತರಂ ಸಪ್ತ ಪದಿಗಳಂ ಮೆಟ್ಟಿಸಿ ಬಳಿಕ್ಕ ಚತುರ್ಥದಿವಸದೊಳ್

ಶಿರದೊಳ್ ತಳ್ತ ಸಿತಾಕ್ಷತಂ ಗಗನಗಂಗಾಂಭಃಕಣಂ ಬಾಸಿಗಂ ।
ತರುಣೇಂದುದ್ಯುತಿ ರೋಚನಾತ್ತ ತಿಲಕಂ ಫಾಳಾಂಬಕಂ ಗೌರಿ ತ ॥
ತ್ತರುಣೀರತ್ನಮೆನಲ್ಕೆ ನಾಂದಿಮುಖದೊಳ್ ವಿದ್ವದ್ಗಣಸ್ತೋತ್ರಮಂ ।
ಕುರಿಸಲ್ ಪೆಂಪಿನುಮಾಮಹೇಶ್ವರನವೋಲ್ ಪುಷ್ಪೋದ್ಭವಂ ರಂಜಿಪಂ ॥

ಎಂದು ಸಕಲಬಂಧುಜನಂ ವಂದಿಜನಂಗಳುಂ ಸ್ತೋತ್ರಮಂ ಮಾಡಲಲ್ಲಿ ಕೆಲಂಬರ್,

ವನಜಮುಖಿಯುಂ ಭಯಂಬಿ ।
ಟ್ಟನುನಯದಿಂ ಮದುವೆಯಾದ ಪೂರ್ವಂ ನವಿಶ್ವಾ ॥
ಶನನೊದೆದ ಬೊಮ್ಮರಕ್ಕಸ ।
ನೆನುತಿಪ್ಪತ್ತಖಿಳಪೌರಜನಮನವರತಂ ॥ ೧೦೯

ಈ ಪುಷ್ಪೋದ್ಭವನೆಂಬ ಮ ।
ಹಾಪುರುಷಂ ಬ್ರಹ್ಮರಾಕ್ಷಸಂ ಮಿಗೆ ಮಾಯಾ ॥
ರೂಪಿಂದೆ ದಾರುಣವರ್ಗಮ ।
ಹೀಪತಿಯುಂ ಕೊಂದನಿವಳ ಬೆಸೆಯಿಂದೊಲವಿಂ ॥ ೧೧೦

ಎಂದು ಜನಾನುವಾದಂ ನೆಗಟೆ ಬಳಿಕಲ್ಲಿಯೆ ಪೂರ್ವರೂಪಂ ನಟಿಸಿ

ಮೊಗಮಂ ನೋಡಿ ನಿಜಾಕ್ಷಿ ಲಲ್ಲನುಡಿಯುಂ ಕೇಳ್ದಟ್ಟಿಯಿಂ ಕರ್ಣವಾ।
ಮಗಮೊಲ್ದಂಗವನಪ್ಪಿ ತೋಳ್ಗಳಧರೋದ್ಯತ್ಸಾರಮಂ ಪೀರ್ಗು ನಾ ॥

ಲಗೆ ಪೆಂಪಿಂದೊಡಗೂಡಿ ನಲ್ಮೆ ತಣಿವಂ ಪೆತ್ತಿರ್ಪುದಿಲ್ಲೆಂಬ ಕೂ ।
ರ್ಮೆಗೆ ಜನ್ಮಾಲಯಮಾದ ಕಾಂತೆಯೊಲವಂತಾತುಂತೆನಲ್ ಬಕ್ಕುರ್ವೋ ॥

ಇಂತು ಸುಖಮಿರ್ದು ಬೞಿಯಂ ನಿಮ್ಮಡಿಯನಱಿಸಲ್ ಬಂದು

ನಯನಂ ಮಾಡಿದ ಪುಣ್ಯವೆಂತುಟೊ ನಿಜಶ್ರೀಪಾದಮಂ ಕಂಡೆನೆ ।
ನ್ನಯ ಜನ್ಮಂ ಸಫಲಕ್ಕೆ ಬಂದುದು ಸಮಸ್ತೋರ್ವೀತಳಂ ಕೈಗೆ ನಿ ॥
ಶ್ಚಯದಿಂ ಸಾರ್ದುದೆನುತ್ತೆ ಭಕ್ತಿಭರದಿಂ ಮೆಯ್ಯಿಕ್ಕಿರಲ್ ತಮ್ಮನಂ ।
ಪ್ರಿಯದಿಂ ಮನ್ನಿಸಿದಂ ನೃಪಾಲತಿಲಕಂ ಶ್ರೀಮಾಗಧೋರ್ವೀಶ್ವರಂ ॥

ಅಂತು ಮನ್ನಿಸಿ ಮತ್ತಮಿಂತೆಂದಂ:—

ಇನಿಯಳ ಸಂಗಮಂ ತೊಱೆದು ಪೆಂಪಿನ ತನ್ನ ಶರೀರಸೌಖ್ಯಮಂ ।
ನೆನೆಯದೆ ತಂದೆತಾಯ್ಗಳರಮಂ ಪರಿಭಾವಿಸದೆನ್ನ ಭಕ್ತಿಯಿಂ ॥
ನನೆಕೊನೆವೋಗಿಯಿಂತಱಿಸಿ ಬಂದವನಾವನೆನುತ್ತೆ ತಮ್ಮನಂ ।
ಮನವೊಸೆದಪ್ಪಿ.......................ನಘಂಗವಿಕ್ರಮಂ॥ ೧೩೩

॥ ಗದ್ಯಂ ॥

ಇದು ನಿಖಿಲಬುಧಜನಮನೋಜವನದಿವಾಕರಕಿರಣಪ್ರತಿಮಪ್ರಸನ್ನ
ಶ್ರೀಮದಭಂಗವಿಠ್ಠಲಪದಾಂಭೋಜಮತ್ತಮಧುಕರ
ಮಧುಸೂದನನಂದನ ಸರಸಕವಿ ಚಾವುಂಡರಾಜ ವಿರಚಿತಮಪ್ಪ

ಅಭಿನವ ದಶಕುಮಾರಚರಿತೆಯೊಳ್

ಪುಷ್ಪೋದ್ಭವಕಥಾವೃತ್ತಾಂತಂ,

ಚತುರ್ಥಾಶ್ವಾಸಂ.

॥ ಪಂಚಮಾಶ್ವಾಸಂ ॥

— ಸೋಮದತ್ತಚರಿತಂ —

ಶ್ರೀ ತಳೊತ್ಸವ ಪಕ್ಷಂ ।
ಭೂತಳಪತಿ ನಿಜಸಹೋದರಾನ್ವಿತನೆಬ್ದಿಂ ॥
ಕೌತುಕದಿಂ ಶಶಿಕಾಂತಶಿ ।
ಲಾತಳದಿಂ ಪೊಗೆವಭಂಗವಿಟ್ಟಲಭೃತ್ಯಂ ॥ ೧

ಅಂತಲ್ಲಿಂದೆಬ್ದು ಪ್ರಪೋಷ್ಟವನ ಮೊಗಮಂ ನೋಡಲಾತನಿಂಗಿತವನ
ಱಿದಿಂತೆಂದಂ:—

ವಿಜಯಶ್ರೀಕುಚಮೌಕ್ತಿಕಾಭರಣ ಕೇಳ್ ವಿಜ್ಞಾಪನಂ ದೇವ ನೀಂ ।
ಬಿಜಯಂಗೆಯ್ವುದವಂತಿಪತ್ತನಕೆ ತತ್ಸೌಂದರ್ಯಮಂ ನೋಡಿ ದಿ ॥
ಗ್ವಿಜಯಂಮಾಳ್ಪುದೆನಲ್ಕದಂ ಮನದೆಗೊಂಡಾನಂದದಿಂ ಸದ್ಗುಣ ।
ವ್ರಜಯುಕ್ತಂ ತಳರ್ದಂ ವಿನೋದವಿಭವಂ ಶ್ರೀಮಾಗಧಕ್ಷೋಣಿಪಂ ॥ ೨

ಅಂತಲ್ಲಿಂ ತಳರ್ದವಂತೀಪುರಕ್ಕೆ ಬರ್ಪಾಗಳ್ ಮುಂದೆ

ತಾಳಮೃದಂಗಕಾಹಳರವಂ ಪದೆನೂರ್ಪ್ಪ ಪಿಶಾಚಕೋಟಿ ಭೇ ।
ತಾಳರ ಬೊಬ್ಬೆ ರಕ್ಕಸರ ತಿಂತಿಣಿ ಭೂತಭಯಂಕರಸ್ವನಂ ॥
ಕಾಳಕರಾಳಭೈರವಿಯರಾರ್ತರವಂ ಪುದಿದೊಪ್ಪುತಿರ್ಪ ದು ।
ರ್ಗಾಳಯಮಂ ಮನೋಮುದದೊಳೀಕ್ಷಿಸಿದಂ ನೃಪಕಾಳಭೈರವಂ ॥ ೩

ತಲೆಗಳ ಹೂಜೆ ಬಲ್ಗರುಳ ತೋರಣಮಕ್ಷಿಗಳಕ್ಷತಂ ಬೆರ ।
ಲ್ಗಳ ನಿಡುರಾಸಿ ನಾಲಗೆಯ ಪಂದರಮಿಕ್ಕಿದ ಕೈಗಳೋಳಿ ಮುಂ ॥
ದಲೆಯ ಬಣಂಬೆ ಡಿಟ್ಟಿಗೆ ಭಯಂಕರಮಂ ಮಿಗೆ ಮಾಳ್ಪ ಕಾಳಿಕಾ ।
ನಿಳಯಮನುರ್ವರಾಧಿಪತಿ ಕಂಡನತೀವಮನೋನುರಾಗದಿಂ ॥ ೪

॥ ರಗಳೆ ॥

ಅಂತಿರ್ಪ ದ ರ್ಗಾಲಯಂ ಮನೋಹರಮಾಗಿ ।
ತಿಂತಿಣಿಯ ಮರುಳ್*ಪಡೆಗಳಿಂ ಭಯಂಕರಮಾಗಿ ॥

ಭೂತಬೇತಾಳದಳ್ಳಳಿದಾಡುವಾಟದಿಂ ।
ಪೂತಿನಿಯರಲೆದು ರುಧಿರವನೆಱೆವ ಕಾಟದಿಂ ॥
ನರಮಾಂಸಮಂ ಬೇಯ್ಪ ರಕ್ಕಸರ ನೆರವಿಯಿಂ ।
ಮರುಳ ನಡುವಿಟ್ಟ ನೆತ್ತರ ತೋರ ಹರವಿಯಿಂ ॥
ಕಿಡಿಗಣ್ಣ ದಡಿಗಜಟ್ಟಿಗರ ಗರ್ಜನೆಗಳಿಂ ।
ನಿಡುಗರುಳ ಮಾಲೆಯಂ ತಳೆದಸುರಮುನಿಗಳಿಂ ॥
ಬೊಮ್ಮರಕ್ಕಸರೊಡನೆ ನಗುವ ಶಾಕಿನಿಯರಿಂ ।
ಸುಮ್ಮಾನದಿಂ *ತೊಳಲ್ವ ವೀರಡಾಕಿನಿಯರಿಂ ॥
ಅರಿದರಿದು ಗುಡಿಸಿದರ್ ಕೊರ್ಬಿದರ್ ಕುಱಿಗಳಿಂ ।
ಅರೆಗಣ್ಣಳೆಸೆವ ಕೋಣನ ತಲೆಯ ಮುಱಿಗಳಿಂ ॥
ಪುರುಷಾರ್ಥಸಿದ್ಧಿಯಂ ಪಡೆವಧಿಕಸಿದ್ಧರಿಂ ।
ಪರಮಾಯುಮಂ ಬಯಸುವತಿತಪೋವೃದ್ಧರಿಂ ॥
ದೆಸೆವ ದುರ್ಗಾನಿಲಯಮಂ ಮಹೋದ್ಯೋಗದಿಂ ।
ವಸುಧಾಧಿಪಂ ಪೊಕ್ಕನತಿಮನೋರಾಗದಿಂ ॥ ೬

ಉರಿಯಂ ಸೂಸುವ ಭಾಳನೇತ್ರಮಹಿರಾಜೋತ್ತುಂಡಲಂ ಕ್ರೂರಭೀ ।
ಕರದಂಷ್ಟ್ರಾಂಕುರಮಸ್ತ್ರಶಸ್ತ್ರಭಯದೋದ್ವೃತ್ತಾಳಿ ಸನ್ಮೌಕ್ತಿಕಾ ॥
ಭರಣಂ ಕೇಸರಿವಾಹನಂ ಮೃದುಜಟಾಸಂತಾನವೊಪ್ಪಿರ್ಪ ಭಾ ।
ಸುರದುರ್ಗಾಂಬಿಕೆಯಂ ನಮಸ್ಕರಿಸಿದಂ ವಿಕ್ರಾಂತಕಂಠೀರವಂ ॥ ೬

ಅಂತು ತಾನುಂ ಪುಷ್ಪೋದ್ಭವನುಂ ದುರ್ಗಾಂಬಿಕೆಗೆ ನಮಸ್ಕರಿಸಿ ಸ್ತೋತ್ರಜಪಧ್ಯಾನದಿಂ ಕಣ್ಗಳಂ ಮುಗಿದಿರ್ಪಾಗಳ್

ಅತಿರಭಸೋನ್ಮುಖಂ ಬಹಳಶೌರ್ಯಧುರಂಧರನಪ್ರತರ್ಕ್ಯನು ।
ದ್ಧತರಿಪುಸೈನ್ಯಸಾಗರಘಟೋದ್ಭವನುದ್ಘಟಿತಭಾಗ್ಯವೈಭವಂ ॥
ಕತಿಪಯಸೇನೆಯಂ ತಳೆದನೊರ್ಬ ಕುಮಾರಕನೊಲ್ದು ಮರ್ತ್ಯರ್ಗಸೇ ।
ವಿತೆಯೆನಿಸಿರ್ಪ ದುರ್ಗಿಗೆ ನಮಸ್ಕರಿಸಲ್ ಪದೆದಲ್ಲಿಗೆಯ್ದಿದಂ ॥ ೭

ಅಂತೊರ್ವ ಕುಮಾರಕಂ ಬಂದು ದುರ್ಗಾಲಯದ ಪೊಱಗೆ ಪರಿವಾರಮಂ ನಿಲಿಸಿಯೊರ್ಬನೆ ಬಳಗಂ ಪೊಕ್ಕು

ವಿಳಸದ್ಭಾಳಾಂಬಕಂ ಭಾಸುರಮಣಿಮುಕುಟಂ ಷೋಡಶೋದ್ಯದ್ಭುಜಂ ನಿ
ರ್ಮಳಚಂಚತ್ಕುಂಡಲಂ ಕುಂಕುಮಮಳಯಜಕಸ್ತೂರಿಕಾಲಿಪ್ತವಕ್ಷ
ಸ್ಸ್ಥಳವೊಪ್ಪಂಬೆತ್ತ ದುರ್ಗಾಂಘ್ರಿಗೆ ನಲಿದು ನಮಸ್ಕಾರಮಂ ಮಾಡಿದಂ ನಿ
ಶ್ಚಳಚಿತ್ತಂ ಭಕ್ತಿಯಿಂ ಕೌತುಕಮೆನಿಪ ಮಹಾಸ್ತೋತ್ರದಿಂದಾರ್ಯಪುತ್ರಂ ॥

ಅಂತು ನಮಸ್ಕರಿಸಿಯಿಂತೆಂದಂ :—

॥ ಸ್ವಾಗತೆ ॥

ರಾಜವಾಹನನೃಪಾಲಕನಂ ನಿ ।
ರ್ವ್ಯಾಜದಿಂ ಪಡೆದು ಕಂಡೊಡೆ ನಿನ್ನಂ ॥
ಪೂಜಿಪೆಂ ಬಹಳಮೌಕ್ತಿಕದಿಂದಂ ।
ಭೋಜನೇತ್ರೆ ಪಸಮುಗ್ಗಿಸಿತಾಂತು ॥ ೯

ಎಂದು ಪರಸಿಕೊಳ್ವಮಾತಂ ರಾಜವಾಹನಂ ಕೇಳ್ದು

ಬೆಡಗಿಮವೆ ಸೋಮದತ್ತನ ।
ನುಡಿಸುಪ್ರೋಲಿರ್ದಪ್ರಗೆನುತ್ತುಮಲಗ*ರ್ಣ್ಣಡೆಯುಂ ॥
ಪೊಡವಿಪತಿ ತೆಱೆದು ನೋಡಿದ ।
ನಡಿಗಡಿಗುಣ್ಮಲ್ಕೆ ಬಹಳತನುಪುಳಕಂಗಳ್ ॥ ೧೦

ಅಂತು ಧ್ಯಾನಮಂ ಬಿಟ್ಟು ಕಣ್ದೆಱೆದು ನೋಡಿ

ಇದಪೂರ್ವದರ್ಶನಂ ಸೋ ।
ಮದತ್ತನಂ ಕಂಡೆನೆಂಬ ಮಾತಂ ಕೇಳ್ದು ॥
ಬರ್ದ ನಯನಜಲದೊಳಾತಂ ।
ಪದಕಮಳಕ್ಕೆಱಗಿ ಬೞಿಕ ನಲಿದೀಕ್ಷಿಸಿದಂ ॥ ೧೧

ಅಂತು ಸೋಮದತ್ತಂ ರಾಜವಾಹನನ ಮುಖಕಮಲಮಂ ನೋಡಿ

ಇಂದೆನಗೆ ಭಾಗ್ಯದೇವತೆ ।
ತಂದಿತ್ತಳೆ ದೇವ ನಿಮ್ಮ ಪದಕಮಳಮನೆಂ ॥
ದಂದೊಲ್ದು ಸೋಮದತ್ತಂ ।
ವಂದಿಸಿದಂ ಮಗು*ಳ್ದು ಮಗು*ಳ್ದು ನೃಪತಿಗಲಂಪಿಂ ॥ ೧೨

ಅಂತು ವಂದಿಸುವುದುಂ ರಾಜವಾಹನಂ ಸೋಮದತ್ತನಂ ತೞ್ಕೈಸಿ ಕೊಂಡು ಪತ್ತಿರೆ ಕುಳ್ಳಿರಿಸಿ

ಈರಾಜ್ಯಪದವಿಚೆತ್ತಣ |
ಡೀರಭಸಂಗೆಯ್ವ ಸೇನೆಯೆತ್ತಣ್ತೆನುತುಂ ||
ಆರಾಜಸೂನು ಬೆಸಗೊಳ |
ಲೋರಂತಿರೆ ಸೋಮದತ್ತನುಸಿರಲ್ ಬಗೆದಂ || ೧೩

ದೇವರ ಪಾದಪಲ್ಲವಮನೆಣ್ದೆಸೆಯೊಳ್ ಪಱೆದೀಕ್ಷಿಸುತ್ತೆ ನಾಂ |
ಭೂವಳಯಕ್ಕೆ ದರ್ಪಣಮೆನಿಪ್ಪ ಲಸತ್ಕುಸುಮಾಪುರಪ್ರದೇ ||
ಶಾವನಿಯೊಳ್ ಬರುತ್ತುಮಿರೆ ಮುಂದೆ ಪಸುರ್ವ್ವೞ್ದೊರ್ಗಂಗಲಿಂದೆ ಶೋ |
ಭಾನಹಮಪ್ಪದೊಂದು ಪನಮಿರ್ದುದು ಕೇಳ್ ಭುವನಾಧಿನಾಯಕಾ || ೧೪

ಆವನಮನೆಯ್ದಲಱೊಳಗೆ

ಉದಯಗಿರೀಂದ್ರದೊಳ್ ದಿನಕರಂ ಪದೆಬಂದುದಯಿಪ್ಪನೆಂಬ ಮಾ |
ತದು ಪುಸಿಯೆಂಬಿನಂ ಕಿರಣಜಾಲದಿನೆಣ್ದೆಸೆಯಂಧಕಾರಮಂ ||
ಬೆದಱಿಸುತಿರ್ಪುದೊಂದು ಪೊಸಮಾಣಿಕಮೊಪ್ಪಿದಿರಲ್ಲಿ ಬಿಟ್ಟಿರ |
ಲ್ಕಿದು ಪೊಸತಾನ ಕಾರಣದಿನಿಲ್ಲಿಗೆ ಬಂದುದೆನುತ್ತೆ ನೋಡಿದಂ || ೧೫

ಇದು ಮಾಂಸಖಂಡಮೊಂದೋ |
ವದೆ ಗಿಡುಗಂ ತಂದು ಬಿಸುಟುದೋ ಪದೆಪಿಂ ಮೇ ||
ಣಿದಮೂಲ್ಯಮೊಂದು ದೈವಂ |
ಮುದದಿಂದೆನಗಿತ್ತುದೋ ಎನುತ್ತೀಕ್ಷಿಸಿದಂ || ೧೬

ಅಂತು ನೋಡಿ

ಫಣಿರಾಜವಿಶಾಲಲಸ |
ತ್ಫಣಾಗ್ರದಂತೆಸೆವ ಹಸ್ತಕಂಕಣದೊಳ್ ಕೇ ||
ಮಣಿಸಲ್ತಕ್ಕುದೆನುತ್ತಾ |
ಮಣಿಯುಂ ತೆಗೆದಂ ನೃಪಾಲಕುಲಮಣಿದೀಪಂ || ೧೭

ಅಂತಾಮಾಣಿಕಮಂ ಕೊಂಡು ಬರ್ಪಾಗಳ್

ತನಗೆ ಮಣಿ ದೊರಕದೆಂಬೊಂ ।
ದನುತಾಪದೆ ತಪನನೆಯ್ದಿದನೊ ಶರನಿಧಿಗೆಂ ॥
ಬಿನಮಿಸೆವ ರಾಗದಿಂ ಭೋಂ ।
ಕೆನಲಪರಾಂಭೋಧಿಗಿಳಿದನಬ್ಜಸಹಾಯಂ ॥ ೧೮

ಅಂತು ಸೂರ್ಯನಸ್ತಮಾನವಾಗಲೊಡಂ,

ತೊಳಲ್ವ* ಭಟರ್ಕಳಬ್ಬರಣೆ ಕುಂಜರಬೃಂಹಿತಮಶ್ವಹೇಷಿತಂ ।
ಪಲವು ಪದಾತಿವಾದ್ಯರವಮುತ್ಫಲಕಸ್ಫುಟತಾಡನಸ್ವನಂ ॥
ಜಲಧರವೆಂಬೊಲೆನ್ನ ಕಿವಿಗೆಯ್ತರಲಾಂ ಪಡೆದೊಂದು ವಾಹಿನೀ ।
ಕಳಕಳಮೆಂದು ನಿಶ್ಚಯಿಸಿದೆಂ ಬಗೆಯೊಳ್ ನೃಪರೂಪಮನ್ಮಥಾ ॥ ೧೯

ಅಂತಾ ಕಳಕಳವಂ ಕೇಳ್ದಾರಾತ್ರಿಯೊಳೊರ್ಬನೆ ಪಾಳಿಯುಮಂ ಪುಗು ವುದಂ ಪೊಳಲುವೇಟ್ಟಿಂದು........................ಕುಸುಮಪುರದ ಪೊಱವೊಱಲ ದೇವಾಲಯದೊಳ್ ನಿದ್ದೆಗೆಯ್ದು ಬೆಳಗಾಗಲೊಡಂ

ಇಕ್ಕಿದ ಯಜ್ಞಸೂತ್ರಮೆರಡುಂ ಕರದೊಳ್ ಪ್ರಸವರ್ಧ ಕೊಂಕುತೊಳ್ ।
ಸೆಕ್ಕಿದ ಪುಸ್ತಕಂ ಪಿಡಿವ ಪೀಲಿಯ ನುಣ್ಗೊಡೆಯುಟ್ಟಧೋತ್ರಮೊ ॥
ಯ್ದೆಕ್ಕೆಟಿಸಿದರ್ ಕುಕ್ಷಿ ನಡುಕಂ ಮಿಗುವಂಗಮಗುರ್ಬಿಸುತ್ತಿರಲ್ ।
ಚೆಕ್ಕನೆ ಬಂದನೊರ್ವ ಬಡಪಾರ್ವನರಾತಿಚಮೂಭಯಂಕರಾ ॥ ೨೦

ಅಂತೊರ್ಬಂ ಬಡಪಾರ್ವಂ ದಾನಾರ್ಥಿಯಾಗಿ ಬಂದು ದಾನಮಂ ಬೇಡಲೊಡಂ ಕಂಡು

ಕುಡುವನೊ ಕುಡನೋ ಎನುತುಂ ।
ನಡುನಡುಗುತ್ತಂಜಿ ಬಂದು ಬೇಡ್ಪವನಿಂದಂ ॥
ಕುಡದಿರ್ಪವನತಿಕಷ್ಟಂ ।
ಪೊಡವಿಯೊಳೆಂಬುಕ್ತಿಯುಂ ವಿಚಾರಿಸಿ ಬಱಿಯಂ ॥ ೨೧

ಅಪ್ರತಿದಾನವೆನುತ್ತುಂ ।
ಸುಪ್ರೀತಿಯೊಳೆನ್ನ ಕೆಯ್ಯ ಮಾಣಿಕವಂ ತ ॥
ದ್ವಿಪ್ರಂಗೆ ಕೊಟ್ಟು ಪದಪ ।
ದ್ಮಪ್ರಣತಶರೀರನಾದೆನವನಿಪತಿಲಕಾ ॥ ೨೨

ಅಂತು ಬ್ರಾಹ್ಮಣಂಗೆ ರತ್ನಮಂ ಕುಡಲಾತಂ
ತನು ನಯಮೇಱೆ ವಕ್ತ್ರಕಮಲಂ ಸುವಿಕಾಸಮನೆಯ್ದೆ ಚಿತ್ತಸಂ ।
ಜನಿತಮುದಂ ಕವಲ್ವರಿಯೆ ವಿಸ್ಮಯಸಂಭ್ರಮುವ್ರರ್ವೆ ಭೂಸುರಂ ॥
ಮನಮೊಸೆದೆನ್ನನೊಲ್ದು ಪರಸುತ್ತನುರಾಗದೊಳಿತ್ತ ದಾನದಿಂ ।
ನಿನಗೆ ಶುಭೋದಯಂ ಮಿಗುಗೆನುತ್ತೊಲವಿಂ ತಳರ್ದಂ ಮಹೀಪತೀ ॥ ೨೩

ಅಂತಾಬ್ರಾಹ್ಮಣನೆನ್ನಂ ಪರಸಿ ರತ್ನಮಂ ಕೊಂಡು ಪೋಗಿಯಾಂ ಮುನ್ನ ಕಳಕಳಮಂ ಕೇಳ್ದು ಪೊೞೆಯುಮಂ ಪೊಕ್ಕು

ಛಾಂದಸನಧಿಕದರಿದ್ರಂ ।
ಮಂದಂ ಜಿಹ್ವಾನಲಂಪಟಂ ಗತಭಾಗ್ಯಂ ॥
ಸೌಂದರರತ್ನಮನನರಮ ।
ಗಂದೊಲವಿಂ ಮಾಱಲೆಂದು ತೋಱಿದನರಸಾ ॥ ೨೪

ಅಂತಾರತ್ನಮನವರವರ್ಗೆ ತೋಱುದುಂ,

ಈಪಾರ್ವಂಗೀರತ್ನಮ ।
ದೀಪರಿಯಿಂ ಬರ್ಪುದರ್ಕೆ ಕಾರಣಮೇನೆಂ ॥
ದಾಪೊೞೆಯುದೊಳ್ ತೊೞಲ್ವ ಮ ।
ಹಾಪಿಶುನರ್ ಪಿಡಿದು ಕಟ್ಟಿದರ್ ಕಡುಬೇಗಂ ॥ ೨೫

ಅಂತಾಪಾರ್ವನಂ ನಿರ್ಬಂಧಿಸುವುದುಮಾತಂ ಕೊಟ್ಟಾತನಂ ತೋಱೆನೆಂದೆನ್ನನವರ್ಗೆ ತೋಱುದುಂ;

ಅಱಿವರ್ ಕಳ್ಳರ ಕೂಡಲಾತನಿವನಂ ಕಟ್ಟಾರ್ಪಿನಿಂ ಮಾಣಿಕಂ ।
ಕುಱುಪಾಯ್ತೆಂದು ಕೆಲಂಬರೆನ್ನನಗಟಿಂ ಕಾರಾಗೃಹಕ್ಕುಯ್ದು ಕಾ ॥
ಲ್ಕೊಱೆವಂತಾಸುರವಪ್ಪಿನಂ ಸಿಗಡಮಂ ಸಾರ್ಚಲ್ಕಿದೇನೆಂದು ಸೈ ।
ಮೆಱಗಾಗಿರ್ದೆನದಲ್ತೆ ಪೂರ್ವವಿಧಿಯಂ ಮೀಱಲ್ಕದೇಂ ಬರ್ಕುಮೋ ॥ ೨೬

ಅಂತೆನ್ನಂ ಸಂಕಲೆಯನಿಕ್ಕಿ ಮಾಣಿಕವಂ ಕೊಂಡಾಬ್ರಾಹ್ಮಣನಂ ಬಿಟ್ಟರ್. ಇತ್ತಲಾಂ ಕಾರಾಗೃಹದೊಳಗೆ

ಮೆಯ್ಗಳ್ ಬೆಳರ್ತು ಕಾಲ್ಗಳ್ ।
ಕೆಯ್ಗಳ್ ಬಡವಾಗಿ ಕಱುಕು ಪತ್ತಿದ ಪುರ್ಬಿಂ ॥

ಬಾಯ್ಗುಡಸಿದ ಕಿಸಿವಲ್ಲಿಂ ।
ಸುಯ್ಗೊಳಗಾಗಿರ್ದರಲ್ಲಿ ಸಂಕಲೆಯನರ್ಗಳ್* ॥ ೭೭

ಅಂತು ಸಂಕಲೆಯಲ್ಲಿರ್ದುವರಂ ಕಂಡು ನೀವಾರೆತ್ತಣವರೆಂದಾಂ ಬೆಸಗೊಳ್ವುದುಂ,

ಕುಸುಮಪುರಿಗೊಪ್ಪುವರಸಂ ।
ಕುಸುಮಾಯುಧಮೂರ್ತಿ ಧರ್ಮಶೇಖರನೆಂಬಂ ॥
ಕುಸುಮಾವತಿಯುಂ ಪಡೆದಂ ।
ಕುಸುಮಂ ಪರಿಮಳಮನೊಲ್ದು ಪಡೆವಪ್ರೋಲಾತಂ ॥ ೭೮

ಅಂತಾಕುಸುಮಪುರದೊಡೆಯನಪ್ಪ ಧರ್ಮಶೇಖರನ ಮಗಳಂ ಲಲಿತಪುರದ ದೀರ್ಘಬಾಹುಕಂ ಬೇಡೆ ಧರ್ಮಶೇಖರಂ ಕುಡದಿರ್ಪುದುಮಾದೀರ್ಘಬಾಹುಕಂ ಬಲ್ಪಿಂ ಕೊಳಲೆಂದು

ಕುಸುಮಾವತಿಯಂ ಕೊಳಲೆಂ ।
ದು ಸೇನೆಯುಂ ನೆಱಪಿ ದೀರ್ಘಬಾಹುಕನಾಗಳ್ ॥
ಕುಸುಮಪುರದರಸನಂ ಮು ।
ತ್ತಿ ಸಾಹಸಂಮೆಱೆವೆನೆಂದು ಕಾನೆೞ್ತಂದಂ ॥ ೭೯

ಅಂತೆೞ್ತಂದು ದೀರ್ಘಬಾಹುಕನಲ್ಲಿ ಬಿಡಲೆಮ್ಮರಸನಪ್ಪ ಧರ್ಮಶೇಖರನೆಮ್ಮಂ ಕಂಡು

ಧರೆಯೊಳಮೂಲ್ಯಂ ದನುಜಾ ।
ಮರಲೋಕದೊಳಿಲ್ಲೆನಿಪ್ಪ ಮಾಣಿಕವೇೞಂ ॥
ಟರಿನೃಪನ ಮನೆಯೊಳಿಂದೆ ।
ಮ್ಮರಸಂ ಕಳಲಟ್ಟಿದಂ ಬೞಿಕ್ಕಾಱುವರುಮಂ ॥ ೮೦

ಅಂತಾಮಾಱುವರುಂ ಬಂದು

ನವರತ್ನದ ಮನೆಯುಂ ಕ ।
ನ್ನವಿಕ್ಕಿ ಮಾಣಿಕವನುಯ್ವ ಪದದೊಳ್ ಕಾದಿ ॥
ರ್ದವರಱಿದು ಪಿಡಿದು ಮಾಣಿ ।
ಕ್ಯವನಾಱುಂ ಕಂಡರಱಿಸಿಯೊಂದಂ ಕಾಣರ್ ॥ ೮೧

ಅಂತಾವೇೞುಮಾಣಿಕವಂ ಕೊಂಡು ಪೋಗುತ್ತೆ ಸಿಕ್ಕವಲ್ಲಿಯೊಂದು ಮಾಣಿಕ್ಯವಂ ಬೀೞಲಿಕ್ಕಿದೆವು. ಅದು ದೈವಯೋಗದಿಂ ನಿನಗೆ ಬಂದುದಱಿಂ ನೀನೆಮ್ಮಂತು ಕಳ್ಳನಾದೆಯೆಂದವರ್ ಪೇೞ್ದು ಮತ್ತಂ

ಕಳವಿಂ ಕುಸುಮಪುರೀಶಂ ।
ಗೆಲಲಿರ್ದಪನೆಮ್ಮನೆಂದು ಲಲಿತಪುರೀಶಂ ॥
ಮುಳಿದೆತ್ತಿ ನಾಳೆ ಲಗ್ಗೆಯು ।
ನುಲಿಯುತ್ತುಂ ಮಾೞ್ಪೆನೆಂದು ಗರ್ಜಿಸುತಿರ್ದಂ ॥ ೨೧

ಅಂತು ಗರ್ಜಿಸುವ ದೀರ್ಘಬಾಹುಕಂ ಕಡೆವೇಂಟೆಗೆ ಪೋಗಿರ್ಪನೆಂದವರ್ ಪೇೞ್ವ ಸಮಯದೊಳ್

ಅಂಬರಗಂಗಾತೀರದೊ ।
ಳಂಬಿಂದೋಲಾಡುತಿರ್ಪ ಹಂಸಂ ವರುಣಾ ॥
ಶಾಂಬುಧಿಗೆ ಪಾಱಿ ಪೋದ ।
ತ್ತೆಂಬಂತಿನನಪರಜಲಧಿಗೆಯ್ದಿದನಾಗಳ್ ॥ ೨೨

ಇಂದಿರೆ ಪದ್ಮಮಂದಿರದೊಳಿರ್ದು ಮಹಾಪ್ರಣಯಪ್ರಕೋಪದಿಂ ।
ದೊಂದಿರುಳಕ್ಕೆ ಮುಚ್ಚಳವನಾಪುಗಿಲೊಳ್ ತೆಱಪಾಗೆ ಸೂೞ್ಗೆ ಕೃ ॥
ಷ್ಣಂ ದಯೆಯಿಂದೆ ಬಂದು ಬಿಗಿಯಪ್ಪೆ ಧರಾಂಗನೆಯುಂ ತದಂಗಕಾ ।
ರ್ಷ್ಣ್ಯಂ ದಿಟದಿಂ ಕವಲ್ತುದೆನೆ ಪರ್ವಿದುದುರ್ವಿಯ ಚಿತ್ತಮುಂ ತಮಂ ॥

ಅಂತಳವಿಗೞಿದ ಕತ್ತಲೆಯೊಳ್

ಅಲಘುಭುಜಬಲದಿನಾಗಳ್ ।
ಘೞಿಲನೆ ಪದೆದೆಲ್ಲರಂಘ್ರಿಯೊಳ್ ಸಾರ್ಚಿದ ಸಂ ॥
ಕಲೆಗಳನಿರ್ಕರದಿಂದಂ ।
ಬಳೆಯಂ ನುರ್ಗೊತ್ತುವಂತೆ ನುರ್ಗಿದನಾಗಳ್ ॥ ೨೩

ಅಂತವರಱುವರ ಸಂಕಲೆಯುಮಂ ಮುಱಿದವರ್ಬೆರಸು ದೀರ್ಘಬಾಹುವಿನ ಪಾಳೆಯದಿಂ ಪೊಱಮಟ್ಟು ಕುಸುಮಪುರಮಂ ಪೊಕ್ಕು ಧರ್ಮಶೇಖರನಂ ಕಾಣ್ಬುದುಮವನೊಡನೆಯುವರಿಂತೆಂದರ್:—

ಈತನತಿವಿಕ್ರಮೋದಯ |
ನೀತಂ ಪಡೆದೆನ್ನ ಕಾಲ ಸಂಕಲೆಯಂ ನಿ ||
ರ್ಭೀತಿಯೊಳುಡಿದು ಬಿಸುಟ್ಟಂ |
ಭೂತಳಪತಿ ನಿನ್ನ ಭುಜಬಲಕ್ಕೆ ಸಹಾಯಂ || ೩೬

ಎಂದವರ್ ಬಿನ್ನಪಂಗೆಯ್ಯಲಾಧರ್ಮಶೇಖರನೆನ್ನಂ ಮನ್ನಿಸಲಾತನೊಳಿಂತೆಂದೆಂ:—

ಎಲೆ ಧರ್ಮಶೇಖರೇಶ್ವರ |
ಮುಳಿದೆಯ್ತಂದಿರ್ಪ ದೀರ್ಘಬಾಹುಕನಂ ದೋ ||
ರ್ಬಳದಿಂ ಸಂಹರಿಸುವೆನ |
ಗ್ಗಳವೆನಿಸಿರ್ಪಧಿಕಚಿಂತೆಯಂ ಬಿಸುಡೆಂದೆಂ || ೩೭

ಆಮಾತಿಂಗಾತಂ ಪ್ರೀತಮನಸ್ಕನಾಗಿ ತನ್ನ ಚಾತುರಂಗಬಲವನೆನ್ನೊಡನೆ ತೆರಳವೇಳ್ದು

ಕತ್ತರಿಗೊಂಡ ಕರ್ಣಮೊಳನೀಲದ ನುಣ್ಪುಮರ್ದ*ಕ್ಷಿ ವಕ್ಷಮಂ |
ಪತ್ತಿದ ಕಂಧರಂ ಮೃದುಸಟಾವಳಿ ಸುಯ್ಲಿನರಳ್ವ ಘೋಣಮು ||
ದ್ವೃತ್ತಮನಂ ನಯಂಬಡೆದ ರೋಮಚಯಂ ನಿಮಿರ್ವೆತ್ತ ವಾಳಮ |
ತ್ಯುತ್ತಮಲಕ್ಷಣಂ ಮೆಱೆವ ವಾರುವಮಂ ಪಡೆದಿತ್ತನಾನೃಪಂ || ೩೮

ಸೊಗಸೆಸೆಯೆ ಬೆಂಗೆವಾಯ್ದೊ |
ಯ್ಯಗೆ ಮಡದಿಂದಾಂಕಿ ವಾಘೆಯಂ ಸಡಿಲೆ ಬಿಡಲ್ ||
ಮೃಗಕೌಶಿಕಸಂಭವವೇ |
ಗಗತಿಯಿನೊಪ್ಪಿದುದಾತುರಂಗಮರತ್ನಂ || ೩೯

ಅಂತೆಸೆವ ಜಾತ್ಯಶ್ವಮನೆನಗೆ ಕುಡಲೊಡಂ

ವಿತತದೃಢಾಸನಂ ನವಖಲೀನಗುಣಾಂಕಿತಬದ್ಧದೃಷ್ಟಿ ಲೇ |
ಪಿತಲಸದೂರು ಕಿಂಚಿದನುವಕ್ರಮಜಾನು ಋಜುಪ್ರಸನ್ನಸು ||
ಸ್ಥಿತತನುವೆನ್ನೊಳೊಪ್ಪೆ ಗತಿ ಧಾರೆ ಲಯಂ ಜವಮುಣ್ಮೆ ಬಲ್ಮೆಯಂ |
ಕೆತವೆನಿಸಿರ್ಪ ಚಿತ್ರಗತಿಯಂ ಮೆಱೆದೆಂ ಸುಕುಮಾರಶೇಖರಾ || ೪೦

ಅಂತೆನ್ನ ತೊಡೆಗಳವಟ್ಟ ಕುದುರೆಯಂ ಬೆಂಗೆವಾಯ್ದು ಕಿಱಿದು ಸೇನೆ ಸಹಿತಂ ಪೊಱಮಟ್ಟು ಬೇಂಟೆಯಿಂ ಬರುತಿರ್ದ ದೀರ್ಘಬಾಹುಕನೊಳ್ ಪೊಣರ್ಚಲ್ ಪೋಪನ್ನೆಗಂ

ಪೆರ್ಬುಲಿ ಪಾಯೆ ಕಂಠಗತಜೀವಿತರಾದವರೆಕ್ಕಲಂ ಕನ ।
ಲ್ದುರ್ಬಿ ಪಿಸುಳ್ದ ದೊಂಡೆಗರುಳಂ ತಳೆದಿರ್ದವರಾದುದು ಭಲ್ಲುಕಂ ॥
ಜರ್ಬಿಯವುಂಡೆ ಬಳ್ಕಿದುಳಿಲ್ವ ಶಿರಂಗಳನೊತ್ತುತಿರ್ಪವರ್ ।
ಸರ್ಬಮೃಗಂಗಳಂ ಕೆಡಪಿ ಒರ್ಪವರೊಪ್ಪಿದರುರ್ವರಾಧಿಪಾ ॥ ೪೧

ಅಂತು ಬೇಂಟೆಕಾಱನಡೆ ಬರ್ಪುದಂ ಕಂಡು ದೀರ್ಘಬಾಹುಕನ ಬರವಂ ನಿಶ್ಚಯಂಮಾಡಿ ಸಂಶಯಾಸ್ಪದಮಿಲ್ಲದಂತು ತನ್ನ ಪಾಳೆಯದಿಂದಿದಿವರ್ಪ ಸೇನೆಯೆಂಬಂತೆ ನಂಬುಗೆ ಪುಟ್ಟುವಂತೆ ಪೋಗಿ ತನ್ನೃಪನಂ ಸಮ್ಮುಖದೊಳ್ ಕಂಡು

ಬಿಡುಬಿಡು ನಿನ್ನ ಬಲ್ಗುದುರೆಯಂ ಕಡುಪಿಂ ಪಿಡಿದಿರ್ದ ಡಾಣೆಯಂ ।
ಜಡಿ ಮುಳಿದಿರ್ದನೆಂದಿರದಿರೆಂದು ನಿಜಾಶ್ವಮನಾಂಕೆ ಮೌಳಿಯಂ ॥
ಸಿಡಿಲೆಱಪಂದದಿಂದೆಱಗೆ ಸೈವೆಱಗಾಗಿ ಮಹಾಗ್ರಹೋಚ್ಚ್ರಯಂ ।
ಪೊಡೆದವೊಲಾಗೆ ಮೂರ್ಛೆಗೊಳಗಾದನಟಿಲ್ ಮಿಗೆ ದೀರ್ಘಬಾಹುಕಂ ॥

ಅಂತು ಮೂರ್ಛಿತನಾದುದಂ ಕಂಡಾಂ ಶಿರಶ್ಛೇದಂಗೆಯ್ಯಲೊಡಂ ಕಳಕಳಂ ಪೊಣ್ಮೆ

ಎಲೆ ಕಳ್ಳರ್ ಪಾಯ್ದರಲ್ತಲ್ತ ಸವಸದೆ ಬಯಲ್ ಬಂದುದಲ್ತಲ್ತು ಕೇಳ್ ಮು ।
ದ್ಬಲವೀಗಳ್ ಬಂದುದಲ್ತಲ್ತಿದು ಕುಸುಮಪುರೀನಾಥಸೈನ್ಯಂ ಮಹಾದೋ ॥
ರ್ಬಲದಿಂದೇಟ್ಟಿಂದು ನಮ್ಮುರ್ವಿಪನನದಟನಿಂ ತೀರ್ಚಿತೆಂದಂತತಿವ್ಯಾ ।
ಕುಳಚಿತ್ತರ್ ದೀರ್ಘಬಾಹುಕ್ಷಿತಿಪನ ಸುಭಟರ್ ಮುಂಗೆಡುತ್ತಿರ್ದರಾಗಳ್ ॥

ಅಂತು ಮುಂಗೆಟ್ಟು ಸುತ್ತಲುಂ ಪರಿದು ಪೋಪ ರಿಪುಸೈನ್ಯಮಂ ಕಂಡು

ಗರುಡನಹಿನಿಚಯಮುಮಂ ಸಂ ।
ಹರಿಸುವ ತೆಱದಿಂದೆ ದೀರ್ಘಬಾಹುಕನ ಮಹೋ ॥
ದ್ಧುರಸೇನೆಯನಾರ್ಪಿಂದಾ ।
ವರಿಸಿ ಕೊಲಲ್ಕಸಗಿದೆಂ ನೃಪಾಲಕತಿಲಕಾ ॥ ೪೪

ಅಲ್ಲಿ ಬೆರಲಂ ಕರ್ಚಿದರಂ ಪರಿಹರಿಸಿ, ಮರನನೇಱಿದರಂ ಮರಳಿ ನೋಡದೆ, ಹಲ್ಲಂ ಕಿಱಿದರಂ ಕೊಲ್ಲದೆ ಬಿಟ್ಟು, ಹುತ್ತವನಡರ್ದರಂ ಹತ್ತಿ ಸಾರದೆ, ನೀರ್ಗಾಂತರ್ಗಳ್ಕಿಯುಂ ತೋಱದೆ, ಲಿಂಗವನಪ್ಪಿದರಂ ಹಿಂಗಳೆದು, ನೀರಂ ಪೊಕ್ಕರ್ಗೆ ಬೀರವಂ ತೋಱದೆ, ಬಿಡುದಲೆಯುವರ್ಗೆ ಕಡುಪ್ರವೀಱದೆ, ಹುಲ್ಲಂ ಹಿಡಿದರ್ಗೆ ಬಲ್ಲಾಳ್ತನವಂ ತೋಱದೆ, ನಿರಾಯುಧರಂ ಧುರದೊಳ್ ಮುಟ್ಟದೆ, ಶರಣೆಂದವರ ಶಿರವಂ ಕಾದು, ಮಾಱಾಂತರಂ ತಾಱುತಟ್ಟುಪ್ಪಿನಂ ಮಾಡಿ,

ಜವನಱೆಯುಟ್ಟುವಂತೆ ಕಡೆಗಾಲದ ನಂಜಿನ ಗಾಳಿ ಬೀಸುವಂ ।
ತವಿರಳಮೋಷವಹ್ನಿ ಕವಿನಂತಸಿತೋರಗನಟ್ಟಿ ನುಂಗುವಂ ॥
ತನಚಱದೆತ್ತಲುಂ ಪರಿದು ಭೀತಿಯೊಳೋಡುವ ದೀರ್ಘಬಾಹುಸೈ ।
ನ್ಯವನಡಪಾಯ್ದು ಸಂಹರಿಸಿದಂ ನಿಜಸಾಹಸದಿಂ ಮಹೀಪತೀ ॥ ೭೫

ಅಂತು ರಣಾವೇಶದಿಂದಾಂತ ಭಟಸಂತಾನಮಂ ಕೃತಾಂತಮಂದಿರಮಂ ಪುಗಿಸುವಾಗಳ್

ಪಿರಿದುಂ ದೈವವಿಘಾತಿಯಿಂದೆ ಸುಖಮಂ ಕಾಣ್ಬಾಸೆ ಮಾಣ್ದಿರ್ದೊಡೇಂ ।
ಗಿರಿಯೊಳ್ ತಾಪಸವೃತ್ತಿಯಿಂ ಕ್ಷಪಿಸಿ ಜೀವಂ ಪೋಗದಿಂದಿಲ್ಲಿ ದು ॥
ರ್ಮರಣಕ್ಕಿಂತೊಳಗಾದೆನೇ ವಿಧಿಯೆ ಮುನ್ನಾನಾವನಂ ದುಃಖಿಸಾ ।
ಗರದೊಳ್ನೂಂಕಿದೆನೆಂಬೊರಲ್ವ ದನಿಯಂ ಕೇಳ್ದೆಯ್ದಿದಂ ಭೂಪತೀ॥ ೭೬

ಆಧ್ವನಿಯಂ ಕೇಳ್ದಲ್ಲಿಗೆಯ್ದಿ ನೋೞ್ಪನ್ನೆಗಂ

ಮಂಗಳಮೂರ್ತಿ ತಾಪಸಶಿರೋಮಣಿಯಾಗಮಚಕ್ರವರ್ತಿ ಶು ।
ದ್ಧಾಂಗನಬಾಧಕಂ ಕುಲವಧೂಸಹಿತಂ ಮಖಸೂತ್ರಸಚ್ಛಿಖಾ ॥
ಸಂಗತನತ್ಯಪೂರ್ವದುರಿತಾಂಬುಧಿಬಾಧಕಬಾಡಬಾನಳಂ ।
ಸಂಗರಬಾಧೆಗಳ್ಕಿ ಶಿವಘೋಯೆನುತಿರ್ದನಬೊರ್ಬ ಭೂಸುರಂ ॥ ೭೭

ಮತ್ತಾತಂ ಬಾಡಬನಾಮಧೇಯನಾಗಿಯುಂ ಜಡಾಕರನಿವಾಸಿಯಲ್ತು; ತಿಲಕಾಲಂಕೃತನಾಗಿಯುಂ ಮಹಾರಣ್ಯಮಲ್ತು; ರಾಮಾನ್ವಿತನಾಗಿಯುಮಯೋಧ್ಯೆಯಲ್ತು; ಕಾಕಪಕ್ಷವಿಳಾಸಿಯಾಗಿಯುಂ ಬಲಿಭುಕ್ಕಲ್ಲೆನಿಸಿರ್ದ ಭೂಸುರನಂ ಕಂಡೆನ್ನ ಕೈದುವಂ ಕೀಱಾಳಿನ ಕೆಯ್ಯೊಳ್ಕೊಟ್ಟುಮವರಿರ್ವರುಮಂ ನಮಸ್ಕರಿಸಿ

ಈವೇಷಮೆತ್ತಣದು ಸವು ।
ರಾವನಿಗೆಯ್ತಪ್ಪುದೆತ್ತಣದು ನೀವೀರಾ ॥
ಜಾವಸಥಪುರೋಹಿತರೋ ।
ಭಾವಿಸಲರಿದೆಮಗೆ ಪೂರ್ವ ನಿಮ್ಮಯ ಬರವಂ ॥ ೪೮

ಎಂದು ನಿಮ್ಮಿರವೆಲ್ಲಿ, ಇಲ್ಲಿಗೆತ್ತಣಿಂ ಬಂದಿರೆಂದು ಭಕ್ತಿಪುರಸ್ಸರಂ ಕೇಳಲಾಗಿ ದ್ವಿಜೋತ್ತಮನಿಂತೆಂದಂ:—

ಏನಂ ಪೇಳ್ವುದೊ ಪೂರ್ವವಂ ನೆನೆದೊಡಗ್ನಿಜ್ವಾಲೆ ಕೈಕೊಂಡು ಹೃ ।
ತ್ಸ್ಥಾನಂ ಭೋರೆಂಕೆನೆ ಭಸ್ಮವಾಗಲಸು ಬೇಗಂ ಪಾಱುದಿಗ್ಭ್ರಾಂತಿಯಿಂ ॥
ದೀನಂ ತೋಱದೆ ಪೋಪುದಾದೊಡಮದಂ ಪೇಳ್ದಪ್ಪೆನೆಂದಾದ್ವಿಜಂ ।
ತಾನೆಂತಾನುಮನಸ್ಥೆ*ಯಿಂದುಸಿರ್ದದರ್ಕುದ್ಯೋಗವಂತಾಳ್ದದಂ ॥ ೪೯

ಅದೆಂತೆನೆ

ಮಗಧಕ್ಷಿತೀಶ್ವರಂ ಸ ।
ತ್ವಗುಣಾನ್ವಿತರಾಜಹಂಸನೆಂಬಂ ವಿಶ್ವೋ ॥
ರ್ವಿಗೆ ಮೆಱೆವ ವಸುಮತೀಕಾಂ ।
ತೆಗೆ ಕಾಂತಂ ವಿವಿಧರಿಪುನೃಪಾಲಕೃತಾಂತಂ ॥ ೫೦

ಆತನರಮನೆಯ ಸಚಿವರ್ ।
ನೀತಿವಿದರ್ ಸಕಲಧರ್ಮಶಾಸ್ತ್ರಕ್ರಮವಿ ॥
ಖ್ಯಾತರ್ ನಾನಾಭೋಗಪ ।
ರೀತರ್ ಪದೆದೆಣ್ಬರುಂ ವಿನೋದವಿಳಾಸರ್ ॥ ೫೧

ಅವರೊಳ್ ಪ್ರಸಿದ್ಧಿವಡೆದೊ ।
ಪ್ಪವನಾತಂ ಪ್ರೇಮದತ್ತನೆಂಬಾತಂ ಪಾ ॥
ಪವಿದೂರತೀರ್ಥಯಾತ್ರಾ ।
ವ್ಯವಸಾಯದೊಳೊಂದಿ ಪದೆಪಿನಿಂ ಪೊಱಮಟ್ಟಂ ॥ ೫೨

ಅಂತು ಪೊಱಮಟ್ಟನೇಕದೇಶವಂ ಕಳೆದೊಂದು ಧರ್ಮಪುರಮೆಂಬ ಅಗ್ರಹಾರಕ್ಕೆ ಬಂದು ಯಜ್ಞಶರ್ಮನೆಂಬ ದ್ವಿಜೋತ್ತಮನ ಮನೆಯೊಳ್ ಕಿಱಿದುದಿನವಿರಲ್

ಆತನ ಸಚ್ಚಾರಿತ್ರ ।
ಕ್ಕಾತನ ಸದ್ಗುಣಕೆ ನಾಡೆ ಸಂತೋಷಂಬ ॥
ಟ್ಟಾತಂಗೆ ಯಜ್ಞಶರ್ಮಂ ।
ಪ್ರೀತಿ ಮಿಗಲ್ ಕಾಳಿಯೆಂಬ ಮಗಳಂ ಕೊಟ್ಟಂ ॥ ೫೩

ಅಂತಾಕಾಳಿಯುಂ ಪಾಣಿಗ್ರಹಣವಂ ಮಾಡಿ ಕಿಱಿದುದಿನಮಿರಲವಳ್ಗೆ ಸಂತತಿಯಿಲ್ಲದಿರ್ಪುದಱಿಂ ಮಗುಳ್ದು ಯಜ್ಞಶರ್ಮನೆಂಬಂ

ಅವಳನುಜೆಯುಂ ವಿಲಾಸೋ ।
ತ್ಸವದಿಂ ಕಾಳಿಂದಿಯೆಂಬಳಂ ಕೊಟ್ಟಂ ಭೂ ॥
ದಿವಿಜನಿಧಿಯಾಕೆಯೊಳ್ ನಿ ।
ತ್ಯವಿನೋದದಿನಿರ್ದನನುದಿನಂ ತತ್ಸಚಿವಂ ॥ ೫೪

ಅಂತಾಕೆಗಮಾತಂಗಮತಿಸ್ನೇಹಂ ಸಲುತ್ತಿರಲ್ ಕೆಲವು ದಿನದಿಂ ಮೇಲೆ

ಹೃದಯದೊಳನುರಾಗಾಂಕುರ ।
ಮುದಯಿಸೆ ಸಂತೋಷಮಖಿಳಬಂಧುಜನಕ್ಕಂ ॥
ದುದಯಿಸೆ ಪರಮೋತ್ಸವದಿಂ ।
ದುದಯಿಸಿದಂ ತನಯನವಳ್ಗೆ* ವಿಕ್ರಮಸಿಳಯಾ ॥ ೫೫

ಧನಧಾನ್ಯಬಂಧುಮಿತ್ರರ ।
ವನಿತಾತತಿ ರಾಜ್ಯಮೆಂಬುವೇವುದೊ ಮುದ್ದಿಂ ॥
ದಿನದನುನೊಡಚರ್ಯಾಡುವ ।
ತನಯಂ ಸಂಸಾರಶರಧಿಸೀಮೆಯದಲ್ತೇ ॥ ೫೬

ಅಂತವರ್ಗೆ ಪುತ್ರೋತ್ಪತ್ತಿಯಾಗಲೊಡಂ ಪೂರ್ವಸಿದ್ಧತಮಪ್ಪ ತೀರ್ಥಕ್ಕೆ ಪೋಗೆಲೆಂದು ಯಜ್ಞಶರ್ಮನಿಂ ಕಳಪಿಸಿಕೊಂಡು ಕಾಳಿ ಕಾಳಿಂದಿ ತತ್ಕುಮಾರನಾತನ ದಾದಿ ಸಹಿತಂ ಸರಯೂನದಿಗೆ ಪೋಗಿ ತಂತಮಗೆ ರಮ್ಯಸ್ಥಾನಮಂ ನೋಡಿ ಸ್ನಾನಮಂಗೆಯ್ವಾಗಳ್

ಉರಿ ಪರಿದಪ್ಪುದೆನ್ನೊಡಲೊಳುಳ್ಳೆರ್ದೆ* ಬೆಂದಪ್ಪುದೆನ್ನ ಗಂಟಲಂ ।
ಸರೆಬಿಗಿದಪ್ಪುದೊಂದು ನುಡಿಯುಂ ತಲೆದೋಱದು ಚಿತ್ತದುತ್ಸವಂ ॥

ಮುಱುಟಿತು ಭಾಗ್ಯದೇಟ್ಗಿ ಬಯಲಾಯ್ತು ಸಮಸ್ತಮದಂ ಮನೋಮುದಂ।
ಬಱಿದೆನಿಸಿತ್ತು ಮತ್ತು*ಸಿರ್ಪುದೇನೊ ವಿಧಿಪ್ರತಿಬಂಧಕಾರ್ಯಮುಂ ॥ ೫೮

ಎಂದು ಸ್ತ್ರೀಪುರುಷರಿರ್ವರುಂ ಬಿಸುಸುಯ್ಯಲಾನಿನಿತು ದುಃಖಕ್ಕೆ ಕಾರಣಮೇನೆಂಬುದುಂ ಮತ್ತಮಾದ್ವಿಜೋತ್ತಮನಿಂತೆಂದಂ:—

ಕನಸಿನ ಸಿರಿ ಕಾರ್ಮುಗಿಲೊ ।
ಡ್ಡಿನ ಚಿತ್ರಂ ಸತಿಯರೊಲ್ಮೆ ಮಿಂಚಿನ ಡಾಳಂ ॥
ಜನಪತಿಯ ಕೂರ್ಮೆಯೆನಲಾ ।
ತನೊಳಾಯ್ತಾತ್ಮಜನ ಸೌಖ್ಯವಿನ್ನೇವೇೞ್ವೆಂ ॥ ೫೯

ಅದೆಂತೆನೆ—

ಹೃದಯದ ತಾಪದಿಂ ಸವತಿಮತ್ಸರದಿಂ ತನಗಾತ್ಮಜಾತರಿ ।
ಲ್ಲದ ಘನಕೋಪದಿಂ ಪರರ ಪೇೞ್ಕೆಯುಂ ಕಡುಕೆಯ್ದು ಕಾಣಲಾ ॥
ಅದ ಚಲದಿಂದೆ ಪೆತ್ತ*ವಗೆ ದುಃಖಮನೋವದೆ ಮಾಡಿ ಕಾಳ ನೂಂ ।
ಕಿದಳೊಡಸಂದು ಬಂದ ತೊಱೆಯೊಳ್ ಮಗನಂ ಪಗೆಯೆಂಬ ಮಾೞ್ಕೆಯಿಂ ॥

ಅಂತು ಕಾಳ ತೊಱೆಯೊಳ್ ಮಗನಂ ನೂಂಕಿ ತಾನಲ್ಲದಂತಱಿತ್ತು ಬರಲ್ ಇಂಗಿತಸ್ವಭಾವದಿಂದವಳ್ ನೂಂಕಿದಳೆಂದು ಪ್ರೇಮದತ್ತನಱಿದು

ಹಾ ! ಮಗನೆ ಹಾ ! ಕುಮಾರಕ ।
ಹಾ ! ಮುದ್ದುಗ ಹಾ ! ವಿಳಾಸನಿಧಿ ಹಾ ! ಗುಣಿ ಹಾ ! ॥
ಹಾ ! ಮಕ್ಕಳ ಮಾಣಿಕಮೆಂ ।
ದಾಮೋಹದೊಳಾತನೆಯ್ದೆ ದುಃಖಿತನಾದಂ ॥ ೬೦

ಅದಲ್ಲದೆಯುಂ,

ಬೆಟ್ಟಮನೇಱಿ ಪಾಸಱೆಗೆ ಬೀೞ್ವೆನೊ ಪೆರ್ದೊಱೆಗೆನ್ನ ಜೀವಮಂ ।
ಕೊಟ್ಟು ಕೃತಾರ್ಥನಪ್ಪೆನೊ ದವಾಗ್ನಿಗೆ ಬೀೞ್ವೆನೊ ತನ್ನ ಜೆಪ್ಪೆಯುಂ ॥
ತೊಟ್ಟನೆ ಕಿೞ್ತುಕೊಳ್ವೆನೊ ನದೀತಟದೊಳ್ ಪದೆದನ್ನಪಾನಮುಂ ।
ಬಿಟ್ಟು ಶರೀರಮಂ ತೊರೆದು ಗೆಲ್ವೆನೊ ಸಂಸೃತಿಯುಂ ನಿರಂತರಂ ॥ ೬೧

ಎಂದು ಚಿಂತಿಸಿ ಮತ್ತಂ ಮನ್ಮಾರ್ಗಕ್ಕಾತ್ಮವಿಘಾತಂ ಕರ್ತವ್ಯಮತ್ತೆಂದು,

ಮೃದುತರ ಲೋಳೆವಾಯ್ ತಳರ್ವ* ದಟ್ಟಡಿ ಮೆಲ್ಲಗೆ ಮುದ್ದುಗೆಯ್ತವಿಂ ।
ಪೊದವಿದ ನುಣ್ಗೊದಲ್ಬಿಡಿ ಮುಡಂ ಮಿಗೆ ತಪ್ಪಳೆಗಾಡುವಾಯತಂ ॥
ತುದಿವೆರಲುಯ್ಯಲಾಟಮಿನಿತುಂ ಪದೆದೊಪ್ಪುವ ಸತ್ಕುಮಾರನಿ ।
ಲ್ಲದ ತನುವೇವುದೆಂದು ತಪಮಂ ಚರಿಸಲ್ಬಗೆದಂ ಮಹಾದ್ರಿಯೊಳ್ ॥ ೬೨

ಸುತರುಳ್ಳೊಡೆ ಸಂಸಾರ ।
ಸ್ಥಿತಿ ಸುಖಮವರಿಲ್ಲದಂದು ಸಂಸಾರಿಗೆ ದು ॥
ರ್ಗತಿ ತಪ್ಪದಪ್ಪುದದಱಿಂ ।
ಯತಿಮಾರ್ಗಂ ಸೌಖ್ಯಮಲ್ತೆ ಭಾವಿಪ್ರೌಢರಸಾ ॥ ೬೩

ಅಪ್ಪಪ್ಪೆನೆ ಮಿಗೆ ಪರಿತಂ ।
ದಪ್ಪುವ ಚೈಮುಂಡೆನಲ್ ನೊಸಲೆಳಸುವ ಕೈ ॥
ತಪ್ಪಳೆಗುಟ್ಟಲ್ ಕುಣಿಕುಣಿ ।
ದಪ್ಪುವ ಬಾಲಕನನುೞಿದು ಜೀವಿಪರೊಳರೇ ॥ ೬೪

ಉಡಿಗಂಟೆ ಮುಱಿವು ಮಾಗಾಯ್ ।
ಸೊಡರ್ವ*ಕ್ಕಿನ ಬೊಟ್ಟು ಪೊಳೆವ ಕಿಱುಜಡೆದುಱುಗಲ್ ॥
ಸಡಗರದ ಗೆಜ್ಜೆಯಂದುಗೆ ।
ಕಡುಚೆಲ್ವಾಗಿಪ್ಪ ಸುತನಡಂಗಿದನರಸಾ ॥ ೬೫

ಕೃಪೆಯಿನಗಲ್ದ ಭೂಪತಿಯ ಪಟ್ಟಣದಿಂ ವನವಾಸವಗ್ಗಳಂ ।
ಕಪಟಿಯ ಸಂಗದಿಂ ಪುಲಿಯ ಸಂಗಮತೀವಸುಖಂ ದರಿದ್ರದಿಂ ॥
ಕ್ಷಪಿಪುದಱಿಂದೆ ಲೇಸು ಮರಣಂ ಸುತರಿಲ್ಲದ ಬಾಳ್ಕೆಯಿಂ ಮಹಾ ।
ತಪದೊಳನಾರತಂ ತಪವನಾಂಪುದು ಸೌಖ್ಯಮಿದಲ್ತೆ ಸತ್ಪಥಂ ॥ ೬೬

ಎಂದು ಪುತ್ರವಿಯೋಗದಿಂ ಶರೀರಮಂ ನೀಗಲೆಂದು

ಘೂಕಧ್ವನಿ ಶಾರ್ದೂಲಮ ।
ಹಾಕಳಕಳ ವನಗಜಾಸ್ಯಪ್ರೋತ್ಕೃತಿ ಘನಭ ॥
ಲ್ಲೂಕವಿಕರಾಳಹೂಂಕೃತಿ ।
ಭೀಕರವೆನಿಸಿರ್ಪರಣ್ಯಮಂ ಮಿಗೆ ಪೊಕ್ಕಂ ॥ ೬೭

ರವಿಚಂದ್ರಾತಪಸಂಕುಳಪ್ರಚುರನಿರ್ಭೇದ್ಯಂ ಜರದ್ವ್ಯಾಘ್ರಸಿಂ ।
ಹವನೇಭಾಕುಳಿಪಯುಗ್ರವಿಗ್ರಹಕಿರಾತಸ್ತೋಮಸಂಕೀರ್ಣಪ್ರೂ ॥
ಣ್ ವಿಲಾಸಂ ಮೆಱೆದಿರ್ಪುದೊಂದು ವನಮಂ ಪ್ರೋಕ್ಷಲ್ಲಿ ನಿಶ್ಯಂಕೆಯಿಂ ।
ಯುವತೀಸಂಯುತನೊಪ್ಪುವೆತ್ತ ತಪಮಂ ಕೈಕೊಂಡನುತ್ಸಾಹದಿಂ ॥ ೬೮

ಅಂತು ಘೋರಾರಣ್ಯಮಂ ಪೊಕ್ಕು ದಶೇಂದ್ರಿಯಮಂ ದಶವಾಯುಮಂ ನಿರ್ಬಂಧಿಸಿ ಕಣ್ಗಳಂ ಮುಗಿದು ಕೆಯ್ಮುಗಿದು ವಾಯುವಶದಿಂ ಬಂದುದೆ ಆಹಾರಮೆಂದು ಪದ್ಮಾಸನದೊಳಿರ್ದು ಪದಿನಾಲ್ಕು ವರ್ಷಂ ತುಂಬೆ

ಇಂದೀರೇಟ್ಟಿರಿಸಂ ಮಿಗೆ ।
ಸಂದತ್ತೊಲ್ದನಶನವ್ರತಂ ಬಿಡದಸುವಂ ॥
ಪಿಂದಿಕ್ಕುವೆನೆಂದಿರೆ ಸಲೆ ।
ಬಂದೆಸಗಿತ್ತಮ್ಹತಾಶೆ ನಿನ್ನಿನ ದಿವಸಂ ॥ ೬೯

ಯಮನಿಯಮಾಸನಾದಿವಿವಿಧಕ್ರಮದಿಂ ಗಿರಿತಳ್ಪದೊಳ್ ಮನೋ ।
ರಮಣಿಯುತಂ ತಪಶ್ಚರಣಮಂ ತಳೆದೆನ್ನೊಡಲಂ ಬಿಸುಟ್ಟು ಸಂ ॥
ಯಮಿನಿಗೆ ಪೋಪೆನೆಂದು ತನುವಂ ಕ್ಷಪಿಸುತ್ತಿರಲೊಂದಪೂರ್ವಸಂ ।
ಭ್ರಮದೊಳ್ ಗಾಳಿ ತೀಡಿತದನೇಸ್ರೋಗಿರ್ದಪ್ಪುದೊ ವಿಕ್ರಮೋದಯಾ ॥ ೭೦

ಅದೆಂತೆನೆ:—

ಪೊಡೆಯುತ್ತುಂ ಗಿರಿಶೃಂಗಮಂ ನೆಗೆಪುತುಂ ವ್ಯೋಮಕ್ಕೆ ಭೂಜಂಗಳಂ ।
ಕೆಡಪುತ್ತುಂ ಗುಹೆಯೊಳ್ ಪ್ರತಿಧ್ವನಿಗುಡುತ್ತುಂ ಸಿಮ್ಮಗಾಸ್ಥಾನದೊಳ್ ॥
ತೊಡರುತ್ತುಂ ಮೆಳೆವಕ್ಕೆಯೊಳ್ ಮೃಗಮನಂದೊಡ್ಡೊಡ್ಡಿಸುತ್ತಾರ್ಪಿನು ।
ಗ್ಗಡದಿಂ ತೀಡಿಮದೊಂದು ಘೋರಪವನಂ ಚಿತ್ರಾವಹಂ ನಾಡೆಯುಂ ॥ ೭೧

ಅಂತು ಬಿಱುಗಾಳಿ ತೀಡಲೊಡನೊಳ್

ನಿಮ್ಮಯ ಸುತನಂ ಕಣ್ಬಿಪಿ ।
ರುಮ್ಮಳಮಿನ್ನೇಕೆ ನಾಳೆ ಪಗಲೆನುತಾಗಳ್ ॥
ತಮ್ಮಿರ್ಬರ ಮನದುತ್ಸಾ ।
ಹಮ್ಮಿಗಲೊ:ದೋಲೆ ಬಿಟ್ಟುದಾತನ ಕರದೊಳ್ ॥ ೭೨

ಅಂತಾತನೊಡ್ಡಿದ ಕರತಲದೊಳೊಂದೋಲೆ ವಾಯುವಶದಿಂ ಬೀೞ್ವು
ದುಮದಂ ಕಣ್ದೆಱೆದು ನೋಡಿ

ಇದು ಮತ್ಪ್ರಾಣಪ್ರತಿಷ್ಠಾಪಕಮಿದು ಮುದವಾರಾಶಿಪೂರ್ಣೇಂದು ನೋಡ
ಲ್ಕಿದಱರ್ಥಂ ಸಾರ್ಥಕರ್ಣಾಮೃತಮಿದಱ ಲಸದ್ದರ್ಶನಂ ಮತ್ತನೂಜಾ ॥
ಭ್ಯುದಯಂ ಪೆಂಪಿಂದಿದೇೞ್ತೆಂದುದು ಸಕಲಸುಖಂ ಮುಂದಿದಿರ್ವಪ್ಪುದಂ ಪೇ ।
ೞ್ದುದೆನುತ್ತಾ ಪತ್ರಮಂ ಕೂರ್ತವಯವದೊಳಲಂಪಿಂ ಸಮಂತೊತ್ತಿಕೊಂಡಂ

ಅಂತಪೂರ್ವಮಪ್ಪ ಪತ್ರಮಂ ಕಂಡು ಹರ್ಷವಿಷಾದಂಗಳನೊಂದನೊಂ
ದಟ್ಟಿ ಮಗುೞ್ದು ಪುತ್ರಸ್ಮರಣದುಃಖಮಂ ಕೈಕೊಂಡು ಸಂತೈಸಿಕೊಂಡಿಂ
ತೆಂದಂ:— †

ಜಗದೊಳ್ ಪುತ್ರವಿಹೀನರ ।
ಮೊಗಮಂ ನೋಡಲ್ಕೆ ದೋಷಮುಕ್ಕುದಱಿಂದಂ ॥
ಮಿಗೆ ಪಾತಕಿಯಾನೆನ್ನಂ ।
ಬಗೆವರೆ ನುಡಿಸುವರೆ ಭಾಗ್ಯವಂತರ್ ಧರೆಯೊಳ್ ॥ ೭೫

ಅಂತೆಂಬುದುಂ;

ಎನಗನುರಾಗಮುರ್ಬೆ ತನು ಕೊರ್ಬೆ ಮುದಶ್ರುಗಳುಣ್ಮೆ ಕೂರ್ಮೆ ಭೋಂ
ಕೆನೆ ಪೊಱಪೊಣ್ಮೆ ಮೋಹರಸಮುರ್ಕೆ ಮುದಂ ಕುಡಿಯಿಕ್ಕೆ ಭಕ್ತಿ ಭಾ॥
ವನೆ ತಲೆದೋಱೆ ವಕ್ತ್ರಕಮಲಂ ನಯಮೇಱೆ ಮನಂ ತಳ್ತರ್ ಜ ।
ವ್ಮನೆ ಪುಳಕಂ ಕವಲ್ತು ಬಿಗಿದೆಮ್ಮಮುಜನ್ಮಮ(?)ನುರ್ವರಾಧಿಪಾ ॥ ೭೬

ಅಂತಿರ್ದವರೆಮ್ಮ ತಾಯ್ತಂದೆಗಳೆಂಬುದನಱಿದಲ್ಲಿಗೆ ಬಂದ ವೃತ್ತಾಂತ
ಮಂ ಕೇಳ್ವೆನೆಂದು ಸ್ಥೈರಿಸಿಕೊಂಡು ಮತ್ತಮಿಂತೆಂದೆಂ:—

ಈದೀರ್ಘಬಾಹುವಿರ್ದೆಡೆ ।
ಗಾದರದಿಂ ಬಂದಿರೇಕೆ ಪೇೞಿಮೆನಲ್ಕಾ ॥

ಈಕಡೆ ಮೂಲಪ್ರತಿಗಳಲ್ಲಿ ಕಥಾಸಂದರ್ಭಕ್ಕೆ ಅನುಚಿತವಾದ

† ಪಲವಾಳಾಪದೊಳೇಂ ಕೇ ।
ಳಲೆ ಸೊಬಗ ತದೀಯಪುತ್ರನುಂ ನೀನೆ ಮನ ॥
ಸ್ಥಲದೊಳ್ ತಪದುಜ್ಜುಗದಿಂ ।
ನೆಲಸಿರ್ದಾಪ್ರೇಮದತ್ತನುಂ ನಾನೆಂದಂ ॥ ಎಂಬ ಪದ್ಯಮೊಂದಿದೆ

ಹಾಗ್ರೈವನೆ ಎಂಬವಧಿಕವಿ ।
ಷಾದಂ ಮಿಗೆ ಕೇಳೆನುತ್ತುಮವನನಿಂತೆಂದಂ ॥ ೭೭

ವಾಯುವಶದಿಂದೆ ಬಂದ ಶು ।
ಭಾಯತವೆಂದೆನಿಪ ಪತ್ರಭಾಷಿತದಿಂದಾ ॥
ಹಾಯೆಂದು ಪೆರ್ಚಲೆನ್ನೊಳ್ ।
ಗೇಯರಸಂ ನೆಲಸಿದತ್ತು ಮನದುತ್ಸವದಿಂ ॥ ೭೮

ಅದೆಂತೆನೆ:—

ವನಮೃಗರಾಜಿಗಳ್ ಪದೆದು ಮೆಯ್ಮಱೆಯಲ್ಕರಿಕೆಳ್ದ ಕಾಬ್ಪೊಲಂ ।
ನನೆಕೊನೆವೋಗೆ ಭಿಲ್ಲತತಿ ಬಲ್ಬೞಗಾಗಿರೆ ಮತ್ತೆ ಪಂಚಮ ॥
ಸ್ವನಪೊಗೆವಪ್ಪಿಲಾಣೆವಣಿಯಿಂ ಪೊಸದೇಸೆಯೆನಲ್ಕೆ ಕೋಕಿಲ ।
ಧ್ವನಿಯುನದಿರ್ಪಿಯೆನ್ನ ಮನಮುಕ್ಕಿರೆ ಪಾಡಿದೆನಾವನಾಂತರದೊಳ್ ॥ ೭೯

ವಲ್ಲಕಿಯುಂ ಕಾಮನ ಪೂ ।
ವಿಲ್ಲ ಗುಣಧ್ವನಿಯುನಿೞಿಕೆಗೆಯ್ಯು ಕುಜಂಗಳ್ ॥
ಪಲ್ಲವಿಸಲೆನ್ನ ಚಿತ್ತಸು ।
ಖೋಲ್ಲಾಸಂ ಪೆರ್ಚೆ ಪಾಡಿದೆಂ ನಲವಿಂದಂ ॥ ೮೦

ಅಂತಾಪುತ್ರನಂ ನಾಳೆ ಮಧ್ಯಾಹ್ನಕ್ಕೆ ಕಾಣ್ಬೆನೆಂಬ ಹರ್ಷಾತಿರೇಕದಿಂ ಪಾಡುತಿರ್ಪಾಗಳ್

ಈಭೂಪಂ ಬೇಂಟೆಗೆ ಬಂ ।
ದಾಭೂಧರದಲ್ಲಿ ಪಾಡುತಿರ್ದೆನ್ನಂ ಕಂ ॥
ಡಾಭೋಗವಾಗೆ ಕಿನ್ನರ ।
ಲಾಭಂ ತನಗಾಯ್ತೆನುತ್ತೆ ಪಿಡಿದೆಯ್ತಂದಂ ॥ ೮೧

ಎಂದು ಪೇೞ್ವುದುಂ

ಎನ್ನಯ ಕಣ್ಮಲರ್*ಗಳ ನೀ ।
ರೆನ್ನಯ ಮುಂಗಾಣಲೆಸೆದಿರಲ್ ಕಂಡವರ್*ಗಳ್ ॥
ನಿನ್ನೊಳಗಿನಿತೇಕೆ ದುಃಖಂ ।
ಚೆನ್ನಿಗ ನೀನಾರೆನಲ್ ತೊದಳ್ಮಿಗೆ ನುಡಿದೆಂ ॥ ೮೨

ಕಾಳ ತೊಱೆಯೊಳಗೆ ನೂಂಕಿದ ।
ಬಾಳಕನೆಂಬಾತನಾನೆನುತ್ತಂಪ್ರಿಗೆ ಮು ॥
ದ್ಘಾಳವನೀಡಾಡಲ್ ಪದೆ ।
ದಾಳಂಗಿಸಿದರ್ ವಿಳಾಸದಿಂದವರೆನ್ನಂ ॥ ೮೩

ತಂದೆಯುಲಗ್ಗರ್ಣ್ಗಳೊಳಾ ।
ನಂದಾಶ್ರು ತುಱಿಂಕೆ ತಾಯ ಮೊಲೆಯೊಳ್ ಪಾಲ್ ಜು ॥
ಮ್ಮೆಂದೆಚ್ಚು ಪಾಯಲಿರ್ಬರ್ ।
ನಂದನನಂ ನೋಡಿಯುಪ್ಪಿ ಹರ್ಷಿತರಾದರ್ ॥ ೮೪

ಅಂತು ಹರ್ಷಿತರಾಗಿ

ಕ್ಷೋಣೀತಲದೊಳ್ ತ್ರಿಜಗ ।
ತ್ರಾಣಂ ಪವನಂ ದಲೆಂಬುದೆನ್ನೊಳ್ ದಿಟಮಾ ॥
ಯ್ತ್ರಾಣೆಯುಮಿಲ್ಲದೆ ಮಕ್ಕಳ ।
ಮಾಣಿಕಮಂ ಕಂಡೆವೆಂದೆನುತ್ತವರೊಸೆದರ್ ॥ ೮೫

ಅಂತು ಸಂತಸದಂತವನೆಯ್ದಿದ ತಂದೆತಾಯ್ಗಳನಾಂದೋಳಾರೂಢರಪ್ಪಂತುಮಾಡಿ ಬರ್ಪಾಗಳ್ ದೀರ್ಘಬಾಹುಕನಂ ಕಾಲಮಂದಿರವನೆಯ್ದಿಸಿದೊಸಗೆಯುಂ ಕುಸುಮಪುರೇಶಂ ಕೇಳ್ದನಗಿದಿರ್ವಂದೊಡಾತಂ ಸಹಿತಂ ದೀರ್ಘಬಾಹುಕನ ಲಲಿತಪುರಕ್ಕೆ ನಡೆದು

ಅಂಜದೆ ಬಂದು ಕಾಣ್ಬುದು ಸಮಸ್ತಜನಂ ಸಚಿವರ್ಕಳೊಲ್ಮೆಯಿಂ ॥
ಕುಂಜರವಾಜಿಕೋಶತತಿಯುಂ ಪಡೆದೊಪ್ಪಿಪುದಷ್ಟಶೋಭೆಯಿಂ ॥
ರಂಜಿಪುದಾವಗಂ ಪುರಮನೆಂದು ನೃಪಾಲಸುಮಂ ವಿಳಾಸದಿಂ ।
ಸಂಜನಿತಪ್ರಿಯಂಬೆರಸು ಪೊಕ್ಕನತೀವಮನೋನುರಾಗದಿಂ ॥ ೮೬

ಅಂತು ದೀರ್ಘಬಾಹುಕನರಮನೆಯಂ ಧರ್ಮಶೇಖರಸಹಿತಂ ಪೊಕ್ಕು ಪುರಜನಪರಿಜನವಂ ತಂದು ಧರ್ಮಶೇಖರಂಗೆ ಕಾಣಿಸಲಾತಂ ಪ್ರೀತಿವಟ್ಟು

ಎನ್ನ ಫಲವಿಂದು ಸಂದ ।
ತ್ತೆನ್ನ ಮನೋರಥಫಲಂ ಕರಂ ಸಾರ್ದುದು ಮ ॥
ತ್ತೆನ್ನ ಕುಲವೊಳ್ಪುವೆತ್ತುದು ।
ನಿನ್ನಿಂದೆನಗೆಂದು ಧರ್ಮಶೇಖರನೊರೆದಂ ॥ ೮೭

ಎಂದು ಸಂತೋಷಂಬಟ್ಟದೆ ಮುಹೂರ್ತವಾಗೆ ತನ್ನ ಮಗಳಪ್ಪ ಕುಸುಮಾವತಿಯುನೆನಗೆ ಕೊಟ್ಟಲ್ಲಿಯೆ ಪಟ್ಟಮಂ ಕಟ್ಟಿ ತಾಂ ಕುಸುಮಪುರಿಗೆ ಪೋದಂ. ಇತ್ತಲ್

ಪೊಸತೆನಿಸಿದರ್ ರಾಜ್ಯವನಲಂಪು ಮಿಗುತ್ತಿರೆ ಸಂತಮಿಟ್ಟು ಮ |
ನ್ನಿಸಿ ಸಚಿವರ್ಕಳಂ ಪುರಜನಕ್ಕೊಡಲಿತ್ತು ಭವತ್ಪ್ರಪಂಚಮಂ ‖
ಕುಸುಮಪುರೇಶನಂದನೆಗೆ ಪೇೞ್ದು ನಿಜಾಂಘ್ರಿಸರೋಜಮಂ ನಿರೀ |
ಕ್ಷಿಸುವನುರಾಗದಿಂ ಕಿೞಿದು ವಾಹಿನಿಯುಂ ತಳರ್ದಂ ಮಹೀಪತೀ ‖ ೮೮

ಅಂತು ಪೊಱಮಟ್ಟು ದುರ್ಗಾಪ್ರಾರ್ಥನೆಯುಂ ಮಾಡಿಯೊಡವಂದ ಸೇನೆಯುಂ ಮಗುಳ್ದು ಕಳಪಿ ದೇವರಂ ಕಾಣ್ಬೆನ್ನಮೇಕಾಕಿಯಾಗಿ ಪೋಪೆನೆಂಬನ್ನೆಗಂ

ಕಂಗೆಟ್ಟಂಗಕ್ಷಿಗಳ್ ದಿಗ್ಭ್ರಮೆ ಮಿಸುಪ ನರಂಗೆಯ್ದೆ ಪೆರ್ಬಟ್ಟೆ ದಾರಿ |
ದ್ರಂಗರ್ಥಂ ಶೂನ್ಯಚಿತ್ತಂಗಧಿಕವರವನೀವಿಷ್ಟದೈವಂ ಕರಂ ವ್ಯ ‖
ದ್ಗಂಗಾದಿವ್ಯಾಪ್ಯಮೃತಂ ತೋರ್ಪವೊಲೆನಗೆ ಭವನ್ಮೂರ್ತಿಯಿಂದಿಲ್ಲಿ ತೋಱ
ತ್ತಂಗಶ್ರೀಯೊಳ್ ವಿಳಾಸಂ ಮೆಱೆದುದೆನುತೆ ಮೆಯ್ವೆರ್ಚಿದಂ ಸೋಮದತ್ತಂ

ಜಗದಂಬಿಕೆಯೆನಿಸುವ ದು |
ರ್ಗೆಗೆ ಪರಕೆಯನೀವೆನೆಂಬ ಕತದಿಂ ನಿಮ್ಮಂ ‖
ಘ್ರಿಗಳಂ ಕಂಡೆನೆನುತೆ ಮು |
ತ್ತುಗಳಿಂದರ್ಚಿಸಿದೆನಂಬಿಕಾಪದಯುಗಮಂ ‖ ೯೦

ಅಂತು ದುರ್ಗಾಂಬಿಕೆಗೆ ಪರಕೆಯನೊಪ್ಪಿಸಿಯುಪಾರಪರಿಣಾಮದಿಂ ಸೋಮದತ್ತಂ ರಾಜವಾಹನನಂಘ್ರಿಗಳನೋಲೈಸುತ್ತಿರೆಯಿರೆ

ಬಾಹುಬಲದಿಂ ತಳರ್ದತಿ |
ಸಾಹಸದಿಂ ಕೊಂಡ ರಾಜ್ಯಮಂ ವಿಪುಳನವ ‖
ಸ್ನೇಹದ ಸತಿಯುಂ ಬಿಟ್ಟೀ |
ಮೋಹದೊಳೇೞ್ತಂದೆಯೇಕೆ ಪೇೞ್ ಸುಕುಮಾರಾ ‖ ೯೧

ಎಂದು ಬುದ್ಧಿವೇೞ್ದು ಪೊಸರಾಜ್ಯವನೀಪರಿ ನಿರಾಧಾರಮಪ್ಪಂತಿರೆ ಇರಿಸಲಾಗದು, ಇಂದೆ ಪೋಗಾನವಂತಿಪುರಮಂ ಪೊಕ್ಕುಬಪೆನೆಂದು ಸೋಮದತ್ತನಂ ಕಳಪಲಾತಂ ಬೀೞ್ಕೊಂಡು ಪೋಗೆ

ಇನಿತು ಸಮರ್ಥರಾರೊ ಪರರಾಜ್ಯವನಿರ್ವರ್ಕೆಳಗೊಂಡು ಶೌರ್ಯದಿಂ ।
ಜನಪತನೂಜೆಯುಂ ಮದುವೆಯಾಗಿ ವಿರೋಧಿಯನಿಕ್ಕಿ ಮೆಟ್ಟಿದೊ ॥
ಒರ್ನೆ ಮಗುಳ್ದಮ್ಮನೀಕ್ಷಿಸಲನೂನಮಹೋತ್ಸವದಿಂ ತಳರ್ದನೆಂ ।
ದನುಜನನಾವಗಂ ಪೊಗಳ್ದು ಮೆಚ್ಚಿದನಲ್ತೆ ಯಭಂಗವಿಕ್ರಮಂ ॥ ೯೧

॥ ಗದ್ಯಂ ॥

ಇದು ನಿಖಿಲಬುಧಜನಮನೋಜವನದಿವಾಕರಕಿರಣಪ್ರತಿಮಪ್ರಸನ್ನ
ಶ್ರೀಮದಭಂಗವಿಟ್ಠಲಪದಾಂಭೋಜಮತ್ತಮಧುಕರ
ಮಧುಸೂದನನಂದನ ಸರಸಕವಿ ಚಾವುಂಡರಾಜ ವಿರಚಿತಮಪ್ಪ

ಅಭಿನವ ದಶಕುಮಾರಚರಿತೆಯೊಳ್

ಸೋಮದತ್ತಕಥಾವೃತ್ತಾಂತಂ

ಪಂಚಮಾಶ್ವಾಸಂ.

— ರಾಜವಾಹನಚರಿತ್ರಂ —

ಶ್ರೀವಕ್ಷಸ್ಸ್ಥಳನಖಿಳಕ ।
ಳಾವಿನುತುಂ ಸೋಮದತ್ತನಂ ಕಳಿಪಿ ಕಳಾ ॥
ಕೋವಿದನಲ್ಲಿಂದೆಟ್ದಂ ।
ಪಾವನಗುಣನಿಧಿಯಭಂಗವಿಟ್ಠಲಭೃತ್ಯಂ ॥ ೧

ಅಂತು ರಾಜವಾಹನಂ ದುರ್ಗಾಲಯಮಂ ಪೊಱಮಟ್ಟವಂತೀದೇಶಕ್ಕಭಿ
ಮುಖನಾಗಿ

ಪಲವು ನದೀನದಪ್ರಕರಮುಂ ಪಲವದ್ರಿಗಳುಂ ವನಂಗಳುಂ ।
ಪಲವನನಂತದೇಶಮನನಂತಪುರಂಗಳನಂತನಂತಸು ॥
ಸ್ಥಲಮನಿತೆಲ್ಲಮಂ ಕಳೆದು ರಾಜಕುಮಾರಕನೊಲ್ದು ಪ್ರೇಕ್ಷ್ಯನು ।
ಜ್ಜ್ವಲಮೆನಿಸಿರ್ಪವಂತಿವಿಷಯಾಂತರಮಂ ನಿಜಸೋದರಾನ್ವಿತಂ ॥ ೨

ಕೃತಯುಗದೊಂದು ಗೂಳಿಯಮೊ ಮರ್ತ್ಯರ ಕೆಯ್ಪೊಲನೋ ವಿಲೋ
ಚನಾ । ಮೃತಮೊ ಕೊಳಂಗಳೋ ಸಿರಿಯ ತಾಯ್ಮನೆಯೋ ವನಮೋ
ವಸಂತದೇ ॥ ಪತೆಯೊ ವಿಳಾಸಿನೀಜನಮೊ ಕಾಮಶರಾಳಿಯೊ ಪೇೞೆನಲ್ಕೆ
ಸ । ನ್ನುತಿವಡೆದೊಪ್ಪುಗುಂ ವಿಷಯಸಂತತಿಯಿಂ ವಿಷಯಂ ನಿರಂತರಂ ॥

ಅದಲ್ಲದೆಯುಂ

ವಿರಹಂ ಕೋಕಂಗಳೊಳ್ ಸತ್ಕುಲಹತಿ ಜಿವದೊಳ್ ಬಂಧನಂ ನವ್ಯಪು
ಷ್ಪೋ । ತ್ಕರದೊಳ್ ದುಷ್ಟಸ್ವಭಾವಂ ತುರಗದೊಳರಿಸಂಮರ್ದನಂ ವಿ
ಷ್ಣುಪಸ್ತಂ । ತರದೊಳ್ ವ್ಯಾಜಂ ಮಹಾಲಂಕೃತಿಯೊಳಧರಸಂಜೀವನಂ
ಸಂತತಂ ನಾ । ಗರಿಕಾದಿಪ್ರಾಥರೊಳ್ ಸಂದಸೆವುದನುದಿನಂ ಸಲ್ಲದಾನಾಪೊ
ಳೆಂದುಂ ॥ ೪

ಆವಿಷಯಕ್ಕೆ ನೂತ್ನಮಣಿದರ್ಪಣದಂತೆ ಲಸದ್ವಿಭೂತಿಸಂ ।
ಭಾವಿತನಿರ್ಮಳಪ್ರಚುರವೃತ್ತಮೆನಿಪ್ಪ ಜನಪ್ರಸನ್ನಸಾ ॥

ಶ್ರ್ಯಾವಹಮಂ ಸಿಮಿರ್ಚಿ ನವರತ್ನಸುವರ್ಣವಿಕೀರ್ಣವಿನ್ಯಹ |
ವರ್ಣ್ಯಾವಳಿಯಿಂ ವಿಚಿತ್ರಮೆನೆ ರಂಜಿಪುದಲ್ಲಿಯುಮವಂತಿಕಾಪುರಂ ‖ ೫

ಅಂತಾಪುರಮಂ ಪುಕ್ಕುವರೆ

ಸುಲಲಿತಚಂದ್ರಕಾಂತಕಲಶಂಗಳಸಂಗನೆಯರ್ ವಿಳಾಸದಿಂ |
ಕುಳಿರ್ವ ಜಲಂಗಳಂ ಮೊಗೆದು ಪಾಂಥಜನಕ್ಕೆಱೆಯುತ್ತಿರಲ್ಕೆ ಶೀ ‖
ತಳಜಲಮೆಲ್ಲಮುಂ ಸಮೆಯೆ ತಮ್ಮ ಮುಖೇಂದುಮರೀಚಿಯಿಂದಮಾ |
ಕಳಶಮನೈದೆ ತೀವಿ ಪಥಿಕರ್ಗೆಱೆವರ್ ತೃಷೆ ಪಿಂಗುವನ್ನೆಗಂ ‖ ೬

ಬಿಸಿಲಿಂ ಬೆಂಡಾದವರ್ ತತ್ತೃಷೆಗೆ ಪರಿದು ನೀರಟ್ಟೆಯಿಂ ನೀರ್ಗೆ ಕೈಸು |
ಟ್ಟುಸಿರಂ ನುಂಗಿರ್ದ ನಾಸಾಪುಟಮುರಳೆ ಬೆಮರ್ ಚುಮ್ಮಿಸುತ್ತುಗ್ರ ಕೈ
ಕಂ ‖ ಪಿಸೆ ಗಂಟಲ್ ತಟ್ಟುತಾಱಿಲ್ ತನು ತಣಿವು ಕುಳ್ಕೋರ್ದೆ ಪಂಚೇಂ
ದ್ರಿಯಂ ರಾ | ಗಿಸೆ ತಾಪಂ ಪಿಂಗಿ ಪಾಂಥರ್ ಕುಳಿರ್ವ ಸಲಿಲಮಂ ಪೀರ್ದುನ್
ತೇಗುತ್ತೆ ಪೋಪರ್ ‖ ೭

ಅಂತಾಪ್ರಪೆಯೊಳಾತಪತಾಪಮಂ ಕಳೆದಲ್ಲಿಂ ತಳರ್ವಾಗಳ್ ಮುಂದೆ

ರಾಜಶುಕಂ ಕದುಂಕೆ ರಸಧಾರೆಗಳಿಂಗೆಸೆದಿರ್ಪ ದಾಡಿಮಾ |
ರಾಜಿಗಳಿಂ ಪಿಕಾಳಿ ಕುಟುಕಲ್ ಸೊನೆಬಿಂದುಗಳೊಪ್ಪುವಾಮ್ರಧಾ ‖
ತ್ರೀಜದಿನುಳ್ಳರಲ್ದಲರ್ಗಳೊಳ್ಮುಗುಂಪಸೊಱಲ್ದು ಪೀರ್ವ ಭೃಂ |
ಗೀಜಯನಾದದಿಂ ಪದಪಿಸಿಂ ಮೆಱೆಗುಂ ಪುರದಾಬಹಿರ್ವನಂ ‖ ೮

ಅಂತಾಪುರದ ಬಹಿರ್ವನದ ವಿಳಾಸಮಂ ನೋಡುತ್ತುಂ ಬರೆವರೆ ಮುಂದೆ

ಅಗಱಿಂ ಪ್ರಾಕಾರದಿಂ ಮೆಂಕಣಿಯಿನನುಪಮದ್ವಾರದಿಂ ಸತ್ಪತಾಕಾ |
ಳಿಗಳಿಂದಾಳ್ವೇರಿಯಿಂ ಕೊತ್ತಳದಿನಿಡುಸರಳ್ಗಂಡಿಯಿಂ ಖಂಡಿಯಿಂದಂ ‖
ಬಗೆಗೊಳ್ಪಂ ಬೀಱಿ ನೋಡುತ್ತಡಿಗಡಿಗೆ ಸಿರಂದೂಗುತುಂ ವಿಸ್ಮಯದಿಂದಂ |
ಪುಗುತಂದಂ ಕೂರ್ತವಂತೀಪುರದೊಳಗನಿಳಾಕಾಮಿನೀಜೀವಿತೇಶಂ ‖ ೯

ಅಂತು ಪುರಮಂ ಪೊಕ್ಕು ರಾಜವಾಹನಂ ಪುಷ್ಪೋದ್ಭವನ ಮೊಗಮಂ ನೋಡಿ— ಈ ಪಟ್ಟಣಮನಾಳ್ವರಸನ ಪೆಸರೇನೆಂದು ಕೇಳ್ವುದುಮಾತನಿಂತೆಂದಂ:—

ಈಪುರಮನಾಳ್ವನಾನತ ।
ಭೂಪಾಲಕಮೌಳಿಮುಕುಟಮಂಡಿತಚರಣಂ ॥
ಚಾಪಲರಿಪುನೃಪಮಥನಭು ।
ಜಾಪರಿಘನವಂತಿದೇವನೆಂಬ ನರೇಂದ್ರಂ ॥ ೧೦

ಆಭೂಪನರಸಿ ಗುಣಗಣ ।
ಶೋಭಾನ್ವಿತೆ ಪೆಂಪಿನಿಂ ಸುರೇಂದ್ರನ ಸತಿವೊಲ್ ॥
ಸೌಭಾಗ್ಯವಂತೆ ಮಂಗಳ ।
ವೈಭವೆ ಮಾದೇವಿಯೆಂಬ ವನಿತಾರತ್ನಂ ॥ ೧೧

ಅವರಿರ್ವರ್ಗೊರ್ಲವಿಂ ಸಂ ।
ಭವಿಸಿರ್ದಂ ಕೀರ್ತಿಸಾರನಿಂ ಪಿರಿಯಂ ಭೂ ॥
ಭುವನಪತಿ ದರ್ಪಸಾರಂ ।
ನವನೀತಿಪ್ರಥನತುಳಗರ್ವಾರೂಢಂ ॥ ೧೨

ಆದರ್ಪಸಾರನನುಜೆ ಕೃ ।
ಶೋದರಿ ಶಶಿಮುಖಿಯುವಂತಿಸೌಂದರಿ ಲೋಕೋ ॥
ನ್ಮಾದಿನಿ ಘನಕುಚೆ ಸಕಲಗು ।
ಣೋದವಸಿತೆ ಪೆಸರೊಳೆಸೆವ ಕನ್ಯಾರತ್ನಂ ॥ ೧೩

ಆಕೆಗಮೆನ್ನರಸಿಗಮು ।
ವ್ಯಾಕುಳದಿಂದತಿಸಖಿತ್ವಮೆಸೆದಿರ್ಪುದು ಪ ॥
ದ್ಮಾಕರಕೆ ರಾಜಹಂಸಾ ।
ನೀಕಕ್ಕನವರತಸಂಗವೊಪ್ಪುವ ತೆಱದಿಂ ॥ ೧೪

ಎಂದು ಪುಷ್ಪೋದ್ಭವಂ ಪೇೞಲ್ ರಾಜವಾಹನಂ ಕೇಳುತ್ತುಂ ಪುಷ್ಪೋದ್ಭವನ ಪಿತೃಮಾತೃಗಳಿರ್ದ ಮನೆಗೆ ಬಂದವರ್ಗೆ ನಮಸ್ಕರಿಸಿ ತನಗೆ ಪೊಡೆವಟ್ಟ ಬಾಲಚಂದ್ರಿಕೆಯುಂ ಪರಸಿ ಬೞಿಯುಂ

ಹಿಮಜಲದಿಂ ಕರಚರಣಾ ।
ಸ್ಯಮುಖಪ್ರಕ್ಷಾಲನಂಗಳಂ ಮಾಡಿ ಸುಗಂ ॥
ಧಮಯಾಂಬುವನೀಂಟಿ ಪಥ ।
ಶ್ರಮಮಂ ಕಳೆದಂ ನೃಪಾಲತನುಜಲಲಾಮಂ ॥ ೧೫

ಅನಂತರಂ ಮಜ್ಜನಭೋಜನಾದಿವ್ಯಾಪಾರಮಂ ಮಾಡಿ ದೇಶಾಂತರವೃತ್ತಾಂತಮಂ ರತ್ನೋದ್ಭವ ಹೇಮಪ್ರಭೆ ಬಾಲಚಂದ್ರಿಕೆಯರ್ಗೆ ಪೇಳ್ದು ಪಲವು ದಿನಮೆಲ್ಲರಱಿವಂತು ತಾನುಂ ಪುಷ್ಪೋದ್ಭವನುಂ ವಿಪ್ರವೇಷದಿಂದಿರಲ್

ಎಂದಿನ ತೆಱದಿನವಂತೀ ।
ಸುಂದರಿಯೋಲಗಕೆ ಬಾಲಚಂದ್ರಿಕೆ ಪೋಗಿ ॥
ವರ್ಗಂದಂದಿನ ವಾರ್ತೆಗಳಂ ।
ಬಂದೊಲವಿಂ ಪೇಳ್ದುಳುವ ರಾಧೀಶ್ವರರೊಳ್ ॥ ೧೬

ಅಂತು ಪ್ರತಿದಿನಂ ಪ್ರಸ್ತುತ ವಾರ್ತಾವಿಶೇಷಮಂ ಪೇಳುತ್ತೊಂದುದಿವಸಂ ರಾಜವಾಹನನುಂ ಪುಷ್ಪೋದ್ಭವನುಂ ಕೇಳ್ವುದರ್ಗಳಾಬಾಲಚಂದ್ರಿಕೆ ಬಂದಿಂತೆಂದಳ್:—

ಭಾವನ ಗುಣಮನವಂತೀ ।
ದೇವಿ ಕರಂ ಕೇಳ್ದು ಮೆಚ್ಚಿ ಕಾಣಲ್ವೇಟ್ಕಂ ॥
ದಾವಸಿತೆ ಪೊಱಗಣುಪವನ ।
ದೋವರಿಗೆಯ್ತರ್ಪುದೆಂದು ಪೇಳ್ದಳ್ ನಿಮ್ಮಂ ॥ ೧೭

ಎಂದೊಡೀಪ್ರಸಂಗಕ್ಕೆ ಕಾರಣಮೇನೆಂದು ರಾಜವಾಹನಂ ಕೇಳ್ದೊಡಾಕೆ ಇಂದಾಂ ತಳ್ವಿ ಪೋಗಲೆನ್ನನವಂತಿಸೌಂದರಿ ನೋಡಿ

ವನಜಮುಖಿ ನಿನ್ನ ಬರವೇ ।
ಕಿನಿತುಂ ಪೊೞ್ತಾದುದೆಂದು ಪೇೞೆನಲಾಂ ಕೇಳ್ ॥
ವಿನಯವತಿ ನಮ್ಮ ಪೊಸಭಾ ।
ವನ ಪದಪರಿಚರ್ಯೆಯಿಂದೆ ನಾಂ ತಳ್ವಿದೆಂ ॥ ೧೮

ಎಂದೊಡಾತನೆಲ್ಲಿಂದಂ ಬಂದನೆಂದಾಕೆ ಕೇಳ್ದೊಡೆ ಆಂ ಮುನ್ನಱಿದಿರ್ದ ದೇಶಾಂತರವೃತ್ತಾಂತಮಂ ಪೇಳ್ದು ಮತ್ತಮನೇಕಗುಣಂಗಳಂ ಪೇಳಲಾ ಸುಭಗಮೂರ್ತಿಯಂ ನಾಳೆ ಪುಷ್ಪಾಪಚಯವ್ಯಾಜದಿಂ ವನಕ್ಕೆ ಬಂದು ನೋಳ್ಪೆನಾತನನುಪವನವಿಳಾಸಮಂ ನೋಡುತ್ತಿರಲ್ ಪೇಳೆಂದಳೆಂದು ಪೇಳ್ದೊಡದರ್ಕರಸಂ ಹರ್ಷಂಬಟ್ಟು ಮಱುದಿವಸಂ,

ಪಸುರ್ದಳಿರ್ಗಳಿನಲರ್ದೊಪ್ಪುವ ।
ಕುಸುಮಂಗಳಿನೊಲಿನ ಫಲವಿತಾನಂಗಳಿನೊ ॥
ಳ್ಪಸೆವ ಶುಕಪಿಕರವಂಗಳಿ ।
ನೆಸೆದಿರ್ಪುದ್ಯಾನಮಂ ನೃಪಾಲಂ ಪೊಕ್ಕಂ ॥ ೧೯

ಅಲರ್ವಲರ್ದೊಂಗಲಂ ಕುಣಿಸುತುಂ ಸೊನೆಸೋನೆಯನೆಯ್ದೆ ಸೂಸುತುಂ
ತಳಿರ್ಗಳಿಂಬಿನಿಂ ನುಸುಳುತುಂ ಮಕರಂದಮನಪ್ಪುತುಂ ಕೊಳಂ ॥
ಗಳ ತಡಿಯೊಳ್ ವಿಹಾರಿಸುತೆ ಪಾಡುವ ಸೋಗೆಗಳಂ ಬಿದಿರ್ಚುತುಂ ।
ಪಲವು ವಿನೋದದಿಂ ಸುೞಿವುದಾಬನದೊಳ್ ಮಿಗೆ ಮಂದಮಾರುತಂ ॥ ೨೦

ಆಮಂದಮಾರುತನನಿದಿರ್ಗೊಳುತ್ತುಂ ನೋಡಲ್ ಮುಂದೆ,

ತಲ್ಲಣದಿಂ ಸಮಂತುದಯಮಾಗಲೊಡಂ ಪರಿತಂದು ತುಂಬಿ ತಂ ।
ಪೆಲ್ಲಮನೀಂಟ್ಗು ಕೊಂಡಪ್ಪವೆನುತ್ತಿರವಂತಿಗೆಜಾಜಿಮೊಲ್ಲೆಗಳ್ ॥
ಮಲ್ಲಿಗೆ ತಮ್ಮತಮ್ಮ ನಱುಗಂಪನೆ ಬೈತಿಡಲಿತ್ತವೋಲ್ ಮನ ।
ಕ್ಕಲ್ಲೆಸೆಗುಂ ಕದಂಬಮೆನಿಪ್ಪೋಗರಗಂಪೆಸೆದಿರ್ಪ ಚಂಪಕಂ ॥ ೨೧

ಕುಸುಮಂ ತೀವಿರೆ ಪೊರ್ದುಗುಂ ಮಧುಪಸಂಗಕ್ಲೇಶಮೊಂದಂತಮಂ ।
ಬಿಸುಟತ್ಯದ್ಭುತದಿಂ ಮೊದಲ್ತುದಿವರಂ ಕಾಯ್ಪಣ್ಗಳಂ ಪೇೞೆ ಕ ॥
ಣ್ಗೆಸೆದೊಪ್ಪಂ ಬಡೆದಿರ್ಪ ಬಕ್ಕೆವಲಸಂ ಮುಂ ಕೊಂಡು ಪದ್ಮೋದ್ಭವಂ ।
ರಸವಸ್ತುಪ್ರಕರಂಗಳಂ ಬೞಿಕದೇಂ ಮಾಡಲ್ ಮನಂದಂದನೋ ॥ ೨೨

ಪದೆದು ಸುಧಾಂಶು ರಾಹುಭಯದಿಂದಮುರ್ದಂ ಮಡಗಿಟ್ಟನೀಂಟ್ಟು ಪೋ ।
ಗದ ತೆಱದಿಂ ನಯಂಬಡೆದ ಪಚ್ಚೆಯ ಕುಪ್ಪಿಗೆಯೊಳ್ ಸುರಕ್ಷೆಯಿಂ ॥
ಬುದನಱಿದಿಂಬಿನಿಂ ಮೆಱೆವ ಕೋಮಳಕಾಂತಿಯನಾಂತು ನಾಡೆ ಭೂ ।
ಜದೊಳೊಲೆದಾಡುತಿರ್ಪ ಪಸುರ್ಗಾಯ್ಗಳನೀಕ್ಷಿಸಿದಂ ಕುಮಾರಕಂ ॥ ೨೩

ತಳಿರ್ನೆಯೊಳ್ ಪೊರಳ್ದು ಸೊನೆವಿಂಡುಗಳೊಳ್ ನಸುನಾಂದು ಗಂಡುಗೋ
ಗಿಲೆಗಿಳಿತುಂಬಿಗಳ್ಗಗಿದು ತೆಂಕಣ ಗಾಳಿಗೆ ಕಂಪಿಸುತ್ತೆ ಪೂ ।
ಗಳನುಱೆ ನೂಂಕಿ ಚೈತ್ರವಿಟನೊಳ್ ವಿರಹಾತುರೆಯಾದ ಕಾಂತೆವೋಲ್ ।
ವಿಳಸಿತಮಾಗಿ ಮಾಮರದೊಳಿರ್ದುವು ಮಾವಿನ ಪಣ್ಗೊಳೆಗಳ್ ॥ ೨೪

ತನಿವದನಾಗಿ ಕೆಂಪನೊಳಕೊಂಡು ಸುಗಂಧಮನಾಂತು ತಂಬಿಯೊ ।
ಪ್ಪಿನಿರಸಮುರ್ಬೆ ಸದ್ವಿಜಪರೀಕ್ಷಿತಮಲ್ಲದ ಮುನ್ನ ಪೀರ್ದು ಮಾ ॥
ವಿನ ತನಿವಣ್ಗಳಂ ಸೊಬಗರಾದವರಾಗಳೆ ತಮ್ಮ ಕೂರ್ತ ಕಾ ।
ಮಿನಿಯರ ಪೆಂಪುವೆತ್ತಧರಸೇವೆಯ ಭಾವನೆಯೊಳ್ ಮುಱಿಂಗಿದರ್ ॥ ೭೪

ಮತ್ತಮದು ವನದೇವತೆಯರ್ ವನಕೇಳಿಗೆ ವಂದ ಮೆಲ್ಲಡಿವಜ್ಜೆಗಳನ ಱಿಪುವ ಪಿಂಜರಿತಪರಾಗಪುಂಜದಿಂ, ಕಲಕಂಠಂಗಳೊಳ್ಗೊನೆಗಳಂ ಕ*ದುರ್ಂಕಿ ಸುರಿವ ಸೊನೆವೊನಲಿಂದಗ್ಗಳಮಾದ ಕೋಲ್ತೈಸಱಿಂ, ಗಿಳಿವಿಂಡುಗಳ್ ಕಱಿವಣ್ಗಳಂ ಕ*ದುರ್ಂಕೆ ಇನಿದುಮೊಸರ್ವ ದಾಡಿಮೀರಸಂಗಳಂ, ಮೆಲ್ಲೆಲರ್ ತೀಡೆ ವಲ್ಲಿಗಳಿಂದೊಕ್ಕ ಮೊಲ್ಲೆಮಲ್ಲಿಗೆಯರಲಿಂ, ಖಚರೀನಿಚಯಂ ಗಗನಮನಡರಲ್ ಬಱಲ್ಕೆಯುಂ ಕಳೆಯೆ ಪಟ್ಟಿರ್ದು ಪೋದ ಪಲ್ಲವದ ಪಾಸಿಕೆಗಳಂ, ಬಂಡುಂಡು ಮಂಡಳಿಸಿ ಝುಂಕಾರಂಗುಡುವ ಮಱಿಪಱಿಮೆಗಳಂ, ಕಂದರ್ಪನ ಬೇಹಿನಂತೆಂದು ಸುಱಿವ ಮಂದಮಾರುತನಿಂ, ಚೆಂದಂಬಡೆದಿರ್ದ ವನಮಂ ನೋಡುತ್ತುಂ ಬರೆ, ಅಲ್ಲಿ

ಮದನಂ ಮುಂ ಮರುಳಾಗಿ ಶಂಕರನ ಭಾಳಾಕ್ಷಾಗ್ನಿಗಂದೇಕೆ ಸಿ ।
ಲ್ಕಿದನೀಮಾಮರದೊಳ್ಪುವೆತ್ತ ನೆೞಲೊಳ್ ನಿಂದಿರ್ದೊಡಾಕಿರ್ಚು ತ ॥
ನ್ನಿದಿ*ರ್ವಂದಾಗಳೆ ಶೈತ್ಯಮಾಗಿ ಪದೆಪಿಂ ಮಂದಾನಿಲಂ ಚಂದ್ರಿಕಾ ।
ಭ್ಯುದಯಂಬೋಲ್ ಶಿಖಿರೂಪಮಂ ತಳೆಯದೇ ಸಾಮೀಪ್ಯಸಂಪತ್ತಿಯಿಂ ॥

ಎಂಬ ಮಹಿಮೆಗಳ್ಗುಂಬಮಾದ ಒಂದು ಮಾಮರನ ನೆೞಲಂ ಕೊಂಡಾಡಿ ತತ್ಪಲ್ಲವಾಸನಮನಲಂಕರಿಸಿ ಪುಷ್ಪೋದ್ಭವನಿಂ ಪರಿಚರ್ಯೆಯಂ ಮಾಡಿಸಿಕೊಳುತ್ತಿರ್ಪಾಗಳ್,

ರಣಿತಂ ನೂಪುರಚಾಪಳಧ್ವನಿ ಕಳಾಪಾನೂನಸತ್ಕಿಂಕಿಣೀ ।
ಕ್ವಣಿತಂ ಕುಂತಳಗಂಧಮೋಹಸುಖಯಾನೋನ್ಮತ್ತಭೃಂಗೀರವಂ ॥
ಮಣಿಕೇಯೂರಸುಕಂಕಣಪ್ರಚುರನಾದಂ ಚಾರುಸಲ್ಲಾಪಭಾ ।
ಷಣಶಬ್ದಂ ಧರಣೀಶ್ವರಂಗೆ ಮುದಮಾಗಲ್ ಕೇಳಲಾಯ್ತಾಕ್ಷಣಂ ॥ ೭೫

ಅಂತಾಧ್ವನಿಯುಂ ಕೇಳ್ದಾದೆಸೆಯುಂ ಯುವರಾಜಂ ನೋಳ್ಪಿನಂ,

ಹಿಮಕೃತ್ಪಙ್ಕ್ತಿಯೊ ಕಾರ್ಮುಗಿಲ್ಗಳೊ ರಥಾಂಗಶ್ರೇಣಿಯೋ ಕಾಮಬಾ ।
ಣಮೊ ಪೇೞೆಂಬಿನಮಾಸ್ಯಕೋಮಳತೆಯಿಂ ಭೃಂಗಾಳಕಾನೀಕದಿಂ ॥

ದಮದುರ್ಗತ್ತುಂಗಕುಚತಂಗಳಿಂ ಲಸದಪಾಂಗಜ್ಯೋತಿಯಿಂ ಚಿತ್ತವಿ |
ಭ್ರಮಮಂ ಸಾಲಿಡುತಾವನಕ್ಕೆ ಮುದದಿಂದೆಯ್ದಿತ್ತು ಕಾಂತಾಜನಂ ‖ ೨೮

ಧ್ವನಿಯಿಂ ಕೋಗಿಲೆಗಳ್ಗೆ ಮೆಲ್ನುಡಿಗಳಿಂ ಕೀರಾಳಿಗಳ್ಗಾತ್ತ್ರಕಂ |
ಘನಮಂ ಕೋಮಲವಲ್ಲಿಗಳ್ಗೆ ಲಸದ್ಯಾನಪ್ರೌಢಿಯಿಂ ಹಂಸೆಗ ‖
ಳ್ಗೆ ನವೀನಂ ಮಿಗೆ ನೋಟಮಂ ವನಮೃಗಕ್ಕಾನಂದಸೌಭಾಗ್ಯಮುಂ |
ಘನಮಂ ತದ್ವನದೇವಿಯರ್ಗೆ ಸಲಿಸುತ್ತೆಯ್ದಿತ್ತು ಕಾಂತಾಜನಂ ‖ ೨೯

ಚಾಪಲದೃಷ್ಟಿಯಿಂ ಕೆಲವು ಶಾಖಿಗಳೊಳ್ ಕೆಲವಂಘ್ರಿಪಂಗಳೊಳ್ |
ತೂಪಿಱಿದುನ್ನತಸ್ತನಪ ಸೋಂಕುಗಳಿಂ ಕೆಲವುಂ ಕುಜಂಗಳೊಳ್ ‖
ನೂಪುರರಂಜಿತಾಂಘ್ರಿತಳಸಂಗಮದಿಂ ಕೆಲವುಂ ದ್ರುಮಪ್ರೊಳ್ ಪಿಕಾ |
ಳಾಪೆಯರೊಲ್ದು ಪಲ್ಲವಮನಿತ್ತೊಲವಿಂ ನಮೆತಂದರಱ್ತಿಯಿಂ ‖ ೩೦

ಅಗಲದ ಚಕ್ರಮಂ ಕಠಿನಮಲ್ಲದ ಮಾಣಿಕಮಂ ತೆರಳ್ಕೆಯಿಂ |
ಮುಗಿಯದ ಪದ್ಮಮಂ ಬೆಳಗುಗುಂದದ ಮಿಂಚುಗಳಂ ಪೊದಟ್ದಿ ಸಂ ‖
ಪಗೆಗರಿಯಲ್ಲದಾಱಡಿಗಳಂ ಸ್ಮರನೆಂಬ ವಿಧಾತ್ರನೀಗಳೀ |
ಕೆಗಳ ಶರೀರದೊಳ್ ಪಡೆದವೋಲ್ ಮೆಱೆದತ್ತು ಬಲಾಕದಂಬಕಂ ‖ ೩೧

ಅಂತು ಮಱಿಮಿಂಚಿನ ತುಱುಗಲಂತೆಯುಂ, ಇಂದುಕಳೆಯ ಸಂಡಣೆಯಂತೆಯುಂ, ಅರಲ ಸರಲ ಹೊರಳಿಯಂತೆಯುಂ, ಕುಡಿಲತೆಯ ಗಡಣದಂತೆಯುಂ, ಪಸುರಡಕೆಯ ಸಸಿಯಂತೆಯುಂ, ಚಂದ್ರಿಕೆಯ ಗಡಣದಂತೆಯುಂ, ಚಿತ್ತಜಪತಾಕೆಯ ಮೊತ್ತದಂತೆಯುಂ, ತೆಂಬೆಲರ ಬಂಬಲಂತೆಯುಂ, ವಸಂತನ ಪೊಸಬೀಡಿನಂತೆಯುಂ, ವನದೇವತೆಯ ಮನೆದೇವತೆಯಂತೆಯುಂ, ವಿಲಾಸದಿಂ ಬರ್ಪ ವಿಲಾಸಿನೀಜನದ ನಡುವೆ

ಮೇಲುದನೊಯ್ಯನೋಸರಿಸುತುಂ ಕುರುಳಂ ಬೆರಲಿಂದಮುರ್ಚುತುಂ |
ತೋಳ ವಿಲಾಸಮಂ ಮೆಱೆಯುತುಂ ಕಡೆಗಣ್ಬೆಳಗಂ ತುಳುಂಕುತುಂ ‖
ಸೋಲಮನೀಯುತುಂ ಫಿಟರೊಳೆಣ್ದೆಸೆಯೊಳ್ ಮುಡಿಗಂಪುಮೀಱುತುಂ |
ಲೀಲೆಯೊಳಂದವಂತಿವಧು ಬಂದಳನಂಗನಿಧಾನವೆಂಬಿನಂ ‖ ೩೨

ಮತ್ತಮವಳಾಪಾದಮಸ್ತಕರೂಪವರ್ಣನಮೆಂತೆಂದೊಡೆ:—

ಪೊಸಮುತ್ತಿನ ಗುಚ್ಛ* ನವಶು |
ಕ್ತಿಸಂಪುಟಂ ಕಡಲ ವಿದ್ರುಮಂ ಸೋಂಕಲೊಡಂ ॥
ನಸುಗೆಂಪುವೆತ್ತುವೆಂಬಂ |
ತೆಸೆಗುಂ ನಖದೀಪ್ತಿ ಮೆಱೆವ ಪದಯುಗಮವಳಾ ॥ ೩೩

ಮದನನ ಬಾಣನಿಷಂಗಂ |
ಸುದತಿಯ ಕಾಲ್ವಿಡಿದು ಪೆಂಪುವಡೆಯಲ್ ಬಂದಿ ॥
ರ್ದುದೊ ಪೇೞೆಂಬ ವಿಳಾಸಾ |
ಸ್ಪದದಿಂ ಮೆಱೆದಿರ್ಪುವವಳ ಜಂಘಾಕಾಂಡಂ ॥ ೩೪

ಕಾಮನ ನಿಳಯಕ್ಕೊಲವಿಂ |
ಸೋಮಂ ಶುಭಲಗ್ನದೊಳ್ ಪ್ರತಿಷ್ಠಿಸಿದ ಲಸ ॥
ತ್ಕೋಮಳರಂಭಾಸ್ತಂಭನಿ |
ಕಾಮಮೆನಲ್ ಮೆಱೆವುವಾಕೆಯೂರುದ್ವಿತಯಂ ॥ ೩೫

ಮದನಶಬರಾಸ್ತ್ರತತಿಗ |
ಳ್ಕಿಡ ವಿಟಮೃಗಸಮಿತಿಯಡರ್ದು* ಬರ್ದುಕುವ* ಶೈಲಾ ॥
ಗ್ರದ ತೆಱದಿನೊಪ್ಪುತಿರ್ಕುಂ |
ಸುದತಿಯ ಗುರುತರನಿತಂಬಮತ್ಯುನ್ನತಿಯಿಂ ॥ ೩೬

ಮಡದಿಯ ಸೆಳ್ನಡು ತನ್ನಯ |
ಬಡತನದಿಂ ಹರಿಯ ಮಧ್ಯಮಂ ನಯದಿಂ ಕೀ ॥
ಳ್ಪಡಿಸುತ್ತಿರ್ಪುದನಱಿದುಂ |
ಪಿಡಿಗೊಳಗಾಗಿರ್ಪುದೆಂಬುದದು ಪುಸಿಯಲ್ತೇ ॥ ೩೭

ವಿಟರ ಚಳನಯನಶಫರಂ |
ಚಟುಲತೆಯಿಂ ತಿರುಗುತಿರ್ಪ ಲಾವಣ್ಯರಸೋ ॥
ತ್ಕಟಕೂಪಮೆಂಬ ತೆಱದಿಂ |
ಕುಟಿಲಾಳಕಿಗೆಸೆದುದಲ್ತೆ ನಾಭೀಗರ್ತಂ ॥ ೩೮

ನಾರಿ ನನೆವಿಲ್ಲ ನುಣ್ಪಿನ |
ನಾರಿಯನೊಲ್ದೀಗಳಿಂತು ಪಡೆದಪಳೆನೆ ಭೃಂ ॥

ಗೀರುಚಿರರುಚಿಯಿನೆಸೆಗುಂ ।
ನಾರಿಯು ನಿಡುಬಾಸೆ ಕೋಮಳತ್ವವಿಯಿಂದಂ ॥ ೩೯
ಶಶಿಕಿರಣಮನಾಯ್ದೊಯ್ದೊ ।
ಳ್ಪೆಸೆಯಲ್ ಪೋಣಿಸಿದ ತೆಱದ ಮುಕ್ತಾಹಾರಂ ॥
ನಸುಸೋಂಕೆ ಮುಗಿದುವೆಂಬಂ ।
ತೆಸೆಗುಂ ಕುಚಕಮಲಕುಟ್ಮಲಂ ಕೋಮಳೆಯಾ ॥ ೪೦

ಸಲ್ಲಲಿತವಿಮಲಸುಮನೋ ।
ವಲ್ಲರಿಯುಂ ತಳೆದು ಪದೆಪಿನಿಂ ಮೆಲ್ಲಲರಿ ॥
ದಲ್ಲಾಡುವ ಲತೆಗಳಿವೆನೆ ।
ಸೆಳ್ಳುಗುರಿಂದೆಸೆವುವವಳ ನಿಡುನಳತೋಳ್ಗಳ್ ॥ ೪೧

ಇಂಬಿನ ಕಂಬುಗ್ರೀವಮಿ ।
ದೆಂಬರ ಮಾತಿರ್ಕೆ ಮೌಕ್ತಿಕಗ್ರೀವಂ ತಾ ॥
ನೆಂಬುಪಮೆವೆತ್ತು ಶೋಭಾ ।
ಡಂಬರಮಂ ಪಡೆದುದವಳ ಕೋಮಲಕಂಠಂ ॥ ೪೨

ಅನುರಾಗರಸವಿಲಾಸಿನಿ ।
ಯಿನಿಯನ ಮೇಲ್ವಾಯಲೆಂದು ತದ್ವದನನಿಕೇ ॥
ತನದ ಪ್ರೊಸಂತಿಲೊಳಿರ್ದಪ ।
ಳೆನೆ ಸತಿಯೊಳ್ದುಟಿಯ ಕೆಂಪು ರಂಜಿಸುತಿರ್ಕುಂ ॥

ವದನಸಿತಾಂಬುಜದೊಳ್ ಕೊಂ ।
ಕದಂತು ತರತರದ ಶೋಭೆಯಿಂದೊಪ್ಪುವ ವ ॥
ಜ್ರದ ಕೇಸರಮೆಂಬುಪಮೆಗೆ ।
ಪದೆದುವೆನಲ್ ಮೆಱೆವುವವಳ ದಂತದ್ಯುತಿಗಳ್ ॥ ೪೪

ಕ್ಷೋಣಿಯನಲೆಯಲ್ ಸುಮನೋ ।
ಬಾಣಂ ಕುಸುಮಾಸ್ತ್ರವಿತತಿಯಂ ಮಸೆವ ಲಸ ॥
ಚ್ಛಾಣಮೆನಲೆಸೆಯುತಿರ್ಕುಂ ।
ಮಾಣಿಕ್ಯಾಧರೆಯ ನುಣ್ಪುವೆತ್ತ ಕಪೋಲಂ ॥ ೪೫

ಪಱಿಮೆಗಳಿಂಜಲಿಸದ ಮ |
ನ್ನಱಿದು ವಸಂತಂ ಸುಗಂಧನಂ ಬೈತಿಟ್ಟು ||
ನಱುಗಂಪಿನ ಕುಪ್ಪಿಗೆಯೆಂ |
ಬೆಱಕಮನೊಡರಿಸುವುದವಳ ನಾಸಾಮುಕುಳಂ || ೪೬

ಲಲನಾರತ್ನವಿದೆನಿಸಿ |
ಪೆರ್ಳೆಯಳ ಕಣ್ಬುಗುವುದರ್ಕೆ ಸಮಯಂಬಡೆಯಲ್ ||
ನೆಲಸಿರ್ಪಂಜನರೇಖಾ |
ವಿಳಾಸಮಂ ಪಡೆದುವವಳ ತಳ್ತೆವೆದುಱುಗಲ್ || ೪೭

ಅಂಬುಜಪತ್ರಕ್ಕೆಱಗಿದ |
ತುಂಬಿಯು ಮಱಿಯೆಂಬ ತೆಱದಿನಬ್ಜಾಕ್ಷಿಯ ಕ ||
ಣ್ಗೆಂಬಾಗಿರ್ದುವು ಸರ್ವ್ವರ |
ಕಣ್ಬುಗೆ ಕರಿಯಾಲಿ ನೀಲಮಣಿಸನ್ನಿಭದಿಂ || ೪೮

ತಿಂಗಳ ಬೆಳಗಿನ ರಸದಿನ |
ನಂಗಂ ಪೂಗಣೆಯನುರ್ದ್ದಿ ಚಿತ್ರಿಸಿದನೊ ಕರ ||
ಣಂಗಳ ಸೀಮೆಯೆನಲ್ ನಿಡು |
ಗಂಗಳ ಬಿಳಿಯಾಲಿ ರಂಜಿಕುಂ ಕೋಮಳೆಯಾ || ೪೯

ಎಲೆ ಚಂದ್ರವದನೆ ನಿನ್ನಯ |
ಕೆಳೆಯನ ಬಲ್ಸಗೆಯ ಮಱುಗಳೆಂದಬ್ಜಭವಂ ||
ಮುಳಿದೊಪ್ಪಗೊಟ್ಟ ರಾಹುವಿ |
ನೆಳಮಱಿಯೆನಲಡರ್ದ್ದ* ಪುರ್ಬು ರಂಜಿಸುವವಳಾ || ೫೦

ಶಿವಿಯೆಂದು ಬರೆಯುತುಂ ಮೊದ |
ಲ ವರ್ಣವಂ ಮಱೆದು ಕಡೆಯ ವರ್ಣಮನಂಗೋ ||
ದ್ಭವನತುರ್ ಬರೆದನೆಂಬಂ |
ತೆ ವಿಳಾಸಂಬೆತ್ತುವವಳ ವರ್ಣಿತಕರ್ಣಂ || ೫೧

ಅಲರ್ವಿ*ಲ್ಲನೋಜೆಯಿಂದಾ |
ಲಲನೆಯ ಸಮುದಾಯಶೋಭೆಯನಿತಂ ಬರೆಯಲ್ ||

ಕಲಿಯುಲಳವಟ್ಟ ಚಿತ್ರದ ।
ಫಲಕವೆನಲ್ ಪೊಳೆವುದೆಸೆವ ಪೆಱೆನೊಸಲವಳಾ ॥ ೫೨

ನಾಸಾಚಂಪಕಗಂಧ ।
ಶ್ವಾಸುರದಿಂದಱಿಯದೆಱಗಿದೆಳದುಂಬಿಗಳೊ ॥
ಲ್ವಾಸೊರ್ಕಿ ನೆಲಸಿದಪ್ಪುವೆನೆ ।
ದೇಸೆಯನಾಂತವಳ ಕುಟಿಲಕುಂತಳವೆಸೆಗುಂ ॥ ೫೩

ಲೇಸೆನಿಸುವಾಲಿಯುರಳಂ ।
ಸೂಸುವ ನವಮೇಘದಂತೆ ಕುಸುಮಾವಳಿಯಿಂ ॥
ಬಾಸಣಿಸಿ ಮೆಱೆವ ಸೋರ್ಮುಡಿ ।
ಭಾಸುರಮೆನಿಸಿರ್ದುದಮಳಕಮಳಾನನೆಯಾ ॥ ೫೪

ತಿಲಕಂ ತಮಾಲಪತ್ರಾ ।
ವಲಿಚಿತ್ರಕವೆಸೆವ ಜನದೊಳಿರಲಲ್ಲದೆ ಪೇೞ್ ॥
ತಿಲಕಂ ತಮಾಲಪತ್ರಾ ।
ವಲಿಚಿತ್ರಕಮಿವಳ್ಗೆ* ಮೆಱೆವುದಚ್ಚರಿಯಲ್ತೇ ॥ ೫೫

ಅದಲ್ಲದೆಯುಂ

ಕನ್ನೆಯ ಚರಣದ ಸೊಬಗಿಂ ।
ಶೆನ್ನರ ಮಕುಟಕ್ಕೆ ಸಾರ್ದುಗೆಂದುಲಿಪಂತೆ ॥
ತ್ಯುನ್ನತಪದದೊಳ್ ಮೆಱೆಗುಂ ।
ರನ್ನದ ನೇವುರದ ದನಿ ಸರೋಜಾನನೆಯಾ ॥ ೫೬

ಮಾರನರಮನೆಯ ರತ್ನದ ।
ತೋರಣಮೆಂಬಂತೆ ಮೆಱೆವ ನವರತ್ನದ ಕಿ ॥
ಮ್ಮಾರರುಚಿ ಮೆಱೆಯೆ ಮೇಖಲೆ ।
ನೀಱೆಯ ಸೆಳ್ನಡುವಿನೊಳ್ ಮನಂಗೊಳಿಸಿರ್ಕುಂ ॥ ೫೭

ಈಲಲಿತಬಾಹುಯುಗದ ಸು ।
ಖಾಲಿಂಗನದಿಂ ಮೃದುತ್ವಮಂ ಪಡೆದಪೆನೆಂ ॥

ದಾಲಿಂಗಿಸಿದರ್ ಮಣಿಯೆನೆ ।
ಬಾಲೆಯು ನವರತ್ನಕಂಕಣಾಂಗದಮಿರ್ಕುಂ ॥ ೫೮

ಇರುಳನಿತು ತಿಮಿರಮಂ ಸಂ ।
ಹರಿಸಲ್ಕೆ ಸಹಸ್ರಕರವನಾಂತಿರ್ಪಂ ಭಾ ॥
ಸ್ಕರನೆಂದು ನಗುವವೊಲ್ ಭಾ ।
ಸುರಕಾಂತಿಯಿನೆಸೆವುವವಳ ಮಣಿಕಟಕಂಗಳ್ ॥ ೫೯

ಅಲರಂಬಿಂಗಣಸಂ ಮಣಿ ।
ಕುಲದಿಂ ಸಮೆದಂಗಸಂ ಪದಂಗೊಳಿಸಿದವೊಲ್ ॥
ತಳತಳಿಸಿ ಪೊಳೆಯುತಿರ್ಕುಂ ।
ಲಲನೆಯು ಪೆಂಪೆಸೆವ ಬೆರಳ ಮಣಿಮುದ್ರಿಕೆಗಳ್ ॥ ೬೦

ಸಸಿಮೊಗದೊಳ್ ನಕ್ಷತ್ರಂ ।
ಮಿಸುಪುದು ಮರ್ಯಾದೆಯೆಂದು ಸಕಲಜನಂ ಭಾ ॥
ವಿಸುತಿರೆ ನುಣ್ಬೆಳಗಿಂ ರಂ ।
ಜಿಸುಗುಂ ನಾಸಾಗ್ರದಲ್ಲಿ ಮೂಕುತಿಯುವಳಾ ॥ ೬೧

ಸಿಡುಗಣ್ಬೆಳಗಿನ ಪೂರಂ ।
ಕಡುಪಿಂ ಕಡೆಗೋಡಿವರಿವ ಕಾಂಚಿದಾಮಂ ॥
ತಡೆಯುತ್ತಿರದಡರ್ದೆನಲ್ ।
ಮಡದಿಗೆ ಚೆಲ್ವಾಯ್ತು ತೋರ ಮುತ್ತಿನ ಹಾರಂ ॥ ೬೨

ಸಕಲಾಭರಣದ್ಯುತಿಕ ।
ಣಿರ್ಕೆಯಾದುದೇನಚ್ಚರಿಯಾಯ್ತು ವದನಸರೋಜಂ ॥
ವಿಕಸಿತವಾದುದಱಿಂದಂ ।
ಬಕೂರ್ಮೆಯಿಂ ಮುತ್ತಿನೋಲೆಯೊಪ್ಪಿದುವವಳಾ ॥ ೬೩

ಅದಲ್ಲದೆಯುಂ

ನಡುವಿಂಗೊಳ್ನಡೆ ದೇಹಕಾಂತಿಗಳಕಂ ವಕ್ತ್ರಕ್ಕೆ ಪಾದದ್ವಯಂ ।
ಮುಡಿಗುತ್ತುಂಗಕುಚಂ ಭುಜಕ್ಕೆ ನಯನಂ ದಂತಕ್ಕೆ ನೈತಂಬದಿ ॥

ಟ್ಟೆಡೆಗಳ್ ಮೆಲ್ಲುಡಿಗೊಪ್ಪುವೆತ್ತಧರವಾರ್ಪಿಂ ಬಲ್ಲವರ್ ಭಾವಿಸಲ್ |
ಕಡುಪಿಂದಂಜವವೆಂದ ಪಾಡೇಂ ಪೊಗಲ್ವುದೋ ರೂಪಂ ವಿಚಿತ್ರಾಂಗಿಯಾ ||

ಮತ್ತಮಾ ವನದೇವತೆಯಂತೆ ಮಂಗಳಪ್ರಮೋದಪ್ರಸವಮುಖವಿಕಾಸಿತೆಯುಂ, ದಿನಲಕ್ಷ್ಮಿಯಂತೆ ಸುಭಗಮೂರ್ತಿವಿಳಾಸಿಯುಂ, ಮೇಘಸಮಯಮಯೂರಿಯಂತೆ ಕಳಾಪಕಾಂತಿಕಮನೀಯೆಯುಂ, ಸರೋವರದಂತೆ ಹಂಸಕವಿಜೃಂಭಿತಪದಪ್ರಚಾರೆಯುಂ, ರಾಮಕಟಕದಂತಂಗಜಬಾಹುಸಾರಂಭೆಯುಂ, ಯೋಗಿನಿಯಂತೆ ಮುಕ್ತಾಹಾರಪ್ರಭಾವೆಯುಂ, ವರ್ಷಾಗಮದಂತೆ ಪಯೋಧರಪರಿಪೂರ್ಣಯೌವನೆಯುಮೆನಿಸಿದೀಯುಂಜವ್ವನೆಯ ಸೌಭಾಗ್ಯರೂಪಾತಿಶಯಮುಮತ್ಯಾಶ್ಚರ್ಯಮೆನಿಸಿದುದು. ಅಂತುಮಲ್ಲದೆಯುಂ,

ತರುಣತಮಾಲಕುಂತಳೆ ಮನೋಹರಕಲ್ಪಲತಾಂಗಿ ಪಲ್ಲವಾ |
ಧರೆ ಸರಸೀಜಕುಟ್ಮಲಕುಚದ್ವಯೆ ಕೋಕಿಲನಾದೆ ಹಂಸಮಂ ||
ಥರಗತಿ ಚಂಪಕಾಮಳತನುಪ್ರಭೆ ಕೈರವನೇತ್ರೆ ದಿಟ್ಟಿಗೆ |
ಚ್ಚರಿವಡೆದಳ್ ಮನೋಭವನೃಪಾಲನ ಕೇಣಿಯ ತಾಣಮೆಂಬಿನಂ || ೬೫

ಅಂತು ಮನೋಹರಂಬಡೆದವಂತಿಸೌಂದರಿ ವನಮಧ್ಯದೊಳ್ ನಿಂದು

ತರತರದ ಪುಷ್ಪಲತಿಕೋ |
ತ್ಕರವಂ ನೋಡುತ್ತವಂತಿಸೌಂದರಿ ವೇಣೀ ||
ಭರವನುಗುರ್ಚಲ್ ಬಿಂಬಾ |
ಧರೆಯರ್ ಪುಷ್ಪಾಪಚಯಮನೆಸಗಿದರಾಗಳ್ || ೬೬

ಈಲತೆಯೆನಗೀಲತೆ ನಿನ |
ಗೀಲತೆ ತನಗೆಂದು ಪೂತ ಲತೆಗಳ್ ಪೂಮಂ ||
ಬಾಲೆಯರೆಲ್ಲರ್ ಮುದದಿಂ |
ಕೇಳೀವನದಲ್ಲಿ ತಿಱಿಯುತಿರ್ದರಲಂಪಿಂ || ೬೭

ಅಂತಾಕೆಯರೆಲ್ಲರುಂ ಪೂದಿಱಿವುದಂ ಕಂಡನಂತಿಸೌಂದರಿ

ಪರಿಮಳಿಪ ಸಂಪಗೆಯ ಕಂ |
ಪರಿ ಮಧುಕರವಿತತಿಗೆಂಬರದನಱಿವೆನೆನು ||
ತ್ತರುಣಾಧರೆ ತಿಱಿದಳ್ ತ |
ತ್ತರುಣಾಳಿಸಮಾಳಕಕ್ಕೆ ಸಂಪಗೆಯರಲಂ || ೬೮

ನನೆಜಾಜಿಯ ನರವಿಂದಾ ।
ನನೆ ಜಾಣೆಸೆಯಲ್ಕೆ ತಿಱಿವ ಕಾಮನೊಳುಱೆ ಕಾ ॥
ಯ್ದನಿತೆ ನಡೆನೋೞ್ಪ ವಿಟರಂ ।
ವನಿತೆಗೆ ಪೊಡಮಡಿಪಳೆಸೆವ ತನ್ನಯ ಸೊಬಗಿಂ ॥ ೬೯

ಪಡ್ಡಳಿಯು ಪೊಗಸಿ ಬರುತ್ತಿ ।
ಪಡ್ಡಳಿಯಂ ಸೋವಿ ತಿಱಿದಳಾಪಡ್ಡಳಿಯೊಳ್ ॥
ದೊಡ್ಡಲರಂ ಕಾಂತೆ ಕನ ।
ಲ್ದೊಡ್ಡಲನಂಗಂ ವಿಟರ್ಕಳಂ ಗುಱಿಮಾಡಲ್ ॥ ೭೦

ಪುನ್ನಾಗದಲರ್ಗಳಂ ಪಿಂ ।
ಪುನ್ನಾಗವಿಳಾಸಗತಿಯುಮೊಪ್ಪುವವಂತಿ ॥
ಕನ್ನೆ ಗಣನೆಗಳ ಪೂವ ।
ಕ್ಕನ್ನೆಗಮೆಂದೊಲ್ದು ತಿಱಿದಳೆಂದುಪವನದೊಳ್ ॥ ೭೧

ಬಿರಿಮುಗುಳೊಳ್ಳಿದುವೆಂದೆಂ ।
ಬಿರಿ ಮುದದಿಂ ಬನ್ನಿ ಕೊಯ್ವೆನೆಂದಖಿಳಕಲಾ ॥
ಧರೆಯರೊಡಗೂಡಿ ಬಿಂಬಾ ।
ಧರೆಯನುವಿಂ ತಿಱಿದಳೆಸೆವ ಮೊಲ್ಲೆಯ ಮುಗುಳಂ ॥ ೭೨

ಗುರುಕುಚೆ ತನ್ನಯ ತೊಡವಿಂ ।
ಗುರುಕುಚದೊಳ್ ಕೊಯ್ದುಳಂಗಜಂಗನುರಾಗಾಂ ॥
ಕುರವಗ್ಗಲಿಸಲ್ ನಲವಿಂ ।
ಕುರವಕದಲರಂ ವಿಳಾಸಿನೀಜನಸಹಿತಂ ॥ ೭೩

ಪಾದಪರಿಚರಿಯುಕೊಂಕದ ।
ಪಾದಪದೊಳ್ ಕೊಯ್ದಳೊಪ್ಪೆ ಗೊಂಚಲ್ಗಳಂ ॥
ಕಾದಲರನಂಗನಿದಿರೊಳ್ ।
ಕಾದಲವಳ್ ತನ್ನನೆನಗೆ ತನಗೆಂದಾಗಳ್ ॥ ೭೪

ಪಿಕಚಂಚುಚನ್ನಾಟೆ ಕಳಾ ।
ಪಿಕಚಂ ಮೊಱೆಯಲ್ಕೆ ಫಲವನಾಯ್ದಳ್ ವಿಟಜೀ ॥

ವಕುಳಂ ತಲೆಗೇಱುತ್ತಿರೆ ।
ವಕುಳಂಗಳೊಳಲರ್ಗ*ಳಂ ಪೊದಂ ವಿರಿಗೆ ವನದೊಳ್ ॥ ೨೫

ಕಾಮಂಗಸಮಶರಂ ಕಳೆ ।
ಕಾಮುಕುಳವೆನಿಪ್ಪಮುಗುಳಲರ್ಗಳನುತ್ತುಂ ॥
ರಾಮಾಂತರ್ಗತೆ ನಲಿದಾ ।
ರಾಮಾಂತದೊಳಾಯ್ದುಳೊಲ್ದು ಮಲ್ಲಿಗೆಯಲರಂ ॥ ೨೬

ನೆರವೆನಗಾಯ್ತುನ್ನರನಿ ।
ನ್ನೆಱೆಪೆನದೇಕೆಂದು ಕಾಮನಲರಂಬೆಸೆಯಲ್ ॥
ತ್ರಿಭುವಂ ನೇವರಿಸಲ್ಕಾ ।
ತಿರುವಂತಿಗೆಯಲರನಬಲೆ ಬನದೊಳ್ ತಿಱಿದಳ್ ॥ ೨೭

ಪಾದರಿಯಲರ್ಗ*ಳ ನಸುಗಂ ।
ಪಾದರಿಸಲ್ ತಕ್ಕುದೆಂದು ಕೊಯ್ದಳ್ ದಿವ್ಯಾ ॥
ಮೋದವೆಸೆಯಲ್ಕೆ ನಿಜಸಂ ।
ಮೋದಮೆನಲ್ ಕಾಂತೆ ತದ್ವನಾಂತದೊಳೊಲವಿಂ ॥ ೨೮

ಮುಡಿ ಜಗುಳಲ್ ಕುರುಳ್ ಕವಿಯೆ ತುಂಗಕುಚದ್ವಯಮುಪ್ಪೊಡಸ್ತುಗುಂದೆ ಕ ।
ಪ್ಪಡರ್ದು*ರುಕಕ್ಷಪ್ರೋಪ್ಪೆಯಲರ್ಗಳ್ಕ್ರಮುಗುಳೊಪ್ಪಮನೀಯೆ ಕಾಂಚಿಬಿ
ಟ್ಟಡೆ ಸಡಿಲಲ್ ನಿತಂಬಮುಗಳಂ ನಡುಗಲ್ ವಳಿ ತಪ್ಪಿತಪ್ಪನೊ ।
ಳ್ನಡು ಸೆಡೆಯಲ್ಕೆ ಕ್ಕ[illegible]ಗಿ ಪೂಡಿಱಿದಳ್ ಸತಿ ಸಾಕುಮಾರ್ಯದಿಂ ॥ ೨೯

ಅಂತು ಪುಷ್ಪಾಪಚ[illegible]ನೆಸಗಿಯನಂತರಂ,

ನವಹಾರಂ ನೂಪುರಂ ಮೇಖಲೆ ಪೊಸಕಡಗಂ ಜಾಳೆಯಂ ಸೂಸಕಂ
ಚೆ । ಲ್ವವತಂಸಂ ಜಾಪೆಯುಂ ಮೂಕುತಿ ಚಳಕಿಗೆ ತೋಳ್ಬಂದಿ ಮಿಂ
ಚೋಲೆ ಕೊಪ್ಪು ಪ್ಪವಿನಂ ಗ್ರೈವೇಯಕಂ ಪೊಂಜರಿಗೆಯೆನಿಪ್ಪವಂ ಪೂಗ
ಳಂ ಮಾಡಿ ನಾನಾ । ಯುವತೀಸಂತಾನಕಂ ಸಿಂಗರಿಸೆ ಪದೆಪಿನಿಂ ಕಾಂತೆ
ಕಣ್ಗೆಡ್ಡಮಾದಳ್ ॥ ೮೦

ಅಂತು ಕೆಳದಿಯರುಂ ತಾನುಂ ಸಿಂಗರಂಗೆಯ್ದು ಅನಂತಿಸಾಂದರಿ ಬಾಲಚಂದ್ರಿಕೆಯ ಪೆಗಲೊಳ್ ಕೆಯ್ಯನಿರಿಸಿ,

ಮಿಸುಗುವ ದುಂಡುಮಲ್ಲಿಗೆಯ ಹಾರಮನೊಪ್ಪಿರೆ ತಾಳ್ದು ಮಾಲತೀ ।
ಕುಸುಮದ ಜಾಳಿಯಂದಳೆದು ಮೊಲ್ಲೆಯ ಕಂಕಣಮಿಕ್ಕಿ ಚಂಪಕ ॥
ಪ್ರಸವದ ಕರ್ಣಪೂರಕಮನಾಂತು ವಿಲಾಸಮನೆಯ್ದೆ ಬೀರುತ ।
ರ್ಚಿಸಿದ ಮನೋಜರಾಜನಧಿದೇವತೆ ಬರ್ಪವೊಲಾಕೆಯೊಪ್ಪಿದಳ್ ॥ ೮೧

ಅಂತು ಪದವಿನ್ಯಾಸದಿಂದುಪವನಮಂ ಕೃತಾರ್ಥಂಮಾಡುತುಂ ಮಾಕಂದ ವೀಧಿಯೊಳ್ ಬರುತಿರ್ಪಾಗಳ್ ಮುಂದೆ,

ವಿಮಳಾರ್ಕಂ ವ್ಯೋಮಯಾತ್ರಾಗತಿಯಿನತಿಬಳಲ್ದಾತನೀ ಚೂತ
ಭೂಜಾ । ತನುಧೂದ್ಯಚ್ಛಾಯೆಯೊಳ್ ಕಾಯದೊಳೊದಗಿದ ಸಂತಾಪಮಂ
ಲೋಟಿಪೊಂದು ॥ ದ್ಯಮದಿಂ ಬಂದಿರ್ದನೋ ಪೇಳೆನಲವಯವಶೋಭಾಪ್ರ
ಭಾಜಾಳದಿಂ ವಿ । ಶ್ವಮನಸ್ಸಂಪ್ರೀತಿಯಂ ಪೆರ್ಚಿಸುತನುನಯದಿಂದೊಪ್ಪಿ
ದಂ ರಾಜಪುತ್ರಂ ॥ ೮೨

ಅಂತಾ ಮಾಮರದ ನೆಳಲೊಳ್ ಮಂಗಳಾಕಾರನಾಗಿರ್ದ ಮಾನನಿಧಾನನನನಂತಿಸೌಂದರಿ ಭೋಂಕನೆ ದೂರದೊಳ್ ಕಂಡು,

ಸ್ತನಕಲಶಂಗಳಿಂದಧರಪಲ್ಲವದಿಂ ಪುಳಕಾಕ್ಷತಂಗಳಿಂ ।
ವಿನುತಕಪೋಲದರ್ಪಣದಿನೂರ್ಜಿತನೂಪುರಶಬ್ದವಾದ್ಯದಿಂ ॥
ಮನದನುರಾಗದಿಂ ನಯನದೀಧಿತಿಮಂಗಳರತ್ನದೀಪದಿಂ ।
ವನಿತೆ ವಿಳಾಸಮೊಪ್ಪೆ ಯುವರಾಜನನಿದಿರ್ಗೊಂಡಳರ್ತಿಯಿಂ ॥ ೮೩

ಅಂತಿದಿರ್ಗೊಂಡು

ಎತ್ತಣಿನೆಯ್ದಿದಂ ಮದನನಿಕ್ಷುಧನುರ್ಲತೆಯುಂ ಪ್ರಸೂನಕಾ ।
ಯತ್ತಶರಂಗಳಂ ಮಕರಕೇತನಮುಂ ರತಿಯುಂ ಸಮೀರನಂ ॥
ಮತ್ತೆ ವಸಂತನಂ ಮಱಸಿಯೆಂದು ಕರಂ ಬೆರಗಾಗಿ ನೋಡಿದಳ್ ।
ಚಿತ್ತದ ಸಂಭ್ರಮಂಬೆರಸು ಕಾಂತೆ ಕಲಾಧರನಂ ಕುಮಾರನಂ ॥ ೮೪

ಮದನನನನಂಗನೆಂಬವ ।
ರೆದ*ರ್ಬಲ್ಲಿವರಕ್ಕೆ ಬಲ್ಲರಿನ್ನಾದೊಡೆ ನೋ ॥
ಟ್ಪಿದು ಸುಭಗಮೂರ್ತಿಯಂ ಕಾ ।
ಣದೆ ಕೇಳದೆ ಪುಸಿಯನುಸಿರುತಿರ್ಪರ್ದು ಲೋಕಂ ॥ ೮೫

ಎಂದಾತನ ಸುಭಗತ್ವಮನೆನೆಯಿಕ್ಕುದೆ ನೋಡುತ್ತಿರಲ್ ಬಾಲಚಂದ್ರಿಕೆ ರಾಜಪುತ್ರನಿದಿರ್ಗೆ ವಂದು

ಭಾವನನೀಕ್ಷಿಸಲೆವ್ಮ್ರಯು ।
ದೇವಿಯರ್ಬೈತಂದರೆಂದು ತತ್ಕಾಮಿನಿ ತ ॥
ದ್ಭಾವವ ಸಱಿಪಲ್ ಕೇಳ್ದಂ ।
ದಾವಧುವನಿದಿರ್ಗೊಳಲ್ಕೆ ಭೂಪತಿಯೆೞ್ದಂ ॥ ೮೬

ಅಂತೆೞ್ದು ಮುಟ್ಟೆವಂದವಂತಿಸೌಂದರಿಯುಂ ಕಂಡು

ಮೆಲ್ಲಡಿಗಳ್ ನೊಂದಪ್ಪವೆ ।
ನ್ನಲ್ಲಿಗೆ ಬರ್ಪೊಂದು ಭಾಗ್ಯಮಾಯ್ತೆನಗೆಂದು ॥
ತ್ಫಲ್ಲಾಸ್ಯನಾಗಿ ಧರಣೀ ।
ವಲ್ಲಭನುಪಚರಿಸಲೆೞ್ದುನಾಕೆಯನಾಗಳ್ ॥ ೮೭

ಅಂತು ತನಗಿದಿರೆೞ್ದು ಯುವರಾಜನನವಂತಿದೇವಿ ಕಂಡು

ನಸು ತಲೆವಾಗಿ ಕೆಯ್ಯು ಮುಱಿಗೊಯ್ದು ಮುಖಾಬ್ಜಮನೊಯ್ಯನೊ
ಯ್ಯನೀ । ಕ್ಷಿಸಿ ಕಡೆಗಣ್ಗಳಿಂ ತಡತಡಂ ಮಿಗೆ ಮೆಲ್ಲುಡಿಯಿಂದಿಳೇಶ ಭಾ ॥
ವಿಸದಿದಿರೇೞ್ದಪಿರ್ ಕೆಳದಿಯುಂ ಪ್ರತಿನಾಡಿಯೆನುತ್ತವಂತಿ ಮ ।
ನ್ನಿಸಿ ಮೃದುಪಲ್ಲವಾಸನದೊಳೊಪ್ಪಿರೆ ಕುಳ್ಳಿರವೇೞ್ದಳಾತನಂ ॥ ೮೮

ಅಂತು ಕುಳ್ಳಿರಲ್ವೇೞ್ದು ಮತ್ತಂ

ವನಿತೆಯರೆಲ್ಲರೊಳ್ ಸುಕೃತಮಂ ಮಿಗೆ ಮಾಡಿದಳಾವಳೆನ್ನವೋಲ್ ।
ಮನಸಿಜಮೂರ್ತಿಯುಂ ಸುಭಗನಂ ಮೃದುಕೋಮಲಕಾಯನಂ ಪ್ರಸ ॥
ನ್ನನನಭಿರಾಮನಂ ಪಡೆದು ಕಾಣ್ಬನಿತರ್ಕೆ ಸಮಂತಿದೆಲ್ಲಮೊ ।
ಳ್ಪಿನ ಕಣಿ ಬಾಲಚಂದ್ರಿಕೆಯ ಕಾರಣದಿಂ ದೊರೆಕೊತ್ತು ನಿಶ್ಚಯಂ ॥ ೮೯

ಎಂದು ಮತ್ತಂ ಬಾಲಚಂದ್ರಿಕೆಯೊಳಿಂತೆಂದಳ್—

ಅನುನಯಮಪ್ಪ ಚೆಲ್ವ ಪರೆಯುಂ ಪರೆಯುಕ್ಕಳವಟ್ಟ ರೂಪು ರೂ ।
ಪಿನ ಪೊಸದೇಸೆಗೊಪ್ಪುವ ಗುಣಂ ಗುಣಮಂ ಮಿಗುತಿರ್ಪ ನೂತ್ನಸ ॥
ದ್ವಿನಯಮನಾರತಂ ವಿನಯಮಂ ಕೆಳೆಗೊಳ್ವ ಮೃದೂಕ್ತಿ ರಾಜಪು ।
ತ್ರನೊಳೆಸೆದಿರ್ಪಿನಂ ಕೆಳೆಯರಲ್ಲದರಾರೊ ಸರೋರುಹೇಕ್ಷಣೇ ॥ ೯೦

ಎಂದು ನುಡಿಯುತ್ತಿರ್ಪನ್ನೆಗಂ,

ಲೇಸಿಂಗೆ ವಿಘ್ನಸಂತತಿ ।
ಯಾಸುರಮೆನಿಸಿರ್ಪುದಲ್ತೆ ಕರ್ಣಕಠೋರಂ ॥
ತ್ರಾಸಕರಂ ಘನದುಃಖಾ ।
ವಾಸಂ ಮಿಗೆ ಕೇಳಲಾಯ್ತು ಶಂಖಧ್ವಾನಂ ॥ ೯೧

ಆ ಶಂಖಧ್ವನಿಯಂ ಕೇಳ್ದು ಕೆಳದಿಯರ್- ಅವಂತೀಶ್ವರನಾರೋಗಣೆಗೆ ಕುಳ್ಳಿರ್ಪ ಸಮಯಮಾಯ್ತು, ಅಕ್ಕ, ನಿನ್ನನಿನ್ನೆಗಮರಸುತಿರ್ಪರೇಳ್ ಪೋಪಮೆಂದನುವಿಸಲೆಂತಾನುಂ

ಮನಮುಂ ಚೈತನ್ಯಮುಂ ಚಿತ್ತಮನೆಸಪ ಸಮಸ್ತೇಂದ್ರಿಯವ್ಯಾಪ್ತಿಯುಂ
ಭಾ । ವನೆಯುಂ ತಳ್ತಹಂಕಾರಮುಮನಱಿವನಿತಂ ಬುದ್ಧಿಯುಂ ಕೂರ್ತು
ತದ್ಭೂ ॥ ಪನ ಕೈಗಂಬೊಪ್ಪಗೊಟ್ಟಾಳಿಯರನುವಿಸಲೆಂತಾನುಮಲ್ಲಿಂ ತಳ
ರ್ದಂ । ಗನೆ ಪೋಗುತ್ತೊಪ್ಪಿದಳ್ ಲೆಪ್ಪದ ಕರುವಿನವೋಲ್ ಮೂರ್ತಿ
ವೈಚಿತ್ರ್ಯದಿಂದಂ ॥ ೯೨

ಅಂತಾಕೆಯುತ್ತಲ್ ಪೋದಳ್. ಇತ್ತಲರಸಂ ಪುಷ್ಪೋದ್ಭವನ ಮೊಗಮಂ ನೋಡಿ

ಅಲರಂಬಾಕೆಯ ಚೆಂದದಿಂ ಸುಳಿದುದೋ ಮಿಂಚಂಗನಾಭಂಗಿಯಿಂ ।
ನೆಲಸಿತ್ತೋ ತ್ರಿಜಗನ್ಮನೋಮಯಸುಖಂ ಸ್ತ್ರೀವೇಷದಿಂ ಬಂದು ಸಂ ॥
ಚಲಿಸಿತ್ತೋ ಮಲಯಾನಿಲಂ ಸತಿಯ ರೂಪಂ ತಾಳ್ದುದೋ ಕಾಮಿನೀ ।
ಛಲದಿಂ ಚಂದ್ರಿಕೆ ಮೂರ್ತಿವೆತ್ತುದೊ ದಿಟಂ ಪೇಳೆಂದನಾಭೂಭುಜಂ ॥ ೯೩

ಅದಲ್ಲದೆಯುಂ

ಮಲಯಸಮೀರನೊಲ್ದು ಪಡೆದಂ ಮದನಂ ಪೊರೆದಂ ಸುಧಾಕರಂ ।
ತಳಿರಡಿ ರಂಜಿಸಲ್ ನಡೆಪಿದಂ ರತಿ ತನ್ನ ವಿಳಾಸದೇಳ್ಗೆಯುಂ ॥
ನಲವಿನೊಳಿತ್ತಳೊಲ್ದು ಮಧು ಮೆಲ್ನುಡಿಯುಂ ಕಲಿಸಿಟ್ಟನಲ್ಲದಂ ।
ದೆಳೆಯಳ ಸೌಕುಮಾರ್ಯಮಿನಿತಪ್ಪುದೆ ಭೂಮಿಯೊಳೆಂದನಾನೃಪಂ ॥ ೯೪

ಪ್ರಿಯ ಕೇಳ್ ಚಿತ್ತವಶೀಕೃತಂ ವಿಮಳಕಾಯಸ್ತಂಭನಂ ಲೋಚನೇಂ ।
ದ್ರಿಯಸಮ್ಮೋಹನಮತ್ಯಪೂರ್ವಮೃದುವಾಕ್ಯೋಚ್ಚಾಟನಂ ದುಷ್ಟಹೃ ॥

ಕ್ಷ್ಮಿಯುಮಿದ್ವೇಷಣಮಿಾಗಳಾಯ್ತು ನಗವಳ್ ಮೊಯ್ದೋಱಲಿನ್ನೇನಸಾ ।
ಕೆಯು ಮಂತ್ರಂ ಕಡೆಯಲ್ಲಿ ಮಾಜ್ಪುದದನಿನ್ನಾರ್ ಬಲ್ಲವರ್ ಬಲ್ಲಿದರ್ ॥ ೯೪

ಇಂದುನಿಭಾಸ್ಯೆ ಪೋಗಲೆನಗಾಮ್ರವ ತಣ್ಪುರಿಯಾಯ್ತು ಕಾಮದೇ ।
ವಂ ದಯೆಗೆಟ್ಟನೆಯ್ದೆ ಪಗೆಯಾಯ್ತು ಲತಾದ್ರುಮ ಪಿಕಂ ಕನಲ್ದಪಾ ॥
ಚಂದನಮುಷ್ಣಮಾದುದಿಳೆ ಕಾದಪ್ರದೇಗ್ಸೆ ಕತ್ತಲಿಟ್ಟುದಿಂ ।
ತೊಂದಣಸಿದೋರ್ಪೇಱಡಸಿತೆಂಬುದನೆನ್ನೊಳೆ ಕಂಪನೀಕ್ಷಣಂ ॥ ೯೬

ಎಂದರಸಂಗೆ ಕಾಮಸಂತಾಪಂ ಪ್ರವೇಶಿಸಿದಾಗಳ್

ಖಗತತಿ ಗೂಡನೆಯ್ದೆ ಪ್ರಣಯಿಪಕ್ಷಿಗಳಕ್ಕೆಯನೆಯ್ದೆ ವಲಂಬುಜಂ ।
ಮುಗುಳನೆಯ್ದೆಗಲುತ್ಪಲಿನಿ ಹಾಸ್ಯಮನೆಯ್ದೆದಳೊಱಲ್ದು ಪಾಂಥರೊ ॥
ಯ್ಯಗೆ ನಿಜಸೂಚಿತಗ್ರಹಮನೆಯ್ದೆ ವಿಯೋಗಿಗಳಂಗಜಾಸ್ತ್ರದ ।
ಗ್ನಿಗೆ ಗುಱಿಯಾಗಲೆಯ್ದೆ ಪದೆಪಿಂದಿನನೆಯ್ದಿದನಸ್ತಶೈಲಮಂ ॥ ೯೭

ಪಗಲತಿಮಿತ್ರನೊಳ್ ಸುರತಗೋಷ್ಠಿ ಕರಂ ದ್ವಿಜರಾಜಪಾದನೊಳ್ ।
ಪಗೆ ಮಧುಪಪ್ರಸಂಗಮನಿಶಂ ಜಡಸಂಗತಿ ಕಂಟಕತ್ವಮೆಂ ॥
ಬಗೆಣಿತದುಗುರ್ಣಕ್ಕೆ ನೆಲೆಯಾದ ಸರೋಜಿನಿ ಕೆಟ್ಟಳೆಂದಣಂ ।
ನಗುವವೊಲೇನರಲ್ದುವೊ ಸುಧಾಕರಸಂಗಮುದಲ್ಲಸಿತೋತ್ಪಲಂ ವಲಂ ॥

ಮಿಡುಕುವ ಗಂಟಲಿರ್ದಸೆಗೆ ಜೋಲ್ದು ಮರಲ್ಬ್ಬಿದೆಱಂಕೆ ಬಿಟ್ಟು ಬಾ ।
ಯುಡಸಿದ ಕಣ್ಣನೀರ್ಗಳರೆಮುಚ್ಚಿದ ಕಣ್ ಬಿಸುಸುಯ್ದ ಸುಯ್ಲಿನಿಂ ॥
ಕಡುಬಡವಾದ ತಮ್ಮ ತನು ರಂಜಿಸೆ ಕೋಕಕುಳಂ ವಿಯೋಗದಿಂ ।
ಮಡದಿಯನೆಲ್ಲಿಯುಂ ತಿರುಗಿ ಕಾಣದೆ ನಿಂದುದದೊಂದು ತಾಣದೊಳ್ ॥ ೯೯

ನೀಱೆಯನಂಬುಜದೊಳ್ ಸೀ ।
ರೇಱಿದ ನೆಯ್ದಿಲ್ಗಳೊಳ್ ಕೊಳಂಗಳ ತಡಿಯೊಳ್ ॥
ಪಾಱಿ ಪರಿದಱಸಿ ಕಡುಬಾ ।
ಯ್ವಾಱುತ್ತಿರ್ದತ್ತು ಜಾತಶೋಕಂ ಕೋಕಂ ॥ ೧೦೦

ನಳಿನೀಬೀಜಮನೊಲ್ಲದೆ ।
ಕುಳಿರ್ವಕ್ಷ್ಪಜ ಎಂಬ ವಸಿಗಳೊಳ್ ಸಲ್ಲದೆ ಪೂ ॥

ಗೊಳದೊಳ್ ಸಿಲ್ಲದೆ ವಿರಹಾ ।
ನಳನಿಂ ತಿರುಗಿತ್ತು ಚಕ್ರವಾಕಾನೀಕಂ ॥ ೧೦೧

ಅಂತು ಸೂರ್ಯಾಸ್ತಮಯಮಾಗಲೊಡಂ,

ಚಿತ್ತಜನೆಂಬ ಘಟ್ಟಿವಳನೊಪ್ಪುವ ಚಂಗನಚರ್ಚೆಯಿಕ್ಕಿದಂ ।
ಕತ್ತುರಿಯುಂಡೆಯುಂ ಘುಸೃಣಕೇಸರಮುಂ ಶಶಿಕಾಂತಶಾಣದೊಳ್ ॥
ಬಿತ್ತರದಿಂದೆಸಳ್ವ ನಸುನುಣ್ಣುಡೆಯುಂ ಕಿಸುಸಂಜೆಗೆಂಪನಾ ।
ಳ್ದತ್ತುದಯಾದ್ರಿಮಸ್ತಕಗೊಳಲ್ಕುವ ಪೂರ್ಣಶಶಾಂಕಮಂಡಳಂ ॥ ೧೦೨

ಕೆಂದಳಿರ್ದೋರಂಗಲಾಗೆ ಕಿಸುಸಂಜೆ ಸಿತಾಕ್ಷತೆಯಾಗೆ ತಾರಕಾ ।
ವೃಂದವಲಂಕೆ ರಂಜಿಪುದಯಾದ್ರಿಕನತ್ಕಲಶಾಗ್ರದಲ್ಲಿ ಪೆಂ ॥
ಪಿಂ ದೆಸೆವೆಣ್ಣೊಳರ್ಚಿಸಿದ ಕಾಮನ ಗೆಲ್ವಿಯ ರತ್ನದರ್ಪಣ ।
ಕ್ಕಂದೆಸೆಯಾಯ್ತು ಪಚ್ಚಿದ ತನುಃಪರಿಖಂಡನವಿಂದುಮಂಡಲಂ ॥ ೧೦೩

ಸತತಂ ಸದ್ಯಾಗ್ನಿನೇತ್ರಂ ಸುರಗಿರಿವೃಷಭಾರೋಹಣಂ ತಾರಕಾದಿ ।
ಧಿತಿಗಂಗಾಮಸ್ತಕಂ ಲಾಂಛನವಿಷಸಹಿತಂ ಪೂರ್ವದಿಕ್ಪಾರ್ವತೀಸಂ ॥
ಯುತನುದ್ಯದ್ವಿಟ್ಟಮೋಸಂಜಕನಭಿನವಶೀತಾಂಶುರುದ್ಬೋತ್ತಮಾಂಗಾ ।
ವೃತಹಾಸಂ ಪರ್ವದಂತೇನೆಸೆದುದೊ ಪೆರ್ಚಿಪಿಂ ಕೌಮುದೀಶ್ರೀವಿಲಾಸಂ ॥

ಕಿಸುಸಂಜೆ ಪಿಡಿದ ಜವನಿಕೆ ।
ಮಿಸುಗುವ ತಾರಾಳಿ ಪರೆದ ಪುಷ್ಪಾಂಜಲಿಯಾ ॥
ಗಸಮೆಸೆವ ರಂಗಮಾಗಲ್ ।
ಶಶಿಪ್ರಭಾನಾಟ್ಯಮೇಂ ಮನಂಗೊಳಿಸಿದುದೋ ॥ ೧೦೪

ಅಂತಳುಂಬಮಾದ ಕೌಮುದೀವಿಳಾಸದೊಳ್ ರಾಜವಾಹನಂ ಕಾಮಪರವಶನಾಗಿ

ಇನ್ನೊರ್ಮೆಯುತ್ಪರ್ಗಳೋ ಬಾರಳೊ ಬನಕೆನುತುಂ ಸುಯ್ಯೆ ಸಂತಾ
ಪದಿಂದಂ । ತನ್ನಂಗಂ ಕಾದು ಕಾಮಜ್ವರಮೊಗೆತರೆ ಬೆಂಡಾಗಿಯಾಹಾರ
ಮಂ ಬಿ ॥ ಟ್ಟೆನ್ನೊಳ್ ಮಾತೇಕೆನುತ್ತುಂ ನುಡಿಯನುಳಿದು ದಿಗ್ಭ್ರಾಂತಿ
ಕೈಕೊಂಡು ಕಾನಾ । ಸ್ತ್ರನ್ನಟ್ಟತ್ತಂದು ಮೂರ್ಛಾಗತಿಗೆ ತನುವ
ನೊಪ್ಪಿತ್ತನಾರಾಜಪುತ್ರಂ ॥ ೧೦೫

ಅಂತು ಮೂರ್ಛೆಗೊಳಗಾದುದಂ ಪುಷ್ಪೋದ್ಭವಂ ಕಂಡು

ಪಲ್ಲವತಲ್ಪದೊಳ್ ಮಲಯಜದ್ರವಮಂ ತಳಿದುರ್ವರೇಶನಂ ।
ಮೆಲ್ಲನೆ ಸೈತು ಕುಳ್ಳಿರಿಸಿ ಕೋಮಳಬಾಳಮೃಣಾಳನಾಳಮಂ ॥
ಮೆಲ್ಲೆ*ರ್ಬೆಯೊಳ್ ಪದಂಗೊಳಿಸಿಯುತ್ಪಲಪತ್ರದೊಳೊಲ್ದು ಬೀಸಿಯು ।
ತ್ಫುಲ್ಲಶರಾಗ್ನಿಯಂ ತವಿಸುವುಜ್ಜುಗಮಂ ತಳೆದಂ ಮನಃಪ್ರಿಯಂ ॥ ೧೦೭.

ಮತ್ತಂ ಪಲ್ಲವದ ಪಾಸಿಕೆಯಿಂ, ಪನಿನೀರ ತುಷಾರದಿಂ, ಲಾಮಂಚದ ಬಿಜ್ಜಣಿಗೆಯಿಂ, ಮೃಣಾಳವಲಯಂಗಳಿಂ, ಮಲಯೋದ್ಭವದ ಪಂಕದಿಂ, ಸೇವಂತಿಗೆಯ ಸೌರಭ್ಯದಿಂ, ಕಲ್ಹಾರದ ಕಂಠಿಕೆಯಿಂ, ಕುಸುಮತತಿಯ ಮಕರಂದದಿಂ, ಕರ್ಪೂರಪರಾಗದಿಂ, ನೀರಜದ ಕೇಸರದಿಂ, ಪೊಂಬಾಳೆಯ ತಿರಿದಾನದಿಂ, ಪಾದರಿಯ ಪರ್ಯಂಕದಿಂ, ಅಶೋಕದ ಪೊಸದಳಿರಿಂ, ಶಿಶಿರೋಪಚಾರಮಂ ಮಾಡುತ್ತುಮಿರೆ

ಯತಿಗಳ ಹೃತ್ಸರೋಜಮರಳಲ್ ಮಿಗೆ ಕೌಶಿಕಲೋಚನೋತ್ಪಲೋ ।
ನ್ನತಿ ಮುಗಿಯಲ್ ಜಗಜ್ಜನದ ಜಾಡ್ಯತಮಂ ಬಿಡುತೋಡೆ ಸತ್ಕವಿ ॥
ಪ್ರತತಿಮತಿಪ್ರಕಾಶಕಿರಣಂ ಮಿಗೆ ಸಜ್ಜನಚಕ್ರವಾಕದಾ ।
ಯತಿ ಸುಖಮಪ್ಪಲಂದುದಯಶೈಲಮನೇಱಿದನಂಬುಜಪ್ರಿಯಂ ॥ ೧೦೮

ಅಂತು ಸೂರ್ಯೋದಯಮಾಗಲೊಡಂ ರಾಜವಾಹನನೆಂತಾನುಂ ಸಂತೈಸಿಕೊಂಡು ಮೆಲ್ಲನೆೞ್ದು ಕುಳ್ಳಿರ್ದು ಪುಷ್ಪೋದ್ಭವನೊಳವಂತಿಸೌಂದರಿಯ ರೂಪಾತಿಶಯಮಂ ಬಣ್ಣಿಸಿ ಕಾಮನ ಪಕ್ಷಪಾತಮಂ ನಿಂದಿಸಿ ಚಿಂತಿಸುತ್ತಿರ್ಪಾಗಳ್

ಉಗುರಿಂ ಕೀಱಿಟ್ಟ ಗಂಧಂ ನೊಸಲ ವಿಮಲಬದ್ಧಾಕ್ಷತಂ ಕುಂಡಲಂ ಹಾ ।
ವುಗೆ ತೋಳೊಳ್ ರಕ್ಷೆ ನುಣ್ಪಿಕ್ಕಿದ ಮುಡಿ ಸುಲಿಪಲ್ ಕೆಯ್ಯ ಕುಂಚಂ ಕ
ರಂ ಸೋಂ ॥ ಜಗಮೆಂಬಂತೊಪ್ಪೆ ಮತ್ತೊಯ್ಯನೆ ಪದವಿಡುತುಂ ಸಿಂಗರಂ
ದೋಱುತುಂ ದಿ । ಟ್ಟಿಗೆ ಮಾಯಾಜಾಲಮಂ ಬೀಸುತುಮನುನಯದಿಂ
ದೊರ್ವ ಮಾಯಾವಿ ಬಂದಂ ॥ ೧೦೯

ಮತ್ತಂ

ತೊಳಗುವ ಮಿಂಚುವಲ್ ಪಣೆಯ ಟಕ್ಕಿನ ಬೊಟ್ಟು ನಿಮಿರ್ದ ವೇಣಿ ಬೈ ।
ತಲೆಗಳವಟ್ಟ ಸಿಂದುರಮಳಂಕೆಯೊಳೆಚ್ಚಿದ ಕಜ್ಜಳಂ ತಳ ॥
ತ್ತಳಿಸುವ ಶಂಖದೋಲೆ ಕುಚದೊಡ್ಡಿನ ಮೇಲುದು ಸೀಳ್ದ ಸೆಳ್ಳುಗುರ್ ।
ಚಲನಯನಂಗಳೊಪ್ಪೆ ನಟನಂಗೆಯೆ ಪಿಂದನೆ ಬಂದನಾಕ್ಷಣಂ ॥ ೧೧೦

ಎಡಗಾಲ ತೊಡರ ಬಾವುಲಿ ।
ನಡೆಗೆಸೆವ ವಿಡಾಯಿ ಜಗಮನಂಗೆಯ್ಯೊಳ್ ನೋ ॥
ಟ್ಪೊಡೆ ತೋರ್ಪೆನೆಂಬ ನುಡಿ ನೇ ।
ರ್ಪಡೆದೊಪ್ಪಿರಲಿಂದ್ರಜಾಲಿಗಂ ಮಿಗೆ ಬಂದಂ ॥ ೧೧೧

ಅಂತದ್ಭುತಾಕಾರದಿಂದೊರ್ಬನಿಂದ್ರಜಾಲಿಗಂ ಬಂದು ರಾಜವಾಹನನಂ ಕಂಡು

ತೇಜೋಮಯನಂ ಲಕ್ಷಣ ।
ಪೂಜಿತನಂ ಸಕಲಗುಣಗಣಾಲಂಕೃತನಂ ॥
ರಾಜೀವನೇತ್ರನಂ ಯುವ ।
ರಾಜನನಾಧೂರ್ತನತಿಶಯಂ ಮಿಗೆ ಪೊಗೞ್ದಂ* ॥ ೧೧೨

ಅಂತು ಪೊಗೞ್ದು ಕೊಂಡಾಡಿದಿಂದ್ರಜಾಲಿಗನಂ ಮೃದುಸಂಭಾಷಣದಿಂ ಮನ್ನಿಸಿ ಯುವರಾಜಂ ಕುಳ್ಳಿರಲ್ವೇೞ್ಪುದುಂ,

ಚಿತ್ತವಧಾರು ರಾಜಪರಮೇಶ್ವರ ಲೋಕದೊಳುಳ್ಳ ಸೋಜಿಗಂ ।
ಬಿತ್ತರವಾಗಲೆನ್ನ ಹರಿಮೇಖಲವಿದ್ಯಮನಿಲ್ಲಿ ತೋರ್ಪೆನೊ ॥
ಲ್ದಿತ್ತುದೆ ಕೋಟಿ ದೇವ ಪರಿಭಾವಿಪುದೆಂದೊಸೆದಿಂದ್ರಜಾಲಿಗಂ ।
ಬೆತ್ತದ ಕಾವಿನಿಂದೆಸೆವ ಕುಂಚಮನೊಯ್ಯನೆ ನೀವುತಿರ್ಪನಂ ॥ ೧೧೩

ಜನಪತಿಯಿಂದ್ರಜಾಲಿಗನ ವಿದ್ಯೆಗೆ ಚಿತ್ತಮನೀಯದಾತನೊ ।
ಳ್ಪಿನ ಮೃದುಚಾಟುವಾಕ್ಯತತಿಯಂ ಮಿಗೆ ಕೇಳದೆ ಸೋಪಚಾರದಿಂ ॥
ವಿನಯಮನಾತನೊಳ್ ಮೆಱೆವುದರ್ಕೆ ಮನಂಬುಗದಿರ್ದನೆಂದೊಡೇ ।
ಕೆನಲತಿದುಃಖಿತೇ ಮನಸಿ ಸರ್ವಮಸಹ್ಯಮದೆಂಬ ಕಾರಣಂ ॥ ೧೧೪

ಅಂತಿರ್ದು ಮತ್ತಂ

ಎರೆವರ್ ತಮ್ಮಯ ಬಡತನ ।
ದಿರವಿಂಗೆ ತೊಱಲ್ವರಲ್ಲದವರ್ಗಳ್ ಮತ್ತೆ ॥
ಲ್ಲರ ಸುಖದುಃಖದ ಹದನಂ ।
ಪರಿಕಿಸಿದೊಡೆ ಸಂಮುದಂ ಧರಿತ್ರೀತಳದೊಳ್ ॥ ೧೧೫

ತೊಳತೊಳತೊಳಗುವ ಮುಕ್ತಾ ।
ವಳಿಯಿಂ ಮಾಣಿಕದಿನಿಳಗೆ ರಂಜಿಸುವೆಕ್ಕಾ ॥
ವಳಿಯಂ ಮಾಯಾವಿಗೆ ಭೂ ।
ತಳನಾಥಂ ಕೊಟ್ಟನವನ ಬಡತನಮುಮಗಲ್ ॥ ೧೧೬

ಅಂತು ಕುಡಲೊಡಂ,

ಅರರೇ! ದಾನವಿನೋದಿ ಜಾಗು! ಭಲರೇ! ಸನ್ಮಾನಮಾಂಧಾತ ಭಾ ।
ಪುರೆ! ವಿದ್ವಜ್ಜನಕಲ್ಪವೃಕ್ಷ ಮಝಪ್ರಾತು! ಖ್ಯಾತ ಸಿಧೂರ್ತ ಜೀ ॥
ಚರ ಮಾಮಾ! ಕಲಿಕಾಲಕರ್ಣ ಎನುತುಂ ಮೆಯ್ವೆರ್ಚಿ ತಜ್ಜಾಲಿಕಂ ।
ಧರಣೀವಲ್ಲಭನಂ ಪೊಗಳ್ದನೊಲವಿಂ ಸಂತೋಷಮೋಗೆಯ್ದುದೋ ॥ ೧೧೭

ಅಂತು ಪೊಗಳ್ದು ಮಗುಳ್ದರಸನ ಮೊಗನುಂ ನೋಡಿ ಇಂದ್ರಜಾಲಿ
ಗನಿಂತೆಂದಂ:—

ದೇವರ ಮೊಗದೊಳ್ ಚಿಂತಾ ।
ಭಾವಂ ನೆಲೆಗೊಂಡು ತೋಱುವುದೆನ್ನೊಳಿಪ ॥
ಕರಾವುದು ಕಾರಣಮೆಂಬುದ ।
ನೋವದೆ ಬೆಸಸಲ್ಕೆವೇಱ್ಕುಮೆನಗನುನಯದಿಂ ॥ ೧೧೮

ಎಂದೊಡರಸಂ ವಿಕಸಿತಮುಖಾರವಿಂದನಾಗಿ

ಎನ್ನಿಂಗಿತಭಾವಮನಱಿ ।
ಪುನ್ನತಮತಿ ನಿನ್ನ ತೆಱದಿನಾವವನಱುಂ ॥
ದಿನ್ನೆನಗೆ ಮಿತ್ರನೈಯನ ।
ಗನ್ನೆನಗಲ್ತೆಂದು ನೃಪಕುಮಾರಂ ಪೊಗಳ್ದಂ ॥

ಅಂತು ಮನೋಗತಭಾವಮನೆಂದ ಕಾರಣದಿಂ ಯುವರಾ
ಸ್ತೋತ್ರಂಮಾಡಿ ಎನ್ನ ಚಿಂತೆಯ ಕಾರಣಮುಂ ಕೇಳೆಂದು

ಅಲರ್ಗಣ್ಣ* ಬಿಂಬಾಧರಂ ನಿರ್ಮಳಮುಕುರಕಪೋಲಂ ಸುವೃತ್ತಸ್ತನಂ ಕ|
ಲ್ಪಲತಾಬಾಹುದ್ವಯಂ ಬಂಧುರತರತನುಮಧ್ಯಂ ಸಮುದ್ಯನ್ನಿತಂಬ ||
ಸ್ಥಲಮಭ್ರಾಕಾರವೇಣೀಭರಮತಿರುಚಿರಮಂ ಕಣ್ಗೆ ಬೀಱುತ್ತಿರಲ್ ಕೋ|
ಮಳೆಯೊರ್ವಳ್ ನಿನ್ನೆ ಬಂದೆನ್ನಿದಿರೊಳ್ ಸೊಬಗಂ ತೋಱು ಪೋದಳ್
ಮನೋಜ್ಞಾ || ೧೨೦

ಅಂತು ಸೌಭಾಗ್ಯಸಾರಮಂ ಸೂಱೆಗೊಳ್ವ ಸಿಱಿಯ ಸುಸ್ವಪ್ನಮುಂ,

ಅವಧುನಂ ಕಾಣಲೊಡಂ |
ಭಾಗ್ಯೋದ್ಭವನೆನ್ನ ಸೆಯ್ದ ತನೆ ಸ್ವೈಸ್ತ್ರಿಯ ಬಾ ||
ಕಾವಳಿಯೊಳ್ ಸುದುತ್ತಿದರ್ಪ |
ನೇಮಂ ಚಿಂತಿಸಿದ ಸಿದ್ಧಿ ಪರಾರ್ಥಚರಿತ್ರಾ || ೧೨೧

ಎಂದರಸಂ ಪೇೞ್ವುದುಮಾಜಾಲಿಕನಿಂತೆಂದಂ —

ಸುರದನುಜಮನುಜಗಂಧ |
ರ್ವರನೊರ್ವರ್ಗದೆಯ್ದೆ ಸೋಲಿಸುವ ಸತಿಯರನ |
ಚ್ಚರಿಯೆನಲೆನ್ನಯ ವಿದ್ಯಾ |
ಪರಿಣತೆಯಿಂ ಕ್ಷಣಕೆ ತೋಱಿಪೆಂ ನೃಪತಿಲಕಾ || ೧೨೨

ಎಂದು ಮತ್ತಂ

ಇನಿತೊಂದು ಚಿಂತೆಯುಂಟೇ |
ಮನುನಯದಿಂ ನಿನಗೆ ಮದುವೆಯುಂ ಮಾಡುವೆನು ||
ವನಿತೆಯನೆನ್ನಯ ವಿದ್ಯಾ |
ವಿನೋದಮಂ ನೋಡೆನುತ್ತೆ ಚಿತ್ತಂಬೆಸೆದಂ || ೧೨೩

ಇವಳಳವೆ ದೇವಗಂಧ |
ರ್ವವಿಳಾಸಿನಿಯರ್ಗಳಂ ಕ್ಷಣಾರ್ಧದಿಸೆಂತೀ ||
ಭುವನಕ್ಕೆ ತಂದು ನಿನ್ನೊಳ್ |
ವಿವಾಹಮಂ ಮಾಡ್ಪೆನೆನ್ನ ವಿದ್ಯಾಬಲದಿಂ || ೧೨೪

ಅದು ಮಹೇಂದ್ರಜಾಲೀಯನಂತಿಸಾಂತರಿಸುಂ ನಿನಗೆ ಮಾಡುವುದರಿದ ಲ್ತೆಂಬ ಮಾತಂ ಕುಮಾರಂ ಕೇಳ್ದು ಸಚೇತನನಾಗಿ ಮತ್ತಮಿಂತೆಂದಂ:—

ಮಣಿಮಾಡದೊಳಾಕೆ ಬರೆ ।
ರ್ವಣದೊಳ್ ಸಾನಿರ್ದ ಸಂಗನುಂ ದೊರಕುವ ಕಾ ॥
ರಣಮೆಂತು ಪೇೞೆನಲ್ ಸ ।
ದ್ಗುಣಿ ಮಾಯಾಜಾಲಿಕಂ ನಗುತ್ತಿಂತೆಂದಂ ॥ ೧೭೫

ಮಣಿಮಂತ್ರೌಷಧಿನಿಚಯದ ।
ಗುಣದಿಂದಂ ಸಾಧ್ಯಮಾಗದಿರದಾವುದು ತತ್ ॥
ಕ್ಷಣದೊಳ್ ತೋಱರ್ಪೆಂ ನಿನಗೆ ।
ನ್ನಣಕದ ವಿದ್ಯಾವಿನೋದದೊಳ್ ಕಾಮಿಸಿಯುಂ ॥ ೧೭೬

ಎಂದಾಂ ನಾಳೆಯವಂತೀಶ್ವರನಂ ಕೇಳಿಸಲ್ ಪೋಪಲ್ಲಿ

ಭೂನಾಥ ನೀನುಮೊಲವಿಂ ।
ದಾನೆರವಿಯೊಳಱಸುದಂತು ಬಂದಿರ್ಪುದು ಮ ॥
ತ್ತಾನಾಗಳೇನನೆಸಗುವೆ ।
ನೇನತಿಶಯಮುಮಂ ನೆಗೞ್ವೆಂ ನಿಮ್ಗಂ ಕಾಣ್ಬ ॥ ೧೭೭

ಎಂದಿಂದ್ರಜಾಲಿಗಂ ಕಳಪಿಸಿಕೊಂಡು ಅವಂತೀಶ್ವರನರಮನೆಗೆ ಪೋಗಿ ಬಾಗಿಲೊಳಿರ್ದ ಅರಸಂಗೆ ಪೇೞ್ದಟ್ಟುವುದುಂ ಆತನಾಮಱುದಿನಸಂ ಕಾರಾಗೃಹನಿರ್ಬಂಧದಾಲಸ್ಯಂ ಪರಿಹರಿಸಲೆಂದವನಂ ಬರಿಸೆಂದಂ. ಇತ್ತಲ್,

ಅಮರ್ದಿ*ಂದ್ರಜಾಲವಿದ್ಯಾ ।
ಕ್ರಮಮನಪೂರ್ವಂ ದಲೆನಿಸುವಾಶ್ಚರ್ಯವಿನೋ ॥
ದಮನೊಸೆದು ನೋಡಲೊಪ್ಪುವ ।
ಕುಮಾರಿಯುಂ ಕರೆಯಿಮೆಂದನಾಭೂಪಾಲಂ ॥ ೧೭೮

ಅಂತವಂತೀಶ್ವರನವಂತಿಸೌಂದರಿಯುಂ ಕರೆಯಿಸಲೊಡಂ

ಅಂಗಜತಾಪದಿಂ ಕೊರಗಿದಬ್ಜಮುಖಂ ಪರೆದಿರ್ದ ಮುಂಗುರುಲ್ ।
ತುಂಗಕುಚಂಗಳೊಳ್ ತೆಗಳಗೊಂಡ ಲಸನ್ಮಳಯೋದ್ಭವಂ ಬೆಳ ॥
ರ್ದಂಗಮುರೋಂತರದೊಳ್ ತಳದ ಕರ್ಪುರದಚ್ಚೆಯು ರೇಣು ರಂಜಿಸಿ ।
ರ್ಪಂಗನೆ ಕಾಮದೇವನೆಡೆಯಾಡಿಪ ಪುತ್ರಿಕೆಯಂತಿರೆಯ್ದಿದಳ್ ॥ ೧೭೯

ಅಂತು ವಿರಹಾನಳದಂದಹ್ಯಮಾನಹೃದಯೆಯಾದ ಕುಮಾರಿ ಬಂದು ತನ್ನ ತೊಡೆಯುಮೇಲೆ ಕುಳ್ಳಿರ್ಪುದುಂ; ಅರಸನಿಂದ್ರಜಾಲಿಗನನಾಸ್ಥಾನಕ್ಕೆ ಕರೆಸುವುದುಂ;

ಪುಲಿದೊವಲ ಜೋಗಪಟ್ಟಿಗೆ |
ತೊಳಗುವ ಸೆಳ್ಳುಗುರ ಮಿಂಚು ಪಾಯುವ ಕುಂಚಂ ||
ನೆಲನನಲೆವುಡಿಗೆ ರಂಜಿಸೆ |
ನಲವಿಂ ಮಾಯಾವಿಯೆಯ್ದಿದಂ ನೃಪಸಭೆಯಂ || ೧೩೦

ತ್ರಿಜಗನ್ಮೋಹನತಿಲಕಂ |
ನಿಜದಿಂ ಬಲಗಿವಿಯೊಳುಲಿವ ಬಾವುಲಿ ಕೆಯ್ಯೊಳ್ ||
ವಿಜಯಕ್ಕೆ ನೆಗಪಿದುದ್ಯ |
ದ್ಧ್ವಜಮೊಪ್ಪಲ್ ಬಂದನಲ್ಲಿಗಾಕಪಟಿಗಂ || ೧೩೧

ಅಂತು ಬಂದು,

ಅಂದಂಬಡೆದಾರ್ಭಟೆಯಿಂ |
*ನಿಂದುಗುರ್ಗಳ ಬೆಳಗು ದೆಸೆಗೆ ಪಸರಿಸೆ ಕರಮಂ ||
ಚಂದಂಬಡೆದಿರಲೆತ್ತಿದ |
ನಂದು ಮಹೇಂದ್ರಪ್ರಸಾದಮೆಂದಾಧೂರ್ತಂ || ೧೩೨

ಅಂತೆಂದು ಮತ್ತಂ,

ದಿಗಧಿಪರಂ ಸರೋಜಭವನಂ ಹರನಂ ಹರಿಯುಂ ಸುರೇಂದ್ರನೋ |
ಲಗಮನಿತೆಂದು ಮೂರ್ತಿಗಳನಷ್ಟವಸುಸ್ಥಿತಿಯುಂ ಗ್ರಹಂಗಳಂ ||
ಗಗನತರಂಗಿಣೀವಿಭವಮುಂ ಸುರಕಾಂತೆಯರಂ ನಿರೀಕ್ಷಿಸಿ |
ಲ್ಲಿಗೆ ತರಲಾರ್ಪೆನೆನ್ನಧಿಕವಿದ್ಯೆಯನೆಂದನೊಱಲ್ದು ಜಾಲಿಕಂ || ೧೩೩

ಎಂಬುದುಮವಂತೀಶ್ವರಂ ವಿಸ್ಮಯಂಬಟ್ಟು—ಆದೊಡೆ ನಿನ್ನ ವಿದ್ಯಾವಿನೋದಮುಂ ಪ್ರಕಟಿಸೆಂಬುದುಂ;

*ಆಲರ್ಗಣ್ಮುಗಿದಾಕಾಶಮು |
ನೊಲೆದೊಯ್ಯನೆ ನೋಡಿ ತುಟಿಗಳಂ ಮಿಡುಕುತ್ತೆ ದಿ ||

ಗ್ವಲಯಯುಕ್ತ ಕೆಯ್ಗಳಂ ಪುಗಿ ।
ದೊಲವಿಂ ಪ್ರೊತಪುಟ್ಟು ಬೀಸಿದಂ ಚಾಮರಮಂ ॥ ೧೩೪

ಅಂತು ಚಾಮರಮಂ ಬೀಸಿ,

ಮುಕುಟಂ ಕೇಯೂರಕಂ ಕುಂಡಲಮೆಸೆವ ಸಹಸ್ರಾಕ್ಷನೈರಾವತಂ ಬೇ ।
ವಕುಲಂ ವಜ್ರಾಯುಧಂ ದಿಕ್ಪತಿತತಿ ಶಚಿ ರಂಭಾದಿದೇವಾಂಗನಾಜಾ ॥
ಲಕವುಷ್ಪಾಶೀತಿಪುಷ್ಪಾವಳಿ ಸುರುಚಿರಗಂಧರ್ವಗೀತಾಮೃತಂ ಕಾ।
ತುಕವಾಗಿರ್ಪಂದ್ರನೊಪ್ಪೋಲಗಮನೆಸಗಿದಂ ಧೂರ್ತಮಾಯಾಭುಜಂಗಂ॥

ವಿಲಸದ್ಭಾಳವಿಲೋಚನಂ ಶಶಿಕಲಾಜೂಟಂ ಮರುದ್ವಾಹಿನೀ ।
ಲಲಿತೋತ್ತುಂಗಜಟಾಧರಂ ಗರಳಕಂಠಂ ಸರ್ಪಹಾರಂ ಶಿವಾ ॥
ಗಲತಾಲಂಕೃತವಾಮಭಾಗನೆಸೆವರ್ಮ್ಯಾಘ್ರಾಸನಂ ರಂಜಿಪ ।
ಜ್ಜ್ವಲತೇಜೋಮಯಮೂರ್ತಿ ರುದ್ರನೆಸೆದಂ ಕೈಲಾಸದೊಳ್ ತೋರ್ಪಿದಂ॥

ಶ್ರೀವತ್ಸಂ ಕೌಸ್ತುಭಂ ವಕ್ಷದೊಳೆಸೆದಿರೆ ಕಂಬು ಚಕ್ರಂ ಗದಾರಾ॥
ಜೀವಂ ಹಸ್ತಂಗಳೊಳ್ ತ್ಕೃತಿ ಜಘನದೊಳೊಪ್ಪಲ್ಕೆ ಪೀತಾಂಬರಂ ಸ ।
ದ್ಭಾವಂಬೆತ್ತಬ್ಜನೇತ್ರಂ ವಿಕಸಿತವದನಂ ಲಕ್ಷ್ಮಿಕೋಟೀರಕಂ ಭ್ರಂ ॥
ಗೀವರ್ಣಂ ಮೊದ್ಗಿ ಬಲ್ಪಾದ ಸುರವಿಜಯಿಯಂ ತೋರ್ಪಿದಂ ಜಾಲಗಾರಂ॥

ಪರೆಯುವ ಜನ್ನಸಂ ತೊಲಗದಾಭರಣಂ ಸಲೆ ಪೊಸನಂಬರಂ ।
ತೆರಳದ ಕಾಂತಿ ಕುಂದದನುಲೆ ಪಸವಾಡದಲಕ್ತಕದ್ರವಂ ॥
ಪರಿಮಳವೋಡಿ ಬಾಡಿರದ ಪೂಮುಡಿಯೊಪ್ಪುವ ದೇವಲೋಕಮಂ ।
ದರಿಸುರನಿಂದ್ರಜಾಲಿಕನತೀವಮನೋಹರಮಾಗೆ ತೋರ್ಪಿದಂ ॥ †೧೩೪

ಅಂತಹಿತುಂಡಿಕನಂತೆ ಕಾಶಿಕವಿಳಾಸದಿಂ, ಅರಣ್ಯಸ್ಥಳದಂತೆ ಸ್ಥಾಣುಪರಿ ಪ್ರವರ್ಣದಿಂ, ಪದ್ಮಿನೀಜನವಂತಂಬುಜನೇತ್ರಾಭಿರಾಮದಿಂ, ಸರೋವರದಂತೆ ಕ ಮಲಾಜಾತಸಂಪೂರ್ಣದಿಂ, ಮಾನಸಸರಸಿಯಂತೆ ರಾಜಹಂಸಪ್ರಚಾರದಿಂ,

---

† ಸಲೆ ನಾಲ್ಕುಂ ಮೊಗದೊಳ್ ಪ್ರತಿಪ್ರತತಿ ಪೊರ್ಮಲ್ ಸುತ್ತಲುಂ ಸತ್ಕಳಾ ।
ವಳಿಗಳ್ ಕೈವಡೆದೊಪ್ಪೆ ಯೋಲಗದೊಳಿಂದ್ರಾದ್ಯಗ್ನ್ಯಕಂ ರಾಕ್ಷಸಂ ॥
ಜಲಧೀಶಂ ಪವನಂ ಕುಬೇರನಹಿಭೂಷಂ ರಂಜಿಸಲ್ ಪೆಂಪುವೆ ।
ತ್ತೊಲವಿಂದೊಪ್ಪುವಪೂರ್ವಪದ್ಮಭವನಂ ಮಾಯಾವಿಕಂ ತೋರ್ಪಿದಂ ॥ ೧೩೫

ಈ ಪದ್ಯವು ಬೇರು ಪ್ರತಿಯಲ್ಲಿ ಮಾತ್ರ ಇದೆ.

ರಣಭೂಮಿಯಂತೆ ವಿಗ್ರಹಪಿತಾನದಿಂ, ರೋಹಣಾದ್ರಿಯಂತೆ ವಸುವಿಸ್ತಾರದಿಂ, ಪುಣ್ಯಕ್ಷೇತ್ರದಂತೆ ಪುಷ್ಕರವಾಹಿನೀವಿಭವದಿಂ, ರಾಜಭವನದಂತೆ ನಾನಾಮರ್ತ್ಯಕಾಮಿನೀಕಮನೀಯತೆಯಿಂ ಮೆಱೆವಾಕಾಶದೊಳ್ ಭೂಲೋಕಮಂ ನೆನೆಯಿಸುತ್ತೆ ದೇವಸಂಕುಳಮಂ ತೋಱಿ,

ಕಡೆಯೊಳ್ ತನ್ನೃಪನಾರ್ತು ನೋಡುವ ಪಿತೃಭ್ರಾತೃವ್ರಜಂ ಕುಳ್ಳಿರಿ।
ಪೆರ್ಡೆಯುಂ ಶಕ್ರಸಮೀಪದೊಳ್ ಪಱಿಪಿನಿಂ ತೋಱಲ್ಕೆ ಸಂತೋಷಮಿ॥
ಪರ್ಗಡಿಸುತ್ತಂತವರಂ ನಿರೀಕ್ಷಿಸಿ ನೃಪಂ ಹಾರೈಸುತುಂ ಮೆಚ್ಚಿ ಸಾ।
ಲಿಪೆ ಕರ್ಪೂರದ ವೀಳೆಯಂಗುಡುವೆನೆಂದೆಂದಾತನಂ ನೋಡಿದಂ ॥ ೧೪೦

ಅಂತವಂತ್ರೀಶ್ವರಂ ತನಗೆ ವೀಳೆಯಂಗುಡುವೆನೆಂಬಾಗಳಾಜಾಲಿಕಂ ಮುಗುಳ್ದು ಕುಂಚಮಂ ಬೀಸಲ್ ನೆಱೆದ ದೇವಸಭೆಯೆಲ್ಲಂ ಪರೆದು ಪೋಗಲದರ್ಕಂ ವಿಸ್ಮಯಂಬಡುತ್ತಿರ್ದರಸನಂ ಮಾಯಾವಿಕನಿಂತೆಂದಂ:—

ಇನ್ನೊಂದತಿಶಯಮಂ ಪೆಂ ।
ಪಿನ್ನೋಪಲಿ ದೇವ ಮಾಣ್ಬೆನೆಂದು ಕಳಾಸಂ ॥
ಪನ್ನಂ ಮಾಯಾಭುಜಗಂ ।
ಬಿನ್ನವಿಸಿದನೊಂದು ಕಾರ್ಯಮಂ ನಲವಿಂದಂ ॥ ೧೪೧

ಅದೆಂತೆನೆ---

ಕಡೆಯೊಳ್ ಮಂಗಳಕಾರ್ಯಮು ।
ನೊಡಱ್ಪಂ ದೇವ ಕೇಳ್ದೆಂತೆನೆ ನಿನ್ನೀ ॥
ತೊಡೆಯೊಳ್ ಮೆಱೆವ ಕುಮಾರಿಗೆ ।
ಕಡುಚೆಲ್ವಪ್ಪೊಂದು ಮದುವೆಯುಂ ನಯದಿಂದಂ ॥ ೧೪೨

ಆದೊಡಂತೆಗೆಯ್ವೊಂದರಸಂ ಪೇೞ್ವುದುಂ

ಎನ್ನ ವಿನೋದಮಂ ಪಡೆದು ಚಿತ್ತವಿನೊಂದತಿವೇಗದಿಂದಮಂ ।
ತನ್ನಯ ಕುಂಚಮಂ ತಿರುಪಲಾಕ್ಷಣದೊಳ್ ಪಟಿಕಾಳಿತಾಳದಿಂ ॥
ಚೆನ್ನನೆ ಮಾಯದಾಕೃತಿಯ ಪುತ್ತಳಿಗಳ್ ನೆರೆದಿರ್ದವಂದನೇ ।
ಕನ್ನಟನಾಜ್ಞೆಯಿಂ ಸಭೆ ಕರಂ ಬೆಱಗಾಗಿ ಮಗುಳ್ದು ನೋೞ್ಪಿನಂ ॥ ೧೪೩

ಅಂತು ಪುತ್ತಳಿಗಳನೇಕಮಂ ನಿರ್ಮಿಸಿ ಮತ್ತಮಿಂತೆಂದಂ:—

ಇದನೊರ್ಬರ್ ಕಂಡೊರ್ಬರ್ ಮದುವೆಯನೆನಸುಂ ಕಾಣೆವೆಂದೆ |
ನ್ನದೆಲ್ಲರ್ ಪದೆಪಿಂದಂ ನೋೞ್ಪುದೆಂದಾನೆರವಿಯ ಮೊಗಮಂ ನೋಡಿ ಪೇ
ೞ್ದಂತೆ ಮಾಯಾ | ಸದನಂ ತಜ್ಜಾಲಿಕಂ ಮಾಗಧನೃಪಸುತನಂ ಕಂಡು ಕ
ಣ್ಗೊತ್ತಿ ಬಾಯಿಂ | ಬುದುಮಾತಂ ಗೆಂಟಱೊಳ್ ಬಂದಿರೆ ಕಳಕಳಮಂ ಮಾ
ಡಿದಂ ಜಾಲಗಾಱಂ || ೧೪೪

ಸುದತಿಯನೆನಗಾಗಿಪೆನೆಂ |
ಬುದು ಪುಸಿಯೋ ದಿಟಮೊ ಎಂದು ಮಾಯಾವಿಯು ಮಾ ||
ಕ್ಕದ ನೆಲೆಯನಱಿದು ಬರ್ಪೆಂ |
ಪದುಳದೆ ನೀಂ ಚಂಪೆಯಲ್ಲಿ ಪೋಗಿರು ಕೆಳೆಯಾ || ೧೪೫

ಎಂದು ಪ್ರಷ್ಟೋದ್ಧವನಂ ಕಳಿಪಿ ನೆರವಿಯೊಳಿರ್ದು ತನ್ನ ಸಮೀಪಕ್ಕೆ ಬಂದ ಯುವರಾಜನಂ ಜಾಲಿಕಂ ನೋಡಿ,

ಜಾ ಜಾ ಕಾಮಾಕ್ಷಿ ಎನು |
ತ್ತಾ ಜೋಗಿ ವಿಚಿತ್ರಮೆನಿಪ ಮದವಣಿಗಂ ಬಂ ||
ದೀ ಜನದ ಬಗೆಗೆ ಬೆಱಗಂ |
ಸೋಜಿಗಮನೆ ಮಾೞ್ಪುದೆಂದು ಚಿಟುಕಿಸಲಾಗಳ್ || ೧೪೬

ಅಗಲಂಬೆತ್ತುರುವಕ್ಷದಿಂದುರುಲಸದ್ರಕ್ತಾಂಬುಜಾತಾಕ್ಷಿಯಿಂ |
ಪೊಗರಿಂ ರಂಜಿಪ ವಕ್ತ್ರದಿಂ ಮಹಿಮೆಯಿಂ ತಾಳ್ದಿರ್ಪ್ಪಮಾಜಾನುಬಾ ||
ಹುಗಳಿಂದುನ್ನತಕಂಠದಿಂ ಕರಿರಿಪುಪ್ರೋನ್ಮಧ್ಯದಿಂದೆಲ್ಲರ |
ಕ್ಷಿಗೆ ಚೆಲ್ವಂ ಕಱೆಯುತ್ತಿಳಾಪತಿಸುತಂ ಬಂದಿರ್ದನಾಸ್ಥಾಯಿಯೊಳ್ || ೧೪೭

ಅಂತು ಮಂಗಳಾಕಾರನಾಗಿ ಕುಮಾರಂ ಬಂದು ನಿಲೆ,

ನೋಡೆಲೆ ಕುಮಾರಿ ನಿನ್ನೊಡ |
ಗೂಡಲ್ ತಕ್ಕಾತನೆಂದು ನೃಪಸುತನಂ ಕೊಂ ||
ಡಾಡಿ ನಟನೊಲ್ದು ತೋಱಲ್ |
ನೀಡುಂ ಭೋಂಕನಲವಂತಿಸೌಂದರಿ ಕಂಡಳ್ || ೧೪೮

ಕಾಣಲೊಡಂ ಜುಜುಮ್ಮೆನೆ ಬೆಮರ್ ಪೊಱಪೊಣ್ಮೆ ಶರೀರಕಂಪದಿಂ |
ನಾಣಱಿಯಲ್ ಮನಂ ಬೆಱಗಿನಿಂ ಮರವಟ್ಟಿರೆ ವಕ್ತ್ರಪಂಕಜಂ |

ಕೂಣಿತದೃಷ್ಟಿಯಿಂದೆಸೆಯೆ ಚಿತ್ತಭವಂ ಕುಸುಮಾಸ್ತ್ರಜಾಲಮಂ ।
ಮಾಣದೆ ಸೂಸೆ ಕಾಂತೆಗೆ ಕರಂ ಮಿಗಿಲಾದುವು ಕಾಮಚೇಷ್ಟೆಗಳ್ ॥ ೧೪೯

ಅಂತಾಚೇಷ್ಟೆಯುಮಂ ಕಂಡು ಮಾಯಾವಿಕನವಂತೀಶ್ವರಂಗಿಂತೆಂದಂ:—

ನಿನ್ನಳಿಯನೀತನೊಲ್ದೀ ।
ಕನ್ನಿಕೆಯುಂ ತತ್ಕುಮಾರಪಾಣಿಗ್ರಹಣ ॥
ಕ್ಕಿನ್ನೆೞ್ಚಸೆಂದು ಪೇೞೆ ।
ಲ್ಕಂ ನಗುತೇೞೆಂದನಾಕೆಯುಂ ಭೂಪಾಲಂ ॥ ೧೫೦

ಅಂತವಂತೀಶ್ವರನಿಂದುಮೊಂದು ವಿನೋದಮಂ ನೋೞ್ಪೆನೆಂದು ನಗುತ್ತುಂ ಕುಮಾರಿಯುಮನೆೞ್ಬಿಸೆ

ನಸುನಗೆ ವಕ್ತ್ರದೊಳ್ ಮಿನುಗೆ ಚಿತ್ತದೊಳಿರ್ದನುರಾಗಮಂಗದೊಳ್
ಪಸರಿಸೆ ತೋಳ್ಗಳುನ್ನತಕುಚಂ ಲಲಿತಾಧರಮೊಯ್ದೆ ಕೆತ್ತೆ ಕಂ ॥
ಪಿಸೆ ನಲವಿಂ ನಿತಂಬಯುಗಳಂ ಪುಳಕಂ ತಲೆದೋಱೆ ಕಾಮನಾ ।
ದಿರ್ಸುವುದನೊಯ್ಯನೊಯ್ಯನೆ ನಿಲಲ್ ನೃಪನಂದನೆಯೆೞ್ದಳಿಱ್ತೆಯಿಂ ॥

ಅಂತು ಕುಮಾರಿಯೆೞ್ದು ನಿಂದಿರೆ ಜಾಲಿಕಂ ಪುತ್ತಳಿಗೆಗಳಂ ವಾದ್ಯಮೇಳಾಪಮಂ ಮಾಡಿಸಿ ಮಾಯಾಮೌಹೂರ್ತಿಕನಿಂ ಲಗ್ನಮಾಸನ್ನಮೆನಿಸಿ ಕುಮಾರನಂ ಕುಮಾರಿಯ ಪಾಣಿಗ್ರಹಣಂ ಮಾಡಲ್ವೇೞ್ವುದುಂ

ನಾನಾವಾದ್ಯಂಗಳುಣ್ಮಲ್ ಪಲವು ದೆಸೆಗಳೊಳ್ ಮಂಗಳಾಚಾರಮೊಪ್ಪಲ್ ।
ಗಾನಂ ಕೈಗಣ್ಮೆ ಮೌಹೂರ್ತಿಕರತಿಶುಭಲಗ್ನಂ ಕರಂ ಲೇಸೆನಲ್ ತ ॥
ದ್ಭೂನಾಥಂ ನೋಡಿ ಚೋದ್ಯಂಬಡುವಿನಮೊಲವಿಂ ಸರ್ವಸಂತೋಷದಿಂದಂ ।
ದಾನಾರೀರತ್ನಮಂ ಕೈವಿಡಿದು ನಲವಿನಿಂದೊಪ್ಪಿದಂ ರಾಜಪುತ್ರಂ ॥ ೧೫೨

ಅಂತು ಪಾಣಿಗ್ರಹಣಂಮಾಡಿದನಂತರಂ ಮದನಕ್ಕಳಂ ಮನೆಯಂ ತುಂಬಿಸವೇೞ್ಕೆಂದು

ಪುತ್ತಳಿಗಳ್ ದಿಬ್ಬಣಿಗರ್ ।
ಪುತ್ತಳಿಗಳ್ ಸಕಲವಸ್ತುಗಳ ಪೆಟ್ಟಿಗೆಯುಂ ॥
ಪೊತ್ತೊಡನೆ ಪೋಪರಾಗಿರೆ ।
ಬಿತ್ತರದಿಂ ಮನೆಗೆ ಕಳಿಪಿದಂ ದಂಪತಿಯುಂ ॥ ೧೫೩

ಅಂತು ಮದವಕ್ಕಳನನೇಕಪುತ್ತಳಿಗಳಂ ಕೂಡಿಯರಮನೆಗೆ ಕಳಪಿ ಇಂದ್ರಜಾಲಿಗನರಸಂಗೆ ಕೈಮುಗಿದಿರ್ಪುದುಮರಸಂ ಮೆಚ್ಚಿ

ಕಟಕಂ ಕುಂಡಲಮಂಗದಂ ಪದಕಮುದ್ಯದ್ವ್ಯಾಹನಂ ಚಿತ್ರಕ ।
ರ್ಪಟಮಾನಂದಿತವಸ್ತ್ರಮಂ ಪಡೆಪಿನಿಂ ಭೂಪಾಲಕಂ ಕೂರ್ತು ಕಾ ॥
ಪಟಿಕಂಗೀಯಲುವಂ ಕರಂ ತಣಿದು ತನ್ನುತ್ಸಾಹದಿಂ ಸಂತತಾ ।
ಭಟೆಯಿಂದಂ ಪೊಗಚುತ್ತಮೇಂ ತಳರ್ದನೋ ಕೋಲಾಹಲಂ ಮಾಡುತುಂ ॥

ಅಂತಾಜಾಲಿಕಂಗಮಂತ್ರೀಶ್ವರಂ ಬೇಳ್ಪನಿತುಮಸ್ತ್ರಮಂ ಕೊಟ್ಟು ಬೀಳ್ಕೊಂಡಮನತ್ತಲ್ ಪೋದಂ. ಇತ್ತಲ್

ಮನದನುರಾಗಮಂ ತಳೆದು ಜಾಲಿಗನೋಜೆಗೆ ಮೆಚ್ಚಿ ನಲ್ಮೆಯಿಂ ।
ತನುಪುಳಕಂಗಳುಣ್ಮುತಿರೆ ಕಾಮುಸಿದಾಸಮೆ ಕೈಗೆ ಸಾರ್ದಪೋಲ್ ॥
ವನಿತೆಯ ಕೋಮಳಾಂಗುಲಿಯನೊಪ್ಪಿರೆ ಬಳ್ಪಿಡಿದಂಗನಾಸಿಕಂ ।
ತನವನಲಂಪಿನಿಂ ಸುಖದೊಳೊಯ್ವನೆ ಪ್ರಾಕ್ಕನಿಳಾಧಿನಾಯಕಂ ॥ ೧೫೫

ಅಂತು ಪುಗಲೊಡಮಂತಿಸಿಂದಿ,

ಬಯಸಿರ್ದ ವಸ್ತು ಕೂಡೆ ।
ನ್ನಯ ಕೆಯ್ಗೆಯ್ದಿತ್ತೆನುತ್ತಮಂತ್ರೀವಧು ಲೀ ॥
ಲೆಯಿನರಸನನಪ್ಪಿ ಸ ಧಾ ।
ಮಯಮೆನಿಸಿರ್ದಧರರತ್ನಮಂ ಚುಂಬಿಸಿದಳ್ ॥ ೧೫೬

ಪೊಸತೆನಿಪ್ಪೊಲ್ಮೆಯುಗ್ಗಡಿಸೆ ಕಣ್ವೊಳಗೊಪ್ಪನ ವಕ್ತ್ರಪದ್ಮದೊಳ್ ।
ಪಸರಿಸೆ ಸಣ್ಣ ಸುಯ್ಲು ನಸುಗೆಂಪು ಕಪೋಲದೆ ಸುತ್ತೊರೆಲ್ ವಿರಾ ॥
ಜಿಸೆ ಜಲಪಕ್ಷಿಯಂ ಜಳಿದು ನಾಣ್ಕಿಟಿ ಡಿಳ್ಳಮನ್ಮೈದೆ ನಲ್ಮೆಯಿಂ ।
ಮಿಸುಪಧರಾಗ್ರಮಂ ಸವಿದಳಂಗನೆ ಜಾಣ ಮಿಗೆ ತನ್ನೃಪಾಲನಾ ॥ ೧೫೭

ಅಂತಧರಗ್ರಹಣಂಗೆಯ್ದನಂತರಂ,

ಸ್ಥಿರಗಾಢಾಲಿಂಗನಂ ಹೂಂಕೃತಿ ಗಳರವಮನ್ಯೋನ್ಯಸಂಲಾಪವಾದಂ ।
ಕರಘಾತಂ ಚುಂಬನಂ ಸ್ವೀಕೃತಕುಟಿಲಕಚಾಕರ್ಷಣಂ ನೂತಜಿಹ್ವಾ ॥
ವಿರುತಂ ಚಿತ್ತಾನುಮೋದಂ ಪರಿವಿಡಿಯೆ ಮನೋರಾಗದಿಂ ಕಾಮಕೇಳೀ ।
ತರುಣಪ್ರಾರಂಭಮಂ ಕೂರ್ತೆಸಗಿದಳೊಲವಿಂ ಕಾಂತೆಯುತ್ಪ್ರಾರ್ಥದಿಂದಂ ॥

ಬಿಸುಬೆಮರಿಂಗುವಂತಗ*ಲ್ಪೆ ಮತ್ತ*ಮರ್ದಪ್ಪುವ ಮಾಣ್ದು ಮಾಣ್ದು ಚುಂ।
ಬಿಸಿಯಧರೋಷ್ಠಮಂ ಸವಿವ ಸಾನ್ವ್ಯಸುಖಂ ತಲೆದೋಱೆ ಸೂಚ್ಕಱಯಿಂ॥
ದೆಸೆವ ಮನೋಮುದಂ ಮಿಗುವ ಕೂಟದ ತೋಟಿಗೆ ಮೇಲೆನಲ್ ಕರಂ ।
ಮಿಸುಪ ಮನೋಜಕೇಳಿಯಿನಮೇನೆಸೆದಿರ್ದರೊ ನಿತ್ಯಕಾಮಿಗಳ್ ॥ ೧೫೯

ಮತ್ತಂ

ಅಡಿಗಡಿಗಪ್ಪಿಕೊಳ್ವ ಚುಬುಕಾಗ್ರಮನೊತ್ತಿ ಸುಧಾಧರೋಷ್ಠಮಂ ।
ಪಿಡಿದೊಲವಿಂದೆ ಚುಂಬಿಸುವ ಗಾಸಿಗೆ ಸೂಸಿದ ಕೇಶಪಾಶಮಂ ॥
ಮುಡಿಸುವ ನಾಣ್ಗೆ ನಾಣ್ಬದೆ ವಿಚಿತ್ರವಿನೋದದ ಕೂಟದಿಂ ಸುಖಂ ।
ಬಡೆವ ಲತಾಂಗಿ ಮನ್ಮಥನ ಮಂದಿರಮಂಗಳಲಕ್ಷ್ಮಿಯಲ್ಲಳೇ ॥ ೧೬೦

ಮಲ್ಲಿಗೆಚೊಲ್ಲೆಯಂ ಕುಣಿಯೆ ಕುಂಡಲಮಂಡಲಮಾಸೆ ಕಂಕಣಂ ।
ಮೆಲ್ಲುಲಿಯಿಂ ಪಳಂಚಿ ಮೃದುಕಂಠರವಂ ಪೊಸತಾಗೆ ಮಾತುಗಳ್ ॥
ಲಲ್ಲೆಯನಪ್ಪಿಕೆಯ್ಯೆ ಬೆಮರಮ್ಮೆ ಸುಖಂ ತಲೆದೋಱೆ ನುಣ್ಬದಂ ।
ಜೆಲ್ಲನೆ ಪಾಯ್ದು ಚೆಲ್ಲೆ ಪುರುಷಾಯತಮೇನತಿಚಿತ್ರಮಾಮುದೋ ॥ ೧೬೧

ತಮೆಯುದ ನಲ್ಮೆ ತೋರ್ಱಗಿಡದಾಸೆ ಮಗುಳ್ದಸೆವಾರ್ತಮಿಚ್ಛೆಪೆ ।
ಚರ್ಚುವ ಮನದೇಟ್ಗೆ ಕೂಡಿ ತಣಿವಿಲ್ಲದ ಕೂರ್ಮೆ ನವೀನಮಾಗಿ ನು ॥
ಣ್ಪವಿರಳಮಪ್ಪಿನಂ ನಲಿದು ಕೂಡಿ ಸುಖಾಂಬುಧಿಯೊಳ್ ಮುಳುಂಗಿಯೊ ।
ಪ್ಪುವರವರಾವಗಂ ಸುರತಕಾಲಮೆನಿಪ್ಪ.....ಮಾತ್ಕೆಯಿಂ ॥ ೧೬೨

ಅಂತು ನಾನಾಪ್ರಕಾರದ ಕರಣಂಗಳನೊಡರ್ಚಿ ಕೂಡಿದ ಕಡೆಯೊಳ್

ಕೆದಱಿದ ಕುಂತಳಂ ಪರೆದ ಕಜ್ಜಳಮುಣ್ಮುವ ನುಣ್ಬೆಮರ್ ಮದಂ ।
ಪ್ರದಿದ ವಿಲೋಚನಂ ಬಱಿಯನಟ್ಟುವ ಸುಯ್ ಕಡುಜೋಲ್ವ ವೇಣಿ ಬ ॥
ತ್ತಿದ ಬೆಳ*ವಾರ್ಱಯ ಬಿಟ್ಟಿಲ್ದ ಲುಳಿತಾಂಬರಮೊಪ್ಪೆ ರತಾಂತದೊಳ್ ಸುಖಾ ।
ಸ್ಪದಮನೊಡರ್ಚುವಂಗನೆಯ ರೂಪು ವಿಚಿತ್ರಮನುಂಟುಮಾಡದೇ ॥ ೧೬೩

ಅಂತಾದ ರತ್ಯಂತದೊಳಪಂತೀಸೌಂದರಿ ರಾಜವಾಹನನ ಮುಖಾರವಿಂ
ದಮಂ ನೋಡಿ,

ಆವಾವ ದೇಶವಂ ಸ |
ದ್ಭಾವಂ ಮಿಗೆ ತೊೞಲುತಿರ್ದರಸರ್ ನಲವಿಂ ||
ಭಾವಿಸಿ ಬೆಸಸಲ್ವೇೞ್ಪುದು |
ದೇವರ್ ಪದೆದೆನಗೆ ಕರ್ಣಕೌತುಕವಾಗಲ್ || ೧೬೪

ಎಂದು ಬೆಸಗೊಳ್ಲೊಡಂ

ವನಿತೆಯ ಬಿನ್ನಪಕ್ಕೆ ಕಡುಮೆಚ್ಚಿ ನೃಪಾಲಕನೊಪ್ಪಲುರ್ವರಾ |
ಜನಿತವಿಶೇಷಮುಂ ಭುವನಕೋಶಮನಾಕೆಯ ಕರ್ಣಕೌತುಕಂ ||
ಮನದನುರಾಗಮುರ್ಕೆ ಮಿಗೆ ಪೇೞಲೊಡರ್ಚಿದನಂಗನಾಥನ |
ಸ್ತನನಮೌಕ್ತಿಕಾಭರಣನಪ್ರತಿಯಾಗಲಭಂಗವಿಕ್ರಮಂ || ೧೬೫

|| ಗದ್ಯಂ ||

ಇದು ನಿಖಿಳಬುಧಜನಮನೋವನಜವನದಿವಾಕರಕಿರಣಪ್ರತಿಮಪ್ರಸನ್ನ
ಶ್ರೀಮದಭಂಗವಿಟ್ಠಲಪದಾಂಭೋಜಮತ್ತಮಧುಕರ
ಮಧುಸೂದನನಂದನ ಸರಸಕವಿ ಚೌಂಡರಾಜ ವಿರಚಿತಮಪ್ಪ

ಅಭಿನವದಶಕುಮಾರಚರಿತೆಯೊಳ್

ಅವಂತೀಸೌಂದರೀದರ್ಶನವರ್ಣನಂ

ಷಷ್ಠಾಶ್ವಾಸಂ

॥ ಸಪ್ತಮಾಶ್ವಾಸಂ ॥

ಶ್ರೀಮಗಧೇಶನವಂತೀ ।
ಕೋಮಳೆಗೆ ನೆಗಳ್ದ ಭುವನಕೋಶವನಧಿಕ ॥
ಪ್ರೇಮದೆ ಪೇೞಲೊಡರ್ಚಿದ ।
ನೇಮಾತೋ ಪದೆದಭಂಗವಿಟ್ಠಲಭೃತ್ಯಂ ॥ ೧

ಅದೆಂತೆನೆ—

ನಿರುಪಮಸತ್ತ್ವದಿಂ ಕಮಲಜಾಂಡಕಟಾಹಮನಾದಿಶಕ್ತಿ ತಾ ।
ಳ್ದಿರಲದಱಾಶ್ರಯಂಬಿಡಿದು ಕೂರ್ಮನಿರಲ್ ತದನೂನಖರ್ಪರೋ ॥
ಪರಿಯೊಳನಂತನಿರ್ದು ನಿಜಮಸ್ತಕದೊಳ್ ಸಲೆ ಭೂಮಿಯಂ ಚರಾ ।
ಚರಸುಖಭೂಮಿಯಂ ತಳೆದನಲ್ತೆ ಸರೋರುಹಪತ್ರಲೋಚನೇ ॥ ೨

ಅತಳಂ ವಿತಳರಸಾತಳ ।
ಸುತಳಂ ಪಾತಾಳಮಾತಳಾತಳಮಧಿಕ ॥
ಪ್ರತಳಂಗಳಧೋಲೋಕ ।
ಪ್ರತತಿಗಳೆಸೆದಿರ್ಪುವಲ್ತೆ ಕಮಲದಳಾಕ್ಷೀ ॥ ೩

ಭೂಲೋಕಭುವರ್ಲೋಕತ ।
ಪೋಲೋಕಂ ಸ್ವರ್ಗಲೋಕಜನಲೋಕಂ ಕೇಳ್ ॥
ಬಾಲೆ ಮಹರ್ಲೋಕಂ ಸ ।
ಲ್ಲೀಲೆಯೊಳಾಸತ್ಯಲೋಕಮೆಂದೂರ್ಧ್ವಜಗಂ ॥ ೪

ರವಿಮಂಡಲದಿಂ ಮೇಲಾ ।
ಯ್ತು ವಿಧುವ ಮಂಡಲಮಗತ್ತ ತಾರಾಗತಿ ಮೇಣ್ ॥
ವಿವಿಧಂ ವಾಯುಸ್ಕಂಧಂ ।
ನವೀನಮೆನಿಸಿರ್ಪುದಲ್ತೆ ಭುವನಾಧಾರಂ ॥ ೫

ಇಂತು ಚತುರ್ದಶಭುವನಂ ।
ತಿಂತಿಣಿಯಿಂದಿರ್ಕುಮಿನಜೊಳೊಪ್ಪಿರ್ಪ ಧರಾ ।

ಕಾಂತೆಯ ಮೇಲೆಸೆಗುಂ ನಿ ।
ಶ್ಚಿಂತಂ ಪರಿಭಾವಿಸಲ್ಕೆ ನಾನಾದೇಶಂ ॥ ೬

ಮತ್ತಮಾಭೂಮಿಗೆ ಸೀಮೆಯಾಗಿ

ಪೃಥುಸತ್ವರ್ ದೇವದೈತ್ಯರ್ ತಮಗಭಿಮತಮಾಗಲ್ಕೆ ಸಂರಂಭದಿಂದಂ ।
ಮಥಿಸಲ್ ಮಾಂಗಲ್ಯವಸ್ತುಪ್ರಕರಮನಮೃತಾಹಾರಮಂ ಕೊಟ್ಟು ಮತ್ತಂ ॥
ವ್ಯಥೆ ತಾಂ ಪುಟ್ಟಲ್ಕೆ ಹಾಲಾಹಲಮನುಗುಳ್ದು ಗಂಭೀರಸಾಮರ್ಥ್ಯತೇಜಃ ।
ಪ್ರಥಿತಪ್ರಖ್ಯಾತಿವೆತ್ತಂ ಸಲೆ ಜಲಚರಸಂಘಾತರೌದ್ರಂ ಸಮುದ್ರಂ ॥ ೭

ಅತಿಲವಣೇಕ್ಷು ವಾರುಣಿ ಘೃತಂ ದಧಿ ದುಗ್ಧಮಗಾಧವಾರಿ ಕೇ ।
ಳತುಲಸಮುದ್ರಮೊಂದಱಿನದೊಂದಧಿಕಂ ಪಡೆದಲ್ಲಿ ಸಪ್ತಸಂ ॥
ಮಿತಮೆನೆ ದೀವಿಯುಂತವಱ ಮಧ್ಯದೊಳಿರ್ಪುದು ಚಕ್ರಮಧ್ಯದಾ ।
ಯುತಿಮಣಿಕೇವಣಂಬೊಲನಿಶಂ ಸುಖಮಂ ತಳೆದಂಬುಜಾನನೇ ॥ ೮

ಸಲೆ ಜಂಬೂಪ್ಲಕ್ಷಂ ಶಾ ।
ಲ್ಮಲಿ ಕುಶಮಾಕ್ರೌಂಚಪುಷ್ಕರಂ ಶಾಕಂಗಳ್ ॥
ತಿಳಿಯಲ್ ಸಪ್ತದ್ವೀಪಂ ।
ಜಳಜಾನನೆ ಸಕಲರತ್ನಬೀಜಾವಾಪಂ ॥ ೯

ಮತ್ತಮಾಸಮುದ್ರಮುದ್ರಿತಭೂಮಧ್ಯದಲ್ಲಿ

ಸುರನಿಕರಂ ಪುಳಿಂದರಮರಾಂಗನೆಯರ್ ಶಬರೀಚಯಂ ದಿಶಾ ।
ಕರಿ ಮೃಗರಾಜಿ ಸಿದ್ಧರಸಮೆಜ್ಝರಮೊಪ್ಪುವ ಹೇಮಕಾಂತಿ ಭಾ ॥
ಸುರದಮವಹ್ನಿ ರತ್ನನಿಚಯಂ ತಿರಿಕಲ್ಲೆನೆ ಪದ್ಮಜಂ ಧರಾ ।
ತರುಣಿಗೆ ರಂಜಿಸಿಟ್ಟ ಕೃತಕಾದ್ರಿಯೊಲಿರ್ಪುದು ಮೇರುಪರ್ವತಂ ॥ ೧೦

ಮತ್ತಮದು ಗಾಂಗೇಯತೇಜೋರಂಜಿತಮಾಗಿಯುಂ, ಭಾರತಸಂಬಂಧಮಲ್ತು; ಕುಲಗೋತ್ರಪರಿವೇಷ್ಟಿತಮಾಗಿಯುಂ, ಸಂಸಾರಿಯಲ್ತು; ಸುರಾಧಿವಾಸಮಾಗಿಯುಂ, ಜನನಿಂದ್ಯಮಲ್ತು; ಧರಣೀಧರಮಾಗಿಯುಂ, ವರಾಹಾವತಾರಮಲ್ತು; ಶೃಂಗಾನ್ವಿತಮಾಗಿಯುಂ, ಮೃಗರೂಪಮಲ್ತು; ರತ್ನಕಟಕರಂಜಿತಮಾಗಿಯುಂ, ಹಸ್ತನ್ಯಸ್ತಮಲ್ತೆನಿಸಿರ್ಪುದು. ಅಂತು ಮಲ್ಲದೆಯುಂ

ಅದಱೊಪ್ಪುವ ತೆಂಕಲ್ ಪೆ ।
ರ್ಚಿದ ಹಿಮವಾನ್ ಹೇಮಕೂಟ ನಿಷಧಂ ಬಡಗಲ್ ॥
ಸದಮಳನೀಲಶ್ವೇತಂ ।
ಪದೆಪಿಂ ಶೃಂಗಿಗಳೆನಲ್ಕೆ ವರ್ಷಗಿರೀಂದ್ರಂ ॥ ೧೧

ಅದಱಿಂ ಮೂಡಲ್ ಮಂದರ ।
ಮದು ತೆಂಕಲ್ ಗಂಧಮಾದನಂ ಪಡುವಲ್ ಪೆ ॥
ರ್ಚಿದ ನಿಷಧಮದಱ ಬಡಗಲ್ ।
ಪದೆದು ಸುಪಾರ್ಶ್ವಂ ಸುರಾದ್ರಿಗೆಸೆದಪ್ಪುದಬಲೇ ॥ ೧೨

ಈವಿವಿಧಗಿರಿಗಳೊಳ್ ಸ ।
ದ್ಭಾವಕಿ ಕೇಳ್ ಕಡವು ಜಂಬು ಪಿಪ್ಪಲಮಾಲಂ ॥
ತೀವಿರ್ಕುಂ ಮತ್ತವಱೊಳ್ ।
ಭಾವಿಸಿ ಕೇಳ್ ಪೇೞ್ವೆನವಱ ನಂದನವನಮಂ ॥ ೧೩

ಕ್ರಮದಿಂ ಚೈತ್ರರಥಂ ಗಂ ।
ಧಮಾದ ವೈಭ್ರಾಜ ನಂದನಂಗಳೆನಿಪ್ಪವಂ ॥
ಕಮಳನಿಭಾನನೆ ಕೇಳ್ ಮ ।
ತ್ತಮುದಂ ಮಿಗೆ ಪೇೞ್ವೆನೆಸೆವ ಸುರಸರಸಿಗಳಂ ॥ ೧೪

ಅರುಣೋದ ಮಹಾಭದ್ರಂ ।
ಸ್ಫುರಿಸಿದೊಡಾಅಗ್ರಮಾನಸಂ ಸರಸಿಗಳಾ ॥
ಗಿರಿಗಳಮೇಲೆಸೆದಿರ್ಕುಂ ।
ಗುರುಕುಚೆ ಕೇಳ್ ಮತ್ತೆ ಪೇೞ್ವೆನಱುಕುಲಗಿರಿಯಂ ॥ ೧೫

ಅದಾವುವೆಂದೊಡೆ–

ಕಾದಲೆ ಕೇಳ್ ಮಹೇಂದ್ರ ಮಲಯಾಚಲ ಸಹ್ಯಗಿರೀಂದ್ರ ಶುಕ್ತಿಮಾ ।
ಭೇದಿಸೆ ಋಕ್ಷಪರ್ವತ ಸುವಿಂಧ್ಯ ಮಹೀಧರ ಪಾರಿಯಾತ್ರಮೆಂ ॥
ದಾದುವು ಗೋತ್ರಶೈಲಮಿಳೆಗಬ್ಜಭವಂ ಮಿಗೆ ಕೊಟ್ಟ ಕೀಲ್ಗಳಿಂ ।
ದಾದಿ ಜಗಂಗಳಾಂಕೆಯೆನೆ ರಂಜಿಸುಗುಂ ಧವಳಾಬ್ಜಲೋಚನೇ ॥ ೧೬

ಮತ್ತಂ

ಸುರುಚಿರ ಭಾರತ ಕಿಂಪುರು ।
ಷರಮ್ಯ ಹರಿವರ್ಷವೆಂಬುವಿವು ವರ್ಷಂ ತ ॥
ದ್ಗಿರಿಯೆ ಸೆವ ತೆಂಕಲಿರ್ಕುಂ ।
ತೆರಳದಿಳಾವೃತಮುದಂ ಕರಂ ಬಳಸಿರ್ಕುಂ ॥ ೧೭

ಅದಲ್ಲಬೆಯುಂ

ಜಂಬೂಫಲವೊಂದಾಶಾ ।
ಸ್ತಂಬೇರಮದಂತುಟಲ್ಲಿ ಬೀೞ್ಕುದಱಿಂ ॥
ಜಂಬೂದ್ವೀಪಮದಾದುದು ।
ಬಿಂಬಾಧರೆ ಕೇಳ್ ಪ್ರಸಿದ್ಧಮುರ್ವೀತಳದೊಳ್ ॥ ೧೮

ಆಜಂಬೂಫಲರಸಮು ।
ವ್ಯಾಜದಿನಿಳೆಯಲ್ಲಿ ಪರಿಯಲದಱಿಂ ಜನಿಸಿ ॥
ತ್ರೀಜಗದೊಳ್ ಹೇಮಂ ನಾ ।
ನಾಜನಸುಕ್ಷೇಮಮನಂಬುಜಾಯತನೇತ್ರೇ ॥ ೧೯

ಮತ್ತಮಾಮೇರುಗಿರಿಯೊಳ್

ಜ್ಯೋತಿಶ್ಚಕ್ರಂ ತುದಿಯೊಳ್ ।
ಮಾತೇಂ ಱಾಟಳದ ತೆಱದೆ ತಿರುಗುತ್ತಿರ್ಕುಂ ॥
ಖ್ಯಾತಿಯು ಮೇರುವಿನೊಳ್ ನಿ ।
ರ್ಣೀತಂ ತದ್ಭ್ರಮಣಮುದಯಮಸ್ತಮಯಂಗಳ್ ॥ ೨೦

ಗ್ರಹಚಾರಸ್ಥಿತಿಯಿಂಗಂ ।
ಗ್ರಹಣಮನಾವೃಷ್ಟ್ಯಗಳೀ...... ॥
ಮಹಿಯೊಳ್ ತೋಱುಗುಮದಱಿಂ ।
ಸಹಜಗೊಳರೆ ಸಕಲದೇಶದೊಳ್ ಸುಕ್ಷೇಮಂ ॥ ೨೧

ಅದಲ್ಲದೆಯುಂ

ಪಂಚಾಶತ್ಕೋಟಿವಿಸ್ತೀರ್ಣದೊಳೆಸೆವ ಧರಾದೇವಿಗೊಪ್ಪಿರ್ಪುದೆಂದುಂ ।
ಕಾಂಚೀದಾಮಂಬೊಲಾದ್ಯಬ್ಧ್ಯಕ್ಷರನಿಧಿ ನೆಗೞ್ದ* ಭೂಮಿ ನೋಡಲ್ಕೆ ಮತ್ತಂ॥

ಚಂಚದ್ಭಾಗಾಂತರಂ ಭಾವಿಸಲದು ನವಖಂಡಂ ಮಹಾಹೇಮರತ್ನೋ ।
ದಂಚಗ್ಗರ್ಭಂ ನಿತಾಂತಂ ವಿವಿಧಸಕಲಧಾನ್ಯಪ್ರಭೂತಪ್ರದೇಶಂ ॥ ೨೨

ಹಿಮಸೇತುಮಧ್ಯಭೂಮಿಯೊ ।
ಳಮರನದೀತತಿಗಳಿರ್ಪ ವಸುಸಂಕುಳದು ॥
ಗರ್ವಂಕಾನನದಾವಾಗ್ನಿಗ ।
ಳಮರ್ತ್ಯಲೋಕಪ್ರಸಿದ್ಧಿಗಳ್ ತರಳಾಕ್ಷೀ ॥ ೨೩

ಸುರನದಿ ಗಂಗೆ ಗೌತಮಿ ಸರಸ್ವತಿ ನರ್ಮದೆ ಕೃಷ್ಣವೇಣಿ ಭೀ ।
ಮರಥಿ ಪಯೋಷ್ಣಿಕಾದ್ರಿ ಯಮುನಾನದಿ ಸಿಂಧು ಕವೇರಕನ್ಯೆ ಭಾ ॥
ಸುರತರತುಂಗಭದ್ರೆಯೆನಿಪ್ಪುತ್ತಮತೀರ್ಥಮನೇಕಮುರ್ವಿಯೊಳ್ ।
ಪರಿವಿಡಿದಿರ್ಪುವಲ್ತೆ ದುರಿತಕ್ಷಯಕಾರಣಪುಣ್ಯಮೂರ್ತಿಗಳ್ ॥ ೨೪

ಮತ್ತಂ

ಪಹ್ಲವ ಗೌಳ ಘೂರ್ಜರ ವರಾಳ ಕಳಿಂಗ ತುರುಷ್ಕ ಸಿಂಧು ನೇ ।
ಪಾಳ ಸುಪಾಂಡ್ಯ ಕೇರಳ ಮಹಾಂಧ್ರ ಸುರಾಷ್ಟ್ರಮಿವಾದಿಯಾದ ಸ ॥
ಲ್ಲೀಲೆಯ ದೇಶಸಂತತಿಯನೇಕಮೆನಲ್ ಮೆಱೆದಿರ್ಪುವಲ್ತೆ ಕೇಳ್ ।
ಬಾಲಕಿ ನೋಡಲಲ್ಲಿ ಸುಖಸಂತತಿ ಸಂದೆಸೆಗುಂ ನಿರಂತರಂ ॥ ೨೫

ಈದೇಶಂಗಳೊಳುಳ್ಳ ನಾರಿಯರೊಳೊಂದೊಂದತ್ಯಪೂರ್ವಂ ಕಳಾ ।
ಭೇದಂ ಕೂರ್ಮೆಯೊಳಾದ ಸಂಗಮವಿನೋದಂ ರೂಪಲಾವಣ್ಯಸಂ ॥
ಮೋದಂ ಪೆಂಪಿನೊಳೊಪ್ಪುತಿರ್ಪ ವನಿತಾಸಲ್ಲಕ್ಷಣಂ ಕೇಳವಂ ।
ತೀದೇವೀ ವಿವರಕ್ಕಗೋಚರಮೆಲೇ ಶುಂಭತ್ಪ್ರವಾಳಾಧರೇ ॥ ೨೬

ಇದು ಕರ್ಮಭೂಮಿಯಿದಱೊಳ್ ।
ಸದಮಳಧರ್ಮಾರ್ಥಕಾಮಮಂ ಸಾಧಿಸದು ॥
ಬಿರ್ದ ದುಷ್ಕರ್ಮಮನೆಸಗುವ ।
ಮದಮುಖರಿಹಪರಸುಖಕ್ಕೆ ಬಾಹಿರರಲ್ತೇ ॥ ೨೭

ಎಂದನಂತರಂ

ಇದಱ ವಿಶೇಷಮಂ ನಿನಗೆ ಪೇೞ್ವೊಡದಗ್ಗಳಮೆನ್ನ ಬಲ್ಲವ್ರೋಲ್ ।
ಪದೆದಱಿವಂತುಟಂ ನಿನಗೆ ಪೇಳ್ವೆನೆನಲ್ ಸುಕುಮಾರನಂ ಮನೋ ॥

ಮುದದಿನವಳ್ ವಿಳಾಸಮೆಸಲಪ್ಪಿ ತದೋಷ್ಠವನೀಟ್ಟು ಚುಂಬಿಸಲ್ ।
ಸದಮಳರಾಗವಂ ತಳೆದು ತಾಂ ಮಗುಳ್ದಪ್ಪಿದನುರ್ವರಾಧಿಪಂ ॥ ೨೯

ಅಂತಾಭುವನಕೋಶಮಂ ರಾಜವಾಹನನಿಂ ಸೂಚನಮಾತ್ರದಿಂದಱಿದ ಅವಂತೀಸೌಂದರಿ

ಶ್ರೀಮದಶೇಷಸದ್ಭುವನಕೋಶಮನೆಯ್ದಿಯವಂತಿಸೌಂದರೀ ।
ಕಾಮಿನಿ ರಾಜವಾಹನ್ನಪನಿಂ ಸಲೆ ಕೇಳ್ದಲೆ ಭೂಪ ಮನ್ಮನಃ ॥
ಪ್ರೇಮಮೆನಿಪ್ಪ ನಿನ್ನ ನುಡಿ ಕರ್ಣರಸಾಯನಮಾಯ್ತನಂತಸೌ ।
ಖ್ಯಾಮೃತಮಂ ಸಮಂತು ಪಡೆದೆಂ ಸಕಲೇಂದ್ರಿಯಸೌಖ್ಯಸಾರಮಂ ॥

ಆದೊಡಮಾಂ ನಿನಗೆ ಮಾಳ್ಪ ಪ್ರತ್ಯುಪಕಾರಮಾವುದುಮಿಲ್ಲದೊಡಂ

ಶಾರದೆ ರಂಜಿಸಿರ್ಪ ಮುಖಪಂಕಜಮಂ ಸಲೆ ಲಕ್ಷ್ಮಿಯೊಪ್ಪಮೀ ।
ಧೀರುರಮಂ ಸಪತ್ನಿಯುರಯತ್ನದೆ ಸೋಂಕಿದ ತಾಣಮೆಂಬ ಲ ॥
ಜ್ಜಾರಯಮಿಲ್ಲದಾಂ ಮಗುಳ್ದು ಚುಂಬಿಸಿಯಪ್ಪುವ ಧೈರ್ಯಮಂ ಮಹೋ ।
ದಾರದೊಳೀಕ್ಷಿಸೊಲ್ದು ನೃಪನಂದನ ನಿನ್ನ ಗುಣಾತಿರೇಕದಿಂ ॥ ೩೦

ಅಂತೆಂದು

ಈತನ ಸೌಖ್ಯಾಮೃತಮಂ ।
ಪಾತಕ್ಕಿದು ತಾಣಮೆಂದು ತಾಮ್ರಾಧರಮಂ ॥
ಪ್ರೀತಿಯಿನೊಪ್ಪಿರೆ ಚುಂಬಿಸಿ ।
ನೂತನಸೌಖ್ಯಕ್ಕೆ ತಾನೆ ನೆಲೆಯೆನಿಸಿರ್ದಳ್ ॥ ೩೧

ಕುಡಿಯಿಡುತಿರ್ಪ ಕಲ್ಪಲತೆ ಕಲ್ಪಕುಜಾಗ್ರಮನಪ್ಪವಂತೆ ನಾಣ್ ।
ಸಡಿಲೆ ಕುಮಾರನಂ ಭುಜಲತಾದ್ವಯದಿಂ ಬಿಗಿಯಪ್ಪಿ ಪೆಂಪಿನಿಂ ॥
ಪಿಡಿದಧರಾಗ್ರಮಂ ಸವಿದು ಮತ್ತೆ ರತೋತ್ಸವದಿಚ್ಛೆಯಾಗೆ ನಾ ।
ಣ್ಬಿಡುಕುವ ಕಾಂತೆಯಂ ಮಗುಳ್ದು ತಾನಮರ್ದಪ್ಪಿದನುರ್ವರಾಧಿಪಂ ॥ ೩೨

ಅಂತು ಮಗುಳ್ದು ಮಗುಳ್ದನೇಕಕರಣಂಗಳಿಂ ಕಾಮಕಲಹಮನೊಡರ಼್ಿ

ನೆಗೆದ ಕುಚಂಗಳೊಡ್ಡಱಿಮ ಚಪ್ಪಲದಿರ್ಪಿನಮಂಗಮಂಗದೊಳ್ ।
ಪೊಗಸುವಿನಂ ಪೊಗರ್ ಮಿಗುವ ತೋಳ್ ನಳಿತೋಳೊಳಮರ್ವೆತ್ತಿರಲ್ ॥

ಬಿಗಿದಮ*ರ್ದಪ್ಪಿಕೊಂಡು ಸುರತಶ್ರಮದಿಂ ಸುಖನಿದ್ರೆಗೈದು ಕಾಂ ।
ಮಿಗಳೆಸೆದರ್ ಮನೋಭವನ ನಾಟಕದಿಂಬಿನ ಬೊಂಬೆಯೆಂಬಿನಂ ॥ ೩೩

ಅಂತು ಕಂದರ್ಪಕೇಳೀಕಲಹದೊಳ್ ಬಳಲ್ದು ಸುಖನಿದ್ರೆಯಿಂದಿರ್ಪಾಗಳ್

ಜರಠಕಲಹಂಸಚರಣಾಂ ।
ತರದೊಳ್ ತಾವರೆಯ ನೂಲ ಸಂಕಲೆಯಿಕ್ಕಿ ॥
ಪಿರ್ರವಿನ ಕನಸಂ ಕಂಡರ್ ।
ನರಪತಿಯುಮುಮಂತ್ರಿಸೌಂದರಿಯುಮಾಕ್ಷಣದೊಳ್ ॥ ೩೪

ಅಂತು ದುಸ್ಸ್ವಪ್ನಮಂ ಕಂಡು

ಅರುಣೋದಯಕಾಲದೊಳ್ ।
ಬರ್ರುಮೊರ್ಮೊದಲೆಬ್ಬಿ ನೋಡೆ ಭೂಪಾಲನ ಸ ।
ಚ್ಚರಣಾಗ್ರದೊಳಿರ್ಪುದು ಭೀ ।
ಕರಮೆನಿಸುವ ಬೆಳ್ಳಿವೆಸದ ಸಂಕಲೆಯಾಗಳ್ ॥ ೩೫

ಉಡುಗಣಮಂ ನಿಜಾಂಘ್ರಿನಖದೀಧಿತಿಯಿಂ ಸೆಱೆಗೆಯ್ದಯಿನ್ನವಂ ।
ಬಿಡುವುದೆನುತ್ತೆ ಪೂರ್ಣಶಶಿ ಕಾಲ್ವಿಡಿದಿರ್ದನೊ ಪೇೞೆನಲ್ಕೆ ಬೆ ॥
ಳ್ಪೆಸೆವಿಶದಿರ್ಪ ರೂಪ್ಯಮಯಶೃಂಖಲೆ ರಾಜಕುಮಾರನಂಘ್ರಿಯೊಳ್ ।
ತೊಡ*ರ್ದಿರೆ ಕಂಡನಂತಿವಧು ಬಾಯಬಿಡುತ್ತಳತ್ತೀಮಱೇವದೊಳ್ ॥ ೩೬

ಅಂತಶ್ರೀಕರಮಪ್ಪ ಸಂಕಲೆಯಂ ಕುಮಾರನ ಕಾಲೊಳ್ ಭೋಂಕನೆಲ ಮಂತ್ರೀಸೌಂದರಿ ಕಂಡು

ಪಾಪಿ ವಿಧಾತ್ರನಿಂ ಕುಸುಮಕೋಮಲದೇಹನ ಕಾಲ್ಗೆ ಬಂಧನಂ ।
ಪ್ರಾಪಿಸಲಕ್ಕುಮೇ ಎನುತೆ ಶೋಕಮನ್ಯೈದೆ ಕುಮಾರಿ ತನ್ನ ಕಾಂ ॥
ತಾಪರಿವಾರಮಂಬೆರಸು ಬೇಡೆಲೆ ವಲ್ಲಭೆ ಶೋಕಮೆಂದು ಧಾ ।
ತ್ರೀಪತಿ ಪೇೞ್ದನೊಂದೆರಡು ತಿಂಗಳ ಬಂಧನಮೆಂದು ಕಾಂತೆಯೊಳ್ ॥ ೩೭

ಆಂ ಪೂರ್ವಭವದೊಳೆರಡು ದಿ ।
ನಂ ಹಿಡಿತಂದೊಂದು ಹಂಸಿಯಂಘ್ರಿದ್ವಯಮಂ ॥
ತಂಪಿನ ತಾವರೆನೂಲಿಂ ।
ಪೆಂಪಿಂ ಕಟ್ಟಿರ್ದೆನಂಬುಕೇಳಿಯೊಳಬಲೇ ॥ ೩೮

ಅಂತಾಂ ಪೂರ್ವಭವದೊಳ್ ಶಾಂಭವನೆಂಬರಸನಾಗಿರ್ದಲ್ಲಿ ಜಲಕ್ರೀಡಾಸಮಯದೊಳ್ ಬಂದು ಹಂಸಿಯನೆರಡುದಿನಂ ನಿರ್ಬಂಧಿಸಿದ ಕಾರಣದಿಂದೀನಗೀಜನ್ಮದೊಳಂತೀಬಂಧನಂ ಬಂದುದೆಂಬುದಂ ಕೇಳ್ದಱಿವೆನೆಂದೊಡಂ ಮಾಣದೆ

ಇಂದುವ ಬಿಂಬದಿಂದಮೃತಬಿಂದುಗಳುಕ್ಕುಪುವೆಂಬವೋಲ್ ಮಹಾ ।
ಕ್ರಂದನವೇಗದಿಂದೆ ಸುರಿವಶ್ರುಜಲಂ ಪೊನಲಾಗೆ ಮತ್ತಮಿಂ ॥
ಟುಂ ದೆಸೆ ತೀವ್ರವಂತೆ ಮಿಗುವಾರ್ತರವಂ ಪ್ರಸರಾಗೆ ದುಃಖದಿಂ ।
ಮುಂದುಗೆಡುತ್ತೆ ಶೋಕಿಸುವ ಕಾಂತೆಗೆ ಮತ್ತಿನ ಭೀತಿಯೊಪ್ಪದೇ ॥ ೩೯

ಅಂತು ಕಟ್ಟುಸಿರದಿಂದಮಂತೀಸೌಂದರಿ ಕನ್ಯಾವ್ರತದ ಭೀತಿಯಂ ಬಗೆಯದೆ ಶೋಕಿಸುವ ಧ್ವನಿಯನಂತರ್ವಾಸಿಕರ್ ಕೇಳ್ದು ಬಂದು ನೋಳ್ಪಿನಂ

ಕೋಮಳದೇಹನನತ್ಯಭಿ ।
ರಾಮನನದ್ಭುತಗಭೀರಮೂರ್ತಿಯನತುಳೋ ॥
ದ್ದಾಮಭುಜನಂ ಮನೋಹರ ।
ಭೂಮೀಶ್ವರಸುತನನಂತವರ್ ಮಿಗೆ ಕಂಡರ್ ॥ ೪೦

ಅಂತಿರ್ದ ಕುಮಾರನಂ ಕಂಡು

ಕನ್ಯಾಂತಃಪುರಮಂ ವಿಚಾರರಹಿತಂ ನಿರ್ಭೀತಿಯಿಂ ಪೊಕ್ಕನ ।
ತ್ಯನ್ಯಾಯಂ ಬಿಗಿ ಕಟ್ಟು ಕಳ್ಳನನೆನುತ್ತುದ್ರೇಕಿಸಲ್ ಚಿತ್ತಕಾ ॥
ಠಿನ್ಯಂ ಮಿಕ್ಕವನೊರ್ವ ಕಿಂಕರವರಂ ತದ್ಭೂಪನಂ ಕಂಡಿನಂ ।
ಮಾನ್ಯಂ ದಂಡಿಸಲಣ್ಮೆನೊಲ್ದಱಿಪುವೆಂ ಶ್ರೀಚಂಡವರ್ಮಾಖ್ಯನೊಳ್ ॥ ೪೧

ಎಂದು ಚಂಡವರ್ಮಂಗಮಂ ಪೋಗಿ ಪೇೞಲವನಂ ಬೇಗದಿಂ ತನ್ನಿಮೆನಲೊಡಂ

ಬೆಳ್ಳಿಯ ಸಂಕಲೆಯೊಡನಾ ।
ಬಲ್ಲಾಳ್ಗಳ್ ಕೆಯ್ಯಾನಾರ್ಪಿನಿಂ ಪಿಡಿದು ಧರಾ ॥
ವಲ್ಲಭನಂ ತಂದರ್ ಸಭೆ ।
ಯೆಲ್ಲಂ ಬೆಱಗಾಗಿ ನೋಳ್ಪಿನಂ ಕಡುವೇಗಂ ॥ ೪೨

ಅಂತು ಪಿಡಿತಂದು ರಾಜಕುಮಾರನಂ ಚಂಡವರ್ಮನ ಮುಂದೆ ನಿಲಿಸಲಾತಂ ನೋಡಿ

ಇವನೇ ಅಂತವನೊಪ್ಪುವೆನ್ನನುಜನಂ ಕನ್ಯಾರ್ಥದಿಂ ಕೊಂದ ಕೈ ।
ತವಪ್ರಪ್ರೋದ್ಧವಮಿತ್ರನೀತನಸುವಂ ವೈವಸ್ವತಂಗೊಪ್ಪಿಸೆಂ ॥
ಬ ವಿಶೇಷೋಕ್ತಿಯವಂತಿದೇವನ ಕಳಾಸಂಪನ್ನೆ ಮಾದೇವಿಯಾ ।
ಶ್ರವಣಕ್ಕೆಯ್ತರೆ ಚಂಡವರ್ಮಸಚಿವಂಗಿಂತೆಂದು ಪೇಳ್ದಿಟ್ಟನಳ್ ॥ ೪೩

ಅದೆಂತೆನೆ—

ಅವನಂ ಕೊಂದೊಡವಂತಿದೇವಿ ಮೊದಲೊಳ್ ತೀರ್ಗುಂ ದಿಟಂ ತೀರ್ದೊಡೀ
ನವಳಿಂ ಪಿಂದಿರವೆಮ್ಮ ಜೀವಮೆರಡೆಂಬೀನಿಶ್ಚಯಕ್ಕಲ್ಲಿ ತ ॥
ನ್ನವಿಚಾರಕ್ರಮಮೆಂತುಟಂತೆಸಗುಗೆಂಬೀವಾರ್ತೆಯುಂ ಕೇಳ್ದು ಮಂ ।
ತ್ರಿವರಂ ಕೊಲ್ಲದೆ ಭೂಪನಂ ಕಳಿಪಿದಂ ಕಾರಾಗೃಹಕ್ಕಾಕ್ಷಣಂ ॥ ೪೪

ಅಂತಾತನಂ ಸೆಱೆಯಿಡಲ್ ಬಱಿಕ್ಕಿತ್ತಲ್

ಮರುಳಾಗಿಯವಂತೀಶ್ವರ ।
ನರಸಿ ಮಹಾದೇವಿಯಿರ್ವರುಂ ಕನ್ಯಾಂತಃ ॥
ಪುರದೊಳ್ ಸಿಕ್ಕಿದ ಕಳ್ಳನ ।
ನೊರಸಲ್ವೇಡೆಂದಪರ್ ಮಗುಳ್ದೀಗೆಯ್ವಂ ॥ ೪೫

ಎಂದು ಮಹೇಂದ್ರಾಚಲದೊಳ್ ತಪಂಬಡುತಿರ್ದ ದರ್ಪಸಾರಂಗೋಲೆ
ಯಂ ಕಳಿಪಿ ಕುಳ್ಳಿರ್ದಾಗಳ್

ಚಂಪಾಪುರಪತಿಯೆನಿಸುವ ।
ಪೆಂಪಂ ಪಡೆದಿರ್ದ ಸಿಂಹವರ್ಮನ ಮಗಳಂ ॥
ತಾಂ ಪೂರ್ವದೊಳ್ ರೆದಟ್ಟಿದ ।
ಪೆಂಪಿನ ದೂತಂ ಕನಲ್ದು ಮಗುಳ್ದೈತಂದಂ ॥ ೪೬

ಅಂತಾದೂತಂ ಬಂದೋಲಗದೊಳಿರ್ದ ಚಂಡವರ್ಮಂಗೆ ಪ್ರಣಿಮಿಟ್ಟಿಂ
ತೆಂದಂ—

ಎಲ್ಲಿಯು ಚಂಡವರ್ಮನವನಂ ಬಗೆಗೊಳ್ವವನಾವನುರ್ವರಾ ।
ವಲ್ಲಭನಾದವಂಗೆ ಕುಡುವೆಂ ಮಗಳಂ ಬಡಮಂತ್ರಿಗೀಯೆನೆಂ ॥
ದೆಲ್ಲರ ಮುಂದೆ ಧಿಕ್ಕರಿಸಿ ನೂಂಕಿದನೆನ್ನನೆ ಸಿಂಹವರ್ಮನೀ ।
ಪೊಲ್ಲಮೆಯುಂ ವಿಚಾರಿಸುವುದೆಂದುಸಿರ್ದ*ಂ ಚರನುಕ್ತಭೀಕರಂ ॥ ೪೭

ಇಂತಾದೂತಂ ಪೇೞಲೊಡಂ

ಭಂಗುರಭೀಷಣಭ್ರುಕುಟಿ ಕೆಂಪಡರ್ದ*ಕ್ಷಿಯುಗಂ ವಿವರ್ಣಮಾ ।
ದಂಗಮುಗುರ್ವಿನಿಂ ಕುಣಿವ ಮೀಸೆ ಕನಲ್ವ ಮುಖಂ ವಿರೋಧಿಯಂ ॥
ನುಂಗಿಯುಗುಳ್ವೆನೆಂಬ ನುಡಿ ಲೋಕಭಯಂಕರಮಾಗೆ ಚಂಡವ ।
ರ್ಮಂ ಗಡಿಗೆಟ್ಟು ಕೋಪಬೋಧದಿಂ ದಳಮುಖ್ಯನನಂದು ನೋಡಿದಂ ॥ ೪೮

ಅಂತು ದಳಮುಖ್ಯನಂ ನೋಡಿ ಚತುರಂಗಬಲಮಂ ಬರಿಸೆಂಬುದುಂ,

ಸಿಂಗದ ಸಂಗಮಂತಕನ ತಿಂತ್ರಿಣಿ ಮಾರಿಯ ಮೂರಿ ಕಾಲರು ।
ದ್ರಂಗನುಸಾರಿ ಭೈರವನ ಭಾರಣೆ ರಕ್ಕಸರುಕ್ಕು ಮೆಟ್ಟು ಮೊ ॥
ತ್ತಂ ಗಣನಾತಿರೇಕಮೆನಲೊಪ್ಪುವಪ್ಪೋಲ್ ನೆರೆದಿರ್ದುದಾಕ್ಷಣಂ ।
ಸಂಗರದುಜ್ಜುಗಕ್ಕೆ ಚತುರಂಗಬಲಂ ನಸು ತಗ್ಗೆ ಭೂತಳಂ ॥ ೪೯

ಅಂತು ಚತುರಂಗಬಲಂ ನೆರೆದು ಬರೆ ಕಂಡು

ಮಾರಿ ಮಸಗಿತ್ತೆನಿಪ ಸಂ ।
ಘಾರಂಮಾಡುವೆನರಾತಿಬಲಮಂ ಪಿಡಿದಾಂ ॥
ಕೂರಸಿಯನೆಂದು ಭಾಷೆಯ ।
ನೋರಂತಿರಲಿತ್ತು ಘೂರ್ಮಿಸಿತ್ತಾಸ್ಥಾನಂ ॥ ೫೦

ಅಲ್ಲಿ

ಎನ್ನಾನೆಯಿಂದೆ ಪಗೆಗಳ ।
ಬೆನ್ನೆಲ್ವಂ ಮೆಟ್ಟಿ ಮುಱಿಸಿ ಸಪ್ತಾಂಗನ ಸೊಂ ॥
ಪನ್ನಿನಗೆ ತಂದು ಕುಡದೊಡೆ ।
ನಿನ್ನಹಿತನ ಮನೆಗೆ ತೊೞ್ತು ಮಾಡುವುದೆನ್ನಂ ॥ ೫೧

ಎಂದು ನಿಷಾದಿಗಳ್ ಭಾಷೆಯುಂ ಕುಡುವುದುಂ,

ತುರಗಖುರಪ್ರಟದೊಳರಿಗಳ |
ಶಿರಂಗಳಂ ಚಿಗುಱದುಱಿಸಿ ವಿಜಯಶ್ರೀಯುಂ ||
ನೆರೆಯದೆ ಮಾಣ್ದಪೆವಾದೊಡೆ |
ಧುರದೊಳ್ ಪಗೆವಂಗೆ ಮಾಱುವೋಪೆವಿಳೇಶಾ || ೫೦

ಎಂದಶ್ವಾರೋಹರುಂ ಪ್ರತಿಜ್ಞೆಗೆಯ್ದರಪ್ಪಿನಂ,
ರಥದುರವಣೆಯಿಂ ರಿಪುಸಾ |
ರಥಿಯುಂ ತದ್ರಥಮುನದಱ ಕುದುರೆಯುನಾಶಾ ||
ಪಥಮುಂ ಪತ್ತಿಸಿದಪೆವವಿ |
ತಥಮೆನ್ನದೆ ನೋಱ್ಪುದೆಮ್ಮ ಕಾಳೆಗದನುವಂ || ೫೩

ಎಂದು ರಥಿಕರ್ ನುಡಿದು ನಿಟ್ಟೆಯಿಂ ನಿಲ್ವುದುಂ,
ಸಂಹಾರರುದ್ರನಂತಿರ |
ಲಾಹನದೊಳ್ ನಡೆದು ಪಗೆಗಳಂ ಕಾಣಲೊಡಂ ||
ಬಾಹಾಬಲದಿಂ ಮರ್ದಿಸಿ |
ಸಾಹಸಮಂ ಮೆಱೆವೆವೆಂದರುದ್ಧತವೀರರ್ || ೫೪

ಸಿಡಿಲೆಱಗುವಂತೆ ಪಗೆಗಳ |
ನಡುನೆತ್ತಿಯನೆಱಗಿ ಪೊಯ್ವ ನೆತ್ತರ್ವೊನಲಿಂ ||
ಕಡಲಾಯ್ತೆನಿಸುವೆನಾಹವ |
ಗೆಡೆಯನೆನುತ್ತೊರ್ವರ್ ಲಾಡಿಗಾಱಂ ಮೆಱೆದಂ || ೫೫

ಕೋಲಿಂ ರಿಪುಗಳ ಪಂದಲೆ |
ಸಾಲಂ ರಣಭೂಮಿಯಲ್ಲಿ ತೋಱಿಗೊಡಲೆ ಭೂ ||
ಪಾಲ ಗುಱಿಮಾಱ್ಪುದೆನ್ನಂ |
ಸೂಲಕ್ಕಾಹವಗೊಳೆಂದರುಬಿಲ್ಲಾಳ್ಗಳ್ || ೫೬

ಸಬಳಂಬಿಡಿದನಿತಂ ಕೊಂ |
ದು ಬಾನ್ಗವಂ ಕೆತ್ತಿ ದೇವತತಿಗಂಜಿಕೆಯುಂ ||
ನಿಬಿಡಮೆನೆ ಮಾಡದೊಡೆ ನರ |
ಕಬಾಧೆಗೊಳಗಪ್ಪೆನರಸ ನಿನ್ನಯ ಕೆಯ್ಯೊಳ್ || ೫೭

ಆನೆ ಒರಲೆನ್ನ ಪರಿಗೆಯೊ ।
ಳಾನದೆ ಪೆಱೆ ಮೆಟ್ಟೆ ನಿಂದೆನಾದೊಡೆ ಪಗೆಗಾಂ ॥
ಮಾನಿನಿಯಾದಪೆನೆಂದಸ ।
ಮಾನದ ಬಿರುದೆಸೆದ ಪರಿಗೆಕಾಱರ್ ಮೆಱೆದರ್ ॥ ೫೮

ಅಂತು ಸುಭಟನಿಕರಂ ಸಂರಂಭದಿಂದಿರಲದಂ ಚಂಡವರ್ಮಂ ಕಂಡು

ಸಾಮಂ ಪಾರ್ವರ್ಗಂಗೆ ಭೇದಂ ನಿಗಮನಿಕರಶೂನ್ಯರ್ಗೆ ದಾನಂ ಮದೇಭ।
ಸ್ತೋಮಕ್ಕಾರಯ್ಯೆ ಮುಖ್ಯಂ ನೃಪತಿಗೆ ಬಗೆಯೊಳ್ ದಂಡಮೇ ಮುಖ್ಯ
ಮೆಂದಾ ॥ ಭೂಮೀಶಂ ಚಂಡವರ್ಮಂ ನಿಜಭುಜಬಲದಿಂ ವೈರಿಭೂಪಾಲ
ರಾಜ್ಯ । ಶ್ರೀಮಾನ್ಯಶ್ರೀಯ ಪಾಣಿಗ್ರಹಣಮನೊಲವಿಂ ಮಾಳ್ಪೆನೆಂದೆೞ್ದ
ನಾಗಳ್ ॥ ೫೯

ಅಂತೆೞ್ದು ಚಂಪಾಪುರಕ್ಕಭಿಮುಖನಪ್ಪುದುಂ,

ಕಡಲೇೞುಂ ಕದಡಲ್ ದಿಶಾವಿತತಿಗಳ್ ಬೆಂಡಾಗೆ ಸರ್ವೋರ್ವಿ ಬಾ ।
ಯ್ವಿಡೆ ಗೋತ್ರಾದ್ರಿನಿಕುಂಜದೊಳ್ ಪ್ರತಿರವಂ ಪೊಣ್ಮಲ್ಕೆ ವಿದ್ವೇಷಿಗಳ್॥
ನಡುಗಲ್ ಭೀಕರಮಪ್ಪಿನಂ ಪದೆಪಿನಿಂ ಶ್ರೀಚಂಡವರ್ಮಂ ಬೆಸಂ ।
ಗುಡೆ ಪೊಣ್ಮಿತ್ತು ಸುವರ್ಣಕೋಣಹತಿಯಿಂ ಪ್ರಸ್ಥಾನಭೇರೀರವಂ ॥ ೬೦

ಅಂತು ಪ್ರಸ್ಥಾನಭೇರಿಯುಂ ಪೊಯ್ಸಿ

ಅಂತಃಪುರದೊಳ್ ಸಿಕ್ಕಿದ ।
ನಂತಾತನನೆನ್ನ ಕೂಡೆ ಕೊಂಡುಯ್ವೆಂ ನಿ ॥
ಶ್ಚಿಂತಮೆನಗಪ್ಪುದೆಂದು ದು ।
ರಂತಮೆನಿಪ್ಪಧಿಕಕೋಪದಿಂ ತರವೇೞ್ದಂ ॥ ೬೧

ಅಂತು ಕೋಪಂ ಕೈಮಿಕ್ಕು ಚಂಡವರ್ಮಂ ಕಾರಾಗೃಹದೊಳಿರ್ದ ರಾಜವಾಹನನಂ ತರಿಸಿ

ಕುಂಜರನ ಕೆಯ್ಯೊಳಿವನಂ ।
ಕಂಜಮನೀಡಾಡುವಂತೆ ಕೊಲಿಸುವೆನಿವನಾ ॥
ರ್ಗಂಜುವನಲ್ಲಂ ಭಂಡಿಯ ।
ಪಂಜರದೊಳಗಿಕ್ಕಿಮೆಂದು ಪುಗಿಸಿದನಾಗಳ್ ॥ ೬೨

ಅಂತು ಕುಮಾರನನೊಂದು ಪಂಜರದೊಳ್ ಪುಗಿಸಿ ಕವಾಟಮುಮಂ ಬಂಧಿಸಿ

ಪರಿವೇಷದ ನಡುವೆ ಮಸೋ ।
ಪರಿಪೂರ್ಣಶಶಾಂಕನಿರ್ಪ ತೆಱದಿಂದಾಪಂ ॥
ಜರದೊಳಗೆ ತೇಜದಿಂದು ।
ವರ್ಮೇಶತನಯಂ ವಿಲಾಸದಿಂ ಕಣ್ಗೆಸೆದಂ ॥ ೬೨

ಕೇಸರಿಯೊಂದುಮದಾರ್ಪಿಂ ।
ದಾಸುರಮೆನಿಪ್ಪೊಂದು ಪಂಜರಾಂತದೊಳಿಟ್ಟಂ ॥
ತಾಸಿಂಹವಿಕ್ರಮಂ ಸವಿ ।
ಳಾಸದಿನಿರ್ದಂ ವಿಧಾತೃವಶಮೆನುತಾಗಳ್ ॥ ೬೩

ಚೂಡಾಮಣಿಯಿಂಗೆ ತೃಷಾ ।
ಪೀಡೆಯುಮಗ್ಗಳದ ಪಸಿವನಾರ್ತವನೊಡನೀ ॥
ಡಾಟಿ ಬಡವಾಗದಿರ್ದಂ ।
ಪಾಡಟಿಯದೆ ನೃಪಕುಮಾರಕಂ ಪಂಜರದೊಳ್ ॥ ೬೪

ಅಂತು ಮಾತಂಗಕಂ ಕೊಟ್ಟ ಮಾಣಿಕ್ಯದ ಬಲದಿಂ ಕ್ಷುತ್ಪಿಪಾಸೆಯುಂ ಬಗೆಯದಿರ್ಪ ಕುಮಾರನಂ ಪಂಜರದೊಳಿಟ್ಟು ಚಂಪಾಪುರಕ್ಕೆ ಚಂಡವರ್ಮಂ ನಡೆವಾಗಳ್

ಕರಿ ತುರಗಂ ರಥಂ ನಿಜಪದಾತಿ ಭಯಂಕರಕೋಪದಿಂದಮೆ ।
ಯ್ತರೆ ಪದಘಾತದಿಂ ನೆಗೆದ ಧೂಳಿ ಕರಂ ಪುದಿದಂತರಿಕ್ಷದೊಳ್ ॥
ಪರಿವಡೆದಿರ್ದುದೆಯ್ದೆ ಗಗನಂ ಬಯಲೆಂಬರ ಮಾತದೇಕೆ ಕಂ ।
ಡಿರೆ ಗಗನಸ್ಥಳಸ್ಥಿತಿಯನೆಂದುಱಿ ತೋರ್ಪವೊಲೆಲ್ಲಿ ನೋಟ್ಪೊಡಂ ॥ ೬೫

ಬೆಟ್ಟುಗಳ್ಳಿದೆ ನುಗ್ಗಿ ಪಡಿವಟ್ಟೆವೊಲಾಗೆ ನದೀನದಂ ಪದೋ ।
ಘಟ್ಟನೆಯಿಂ ಮಣಲ್ ಮುಸುಗೆ ದಿಗ್ವಿವರಂ ಚತುರಂಗಸೇನೆಗಂ ॥
ಬಿಟ್ಟೆಡೆಯಾಗೆ ಭೂಮಿ ದಳಭಾರಣೆಯಿಂ ನಸು ನೆಗ್ಗೆ ವೈರಿ ಮುಂ ।
ಗೆಟ್ಟರೆ ಚಂಡವರ್ಮನರಪಂ ನಡೆಗೊಂಡನತೀವಕೋಪದಿಂ ॥ ೬೬

ಅಂತತಿಸಂಭ್ರಮಂಬೆರಸು ಚಂಡವರ್ಮಂ ನಡೆತರ್ಪುದಂ ಸಿಂಹವರ್ಮಂ ಕೇಳ್ದು

ಮುಳಿದೀಗಳ್ ಚಂಡವರ್ಮಂ ತನಗೆ ಮಗಳನಾನೀಯೆನೆಂಬುಗ್ರಕೋಪಂ । ನಳಸಿಂ ಮೇಲೆತ್ತಿ ಬಂದೆನ್ನಯ ಮಗಳೊಡನೀರಾಜ್ಯಮಂ ಕೊಳ್ವಬಾಹಾ ॥ ಬಳಗಿಂದೇಱ್ತರ್ಪನೇಱ್ತರ್ಪುದು ಪಡಿಬಲಮಪ್ಪಂತಿರೆನ್ನೊಳ್ ನೃಪರ್ ತೋ । ಳ್ವಳದಿಂದೆಂದೋಲೆಯಂ ನಾಲ್ದೆಸೆಗೆ ಕಳಿಪಿದಂ ಕೂರ್ಮೆಯಿಂ ಸಿಂಹವರ್ಮಂ ॥ ೬೮

ಅಂತು ತನಗೆ ಮಿತ್ರರಪ್ಪರಸುಗಳಂ ಪಡಿಬಲಮಾಗಿ ಬರಲ್ವೇೞ್ದು ಸಿಂಹವರ್ಮಂ ತನ್ನುಳ್ಳ ಸೈನ್ಯಮಂ ಕೂಡಿಕೊಂಡು ಚಂಡವರ್ಮಂಗಿದಿರಾಗಿ ಬಿಡಲ್

ಅರಿಸೈನ್ಯವನಾಂಪರ್ ।
ಧಾರಿಣಿಯೊಳನಿಕ್ಕೆ ಚಂಡವರ್ಮಂ ಸಲೆ ಮು ॥
ರ್ಪಾರಿತಸಂರಂಭದಿನಂ ।
ದೋರಂತಿರೆ ಬಿಟ್ಟನತ್ತ ಚಂಪೆಯ ಗಡಿಯೊಳ್ ॥ ೬೯

ಅಂತುಭಯಬಲಮುತ್ಸಾಹಸನ್ನಮಾಗಿ ಬಿಡುಪ್ರಮುಂ ಚಂಡವರ್ಮನ ಸುಭಟರ್ ಮುಂದುವರಿದು

ಕಡುಪುಳ್ಳರ್ ಬಂದು ಕೈಗೋಱದೆ ಮಱಿದಿರವೆಂದಿರ್ದೋರ್ಗಡಂ ಚಂಡವರ್ಮಂ । ಬಿಡನೆಂತುಂ ಸಿಂಹವರ್ಮಾತ್ಮಜೆಯನವನಿಯುಂ ಕೊಳ್ವೆಂದಾದುರ್ಗಸೈನ್ಯಂ ॥ ನಡೆಯಲ್ ಬೊಬ್ಬಿಟ್ಟು ಕೋಲಂ ತುಡುಕೆ ಮುಳಿಸಿನಿಂ ಮಾರ್ಬಲಂ ಚೋಣಿಯೊಳ್ ಕೂ । ಗಿಡಿಸಿತ್ತಂದಾಂಪ ವೈರಿಕ್ಷಿತಿಪನ ಭಟರಂ ದಿಂಡುಮಾಯ್ದೊಚ್ಚು ಬೇಗಂ ॥ ೭೦

ವೈರಿಶಿರೋಜರಕ್ತಮಧುಮಂ ತವೆ ಪೀರ್ವ ಶಿಲೀಮುಖಂಗಳಾ ।
ಕಾರದೊಳಂಬುಗಳ್ ಗಗನದೊಳ್ ಮಿಗೆ ಪಾಱಿ ವಿರೋಧಿನಾಳಿಯೊಳ್ ॥
ಭೋರೆನಲಾರ್ಪಿನಿಂದೆಱಗೆ ತೊಟ್ಟು ಕಟಿಲ್ಚಿದ ಪೂವಿನಂದದಿಂ ।
ಧಾರಿಣಿಯಲ್ಲಿ ಬಿೞ್ದುವು ಶಿರಂ ಪೊಸತಾಗೆ ಧನುರ್ಧರಾಹವಂ ॥ ೭೧

ಮುತ್ತಿನ ಬಯ್ಕೆಯಂ ತೆಗೆವೊಡಂಜನಮುತ್ತೆ ಮದೀಯಖಡ್ಗಮುಂ ।
ದೆತ್ತಿದ ದಾಯುದಿಂ ಗಜದ ಮಸ್ತಕಮಂ ಕಡುಕೆಯ್ದು ಪೊಯ್ದೊಡಾ ॥

ನೆತ್ತಿಯು ಮುತ್ತು ರ್ಝಲ್ಲನೆ ರಣಾಂಗಣದೊಳ್ ಕೆದಱಲ್ಕೆ ಜಾಗು ವೀ |
ರೋತ್ತಮ ಎಂದು ವೀರತತಿ ಬಣ್ಣಿಸೆ ಖಂಡೆಯಕಾಱರೊಪ್ಪಿದರ್ ‖ ೨೧

ಭಾವಿಸೆ ಹಿಂದೆ ಮುಂದೆಡಬಲಂಗಳೊಳಂಬಿನ ಸೋನೆಯಿಂದಣಂ |
ತೀವೆ ವಿರೋಧಿರಕ್ತಜಲದಿಂ ರಥಿಕರ್ ಕಡುಪಿಂ ರಥಂಗಳಂ ‖
ಡಾವರಿಸುತ್ತೆ ತೋಳ್ದಣಿಯಲೆಚ್ಚು ವಿರೋಧಿಭಟರ್ಕಳೆಯ್ದೆ ನಿ |
ರ್ಜೀವನರೆಂಬಿನಂ ಪ್ರೋಣರ್ದದೇಂ ಪೆಸವೆ*ತ್ತರೊ ದೋರ್ಬಲಂಗಳಂ‖ ೨೨

ಅಂತುಭಯಬಲಕ್ಕಂ ಸಮಯುದ್ಧಮಪ್ಪುದುಂ, ಚಂಡವರ್ಮಂ ಕಂಡು

ಇನಿತೇಕೇಸಿಂಹವರ್ಮಂಗೆನುತತಿಬಲದಿಂ ಚಂಡವರ್ಮಂ ಪ್ರತಾಪಾ |
ರ್ಜನನಾಗಳ್ ಸೇನೆಯಂ ಮುಂ ಕವಿ ಕವಿಯೆನುತಂ ನೂಂಕು ನೂಂಕೆಂದು ಯುದ್ಧ ‖
ಕ್ಕನುವಾದಂ ತಾನೆ ಜಾತ್ಯುಪ್ಪಮನನುನಯದಿಂದೇಱ ಕಾಕ್ಷೇಯಮಂ ಕಿ |
ಟ್ಟಿನಿತಂ ಸಂಹಾರಮಂ ಮಾಡುವ ಬಗೆಯೊದವಂ ತಾಳ್ದಿ ಸಂಗ್ರಾಮಭೀಮಂ ‖ ೨೪

ಮಾರಿ ಕನಲ್ದು ಸಂಗರಕೆ ಮೊಗ್ಗರವಾಯ್ದುವೊಲಾದರ್ ವಾಜಿಯಂ |
ಧಾರೆ ಲಸೂದಿಗಳ್ ಮೊಱೆಯೆ ವೈರಿಪತಾಕಿನಿಯಂ ನಿಜಾಸಿಯಿಂ ‖
..................ಕಡೆಗನ್ನೆಗಮಂ ಪೊಡೆಸೆಂಡನಾಡಿ ಸಂ |
ಹಾರಮನೆಯ್ದಿಸುತ್ತಧಿಕಸಾಹಸಮಂ ತಳೆದಂ ನೃಪಾಲಕಂ ‖ ೨೫

ಅಂತು ಚಂಡವರ್ಮನುರವಣೆಪ್ಪುದುಂ ಸಿಂಹವರ್ಮನ ಭಟರ್ ಕಂಡು

ವೃಕಶಾಬಂ ಮತ್ತಮಾತಂಗದ ಬಿದುವನವಷ್ಟಂಭದಿಂದೇಱ ಶೌರ್ಯಾ |
ಧಿಕನಪ್ಪಂ ಧಾತ್ರಿಗೆಂಬೋವದೆ ಬಱಸುವವೋಲ್ ಪೊಸ್ರವೆತ್ತೊಪ್ಪವಂಬಾ |
ಲಿಕೆಯಂ ಸ್ತ್ರೀರತ್ನಮಂ ಕೂಡುವ ಬಯಕೆಯೊಳ್ಕೈತಂದನೇಕಾಳಿಗಕ್ಕಂ
ದು ಕನಲ್ದಾಸಿಂಹವರ್ಮಕ್ಷಿತಿಪನ ಸುಭಟರ್ ಬಲ್ಪಿನಿಂದೆಚ್ಚರಾಗಳ್ ‖ ೨೬

ಅಂತು ಸಿಂಹವರ್ಮನ ಸುಭಟರ್ ಮುಂದುಗಿಡಿಸಲದಂ ಚಂಡವರ್ಮಂ ಕಂಡು

ಪ್ರಳಯಾಗ್ನಿಜ್ವಾಲೆಯಂ ಕಣ್ ಕೆದಱುವಿನಮುಗುರ್ವ್ವರ್ಪಿನಂ ಕೋಪಮುಣ್ಮಲ್ | ಮುಳಿಸಿಂದಂ ಸಿಂಹವರ್ಮೋರ್ವಿಪನ ಬಲಮನೆಚ್ಚಿಟ್ಟು ತದ್ಗ್ರಾ

ಪನಂ ತೋ ‖ ಳ್ವಲದಿಂ ಮೇಲ್ವಾಯ್ದು ಬೇಗಂ ಪಿಡಿದು ನಡೆಪು ಚಂಪಾ
ಪುರಾವಾಸನಮಂ ಸಿ । ಕ್ಬಲಸತ್ವಂ ಪ್ರೊಕ್ಕು ಬಾಹಾಬಲದ ಸೊಬಗಿನಿಂದಿ
ರ್ದನಾ ಚಂಡವರ್ಮಂ ‖ ೭೭

ಅಂತು ಸಿಂಹವರ್ಮನಂ ಪಿಡಿದು ಚಂಪಾಪುರಕ್ಕೆ ಬಂದು ಅರಮನೆಯಂ ಪೊಕ್ಕು ಮಱುದೆವಸಂ

ಬರವೇಱಿನ್ನಿಲ್ಲಿಗಂ ಬಾಲಿಕೆಯನಿದು ಮುಹೂರ್ತಂ ವಿವಾಹಕ್ಕೆನುತ್ತಾ ।
ದರದಿಂ ಮಾಂಗಲ್ಯವಸ್ತುಪ್ರಕರಮನೊಲವಿಂದಾಕ್ಷಣಂ ಮಾಡಿ ತತ್ಸ್ವಂ ‖
ದರಿಯಂ ಕೈಗೈದು ಬೇಗಂ ಬರಿಸಿ ಮದುವೆಯೊಳ್ ನಿಲ್ವ ಸಂರಂಭದಿಂ ನಿ ।
ರ್ಭರಸಂತೋಷಾತಿರೇಕಂ ಮಿಗುವಿನಮೊಸೆದಂ ರಾಗದಿಂ ಚಂಡವರ್ಮಂ ‖

ಅಂತಂ ಬಾಲಿಕೆಯುಂ ಹಸೆಗೆ ಬರಿಸಿ ಮದುವೆಯುಪ್ಪೆನೆಂಬ ಸಮಯದೊಳ್

ನನುಕಂಪಾದಕ್ಷಿ ಕೆಂದಾಳಡರ್ದ* ಪದಯುಗಂ ಒಲ್ಬಮರ್ ಸೋರ್ದ
ಭಾಳಂ । ಬಿಸುಸುಯ್ಲಿಂ ತೇಂಕುವಂಗಂ ಬಱತೊಣಗಿದ ಗಂಟಲ್ ಕರಂ
ಕಂದಿದಾಸ್ಯಂ ‖ ಪೊಸತಪ್ಪಾಟೋಪವೊಪ್ಪಲ್ ಸರಭಸಗತಿಯಿಂ ಬಂದನು
ದ್ದಂಡಸತ್ವಾ । ವಸಥಂ ದೂತಪ್ರಸಿದ್ಧಂ ಹರಿಣಚರಣನೆಂಬಂ ಮನೋವೇ
ಗದಿಂದಂ ೭೯

ಅಂತು ಹರಿಣಚರಣನೆಂಬ ದೂತಂ ಬಂದು ಚಂಡವರ್ಮಂಗೋಲೆಯಂ ಕುಡಲದಱೊಳ್

ಧರೆಯೊಳ್ ನೀತಿವಿದಂ ವಿಚಾರಪರನೆಂದಾರಾಜ್ಯದಾರ್ಢ್ಯೈಕೆಗೆಂ ।
ದಿರಿಸಲ್ ಮುಪ್ಪಿನ ತಂದೆ ತಾಯ ನುಡಿಯುಂ ಕೇಳ್ದಲ್ಲಿ ಕನ್ಯಾಗೃಹಾಂ ‖
ತರದೊಳ್ ಸಿಲ್ಕಿದ ಕಳ್ಳನಂ ಸೆಱೆಯೊಳಿಟ್ಟುಂ ಕೊಲ್ಲನೇಕೀಗ ಚ ।
ಚ್ಚರದಿಂ ಕೊಲ್ವುದನೇಕಚಿತ್ರವಧೆಯಿಂದೀಪೋಲೆಗಂಡಾಕ್ಷಣಂ ‖ ೮೦

ಎಂದಿರಲದಂ ಕಂಡು

ಕಡುಲೇಸಾಯ್ತೀ ಮದುವೆಯೊ ।
ಳೊಡಗೂಡಿ ಬಱಿಕ್ಕಮವನನಾನೆಯ ಕೈಯಿಂ ‖
ಪೊಣೆಸಿ ರದನಾಗ್ರದಿಂ ಬಿ ।
ರ್ಕಡಿಯುಂ ಮಾಡಿಸುವೆನೆಲ್ಲರುಂ ನೋೞ್ಪಿನೆಗಂ ‖ ೮೧

ಎಂಗು ಮಾನತ್ರಿಗನ ಮೊಗಮಂ ನೋಡೆ
ಮದವೊಸವರ್ ಚಂಡಪ್ರೋತನ ।
ನದಟಿಂ ಸಿಂಗರಿಸಿ ತಂದು ಬಾಗಿಲೊಳಿರಿಸೆಂ ॥
ಒದುಮಾತನಾಕ್ಷಣಂ ಪೆ ।
ಚಿರ್ದ ಗಜಮಂ ತಂದು ಬಾಗಿಲೊಳ್ ನಿಲಿಸಿರ್ದಂ ॥ ೮೨

ಅದೆಂತೆನೆ—

ಗಂಡಸ್ಥಾನದೊಳುರ್ಕಿಸೋರ್ವ ಮದದಿಂ ಮುಂಗಾಣದುದ್ರೇಕದಿಂ ।
ಶುಂಡಾದಂಡಮನೆತ್ತಿ ತನ್ನ ನೆೞಲಂ ಮಾರ್ಮಲೆಯೆಂದಟ್ಟುವು ॥
ದ್ದಂಡಕ್ರೋಧದಿನೊಂದಿ ನಿಂದುದು ನಗಂ ಮಾತಂಗಮಾದಂತೆ ಮೆ
ತುಂಡಂ ಬಂದುದು ಚಂಡಪ್ರೋತಮೆಸರಿಂ ರಾಜಾಲಯದ್ವಾರದೊಳ್ ॥ ೮೩

ಧೃತಪದ್ಮಾಸನಯುಂ ಸುಗೋತ್ರಜನನಂ ಭದ್ರಾನ್ವಯುಂ ದಾನವಾ ।
ರಿತನಂ ಕೌತುಕಕೀರ್ತನಂ ನೆಲಸಿದತ್ತೆನ್ನಲ್ಲಿ ಪಂಚಾಸ್ಯದೂ ॥
ರಿತಮಾತಂಗಮೆಸಗೆ ನೋಂತೆನೆನುತುಂ ಕೈಮೆಚ್ಚೆ ಸುಯ್ವಂತೆ ಘ್ರಾ
ತ್ಕೃತಿಯಿಂ ರಂಜಿಸುತಿರ್ದುದುನ್ಮದಗಜಂ ರಾಜಾಲಯದ್ವಾರದೊಳ್ ॥ ೮೪

ಅಂತು ರಾಜವಾಹನನವಧಾರ್ಯಂ ಚಂಡಪ್ರೋತಗಜಮಂ ಸಿಂಗರಿಸಿ ಬಾಗಿಲೊಳಿರಿಸಿ ಚಂಡವರ್ಮಂ ಪಸೆಯುಂ ನಿಲ್ವುದಕೆರ್ಗಳಗಂ ಪ್ರಗಲಿತ್ತಲ್

ಚಳದುರುಕುಂಡಲಂ ಘನತರರತ್ನಸರಂ ಮಣಿಕಂಕಣಂ ಲಸ ।
ತ್ಕಳಶಕುಚಂ ಕಳಾಪನವಕಿಂಕಿಣಿ ನೂಪುರಕಾಂಚಿ ಸಿಂಗರ ॥
ಕ್ಕಳವಡೆ ರಾಜವಾಹನನೃಪಾಲನ ಕಾಲ್ಗಳೊಳಿರ್ದ ರೂಪ್ಯಶೃಂ ।
ಖಳೆ ಸತಿಯಾಗಿ ಕೈಮುಗಿದು ನಿಂದುದದೊಂದು ಮಹಾವಿಲಾಸದಿಂ ॥ ೮೫

ಅಂತು ಕೈಮುಗಿದು ನಿಂದ ವಿಳಾಸಿನಿಯುಂ ರಾಜವಾಹನಂ ನೋಡಿ

ನೀನಾರ್ಗೆ ಬಂದ ಕಾರ್ಯಮು ।
ದೇನಿಲ್ಲಿಗೆ ಮತ್ಪದಕ್ಕೆ ಶೃಂಖಲೆಯಾಗಲ್ ॥
ಮಾನಿನಿ ಕಾರಣವೇನೆಂ ।
ದಾನರಪತಿ ಕೇಳೆ ಪೇೞಲುದ್ಯತೆಯಾದಳ್ ॥ ೮೬

ಅದೆಂತೆನೆ—

ಮಾಂಡವ್ಯಾತ್ರಿವಸಿಷ್ಠಗೌತಮಮುನಿಖ್ಯಾತಂ ಮಹಾಂಭೋಜಜಗ |
ಭೂರ್ಗಂಡಂ ಕೋಟಿಯುಗಂಗಳೆಯ್ದುಱಿದೊಡಂ ನಿಶ್ಚಿಂತದಿಂದಿರ್ಪ ಮಾ ||
ರ್ಕಂಡೇಯನುಂ ಪದೆದೊಂದು ಪುಣ್ಯನದಿಯಂ ಮೀಯಲ್ಕೆ ಬಂದಿರ್ದನು |
ದ್ದಂಡಸ್ಥೈರ್ಯಶರೀರನೊಂದುದಿವಸಂ ಭೂಪಾಲವಿದ್ಯಾಧರಾ || ೮೭

ಅಂತಾಮಹರ್ಷಿ ಸ್ನಾನಂಗೆಯ್ವಾಗಳ್

ಚಿತ್ತದ ಸಂಭ್ರಮಂ ಬೆರಸು ಖೇಚರಮಾರ್ಗದೊಳಾಂ ಬರುತ್ತಿರಲ್ |
ಮುತ್ತಿನ ಹಾರಮೆನ್ನ ಕೊರಲಿಂ ಪಱಿದಾತನ ಚೆಲ್ವುವೆತ್ತ ನು ||
ನ್ನೆತ್ತಿಯ ಮೇಲೆ ಬೀೞೆ ಕಡುನೊಂದು ಶಿರಸ್ತಟಮಂ ಕರಂಗಳಿಂ |
ದೊತ್ತಿಕೊಳುತ್ತೆ ಮೇಲೆ ಸುೞಿವೆನ್ನನೊನಲ್ದು ಕನಲ್ದು ನೋಡಿದಂ ||

ಎಲೆ ಪಾತಕಿ ಯೌವನಮದ |
ವಿಲಾಸದಿಂ ಪೆರ್ಚುರ್ತೇತಕಘಮರ್ಷಣನಿ ||
ಶ್ಚಲಚಿತ್ತನೆನಿಸಿಪ್ಪೆನ್ನಂ |
ತಿಳಿಯದೆ ಪೇೞ್ ಲೋಹಜಾತಿಯೊಳ್ ನೋಯಿಸಿದೋ || ೮೯

ಎಂದು ಮತ್ತಂ

ಕೋಪಂ ಕೈಗಣ್ಮೆ ಚಿತ್ತವ್ಯಥೆಯಿನಱಲ್ದು* ಪೋ ಲೋಹವಾಗೆಂದು ತೇ
ಜೋ | ರೂಪಂ ಕೊಟ್ಟಂ ಮಹಾಶಾಪಮನದನಱಿದಾಂ ಸ್ತೋತ್ರಮಂ
ಮಾಡೆ ಶಾಪಂ || ಲೋಪಂ ತಾನಕ್ಕೆರಱ್ತುಂಗಳೊಳನವರತಂ ರಾಜಮಾಹಾಂ
ಘ್ರಿಸೇವಾ | ವ್ಯಾಪಾರಂ ನಿನ್ನೊಳಾಗಲ್ ಸುದತಿ ತೊವಳಿದಲ್ತೆಂದು ಬೀ
ೞ್ಕೊಟ್ಟನೆನ್ನಂ ||

ಅಂತು ಬೀೞ್ಕೊಡಲೊಡಂ

ಅಂತಾಮುನಿಪನ ಶಾಪದಿ |
ನಂತಸ್ತಾಪದೆ ಕರಂ ಕೊರಂಗಿ ಮನ ||
ಶ್ಚಿಂತಾಹತಿಯಿಂ ಕಣ್ಣಿನಿ |
ಱಿಂ ತವೆ ನೀರುಂಡು ರೂಪ್ಯಶೃಂಖಲೆಯಾದೆಂ || ೯೧

ಅಂತಾಂಸುರಮಂಜರಿಯೆಂಬ ಖೇಚರಸ್ತ್ರೀ ಶಾಪದಿಂ ಬೆಳ್ಳಿಯ ಸಂಕಲೆಯಾಗಿ ಮಹೇಂದ್ರಾಚಲದ ಕೆಲದೊಳ್ ಬಿದ್ದಿರಲ್

ಖೇಚರಲೋಕದಿನೊರ್ವಂ ।
ಖೇಚರನೆಯ್ತಂದು ದರ್ಪಸಾರನೃಪಾಲಂ ॥
ಗಾಚಾರನನೆಸಗಿ ಬಱಿ ।
ಕ್ಕಾಚಾತುರ್ಯೋಕ್ತಿಯಿಂದವಂಗಿಂತೆಂದಂ ॥ ೯೨

ಎನ್ನೊಡನೊರ್ವಂ ಖೇಚರ ।
ನುನ್ನತಿಯಿಂ ತೊಡ*ದೊರ್ಡವನೊಳಾಂ ಸೋಲ್ತಂ ನೀ ॥
ನಿನ್ನನಗೆ ವಿಜಯಸಿದ್ಧಿಯ ।
ನುನ್ನತಮಪ್ಪಂತೆ ಮಾಡ್ಪುದತಿದೋರ್ವಲದಿಂ ॥ ೯೩

ಎಂದಾವೀರಸೇನನೆಂಬ ಖೇಚರಂ ಮಿತ್ರಭಾವದಿಂ ಮಹೇಂದ್ರಾಚಲದೊಳ್ ತಪಂಗೆಯ್ಯುತ್ತಿರ್ದ ದರ್ಪಸಾರಂಗೆ ಪೇೞ್ದಾತನಿಂತೆಂದಂ:—

ನಿನಗಾಂ ಸಹಾಯನಪ್ಪೆಂ ।
ನಿನಗೆ ಜಯಾಭ್ಯುದಯಮಪ್ಪವೋಲ್ ಮಿಗೆ ಮಾೞ್ಪೆಂ ॥
ನಿನಗೆನ್ನನುಜೆಯ ನಿತ್ತಪೆ ।
ನನುನಯದಿಂ ದಿನ್ನು ಸಂದೆಯಂ ಪೆಱತುಂಟೇ ॥ ೯೪

ಎಂದು ದರ್ಪಸಾರಂ ಖೇಚರಂಗೆ ಪೇೞ್ದಾಖೇಚರಂ ವಿಜಯಸಿದ್ಧಿಯಿಂ ಕನ್ಯಾಸಿದ್ಧಿಯುಗ್ಗಳಮೆಂದು ಭಾವಿಸಿ ತನಗೆ ಕೊಟ್ಟ ಕನ್ನಿಕೆಯಂ ನೋೞ್ಪೆನೆಂದು ಬರುತ್ತನ್ನಂ ಕಂಡು

ಈಸಂಕಲೆಯಂ ಕೊಂಡು ।
ಯಾದ್ದಸುರಮೆನಲೆನ್ನ ಪಗೆಯ ಕಾಲ್ಗಿಕ್ಕುವೆನೆಂ ॥
ದಾಸುಭಟಖೇಚರೇಶ್ವರ ।
ನೋಸರಿಸದೆ ತೆಗೆದನಲ್ತೆ ನೃಪಕುಲತಿಲಕಾ ॥ ೯೫

ಅಂತು ಸಂಕಲೆಯಂ ಕೊಂಡು ಬಂದು ಕನ್ನಿಕೆಯಿರ್ದ ಕರುಮಾಡಮಂ ಪುಗುವುದುಂ

ನೀನುಂ ನಚ್ಚಿನವಂತಿದೇವಿಯುಮನಂಗಕ್ರೀಡೆಯಿಂದಂ ಬೞ ।
ಲ್ದಾನಂದಾಂಬುಧಿಯೊಳ್ ಮುೞುಂಗಿ ಸುಖನಿದ್ರಾಸಕ್ತರಾಗಿರ್ದುದಂ ॥
ತಾನುಂ ನೋಡಿಯೆ ಖೇಚರಂ ನಿಗಳವಂ ನಿನ್ನಂಘ್ರಿಯೊಳ್ ಸಾರ್ಚಿದಂ ॥
ಭೂನಾಥಂ ತನಗೀವೆನೆಂಬ ಸತಿಯೊಳ್ ಕೂಡಿರ್ದನೆಂಬೀರ್ಷ್ಯೆಯಿಂ॥ ೯೬

ಇದು ಮತ್ಸ್ವಪ್ನಪ್ರಪಂಚಕಂ ನಿನಗೆ ರಿಪುಜಯಂ ರಾಜ್ಯಸಂಸಿದ್ಧಿಯಕ್ಕು ।
ನ್ನುದಯಂಗೆಯ್ವಾಪ್ಪದಂ ನೀಂ ಬೆಸಸುವುದೆನಗೆಂದಪ್ಸರಸ್ತ್ರೀವಿಳಾಸಾ
ಸ್ಪದದಿಂದಂ ಪೇೞೆ ಕೆಯ್ಯಂ ಮುಗಿದು ಪಿನ ಸುವಾಕ್ಪ್ರೀತಿಯಿಂ ರಾಜವಾಹಂ।
ಮುದದಿಂದಾಖೇಚರಸ್ತ್ರೀಗನುನಯಮೊಸೆಯಲ್ಕಾತನಿಂತೆಂದನಾಗಳ್॥ ೯೭

ಈವೃತ್ತಾಂತಮನೆನ್ನ ಮ ।
ನೋವಲ್ಲಭೆಯಪ್ಪವಂತಿದೇವಿಗೆ ಪೇೞ್ದಂ॥
ದ್ರಾವಾಸಮನೆಯ್ದುವುದೆಂ ।
ದಾವಧುವಿಂಗರಸನುಸಿರ್ದ* ಸಮಯಾಂತರದೊಳ್ ॥ ೯೮

ಅತಿಕೋಳಾಹಳಮುಪ್ಪೂ ।
ರ್ಜಿತಘನತರಮಪ್ಪ ಸಂಗಮಿಲ್ಲದೆ ದಿಕ್ಸಂ ॥
ತತಿಯೊಳ್ ಬಳೆದುದು ಬೇಗಂ ।
ಹತೋಹತಶ್ಚಂಡವರ್ಮ ಎಂಬೀವಾಕ್ಯಂ॥ ೯೯

ಆರೆಂದಱಿಯೆನದೊರ್ವಂ ।
ವೀರಂ ಪರಿಣಯನಕಳಕಳಂ ಮಿಗುವಾಗಳ್ ॥
ಕೂರಸಿಯುಂ ಕಿೞ್ತಾಗಳ್ ।
ಪೇರುರಮಂ ತಿವಿಯೆ ಚಂಡವರ್ಮಂ ಮಡಿದಂ ॥ ೧೦೦

ಅಂತು ಹತೋಹತಶ್ಚಂಡವರ್ಮ ಎಂಬ ಧ್ವನಿಯಂ ರಾಜವಾಹಂ ಕೇಳ್ದು

ಭರದಿಂ ಗರ್ಜಿಸಿ ಕೇಸರಂಗೆದಱಿ ಸಿಂಹಂ ಕೋಪದಿಂದದ್ರಿಗ ।
ಹ್ವರದಿಂದಂ ಪೊಱಮಟ್ಟುದೆಂಬ ತೆಱದಿಂ ಬಾಹಾಬಲಂ ಪೆರ್ಚಿ ಪಂ ॥
ಜರದಿಂದಂ ಪೊಱಮಟ್ಟು ಮಾಗಧಧರಿತ್ರೀಪಾಲಪುತ್ರಂ ಮದ ।
ದ್ವಿರದಂ ಬಾಗಿಲೊಳೊಪ್ಪಿರಲ್ ಪದೆಪಿನಿಂ ಕಂಡಂತದರ್ಕೆಯ್ದಿದಂ॥ ೧೦೧

ಅಂತು ಮುನ್ನಮೆ ತನ್ನಂ ಕೊಲಲ್ ಸಿಂಗರಿಸಿ ಬಂದ ಚಂಡಪ್ರೋತಗಜಮಂ ಕಂಡು

ಮಾವತಿಗನ ಕಾಲಂ ಪಿಡಿ ।
ದೋವದೆ ಸೆಳೆದವನನಿಕ್ಕಿಯುಂಕುಸಮಂ ಕೊಂ ॥
ಡಾವಾರಣಮಸ್ತಕದಿನಿ ।
ಳಾವಲ್ಲಭನಿರ್ದನತುಳಸತ್ತ್ವಸಮಗ್ರಂ ॥ ೧೦೨

ಉದಯಗಿರಿಗಲಸಿ ರವಿ ಮೇ ।
ಲುದಿಸಿದವನೋ ನೀಲಗಿರಿಯೊಳೆನೆ ಮದಮಾತಂ ॥
ಗದ ಮಸ್ತಕದೊಳ್ ಕುಳ್ಳಿ ।
ರ್ದದಟಂ ಮಿಗೆ ರಾಜವಾಹನಂ ಕಣ್ಗೆಸೆದಂ ॥ ೧೦೩

ಅಂತು ಗಜಸ್ಕಂಧದೊಳಿರ್ದು

ಪ್ರಜೆಯೊಳ್ ಕೂಡೆ ನಿತಾಂತಂ ।
ಗಜಬಜೆ ಮಿಗುತಿರಲದಂ ನೃಪಾಲಂ ಕಂಡಾ ॥
ಗಜದಿಂ ಪಲರಂ ನೀಱಿಸಿ ।
ವಿಜಯೋದ್ಯೋಗಕ್ಕೆ ದಾರಿದೆಗೆವನಲಂಪಿಂ ॥ ೧೦೪

ಜಗದೊಳ್ ದುರ್ಬಲಚಂಡವರ್ಮನನದಾವಂ ಕೊಂದನಾವೀರನಿ ।
ಲ್ಲಿಗವಂ ಬಂದೊಡೆ ದೇವದಾನವರೊಳಾವಂ ಕೊಲ್ವೊಡಂ ಕಾವೆನೆಂ ॥
ಬ ಗಭೀರಧ್ವನಿಯಂ ನೃಪಾಲತಿಲಕಂ ಸಂಗ್ರಾಮದೊಳ್ ಬೀಱು ಮ ।
ತ್ತಗಜಕ್ಕಂಕುಶಮಿಕ್ಕಿ ನೂಂಕಿ ನಡೆದಂ ಸಾಮರ್ಥ್ಯದಿಕ್ಕುಂಜರಂ ॥ ೧೦೫

ಅಂತಾತನ ಗಂಭೀರಧ್ವನಿಯಂ ಕೇಳ್ದು

ಕರದೊಳ್ ಕಿತ್ತ ಕಠಾರಂ ।
ಬೆರಸದಟಂ ಬೀದಿವರಿಯುತಿರ್ಕಲನಂ ಸಂ ॥
ಹರಿಸುತ್ತಾದನಿವಿಡಿಯಿಂ ।
ದರಸನಿದಿರ್ಗೊರ್ವ ವೀರನೆಯ್ದಿದನಾಗಳ್ ॥ ೧೦೬

ಬಂದಾವೀರನನಾನೆಯು ।
ಪಿಂದೇೞಿಸುತುಂ ತದಾಸ್ಯಮಂ ಕಾಣುತೆ ನ ॥
ಲ್ವಿಂದಮುಪಹಾರವರ್ಮನೆ ।
ಎಂದರಸಂ ಪಿಂದುಗೆಯ್ದು ತಳ್ಕಿಸಿಕೊಂಡಂ ॥ ೧೦೭

ಅಂತು ಬಂದಾತಂ ತನ್ನ ತಮ್ಮನಪ್ಪುಪಹಾರವರ್ಮನಾದುದಱಿಂ ರಾಜವಾಹನಂ ತಳ್ಕಿಸಿಕೊಳಲೊಡಂ

ಈತಂ ಮದಗ್ರಜಂ ಧಾ ।
ತ್ರೀತಳಪತಿ ರಾಜವಾಹನಂ ತಪ್ಪದೆನು ॥
ತ್ಪ್ರೀತಿಜಗಿ ಹರ್ಷಪುಳಕ ।
ವ್ರಾತಮುಪಹಾರವರ್ಮನಾಂತೆಸೆದಿರ್ದಂ ॥ ೧೦೮

ಅಂತೊರ್ವರೊರ್ವರನಱಿದು ಸಂತೋಷಮಂ ತಳೆದಾನೆಯಂ ಮುಂದಕ್ಕೆ ನೂಂಕಿ

ಪರಿಪರಿದು ಚಂಡವರ್ಮನ ।
ಪರಿವಾರಮನೆಯ್ದೆ ಮತ್ತಗಜದಿಂ ಮಿಗೆ ಸಂ ॥
ಹರಿಸಿ ವಿಜಯಾಂಗನಾನಿತ ।
ವರನಾದಂ ರಾಜವಾಹನಕ್ಷಿತಿನಾಥಂ ॥ ೧೦೯

ಕರಿಕರಘಾತದಿಂ ಕೆಲಬರಂ ಕೆಲರಂ ಕರಖಡ್ಗಘಾತದಿಂ ।
ದೊಱಸಿ ಬಿಸುಟ್ಟು ಭೀತಶರಣಾಗತರಂ ತವೆ ಕಾವು ತತ್ಪುರೇ ।
ಶ್ವರಪರಿಖೇದಮಂ ಕಳೆದು ನಾಲ್ದೆಸೆಯೊಳ್ ಪರೆದಿರ್ದ ವಸ್ತುವಂ ।
ತರಿಸಿ ಭುಜಪ್ರತಾಪದೊದವಿಂದೆಸೆವಂ ನೃಪರಾಜವಾಹನಂ । ೧೧೦

ಅಂತು ಸಿಂಹವರ್ಮನಂ ಬಿಡಿಸಿ ಪರೆದಿರ್ದ ವಸ್ತುವಂ ನೆರಪುವ ಸಮಯದೊಳ್

ಕದಪನಮರ್ವ ಕುಂಡಲಮುಮುನ್ಮಣಿಕಂಕಣಮಾಂತ ಕೆಯ್ಯು ಬೆ ।
ತ್ತಿದ ಸೆಳೆ ತೊಟ್ಟ ಪೊಚ್ಚ ಪೊಸಕುಪ್ಪಸನೊಪ್ಪಮನಾನೆ ಮುಂದಿಯುಂ ॥
ಕೆದಱಿಸುತಂದು ಬಂದು ಜನಪಂಗೊಲವಿಂ ಪೊಡೆಮಟ್ಟು ನಿಂದನಂ ।
ಬುಧರವದಿಂದಮೊರ್ವನುರುವೇತ್ರಧರಂ ಜನತಾಮನೋಹರಂ ॥ ೧೧೧

ದ್ವಿತೀಯಸಂಪುಟಂ.

॥ ಅಷ್ಟಮಾಶ್ವಾಸಂ ॥

—ಉಪಹಾರವರ್ಮನ ಕಥೆ.—

ಶ್ರೀಮದ್ಗಂಗಾತೀರ |
ಶ್ಯಾಮಹಿಮಂ ಬಂದಗೊಂದು ಪುಳಿನಸ್ಥಳದೊಳ್ ||
ಪ್ರೇಮದಿನಿರ್ದಂ ಗುಣನಿ |
ಸ್ಸೀಮಂ ನಲವಿಂದಭಂಗವಿಟ್ಟಲಭ್ಯತ್ಯಂ || ೧

ಅಂತು ಬಂದುಪಹಾರವರ್ಮನಿಂ ಮಾಡಲ್ಪಟ್ಟ ಸೈಕತಸಿಂಹಾಸನಮನಲಂಕರಿಸಿರ್ದನಂ,

ಅಂದಣಮುಂ ಮದೇಭತತಿಯುಂ ತುರಗಂಗಳನೇಕಭೂಷಣಾ |
ನಂದದೆ ಛತ್ರಚಾಮರದ ತಿಂತಿಣಿಯೊಳ್ ನಡೆತಂದು ಚಿತ್ರದು ||
ಬೊರ್ಂದಿರೆ ರಾಜವಾಹನನೃಪಾಲಕನಂ ಮಿಗೆ ಕಾಣಲತ್ಯಪೂ |
ರ್ವಂ ದಲೆನಲ್ಕವರ್ ನಿಜಸಹೋದರರಾದರಿವಲ್ತೆ ವಿಸ್ಮಯಂ || ೨

ಅಂತು ಧನಮಿತ್ರಂ ತಂದು ಕಾಣಿಸಿದರಸುಗಳೆಲ್ಲರರಸಂಗೆ ತಮ್ಮಂದಿರಾದರ್; ಅದೆಂತೆನೆ:—

ತನಗೆ ಕೃತಪುಣ್ಯಮಿಲ್ಲದ |
ದಿನಮೇನಂ ಮಾಡಲದು ನಿರರ್ಥಕಮಕ್ಕುಂ ||
ತನಗಧಿಕಪುಣ್ಯಮೊದವುವ |
ದಿನದಿರ್ದೆಡೆಗೆಯ್ದುಗುಂ ನಿಜಾಭೀಷ್ಟಫಲಂ || ೩

ಅಂತವರೆಲ್ಲರುಂ ನೃಪನನೀಕ್ಷಿಸಿಯೆಮ್ಮವೋಲಾರ್ ಕೃತಾರ್ಥರೆ |
ಮ್ಮಂತತಿಭಾಗ್ಯಮಂ ಪಡೆದರಾರೆನುತುಂ ನೃಪನಂಘ್ರಿಪದ್ಮಮಂ ||
ತಂತಮಗಪ್ಪಿ ಕೆಯ್ಮುಗಿದು ದೇವರೆ ನಿಮ್ಮಯ ಪಾದ ಬಂದ ವೃ |
ತ್ತಾಂತಮನೆಮ್ಮೊಳೊಲ್ದು ಬೆಸಸಲ್ ದಯೆಗೆಯ್ ನೃಪರೂಪಮನ್ಮಥಾ ೪

ಎಂದವರ್ ಬಿನ್ನಪಂಗೆಯ್ಯಲರಸಂ ತನ್ನವೃತ್ತಾಂತಮಂ ಪುಷ್ಪೋದ್ಭವ

ಸೋಮದತ್ತರ ಪ್ರಪಂಚಮುಮಂ ಪೇಳ್ದು, ಅನಂತರಮುಪಹಾರವರ್ಮನ ಮೊಗಮುಂ ನೋಡಿ ನೀನೆಸಗಿದ ಬಿಸವಂದಮುಮಂ ಪೇಳೆನಲಾತಂ ಕೆಯ್ಗಳಂ ಮುಗಿದಿಂತೆಂದಂ:—

ಎಲ್ಲರ ತೆಱದಿಂ ನಿಜಪದ |
ಪಲ್ಲವಮಂ ಭಕ್ತಿಪೂರ್ವಮುಱುಸುವ ಬಗೆಯಿಂ ||
ದಲ್ಲಲ್ಲಿ ತೊಳಲುತುಂ ಚೆ |
ಲ್ವುಲ್ಲಾಸದೊಳಂಗದೇಶಮಂ ಮಿಗೆ ಪೊಕ್ಕೆಂ || ೫

ವಿಪ್ರಾಗ್ರ್ಯಂಗರಾಜವಿಷಯಾಂತರದೊಳ್ ಬುಧಕಾವ್ಯಮಂಗಳ |
ಶ್ರೀಪದದಿಂ ಲಸತ್ತ್ರಿದಿವಮಂ ಪಡೆದೊಗ್ಗಿನನಂತಭೋಗಪೂ ||
ಭೂಪರಿಪೂರ್ಣದಿಂ ಭುಜಗಮಂದಿರಮಂ ಮಿಗೆ ಪೋಲ್ತು ಚೆಲ್ವ ಚಂ |
ಪಾಪುರಮೊಪ್ಪುಗುಂ ಸಕಳಸಂಪದಸೌಖ್ಯವಿಳಾಸದೇಳ್ಗೆಯಿಂ || ೬

ಅಂತಾಪಟ್ಟಣದ ಪ್ರಾಜಪ್ರಾಬಿಲೊಳ್ ತ್ರಿಕಾಲಜ್ಞನೆನಿಪ್ಪ ಮರೀಚಿ ಮಹರ್ಷಿಯಿರ್ಪನೆಂದು ಕೇಳ್ದಾನಿಂ ದೇವರ ವೃತ್ತಾಂತಮಂ ಕೇಳ್ವೆನೆಂದು ಪೋಗಿ ನೋಳ್ಪನಮಲ್ಲಿ,

ಪಸುರ್ಗಳ್ದೊರ್ಂಗರಿಂ ಪ್ರಮಿದ ಬಳ್ಳಿನೆಯಿಂ ಮುಗುಳಂದಲರ್ಗಳಿಂ |
ಪಸುರ್ಮಿಡಿಯಿಂ ಬೆಳ್ತೊರ್ಗಲಿದ ಕಾಯ್ಗಳಿನೊಪ್ಪುವ ಪಣ್ಗಳಿಂ ಕರಂ ||
ಪಸರಿಸಿ ಗುಜ್ಜುಗೊಂಡು ಮಧುಪಾವಳಿಸಂಗತಮಾಗಿಯುಂ ಪರಂ |
ಗೆಸೆವುದೊಂದು ಬಿಲ್ವಕುಜಮೊಪ್ಪಿರೆ ಮೊಱೆದಿರ್ದಮುನಿಪಾ || ೭

ಅದಱ ಮೊದಲೊಳ್ ಮಲೀಮಸ |
ಹೃದಯಂ ನಿರ್ವಿಣ್ಣಚಿತ್ತನಭಿನವಚಿಂತಾ ||
ಸ್ಪದನಂ ತಾಪಸಜನವೇ |
ಷದೊಳಿರ್ದನದೊರ್ವನಾತನಾಲಿಂಪಱಿಯಿಂ || ೮

ಇಲ್ಲಿ ಮರೀಚಿಯೆಂಬ ಋಷಿಯಿರ್ಪನಲ್ತೆ ಮಹಾನುಭಾವನೆಂ |
ದೆಲ್ಲರುಸಿರ್ವರಾತನ ಪದಾಬ್ಜಮನೀಕ್ಷಿಸಲೆಂದು ಬಂದೆನಿಂ ||
ದೆಲ್ಲಿಗೆ ಪೋದನೆಂದು ಪಡೆದಾಂ ಬೆಸಗೊಳ್ವನಮಾತನಟ್ಟಿಱಿಂ |
ಮೆಲ್ಲನೆ ಕಣ್ಗಳಂ ತೆಱೆದು ನೋಡಿದನೆನ್ನನಿಳಾಧಿನಾಯಕಾ || ೯

ಬಸಿದೆನ್ನ ಮೊಗಮನಂದಿ |
ಕ್ಷಿಸಿ ಚಿತ್ತದೊಳೊಗೆದ ಚಿಂತೆ ತನ್ನಾನನದೊಳ್ ||
ಪಸರಿಸುವಂತಿರೆ ಘೋಂಕನೆ |
ಬಿಸುಸುಯ್ದಿಂತೆಂದನಾತನೆನ್ನೊಡನಾಗಳ್ || ೧೦

'ಗುರುಕುಚೆ ಕಾಮಮಂಜರಿಯೆಸಿಪ್ಪವಳಲ್ಲಿಗೆ ಬಂದು ತನ್ನಮನೀ |
ಶ್ವರಚರಣಾಂಬುಜಕ್ಕೆರಗಿ ದೇವರೆ ದೀಕ್ಷೆಯನೀವುದೆಂದು ಸ |
ತ್ವರಕಮಳಂಗಳಂ ಮುಗಿದು ಬಿನ್ನಪಿಸುತ್ತಿರಲಿರ್ದ್ದಿದತ್ತ ತ |
ತ್ತರುಣಿಯ ಪಿಂದುಗೊಂಡಖಿಳಬಂಧುಜನಂ ಪಿತೃಮಾತೃಸೋದರರ್ || ೧೧

ಅದಲ್ಲದೆಯುಂ,

ನರೆವಳೆ ಬೇರ್ಬಿಡಲ್ದ ಪಡಿವಲ್ ಕಲೆಗಳ್ ತುಱುಗಿರ್ದ ಮೊಯ್ಯಗ |
ಲ್ದರಮೊಮೊಯಿಲ್ಲದಕ್ಷಿ ಬಸಿಱೊಳ್ ಮಿಗೆ ನೇಲ್ವ ಕುಚದ್ವಯಂ ಮಹೋ|
ದರಮೊಸೆಯಲ್ಕೆ ಶೋಕಿಸುತೆ ಪಿಂದನೆ ಬಂದಳೊಱಲ್ದು ಕಾಮಮಂ |
ಜರಿಯಬಳಿಂ ಬಳಾರಿಯುಪ್ರಾಂಶೊಪ್ಪಪ ಮಾಧವಸೇನೆಯೆಂಬವಳ್ || ೧೨

ಅಂತವಳ ತಾಯಪ್ಪ ಮಾಧವಸೇನೆ ಬರಲೊಡಂ ಕಾಮಮಂಜರಿ ಕೆಯ್ಗ
ಳಂ ಮುಗಿದಿಂತೆಂದಳ್ —

ಎಲೆ ಮುನಿಯೆನ್ನೈಹಿಕದೀಕ್ಷಾ |
ಟಲೆಯೆನಗಿಂ ಸಾಲ್ಗು ಪರಿಣಮಾಮುಷ್ಮಿಕದೊಳ್ ||
ನೆಲೆಗೊಳಿಸಲ್ವೇಳ್ಕೆನ್ನಂ |
ಲಲಿತಭವತ್ಪಾದಪದ್ಮಮಂ ಪ್ರಾರ್ಥಿಸುವೆಂ || ೧೩

ಎಂದು ಮುನಿನಾಥಂಗೆ ಕಾಮಮಂಜರಿ ಬಿನ್ನಪಂಗೆಯ್ವಲದಂ ಕೇಳ್ದು
ಮಾಧವಸೇನೆಯಿಂತೆಂದಳ್ .—

ಬಿನ್ನಪಮಂ ಚಿತ್ತೈಸಿಮ |
ಳೆನ್ನಯ ದೋಷಂಗಳಂ ಕರಂ ಪ್ರಕಟಿಸಲಿಂ ||
ದೆನ್ನೊಡನೆ ಮುನಿದು ಬಂದಳ್ |
ನಿನ್ನಾಣೆ ಮುನೀಂದ್ರ ತನಗೆ ತಪಕಿದು ದಿನಮೋ || ೧೪

ಎಂದು ಪುತ್ರಂ

ನೋಡಿರೆ ಸುಸ್ಥಿದ್ಯೈದು ಬರಿಸಂಬರವಿಶಾಕಡುಧೂರ್ತೆಯುಂಗವಂ ।
ಗಾಡಿ ಮಿಗಲ್ ಪಿತಂಗೆ ಮೊದಲಾಗಿಯುಮೊರ್ಮೆಯೆ ತೋಱದಿಚ್ಛೆ ಕೈ ॥
ಗೂಡುವ ಲಜ್ಜೆ ಪಜ್ಜಳಿಸುವಸ್ನೆಗವೊಪ್ಪಿರೆ ಸಾಕಿದೆನ್ನೊಳೀ ।
ಜೋಡೆ ಕನಲ್ದು ಬಂದು ತನಪಂ ತಳೆವಳ್ ಗಡ ಕೇಳತಕ್ಕುಮೋ ॥ ೧೫

ಅವಯುವಶೋಭೆಯುಂ ಸಸಿನೆಗೆಯ್ವ ಮಿತಾಶನಮಿಕ್ಕೆ ಧಾತುವೋ ।
ಷವನೊಡವೆರ್ಚದಂತೆಸಗುವಾಪ್ತಜನಂಗಳನೆಮ್ಮ ವಿದ್ಯೆಯುಂ ॥
ನವವಿಧವಾಗೆ ಕಲ್ಪಿಸುವ ಜೋಯಿಸರಿಂ ನಿಜಲಕ್ಷಣಂಗಳಂ ।
ಭುವನದೊಳೆಯ್ದೆ ಸಾಱಿಸುವ ಬಲ್ಲಗೆ ಸೂಳೆಯುರಬ್ಬೆಗೊಪ್ಪುಗುಂ ॥ ೧೬

ಕಂತುಮಹೋತ್ಸವಂ ರತಿಯ ನೋಂಪಿ ವಸಂತನೃಪಾಲ ಪೂಜೆಯೊ ।
ತ್ತಂತಿಯಪೂರ್ವದಾನತಿಥಿ ಮಾಲಿಗೆಪ್ರಂಟಿಗೆ (?) ಜನ್ಮತಾರೆಯುಂ ॥
ದಿಂತತ್ರಿಕೀರ್ತಿಯುಂ ಪ್ರತಿದಿನಂ ತನಗಾಂ ಮಿಗೆ ಮಾಡಿದಳ್ಗೆ ದುಃ ।
ಖಂ ತಲೆದೋರ್ಪ್ಪವೋಲ್ ಮುಸಿದು ಬಂದಪಳಲ್ಲಿಗೆ ದೀಕ್ಷೆಗೋಸುಗಂ ॥ ೧೭

ದೇವಿಯ ಜಾತ್ರೆಯೆಂದು ಮಿಗೆ ಸಾಱಿಸಿ ಸಂಭ್ರಮದಿಂದನಂತವೇ ।
ಶ್ಯಾವಧುನಾಗರೀಕತತಿ ಸೈಪಱಗಿಂ ನಡೆನೋಟ್ಪನಂ ತುರಂ ॥
ಗಾವಳಿಮಧ್ಯದೊಳ್ ಮಿಸುನಿಯಂದಳವೇಱಿಸಿ ದಟ್ಟಮುಚ್ಚಿ ಶೋ ।
ಭಾವಹಮುಂ ನೆಗೞ್ಚುವುದು ಸೂಳೆಯ ರಬ್ಬೆಗೆ ತಕ್ಕುದಲ್ಲವೇ ॥ ೧೮

ಅದಲ್ಲದೆಯುಂ

ನಯದಿಂದರ್ಥಮನೀವವಂಗೆ ನಲವಿಂ ಕೂರ್ತಿರ್ಪುದುದ್ದಂಡಲೋ ।
ಭಿಯೊಳರ್ಥಂ ದೊರೆಕೊಳ್ಳದಿರ್ದೊಡಮನುಂ ಕೊಟ್ಟಂತೆ ಸಂತೋಷದು ॥
ದ್ಧಿಯನುಂಟಾಗಿಪ ದೀಯದಾಪಿನದಟಂ ತೋರ್ಪಾತನಂ ಸೂಳೆಗೇ ।
ರಿಯೊಳಿಲ್ಲರ್ ನಡೆನೋಟ್ಪನಂ ತೆಗೆವುದಾಂ ಪಾಡಲ್ತೆ ತಕ್ಕಾಜ್ಞೆಗಂ ॥ ೧೯

ಕುಡುವನಿತರ್ಥಮುಳ್ಳ ವಿಟನೊಳ್ ಮಿಗೆ ಕೂರ್ಪುದು ವಿತ್ತಹೀನನಂ ।
ಬಿಡುವುದು ಮಾತನಾಡೆ ಕಡುಮೆಲ್ಲಿದಳಪ್ಪುದು ಚಿತ್ತವೃತ್ತಿಯುಂ ॥
ಮೃಡನೊಳಗಾಗೆ ಕಾಣದವರ್ಪೊಲಿರ್ದೆಡೆಯೊಳ್ ಗಣಿಕಾಧಿಪತ್ಯಮುಂ ।
ಪಡೆವುದು ಸೂಳೆಯಂಗೆ ಚಿತಮೆಂಬುದು ಪೇೞ್ದೊಡಿದೊಂದು ದೋಷಮೇ ॥

ಕಡೆಗಣ್ಣೊಳ್ ಮಾತಾಡುವ |
ಬೆಡೆನುಡಿಯೊಳ್ ಮೆಚ್ಚುದೋಷಪೂರ್ದನ್ಯಗೋಲವಂ ||
ಪಡೆವಪ್ರೊಲಿಪ್ಪುರ್ದು ವಿಟರ್ಗೆ |
ಳ್ಕೊಡಮೆಯುನೀಳ್ಕೊಳ್ವುದಿದುವೆ ವೇಶ್ಯಾಧರ್ಮಂ || ೨೧

ನಗೆ ಬಗೆಯೊಲ್ಮೆ ನಲ್ಮೆ ಪೊಸಜಾಣ್ನುಡಿ ನಾಣ್ನುಡಿ ಪುರ್ಬುಜರ್ಬು ಕೆ ವ್ಮೆಗೆ ಮಿಗೆ ಕೆಲ್ಲೆ ನೋಟಮೊಡಗೂಟನುಗಲ್ಬದಕೂಮೆರ್ ಪೋಮೆರ್ ಪ್ರೊ ದರ್ಗೆಯೊಗೆವಿಚ್ಚೆ ಮೆಚ್ಚು ವಿಟರಂ ಕೊಬಡುವ ಪಾಡುವ ಗಾಡಿಯೆಂ ಬಗಣಿತಚೇಷ್ಟೆಗಳ್ ಮೊಱೆದಿರಲ್ ತಱಿಸಲ್ಕುದು ಸೂಳೆವಿದ್ಯೆಯೊಳ್ || ೨೨

ಮುಳಿಸಂ ಮಾಣ್ ಮಾಣ್ನೂರ್ಗಂಗನೆ ನಡೆ ನಡೆಯೆಂ ಪೇಟ್ಟುದಂ ಮಾ ಡು ಮಾಡೆಂ | ಚಲವೇನ್ನೊಳ್ ಬೇಡ ಬೇಡೆನ್ನಯ ನುಡಿಯಿನಿತಂ ಮೀಱಿ ದಿರ್ ಮೀಱುವೆಂ ಮ || ತ್ಕುಲಮಂ ಕೀಳ್ಮಾಡದಿರ್ ಮಾಡುವೆನಧಿಕತಪಂಗೆ ಯ್ಯದಿರ್ ಗೆಯ್ವೆನೆಂದ | ಗ್ಗಳಮಾಗಳ್ ತನ್ನ ತಾಯುಂ ತೊಱೆದು ಜಱೆದು ವೈರಾಗ್ಯಮಂ ತಾಳ್ದು ನಿಂದಳ್ || ೨೩

ಅಂತೆಂತಾನುಂ ತಿಳಿಪಿದೊಡಂ ತಿಳಿಯುದಂತಿರ್ದ ಕಾಮಮಂಜರಿಯಂ ಕಂಡು ಕೆಯ್ಮುಗಿದು ಮುನಿ ಮತ್ತಿಂತೆಂದಳ್:—

ಬೆಸಸಲ್ವೇಟ್ಟುದು ಕಾಮಮಂಜರಿಗೆಲೇ ಯೋಗೀಂದ್ರ ವೈರಾಗ್ಯಮಂ |
ಬಿಸುಡೆಂದಲ್ಲದೊಡಿಲ್ಲಿ ಬಂದಿಸಿಬರೀಗಳ್ ತೀರ್ಗಮಿದ್ದಂ ಪದಾ ||
ಬ್ಜಸಮೀಪಂ ದೊರಕಿತ್ತು ಪುಣ್ಯಮೆನುತುಂ ಮೆಯ್ಯಿಕ್ಕಿದಳ್ ತನ್ನ ಬಂ |
ಧುಸಹಸ್ರಂ ಬೆರಸಂತಪಳ್ ಮುನಿವರಂಗೇಟೇಱೆಮೆಂಬನ್ನೆಗಂ || ೨೪

ಅಂತನೇಕಬಂಧುಜನಂ ಬೆರಸು ದಂಡಪ್ರಣತೆಯಾದ ಮಾಧವಸೇನೆಯ ದೀನಭಾವಮಂ ಮುನೀಶ್ವರಂ ಕಂಡು ಕಾಮಮಂಜರಿಗಿಂತೆಂದಂ:—

ಎಲೆ ಮರುಳೆಯುಗ್ರತಪದಿಂ |
ಫಲವೇಂ ನಿಜಬಂಧುವರ್ಗಮಂ ನೆಱವಿಂದಂ ||
ಸಲಹುವುದೆ ಕೋಟಿತಪದಿಂ |
ದಿಳೆಯೊಳ್ ಮಿಗಿಲಕ್ಕೆ ಸಕಲಶಾಸ್ತ್ರಕ್ರಮದಿಂ || ೨೫

[ಎಂಬುದುಂ ಕಾಮಮಂಜರಿ]

ಕಳಿದ ಸುಖಂಗಳಂ ಪರೆದ ಜವ್ವನಮುಂ ದೊರೆಕೊಳ್ವದರ್ಥಮುಂ ।
ಚಳಿಸಿದ ರಾಜ್ಯಮುಂ ಸವೆದ ಸಂಪದಮುಂ ಮಗುೞ್ದಾಸೆಮಾಡಿಯುಂ ॥
ಮ್ಮೞಿಸುವರೇಕೆ ದುರ್ಮತಿಗಳಾಗದುದಾಗದಪ್ಪುದಪ್ಪದೆಂ ।
ದಳವಡೆ ಚಿತ್ತಮುಂ ಪಿಡಿದು ನಿಲ್ಲದೆ ತಲ್ಲಣದಿಂ ಧರಿತ್ರಿಯೊಳ್ ॥ ೨೬

ಎಂದು ತನ್ನಾಸೆಯ ದೆಸೆಯುಂ ಮಾಧವಸೇನೆಗೆ ಬಿಡಿಸಿ ಪೊತ್ತಂ ಮುನಿಗಿಂತೆಂದಳ್:—

ಅವರಿವರ ಮಾತು ನಿನ್ನಯ ।
ಕಿವಿಗೊಕ್ಕನ್ನಂ ಮಗುೞ್ದು ಕಳಿಪ್ಪುಪೊಡಾಂ ಜೀ ॥
ವವನಿಲ್ಲಿ ತೊಱೆವೆನೆಂದಾ ।
ಕೆ ವಧಾರ್ಥಂ ಮುನಿಯ ಕೆಯ್ಗುಡಾಯುಧಮಿತ್ತಳ್ ॥ ೨೭

ಅಂತು ತನ್ನಂ ಪರಿಚ್ಛೇದಿಸಿದ ಕಾಮಮಂಜರಿಯ ಮಾತಂ ಮುನಿನಾಥಂ ಕೇಳ್ದು ಮಾಧವಸೇನೆಗಿಂತೆಂದಂ:—

ಈವನವಾಸಾಯಾಸದ ।
ಬೇವಸದಿಂ ತಾನೆ ಬರ್ಪರ್ಗೆಯ್ದಾದಾಱುದಿನ ॥
ಕ್ಕಾವೆಡೆಗೆ ಪೋಪಪಳ್ ಸಲೆ ।
ನೀವೆಲ್ಲರ್ ಪೋಗಿ ನಿಜನಿವಾಸಕ್ಕೀಗಳ್ ॥ ೨೮

ಎಂಬುದುಂ ಮಾಧವಸೇನೆ ತನ್ನ ಮಗಳ ಮೊಗಮುಂ ನೋಡಿ,

ಮಳಯಜಚರ್ಚೆಯುಂ ತಳೆದ ದೇಹದೊಳೆಂತು ವಿಭೂತಿಯಾಂಪೆಯುಂ ।
ಜ್ಜ್ವಳಮಣಿಕಾಂಚಿಯಿಂ ಪಸೆವ ಮಧ್ಯದೊಳೆಂತುಗೆ ನಾರು ಸೀರೆಯುಂ ॥
ತಳೆವೆ ಸುಗಂಧಕುಂತಳದೊಳೊಪ್ಪುವ ಮೌಳಿಯೊಳೆಂತು ತಾಳ್ವೆ ಕೋಂ ।
ಮಳೆ ಜಡೆಯುಂ ರಸಾಯನಮನೊಲ್ಲದೆ ನೆಲ್ಲಿಯದೆಂತು ಕಂದಮುಂ ॥ ೨೯

ಹಾಸುಗಳಿಲ್ಲದೊಡೆಂತುಗೆ ।
ಪಾಸಱೆಯೊಳ್ ಪಡುವೆ ದಂಬುದೊಜವೆಯುದೆಂತ ॥
ಭ್ಯಾಸಿಸುವೆಯುಣ್ಮಲೆಯುಂ (?) ಮು ।
ತ್ತೋಸರಿಸಲ್ಕೆಂತು ತಾಳ್ವೆ ರುದ್ರಾಕ್ಷಿಗಳಂ ॥ ೩೦

ಕೆಳದಿಯರನುಜಾದು ಪೇೞೆಮೊ ।
ಬರ್ಗಳೆಂತು ಕಾನನದೊಳಿರ್ಪರ್ ಋಷಿಪರಿಚಯರ್ಗ ॥
ಬಳವೆಂತಪ್ಪುದು ನಿನಗು ।
ಜ್ಜ್ವಳಾಕ್ಷಿ ಬಿಡು ಮುಳಿಸನೂರ್ಗೆ ನತಿ ಪ್ರೊಡೆಮಡುವೆಂ ॥ ೩೦

ಎಂದೊಡವಳೆಂತುಂ ಬಾರದಿರ್ದುದಂ ಕಂಡು ಶೋಕಾನಳದಂದಹ್ಯಮಾ ನೆಯಾಗಿ ಬಂಧುಜನಂಬೆರಸು ಮಾಘವಸೇನೆ ನಿಜನಿವಾಸಕ್ಕೆ ಪೋದಳ್. ಇ ತ್ತಲಾದಿನಂ ಮೊದಲಾಗಿ ಕಾಮಮಂಜರಿ

ಪೂಗಿಡುಗಳ್ಗೆ ನೀರೆಱೆವ ಪುಷ್ಪವನೊಪ್ಪಿರೆ ತರ್ಪ ತತ್ತ್ವವಿ ।
ದ್ಯಾಗಮಮಂ ಮನಂಬಡೆದು ಕೇಳ್ವ ಯತೀಂದ್ರಪದಾಬ್ಜಸೇವೆಯಂ ॥
ಬೇಗದೆ ಮಾಳ್ಪ ವಲ್ಕವಸನಂಗಳನೊಪ್ಪುವ ಸೋಪಚಾರದಿಂ ।
ವಾಗಣಿಕಾಪುರಂಧ್ರಿ ಕೆಲವುಂ ದಿನಮಿರ್ದಳತೀವಭಕ್ತಿಯಿಂ ॥ ೩೧

ಕಮಲದಳಾಕ್ಷಿ ತನ್ಮುನಿವರೇಣ್ಯನ ಪಾವನದೇವತಾರ್ಚನಾ ।
ಸಮಯದೊಳಂಗಹಾರಕರಣಾಯತಪಸ್ತಸರೋಜದೃಷ್ಟಿಯಿಂ ॥
ಭ್ರಮವನೊಡರ್ಚಿ ಲಾಸ್ಯರಸಮಂ ಮರುಳಾಗಿಸುತಿರ್ಪ ಪದಾಂತದೊ ।
ಳ್ಪ್ರಮದಮೃಗಪಕ್ಷಿಸಂಕುಳಮುನಿ ಪರಿಯಿಂತೆಸೆದಿರ್ಪ ಳಾಸಗಂ ॥ ೩೨

ಉಪಹಾರಕ್ಕೆ ಸಮಸ್ತಭಕ್ಷ್ಯತತಿಯಂ ಮಾಧುರ್ಯವಪ್ಪಂತು ಮಾ ।
ಡಿ ಪದಾರ್ಥಂಗಳನಿತ್ತು ತನ್ನ ಕರನೈಪುಣ್ಯಂಗಳಂ ತೋರ್ಗಿಯೊಳ್ ॥
ಕೃಪೆಯಂ ಪೆತ್ತು ನಿರಂತರಂ ಪ್ರತಿದಿನಂ ಶಿಶ್ರೂಷೆಯಂ ಮಾಳ್ಪಳ್ ।
ನೃಪಥಂ ದುಷ್ಪಥಮೆಂದು ದೇಹಸುಖಮಂ ತಾನಾವಗಂ ಚಿಕ್ಕಿಸಳ್ ॥ ೪೦

ಇಂತನೇಕಪರಿಚರ್ಯೆಯಂ ಮಾಡುತುಂ

ಎಂದಿನ ತೆಱದಿಂ ಸತಿ ಮುನಿ ।
ವೃಂದಾರಕನಂಘ್ರಿಯಂ ಕರಾಬ್ಜದಿನೊತ್ತು ॥
ತ್ತೊಂದುಂ ಕಾರಣಮಿಲ್ಲದೆ ।
ಮುಂದಸ್ಮಿತವೆಸೆಯಲಂತವಳ್ ನಸುನಕ್ಕಳ್ ॥ ೪೧

ಅಂತವಳ್ ನಸುನಕ್ಕುದಂ ಮುನಿನಾಥಂ ಕಂಡು,

ಏನುಂ ಕಾರಣಮಿಲ್ಲದೆ ।
ಮಾನಿನಿ ನಸುನಕ್ಕೆಯೇಕೆಯೆಂದಾಮುನಿಪಂ ॥
ತಾನೊಸೆದು ಕೇಳ್ದೊಡಾಕೆ ನಿ ।
ಜಾನನನಂ ಬಾಗಿ ಬಾಗಿ ಮತ್ತೆ ಮತ್ತಿಂತೆಂದಳ್ ॥ ೪೧

ಲೋಕಂ ತ್ರಿವರ್ಗಮಂ ಸಮ ।
ಮೇಕೆಂಬುದು ಧರ್ಮಮಧಿಕಮೆನ್ನದೆ ದೇವಾ ॥
ನೀಕಕ್ಕೆ ಮತ್ಸರಂ ನಿ ।
ರ್ವ್ಯಾಕುಳದಿಂ ಸಮನೆನಿಪ್ಪ ತೆಱದಿಂದೀಗಳ್ ॥ ೪೨

ಸತತಂ ಪ್ರಾಜ್ಯಮನಾತ್ಮದೇಹಹಿತಮಂ ಸ್ವರ್ಗಾಪವರ್ಗೈಕಸ ।
ದ್ಗತಿಯಂ ಪಾವನವಸ್ತುವಂ ಪರಮರಕ್ಷಾಸಿದ್ಧಿಯಂ ದೋಷವ ॥
ರ್ಜಿತಮಂ ಜ್ಞಾನಲತಾಭಿವೃದ್ಧಿಯನಶೇಷಪ್ರೀತಿಯಂ ಲೋಕವಿ ॥
ಶ್ರುತಮಂ ಧರ್ಮಮನೇಕೆ ಮಿಕ್ಕ ಪುರುಷಾರ್ಥಕ್ಕಂ ಸಮಂ ಮಾಳ್ಪಿರೋ ॥

ಗಾಡಿಯೊಳರ್ಥಕಾಮವೆರಡುಂ ಗಳಿಸಲ್ಬಗೆನಂದು ಧರ್ಮಮಂ ।
ನೋಡಿದೊಡಂತದೆಲ್ಲಿಯದು ಸಂತತನಿರ್ಮಳಮಪ್ಪ ಧರ್ಮಮಂ ॥
ಮಾಡು ಪ್ರೌಢರ್ಥಕಾಮವೆರಡುಂ ಕಿಡವೆಂದಱಿದಿರ್ದ ಧರ್ಮದೊಳ್ ।
ಕೂಡುವರೇಕೆ ಮಿಕ್ಕ ಪುರುಷಾರ್ಥಮನಪ್ಪೊರೆನಿಪ್ಪ ಮಾನವರ್ ॥ ೪೪

ತಿಳಿ ಪ್ರೌಢಿವಲ್ತೆ ತತ್ತ್ವದ ತಿರುಳ್ಮಿಗೆ ಧರ್ಮದ ಧರ್ಮಶಾಸ್ತ್ರಮಂ ॥
ಗಳ ವಿವರಪ್ರತಿಷ್ಠೆ ಪರಮಾರ್ಥದ ಸಾರವನೇಕದರ್ಶನಂ ॥
ಗಳ ಮತವಲ್ತೆ ಲೌಕಿಕದ ಸೀಮೆಯೆನಿಪ್ಪುದು ಕಾಮಮಂಜರೀ ।
ಲಳನೆಯ ವಾಕ್ಯದೋಜೆ ಪರಿಭಾವಿಸೆ ಪೂರ್ಣರಸಾತಿರೇಕದಿಂ ॥ ೪೫

ಎಂದ ಕಾಮಮಂಜರಿಯೋಜೆಗೆ ಮುನಿನಾಥಂ ಪರಿತೋಷಂಬಡುವುದುಂ ಮತ್ತಮವಳಿಂತೆಂದಳ್—

ಸುರಪಂ ತಾಪಸಕಾಂತೆಯೊಳ್ ಶಶಿ ಗುರುಸ್ತ್ರೀಯೊಳ್ ಮುಕುಂದಂ ನಿರಂ ।
ತರಗೋಪೀಜನದೊಳ್ ಸರೋರುಹಭವಂ ತತ್ಪುತ್ರಿಯೊಳ್ ಮಾರುತಂ ॥
ಭರದಿಂ ಕೇಶಿಯ ನಾರಿಯೊಳ್ ಬಡಬೆಯೊಳ್ ಚಂಡಾಂಶುವೀಶಂ ಸಮ ।
ಸ್ತರುಷಿಸ್ತ್ರೀಯರೊಳೊಪ್ಪನಿಂ ಬೆರಸಲುಂ ದೇವತ್ವವೇಂ ಪೋದುದೇ ॥

ಎಂದು ಕಾಮಮಂಜರಿ ಅರ್ಥಕಾಮಂಗಳನೆಸಗಲ್ ಧರ್ಮಕ್ಕೆ ಹಾನಿಯಿಲ್ಲೆಂಬುದುಂ, ಋಷಿಯಿಂತೆಂದಂ—

ಸುಲಲಿತಧರ್ಮಮನಱಿವಂ ।
ತಿಳಿಯವು ಕೇಳರ್ಥಕಾಮಮುಮನಭಿರೂಪಂ ॥
ಫಲಮಂ ಪಡೆವ್ ಬಲ್ಲೊಡೆ ಕೋ ।
ಮಳ್ ಕೇಳ್ವಂ ಪ್ರಿಯದನಂದನಾಮುನಿಮುಖ್ಯಂ ॥ ೪೮

ಎಂಬುದುಂ;

ಪಶುಗಳನೋಪಿಪೆಸಲ್ದು ಕೃಷಿಯೊಳ್ ವ್ಯವಹಾರಮನೊಲ್ದು ಮಾಡಿ
ಯಾ । ರ್ಜಿಸುವುದು ವಿತ್ತಮಂ ಪಡೆದು ಸದ್ವ್ಯಯದೊಳ್ ಸಲಿಪಿಟ್ಟು
ಕೂರ್ತು ಸಾಧಿಸುವುದು ಧರ್ಮಮಂ ಧರೆಯೊಳೀಕ್ರಮಮರ್ಥದಸಿದ್ಧಿರಕ್ಷೆ
ಘಾ । ವಿಸು ಮುನಿನಾಥ ಧರ್ಮದೆಸೆಯಪ್ಪುದು ಲೋಕದಳುಂಟೆ ಸಂತತಂ॥

ಎಂಬುದುಮರ್ಥಸ್ವರೂಪಸಿದ್ಧಿಯುಕ್ತಿಯುಲ್ ಬಂದುದು: ಕಾಮಮೆಂತಿರ್ಪುದು ? ಎಂಬುದುಂ,

ನಿರುಪಮಕಾಮಮುಂ ಪೆಸರ್ಗೊಳಲ್ ಫಲಮಂ ತಿಳಿಯಲ್ಕೆ ಬಾರದ ।
ಚ್ಚರಿಯೆನೆ ದೃಷ್ಟಮಲ್ಲದೆ ಶ್ರುತಕ್ಕನು ಗೋಚರಮಲ್ತು ಸಂತತಂ ॥
ಪರಿಕಿಸಲಂತರಂಗಬಹಿರಂಗಸುಖಂ ತನಿವೆರ್ಚೆ ಯೋಗಮು ।
ಬ್ಬರಿಸೆಯನೂನಧರ್ಮಮೊದಗಿಪ್ಪುದು ತಪ್ಪದೆಲೇ ಮುನೀಶ್ವರಾ ॥ ೫೦

ನಿತ್ಯಂ ಚಿತ್ತಪ್ರಸನ್ನಂ ನಿರತಿಶಯಸುಖಂ ಜಾಡ್ಯವಿದ್ರಾವಣಂ ಮೋ ।
ಣತ್ಯಂತಪ್ರೀತಿಕಾಂತಿಪ್ರದಮುಭಯಮನಂಗೋತ್ಸವಂ ಸರ್ವಲೋಕ ॥
ಸ್ತುತ್ಯಂ ಚಾತುರ್ಯಪೂರ್ವಂ ನಿರುಪಮವಿಭವಂ ಕಾಮಕೇಳೀವಿಲಾಸಂ ।
ಸತ್ಯಂ ಕೇಳ್ ಯೋಗಿವೃಂದಾರಕ ಪಶುಮೃಗಪಕ್ಷಿಪ್ರತಾನಕ್ಕೆ ಸಾಧ್ಯಂ ॥

ಎಂಬುದುಮೀಪುರುಷಾರ್ಥದ ಫಲಮೆನಗೆ ಸಿದ್ಧಿಸುವುಪಾಯಮಂ ಮಾಡೆಂಬುದುಂ;

ಮೆಲ್ಲನೆ ಪ್ರೌಢಿ ಕಾಮುಕಳೆಯುಂ ಪಡೆದೋಷ್ಠಮನೀಂಟಿ ಮಾಂಜಿಯಾ
ಪಲ್ಲವಹಸ್ತದಿಂ ಸೆಳೆದು ಕುಂಭಕುಚಂಗಳೊಳಾಂಕಲಪ್ಪಿ ಮೆ ॥

ಳ್ಳೆಲ್ಲವೊಳಾಕೆ ನಾಣ್ಚುಡುಕಿ ನುಣ್ಗೊರಲಿಂ ದನಿ ಪೊಣ್ಮೆ ಚುಂಬಿಸು ।
ತ್ತೆಲ್ಲ ಸುಖಕ್ಕೆ ಸೀಮೆಯೆನಲಂಗಜಕೇಳಿಯನುಂಟುಮಾಡಿದಳ್ ॥ ೫೦

ಅನಂತರಂ,

ಜಡೆಗೆದಱಲ್ ವಿಭೂತಿ ಪರಿಯಲ್ ಪೊಸಕಾವಿಪಱಿಯಲ್ ಸಮಾಧಿ ಮುಂ ।
ಗಿಡಲುಪವೀತಮೆಯ್ದೆ ಪಱಿಯಲ್ ತಪಮೋಡೆ [ವಿನಿಶ್ಚಲಂ] ಮನಂ ॥
ಸಡಿಲಲನಂತರಂ ಮುನಿವರಂ ಸವಿಗಂಡವೊಲಂದು ತಾನೆ ಕೂ ।
ತೊರ್ಡರಿಸಿದಂ ಕರಂ ಸುರತಕೇಳಿಯನಾಕೆಯೊಳತ್ಯಪೂರ್ವಮಂ ॥ ೫೩

ಮತ್ತಂ,

ಪರ್ಣಕುಟೀರದೊಳ್ ತಳಿರ ತಳ್ಪದೊಳಿರ್ದು ಲಸತ್ಪರಾಗ್ರದಿಂ ।
[ಸ್ವರ್ಣದ ಕಾಂತಿಯಂ] ಮಿಗುವ ಕೆಂಜೆಡೆಯಂ ಪಿಡಿದೋಷ್ಠಮಂ ಶುಭಾ॥
ಕೀರ್ಣಮೆನಲ್ಕೆ ಚುಂಬಿಸಿ ಕರಂ ಬಿಗಿಯಪ್ಪಿದ ಕಾಮಮಂಜರೀ ।
ಪೂರ್ಣಕುಚಾದ್ರಿಯೊಳ್ ಸುಖಸಮಾಧಿಯನಾಂತೆಸೆದಂ ಮುನೀಶ್ವರಂ ॥

ಸುರತಸ್ವೇದಾಂಬುವಿಂ ಮಜ್ಜನಕೆಱೆದೊಡನಾಡಾಡಿ ಲಜ್ಜಾಪ್ರಸೂನೋ
ತ್ಕರಮಂ ಧೈರ್ಯಾದಿನಾನಾಗುಣಸಮುದಯನೈವೇದ್ಯಮಂ ತೀವಿ ಕಾಂತಾ॥
ಗುರುವಕ್ಷೋಜಾತಲಿಂಗಕ್ಕೆಱಗಿ ಪದೆದಲರ್ಗಣ್ಗಳಂ ಮುಚ್ಚಿ ಯೋಗಂ ।
ಬೆರಸೊಪ್ಪಿರ್ದಂ ಮಯೂರಾಸನಮೆಸೆಯೆ ಮರೀಚಿವ್ರತೀಂದ್ರಂ ನಿತಾಂತಂ॥

ಅಂತು ಪರಿವಸೆಗ ಕಾಮಪುರುಷಾರ್ಥಫಲಸಿದ್ಧಿಯಂ ಪಡೆದು ಮತ್ತಂ

ಎಲೆ ಸತಿಯೆ ಕಾಮಮೆಂಬುದು ।
ತಿಳಿಯಿತ್ತಪಱುಳ್ಳ ಪರಿಕರಂಗಳವೇನೆಂ ॥
ದಳವಡೆ ಪೇಳೆಂದೊಡೆ ಕೋ ।
ಮಳೆ ಪದೆದಾಯತಿವರಂಗೆ ಮತ್ತಿಂತೆಂದಳ್ ॥ ೫೬

ಕುಸುಮಂ ಕರ್ಪೂರತಾಂಬೂಲಕಮನುಪಮಕಸ್ತೂರಿಕಾಚಂದನಂ ಸ।
ದ್ವಸನಂಗಳ್ ಕಾಮಸಂದೀಪನಕರಮವು ಚಂಪಾಪ್ರರಸ್ಥಾನದೊಳ್ ನಾ ॥
ಡೆ ಸಮಗ್ರಂ ದೇಸ ನೀಮಲ್ಲಿಗೆ ಪದೆದು ಬರಲ್ತೋರ್ಪೆನೆಂದಂತವಳ್ ತಾ।
ಪಸನಂ ಬೇಳ್ಕ್ಮಡಿ ಬೇಗಂ ನಲವಿನೊಳೊಡಗೊಂಡುಯ್ದಳಾಶ್ಚರ್ಯ
ಮಾಗಲ್ ॥ ೫೭

ಅದೆಂತೆನೆ—

ಮದದೊದವಂ ದುರಾಸೆ ಗುಣಮಂ ಧನಲೋಭಮನೂನವಿದ್ಯೆಯಂ ।
ಮದನಮನುರಾಗಮಂ ಬಹಳಚಿಂತೆ ಪರಾಕ್ರಮಮಂ ದರಿದ್ರಮು ॥
ಭ್ಯುದಯಮನೆಯ್ದೆ ದುರ್ಗುಣಚಯಂ ಕಿಡಿಪಂತೆ ಮುನೀಂದ್ರಚಿತ್ತಮಂ ।
ಕದಡಿಸಿ ತನ್ನ ಬೆಂಬಳಿಯೊಳುಯ್ದಳದೋಷನನಾಮುನೀಶನಂ ॥ ೫೮

ತಲೆಯಂ ಬೋಳಿಸಿ ಪೂಗಳಂ ಕಿವಿಗಳೊಳ್ ಸೆಕ್ಕಿಟ್ಟು ಕಣ್ಗಳ್ಗೆ ಕ ।
ಜ್ಜಳಮಂ ತೀವಿ ಹರಿದ್ರಮಂ ತೊಡೆದು ಮೆಯ್ಯೊಳ್ ಧೌತಕಾಪೀನದೊಳ್ ॥
ಬಳಿಕಂದೊಪ್ಪುವ ಘಂಡಿಯೊಳ್ ನಿಱಿಸಿ ತನ್ನಾಗಾರಕೆ ಕೊಂಡುಯ್ಯಲಾ ।
ಗಳದಿರ್ದಂದುದನೇಕಪೌರನಿಕರಂ ನೋಡಲ್ಕೆ ಯೋಗೀಂದ್ರನಂ ॥ ೫೯

ಅಂತಾಮುನಿಯುಂ ತಂದು ಚಂಪಾಪುರದೊಳಗಣ್ಗಂ ಕೊಂಡು ಪೋಗಿ

ಆಮುನಿನಾಥಸಮೇತಂ ।
ಕೋಮಳೆ ಸಲೆ ಸಿಂಹವರ್ಮನಾಸ್ಥಾನಮನು ॥
ದ್ದಾಮಮೆಸೆಯಲ್ಕೆ ಪೊಕ್ಕು ಸ ।
ಭಾಮಧ್ಯದೊಳಾಕೆ ನಿಂದಿರಲ್ ನಲವಿಂದಂ ॥ ೬೦

ಚೇರಂ ವಾರುವಕೋಟಿಯಂ ಗಜಘಟಾಸಂತಾನಮಂ ಪಾಂಡ್ಯನೆ ।
ಲ್ಲಾರತ್ನಾಭರಣಂಗಳಂ ಪಡೆದು ಚೋಳಂ ಸಿಂಹಣಂ ಪದ್ಮಿನೀ ॥
ನಾರೀಸಂತತಿಯಂ ನಿಜಂ ಕಳಪಿದಂ ಚಿತ್ತ್ರಸು ನೀನೆಂಬ ತ ।
ತ್ಸಾರಂಭಂ ಮಿಗೆ ಸಂಧಿವಿಗ್ರಹಿಗಳಿಂದೊಪ್ಪಿದುದೊಡ್ಡೋಲಗಂ ॥ ೬೧

ಅಂತಿರ್ದೊಡ್ಡೋಲಗದೊಳ್ ಕಾಮಮಂಜರಿ ಮುನಿಪನ ಪೆಗಲೊಳ್ ಕೈ
ಯ್ಯನಿಟ್ಟಿರ್ದಳಂತದಂ ನೃಪಂ ಕಂಡು,

ನಸುನಗುತೆ ನೃಪವರಂ ತಾ ।
ಪಸಸಹಿತಂ ಕುಳ್ಳಿರಬಲೆಯೆನಲವಳಭಿನಂ ॥
ದಿಸಿ ರುಷಿಯ ತೊಡೆಯ ಮೇಲೊ ।
ಳ್ಪೊಸೆಯಲ್ ಕುಳ್ಳಿರ್ದಳಿರ್ದ ಸಮಯಾಂತರದೊಳ್ ॥ ೬೨

ನೆರೆದಾಸ್ಥಾನದೊಳೆಳ್ದು ಬಂದು ಪೊಡೆಮಟ್ಟಾಂ ಸೋಲ್ತೆ ನೀಕಾಮಮಂ ।
ಜರಿ ಗೆಲ್ದಳ್ ಕಡುಬಾಪೆಗೆಯ್ದೆ ಶಟದಿಂ ತೊಟ್ಟಿತ್ತದೆ ನಾಸೀಕಗಂ ॥

ದರಸಂಗೊರ್ಬ ವಿದಗ್ಧೆ ಕೈಮುಗಿದು ಪೋಗಲ್ ಮತ್ತೆ ತದ್ರೂಪನಾ |
ದರದಿಂ ಮನ್ನಿಸಿ ಕಾಮಮಂಜರಿಯುಮಂ ಪೋಗೆಂದನಾನಂದದಿಂ॥ ೬೩

ಅಂತರಸಂ ಕಾಮಮಂಜರಿಗೆ ಗಣಿಕಾಧಿಪತ್ಯಮಂ ಕೊಟ್ಟು ಕಳಿಪಲಾ ಕಾಂತೆಯಾಸ್ಥಾನದಿಂ ಪೊಱಮಟ್ಟು ತನ್ನ ನಿಜ ಮುಖಾರವಿಂದಮಂ ನೋಡಿ

ಮುನಿಗೆ ಕರಕಮಳಮಂ ಮುಗಿ |
ದಿನಿತಾಯಾಸಕ್ಕೆ ತಂದೆ ನಾಂ ನಿನ್ನಂ ಮೆ ||
ಲ್ಲನೆ ನಿನ್ನ ಪರ್ಣಶಾಲೆಗೆ |
ಮುನಿ ಬಿಜಯಂಗೆಯ್ಯೆನುತ್ತೆ ಕಾಲ್ಗೆಱಗಿದಳ್ || ೬೪

ಆನುಡಿ ಕರ್ಣಶೂಲಮೆರ್ದೆಯಂ ಬಗಿವುರ್ಚುವ ವಜ್ರಮಂತ್ರಮಾ |
ಲಾನಲನೇತ್ರೆಯೆಂಬ ತೆಱನಾಗಿರೆ ಸುಟ್ಟನ ಸುಯ್ಯ ಪರ್ವಮಂ ||
ಜಾನಿಸಿ ಚೇಷ್ಟೆಗುಂದಿ ಮತಿಗೆಟ್ಟು ಮನಃಪರಿತಾಪದಿಂ ಸರೋ |
ಜಾನನಮೆಯ್ದೆ ಬಾಡೆ ಬೆಱಗಂ ಪಡೆದಂ ಮುನಿಮುಖ್ಯನಾಕ್ಷಣಂ || ೬೫

ಅಂತು ಬೆಱಗಾಗಿ,

ಎಲೆ ಸೊಬಗೆ ನಿನ್ನ ದೆಸೆಯಿಂ |
ತೊಲಗಲ್ ಕಾಲೇೞವೇವನೇಕಾರಣಮೊ ||
ನ್ನೊಲವಂ ಕಿಡಿಸಿ ಕರಂ ಕೋ |
ಟಲೆಗೊಳಗಾಗಿಸುವೆ ಪೇೞ್ ಸರೋಜದಳಾಕ್ಷೀ || ೬೬

ಎನ್ನೊಡನೊರ್ವಳ್ ಮಚ್ಚರ
ದಿನ್ನಾಣುಳ್ಳಕೆಯಾಮರೀಚಿವ್ರತಿಯಂ ||
ತನ್ನಯ ಸೊಬಗಂ ತಂದಪ |
ಳನ್ನಯ ದೊರೆಯೆಂದೊಡಾನೆ ತಂದಪೆನೆಂಗೆಂ || ೬೭

ಎಂದೊಡೆನ್ನ ವಿರೋಧಿಯಪ್ಪ ಮದನಮಂಜರಿ ಮತ್ತಮಿಂತೆಂದಳ್ —

ಸುಂದರಿ ಮರೀಚಿಯುಂ ನೀಂ |
ತಂದೊಡೆಯಾಂ ನಿನಗೆ ದಾಸಿಯಾದಪೆನಿದು ಮಾ ||
ಣ್ದೆಂದೆನಗೆ ದಾಸಿ ನೀನೆನ |
ಗೆಂದೊಡೆ ಬಂದೆಂ ನಿಜಾಶ್ರಮಕ್ಕಾದರದಿಂ || ೬೮

ಅಂತು ಬಂದು ನಿಮ್ಮಡಿಯನೆಂತಾನುಮೊಂದುಪಾಯದಿಂ ತಂದು,

ನಿನ್ನ ದೆಸೆಯಿಂದಿಳಿಸಿದ ।
ಮನ್ನಣೆಯುಂ ಪಡೆದನೆನ್ನ ಪಗೆಯುಂ ಗೆಲ್ದಂ ॥
ನಿನ್ನ ಪದಸೇವೆ ಭಾವಿಸ ।
ಲೆನ್ನರುಹಮುಂ ರಕ್ಷೆಗೆಯ್ವುದೆಲೆ ಮುನಿಮುಖ್ಯಾ ॥

ಎಂದು ಕೆಯ್ಗಳಂ ಮುಗಿದನುಷ್ಠಾನಂಗೆಟ್ಟು ದಾತ್ತ ಮುಕ್ತ ಬಿಂದುಗೆ
ಯ್ದಿಮೊಂಬುದುಂ:

ಜಡೆಗಳ್ ಪೋದುವು ತನುವಿನೊ ।
ಳಡರ್ದರಿಸಿನಮಾಜಿದೆನ್ನ ಕೌಪೀನಂ ಪೋ ॥
ಯ್ತುಡಿ ನಡೆಯುವತ್ತಲಿನ್ನು ।
ವಿಡೆಯೊಳ್ ಪೋಗಿರ್ಪೆನೆಂತೊ ಪೇಟು ದಯೆಯಿಂದಂ ॥ ೭೦

ಬಗೆಗೆರವಾದೆನೆನ್ನ ನಿಜವೃತ್ತಿಗೆ ಸಲ್ಲದೆ ಪೋದೆನೆಲ್ಲರಾ ।
ನಗೆಗೆಡೆಯಾದನಲ್ಪಸುಖಮೆಂದು ವಿಚಾರಿಸದಾದೆನೆಯ್ದೆ ಲ ॥
ಜ್ಜೆಗೆ ಪೊಱಗಾದನಂಗಜನ ಬಾಣದ ಕೋಳ್ಗೊಳಗಾದೆನಾಸೆ ಕೈ ।
ಮಿಗೆ ಲಘುವಾದೆನಿನ್ನು ನಿರ್ಪ್ಪದೇನೆಲೆ ಕಾಮಿನಿ ನಿನ್ನ ದೂಸಱಿಂ ॥ ೭೧

ಎಂದೊಡಂ ಮಱುಮಾತುಗುಡದಿರ್ದುಂ;

ಕುಲಮುಂ ಚಾರಿತ್ರಮುಂ ಸುವ್ರತನಿಯತಮನಾಚಾರಮುಂ ಧರ್ಮಮುಂ
ಮೆ । ಯ್ವೊಲವಂ ಸನ್ಮಾರ್ಗಮುಂ ಭಾವಿಸಲಿಹಪರಲೋಕಂಗಳಂ ನೀತಿ
ಯುಂ ನಿ ॥ ರ್ಮಲಯೋಗಧ್ಯಾನಮುಂ ತತ್ಕ್ಷಣದೊಳೆ ಕಿಡಿಸಿತ್ತದ್ಭುತಂ
ನೋಡಲಿಂತೀ । ಲಲನಾಸಂಸರ್ಗಮುಂದುಮ್ಮಳಿಸಿ ಕಡುಬಟ್ಟಿಲ್ದಂ ಮರೀಚಿ
ಪ್ರತೀಂದ್ರಂ ॥ ೭೨

ಅಂತು ವಿಹ್ವಳೀಭೂತಹೃದಯನಾಗಿ,

ಮದಮುಱಿದಾನೆಯಂತೆ ವಿಷಮೋಡಿದ ಪನ್ನಗದಂತೆ ಬಲ್ಪುಗುಂ ।
ದಿದ ಮೃಗವೈರಿಯಂತೆ ಕಡುಪಾಱಿದ ಭಾಸ್ಕರನಂತೆ ಕಾಂತಿ ಬ ॥
ತ್ತಿದ ಸಸಿಯಂತೆ ಬೇರುಡಿದ ಪಾದಪದಂತೆ ಕುಲಪ್ರಸಿದ್ಧಿ ಪಿಂ ।
ಗಿದ ಬುಧನಂತೆ ಸತ್ವಮುಱಿದಾಯೆಡೆಯಿಂ ತಳರ್ದಂ ಮುನೀಶ್ವರಂ ॥ ೭೩

ಎಂದು ಬಿಲ್ವಕುಜದ ಮೇಲೊಳಿರ್ದ ಮಲೀಮಸತಾಪಸಂ ಕಡೆಯೊಳಿಂತೆಂದಂ:—

ಆಪಾತಕಕೊಳಗಾದನು ।
ತಾಪಂ ತನಿವೆರ್ಚೆ ಪತ್ತೆ ಪೂರ್ವಾಶ್ರಮದಿಂ ॥
ರೂಪಂ ಪಡೆದಪೆನೆಂಬಾ ।
ಪಾಪಿಷ್ಠ ಮರೀಚಿಯೋಗಿ ತಾನೆಂದೆಂದಂ ॥ ೭೪

ಎಂದಾತಂ ಪೇಳ್ದೊಡಾಂ ವಿಸ್ಮಯಸ್ವಾಂತನಾಗಿರ್ಪುದುಂ ಮಗುಳ್ದಾ ಮಹರ್ಷಿಯಿಂತೆಂದಂ:—

ದುಸ್ಸಂಗದಿಂ ಮದೀಯತ ।
ಪಸ್ಸಾಮರ್ಥ್ಯಂ ಸಡಿಲ್ದುದೊಲವಿಂ ಪೇಳ್ವೆಂ ॥
ನಿಸ್ಸಂದೇಹಮೆನಲ್ಕೆ ಪು ।
ನಸ್ಸಂಧಾನದೊಳೊದಲ್ದ ನಿನ್ನ ಸ್ವಮತವಂ ॥ ೭೫

ಅನ್ನಗವಿಹಾಚಂಪಾಪುರದೊಳ್ ಕತಿಪಯದಿನಂಗಳಂ ಕಳೆಯೆಂಬುದುಮಾಂ ಮಹಾಪ್ರಸಾದಮೆಂದೆಂಬ ಸಮಯದೊಳ್

ಎನ್ನಿಂದಂ ದ್ವಿಜರಾಜಸತ್ಕುಲಮಹಾತೇಜಂ ಕರಂ ಕುಂದಿದ ।
ತ್ತೆನ್ನಿಂದಂ ಕುಮುದಂ ಮುಸುಳ್ದು ಕೊರಗಿತ್ತಾ ದೋಷಮೆಂತಿರ್ಕೆ ಮ ॥
ತ್ತೆನ್ನಿಂ ವಿಷ್ಣುಪದಕ್ಕೆ ಕಾಯ್ಪುದಗಿದತ್ತೆಂದಬ್ಜಿನೀವಲ್ಲಭಂ ।
ತನ್ನುದ್ಯೋಗದೊಳಿರ್ದುದಂ ತಪಮಿರಲ್ ತತ್ಪಶ್ಚಿಮಾಶಾದ್ರಿಯಂ ॥ ೭೬

ಅಂತು ಪಗಲೊಡೆಯನ ಮರೀಚಿ ಮರೀಚಿಯೊಡನಂತರ್ಮುಖವಾಗಲೊಡಂ,

ಮೃಗಗಣಮಿರ್ಕೆಯಂ ಖಗಕುಲಂ ನಿಜಕೋಟರಮಂ ಬಟಿಲ್ಕೆಯ ।
ಧ್ವಗತತಿಯೂರ್ಗಳಂ ವಿಟಜನಂ ಗಣಿಕಾಜನವಾಲಯಂಗಳಂ ॥
ಗಗನಮನುರ್ವಿಯಂ ತಿಮಿರಮಕ್ಷಿಗಳಂ ಸುಖನಿದ್ರೆ ಸಾರ್ದಿರಲ್ ।
ಖಗನಪರಾದ್ರಿಯಂ ಪಡೆದು ಸಾರ್ದನನಂಗನೊಳೋಜೆ ಕೈಮಿಗಲ್ ॥ ೭೭

ಅಂತೊಂದೆಸೆಯನೊಂದೊಂದು ಸಾರ್ದಿರಲ್ ಮರೀಚಿ ಎನ್ನಂ ತನ್ನಾಶ್ರಮದೊಳಿರುಳಂ ಕಳೆಯಲ್ವೇಳ್ದೊಡಂತೆಗೆಯ್ವೆನೆಂದುಮಾರಾತ್ರಿಯನಲ್ಲಿ ಕಳೆದುದಯವಾಗಲೊಡನಾತನಿಂ ಬೀಳ್ಕೊಂಡು ಚಂಪಾಪುರದೊಳಗನೆ ಬರ್ಪಾಗಳ್

ಅವನತಕಂಧರಂ ಘನವಲೀಪುಸದೇಹನತೀವದುಃಖಸಂ ।
ಭವಮುಖನಶ್ರುವಾರಿಪರಿಲಗ್ನ ನಿಜಾವಯವಂ ದುರಂತಮಾ ॥
ದವಿರಳಖೇದಚಿಹ್ನನತಿಚಿಂತೆಯೊಳರ್ದನನೂರುಜಾಧ್ವವೇ ।
ಷವನೊಳಕೊಂಡದೊರ್ಬನಭಿಮಾನವನೊಕ್ಕು ದಿಗಂಬರತ್ವದಿಂ ॥ ೭೮

ಅಂತಿದಾರ್ತನಂ ಕಂಡು- ನೀನಾರೀದುಃಖಭಾಜನಮಪ್ಪ ತಪಕ್ಕೆ ಕಾರಣ ಮೇಂ, ನಿನ್ನ ಪೆಸರೇನೆಂಬುದುಮಾತನಿಂತೆಂದಂ.—

ಎನ್ನ ಪೆಸರ್ ಸಾಂದರಕಂ ।
ಮನ್ನಂ ಬಟಾಕಂ ವಿರೂಪಕಂ ನೀನೆಂದಿಂ ॥
ತೆನ್ನನತಿಧೂರ್ತರೆಲ್ಲರ್ ।
ಬನ್ನಂಬಡಿಸಿದೊಡಮೀತಪಕ್ಕೊಳಗಾದೆಂ ॥ ೭೯

ಎಂದೊಡಾಧೂರ್ತನಿಕರಂ ನಿನ್ನಂ ನಿಷ್ಕಾರಣಂ ಬಂಗಂಬಡಿಸಿದ ತೆಱನೆಂ ತೆಂದಾಂ ಕೇಳಲಾತನೆನ್ನೊಳಿಂತೆಂದಂ —

ನಂದ ಧನಮಿತ್ರನೆಂಬಂ ।
ಸಾಂದರ್ಯಶರೀರನಪ್ಪನಾತನೊಳೆನ್ನೊಳ್ ॥
ಕುಂದದ ಮುಚ್ಚರವಂ ಕಡು ।
ಪಿಂದೆಸಗಿತ್ತಿಲ್ಲಿ ಸುಟಾವ ಧೂರ್ತಸಮೂಹಂ ॥ ೮೦

ಧನಹೀನಂ ಧನಮಿತ್ರಂ ।
ಧನಮುಳ್ಳವನಾವನಸ್ವರೂಪಂ ಚಿದನ್ ॥
ಪನಿವಾಸಿಯಾನದರ್ಕಂ ।
ದೆನಗವುವಂಗಂ ವಿದೂಷಕರ್ ಪಗೆವ್ರೆಯ್ದರ್ ॥ ೮೧

ರೂಪು ಗುಣಂ ಶೀಲಂ ವಿ ।
ದ್ಯಾಪರಿಣತೆ ಸಾಕುಮಾರ್ಯಮತಿಚಾತುರ್ಯಾ ॥
ಳಾಪಮಿವುಳ್ಳೊಡೆ ಧನಕುಪ ।
ತಾಪಮದೇವುದೊ ನರರ್ಗೆ ವಸುಧಾತಳದೊಳ್ ॥ ೮೨

ಮನಸಿಜರೂಪಂ ಕುಲಜಂ ।
ವಿನಯವಿಧಂ ಸುಭಗಮೂರ್ತಿ ವಿದ್ಯಾಧಾರಂ ॥

ವಸಿತಾನನಪಿ ಯುಂ ಬಹ ।
ಧನನುಳ್ಳವನಲ್ತೆ ಲೋಕಸಿಂತ್ರಿಕ ನಂದಿಂ ॥ ೮೩

ಎಂಬರ್ಥಪಕ್ಷಪಾತದಿಂದೆನ್ನಂ ಸ್ವರೂಪಪಕ್ಷಪಾತದಿಂ ಧನಮಿತ್ರನಂ ಕೊಂಡು ಕೊನೆವರ್ಗಂ ವೈರಮಂ ಬಳೆಸೆ ವೈರಂ ಕೈಗಟ್ಟಿಯಾಂ ಮಿಗಿಲ್ ತಾಂ ಮಿಗಿಲೆಂಬುವಂ ಧೂರ್ತಜನಂಗಳ್ ಕೇಳ್ವಂತೆಂದರ್:—

ನಿಮ್ಮಬ್ಬರ ಸೌಭಾಗ್ಯದ ।
ಹೆಮ್ಮೆಗೆಯುಂ ಸುಭಗೆ ಕಾಮಮಂಜರಿ ಪಱಪಂ ॥
ದೊಮ್ಮೆ ಪರೀಕ್ಷಿಸಿ ಪೇೞ್ದೊಡೆ ।
ನಿಮ್ಮಯ ಹೀನಾಧಿಕತ್ವಮತಿಸುತಿವತೆಗುಂ ॥ ೮೪

ಎಂದೊಡಾಪಟರುಂ ಕಾಮಮಂಜರಿಯೆಡೆಗೆ ಧೂರ್ತದೂತರಂ ಕಳು ಪಲುಂ

ಧನಮುಳ್ಳಾತಂ ಬಟಂ ಜಾಣೊಡೆಯನಧಿಕನುರ್ವೀಶ್ವರಂ ಮನ್ಮಥಂ ಸಜ್ಜನನೆಲ್ಲಾ ವಿದ್ಯೆಯೊಳ್ ಬಲ್ಲವನತಿಸುಭಗಂ ಭೋಗಿಲೋಕಪ್ರಿಯಂ ಮೋಹನರೂಪಂ ಸತ್ಕಳಾಪಂ ಸಕಲಗುಣಯುತಂ ಸತ್ಕುಲೀನಂ ಜಗತ್ಖ್ಯಾ ।
ತನಿಳಾಸಂಪ್ರೀತನುತ್ಪಾದಿತಶುಭಚರಿತಂ ಸಂತತಾಕಾರಪ್ರಾಜ್ಯಂ ॥ ೮೫

ಎಂದವಳೆನ್ನಂ ಪರಿಗ್ರಹಿಸಿ ಧನಮಿತ್ರನನುದಾಸೀನಂಗೆಯ್ದುದಱಿನಾನವಳೊಳ್ ಪ್ರೀತಿಯಿಂ ಪುದುವಾೞ್ಕೆಯಿಂಟರಲ್ ಕಿಱಿದು ದಿನದಿಂ ಮೇಲೆ

ಗಳಸಿದರ್ಥವನವಳೇ ।
ಬ್ಬಳಿಗೊಂಡಾ ಕಾಮಮಂಜರೀಸತಿಯೆನ್ನಂ ॥
ಕಳವ್ರಾವನುಱಿವ ತುಂಬಿವ್ರಾ ।
ಲಳಿಕುಂತಳೆ ಪೊಱಗೆ ನೂಂಕಿ ಕಳೆವಳ್ ಬೇಗಂ ॥ ೮೬

ಅಂತವಳ್ ನೂಂಕಿದೆನ್ನಂ ಕಂಡು ಧೂರ್ತರ್ ವಿರೂಪಕನೆಂದು ಪೆಸರಂ ಕೊಟ್ಟುಪಹಾಸ್ಯಂಗೆಯ್ಯಲೊಡಂ ಖಿನ್ನನಾಗಿ ದಿಗಂಬರತ್ವಮಂ ಪಡೆದೆನೆಂಬುದುಮಾತನನಾಶ್ವಾಸಿಸಿ ಅಲ್ಲಿಂ ತಳರ್ದು ಪುರದೊಳಗೆ ಬರ್ಪಾಗಳ್

ರಾಜಕುಮಾರಕರ್ ನಿಜವಿನೋದಿಗಳಂಗವಿಕಾರಿಗಳ್ ಕಳಾ ।
ಯೋಜಕರರ್ಥಿಗಳ್ ಸುಭಗಮೂರ್ತಿಗಳೊಪ್ಪುವ ನಾಗರೀಕನಾ ॥

ನಾಜನಮುಂದು ಸೊಂಪೆಸೆವ ಮಂಠಯದೊಳ್ ನೆರೆಮತ್ತವಂ ಮಿಗಲ್ |
ಜ್ಜೂಜುಗಳಂ ಸಮಗ್ರಮೆನಲಾಡುತಿರಲ್ ಪದೆದಲ್ಲಿಗೆಯ್ದಿದಂ ॥ ೪೭

ಸಂದಿ ಕಳಂತಿ ಗಜಾಗರ |
ಪ್ಪೊಂದಜ್ಜಂ ಕೊಂಡು ಕವಡೆಯುಂ ತೂಗಿಯಿನಿ ॥
ತ್ತೆಂದುಟಿ ಕೈಚಳಕಂ ಮಿಗೆ |
ಚೆಂದಮೆನಲ್ ಲಗ್ಗದೋಟಲಾಡುತ್ತಿರ್ದರ್ ॥ ೪೮

ಅದಲ್ಲದೆಯುಂ,

ಸದರದೆ ದಾಯುಮಂ ಪಿಡಿವ ವಿತ್ತಮನೊಡ್ಡುವ ಜೊತ್ತುಗಾಱರಿಂ |
ದಿದಿರವರಂ ಕೆಗಳ್ಚುವ ಘಾಳಿಸಿ ಮೆಯ್ಯ್ಯಱಿದಕ್ಷಮಂ ಕರಾ ॥
ಗ್ರದಿನುಱೆ ದಂಡೆಗೊಳ್ವ ತೆಗೆಯಾಗಳೆ ತಾಗಿತೆನಲ್ಕೆ ಸಾರಿಯಂ |
ಕೆದಱುವ ನೆತ್ತಗಾಱರ ವಿನೋದಮನೀಕ್ಷಿಸುತಿರ್ದನುಮಿರ್ಪಾ ॥ ೪೯

ಅಂತಾವಿನೋದಮಂ ನೋಡುವೆನೆಂದು ಕುಳ್ಳಿರ್ದರ್ಗಳುಂ,

ಸಾರಿಯನುಂಟುಮಾಡಿ ನೆನೆದೊತ್ತಿದ ದಾಯುಮೆ ಬೀಟಿಲಾಮರ್ ವಿ |
ಸ್ತಾರಮನೊಯ್ವನೀದ್ವಿಗುಣದಿಂ ದಳದಾಯುವನೊಯ್ವ ಲೇಸು ಕೈ ॥
ವಾರದೊಳಕ್ಷಮಂ ಪಿಡಿದು ಘಾಳಿಪನಾವನೆನ್ನ ಮುಂದೆನು |
ತ್ತೂರಿಗದಿಟ್ಟನೊರ್ವನತಿಭಾಷೆಯುನಗ್ಗಳಮಾಗಲಾಡಿದಂ ॥ ೫೦

ಅಂತವನುಚ್ಛೃಂಖಲಮಾಗ್ಬಲಮಂ ಬೆಱೆತಾಡು ವ್ರದಂ ಕಂಡಾನಿಂತೆಂದೆಂ:—

ಬೇಡಿದು ಭಾಷೆಯೇಕೆ ಪಿಡಿ ದಾಯುವನಾವಿರೊತೇಟೆನುತ್ತಲಾ |
ನೇಡಿಸಲಂತವಂ ಜರೆದು ಕೋಪಿಸಿ ಬಲ್ಲೊತೆ ಬಂದು ಕುಳ್ಳಿರಾ ॥
ನಾಡುವೆನೆನ್ನ ನಿನ್ನ ಧನವೃಕ್ಕನಿತರ್ಕ್ಕನಬೆಟ್ಟಿ ಸಾರಿಯಂ |
ಪೂಡಿದೆನಕ್ಷಮಂ ಪಿಡಿದು ಸಾವುಗೆಯಾವವನೆಂದು ನೋಡಿದಂ ॥ ೫೧

ಎಂಬುದುಂ ಮತ್ತಮವನಿಂತೆಂದಂ:—

ಆರಿದಿರಾದೊಡಾಡಿದಪೆನೆಕ್ಕುಡಿಯುಂ ಪತೆ ಪಂಚದಾಯುಮಂ |
ವೀರವಿಳಾಸಮಂ ತಗರಸನ್ನೆಯನ್ನೆದೆರಡಂ ನೆಗೆಟ್ವ ಚಾ ॥
ಸಾರಿಯನಾಱು ಪನ್ನೆರಡನೊಪ್ಪುವ ರಾಜಕುಮಾರನಂ ಮಹೋ |
ದಾರವನೊಡ್ಡಿಗೊಡ್ಡನೆನುತೆನ್ನನನಂ ಕಡುಪಿಂ ಕೆರಳ್ಚಿದಂ ॥ ೫೨

ಇನ್ನು ಮೊದಲಾಗಿ ಪತ್ತು ವಿಧದ ನೆತ್ತವನಾಡುವೆನೆಂದೆನ್ನಂ ಕೆರಳ್ಚಿಲಾಂ ವಿಮರ್ದನನೆಂಬ ಹಾವುಗೆಕಾಱನ ಮೊಗಮುಂ ನೋಡಲಾತಂ ಅರ್ಥಮನೊಡ್ತೆಬುದುಂ,

ಹಲಗೆಯಂನಳವಱಿದಿಟ್ಟು |
ಗಳ ಮೆಯ್ಯಱಿನಕ್ಷಯುಗಳಮಂ ಧಾಳಿಸಿ ಮೋ ||
ಲೆನಿಸುಪ್ರೌಢತ್ವಮಂ ನುಡಿ |
ದಳುಪಿಲ್ಲದೆ ಜೂಜುಗಾಱರಂ ಕೆಳೆಗೊಂತೆಂ || ೯೩

ಅಲ್ಲಿಂ ಬೞಿಯಿಂ

ತಾಗುವ ದಾಯಮಂ ತಡೆವ ತಪ್ಪಿದ ಸಾರಿಯನೊಡ್ಡಿಕೊಳ್ವ ಗೆ |
ಲ್ವಾಗಱೆವೊಡ್ಡನೇಱಿಸುವ ಮೆಯ್ಯಱಿದಕ್ಷಮನೊಯ್ಯನೆತ್ತಿ ಕೈ ||
ವೇಗದೊಳಾರ್ದ ಧಾಳಿಸುವ ಹಾವುಗೆ ಸಾಕೆನಲೇಬ್ವಿ ಬಿನ್ನಣ |
ಕ್ಕಾಗರಮಾಗಲಾಂ ಪದೆದು ನೆತ್ತಮನಾಡಿದೆನುರ್ವರಾಧಿಪಾ || ೯೪

ಷೋಡಶಸಹಸ್ರವಿತ್ತ |
ಕ್ಕಾಡಿಯುದಂ ಗೆಲ್ದು ಹಾವುಗೆಗೆ ಕಿಱಿದಂ ಕೊಂ ||
ಡಾಡುವನಗ್ಗಂ ಕಿಱಿದುಮ |
ನೀಡಾಡಿ ಬೞಿಕ್ಕಮಿಕ್ಕುದಂ ಕೊಂಡೆಟ್ದೆಂ || ೯೫

ಅಂತೇೞಿಲೊಡಂ,

ಹಾವುಗೆಯಾದ ವಿಮರ್ದಕ |
ನಾಮಾಸಕ್ಕೆನ್ನನಱ್ತಿಯಿಂ ಕೊಂಡೊಯ್ದು ರಸಂ ||
ತೀವಿದ ಭೋಜನದಿಂ ಸಂ |
ಭಾವಿಸೆ ಬೞಿಕಮನೊಳಾಯ್ತು ಮಿತ್ರಸ್ನೇಹಂ || ೯೬

ಅಂತಾವಿಮರ್ದಕಂಗಮೆನಗಮತ್ಯಂತಸ್ನೇಹಂ ಮಿಗಲಾತನಿಂ ಪುರದೊಳಗಣ ಲುಬ್ಧಕಗೃಹಂಗಳ ವೃತ್ತಾಂತಮೆಲ್ಲಮಂ ತಿಳಿದಾಮಱುದಿವಸಂ

ಕಮಳಭವಾಂಡದೋವರಿಯ ಭಾಸ್ಕರದೀಪಿಕೆ ನಂದೆ ವಸ್ತುಭೇ |
ದಮ ನಱಿಯಲ್ಕೆ ಬಾರದವೊಲುರ್ಬಿದ ಕತ್ತಲೆ ಪರ್ಬೆ ದಿಕ್ಕನಾ ||
ಕ್ರಮಿಸಿ ಕಜಂಗಿ ಕತ್ತಲಿಸಿ ಸೂಚಿಗಭೇದ್ಯಮೆನಲ್ಕೆ ಮರ್ತ್ಯದೃ |
ಕ್ಕಮಳನಿರೋಧಮಂ ಪಡೆದುದೇಪ್ರೊಗೆ*ತ್ವೆಂ ತಿಮಿರಾತಿರೇಕಮಂ || ೯೭

ಇದು ಕೃಷ್ಣಪಕ್ಷಮಾಗಿಯು ।
ಮೊದಲಿದ ಕಮಳಾನುಮೋದನಂ ಪಡೆಯುದು ಚ ॥
ಕ್ರದೊಳನುರಾಗಂ ಪಿಂಗಿ ।
ಪುರ್ದು ಚೋದ್ಯಮೆನಿಪ್ಪ ಮರ್ಬನೊಲ್ದೀಕ್ಷಿಸಿದೆಂ ॥ ೯೮

ಅಂತು ಪರ್ಬಿದ ಮರ್ಬಂ ಕಂಡು,

ವಿಳಸಿತಯೋಗಚೂರ್ಣತತಿ ಕರ್ಕಟರಜ್ಜು ಸುದೀಪವರ್ತಿಗಳ್ ।
ಕಳಭಕರಂಡಕಂ ಮರದ ಮಾಟದ ಪೆರ್ಗಲೆ ಮಾನಸೂತ್ರಕಂ ॥
ಪಳಹಮೆನಿಪ್ಪ ಪಾಯುಶತಮುಂ ತಳೆದುರ್ಬಿದ ಮರ್ಬಿನೊಳ್ ನಿರಾ ।
ಕುಳಮೆನೆ ಕನ್ನಗತ್ತಿ ಸಹಿತಂ ಪೊಱಮಟ್ಟೆನಿಳಾಧಿನಾಯಕಾ ॥ ೯೯

ಅಂತು ನಿದ್ರೆಯಂ ಮಿಗಿಲಾಗಿಸುವ ಯೋಗಚೂರ್ಣಮಂ, ಮುಗಿಲೊಳ್ ಸಿಕ್ಕಿಸಿ ಪಿಡಿದೇಱುವೇಱುವರ್ಗಮಂ, ಸಜ್ಜುರಸನನೂಡಿದ ದೀಪವರ್ತಿಯಂ, ಬಳಗಿದರ್ ದೀವಿಗೆಯಂ ನಂದಿಸುವ ಪತಂಗದ ಕರಡಗೆಯಂ, ಕನ್ನದೊಳ್ ನೀಡಿಯೊಳಗಣೆಚ್ಚಱಿಕೆಯಱಿವ ಮರದ ತಲೆಯಂ, ಬಳಗಣುಗ್ರಾಣಮನಱಿಯಲಱಿವ ಮಾನಸೂತ್ರಮಂ, ಕನ್ನದಿಂ ಗಾಳಿ ಬಾರದಂತೆ ಮುಚ್ಚುವ ಪಳಹಮಂ, ಕನ್ನದೊಳ್ ಸಂದಿಸಿದ ಕಲ್ಲಂ ತೆಗೆವಿಕುರ್ಚಿಂ, ಮತ್ತಮನೇಕಚಾರ್ಯಸಾಧನಂಗಳಂ ಕೊಂಡು,

ಸೊಗಸೆಸೆಯಲ್ಕೆ ಪೊಚ್ಚಪೊಸ ಕಾಗಿನ ಕಚ್ಚೆಯನುಟ್ಟು ಕನ್ನಗ ।
ತ್ತಿಗೆಯನಲಂಪಿನಿಂ ಪಿಡಿದು ಕಟ್ಟಲೆಯೊಳ್ ಪೊಱಮಟ್ಟು ಮೆಲ್ಲಮೆ ॥
ಲ್ಲಗೆ ನಡೆಗೊಂಡು ಮುಂದೆಡಬಲಂಗಳನಾಲಿಸುತುಂ ನೆೞಲ್ಗೆ ಮೆ ।
ಯ್ದೆಗೆಯುತುಮಾಪಿನಿಂ ನಗರವೀಧಿಯೊಳೆಯ್ತರುತಿರ್ದೆನುರ್ವಿಪಾ ॥ ೧೦೦

ಅಂತು ಬಪ್ಪಾಗಳ್ ಮುಂದೆ

ನಗರಾಧಿದೇವತೆಯು ಮೆ ।
ಲ್ಲಗೆಯೋ ಬೆಳ್ದಿಂಗಳಗೆಯೊ ರನ್ನದ ಕೈದೀ ॥
ವಿಗೆಯೋ ಮಿಂಚಿನ ಗೊಂಚಲ ।
ಬಗೆಯೋ ಎನಲೊಂದು ಬೆಳಗು ತೋಱಿತ್ತಾಗಳ್ ॥ ೧೦೧

ಅಂತಾಬೆಳಗಂ ಭಾವಿಸಿ ನೋಳ್ಪನ್ನೆಗಂ,

ಸುಲಿಪಲ್ಗೊಳ್ವೆಳಗಿಂ ಕಟಾಕ್ಷರುಚಿಯಿಂ ಚಂಚನ್ನಖಜ್ಯೋತ್ಸ್ನೆಯಿಂ।
ವಿಲಸದ್ಭೂಷಣರತ್ನದೀಧಿತಿಗಳಿಂದುರ್ಬಿದ್ದು ಪರ್ಬಿರ್ದ ಕ ॥
ತ್ತಲೆಯುಂ ಮಾಂಕರಿಸುತ್ತಮೊನಶಶಿರೇಖಾವಿಭ್ರಮಂ ಕೂರ್ತು ಕೋ ।
ಮಲೆಯಾಯ್ತೆಂಬಿನಮೊಪ್ಪಿ ಬರ್ಪ ಸತಿಯುಂ ಕಂಡೆಂ ಕಳಾವಲ್ಲಭಾ॥ ೧೦೨

ಮುತ್ತಂ ಪಲ್ ಗಲ್ಲಂ ನಸೆ ।
ಮುತ್ತಿನ ಕನ್ನಡಿಯ ಪಡಿಯೆ ಕಾಂತೆಯ ಚೆ ॥
ಲ್ವೆತ್ತಳಕಂ ಭ್ರೂಮಧ್ಯಂ ।
ಚಿತ್ತರವೆನಿಪಂತು ಘನಧನುಗುಣದಿಂದಂ ॥ ೧೦೩

ಅಂತಿರ್ದ ಕಾಂತೆಯುಂ ಕಂಡವಳಂ ವಿಚಾರಿಸುವೆನೆಂದವಳೆಡೆಗೆ ಪೋದು
ಪೋಗದಿರೆಂಬುದುಂ;

ನೀನಾರಾಂ ಕಳ್ವನೆನ ।
ಲ್ಕೇನಂ ಮಾಡಲ್ಕೆ ಪೇೞ್ವುದೆಂದಾಗಳ್ ಚಾ ॥
ದ್ರಾನನೆ ತೊಡವಿನ ಪೆಟ್ಟೆಯು ।
ನಾನಂಗದಿನೀಯಲಾಂ ಬೞಿಕ್ಕಿಂತೆಂದೆಂ ॥ ೧೦೪

ಆರ ಮಗಳ್ ನೀಂ ಪೆಸರೇ ।
ನೀರಾತ್ರಿಯೊಳಲ್ಲಿಗೆಯ್ದಿದಪೆಯೊರ್ಬಳೆ ನೀ ॥
ರೇರುಹಲೋಚನೆ ಪೇೞ್ ವಿ ।
ಸ್ತಾರದೊಳೆನಗೆಂದೊಡಾಕೆ ಮಗುೞ್ದಿಂತೆಂದಳ್ ॥ ೧೦೫

ನೆಗೞ್ದ* ಕುಬೇರದತ್ತನ ।
ಮಗಳಾಂ ಕುಲಪಾಲಿಕಾಖ್ಯೆಯೆನ್ನಂ ಮುನ್ನಂ ॥
ಬಗೆ ಮಿಗೆ ಧನಮಿತ್ರಂಗಿ ।
ತ್ತು ಗಡೀಗಳ್ ಕುಡುವನಲ್ತೆ ಪೆಱಗೆನ್ನ*ಯ್ಯಂ ॥ ೧೦೬

ಧನಮಿತ್ರನರ್ಥಮಂ ಮಂ ।
ದಿನಿಕಾಯಕ್ಕಿತ್ತು ಬಡವನಾಗಲೊಡಂ ಭೂ ॥
ಜನಮೊಲ್ದುದಾರಕಂ ನಿ ।
ನ್ನ ನಾಮಮೆಂದಾತನಂ ಪೊಗೞ್ದಪರೀಗಳ್ ॥ ೧೦೭

ಅಂತಾತಂ ತ್ಯಾಗಶೀಲದಿಂ ಬಡಪಟ್ಟು ದಾರಕನೆಂಬ ಪೆಸರಂ ಪಡೆಯೆ,

ಪೆಱನೊರ್ವನರ್ಥಪತಿಯೆಂ ।
ಬಱಕೆಯ ವೈಶ್ಯೇಂದ್ರನಿಸರ್ಗನಾತಂಗೆನ್ನಂ ॥
ಮಱುಮಾತಿಲ್ಲದೆ ತಾಂ ಪೊ ।
ೞ್ತಱೆ ಕೊಟ್ಟಪನೆಂಬ ಮಾತನೀಗಳ್ ಕೇಳ್ದಂ ॥ ೧೦೮

ಅವಂ ಕೇಳ್ದು

ಇಂತಿರೆಯುಮಂಗಲವನಾ ।
ನೆಂತನುಭವಿಸಿದಪೆನೆನ್ನನಯ್ಯಂ ಮುನ್ನೊ ॥
ಲ್ದಿಂತಾವಂಗಿತ್ತನನಂ ।
ಕಾಂತನೆನುತ್ತವನ ಮನೆಗೆ ಪೋದಪೆನೀಗಳ್ ॥ ೧೦೯

ಕುಡುವೆಡೆಯೊಳ್ ಸಂಪದಮಂ ।
ಬಡತನಮಂ ಕುಲಮನಾದಿಯೊಳ್ ತಿಳಿದೊಲವಿಂ ॥
ಕುಡುವುದು ಕೊಟ್ಟು ಬೞಿಕ್ಕಂ ।
ಪಡಿಮಾತಾಡುವುದು ನೀತಿಧರ್ಮವಿರೋಧಂ ॥ ೧೧೦

ಎಂದಾಂ ಧನಮಿತ್ರನ ಮನೆಗೆ ಪೋದಪೆಂ ನಿನಗೆ ಬೇೞ್ದರ್ಥಮಾಯಿತ್ತು, ಪೋಗೆಂಬುದುಮಾನಾಕುಲಪಾಲಕಿಗಿಂತೆಂದೆಂ:—

ನಿನ್ನೊಡನೆ ಬಂದು ಪದೆಪಿಂ ।
ನಿನ್ನಧಿಪನ ಮಂದಿರಕ್ಕೆ ಕಳಿಪ್ಪೆನೊಲವಿಂ ॥
ಕನ್ನೆ ನಡೆಯೆಂದು ಸತಿಯುಂ ।
ಬೆನ್ನಿಕ್ಕಿ ಬೞಿಕ್ಕಮೊರ್ವರ್ಗಲ್ ನಡೆಗೊಂಡೆಂ ॥ ೧೧೧

ಅಂತು ನಡೆಗೊಳಲ್ ಮುಂದೆ

ಜಡಿವ ರವಂಗಳಿಂ ಸೆಳೆದ ಕೈದುಗಳಿಂ ಕರದೀಪಕೋಟಿಯಿಂ ।
ದೊಡನೆಯ ವೀರರಿಂ ಪೊಡೆವ ಜೇಗಟೆಯಿಂ ಕಡುಕೆಯ್ವ ಡಾಡೆಯಿಂ ॥
ಗ್ಗಡಣೆಗಳಿಂ ಮಹಾಧ್ವನಿಯ ಕೊಂಬುಗಳಿಂ ಭಯಮಂ ನೆಗಟ್ಚುತ್ತಿ ।
ರ್ದೆಸೆಯೊಳ್ ಮುಂದೆ ಸಂದಣಿಸಿದರ್ ಪುರರಕ್ಷಕರರ್ಧರಾತ್ರಿಯೊಳ್ ॥ ೧೧೨

ಅಂತು ಘೋರಾಕಾರದ ಕಾರಿರುಳೊಳ್ ಘೋರಿಸೆ ಬವರ್ ತಳಾರರಬ್ಬರವಂ ಕೇಳ್ದು,

ಮೃಗಶಾಬಂ ಮಿಗೆ ಶಾರ್ದೂ |
ಲಗರ್ಜಿತಕ್ಕಂಜುವಂತೆ ತದ್ರಾತ್ರಿಯೊಳಾ ‖
ಮೃಗಶಾಬನೇತ್ರೆ ಬೆರ್ಚಿದ |
ಳಗಣಿತಪುರರಕ್ಷಕಕರ್ಕಳಬ್ಬರಕಾಗಳ್ ‖ ೧೧೩

ಅಂತಾಕೆಯಂಜಿಕೆಯಂ ಕಂಡಾಂ ಪೋಗದಿಲ್ಲಿಗೊಂದುಪಾಯಮಂ ಬಗೆಯಲೆಂದಾನಾಕೆಯೊಳಿಂತೆಂದೆಂ:—

ಉರಗಂ ಪಿಡಿದೋಜೆಯನನು |
ಕರಿಸಿ ಬಟಿಲ್ದಂತೆ ಪಟೆಯ ಮಂತೆಯುಗೊಳ್ದು ‖
ಮರ್ರಣಾಕಾರದೊಳಿರ್ಪೆಂ |
ಪರವಶನಾದಂತಿರೊಱಗಿ ದುಸಿ*ರ್ಗೆಗೆದೀಗಳ್ ‖ ೧೧೪

ಎಂದವಳ್ಗೆ ಪೇಳ್ದು

ನೊರೆ ಬಾಯೊಳ್ ಸುತ್ತಿ ಕಣ್ಗಳ್ ಮುಗಿದುಸಿರೆನಸುಂ ಭೇದಿಸಲ್ಬಾರದಂತು | ಬ್ಬರಿಸಲ್ ಬಿಣ್ಪಂ ಬಸಿಗೋರ್ಣುಱುಗಿ ತನು ಬಟಿಲ್ದಂತಿರಿರ್ಪೊರ್ಂದುವೇಷಾಂ ‖ ತರವಂ ಕೈಕೊಂಡು ನೋಳ್ಪಂಗೆ ಕಟ ಭುಜಗದಷ್ಟಾಂಗನಾಗಿರ್ದನೆಂಬಂ | ತಿರಲಿರ್ದೆಂ ರಾತ್ರಿಯೊಳ್ ಶೋಕಿಸೆ ಸತಿ ಕೆಲದೊಳ್ ಧೂರ್ತನಿಂ ರಾಜಪುತ್ರಾ ‖ ೧೧೫

ಅಂತಿರ್ದ ಸಮಯದೊಳ್ ತಳವಾರರ್ ಮುಟ್ಟಿವಂದು ಕುಸುಮಕೋಮಳೆಯಪ್ಪ ಕೋಮಳೆಯು ಕೆಲದೊಳಿರ್ದ ಪೆಟ್ಟಿಗೆಯುಂ ಬಿಱ್ದಿರ್ದನ್ನಂ ಕಂಡಿದೇನೆಂಬುದುಂ,

ಕಡುಪೆಂಪೊಪ್ಪುವ ರಾಜಧಾನಿಯಿದಱೊಳ್ ಮದ್ವೈದ್ಯೆಯಿಂದರ್ಥಮಂ |
ಪಡೆವೊಂದಾಸೆಯೊಳಿಲ್ಲಿ ಬಿಟ್ಟಿರಲದೊಂದುಗ್ರೋರಗಂ ಬಲ್ಪಿನಿಂ ‖
ಪಿಡಿಯಲ್ ನಾಯಕನಿಂತು ತೀರ್ದನಸುಮಂ ಕಾರುಣ್ಯದಿಂದಣ್ಣ ಗಾ |
ರುಡಮಂ ಬಲ್ಲನರೆತ್ತಿ ಮೊಂದು ಕೆಪೆದಳ್ ತತ್ಕಾಂತೆ ಭೂಭಾಗದೊಳ್ ‖ ೧೧೬

ಅಂತು ಪ್ರಾರಬ್ಧ ಕಾಂತೆಯಾರ್ತರವಮಂ ಸಂತೈಸಿಯುವರೊಳ್

ಮಿಗೆ ಗರುಡಮುದ್ರೆಯುಂ ಪಿಡಿ ।
ದಗಣಿತಪಂಚಾಕ್ಷರಾದಿಮಂತ್ರಂಗಳನಾ ॥
ವಗಮೋದಿ ಯಂತ್ರಮಂ ಬರೆ ।
ದು ಗಾರುಡಂ ಕೊಳ್ಳಗೆಂದು ತೊಳಲಿದನೊರ್ವಂ ॥ ೧೧೩

ಈತೆಱದಿಂ ಗಾರುಡಿಸಲ್ ।
ಚೈತನ್ಯಂ ತೋಱದಂತು ಬೆಱತಿರೆ ಕಂಡು ॥
ತಾತಳವಾಱರ್ ಬೇಸ ।
ತ್ತೀತಂಗಿದು ಕಾಲಮೆಂದು ಸತ್ತಿಗಿಂತೆಂದರ್ ॥ ೧೧೪

ಉದಯದೊಳೀತನ ಸಂಸ್ಕಾ ।
ರದ ದೆಸೆಗಿಂಧನಮನೀವೆವೆಂದವರಲ್ಲಿಂ ॥
ಬೊದಱುತ್ತೆ ಪೋದರಿತ್ತಲ್ ।
ಪದುಳದಿನಾನೆಬ್ಬಿ ಪೋದೆನಲ್ಲಿಂದಾಗಳ್ ॥ ೧೧೫

ಅಲ್ಲಿಂ ತಳರ್ದೆಂ ಕುಲಪಾಲಿಕೆವೆರಸು ಧನಮಿತ್ರನ ಮನೆಗೆಯ್ದಿ ಪಡಿಯಂ ತೆಱೆಯಿಸಿ ಪುಗಲೊಡಂ

ಭೋಂಕನಲಾಗಳಾಕೆ ಸಹಿತಾಂಬರಲಾಧನಮಿತ್ರನೊಮೊರ್ಗದಲ್ ।
ಸಂಕಿಸಿದಂ ಮುಗುಳ್ದು ಮುಗಮಂ ತಳೆದಂ ಕಡುಲಜ್ಜೆ ತನ್ನೊಳೊ ॥
ಳ್ದಂಕುರಿಸಲ್ ಕರಂ ತಲೆಯನೊಯ್ಯನೆ ಬಾಗಿದನಾಪ್ತಬಂಧುವೀ ।
ತಂ ಕೆಳೆಯಂ ದಿಟಂ ಪೆಱವನಲ್ತೆನುತೆನ್ನನೊಱಲ್ದು ನೋಡಿದಂ ॥ ೧೧೬

ಅಂತಾತಂ ಪಲವುಭೂಷಣಂಬೆರಸೆನ್ನಂ ನೋಡಲೊಡಂ

ಸಿನ್ನರಸಿಯಾಕೆಯಾಕೆಯ ।
ರನ್ನದ ತೊಡವುಗಳ ಪೆಟ್ಟಿಯಿದೆಕೊಳ್ಳೆಂದು ॥
ತ್ಪನ್ನಮತಿಗಿತ್ತಿನೀಯಲ್ ।
ತನ್ನುತ್ಸಾಹದೊಳವಂ ಮುಗುಳ್ದಿಂತೆಂದಂ ॥ ೧೧೭

ನಿನಗೇನಂ ಮಾಳ್ಪೆನೀಪ್ರೋತ್ಸಗಿನುಚಿತಕಾರ್ಯಕ್ಕೆ ಭಾವಿಪ್ಪೊಡಿಂತೀ ।
ತನು ಜೀವಂ ನಿನ್ನವಾವೆಂದೞಿವಸಿತೆನಿಪ ಸ್ತೋತ್ರದಿಂ ಭಕ್ತಿಯಿಂ ವಂ ॥
ದನೆಯಂ ಮಾಳ್ಪಂದಮೊಂಬಂತತಿಲಲಿತನದೀಮಾರಿಯುಂ ತನ್ನದೀಜೇ ।

ವನದೊಳ್ ಕೂರ್ತಖ್ಯಗವೀವೊಂದಣಕವುವನಿಯೊಳ್ ಮಾಬ್ಬಿವ್ರೇಲ ತೋ
ರ್ಪುದೆನ್ನೊಳ್ ‖ ೧೨೨

ಮತ್ತ ಗಜಗವುನೆ ತಡೆದಳ್ |
ನುತ್ತಸು ತನುವಿಂದಗಲ್ದುದೀವಧುವಂ ತಂ ‖
ದಿತ್ತುದಱಿಂ ತನು ಜೀವಂ |
ವಿತ್ತಂ ನೀನಿತ್ತ ವಸ್ತುವೆಂಬುದು ಪುಸಿಯೇ ‖ ೧೨೩

ಇನಿತಂ ಮಾಬ್ಬಿವರಾರೊ ಕೇಳ್ ಮನುಜರೊಳ್ ಸ್ತ್ರೀರತ್ನವಂ ರತ್ನವಂ
ಧನವಂ ನಿರ್ನರವಿಂತು ತಂದು ಪೆಱರೊಳ್ ಪ್ರತ್ಯಪಣಾಕಾಂಕ್ಷೆಗೆ ‖
ಟ್ಟನಸುಂ ಕೊಟ್ಟಹಲೋಕದೊಳ್ಸ್ವ ಪರಲೋಕಶ್ರೀ ನಿತಾಂತಂ ಕರಂ |
ನಿನಗಪ್ಪಂತಿರೆ ಚಿತ್ತದುತ್ತಮಿಕೆಯುಂ ಕೇಳ್ ಮಿತ್ರಕಲ್ಪದ್ರುಮಾ ‖ ೧೨೪

ಎನ್ನಯ ನುಡಿಯುಂ ಕೊಂಡೀ |
ಕನ್ನೆಯನೊಲ್ದಿತ್ತೆಯೆಂಬುದದು ವಿಕ್ರಯದೋ ‖
ಷನ್ನಿನಗೆ ಬಕುವೆಂತೆನೆ |
ರನ್ನವ-ನಳೆಗಿತ್ತರಂಬ ನಾಣ್ಯಾತಿನವೋಲ್ ‖ ೧೨೫

ವ್ಯರ್ಥಾಳಾಪದೆ ಕೇಳೀಂ ಧನ |
ಮರ್ಥಂ ಪ್ರಾಣಂ ನಿಜಕ್ಕೆ ನಿನ್ನದು ನಿಜಕಾ ‖
ತೀರ್ಥಂ ನೀಂ ಪದೆಪಿಂ ಮ |
ತ್ಪ್ರಾರ್ಥನೆಯಿದು ರಕ್ಷಿಸೆಂದು ಚರಣಂಬಿಡಿದಂ ‖ ೧೨೬

ಅಂತಾಧನಮಿತ್ರನೆನ್ನನರ್ಥವಾದದಿಂ ತುಷ್ಟಿವಡಿಸಿ ಕಡೆಯೊಳಿಂತೆಂದಂ—

ಪರಿಕಿಸುವ್ರೊಡರ್ಥಪತಿ ಕಡು |
ಸಿರಿವಂತಂ ಬಡವನಾಂ ನೆಗೞ್ದಾತನ ಮು ‖
ಚ್ಚರದಿಂದಿಲ್ಲಿರ್ಪುದು ತನ |
ಗೆ ರಕ್ಷಯುತ್ತೆಂದನಕ್ಕಿಱಿಂ ಧನಮಿತ್ರಂ ‖ ೧೨೭

ಎಂಬೊಡಾತಂಗೆಭಯುವಮಂ ಕೊಟ್ಟು ಸಂತಮಿಡಲ್ ಮತ್ತಮಿಂತೆಂದಂ·

ಈಕನ್ನಿಕೆಯುಂ ತತ್ಪಿತೃ |
ಲೌಕಿಕವಿಧಿಯಿಂ ವಿವಾಹವಂ ಮಾಡಿದೊಡ ‖

ವ್ಯಾಕುಳದಿಂ ನಿನಗೆಲ್ಲಾ ।
ಲೋಕದೊಳೆಸೆಗುಂ ಜಸಂ ಛಲಂ ನಿಜವಂಶಂ ॥ ೧೨೪

ಎಂದೊಡಾಂ ಕುಬೇರದತ್ತನಿಂ ನಿನಗೆ ಕನ್ನೆಯುಂ ಕೊಡಿಸುವುಪಾಯ ಮಂ ಮಾಳ್ಪೆಂ. ಅನ್ನೆಗವಿನಾಕುಮಾರಿಯುಂ ನಿವಾಸಕ್ಕೆ ಕಳಿಪಿವಬೆವೆಂ ದಾನುಂ ಧನಮಿತ್ರನುಮವಳಂ ಕುಬೇರದತ್ತನ ಮನೆಯುಂ ಪುಗಿಸೆ

ಎನಸುಂ ಕುಬೇರದತ್ತನ ।
ಮನೆಯುಥ-ಮುಸೊಡೆದ ಮಡಕೆ ಪೊಜಗಾಗೆ ತದಂ ॥
ಗನೆ ಪೊಕ್ಕ ಬಾಗಿಲೊಳ್ ಪು ।
ಕ್ಕನಿತಂ ಕಳ್ದಂದು ತಿಪ್ಪೆಯೊಳ್ ಪೂಟ್ದಟ್ಟೆಂ ॥ ೧೨೫

ಅಂತದೆಲ್ಲಮಂ ಪುಟ್ದವಿರ್ದರುಂ ಮುಗುಟ್ದ ಬಪೊರ್ಗಳ್ ಮುಂದೆ

ಸ್ಥಳಾಗಾರಂಗಳಂ ನಿರ್ಗವ ದೆಸೆಳ್ ಕಿಟೆತ್ತಿ ಮೊಯ್ಬಲ್ಕೆಯಿಂ ಕಿ ।
ಟ್ತಾಳಾನಸ್ತಂಭವಂ ಮೇಣ್ ಮದದೊದವು ಮಿಗಲ್ ಕೊಬ್ಬಿ ಕೋಟ್ಕ್ ಟ್ಟಿರಾದಾ ॥ ಭೀಳಂಬೆತ್ತೊಂದು ಮಾದ್ಯದ್ಗಜಪತಿ ರಜನೀಮಧ್ಯದೊಳ್ ಬರ್ಪಂ ಕಂ । ಡಾಳಾಪಂಬೋಟು ಭೈಭ್ಯಪದಿಪಡಿಯೆನುತಾರ್ದೆಟಿದೆಂ ಸಾರ್ವಭೌಮಾ ॥ ೧೨೦

ಅಂತು ರಾಜಾಲಯಮಂ ಪೊಜಮಟ್ಟು ಮುಂಡಾಸನದಿಂ ಮದಮುಕಿರ್ ಬರ್ಪ ಆನೆಯುಂ ಮಾಗಂಕುಶಪ್ರಸೋತದಿಂ ಮಟ್ಟಕ್ಕೆ ತಂದು ಮಸ್ತಕಕ್ಕೆ ಬಂದು ಪಿಂದೆ ಧನಮಿತ್ರನನೇಱಸಿ ವಜ್ರನಖಾಂಕುಶದಿಂದಪ್ರಂಕಿ ಬಿಟ್ಟಕ್ಕನ ಸಮಯದೊಳ್ ತಳವಾಱರ್ ಬಂದು ಮುತ್ತೆ

ರದನಾಗ್ರದಿಂ ಕೆಲಂಬರ ।
ನೊಡೆಯಿಸಿ ಪೆಟ್ಟಿಸಿ ಪಲಂಬರಂ ಕರಸಂಘಾ ॥
ತದಿನನಿಬರನಾಗಳ್ ಯಮ ।
ಸದನಕ್ಕೊಪ್ಪಿಸಿದೆನಿರ್ದರಳೆವಱದೋಡಲ್ ॥ ೧೨೧

ಅಂತು ಮಿಕ್ಕವರೆಲ್ಲರರಮನೆಯಾನೆ ಮದಮುಕಿರ್ ಕೊಬ್ಬುತಿರ್ಪಪ್ರದೆಂ ದೋಡಿ ಪೋಗೆ ಬೞಯಂ

ಆಳೆನಿಸುವರ್ಥಪತಿಯು ನಿ ।
ಜಾಲಯಮಂ ತದ್ಗಜೇಂದ್ರನಿಂ ನುಗ್ಗಿಸಿ ಸ ॥

ಲ್ಲೀಲೆಯಿನಲ್ಲಿಂ ತಳರ್ದು* ವಿ ।
ಶಾಲಮೆನಿಪ್ಪೊಂದು ಚೆಲ್ವ ಕುಜವಂ ಕಂಡೆಂ ॥ ೧೩೨

ಅಂತಾಕುಜಕ್ಕಾನೆಯುಂ ನೂಂಕಿ ಅದಱ ಮೇಲ್ಗೊಂಬಂ ಪಿಡಿದಾನೆಯುಂ ಬಿಡಲವತ್ತಲ್ಪೋದುದು. ಆನುಂ ಧನಮಿತ್ರನುಂ ಬೞಿಕ್ಕಾವರದಿಂದಿೞಿವನ್ನೆಗಂ

ಅಳಿಗಳ್ ಪಾಡುವಿನಂ ಸರೋಜಿನಿ ನಗುತ್ತುಂ ನೋೞ್ಪಿನಂ ಕೂಡೆ ಪಾಂ
ಸುಳೆಯರ್ ಬೆರ್ಚುವಿನಂ ರಥಾಂಗಯುಗಳಂ ಪಾರೈಪಿನಂ ತೆಂಬೆರಲ್ ॥
ಕಳಿನ್ರಾವಂ ಬಲಿಗೆಯ್ವಿನಂ ರವಿನಟಂ ಬಂದಾಡುವಾಗಳ್ ಸುಪಾ ।
ಟಳವಸ್ತ್ರಂ ತೆರೆಯಾದವೋಲ್ ಮೆಱೆದುದಾಪ್ರಾರ್ವಾಶೆ ನರ್ಗ್ಗಿಂಪಿನಿಂ ॥

ನಗೆಯುಂ ಪಂಕಜವಕ್ತ್ರದೊಳ್ ದುಗುಡಮುಂ ನೈದಿಲ್ಗಳೊಳ್ ಲಲ್ಲೆಯು
ಪ್ಪಗೆಯುಂ ಕೋಕಯುಗಂಗಳೊಳ್ ಪದೆಪಿಸಿಂ ಕಣ್ಬೇನೆಯುಂ ಗೂಗೆಯೊಳ್
ಸೊಗಸಂ ದಿಕ್ತಟದೊಳ್ ಪ್ರೊದಲ್ದ ಭಯಮುಂ ಜಾರಾಂಗನಾನೀಕಮೊಳ್ ।
ಮಿಗೆ ಮಾಡುತ್ತುದಯಾದ್ರಿಯೊಳ್ ನೆಲಸಿದಂ ಪಂಕೇಜಿನೀವಲ್ಲಭಂ ॥

ಅಮೃತಕರಸಂಗಮುಂ ಪಾ ।
ಡಿ ಮಗುೞ್ದೆಂತುಷ್ಣಕರಕೆ ಮೆಯ್ಯೊಡ್ಡುವೆನೆಂ ॥
ಬಮಳಿನಸುಕುಮಾರತೆಯಿಂ ।
ಕುಮುದಿನಿ ತಲೆವಾಗಿ ದುಗುಡಮುಂ ತಳೆದಿರ್ದಳ್ ॥ ೧೩೫

ಅಂತು ಸೂರ್ಯೋದಯವಾಗಲಾಂ ಮನೆಗೆ ಪೋದೆಂ. ಅತ್ತಲ್

ಎನಸುಂ ಕುಬೇರದತ್ತನು ।
ಮನುತಾಪದಿನರ್ಥಪತಿಯುಮಿರ್ಬರ್ ತಂತ ॥
ಮ್ಮ ನಿಕೇತನಂಗಳಂ ನೋ ।
ಡಿ ನೋಡಿ ಕಡುನೊಂದು ಚಿಂತೆಯೊಳ್ ಮುಱುಗಿರ್ದರ್ ॥ ೧೩೬

ಅಂತವರಿರ್ವರ್ ತಂತಮ್ಮ ಮನೆಯಾದವಸ್ಥೆಯುಂ ಕಂಡವಶಕುನವಾಗು ಗೆಂದಾಲಗ್ನಮುಂ ಬಿಟ್ಟು ಮತ್ತೊಂದು ಲಗ್ನದೊಳ್ ಮದುವೆಯುಂ ಮಾಪ್ಪೆವೆಂಬೊಂದು ತಿಂಗಳ್ ಅರ್ಥಪತಿಯ ಮದುವೆ ನಿಲಲಾನಿತ್ತಲ್,

ಪುಸಿಯುಂ ವಂಚನೆಯುಂ ನಿರರ್ಥಕವನತ್ಯಾಶ್ಚರ್ಯವುಂ ನನ್ಯಸಾ ।
ಪಸವಂ ಪೂರ್ಣದುರಾಶೆಯುಂ ಸಕಲಮಿಥ್ಯಾವಾದಮಂ ಕೂಡೆ ತಂ ॥

ತ್ರಿಸಿದಂತೊಪ್ಪುವ ಚರ್ಮಭಸ್ತ್ರಿಕೆಯನೊಂದಂ ಚೆಂದಮಪ್ಪಂತು ನಿ ॥
ರ್ಮಿಸಿದೆಂ ಲಕ್ಷಸುವರ್ಣಮಂ ಕಱೆವುದೆಂಬೀಸುದ್ದಿಯಂ ಬಿತ್ತಿದೆಂ ॥ ೧೩೩

ಅಂತೊಂದು ತೊಗಲ ಚೀಲವಂ ನಿರ್ಮಿಸಿ ಧನಮಿತ್ರನಂ ಕರೆದು ನೀನೀ ಚಂಪಾವತಿಯ ಸಮೀಪಕ್ಕೆ ಪೋಗಿ ಚರ್ಮಭಸ್ತ್ರಿಕೆ ಬಂದ ಕ್ರಮಮಂ ತನ್ನ ಮಾಹಾತ್ಮ್ಯಮಂ ನಿನ್ನ ದರಿದ್ರ್ಯನತೆಯುಂ ಪೇೞ್ದು ಬಾಯೆಂದೊಡಾ ನಿಂತೆಂದು ಪೇೞ್ದಂ

ಅನಿಶಂ ದುಃಖಮನೇಕಗೋಷ್ಠಿಯೊಳತಿದ್ವೇಷಂ ಮಹಾಪಾಪದೊಳ್ ।
ಮನವತ್ಯಾಲೆ ಕರಂ ಕ್ಷುಧಾಭಯಮನಾಚಾರಂ ಮತಿಭ್ರಾಂತಿ ಜೀ ॥
ವನಚಿಂತಾತತಿ ನಿಚ್ಚ ಪೆರ್ಚಿದ ದರಿದ್ರಕ್ಕೆಯ್ದೆ ಬೇಸತ್ತು ಕಾ ।
ನನದೊಳ್ ಬೆಂದ ಶರೀರಮಂ ತೊಱೆವೆನೆಂಬುದ್ಯೋಗದಿಂದೆಯ್ದಿದೆಂ ॥ ೧೩೪

ದಾರಿದ್ರ್ಯಂ ಪೆರ್ಚಿದ ಸಂ ।
ಸಾರಮಿದೇಕೆಂದು ಚಿತ್ತದುಮ್ಮಳದಿಂ ಕಾಂ ॥
ತಾರಕ್ಕೆ ಪೋಗಿ ನಿಜತರ ।
ಪಾಱಿಯೊಳೊಲ್ದೆನ್ನ ಶಿರಮನಾನಱುಪಾಗಳ್ ॥ ೧೩೫

ನಿಡುಜಡೆ ಕರ್ಣದೊಳ್ ಪಳಿಕಿನೊಪ್ಪುವ ಕುಂಡಲಮಂಗದೊಳ್ ನಯಂ ।
ಬಡೆದ ವಿಭೂತಿ ಮೆಲ್ನಗೆ ತುಳುಂಕುವ ಮುಪ್ಪುವೊಗಂ ಕರಾಗ್ರದೊಳ್ ॥
ಪಿಡಿದ ವಿಪಂಚಿ ತನ್ನೊಳತಿಕೌತುಕವಾಗಿರೆ ಘೂಂಕೆನಲ್ಲಿಗೊ ।
ಳ್ವಡೆದಿರೆ* ಬಂಗನೊರ್ವ ನವಪಾಶುಪತಾಸ್ತ್ರಕಧಾರಿತಾಪಸಂ ॥ ೧೩೬

ಅಂತು ಬಂದಾತಪೋಧನನೆನ್ನಂ ಕಂಡು

ಈಸಾಹಸಮಂ ಮಾಡಲ ।
ದೇಸುಂ ಮನವೇಕೆ ರಂಜಿಪಾತ್ಮದ್ರೋಹಾ ॥
ಭ್ಯಾಸಮನೆಸಗುವೆ ಪೇೞಾ ।
ಶ್ವಾಸಿಸುವೆಂ ಪದೆದು ನಿನ್ನನೆಲೆ ದುರ್ಬೋಧಾ ॥ ೧೩೭

ಎಂದಾತಪೋಧನಂ ಪೇೞ್ದೊಡಾನಿಂತೆಂದೆಂ:—

ಅತಿದಾರಿದ್ರ್ಯಂ ಮಾನ ।
ಚ್ಯುತಿ ದುಃಖಂ ಪೆರ್ಚಲೆನ್ನೊಳೀ ಜೀವನದು ॥

ಗರ್ತ್ರಿಯಿಂ ಮರಣಂ ಸುಖವೆಂ ।
ದತಿವೇಗದಿನಿಲ್ಲಿಗೆಯ್ದಿ ತೀರ್ದಪೆನೀಗಳ್ ॥ ೧೪೨

ಎಂಬುದುಂ;

ಬಿಡು ಮರುಳೆ ಮರಣವಾರ್ತೆಯು ।
ನೊಡವೆಯನೆಂತಾನುಮೊಂದುಪಾಯದಿನಿಸಿತಂ ॥
ಪಡೆಯಲ್ಬರ್ಕುಂ ಮರಣಂ ।
ಒಡೆಯಲ್ಬರ್ಕುಮೆ ನೆಗಲ್ದುಪಾಯಕ್ರಮದಿಂ ॥ ೧೪೩

ಎಂಬುದುಮಮಾನಿಂತೆಂದೆಂ—

ಭಾವಿಸೆ ದರಿದ್ರನನಿಶಂ ।
ಸೇವಕನತಿಮೂರ್ಖನಪ್ರವಾಸಿ ಮಹಾರೋಗೀ ॥
ಗಾವಿಷ್ಟನೆಂಬ ಮನುಜಂ ।
ಜೀವನ್ಮೃತನಲ್ತೆ ಪೇಳ ನೀವಱಿಯದುದೇ ॥ ೧೪೪

ಎಂಬುದುಮಾತಪೋಧನನೆನಗೆ ಕರುಣಿಸಿ

ಅಕ್ಷಯನಿಧಿಯೆನಲೊಪ್ಪಿರೆ ।
ಲಕ್ಷಸುವರ್ಣಪ್ರವಾಹಮುಂ ಕಱುಪ್ರದಿದಂ ॥
ರಕ್ಷಿಸಿಕೊಳ್ಳೆಂದಿತ್ತಮು ।
ಮುಕ್ಷುವರಂ ಚರ್ಮಭಸ್ತ್ರಿಕಾಖ್ಯಮನೊಂದಂ ॥ ೧೪೫

ಕುಪೆನನ್ಯಗ್ರಾಮಂ ತಪದಿಂ ।
ಪಡೆದೆಂ ನಾಂ ಪೂರ್ವಕಾಮದೇಶದೊಳೊಲವಿಂ ॥
ಮೃಡನ ವರದಿಂದೆ ನಿನ್ನೀ ।
ಒಡತನಮಂ ಕಂಡು ಕೊಟ್ಟೆಸಿಲ್ಲದೊಡೀಯೆಂ ॥ ೧೪೬

ಎಂದು ಲಕ್ಷಸುವರ್ಣಮುಂ ಕಱೆವ ಚರ್ಮಭಸ್ತ್ರಿಕೆಯಂ ಕೊಟ್ಟು ಮತ್ತಮಿಂತೆಂದಂ—

ಇದಱ ವಿಧಾನಂ ವೇಶ್ಯಾ ।
ಸುದತಿಯ*ರ್ಗೆ ವಣಿಗ್ವರರ್ಗೆ ಕಱೆವುದು ಮಿಕ್ಕ ॥
ರ್ಗಿದು ಕಾಣಿಯರ್ಥಮಂ ಕಱೆ ।
ಯ್ಯದೆಂದು ಮುನಿನಾಥನುಸಿ*ರ್ದ ಮತ್ತಿಂತೆಂದಂ ॥ ೧೪೭

ಮುನ್ನಾಸನರ್ಘಾಸಂ ಮುಳ್ಳ ।
ದನ್ನಿಯದಿಂ ಕೊಂಡೊಡವರೊಳಾ ಧನಮುಂ ಪೆಂ ॥
ಪಿಂ ನಯದಿಂದೀವ್ರದು ಪುಗೆ ।
ತನ್ನರ್ಥಮನೀಪ್ಸದಾಗಳಧನಗೊರ್ಲಮಿಂ ॥ ೧೪೮

ಎಂದು ಪೇಳ್ದು

ಆತಾಪಸಂ ಒಚ್ಚಕ್ಕಂ ।
ಪಾತಾಳಸ್ವರ್ಗಭೋಗಮುಂ ಭೋಗಿಸಲೆಂ ॥
ದಾತಂ ಬಿಲದೊಳಗಿರ್ದಂ ।
ಭೂತಳಪತಿ ಕೇಳ್ ಪ್ರಸಾದದಿಂದನ್ನೆಂದಂ ॥ ೧೪೯

ಅದೇನೆಂದರಸಂ ಕೇಳ್ವುದುಂ,

ವಸುಧೇಶ ಚರ್ಮರತ್ನದ ।
ದೆಸೆಯಿಂದೀಪರಸ್ರರಂತದೊಳ್ ಪದೆಪಿಂ ಬೀ ॥
ಪಿಸಿವಪೆನವಾ ಕ್ಷೇಮಂ ।
ಸಿಸಪಂ ಸಿನ್ಮಡಿಯುದೆಂದು ಪೇಳ್ ಪೋಗೆಂದೆಂ ॥ ೧೫೦

ಎಂದೊಡಾತನುಮಂತೆ ಪೋಗಿ

ಜನಪತಿಗೆ ತತ್ಪ್ರಪಂಚಮನು ।
ನಸಿತಂ ಧನಮಿತ್ರನೊಲ್ದು ಪೇಳ್ದುದಂ ಕೇಳ್ದು ॥
ತನವರ್ಕ ಕಾತರ್ಕ ಕರುಣಿಸಿ ।
ಸಿನಗತಿಸ ಖಮಪ್ಪ ತೆಱದಿಸಿರು ಪೋಗೆಂದಂ ॥

ಅಂತರಸನಿಂ ಧನಮಿತ್ರಂ ಬೀಳ್ಕೊಂಡು ಬಂದು ಕಾರ್ಯದ ಹದನನೆನ್ನೊಳ್ ಪೇಳಿಲನಂತರಂ

ಭರದಿಂ ವಿಮರ್ದಕನನಾ ।
ದರದಿಂದೊಲ್ದರ್ಥಪತಿಯನೋಲಗಿಸೆಂದಿ ॥
ಲ್ಲಿರಿಸಿದೆನುತ್ಸವದಿಂ ನಿ ।
ರ್ಭರಬಂಧುರಮಂತ್ರಭಿನ್ನಮಾಗದ ತೆಱದಿಂ ॥ ೧೫೧

ಅಂತೆನಗೆ ಪ್ರಾಣಮಿತ್ರನಾದ ವಿಮರ್ದಕನರ್ಥಪತಿಯನೋಲಗಿಸಿದುರ್ ಧನಮಿತ್ರನೊಳ್ ಟಕ್ಕಿನ ಜಗಳಮನಂದಂದಿಂಗೆಸಗೆಂದು ಪೇಳ್ದು ಬೞಿಯಂ

ಸಕಳನಿಶೀಥಿನಿಯೊಳ್ ಲು ।
ಬ್ಧಕನಿಕರದ ಮನೆಯ ಧನಮನಸಿತಂ ಮಾಳವು ॥
ಲ್ಲಕಶೇಷನಾಗಿ ನಾಂ ನಿ ।
ಚ್ಚಕನ್ನಗಳನಿಕ್ಕಿ ಕಳಲೆಡಚಿಟ್ಟೆನರಸಾ ॥ ೧೫೩

ಅದೆಂತೆನೆ-

ಮನೆಯವರೆಲ್ಲರುಂ ತೊಱಗಿ ನಿದ್ರೆಯ ಸೊರ್ಕಿಡೆಗೊಂಡರೆಂಬುದಂ ।
ಮನದನುರಾಗದಿಂದಱಿತು ಭಿತ್ತಿಗೆ ಸೂತ್ರಮನಿಕ್ಕಿ ನೋಡಿ ಭಾ ॥
ಜನನವವಸ್ತ್ರವೀಯೆಡೆಯೊಳಪ್ಪುದು ತಪ್ಪದೆನುತ್ತೆ ಪನ್ನಗಾ ।
ನನದೊಳ್ ಕನ್ನಮಂ ಸವೆದು ಲುಬ್ಧಕರರ್ಥಮನೆಯ್ದೆ ತೀರ್ಚಿದೆಂ ॥ ೧೫೪

ಅಂತು ಕಳ್ದ ಚರ್ಮಭಸ್ತ್ರಿಕೆ ಕಟಿಸೂತ್ರದೆಂಬ ನಾಮದಿಂ ಬೇರ್ಪ್ಪರ್ಥಮನಾರ್ಜಿಸಿ ಬೀಸುಂಗೆಯ್ದು ಧನಮಿತ್ರನುಮಾನುಂ ಸುಖದಿನಿರೆ

ಎನ್ನೊಳ್ ಬೇಱ್ಪನಿತರ್ಥವ ।
ನುನ್ನತಿಯಿಂ ಪಡೆದು ಧನಿಕರಾವರ್ಥಿಗಳುಂ ॥
ಖಿನ್ನಮುಖರಾಗಿ ಬಂದಿರೆ ।
ವನ್ನರೆನಲ್ ಪುರದೊಳೆಸಗಿದೆಂ ಲುಬ್ಧಕರಂ ॥ ೧೫೫

ಅಂತು ಪುರದ ಲುಬ್ಧಕರ ಮನೆಯುಂ ಕವರ್ದೊಂದು ದಿನಮಾಕಳ್ದ ಪಟ್ಟಣದ ವಿಭವಮಂ ನೋಡಲೆಂದು ಧನಮಿತ್ರಂಬೆರಸಂಗಡಿಗೇರಿಯೊಳ್ ಬರ್ಪಾಗಳ್

ಕಂಠಾವಿಮರ್ದಕಂ ಮಿಗೆ ।
ಮಿಂಡಿನೊಳರ್ಥಪತಿಯ ಪಕ್ಷಗೊಳವನು ॥
ದ್ದಂಡತೆಯಿಂ ಧನಮಿತ್ರನ ।
ನಂಡಲೆಯುತ್ತಿರದೆ ಬೈದನೆಲ್ಲರ್ ಕೇಳಲ್ ॥ ೧೫೬

ಅದೆಂತೆನೆ-

ಅಕಟ ಕುಬೇರದತ್ತನ ಮಗಳ್ಗನಿತಾಟಿಸಿ ಕೆಟ್ಟು ಪೋಗದಿರ್ ।
ವಿಕಳಮನಸ್ಕನಾಗಿ ಧನಮಿತ್ರ ನೆಗೞ್ತೆಯ ನಿನ್ನ ಚರ್ಮಭ ॥
ಸ್ತ್ರಿಕೆಯತಿಗರ್ವಮಂ ನಿಲಿಸುವೆಂ ಮುಳಿದೊಂದಿರುಳರ್ಬ್ಬನಾದೊಡಂ ।
ಚಿಕೆ ನಿನಗಾಗಲೆಂದುಸಿ*ರ್ವನಲ್ತಿಗು ಸತ್ಯಮೆನಲ್ಕೆ ಮಾಡುವೆಂ॥ ೧೫೭

ಎಂದಾವಿಮರ್ದಕಂ ಧನಮಿತ್ರನಂ ಜರೆದೊಡಾಧನಮಿತ್ರನದೆ ಕೋಪದೊಳನ್ಯಾಯಮೇನೆನ್ನಂ ಬೈದಪನೆಂದಿಲ್ಲಿಗೆ ಪೇೞ್ದೊಡಾವಿಮರ್ದಕಂ ಮಗುೞ್ದಿಂತೆಂದಂ—

ಅನ್ಯಾಯಮಲ್ತೆ ಮತ್ಪತಿ ।
ಮಾನ್ಯಂ ಮತ್ತಾತನೊಲ್ದು ಕೂಡುವ ಸತಿಯುಂ ॥
ನಿಃಂ ನ್ಯಾಯಮಿದನ ಪ್ರೇಕ್ಷ ತ ।
ತ್ಕನ್ಯೆಯುಂ ಕೂರ್ತು ಮದುವೆಯಪ್ಪಿ ಗಡೀಗಳ್ ॥ ೧೫೮

ಎಂದು ವಿಮರ್ದಕಂ ಧಿಕ್ಕರಿಸಿದೊಡು ಕೇಳ್ದು ಕೇಳದಂತಾವಿರ್ಬರುಂ ಪೋಪಾಗಳಂತಂಗಡಿಗೇರಿಯೊಳ್ ಮುಂಚೆ

ನಯನಸುಖಾವಹಂ ದಲೆನಿಪಂಗಡಿಗೇರಿಯೊಳಲ್ಲಿಗಲ್ಲಿ ವಿ ।
ಸ್ಮಯಮನೊಡರ್ಚುವಗ್ಗಳದ ಗಾಯಕಪಾಠಕಸತ್ಕವೀಂದ್ರಸಂ ॥
ಚಯಮನೊಸಲ್ದು ನೋಡುತೊಲವಿಂ ಬರಲೊಪ್ಪುವ ಪಂಚವೀರಗೋ ।
ಷ್ಠಿಯೊಳನುರಾಗದಿಂ ಪದೆದು ನರ್ತಿಸ ತಿರ್ದಳದೊರ್ವಳುರ್ವಿಪಾ ॥ ೧೫೯

ಮನಸಿಜನ ಮಂತ್ರದೇವತೆ ।
ಜನಚೇತಸ್ಸತ್ತ್ವವಿತ್ತಹಾರಿಣಿ ವಿಕಸ ॥
ನ್ನವನಜಮುಖಿ ಕಾಮಮಂಜರಿ ।
ಯನುಜೆ ಕಳಾವಂತೆ ರಾಗಮಂಜರಿಯೆಂಬಳ್ ॥ ೧೬೦

ವನಿತೆಯೊಳೊಪ್ಪುಗುಂ ಕಮಠಕುಂತಳಮದ್ರಿಸಮಾಕ್ಷಿಯುಂಬರಾ ।
ನನಮಿಭಕುಂಭವಂತವಸನಂ ಮಣಿಸತ್ಕುಚಮಿಂದುಮಧ್ಯಮು ॥
ಬ್ಜನಿಭನಿತಂಬಮುಪಭ್ರಮರಪಾದಮಲಕ್ತರಸಪ್ರಕಾಶಮೋ ।
ಹನರುಚಿಧಾತುನೃತ್ತತನುಕರ್ಕಶದಿಂದೆಸೆದಿರ್ಪ ಪಾಂಗಿನಿಂ ॥ ೧೬೧

ಅದಲ್ಲದೆಯುಂ,

ಶಿರದಂದಂ ಪೊಸತಾಗೆ ಹಸ್ತವಲನಂ ಚೆಲ್ವಾಗೆ ಕಣ್ಬಲ್ಲಮು ।
ಚ್ಚರಿಯೆಂಬಂತಿರೆ ಪರ್ಬಗುರ್ಬಿಸೆ ಪದನ್ಯಾಸಂ ರಸಾವಾಸಮಾ ॥
ಗಿರೆ ನಾನಾಕರಣಂ ಕರಂ ಮೆಱೆಯೆ ಪೆಂಪಿಂದಂಗಹಾರಂ ಪೊದ ।
ಬ್ದಿರೆ ನೃತ್ಯಾಭಿನಯಕ್ಕೆದೇಂ ಮೆಱೆದಳೋ ತತ್ಕಾಂತೆ ರಂಗಾಗ್ರದೊಳ್ ॥

ಮನದನುರಾಗಮಂ ಮುಖವಿಳಾಸದೊಳಾಸ್ಯವಿಳಾಸಮಂ ವಿಲೋ ।
ಚನಯುಗದೊಳ್ ಸಿತಾಕ್ಷಿಗಳವಿಭ್ರಮಮಂ ಪಡೆಪಿಂ ಶಿರೋಜಕಂ ॥
ಪನದೊಳೆ ತಚ್ಛಿರೋವಿಧವನೊಪ್ಪವ ಹಸ್ತದೊಳಗ್ರಹಸ್ತಭಾ ।
ವನೆಯುನಲಂಪಿಸಿಂ ಕರಣದೊಳ್ ಕಮಲಾನನೆ ತೋಱಿಯಾಡಿದಳ್ ॥ ೧೯೩

ಪದವಿನ್ಯಾಸವಿಳಾಸದಿಂ ತನುಲತಾವಿಕ್ಷೇಪದಿಂ ಲೋಚನಾ ।
ಗ್ರದ ಸನ್ನರ್ತನದಿಂ ಕಪೋಳರುಚಿಯಿಂ ನುಣ್ಪೋಳ ಡಿಳ್ಳಯಿಯಿಂ ॥
ಮೃದುಹಸ್ತಾಯತದಿಂ ಲಸದ್ಭ್ರಮರಿಯಿಂ ಮೇಳಾಪದೊಳ್ಪಿಂ ತ್ರಿಭಂ ।
ಗದ ಸೊಂಪಿಂ ಸಲೆ ರಾಗಮಂಜರಿ ಕರಂ ಮೇಳೈಸಿದಳ್ ಲಾಸ್ಯಮಂ ॥ ೧೯೪

ಅಂತು ಭರತಮಾರ್ಗನಿರೂಪಣಕ್ರಮದಿಂ ಲಾಸ್ಯಮನೆಸಗುಮಾಗಳ್

ನೆರವಿಯೊಳೆನ್ನನದಾರ್ಗಂ ।
ಪರಿಕಿಸಲರಿದೆಂಬ ತೆಱದಿನಾಲಾಸ್ಯಮನ ॥
ಚ್ಚರಿಯಿಂದೆನೆ ನೋೞ್ಪಾಗಳ್ ।
ನಿರವಧಿಯಿಂದೆನ್ನ ಮೊಗಮನೀಕ್ಷಿಸುತಿರ್ದಳ್ ॥ ೧೯೫

ಮನದೊಲವಿಂದೆನ್ನಂ ನೋ ।
ಡಿ ನಸುನಗಲ್ಕಿರದದರ್ಕೆ ನಾಂ ಸೋಲ್ತಂ ॥
ಗನೆಗೊಳಗಾದೆಂ ಕಾಂತಾ ।
ಜನಚೇಷ್ಟೆಗಳೇನನೆಸಗವೆಲೆ ನೃಪತಿಲಕಾ ॥ ೧೯೬

ಕೂಣಿತದೃಷ್ಟಿಯೊಳೆನ್ನಂ ।
ಜಾಣೆಸೆನಂತಾಕೆ ನೋಡಲಾಗಳ್ ಸುಮನೋ ॥
ಬಾಣಂ ತನ್ನೈದಂಬಂ ।
ಮಾಣದೆ ಮುಳಿದೆನ್ನ ಮೇಲೆ ಕಡುಪಿಂ ಕಱೆದಂ ॥ ೧೯೭

ಅಂತಾನವಳ್ಗೊಳಗಾಗೆ,

ಮದನವಿಷಾಹಿ ಪುಷ್ಪಚಯದಾಂಷ್ಟ್ರಚಯಂಗಳಿನಾಗಳಟ್ಟಿ ಕ ।
ಚ್ಚಿದೊಡುಸಿರುರ್ಚೆ ಮೆಯ್ಮ್ನವಿರಡಮರ್ಕೆ ಕರಂ ತನು ಕಾಯ್ದು ಕಂದಿ ಚಿ ॥
ತ್ತದ ನೆಲೆದಪ್ಪಿ ಮಾತಿಸಿತುದೋಱದೆ ಸೈವೆಱಗಾಗಿ ಮುಂದಗಾ ।
ಣದೆ ಮಱೆದಾನಿರಲ್ ಮನೆಗೆ ಮೆಲ್ಲನೆ ತಂದನುಜೀವಿಯೋವಿದು ॥ ೧೯೮

ಅಂತು ಧನಮಿತ್ರನೆಂತಾನುಮೆನ್ನಂ ಮನೆಗೆ ಕೊಂಡು ಬಂದು

ಕುಳಿರ್ನ* ತುಷಾರದಿಂ ಮೃದುಮೃಣಾಳದಿನುತ್ಪಳತಾಳವೃಂತದಿಂ ।
ಮಳಯಜದಣ್ಪಿನಿಂ ತಳಿರ ಪಾಸಿಕೆಯಿಂ ಮದನಾಗ್ನಿದರ್ಪಮಂ ॥
ನಿಲಿಸಿ ಮಗುಳ್ದು ನೋಡಿ ಧನಮಿತ್ರನೆಲೇ ಅಪಹಾರವರ್ಮ ಸಂ ।
ಚಳಮನನೂನಕಾರಣಮನೋವದೆ ಪೇಳೆನಗೆಂದನಕ್ಕರಿಂ ॥ ೧೬೯

ಎನಲೊಡಂ,

ಇಂಗಿತಮನಱಿದುಮಱಿಯದ ।
ಭಂಗಿಯನನುಕರಿಸಲೇಕೆ ಕೆಳೆಯನೆ ಸಾಕಿ ॥
ನ್ನಂಗಜತಾಪಮನಾರ್ಪಿಂ ।
ಪಿಂಗಿಸಿ ಬಾಳ್ವಂತುಪಾಯಮಿನ್ನೆಂತೆಂದೆಂ ॥ ೧೭೦

ಅಂತು ರಾಗಮಂಜರಿಯಿಂದೆನಗಾದವಸ್ಥೆಯಂ ಪೇಳಲ್ ಧನಮಿತ್ರನಿಂತೆಂದಂ:—

ಅವಳೊರ್ವಂಗಲ್ಲದೆ ಧೂ ।
ರ್ತವಿಟರ್ ಪಲಬರ್ಗೆ ತನ್ನ ಜವ್ವನಮಂ ಬೀ ॥
ಱುವಳಲ್ತು ಗಣಿಕೆಯರ ಧ ।
ರ್ಮವನೊಲ್ಲವಳಲ್ಲಿ ನಿಸ್ಪೃಹಂ ಕೇಳ್ದಱಿವೆಂ ॥ ೧೭೧

ಅಂತವಳ್ ವೇಶ್ಯಾಧರ್ಮಮಂ ಬಿಟ್ಟು ಕುಲಸ್ತ್ರೀಪ್ರತಿಜ್ಞೆಯಂ ಮಾಡಲ್ ಮಾಧವಸೇನೆಯುಂ ಕಾಮಮಂಜರಿಯುಂ ಚಂಪಾಪತಿಯೋಲಗಕ್ಕೆ ರಾಗಮಂಜರಿಯನೊಡಗೊಂಡು ಪೋಗಿ

ಇವಳೆಮ್ಮ ಗಣಿಕೆಯರ ಧ ।
ರ್ಮವನೊಲ್ಲದೆ ಸಾಧ್ವಿಯಾಗಿ ಜೀವಿಸಿದಪೆನೆಂ ॥
ದು ವಿಟರ್ಕಳಂ ಕರಂ ನೋ ।
ಡುವ ಬಗೆಯಂ ಮಾಣ್ದಳೆಮಗೆ ಜೀವನಮೆಂತೋ ॥ ೧೭೨

ಮದದಿಂ ಸ್ವಧರ್ಮಮಂ ಮೀ ।
ಱಿವರಂ ದಂಡಿಸುವುದುಚಿತಮುರ್ವೀಶಂಗೆಂ ॥
ಬುದನಱಿದು ದೇವ ನೀನೀ ।
ಸುದತಿಯನೆಮ್ಮಂತಿರಲ್ಕೆ ಪೇಳ್ ದಯೆಯಿಂದಂ ॥ ೧೭೩

ಎಂದು ಬಿನ್ನಪಂಗೆಯ್ಯಲರಸಂ ರಾಗಮಂಜರಿಯುಂ ರಘುಂಕಿಸಿ ನಿನ್ನ ವೇಶ್ಯಾಧರ್ಮದೊಳಿರೆಂಬುದುಮವಳಿಂತೆಂದಳ್:—

ಲಲಿತಶರೀರವನೊಂದಂ ।
ಪಲಬಗೆರ್ಗಂ ಮಾಱುವಂದವೆಂತೆಂದೊಲವಿಂ ॥
ಕುಲಪಾಲಿಕಾಪ್ರಕಾರದಿ ।
ನಿಳೇಶ ಜೀವಿಸುವೆನಲ್ಲದಿರ್ದೊಡೆ ತೀರ್ವೆಂ ॥ ೧೩೪

ಎಂದವಳ್ ಗಾಢಪ್ರತಿಜ್ಞೆಯುಂ ಮಾಡಲರಸನೆಂತಾನುಂ ತಿಳಿಪಲಱಿಯದವಳ್ ತನ್ನಿಚ್ಛೆಯೊಳಿರ್ಕೆಂದವರಂ ಕಳಿಪಲ್ ಮಗುೞ್ದು ಮಾಧವಸೇನೆಯಿಂತೆಂದಳ್:—

ದೇವರ್ ಚಿತ್ತವಿಪ್ರುದಿವ ।
ಳ್ಗಾವಂ ಪತಿಯಾಗಿ ಬರ್ಪನವನೊಲವಿಂದೆ ॥
ನ್ನಾವಾಸದಿಂ ಮಗುೞ್ದು ।
ನ್ನಾವೆತೆಯುಂ ಪ್ರೊಕ್ಕೊಡವನತೀವದ್ರೋಹಂ ॥ ೧೩೫

ಎಂದವರರಸನಿಂ ಕರುಣಂಬಡೆದು ಪೋದುದಂ ಕೇಳ್ದಱಿವೆನೆಂದು ಧನಮಿತ್ರಂ ಪೇೞ್ದು ಸಮಯದೊಳ್

ಜಳಜಂ ಮುಕುಳಮನೆಯ್ದು ।
ಲ್ಕುಲಟಾಂಗನೆಯರ್ ಮನೋನುರಾಗಮನೆಯ್ದಲ್ ॥
ತಳವೆಳಗಾಗಲ್ ಕೋಕಂ ।
ನಲವಿಂದಪರಾಬ್ಧಿಗೆಯ್ದಿದಂ ದಿನನಾಥಂ ॥ ೧೩೬

ಅಂತು ಸೂರ್ಯಾಸ್ತಮಯಮಾಗಲೊಡಂ ಕಟ್ಟಲೆಯೊಳಾಂ ಕಾಮಮಂಜರಿಯು ಮನೆಗೆಯ್ದಿ

ವನಜಮುಖಿ ಕಾಮಮಂಜರಿ ।
ಧನಮಿತ್ರನ ಮನೆಯ ಚರ್ಮಭಸ್ತ್ರಿಕೆಯುಂ ತಂ ॥
ದನುನಯದೊಳಿತ್ತಪೆಂ ನಿ ।
ನ್ನನ ಜೆಯನೆನಗೀವುದೆಂದೆನತ್ಯುತ್ಸವದಿಂ ॥ ೧೩೭

ಎಂಬುದುಂ;

ನವನಿಧಿ ದೊರಕಲ್ಕೆಡೆನೂಂ ।
ಕುವರೊಳರೆ ನೆಗಟ್ದಿ ಚರ್ಮಭಸ್ತ್ರಿಕೆಯುಂ ಕೊ ॥
ಟ್ಟವಳಂ ಕುಲವಧುವೆನಲನು ।
ಭವಿಸುವುದೆಲ್ಲರ್ಗೆ ಸಮ್ಮತಂ ಪೋಗೆಂದಳ್ ॥ ೧೭೮

ಎಂದೊಡಾರಾತ್ರಿಯೊಳಾಂ ಚರ್ಮಭಸ್ತ್ರಿಕೆಯ ಪ್ರಾರ್ವವಿಧಾನಮಂ ಪೇಟ್ದು ಕುಡಲವಳಾರಾಗಮಂಜರಿಯುಂ ಕುಲಸ್ತ್ರೀರೂಪದಿಂ ಕೈವರ್ತಿಸಲ್ ಬಟಿಕ್ಕಾಂ ಧನಮಿತ್ರನಂ ಕರೆದಿಂತೆಂದೆಂ:—

ನಿನ್ನಿರುಳ್ ಚರ್ಮರತ್ನವ ।
ನೆನ್ನರದೆಂದಱಿಯೆನಾರೊ ಕಳ್ದರದಕಾರ್ ॥
ನಿನ್ನೇವೆನೆಂದು ಮೊರೆಯಿಡು ।
ನಿನ್ನಾಪಿರ್ದುಸಿರ್ಪುದರ್ಥಪತಿಯು ಕಳಂಕಂ ॥ ೧೭೯

ಎನಲಾತನಾಮಱುದೆವಸಮರಸನೋಲಗಕ್ಕೆ ಪೋಗಿ

ಏಗೆಯ್ವೆನರಸ ಎನ್ನನು ।
ರಾಗಂ ಪೋದತ್ತು ಚರ್ಮರತ್ನದ ಸಿರಿಯುಂ ॥
ನೀಗಿದೆನೆನ್ನಸುವಂ ನಿನ ।
ಗೀಗೊಪ್ಪಿಸುವೆಂ ವಿಚಾರಿಪುದು ದಯೆಯಿಂದಂ ॥ ೧೮೦

ಎಂದೊಡರಸನಾತಂಗೆ ಕರುಣಿಸಿ ನಿನ್ನ ಚರ್ಮರತ್ನಂ ಪೋದ ಪೊಲಂಬಂ ಬಲ್ಲೊಡೆ ಪೇಟೆಂಬುದುಂ

ಪಲಕಾಲಮರ್ಥಪತಿಯುಂ ।
ನಲವಿಂದೋಲಗಿಸುವಂ ವಿಮರ್ದಕನೆಂಬಂ ॥
ಮುಳಿದಾತನೆಲ್ಲರಱಿಯಲ್ ।
ಪಟಿಯಿಲ್ಲದೆ ನಿನ್ನೆ ಬೈದನೆನ್ನನಿಳೇಶಾ ॥ ೧೮೧

ಅದಲ್ಲದೆಯುಂ,

ಎಲವೆಲವೊ ಚರ್ಮರತ್ನದ ।
ಬಲವಂ ತಗ್ಗಿಸುವೆನೊಂದಿರುಳ್ ನಿದ್ರೆಯು ಹಂ ॥
ಬಲನೊಲ್ಲದಿರ್ದೊಡೆನುತ ।
ಗ್ಗಲಿಸಿ ಮರುಕ್ತಿಯನುಸಿರ್ದನೆಲ್ಲರ್ ಕೇಳಲ್ ॥ ೧೮೨

ಎಂದು ಪೇೞಲರಸನಾನದಂ ವಿಚಾರಿಸಿ ಕೊಟ್ಟಪೆನೆಂದು ಧನಮಿತ್ರನಂ ಕಳುಪಿಯರ್ಥಪತಿಯಂ ಕರಸಿ

ನಿನಗೆ ವಿಮರ್ದಕನೆಂಬೊ ।
ರ್ಬನುಂಟೆ ಪೇೞೆಂದೊಡರ್ಥಪತಿಯೆನ್ನಯ ನ ॥
ಚ್ಚಿನ ವಿಶ್ವಾಸಿಯವಂ ಮ ।
ತ್ತನುಪಮನುಂಟೆಂದೊಡಾತನಂ ಕರಸೆಂದಂ ॥ ೧೮೩

ಎಂದೊಡೆ ಮಹಾಪ್ರಸಾದಮೆಂದರ್ಥಪತಿ ವಿಮರ್ದಕನಂ ನೋಡಲೆಂದು

ಸೂಳೆಯರ ಮನೆಗಳೊಳ್ ಜೂ ।
ಜಾಳಿಗಳಾಲಯದೊಳಂಗಡಿಯೊಳರಸಿ ಬೞಿ ॥
ಕ್ಕಾಳಂ ಕಾಣದೆ ತದ್ಗೃ ।
ಹಾಳನ ಮುಂದಕ್ಕೆ ಬಂದು ಬೆಱಗಾಗಿರ್ದಂ ॥ ೧೮೪

ತಾನವನನೆಲ್ಲಿ ಕಂಡಪ ।
ನಾನೊಲವಿಂ ನಿಮ್ಮ ಕುಱುಪನಱಿಪಿ ಬೞಿಕ್ಕಂ ॥
ನೀನೀಗಳ್ ಪೋಗೆಂದು ।
ಜ್ಜೈನಿಗೆ ಕಳುಪಿದೆನವಂ ತೆರಳ್ದಂ ಬೇಗಂ ॥ ೧೮೫

ಅಂತಾವಿಮರ್ದಕನಂ ಧನಮಿತ್ರನೊಳ್ ತೋಟಿಮಾಡಿದಿರುಳ್ ನಿಮ್ಮಡಿಯನಱಿಸಲ್‌ಕಳುಪಿ ಅದುಕಾರಣಮರ್ಥಪತಿಯವನಂ ಕಾಣದೆ ಮಗುಳ್ದರಸನೆಡೆಗೆ ಬಂದು ಕರಂಗಳಂ ಮುಗಿದು ನಿಲ್ವುದುಂ; ಅರಸನಿಂತೆಂದಂ:—

ಮರುಳ್ ವಿಮರ್ದಕನಿಂ ಚ ।
ರ್ಮರತ್ನಮಂ ಕಳಿಸಿಯವನನೋಡಿಸಿ ತಾನೆ ॥
ಲ್ಲರ ಮುಂದೆ ಸಭ್ಯನಾಗಿ ।
ರ್ಪಿರವಂ ನೋಡೆಂದು ಕೋಪಿಸಿದನುರ್ವೀಶಂ ॥ ೧೮೬

ಅಂತು ಕೋಪಿಸುವುದುಂ;

ಮಱೆದಿರ್ದರ ಮಸ್ತಕಮಂ ।
ಬಱಸಿಡಿಲಾರ್ದೆಱಗಿದಂತೆ ತನ್ನಯ ಭಯದಿಂ ॥
ಬೆಱಗಾದನರ್ಥಪತಿ ತಾ ।
ನಱಿಯದನರ್ಥಕ್ಕೆ ಸಂದೆಯಂ ಪುಟ್ಟಲೊಡಂ ॥ ೧೮೭

ಅಂತು ಬೆಸಗೊಳಲೊಡಮದುಂ ಸಂದೇಹಮಾಗಿಯರಸಂ ಕಳ್ಳನಂ ತರಿಸಿ ಕೊಡೆಂಬೊಡರ್ಥಪತಿ-ನಾಲ್ಕೆರಡುದಿನದೊಳ್ ತರಿಸಿ ಕೊಟ್ಟಪೆನೆಂಬುದುಂ;

ಅನ್ನೆಗಮಾತನನುಜೆ ಬ ।
ಲ್ಪಿನ್ನಿಗಡನಿರೋಧದಲ್ಲಿ ಕುಳ್ಳಿರಿಸಿ ಬಳಿ ॥
ಕ್ಕನ್ನೋಲ್ಪಿಮಿವನ ಕಲ್ಲೆರ್ದ ।
ಯನ್ನಿಷ್ಠುರಶಸ್ತ್ರಹತಿಯಿನೇಂದನಿಳೇಶಂ ॥ ೧೮೮

ಎಂದು ಅರ್ಥಪತಿಯುಂ ನಿಗಡನಿರೋಧಮುಂ ಮಾಡಿಸಿದಂ. ಇತ್ತಲ್ ಮಾಧವಸೇನೆ ಕಾಮಮಂಜರಿಯುಂ ಚರ್ಮಭಸ್ತ್ರಿಕೆಯ ಫಲಮಂ ಪೇೞೆಯು ಲೆಂದು

ಅಪಲಾಪಿಸಿ ಕೊಂಡರ್ಥವ ।
ನುಪಚರಿಸಿ ವಿರೂಪಕಂಗೆ ಕೊಟ್ಟು ಬಳಿಕ್ಕ ॥
ದರ್ಪಸಿಧಿಯುಮನೆಲ್ಲಮಂ ದ್ಯೈ ।
ನ್ಯಪಾತ್ರದೊಳ್ ಕೊಟ್ಟರಲ್ಲರಱಿವಂತಾಗಳ್ ॥ ೧೮೯

ಅದನಾಂ ಕಂಡಿನ್ನೀ ಚರ್ಮಭಸ್ತ್ರಿಕೆಯುಂ ಪರೀಕ್ಷಿಸುವರೆಂದಱಿದು ಧನಮಿತ್ರನಂ ಕರೆದು ಚರ್ಮಭಸ್ತ್ರಿಕೆಯ ವಿಧಾನಂ ಕಾಮಮಂಜರಿಯ ಮನೆಯೊಳಗಿರ್ಪುದೆಂದರಸಂಗೆ ಪೇೞೆಂಬುದುಮಾತಂ ಪೋಗಿ

ಕೇಳರಸ ಕಾಮಮಂಜರಿ ।
ಯಾಲಯದೊಳ್ ಚರ್ಮರತ್ನಮಿರ್ಪುದೊಲಗಱಿಂ ॥
ಸ್ಥೂಲವಿದಾನಂ ನಡೆದಪು ।
ದಾಲಿಸುವಂತೊರ್ಬ ದೂತನಂ ಕಳಿಪೆಂದಂ ॥ ೧೯೦

ಕಾಣಿಗೆ ಕಾಣಿಯುನರ್ಚಿಪ ।
ಕೇಣಂ ಮಾಣ್ದೀಗಳುಳ್ಳ ತನ್ನರ್ಥಮನು ।
ಗ್ರಾಣಿಸದಿತ್ತಪಳೀಬಿ ।
ನ್ನಾಣಮುಮಾಚರ್ಮಭಸ್ತ್ರಿಕೆಯ ಬಲಮಲ್ತೇ ॥ ೧೯೧

ಅಂತೆಯುಂತರ್ಥನಬಹಿರ್ಧನಮುಂ ಮುಸಲೋಲೂಖಸಹಿತಂ ವ್ಯಯಂಗೆಯ್ದು ಚರ್ಮಭಸ್ತ್ರಿಕೆಯಿಂ ಮುಕ್ಕುವ ಬಹುಧನಾಪೇಕ್ಷೆಯಿಂಬೆಂದರಸಂಗೆ ಪೇೞ್ವುದುಮಾತನೊರ್ಬಗೂತನಂ ಕಳಿಪಲನಂ ಪೋಗಿ ಬಂದು

ಅತಿವಿಸ್ಮಯದಾನಮನ ।
ಪ್ರತಿಯಾಗಲ್ ದೇವ ಕಾಮಮಂಜರಿ ಮೊೞ್ಪ ॥
ನ್ನತಿಯಂ ಕಾಣಿಯೊಳರ್ಥಂ ।
ಸ್ಥಿತಮಾಗಿರಲಱಿಯದಿನ್ನದೇನಂ ಪೇೞ್ವೆಂ ॥ ೧೮೨

ಎಂದಾದೂತಂ ಬಂದು ಪೇೞ್ದೊಡೆ ಅದು ಚತುರ್ಭಸ್ತ್ರಿಕಾವಿಧಾನಂ ತಪ್ಪದೆಂದು

ಭರದಿಂ ಮಾಧವಸೇನೆಯು ।
ನರವರಿಸದೆ ಕಾಮಮಂಜರಿಯನೀಕ್ಷಣಮಿ ॥
ಬರ್ಗರುಮನೊಡಗೊಂಡು ಬರಲೆಂ ।
ದರಸಂ ಕಳಿಪಿದನದೊರ್ವ ಭೀಕರಮುಖನಂ ॥ ೧೮೩

ಅಂತಾಮೊತಂ ಬಂದು ತವಕದಿ ಕರೆವುದಂ ಕಂಡಾಮಾಧವಸೇನೆಗಿಂತೆಂದೆಂ:—

ಇದು ಚತುರ್ಭಸ್ತ್ರಿಕಾಸಂ ।
ಪದಮಂ ತಿಳಿಯಲ್ಕೆ ಬಂದ ಪರಿ ನೀಮತಿಗೂ ॥
ಢಮ ಕಾರ್ಯಮಂ ಜಗತ್ಪ್ರಕ ।
ಟದಿನೆಸಗಿದಿರೆಂತು ಕಳೆವೆವೀದುರ್ಘಟಮಂ ॥ ೧೮೪

ಎಂದಾನವರೊಳ್ ಸಮಾಲೋಚನಂಗೆಯ್ಯಲವರ್ ದೀನವದನರಾಗಿರಲದಂ ಕಂಡಾಂ ಮತ್ತಮಿಂತೆಂದೆಂ:—

ಎನ್ನಸುಮಂ ನಿಮ್ಮಸುಗಳ ।
ನುನ್ನತಿಯಿಂ ಕಾಪ್ಪೊಡಾನುಪಾಯಮನೊಂದಂ ॥
ಚೆನ್ನೆಸೆಯೆ ಪೇೞ್ವೆನೆನಲವ ।
ರೆನ್ನಂಘ್ರಿದ್ವಯದೊಳೆಱಗಿ ಬ*ರ್ದುಕಿಸುವುದೆಂದರ್ ॥ ೧೮೫

ಎಂದೊಡಾನವರ್ಗಿಂತೆಂದೆಂ:—

ಆದಿವಿಡಿದರ್ಥಪತಿಗಪ ।
ವಾದಂ ಪೊರ್ದಿರ್ಪುದದಱಿನವನಿತ್ತಂ ಚೆ ॥
ಲ್ವಾದಜಿನರತ್ನಮಂ ಕೇಳ್ ।
ಮೇದಿನಿಪತಿಯೆಂದು ಪೇೞ್ವುದಿದು ಸತ್ಕಾರ್ಯಂ ॥ ೧೮೬

ಎಂದಾಂ ಪೇೞೆ ಮಾಧವಸೇನೆಯುಂತೆಗೆಯ್ವೆನೆಂದು

ನರೆಗೂದಲ್ಗಿಕ್ಕಿ ನುಣ್ಪಂ ಮುಡಿಯನಳವಡಲ್ಸೆಕ್ಕಿ ಬತ್ತಿರ್ದ ವ
ಕ್ತ್ರಾಂ | ಬುರುಹಂ ಮಿಂಚಾಗಲಿರ್ಪಂ ತೊಡೆದು ತೊಡರ್ವ ಲಂಬಸ್ತ
ನದ್ವಂದ್ವಮುಂ ಮೋ || ಲ್ವರೆ ಬಲ್ಪಿಂ ಸೊಂಕಿಲಿಂದಂ ಬಿಗಿದು ಮುಸುಕನಿ
ಟ್ಟೈದಿದಳ್ ವೃದ್ಧೆ ಚೇತೋ | ಭರದಿಂ ತದ್ಗೋಪನಾಸ್ಥಾನಮನವಿರಳಹ
ಸ್ತಾಬ್ಜಸಂಕೋಚೆಯಾಗಳ್ || ೧೯೭

ಅಂತು ಮಾಧವಸೇನೆಯುಮಾಸ್ಥಾನಮಂ ಪೊಕ್ಕಗಸಂಗೆ ಪೊಡೆಮಟ್ಟು ನಿಲ್ವುದುಮವಳಂ ಕಂಡರಸನಿಂತೆಂದಂ:—

ಏನೆಲೆಗೆ ಚರ್ಮರತ್ನವಿ |
ಧಾನಂ ನಿಜಗೇಹದಲ್ಲಿ ನಡೆದಪ್ಪುದನೀ ||
ಸ್ಥಾನದೊಳಿತ್ತವನಾವನ |
ದೇನೆಂಬುದನುಸಿರ್ವುದೀಪ್ರದೀಗಳ್ ಬೇಗಂ || ೧೯೮

ಎಂಬುದುಂ; ಮಾಧವಸೇನೆಯಿಂತೆಂದಳ್:—

ಕ್ಷಿತಿಪತಿ ಬಂದಿಕಾಜನಧವಂ ಕಿತವಂ ಮನೆಗಳ್ಳನಸ್ಮದೋ |
ದ್ಗತವಿಟನಧ್ವಚೋರನತಿಯೌವನಮತ್ತನನೀತನರ್ಥಗ |
ರ್ವಿತನೆನಿಸಿರ್ಪ ದುರ್ವ್ಯಸನಿಯಲ್ಲದೆ ಪಣ್ಯವಧೂಜನಕ್ಕೆ ಜೀ |
ವಿತಧನದೇಹವೆಂಬಿನಿತನೀವನೆ ಕಾಮುಕವೃತ್ತಿಯೋಳ್ಗೆಯೊಳ್ || ೧೯೯

ಎನಲಿವರೊಳ್ ನಿನಗಿತ್ತವನಾವಂ ಪೇೞೆಂಬುದುಂ;

ಚಿತ್ತವಿಸಿತ್ತಲ್ ಧರಣೀ |
ಶೋತ್ತಮ ಮತ್ಸುತೆಗೆ ಕಾಮಮಂಜರಿಗೊಲವಂ ||
ಪೆತ್ತ ಜಿನರತ್ನಮಂ ಕೂ |
ರ್ತಿತ್ತನ್ನಲಿದರ್ಥಪತಿಯಿದಲ್ತೆ ವಿಧಾನಂ || ೨೦೦

ಎಂದು ಮಾಧವಸೇನೆ ಪೇೞ್ವುದುಮಾಗಳೆ ಕಾರಾಗೃಹದೊಳಿರ್ದರ್ಥಪತಿಯನರಸಂ ಕರೆಸಿ,

ಎಲೆ ಕಿತವ ಚರ್ಮರತ್ನವ |
ನೊಲವಿಂದಂ ಕಾಮಮಂಜರಿಗೆ ಕೊಟ್ಟೆನ್ನೊಳ್ ||

ಪೊಲಬಂ ಪೇೞದೆ ನೀಂ ಸಂ ।
ಕಲೆಯೊಳ್ ಬೀೞಲ್ಕೆ ಬಿಡುವೆನೆಲೆ ದುರ್ವೃತ್ತಾ ॥ ೨೦೧

ಎಂದರಸಂ ಕೋಪಿಸಿ ಸರ್ವಕವರ್ತಿಯುಂ ಮಾಡಿಮೆಂದು ಸಮೀಪಸ್ಥಗೆ ಪೇೞ್ವುದುಂ

ನವರತ್ನಮನವನುಳ್ಳ ।
ರ್ಥವನಾಭರಣಂಗಳಂ ಲಸದ್ವಾಹನಮುಂ ॥
ವಿವಿಧಾಂಬರಮುಂ ಪಶುದಾ ।
ಸಿವರ್ಗಮುಂ ಕವ*ರ್ದು ತಂದರರಮನೆಗಾಗಳ್ ॥ ೨೦೨

ಅದಲ್ಲದೆಯುಂ

ಒರಳೊನಕೆಮಡಕೆಯೊಳಗವ ।
ಧರಿಸದೆ ಸಲೆ ಸರ್ವವಸ್ತುವಂ ಕವ*ರ್ದವನಂ ॥
ನರಕಿಮನಂತಕನಿಲಯಮ ।
ನೆರೆಮನೆಗಟ್ಟೆಂದನರ್ಥಪತಿಯನಿಳೇಶಂ ॥ ೨೦೩

ಅಂತು ಸರ್ವಸ್ವಾಪಹಾರಂಗೆಯ್ದವನನಂತಕಮಂದಿರಕ್ಕೆ ಕಳಿಪುವುದಂ ಧನಮಿತ್ರಂ ಕಂಡು

ತನಗುಪಕಾರಂಗೆಯ್ವಂ ।
ಗೆನಸುಂ ಲೇಸಂ ನೆಗೞ್ವುದು ಕರ್ತವ್ಯಂ ॥
ತನಗಪಕಾರಂಗೆಯ್ದಂ ।
ಗನವರತಂ ಲೇಸನೆಸಗುವುದು ಸನ್ಮಾರ್ಗಂ ॥ ೨೦೪

ಎಂಬುದಂ ತಿಳಿದು ಧನಮಿತ್ರನರಸನ ಕೂಡೆಯಿಂತೆಂದಂ:—

ಧಾರಿಣಿಯೊಳರಸುಗಳ್ ವ್ಯವ ।
ಹಾರಿಗಳಂ ತೀರ್ಚಲಾಗದೇಗೆಯ್ದೊಡಮುಂ ॥
ಬೀರಾಜನೀತಿಗಾದೆಯ ।
ಮೀಱುವವರುಮುಂಟೆ ಪೇೞ್ ಕೃಪಾಳುನೃಪಾಲಾ ॥ ೨೦೫

ಎಂದು ಧನಮಿತ್ರಂ ಪೇೞ್ದೊಡರ್ಥಪತಿಯನರಸಂ ಕಾಯ್ದಿಂತೆಂದಂ—

ನಲವಿಂ ಮಾಧವಸೇನೆಯ ।
ನಿಲಯದೊಳರ್ದ ಜಿನರತ್ನಮಂ ಧನಮಿತ್ರಂ ॥
ಗೊಲವಿಂ ತರಿಸಿತ್ತಂ ನೃಪ ।
ತಿಲಕಂ ಲಕ್ಷ್ಮೀನಿವಾಸನಿಜಹೃತ್ಪದ್ಮಂ ॥ ೧೦೬

ಅಂತಾಚರ್ಮಭಸ್ತ್ರಿಕೆಯುಂ ಧನಮಿತ್ರಂಗೆ ತರಿಸಿ ಕುಡಲಾಧನಮಿತ್ರಂ ಮಾಧವಸೇನೆಯ ದೀನಭಾವಮಂ ಕಂಡು

ಮಱೆಯುಮುದಕದ ಬರವಿಂಗಂ ।
ಕೊಳದುದಕಮನೆಯ್ದೆ ತುಱುಕಿದೆಗ್ಗನೆ ತೆಱನೀ ॥
ಗಳುಮೀಮಾಧವಸೇನೆಗೆ ।
ನೆಲೆಯಾಯ್ತೆಂದವನಿಪತಿಗೆ ಮತ್ತೆಂತೆಂದಂ ॥ ೧೦೭

ಇನಿತಜಿನರತ್ನಮಂ ನ ।
ಚ್ಚಿ ನಿಜಾಲಯದರ್ಥಮೆಲ್ಲಮಂ ಬೀಯಂಗೆ ॥
ಯ್ದನಸುಂ ದರಿದ್ರೆಯಾದಳ್ ।
ಜನಪತಿಯೀಯರ್ಥಪತಿಯು ಧನದೊಳ್ ಕಿಱಿದಂ ॥ ೧೦೮

ಎಂದು ಕಿಱಿದರ್ಥಮಂ ಕುಡಿಸಿ ಕಳಿಪಿಸಿ ಧನಮಿತ್ರಂ ಕೃತಾರ್ಥತೆಯಿಂ ದರಸನಿಂ ತಾನುಂ ಕಳಿಪಿಸಿಕೊಂಡು ನಿಜಾಲಯಕ್ಕೆ ಪೋಗಿ ಕತಿಪಯದಿನಂಗಳ್ಗೆ

ಜನವಱಿಯಲರ್ಥಪತಿ ನಿ ।
ರ್ಧನನಾದುದನಱಿದು ಮೆಱೆವ ಕುಲಪಾಲಕಿಯುಂ ॥
ವಿನುತಿಯ ಕುಬೇರದತ್ತಂ ।
ಧನಮಿತ್ರಂಗಿತ್ತನೊಳ್ಮುಹೂರ್ತದೊಳಾಗಳ್ ॥ ೧೦೯

ಅಂತು ಚಿಂತಿಸಿಮುವೆಲ್ಲಂ ಸಂತತವಾಗಲಾಂ ಬೞಿಯಂ,

ಸಕಲೋಪಾಯಂಗಳಂ ತತ್ಪುರದ ಧನಿಕರುಳ್ಳರ್ಥಮಂ ಕಳ್ದು ಭೋ
ಗಾ । ಧಿಕದಿಂ ತ್ಯಾಗಪ್ರದಾನೋನ್ನತಿಯಿನನುಪಮಾತ್ಮಪ್ರಿಯಾಸಂಗದಿಂ
ಕಾ ॥ ತುಕಮಂ ತಾಳ್ದಿರ್ಪಿನಂ ಭೋಂಕನೆ ಮನದೊಲವಿಂದೊರ್ಮೆ ಕೇಳ್
ಭೂಪ ಮತ್ತಾ । ಬ್ಯಕೆ ಭಂಗಂ ಪೊರ್ದಿತಾರ್ಪಿಂ ವಿಧಿಲಿಖಿತವನುಲ್ಲಂಘಿ
ಸಲ್ಬಲ್ಲನಾವಂ ॥ ೧೧೦

ಎಂಬುದುಮದೇನೆಂದರಸಂ ಕೇಳ್,

ಮನದೊಳ್ ಕೂರ್ಪಾಸ್ಯದೊಳ್ ಮ್ಲಾನತೆ ಬಗೆಯೊಳ್ ರೋಷಂ ಲಸ
ದ್ವಾಕ್ಯದೊಳ್ ಭ । ರ್ತ್ಸನೆ ಚಂಚದ್ದೃಷ್ಟಿವಿಕ್ಷೇಪಣದೊಳನುನಯಂ
ಪುರ್ಬಿನೊಳ್ ಜರ್ಬುರ್ ದೂತೀ ॥ ಜನದೊಳ್ ಚಿತ್ತಾನುತಾಪಪ್ರಸರತಿ
ಮುಖದೊಳ್ ಕೋಪನೊಪ್ಪಲ್ಕೆ ಪೆಂಪಾ । ದ ನವೀನಪ್ರೌಢಿಯಿಂದಂ ಪ್ರ
ಣಯಕಲಹಮಾಯ್ತೆನ್ನೊಳಬ್ಜಾಕ್ಷಿಗಾಗಳ್ ॥ ೨೧೧

ಆಪ್ರಣಯಕಲಹಪ್ರಗಿಲೊಳ್

ಶಿಶಿರದಿನಂಬುಜಕ್ಕೆ ದುಗುಡಂ ಘನಮೋಘದಿನಾಗಸಕ್ಕೆ ಕ।
ರ್ಪೆ ಶನಿಯಿನಪ್ರಿಗಳ್ಗೆ ಭಯಮರ್ಥವಿಮೋಹದಿನುತ್ತಮರ್ಗೆ ದು ॥
ರ್ಯಶಮವಲೇಪದಿಂ ಬುಧರ್ಗೆ ದುರ್ಗತಿಯಪ್ಪವೊಲೆನ್ನೊಳಾವುದಾ।
ಶಶಿಮುಖಿಯಿಂದಮೊಂದವಗುಣಂ ವಿಧಿಯಿಕ್ಕಿಯಿನುರ್ವರಾಧಿಪಾ ॥ ೨೧೨

ಅದೆಂತೆನೆ—

ಸಕಳಸುಗಂಧಸಾರದೊದವಿಂ ಪೊರೆದುತ್ತಮಗಂಧದಿಂದೆ ಕಾ ।
ತುಕಮೆನಲೊಪ್ಪವೆತ್ತ ತಿಳಿಗಳ್ಗಳನೊಪ್ಪವ ಹೇಮಪಾತ್ರದೊಳ್ ॥
ಸುಕರಮೆನಲ್ಕೆ ತುಂಬಿ ಸಖಿಯರ್ ರಸುತ್ಸವದಿಂದೆ ಪೀರ್ದರ್ಳು ।
ತ್ಸುಕಮೆನೆ ರಾಗಮಂಜರಿಯುದೊಂದು ದಿನಂ ಪೆಸರ್ವೆತ್ತ ಜೊನ್ನದೊಳ್ ॥

ಅಲ್ಲಿ ಕೆಲಂಬರ್

ಕಡುಪ್ರಿಯೆಗಳ್ಗನೊಂದು ತಿಳಿವಟ್ಟಲನಿಟ್ಟೆಯಿಯಲ್ಕೆ ಮಾಳು ಸೂಚ್ ।
ಮಿಡಿಮಿಡಿವರ್ಧಮಂ ಕುಡಿಮು ಚಪ್ಪಿಖಿಡಿಕ್ಕಿದ ಸಣ್ಣವಿಸಾಂಗಳಂ ॥
ಮಿಡಿಚೆಗಳಂ ಕುಖುಂಕಿ ಮಗುಳ್ದೀಂಟಿಯೆ ಘಟ್ಟನೆ ತೇಗಿ ಬಾಗ್ಗೆಯೆ ।
ನ್ನೊಡೆಯನೆನುತ್ತದೇಂ ವೆ ಖಿದರೋ ಸಖಿಯರ್ಮಧುಪಾನಗೋಷ್ಠಿಯೊಳ್

ಪ್ರಿಯ ಘನವಾಗೆ ಕೊಕ್ಕರಿಸಿ ಗುಗ್ಗರಿಯುಂ ಕೊಳೆಮುಕ್ಕಿ ಮಿಕ್ಕದಂ।
ಕೆಲವವರ್ಗಿತ್ತು ಮತ್ತೆ ತಿಳಿಗಳ್ಳೆಖಿಯಲ್ ಕುಡಿ ಸುಳ್ಳಿ ಪಿಟ್ಗಿಲಾ ॥
ಗಳೆ ಕುಡಿವೆಬ್ಬಿ ತೆಂಥಣಿಸಿ ಬಿಬ್ಬಿ ನೆಬಿಲ್ ಸುಖಿಯಲ್ಕೆ ನಕ್ಕು ಕ ।
ಣ್ಗಳನರೆಮುಚ್ಚಿ ಮುಚ್ಚಿ ತೆಖೆಯುತ್ತೆ ಸೆವರ್ ಮಧುಪಾನಕೇಳಿವಿದರ್॥ ೨೧೫

ಅಂತೊಂದು ದಿವಸಮವರೆಲ್ಲರುಂ ಮಧುಪಾನಮಂ ಮಾಡಿಪರ್ಗಳ್ ಪ್ರಣಯಕಲಹದೊಳ್ ಮುಳಿದಿರ್ದೆನ್ನಂ ರಾಗಮಂಜರಿ ಕಂಡು

ಕೆಳದಿಯರ ಮಧ್ಯದೊಳ್ ಕೋ ।
ಮಳೆ ಮಧುಪಾನಪ್ರಸಂಗದಿಂದಿರ್ದನ್ನೊಳ್ ॥
ಮುಳಿಸಿಲ್ಲದೆ ಮಧುವಂ ಮು ।
ಕ್ಕುಳಿಸಿ ಮದೀಯಾಸ್ಯಕಮಳಮಂ ಚುಂಬಿಸಿದಳ್ ॥　　೨೧೭

ಅಂತು ಚುಂಬಿಸಿ ಮತ್ತಂ ಸ್ವಾದುರಸಮಾಗಿರ್ದಪುದೆಂದೆನ್ನಂ ತನ್ನಂತೆ ಮಾಡಲ್ವೇಳ್ಪುದುಂ;

ಸ್ತ್ರೀವಶವಾದವರನ್ವಯ ।
ಜೀವನದುಂ ಪಾಪಪುಣ್ಯಮುಂ ನೀತಿಗಳಂ ॥
ತೀವಿದಿಹಪರದ ಸುಖಮಂ ।
ಭಾವಿಸುವರೆ ಕಾಮತತ್ತ್ವಮಚ್ಚರಿಯತ್ತೇ ॥　　೨೧೮

ಅವಲ್ಲದೆಯುಂ,

ಚತುರಕಳಾಢ್ಯರಂ ಕುಶಲಜೀವನರಂ ಸುಕೃತಾತ್ಮರಂ ಕರಂ ।
ಯತಿಗಳನುತ್ತಮಾನ್ವಯಸಮುಸ್ಥಿತರಂ ಸಕಲಾಗಮಜ್ಞರಂ ॥
ಗತಿಗೆಡಿಸಲ್ಕೆ ಮತ್ತೆ ಪೆಱತಾವುದೊ ಭಾವಿಸೆ ತಾನ್ರ ದೇವ ಕೇಳ್ ।
ಸತಿಯರ ಸಂಗಮಲ್ಲದೆ ಮನೋಜನ ಜಾಣ್ಮೆಯನಾರೊ ಮಿಱುವರ್ ॥

ಅದುಕಾರಣಮಾನವಳಂ ಮಿಱಲಱಿಯದೆ,

ಅಲರ್ಗಣೆ* ಕೆಂಪಡರಲ್ಕೆ ಪೊಂಗಿದಧರಂ ಬೆಳ್ಪಾಗೆ ರೋಮೋದ್ಗಮಂ ।
ತಲೆದೋಱಲ್ ಬೆಮರುಣ್ಮೆ ಲಜ್ಜೆ ತೊಲಗಲ್ ಸಿತ್ರಾಣಮಾಗಲ್ ಮುಮ ॥
ಬಲಿಯಲ್ ಕಣ್ಮುಗಿಯುತ್ತೆ ಮೂರ್ಛೆ ಮಿಗೆ ತೋಱಲ್ ನಾಡೆ ಚೆಲ್ವಾದುದ ।
ಗ್ಗಳವೆಂಬಂತಿರಲಿನ್ನ ದೇಪ್ರಾಗಬ್ಬಿ*ದೋ ಕಾದಂಬರೀಪಾನಮಂ ॥　　೨೧೯

ಅನಂತರಂ,

ಉನ್ಮಾದಂ ತಲೆದೋಱಲ್ ।
ಮನ್ಮನಮಂ ನಿಲಿಸಲಱಿಯದಲ್ಲಿಂದಾಗಳ್ ॥
ತನ್ಮಾತ್ರಬೊಳಾರಾತ್ರಿಯೊ ।
ಳುನ್ಮೀಳಿತದೃಷ್ಟಿಯಾಗಿ ಪುರದೊಳ್ ಪರಿದೆಂ ॥　　೨೨೦

ಅನ್ನೆಗಮೆನ್ನ ಪಿಂತನೆ

ಗುಣಿ ರಾಗಮಂಜರಿಗೆ ಸ ।
ದ್ಗುಣಿಕಾರತ್ನಕ್ಕೆ ಸತ್ಕ್ರಿಯಿಂ ಧೂರ್ತಶಿಖಾ ॥
ಮಣಿ ನೀತಿವಂತೆ ಪುದುಗುಂ ।
ಟಣಿಯುಪ್ಪಳ್ ಮಾತಿನ್ರೋಲ್ ಸೃಗಾಲಿಕೆಯೆಂಬಳ್ ॥ ೨೦೧

ಪರಹೃದಯಪ್ರವೀಣತೆಯನೋಗಟೆಯ ಧರ್ಮನೂರ್ಧ್ವಬುದ್ಧಿಯು ।
ಚ್ಛರಿಯನನನ್ಯಯಾಧರ್ಘಟನಾವಿಧಿಯುಂ ಸತತಂ ಲಸತ್ಕಳಾ ॥
ಪರಿಣತಿಯುಂ ಸಮಸ್ತ ಸಮ್ಯಕ್ಶಿಕಮುಂ ವಿಧಿಯೊಂದುಗೂಡಿವಂ ।
ಧರಣಿಯೊಳ್ ಜಿನಂ ಪೆಱೆಗಳಾವುದುಗುಂ ಬಣಿಯವರ್ಗರಾಧಿಪಾ ॥ ೨೦೨

ಅಂತವಳ್ಸ್ನ ಪಿಂದನೆ ಪರಿತಪಾಂಗಳ್
ತಿಂತಿಣಿಯು ರಾತ್ರಿಯೊಳ್ ಕಾ ।
ಲಾಂತಕರ ತ್ರಿಪರ ನಗರರಕ್ಷಕರಾಗಳ್ ॥
ಭ್ರಾಂತಿಂ ನರಿದೆನ್ನಂ ಪಿಡಿ ।
ದೆಂತೋಂಕುಪೆಯೊಂದು ಪಲವು ಪರಿಯಿಂ ಪೊಡೆದರ್ ॥ ೨೦೩

ಅಂತವರೆನ್ನಂ ಪಿಡಿದು ಪೊಡೆಯಲೊಡಂ

ಆವಂಗಾರದು ಕರ್ಮಂ ।
ಭಾವಿಸಲುನ್ಮತ್ತನಾದ ಪ್ರೊಟ್ಟಿಗು ವಚನ ॥
ಕ್ಕಾವರ್ಗಮನೇಕವಿಧದಿಂ ।
ಶ್ರೀವಿಪ್ರರ್ದು ಸಹಜಮಲ್ತೆ ನೃಪಕುಲತಿಲಕಾ ॥ ೨೦೪

ಅದುಕಾರಣಂ

ಪಿಡಿವವರನೆನ್ನನದಾವಂ ।
ಪೊಡೆದಿರ್ಕಡಿವ್ಯಾಪ್ತೆನೆನ್ನ ಖಡ್ಗದಿನಾತಂ ॥
ವ್ಯಡನಾದೊಡಾಗಲೆಂದು ।
ಗ್ಗಡಿಸಿದೆನಾನತಿಭಯಮುಂ ಕರಂ ಪೊಣ್ಮುವಿನಂ ॥ ೨೦೫

ಅಂತಾಂ ಪೂರ್ವವಾಸನೆಯುಪ್ಪ ಕಠೋರವಚನಮುಂ ನುಡಿಯೆ,

ಅನ್ನೆಗಮವರೆಲ್ಲರ್ ಪೊಡೆ ।
ದೆನ್ನಂ ಕೈವಿಡಿದು ಕಟ್ಟಿ ಮನದತಿಮುಳಿಸಿಂ ॥

ಬನ್ನಕ್ಕೆ ತಂದೊಡೆನ್ನ ಮ ।
ದನ್ನಿಟ್ಟನೆ ಪೋಗೆ ತಿಳಿವು ಪುಟ್ಟಿತ್ತಾಗಳ್ ॥ ೨೭

ಆಸಮಯದೊಳ್ ಸೃಗಾಲಿಕೆಯುಮಿತ್ತಂ ಬರಲದನಾಂ ಕಂಡು

ಎನಗಾಪ್ತಂ ಧನಮಿತ್ರನೆಂದಱಿವುದೀ ಲೋಕಂ ಮದೀಯಾಪ್ತಕಾ ।
ಮಿನಿಯೆಂಗುಂ ಧರೆ ರಾಗಮಂಜರಿ ಮನೀಯಿರ್ಬರ್ಗರ್ತಿಕ್ಲೇಶಮಿಂ ॥
ದಿನಸುಂ ಬಂದಪುದಿಂತಿದಂ ತೊಲಗಿಸಲ್ವೇಳ್ಕೆಂದುಪಾಯಪ್ರಚಿಂ ।
ತನೆಯಂ ಚಿಂತಿಸುತುಂ ಸೃಗಾಲಿಕೆಯುಮಾಂ ಸಕ್ರೋಧದಿಂ ನೋಡಿದೆಂ ॥

ಪೋಗೆಲೆ ಕುಂಟಣಿ ಕುಟಿಲೋ ।
ದ್ಯೋಗಂ ಮಿಗೆ ರಾಗಮಂಜರಿಯ ಮಾನಿಸರ್ಗಂ ॥
ತೀಗಳ್ ಧನಮಿತ್ರಂಗೊಳ ।
ಗಾಗಿರ್ಪಂತೆಸಗುತಿರ್ಪೆ ನಾನಱಿಯದುದೇ ॥ ೨೮

ಎಂದು ಮತ್ತಂ

ಎನಗಾಪ್ತ ಮಿತ್ರನೆಂಬೊಂ ।
ದು ನೆವಂದೋಱುತ್ತೆ ರಾಗಮಂಜರಿಯಂ ತಾ ॥
ನನುನಯದಿಂ ಬೆರಸಿರ್ಪಂ ।
ಧನಮಿತ್ರಂ ದುಷ್ಟಮಿತ್ರನೆಂಬುದು ಪುಸಿಯೇ ॥ ೨೯

ಅದುಕಾರಣಂ

ಎಲಗೆ ನಿಜಸುತೆಯ ಭೂಷಣ ।
ಕುಲಮಂ ಧನಮಿತ್ರನಜಿನರತ್ನಮನೀಕ ॥
ಬಿತ್ತಲೆಯೊಳ್ ಕಳ್ದಂ ನಿಮ್ಮಯ ।
ಬಲಮಂ ನಡೆ ನೋಳ್ಪೆನಿನ್ನಲೇ ಕುಟಿಲಾತ್ಮೇ ॥ ೩೦

ಎಂಬುದುಮವಳತಿನಿಪುಣೆಯಪ್ಪುದಱಿಂದೆನ್ನ ವಚನಭಾವಕೌಶಲವನಱಿದದಂ ನೆಲೆಮಾಡಲೆಂದು,

ನೀನಾರ್ಜಿಸಿದರ್ಥವೆ, ಕೊಳೆ ।
ಮಾನಿನಿಯರ ಧನವನುತ್ತಮರ್ಕಳ್ ವಿಟವಿ ॥
ದ್ಯಾನಿಲಯ ಮತ್ತನೂಜೆಗೆ ।
ನೂನವಿಭೂಷಣವನೀವುದಾಂ ಪೊಡೆಮಡುವೆಂ ॥ ೩೧

ಧನಮಿನತ್ರಜಿನರತ್ನವ ।
ನನುನಯದಿಂದೀಗೆ ಪೊಣ್ಗೆ ಮತ್ಪುತ್ರಿಯುಮಂ ॥
ಡನಮುಂ ದಯೆಗೆಯ್ ವೇಶ್ಯಾ ।
ವನಿತೆಯುರಾವಲ್ಪಜೀವಿಗಳ್ ವಿಟಮಲ್ತೇ ॥ ೧೩೨

ಎಂದೊಡಾಂ ಕರುಣಿಸಿದಂತೆ

ನಿನ್ನೊಡವೆಯನಿತ್ತೊಡಮೀ ।
ನೆನ್ನಂ ವಂಚಿಸಿದ ಧೂರ್ತಧನಮಿತ್ರನ ಗ ॥
ರ್ವಂ ನೆರೆವ ಚರ್ಮಭಸ್ತ್ರಿಕೆ ।
ಯುಂ ನೆಟ್ಟನೆ ಕುಡುವೆನಲ್ಲ ಬಗೆ ನಿಶ್ಚಯಮುಂ ॥ ೧೩೩

ಎಂಬುದುಮವಳ್ ಪುರರಕ್ಷಕರ್ಗೆ ಕೈಮುಗಿದು ಧನಮಿತ್ರನ ಚರ್ಮರತ್ನವಂ ಕುಡದೊಡಮೇನೆನ್ನ ಮಂಗಳಾಭರಣಮುಮಂ ಕುಡುವಂತೆ ಪೇೞಿಮೆನಲವರಿಂತೆಂದರ್:—

ಎಲವೆಲವೊ ನಾಳೆ ನಿನ್ನಯ ।
ತಲೆಯುಂ ಕೊಯ್ದು ಜಿನರತ್ನವಂ ಕೊಂಡಪೆವೀ ॥
ಲಲನೆಯ ಭೂಷಣಮುಮಂ ಕೋ ।
ಟಲೆಗೊಳಿಸದೆ ಕುಡುವುದೀಗಳೊಲ್ವೊಡೆ ತನುವಂ ॥ ೧೩೪

ಎಂದೊಡಾಂ ಬಱಿಕ್ಕಾಭರಣಮಿರ್ದ ಠಾವನೇಕಾಂತದೊಳ್ ಪೇೞ್ವೆನೆಂದವಳಂ ಸಾರಣ್ಗೆ ಕರೆದು

ನಿನ್ನ ಸುಖಂ ಸಿಲ್ಕಿದಪಂ ।
ನಿನ್ನಿರುಳಿಂದದಱ ದೆಸೆಯಿನೆನಗಂ ನಿನಗಂ ॥
ಬನ್ನಂ ಬರ್ಪುದೆನಲ್ ಕೇ ।
ಳ್ದೆನ್ನಂ ನಿನ್ನೆಡೆಗೆ ಕಳಿಪಿದಂ ಧನಮಿತ್ರಂ ॥ ೧೩೫

ಎಂದು ಧನಮಿತ್ರಂಗೆ ಪೋಗಿ ಪೇೞೆಂದು ಮತ್ತಮಿಂತೆಂದಂ:—

ಇಂತಾಂ ಸಿಲ್ಕಿದೆನೆಂದತಿ ।
ಚಿಂತಿಸದಿನ್ನೆನ್ನನೊಲ್ದು ಬಿಡಿಸುವ ತೆಱನಂ ॥
ಚಿಂತಿಸುವುದು ಧನಮಿತ್ರಂ ।
ಮುಂತಣ ಕಾರ್ಯಕ್ಕೆ ಕಾರಣಂ ನೀನಲ್ತೇ ॥ ೧೩೬

ಎಂದಾಂ ಆಭರಣಮಿರ್ದ ಠಾವಂ ಪೇೞ್ವಂತೆ ಪೆಱತೊಂದು ಕಾರ್ಯವಂ ಪೇೞಲದಂ ಕೇಳ್ದು ಕೆಯ್ಗಳಂ ಮುಗಿದು

ನಿನಗಂಗರಾಜನೊಲ್ಗೀ ।
ಜನಸಿತುಂ ಹಿತನನೆಸಗುಗಧಿದೇವತೆಯೊ ॥
ಲ್ಪನುಕೂಲವಕ್ಕೆಸುತ್ತುಂ ।
ಧನಮಿತ್ರನ ಪುರಿಗೆ ಪೋದಳಾಗಳ್ ಬೇಗಂ ॥ ೧೩೭

ಅಂತಾಸೃಗಾಲಿಕೆ ಪೋಪುದುಮಿತ್ತಲ್

ಚಿಂತೆಯ ಮಂತಣಂ ದುಗುಡದೋವರಿ ಜಾಡ್ಯದ ಬೀಡು ದುಃಖಗೇ ।
ಹಂ ತನುಬಾಧೆಯಾಲಯಮಸಂಗಲದಿಕ್ಕೆಯುಮಾರ್ಗದಾಗರಂ ॥
ಭ್ರಾಂತಿನ ಜನ್ಮಭೂಮಿಯೆನಿಸಗ್ಗಳಬಂಧನಮಂದಿರಕ್ಕದೇ ।
ನುಂ ತಡವಿಲ್ಲದೊಯ್ದನಗೆ ಸಂಕಲೆಯಂ ಮುಳಿಸಿಂ ತೊಡರ್ಚಿದರ್ ॥ ೧೩೮

ಉಭಯಕಟಂಗಳಿಂದೊಸರ್ವ ಮೋಕ್ಕದಧಿ ಕಡುಸೊರ್ಕಿನಿಕ್ಕುವಾ ।
ಯ್ವಿಭವನನೇಕವಂಡಹತಿಯಿಂ ಸ್ರಣಿಸೋತದಿನಾರ್ದುಪಾಯದಿಂ ॥
ದಭಿಭವವಂ ನಿಮಿರ್ಚಿ ದೃಢಶೃಂಖಲೆಯಿಂ ಸಲೆ ಯಂತ್ರಸಂಪದಿಂ ।
ರಭಸದೊಳೆನ್ನ ಕಾಲ್ಗವರ್ಗಳಾಗಳೆ ಸಂಕಲೆಯಂ ತೊಡರ್ಚಿದರ್ ॥ ೧೩೯

ಅಂತು ತೊಡರ್ಚಲ್ಲಿಗೆ ಮಱುದಿನಂ ಸೃಗಾಲಿಕೆ ಬಂದು

ನೀನೆನ್ನೊಳ್ ಪೇೞ್ದ ಕಾರ್ಯಸ್ಥಿತಿಯನೊಸೆದು ತನ್ಮಿತ್ರನೊಳ್ ಪೇೞ್ದಾತಂ । ತಾನೆಲ್ಲಾ ಕಾರ್ಯವಂ ಸ್ವೈತೆಸಗಿದನವನಿಂತೆಲ್ಲನಂ ಕೇಳ್ ಮನಸ್ಸೇ ॥ ಮಾನಂದಂ ಪೆರ್ಚಿ ಬಂಧನಮಱಿಯ ಲೆನಗತ್ತಂತವಸ್ ತನ್ನ ಬುದ್ಧಿ । ಜ್ಞಾನಂ ಚೆಲ್ವಾಗಲೇಕಾಂತದೊಳೆನಗಿನಿತಂ ಪೇೞಲನ್ಯಾಕ್ತೆಯಾದಳ್ ॥ ೧೪೦

ಅದೆಂತೆನೆ:—

ಸರಭಸದಿಂ ಧನಮಿತ್ರನ ।
ಪುರಿಗಾಂ ಪದೆದೈದೆ ನಿನ್ನ ನಿಜಮಿತ್ರಂ ಪೋ ।
ದಿರುಳೇ ಪುರರಕ್ಷಕರಿಂ ।
ಪರವಶನಾಗಿರ್ದು ಸಿಲ್ಕಿದಂ ವಿಧಿವಶದಿಂ ॥ ೧೪೧

ಎಂದು ಪೇೞಿಲೊಡಂ

ತಳವೆಳಗಾಗಿ ಮಾತಿನಿತು ತೋಱದೆ ಮೆಯ್ಮರವಟ್ಟು ಬುದ್ಧಿಸಂ ।
ಚಲಿಸಿ ಮನಂ ಕಲಂಕಿ ಮತಿಗುಂದಿ ಕರಂ ಬಿಸುಸುಯ್ದು ಮಾನವರ್ ॥
ಕಳೆನವರಾರ್ ವಿಧಾತೃಬಲಮಂ ನಿಜಬುದ್ಧಿಯೊಳೆಂದು ಮತ್ತವಂ ।
ತಿಳಿದು ಮಗುೞ್ದು ಮನ್ಮಥನನೀಕ್ಷಿಸಿದಂ ಧನಮಿತ್ರನಾಕ್ಷಣಂ ॥ ೧೪೪

ಅಂತಾತನೆನ್ನ ಮುಖಮಂ ನೋಡಲೊಡಂ ಮತ್ತಮಿಂತೆಂದಂ:—

ನೀನುಮ್ಮಳಿಸಲ್ವೇಡ ನಿ ।
ಜಾನುಜರಂ ನಿನಗಮೆನಗಮೆಯ್ದುವ ಭಯಮಂ ॥
ತಾನದನಱಿಯಲ್ ತನ್ನನ ।
ನೂನದೆ ಪೇೞ್ದಟ್ಟಿದಂತೆ ಮಾೞ್ಪುದು ಕೆಳೆಯಾ ॥ ೧೪೫

ಅದೆಂತೆಂದಡಾತಂ ಬೆಸಗೊಳ್ವುದುಂ;

ಅಂಗನೃಪೇಶ್ವರನ ಸಭಾ ।
ರಂಗಕ್ಕತಿದೀನಭಾವದಿಂ ಪೋಗಿಯೆ ಸಾ ॥
ಷ್ಟಾಂಗನಮಸ್ಕಾರಂಗೆ ।
ಯ್ದಿಂಗಿತನಱಿದಿತ್ತ ಚಿತ್ತಮೆಂಬುದು ಕೆಳೆಯಾ ॥ ೧೪೬

ಕವಿತೆಯೊಳಕ್ಷದ್ಯೂತಾ ।
ದಿವಿನೋದನವಿದ್ಯೆಯೊಳ್ ಕಳಾಗಮಜಾತು ॥
ಯರ್ವಿಧಾನದೊಳ್ ಸಮಂತೊ ।
ಪ್ಪವನಿರ್ಪಂ ರಾಗಮಂಜರಿಯ ಪತಿಯೆಂಬಂ ॥ ೧೪೭

ಆತಂಗಮೆನಗಮೊಲ್ದಿತ ।
ರೇತರಸೌಹಾರ್ದಮಾಗಲಾನಾತನ ತ ॥
ತ್ಕಾಂತೆಗೆ ಮಿತ್ರವಧೂಸಂ ।
ಪ್ರೀತಿಯಿನುಪಚಾರಭಾವಮಂ ಮಿಗೆ ಮಾೞ್ಪೆಂ ॥ ೧೪೮

ಅಂತಾಂ ಮಿತ್ರಸ್ತ್ರೀಯೆಂಬ ಭಾವದಿಂ ಸ್ನೇಹಂಗೆಯ್ದನೇಕಸುಗಂಧವಸ್ತುಪ್ರದಾನಸನ್ಮಾನದಿಂ ಸ್ನೇಹಂಗೆಯ್ವಲದನಾನುಱುಕರ್ಷಂ ವಿಪರೀತಭಾವಂಗೆಯ್ದು

ಅಂತಾಮೂರ್ಖರ್ಗಂ ವಿದ್ಯಾ ।
ವಂತಂ ಮುಳಿದೆನ್ನ ಚರ್ಮಭಸ್ತ್ರಿಕೆಯಂ ಕ ॥
ಳ್ದಂ ತರಿಸಿ ಕೊಟ್ಟು ಬರ್ದು*ಕಿಪ್ರ ।
ದೆಂತಾನುಂ ಪದೆನು ದುರ್ಬಲಂಗೆ ನೃಪಾಲಾ ॥ ೨೪೯

ಮುನ್ನರ್ಥಪತಿಗೆ ಸಿಲ್ಕಿ ।
ರ್ದೆನ್ನ ಜಿನಾನರ್ಘ್ಯರತ್ನಮಂ ಕುಡಿಸಿದೆ ಕೇ ॥
ಳೆನ್ನೊಯ್ದು ಧೂರ್ತನಿಂ ಕುಡಿ ।
ಸುನ್ನತಿಯಿಂದಜಿನರತ್ನಮಂ ಧರಣೀಶಾ ॥ ೨೫೦

ಅದಲ್ಲದೆಯುಮವನೆನ್ನ ಚರ್ಮರತ್ನಮಂ ಕಳ್ದು ಪೋಗುತ್ತಂ ನಗರರಕ್ಷಕರ ಕೆಯ್ಯೊಳ್ ಸಿಲ್ಕಿದನೆಂದವರಸಂಗೆ ಪೋಗಿ ಪೇೞಲೆಂದೆನ್ನಂ ನಿನ್ನೆಡೆಗೆ ಕಳುಹಿದನೆಂದಾಂ ಪೇೞಲ್, ಧನಮಿತ್ರನಾಗಳರಸನ ಸಾರಣ್ಗೆ ಪೋಗಿಯಾಂ ಪೇೞ್ದ ಕ್ರಮದಿಂದೆ ಪೇೞಲರಸಂ ಸರೋಷನಾಗಿ

ನೀಂ ಪೋಗು ಚರ್ಮಭಸ್ತ್ರಿಕೆ ।
ಯಂ ಪೆಂಪಿಂ ತರಿಸಿ ಕುಡುವೆನೆಂದು ಮಹೀಪಾ ॥
ಲಂ ಪೞೆಮ ಕಳಿಸಲಾತನ ।
ಲಂಪಿಂ ಬಂದಂ ನಿಜಾಲಯಕೆ ಧನಮಿತ್ರಂ ॥ ೨೫೧

ಅಂತು ಧನಮಿತ್ರಂ ಬಂದು ಸಂತಸದಿಂದೆನ್ನಂ ಕರೆದು, ನೀಂ ಪೋಗಿ ಮನ್ಮಿತ್ರಂಗೆ ತದ್ವೃತ್ತಾಂತಮಂ ಪೇೞೆಂದೆನ್ನಂ ಮಗುೞ್ದು ಕಳಿಪಿದನೆಂದು ಸೃಗಾಲಿಕೆ ಪೇೞಲಾನವರ್ಗೆ ಪರಿಣಾಮಿಸಿ,

ಇನ್ನೆನ್ನಂ ಬಿಡಿಸುನ ಕಾ ।
ರ್ಯಂ ನಿನ್ನಿಂದಲ್ಲದಾಗದೆಂದವಳೊಳ್ ಪ್ರ ॥
ಚ್ಛನ್ನಮೆನಿಸಿರ್ಪ ಮಾತುಗ ।
ಳನ್ನಯದಿಂ ಪೇೞ್ದೆನಱಿವ ತೆಱದಿಂದಾಗಳ್ ॥ ೨೫೨

ಅಂತು ಪೇೞ್ದಾಂ ಸೃಗಾಲಿಕೆಯಂ ಕಳಿಪಿ

ಮುಳಿದೆನ್ನ ಕಾಲ ಬಲ್ಸಂ ।
ಕಲೆಯಂ ಮುಱಿದಿಕ್ಕಲಾರ್ಪದುಳೊಳ್ಳಡಮೇಂ ನಿ ॥

ಶ್ಚಲಮೆನಿಪ ರಾಗಮಂಜರಿ ।
ಯೊಲವಂ ಬಿಡಲಾಱದಿದೆರ್ನಲ್ತೆ ನೃಪಾಲಾ ॥ ೧೫೩

ಅದಱಿಂ ಬಂಧನದುಃಖಮಂ ಕೆಲವು ದಿನಮನುಭವಿಸುತ್ತಿರ್ಪಿನಂ, ಕಿಱಿದುದಿನದಿಂ ಮೇಲೆ ಮಗುೞ್ದು ಸೃಗಾಲಿಕೆ ಬಂದು,

ಏಂ ಕೆಳೆಯಾ ಪಲದಿವಸಂ ।
ಸಂಕಲೆಯಾಯಾಸದುಃಖಮಂ ತಳೆದೆಯುವ ॥
ಕಾರಂ ಕಂಡೆನೊಂದು ತೆಱನಂ ।
ನೀಂ ಕಲ್ಪಿಸಿದಂತೆ ಕೇಳೆನುತ್ತಿಂತೆಂದಳ್ ॥ ೧೫೪

ಅದೆಂತೆನೆ:—

ಭೂಲಲನೇಶನೆಂಬ ಪೆಸರ್ವೆತ್ತ*ಸೆವಂಗನೃಪಾಲಪುತ್ರಿಯುಂ ।
ಬಾಲಿಕೆಗೊರ್ಬಮಂಗಲಿಕೆಯಂಬಿಕೆಯಂಬಿಕೆಯಾಸಮೀಪದೊಳ್ ॥
ಲೀಲೆಯೆನಿಪ್ಪ ಭಿಕ್ಷುಕಿಯು ಬೆಂಬೞಿಯೊಳ್ ಪಬೆದಾಂ ತಮುರ್ವರಾ ।
ಪಾಲಕನಾಲಯಕ್ಕೆ ಪದೆದೆಯ್ದಿದೆನೊಂದು ದಿನಂ ಕುಮಾರಕಾ ॥ ೧೫೫

ಸುರಗಿರಿಯುಂ ಸರೋಜಭವನೆಂಬ ಮಹಾರಥಕಾರನೊಲ್ದು ಕಂ ।
ಡರಿಸಿ ವಿಚಿತ್ರಪುತ್ರಿಕೆಗಳಿಂ ಪರಿರಂಜಿಸಿ ಚಂಪೆಯುಳ್ಳಿ ತಂ ॥
ದಿರಿಸಿದನೆಂಬಿನಂ ಜನಮನೋಹರಮಾಗಿ ಪುಗಟ್ಟೆಗೊಪ್ಪವು ।
ಪ್ಪರಿಗೆಗಳಿಂ ನೆಗೞ್ತೆವಡೆದಿರ್ದುದು ಸೌಂದರರಾಜಮಂದಿರಂ ॥ ೧೫೬

ಅಂತೆಸೆವ ರಾಜಮಂದಿರದಲ್ಲಿ

ನಗುವಲರ್ಗಣ್ಣ*ಕಾಂತಿ ಸುಲಿಸಲ್ಗಳ ಕಾಂತಿ ಕಪೋಲಕಾಂತಿ ಸೆ ।
ಳ್ಳುಗುರ್ಗಳ*ಕಾಂತಿ ಪಚ್ಚಳಸುಸಂಗಶಲಾಕೆಯ ಕಾಂತಿ ಬಳ್ಳಿಮಿಂ ॥
ಚುಗಳೆಳವೆಂಡಿರುದುವೆಸಿಪೊಂದಭಿಶಂಕೆಯನುಂಟುಮಾಳ್ಪಿನಂ ।
ಮೃಗಶಿಶುನೇತ್ರೆಯರ್ ಮೆಱೆದರೋಲಗದೊಳ್ ಧರಣೀಶಪುತ್ರಿಯಾ ॥ ೧೫೭

ರತಿಯ ವಿಲಾಸಮಂ ಶಚಿಯ ಸಂಪದನುಂ ಗಿರಿಜಾತೆಯೋಜೆಯಂ ।
ಕ್ಷಿತಿಸುತೆಯೊಳ್ಪುಮಂ ಸಿರಿಯ ಸೌಷ್ಠವನುಂ ಮನಮೊಲ್ದು ಭಾರತೀ ॥
ಪತಿ ನಲಿದೊಂದುಗೂಡಿ ಪಡೆದಂತೆವೊಲೊಪ್ಪವಳಂ ವಸುಂಧರಾ ।
ಪತಿಯು ಕುಮಾರಿಯುಂ ಪಡೆದು ಕಂಡೆನತೀವಮನೋನುರಾಗದಿಂ ॥ ೧೫೮

ಅಂತಾಕುಮಾರಿಯುಂ ಕಂಡು ಪ್ರತಿದಿನಸಂ ರಾಗಮಂಜರಿಯಿಂ ಬೇರ್ಪ್ಟ್ಟ ಚಿತವಸ್ತುಗಳಂ ತಂದು ಕೊಟ್ಟವರಿಬ್ಬರ್ಗನ್ಯೋನ್ಯಸ್ನೇಹಂ ನಿಮಿರ್ಚೆ ಯಾನಂಬಾಲಿಕೆಯಿಂ ಪ್ರಸಾದಂಬಡೆದು ನಿತ್ಯಸಮೀಪಸೇವೆಯುಂ ಮಾಡುತಿರ್ಪನಮೊಂದುದಿನಂ

ಗಗನಶ್ರೀಗನುರಾಗಮಂ ಮೆಱೆಯುತುಂ ಸಂಪ್ರೀತಿಯಿಂ ಜೊನ್ನವ ।
ಕ್ಕಿಗೆ ಬೆಳ್ದಿಂಗಳ ಸಾರಮಂ ಕಱೆಯುತುಂ ಪಂಕೇಜಿನೀಪಶ್ಚಕಾಂ ।
ತಿಗಳಂ ದರ್ಶನಮಾತ್ರದಿಂ ಜಱೆಯುತುಂ ಕಾಮಾಂಧಸಂದೋಹದಂ ।
ತಿಗಳುತ್ತುಂಗರದಂಗಳಂ ಮುಱಿಯುತುಂ ಮೆಯ್ದೋಱಿದಂ ಚಂದ್ರಮಂ ॥

ಅಂತು ಚಂದ್ರೋದಯದೊಳ್

ಸಾಕರಾಬ್ಧಿಯೊಳ್ ಸುಧಾಕರಾ ।
ತುಕದಿಂ ಪಾಂಡವನಿವಾಸದಂತಿರೆ ಪಾಂಚಾ ॥
ಲಿಕೆಯಂತೆಸೆವುಪ್ಪರಿಗೆಯೊ ।
ಳಕಳಂಕಶಶಾಂಕಮುಖಿ ಕರಂ ಮೆಱೆದಿರ್ದಳ್ ॥ ೨೬೦

ನಿರುತಂ ಸೌಹಾರ್ದ ಸತ್ಕೋಮಳತನುಲತಿಕಾಚಿತ್ರ ಗಾಂಭೀರ್ಯನ ವ್ಯೋ । ತ್ತರೆ ಮಿತ್ರಶ್ಲೇಷೆ ರತ್ನಶ್ರವಣೆ ಸುರಭಿದೋರ್ಮೂಲಸಂಪನ್ನೆ ಹಸ್ತಂ ॥ ಬುರುಹಶ್ರೀರಮ್ಯೆ ಮುಗ್ಧಾರುಣಮಣಿಕಿರಣಾಕೀರ್ಣಸೌಂದ ರ್ಯಪೂರ್ಣ । ಧರೆ ತಾರಾಟೀವಿಯಂತುತ್ಪಲನಯನೆ ಕರಂ ಕಾಂತಿಯಿಂ ದೊಪ್ಪುತಿರ್ದಳ್ ॥ ೨೬೧

ಅಂತು ಕಮನೀಯಕಾಂತಿಯುಂ ತಳೆದ ಕಾಂತೆಯಂತವನಱಿದು

ಅಡಿ ಮುಡಿ ಜಂಘೆ ನುಣ್ಗುರುಳ್ಗಳ್ ಳ್ದೊಡೆ ಪ್ರಬುದ್ಧನಿತಂಬಮಕ್ಷಿಗಳ್ ।
ನಡು ಮೊಲೆ ಮೆಲ್ಪು ಬಿಣ್ಪಿಸಿದು ಕೊಂಕು ಸುದೀರ್ಘತಿ ಕರ್ಪು ಗೌರವಂ ॥
ಕಡುನಿಡಿದಲ್ಪಮುನ್ನತವೆನಿಪ್ಪವಱಿಂ ಸುಕುಮಾರವೃತ್ತಿಯುಂ ।
ಪಡೆದ ನೃಪಾಲನಂದನೆಯನೊಯ್ಯನೆ ಪ್ರೌಢದೆನಾಂ ಕುಮಾರಕಾ॥ ೨೬೨

ಅಂತು ಪ್ರೌಢೆ,

ಕುರುಳಂ ನುಣ್ಣಿಪ ವೇಣಿಯುಂ ಸಸಿನೆಗೆಯ್ದೇಕಾವಳೀರತ್ನಮಂ।
ರತದಿಂ ಲೆಕ್ಕಿಪ ಪತ್ರವಲ್ಲಿಗಳ ಕೊಂಕಂ ತಿರ್ದುವಿಕ್ಕಿರ್ದ ನೂ ॥

ಪುರವಂ ಸ್ಯೈತಿಡುವೇೞ್ಗೆಯುಜ್ಜುಗದೊಳಾಂ ಮೆಯ್ನೋಂಕಿ ತತ್ಕಾಮಿನೀ |
ಕರುಣಾಲೋಕನಸಿದ್ಧಿಯಂ ಪಡೆದುಮಂತಿರ್ದೆಂ ಸಮುದ್ಘೂರ್ಣದೊಳ್ ‖

ಅಂತಿರ್ದು,

ಅಂಬಾಲಿಕೆ ನಿನ್ನಯ ಕಿವಿ |
ಯಿಂ ಬಿೞ್ದಪ್ಪುದೆಂದು ಜಗುೞ್ದ ಚೆನ್ನೆಯ್ದಿಲ ಪೂ ‖
ವಂ ಭರದೆ ತೆಗೆದು ಬೀಸಿದೆ |
ನಂಬರದೊಳ್ ಪಾರಿಪಾೞಿಮಂ ಬೆದಱಿಪವೋಲ್ ‖ ೭೬೩

ಆಸಮಯದೊಳ್

ತನುಸೌಮ್ಯಂ ಜಡೆ ಮೂರ್ಖಂ ಜನಕೆ ವಿರಹಿತಂ ಸುಸ್ವತಂತ್ರಂ ಮಹಾಯಂ | ವನಮತ್ತಂ ಸ್ತ್ರೀವಿಮೂಢಂ ವಿಟಜನಸುಲಭಂ ನೃತ್ತಸೇವಾಭಿರಾಮಂ ‖ ಧನಿಕಂ ಸ್ತ್ರೀಲಂಪಟಂ ಕಾಮುಕತತಿಪರಿವಾರಂ ಕುಮಾರ್ಗಾನ್ವಿತಂ ಸ | ಜ್ಜನದೂರಂ ತತ್ಪುರೀರಕ್ಷಕನಧಿಕಬಳಂ ರಂಜಿಪಂ ಕಾಂತಕಾಖ್ಯಂ ‖ ೭೬೪

ಅಂತಾಕಾಂತಕನೆಂಬ ತಳವಾಱನಾಯಕಂ ಅರಸನೋಲಗದಿಂ ಕಳಿಪಿಸಿಕೊಂಡಂಬಾಲಿಕೆ ಕುಳ್ಳಿರ್ದುಪ್ಪರಿಗೆಯ ಕೆಳಗೆನೆ ಪೋಗುತ್ತಿರೆ,

ನಲಿದೆನ್ನ ಕಯ್ಯ ಚೆನ್ನೆ |
ಯ್ದಿಲ ಪೂವಂ ನೋಡಿ ಕಾಂತಕನ ಮಸ್ತಕದೊಳ್ ‖
ಘಟಿಲನೆ ಬಿಸುಡಲನಂ ತ |
ನ್ನೊಲವಿಂದಂ ಮೇಲನೀಕ್ಷಿಸುತೆ ನಸು ನಕ್ಕಂ ‖ ೭೬೫

ಇದನೆಲ್ಲವನಂಬಾಲಿಕೆ |
ಮುದಮೆಸೆಯಲ್ ಕಂಡು ಮಂದಹಾಸಂ ತುಳ್ಕಲ್ ‖
ಪದೆದೆನ್ನಂ ನೋಡಲ್ಕಾ |
ನದನಾಮೂರ್ಖಂಗೆ ತೋಱಿದೆಂ ಕಣ್ಣುಱುಪಿಂ ‖ ೭೬೬

ಅಂತಾಕಾಂತಕಂಗೆ ಕುಮಾರಿಯ ಸ್ವಭಾವಚೇಷ್ಟೆಗಳಂ ವಿಪರೀತಚೇಷ್ಟೆಗಳೆಂಬಂತು ತೋಱಿ

ಎನ್ನವೊಲಾರ್ ಕೃತಾರ್ಥರಿಳೆಯೊಳ್ ಮೆಱೆವಗ್ಗದ ರಾಜಪುತ್ರಿಯೊ |
ಳ್ದೆನ್ನನಪೇಕ್ಷೆಯಿಂ ಪಿಡಿದ ನೆಯ್ದಿಲ ಪೂವಿನೊಳಿಟ್ಟು ತನ್ನಪಾಂ ‖

ಗನ್ನಿಮಿರ್ವಂತಿರೊಯ್ಯನೊಸೆದೀಕ್ಷಿಸಿ ಮೆಲ್ನಗೆಯುಂ ತುಱುಂಕಿದಳ್ ।
ತನ್ನಿದಿರೊಳ್ ದಿಟಕ್ಕನುತೆ ಮೆಯ್ಮಱೆದಂ ಕಡುಕೆಯ್ದು ಕಾಂತಕಂ ॥ ೧೬೭

ಅಂತಾತಂ ಮೆಯ್ಮಱೆದು ತನ್ನಾಸೆಯುಂ ಸಂಬಂಧವಾರ್ತೆಗೆ ಪಿಂತಿರಿಸಿ ಎಂತಾನುಂ ಮಂದಗತಿಯಿಂ ನಿಜಮಂದಿರಕ್ಕೆ ಪೋಗಲಾಂ ಮಱುದೆವಸಮವನ ಭವನಕ್ಕೆ ಪೋಗಲ್

ತನ್ನಸು ಬಂದವೊಲೋಲವಿಂ ।
ದೆನ್ನಂ ಸನ್ಮಾನದಾನಪೂಜಾಕ್ರಮದಿಂ ॥
ಮನ್ನಿಸಿ ಕಾಂತಕನೆನ್ನೊಳ್ ।
ಕನ್ನೆಯ ಸಂಬಂಧವಾರ್ತೆಗೆಳಸುತ್ತಿರ್ದಂ ॥ ೧೬೮

ಅಂತಿರ್ದ ಭಾವನನಱಿದು,

ಮಕರಾಂಕಂ ಬಂದೊಡಂ ಮೆಚ್ಚದ ನಿರುಪಮಸೌಭಾಗ್ಯಸಂಪನ್ನೆಯುಂ
ಬಾ । ಲಿಕೆ ನಿನ್ನಂ ಕಂಡು ಕಣ್ಸೋಲ್ತಿರೆಯುಮದನಾಸ್ತ್ರಾಗ್ನಿಸಂತಾಪ
ದಿಂ ಚಂ ॥ ದ್ರಿಕೆಯೊಳ್......ನೀರ್ವಸೆಯೊಳ್ಗುಡಲನಟ್ಟಾಡುವೋಲ್ ಮಾ
ಡಿದ್ದೈ ಕಾಂ । ತಕ ಕಾಂತಾಚಿತ್ತವಶ್ಯಂ ವಿವಿಧನವಕಳಾಮೂರ್ತಿ ನೀಂ ಸತ್ಯ
ಮಲ್ತೇ ॥ ೧೬೯

ಎಂಬುದುಂ,

ತಾನೆ ಮನೋಜರಾಜ್ಯಪತಿ ತಾನೆ ವಿಟಾಗ್ರಣಿ ತಾನೆ ಕೋವಿದಂ ।
ತಾನೆ ಮಯೋವಿಳಾಸ......................................ಕಂ ॥
ತಾನೆ ವಿಳಾಸಿನೀಜನದ ಕೂಟದ ಜಾಣ್ಮೆಗೆ ತಾನೆ ವೋಪನಂ ।
ತಾನೆನಿಪ್ರೌಢಹಂಕೃತಿಕರಂ ನೆಲಸಿರ್ದು ಕಾಂತಕಾಖ್ಯನೊಳ್ ॥ ೧೭೦

ಅಂತಾತಂಗೆ ನಿಷ್ಕಾರಣದಿನೆಂತಾನುಂ ಕಾಮೋದ್ದೀಪನವನೊಡರ್ಚಿ ಯಾ ದಿವಸಮಾನವನಿಂದಮೆಂತಾನುಂ ಕಳಿಪಿಸಿಕೊಂಡು ರಾಗಮಂಜರಿಯ ಮನೆಗೆ ಬಂದು ಮಗುಳ್ದು ಮಱುದೆವಸಂ,

ಲಲಿತಾಂಬರಮೊಂದಂ ಪೂ ।
ಗಳ ಮಾಲೆಯುಮೊಳ್ಪವೆತ್ತ ತಾಂಬೂಲಕಮಂ ॥
ನಲಿದೆನ್ನ ಮನೆಯಿನುಯ್ದಂ ।
ಕೆಲಬರ ಚೇಟಿಕಿಯರೊಡನೆ ಬರಲನುನಯದಿಂ ॥ ೧೭೧

ಅಂತವಂ ಕೊಂಡು ಪೋಗಿ

ಅಟ್ಟಿದಳೊಲ್ದು ತನ್ನ ಮನದುತ್ಸವದಿಂ ಧರಣೀಶಪುತ್ರಿ ತಾ।
ನುಟ್ಟ ಸುವಸ್ತ್ರಮಂ ಕುಸುಮಮಾಲಿಕೆಯುಂ ಪೊಸವೀಳೆಯಂಗಳಂ ॥
ಕೊಟ್ಟು ಬರಲ್ಕೆ ತನ್ನ ಸೆವ ಚೇಟಿಯರಂ ನಿನಗೀಸಿ ಕೊಂಡು ನೀಂ।
ನೆಟ್ಟನೆ ಕೂರ್ಪುದಾಕೆಗೆ ಮನಃಪ್ರಿಯರಿಂ ಪೆಱರಾರೊ ಕಾಂತಕಾ ॥ ೧೭೨

ಅದಲ್ಲದೆಯುಂ,

ಜ್ಞಾನಿಗಳಿಂದೆ ಕೇಳ್ದುಱಿವೆನಾಂ ನಿಜಲಕ್ಷಣಮಂ ತದೀಯಧಾ ।
ತ್ರೀನರಪಾಲಕತ್ವಮನಿಶಂ ನೃಪನಂದನೆಯಂಗಸಂಗದಿಂ ॥
ತಾನಿದಿರ್ವರ್ಪುದೆಂದು ಪದೆಪಿಂದಿದು ಸತ್ಯಮಿಳೇಶ್ವರಂಗೆ ಸಂ ।
ತಾನಮದಿಲ್ಲದಿರ್ಪ ಕುಱುಪಿಂಗಿದು ಕಾರಣಮಲ್ತೆ ಕಾಂತಕಾ ॥ ೧೭೩

ಎಂಬುದುಮವನಿಂತೆಂದಂ:—

ಶಂಬರಸೂದನನಾರ್ದ್ರೈ ।
ದಂಬುಗಳ್ಸಾಸಿರಂಬೆನಲ್ ಪ್ರಾಣಿಸಿಯಾ ॥
ಪಿರ್ಂ ಬಿಡದೆಚ್ಚಪನೆನ್ನಂ ।
ನೀಂ ಬಲ್ಲಂತೆಸಗು ಕಾರ್ಯಮಂ ಕಮಳಾಕ್ಷೀ ॥ ೧೭೪

ಎಂದು ಮತ್ತಮಿಂತೆಂದಂ:—

ಎಲೆ ಕೆಳದಿ ನೃಪಸುತೆಯು ತಂ ।
ಬುಲಮಂ ನಾಳೆನಗೆ ತಂದು ಕೊಟ್ಟೆನ್ನಸುವಂ ॥
ನೆಲೆಗೊಳಿಪುದೆಂದೊಡಾನಾ ।
ಗಲಿ ಎಂದಲ್ಲಿಂ ತಳರ್ದ್ದು ಮನೆಗೆಯ್ತಂದೆಂ ॥ ೧೭೫

ಅಂತಾದಿನಂ ಮನೆಗೆ ಬಂದು ಮಱುದಿವಸಂ,

ಮಿಸುಪೆನ್ನ ತಂಬುಲಮನೊ ।
ಳ್ಪೆಸೆಯಲ್ ತಂದಿತ್ತು ನಿನ್ನ ತಂಬುಲಮಂ ಬೇ ॥
ಡ್ಪಿ ಸುವಸ್ತ್ರಮಂ ಕುಮಾರಿಗೆ ।
ಪೊಸತೆನೆ ಕರುಣಿಸುವುದಲ್ತೆ ಕಾಂತಕ ನಯದಿಂ ॥ ೧೭೬

ಎಂದೊಡವಂ ಬೇಡ್ಪಿ ಸುವಸ್ತ್ರಮಂ ತಂಬುಲಮಂ ಕೊಟ್ಟೆನ್ನಂ ಕಳಿಪಿ,

ಅವನೊಲ್ದಿತ್ತನುಪನುಸಕ ।
ಲವಸ್ತುವಂ ಕೊಂಡು ಬಿಸುಟು ತಂಬುಲವಂ ಸಂ ॥
ಭವಿಸಿತ್ತು ಮಿತ್ರಕಾರ್ಯಂ ।
ನವೀನಮೆಂಬಂತೆನುತ್ತೆ ಮನೆಗೆಯ್ತಂದಂ ॥ ೧೭೭

ಅಂತು ಬಂದು ಮಱುದಿವಸಂ

ಮದನದವಾಗ್ನಿ ಯೌವನವನಾಂತದೊಳರ್ಬಿಸೆ ಚಂದ್ರಿಕಾಹಿಮಂ ।
ವದನಸರೋಜಮಂ ಮುಸುಕೆ ತದ್ವಿರಹೋಗ್ರಮಹಾಂಧಕಾರಮು ॥
ನ್ಮದಕುಚಕೋಕಮಂ ಕವಿಯೆ ಸ್ವೈರಿಸಲಾರ್ಪಳೆ ಸೌಕುಮಾರ್ಯಸಂ ।
ಪದದ ಸರೋವರಂಬೊಲೆಸೆವಂಗನೆ ಪೇೞ್ ಮನವೊಲ್ದು ಕಾಂತಕಾ ॥

ಎಂದು ಮತ್ತಂ

ನಳರಾಜಂ ದಮಯಂತಿಯಂ ಪಡೆಪಿನಿಂ ದುಷ್ಯಂತಭೂಪಂ ಶಕುಂ ।
ತಳೆಯಂ ಭಾವಿಸಿ ಚಂದ್ರಚೂಡನೊಲವಿಂ ಕಾದಂಬರೀದೇವಿಯಂ ॥
ನಲವಿಂ ಪಾಂಡು ನೆಗೞ್ದ ಮಾದ್ರಿಯನಲಂಪಿಂ ಕೂಡಿವಂತೊಲ್ದು ನಿ ।
ಶ್ಚಲದಿಂ ಕಾಂತಕ ಕೂಡು ನೀಂ ಮೊಱೆಯುತಿರ್ಪಂಬಾಲಿಕಾದೇವಿಯಂ ॥

ಎಂದೊಡನುವನೆನ್ನೊಳಿಂತೆಂದಂ:—

ಕಮಳನಿಯುಂ ದಿನಪತಿ ತ ।
ನ್ನ ಮರೀಚಿಯಿನೊಲ್ದಲರ್ಚದಲ್ಲದೆ ಮುಕರಂ ॥
ದಮನಿೞಲುಂಟೆ ಮತ್ತ ।
ಭ್ರಮರಕ್ಕಿದು [ಸಹಜಮಲ್ತೆ] ಕಮಲದಳಾಕ್ಷೀ ॥ ೧೮೦

ಎಂದು ಮತ್ತಂ

ಕಾರಣಮಿಲ್ಲದೆ ಕಾರ್ಯವಿ ।
ಚಾರಂ ಸಿದ್ಧಿಸದು ಮನ್ಮನಃಪ್ರೀತಿಗೆ ನೀಂ ॥
ಕಾರಣಮುಪ್ಪದಱಿಂ ತ ।
ನ್ನಾರಿಯು ಕೂಟಮನೊಡರ್ಚುವುದು ಪದೆದೆನ್ನೊಳ್ ॥ ೧೮೧

ಅದಲ್ಲದೆಯುಂ

ತೊಳಗುವ ಕನ್ಯಾಂತಃಪುರ ।
ದೊಳಗಿರ್ಪಳನೆಂತು ಭೇದಿಸಲ್ಬರ್ಕುಂ ಕೋ ॥

ಮೞೆಯನುಱೆ ಪೇೞ್ ಸೃಗಾಳಿಕೆ ।
ತಿಳಿವಂತೆನಗೆಂದು ಕಾಂತಕಂ ಬೆಸಗೊಂಡಂ ॥ ೧೮೧

ಅಂತು ಬೆಸಗೊಳ್ಲಾತಂಗಿಂತೆಂದಂ:—

ಅವನಂ ಬಿಲ್ಲ್ರ ಕಾಂತಕ ।
ನವೀನಮೆನೆ ಚರ್ಮರತ್ನಮಂ ಕಳ್ದ ಕಳಾ ॥
ಧವನಂ ಸಮಸ್ತಚೌರ್ಯ ।
ಪ್ರವೀಣನಂ ಲೋಕಜನದೊಳತಿಸಾಹಸಿಯಂ ॥ ೧೮೨

ಆಕಳ್ಳನ ಸಮೀಪಕ್ಕೆ ಪೋಗಿ,

ನಿನ್ನಂ ಬಿಡಿಸಿದಪೆಂ ನಂ ।
ಬೆನ್ನಂ ಸಂದೇಹಮಿಲ್ಲವೆಂದೊಲವಿಂದಂ ॥
ನನ್ನಿಯನೀಯೆ ಬೞಿಕ್ಕವ ।
ನಿನ್ನಿನ್ನಯ ಕಾರ್ಯಸಿದ್ಧಿಯಕ್ಕುಮಮೋಘಂ ॥ ೧೮೩

ಅದೆಂತೆನೆ.—

ಕಾರಾನಿಲಯಕ್ಕರಮನೆ ।
ಸಾರೆಯುಮಂ ಕನ್ನವಿಕ್ಕಿಸುವಮವನಿಂ ಮು ॥
ತ್ತಾರಱಿಯದವೋಲಿಕ್ಕುವ ।
ಮೋರಣದಿಂದವನ ಕಾಲ್ಗೆ ಬಲ್ಸಂಕಲೆಯಂ ॥ ೧೮೪

ಫಣಿಮುಖಮಂ ಕೊಂಡೊಡನಂ ।
ಫಣಿರಾಜಸಮಸ್ತಲೋಕಪರ್ಯಂತಂ ಮೆ ॥
ಯ್ದಣಿಯದೆ ಕನ್ನವನಿಕ್ಕುವ ।
ನಣಕವಿದಲ್ತಱಿವೆನವನ ಬಲ್ಪಿನ ಹವಣಂ ॥ ೧೮೫

ಅಂತವನಂ ಕನ್ನವಿಕ್ಕಲ್ ಬೞಿಯಂ

ಯುವತಿಯ ಸಾರಙ್ಗ ಸುರಂ ।
ಗವದೊಳಗಣಿನೆಯ್ದಿ ಪಲವು ದಿವಸಂ ಚಿತ್ತೋ ॥
ದ್ಭವಕೇಳೀಸೌಖ್ಯಂ ಸಂ ।
ಭವಿಸಿರ್ಕುಂ ನಿನಗೆ ಕೇಳ ಕಾಂತಕ ಸತ್ಯಂ ॥ ೧೮೬

ಎಂದಾಂ ಪೇೞಲವಂ ಗೃಹದ್ವಾರದೊಳ್ ಬಂದಿರ್ದಪನೆಂದು ಪೇೞ್ದು ಸ್ವ
ಗಾಳಿಕೆ ಮತ್ತಮಿಂತೆಂದಳ್:—

ಕನ್ನವನಿಕ್ಕಿದ ಬಟಾಕಂ ।
ನಿನ್ನಂ ಕೊಲ್ವಂ ದುರಾತ್ಮಕಂ ಕಾಂತಕನೆಂ ॥
ದೆನ್ನೊಡನೆ ಪೇೞ್ದಳಾಕೆ ಲ ।
ಸನ್ನೀತಿಯೊಳಿರ್ಪುದೆಂದು ತನ್ನನುಯದಿಂ ॥ ೨೮೮

ಎಂದೊಡಾನಂತೆಗೆಯ್ವೆನೆಂದು ಕಾಂತಕನಂ ಬರಿಸೆಂಬುದುಮವಳ್ ಕರೆ
ಯಲವಂ ಬಂದು

ಆಯಾಸಂಬಡಿಸಿದನ ।
ನ್ಯಾಯಂ ನಿನ್ನಂ ನೃಪಂ ಮಗುೞ್ದಾತಂಗ ॥
ತ್ತ್ಯಾಯತದಿಂ ಬಿನ್ನವಿಸಿಯು ।
ಪಾಯದೆ ನಾಂ ನಿನ್ನ ಬಿಡಿಸುವೆಂ ನಂಬೆನ್ನಂ ॥ ೨೮೯

ಎಂದು ಪ್ರತ್ಯಯಮಂ ಮಾಡಿಯನಂತರಂ ಸುರಂಗದ ವೃತ್ತಾಂತಮಂ
ಪೇೞ್ದೊಡಾನದಕೊರ್ಡಂಬಡಲವನೆನ್ನ ಸಂಕಲೆಯುಮಂ ಕಡಿಯಲ್

ಆನಿದಿರ್ಗೊಳಗಣಿನುರುಭುಜ ।
ಗಾನನದಿಂ ಕನ್ನವಿಕ್ಕಿ ಕನ್ಯಾಭವನ ॥
ಕ್ಕಾನಂದದಿಂ ಮದೀಯಾ ।
ಸ್ಥಾನಮನೆಯ್ದುವವೊಲೆಯ್ದಿದೆಂ ನಿರ್ಭಯದಿಂ ॥ ೨೯೦

ಸ್ಫಟಿಕದ ಕುಟ್ಟಿಮಂ ಶಶಿಶಿಲಾಮಯಭಿತ್ತಿ ನವೀನವಜ್ರಸಂ ।
ಘಟಿತನಿಕಾಮತೋರಣತತಿ ವಿದ್ರುಮವಂದನಮಾಲೆ ಚಂದ್ರಿಕಾ ॥
ಪಟಲಸದೃಗ್ವಿತಾನರುಚಿ ಮೌಕ್ತಿಕಪುತ್ರಿಕೆ ಶಕ್ರಚಾಪಸಂ ।
ಕಟಶಬಲಪ್ರಕಾಶದೊದವಂ ತಳೆಯಲ್ ಮೆಱೆಗುಂ ನೃಪಾಲಯಂ ॥ ೨೯೧

ಅದಱೊಳ್

ಕುಂಜರದಂತದಿಂದೆಸೆವ ಮಂಚದೊಳೊಪ್ಪುವ ಹಂಸತೂಲತ ।
ಲ್ಪಂ ಜಿತಚಂದ್ರಿಕಾಪಟಲಮೊಂದೆನೆ ಚಿತ್ರವಿಧಾನದೇೞ್ಗೆಯಿಂ ॥
ರಂಜಿಸಿ ಶಂಖದಿಂ ತೊಡೆದ ಭಿತ್ತಿ ಸುಮೌಕ್ತಿಕವರ್ಣಂಬೊಲೊ ।
ಳ್ಪಂ ಜನವಕ್ತ್ರಮಂ ಬೆಳಗಲೇಂ ಮೆಱೆದಿರ್ದುದೊ ಸಜ್ಜೆಯಾಲಯಂ ॥

ಆಸಜ್ಜೆಯ ಮನೆಯೊಳ್ ಮಂಚದ ಮೇಲೆ,

ಎಡಗೆಯ್ಯಂ ತಲೆಗಿಂಬಿನೊಳ್ ಮಡಗಿ ವೃತ್ತಂಬೆತ್ತು ಕೆಂಪಪ್ಪ ನು ।
ಣ್ಮಿಡವಂ ವಾಮಸದಪ್ರಗುಲ್ಫದೆಡೆಯೊಳ್ ಸೈತಿಟ್ಟು ಹಸ್ತಾಬ್ಜಮಂ ॥
ಕಡುಚೆಲ್ವಪ್ಪ ನಿತಂಬದೊಳ್ ನಿಱಿಸಿ ಕಿಂಚಿಚ್ಛ್ವಾಸದಿಂ ಕಂಠದೊಳ್ ।
ತೊಡವುಲ್ಲಾಡೆ ಮೃದೂರುತಲ್ಪದೆಡೆಯೊಳ್ ನಿದ್ರಾಂಗಿ ಕಣ್ಗೊಪ್ಪಿದಳ್ ॥

ಮಿಸುಗುವ ಚೀನಪಟಂ ಲೇ ।
ಪಿಸಿದಂದದಿನೊಪ್ಪೆ ತನ್ನ ತನುಲತೆಯೊಳ್ ಕ ॥
ಣ್ಗೆಸೆದಳ್ ದುಗ್ಧಾಂಬುಧಿಫೇ ।
ನಸಹಸ್ರಂ ತುಱುಗಿದಿಂದಿರಾಮೂರ್ತಿಯವೋಲ್ ॥ ೧೯೪

ಚಂದ್ರಿಕೆಯೊಳ್ವಾಸಿಱಿಯೊಳ್ ।
ಚಂದ್ರಕಳಾಕಾಂತೆ ಶಯನದಿಂದೆಸೆದಳೆನಲ್ ॥
ಚಂದ್ರಾನನೆ ಶಯ್ಯಾತಳ ।
ಸಾಂದ್ರದಿನೆಸೆದಿರ್ದಳಮಳನಿದ್ರಾಭರದಿಂ ॥ ೧೯೫

ಮತ್ತಮಲಕ್ತಕರಸದಿಂದಡಿಮುಡಿದಂಘ್ರಿನಖದೀಪ್ತಿಲಾವಣ್ಯರಸಮೆಡೆವಿಡದೆ ಕಡೆಗೋಡಿವರಿವಂತಿರೆ ಕಿಂಚಿದ್ವಳಿತವಿಳಾಸದಿಂದೆಸೆವ ದಕ್ಷಿಣಜಾನುಪ್ರದೇಶಮುಂ, ಆಕಾಶಪರಿಕಲ್ಪಮೆಂಬ ಕವಿಸಮಯಪ್ರಸಿದ್ಧಿಯಂ ಪಡೆದೆನಿಂದು ಪಾತಾಳಪರಿಲಗ್ನಮೆಂಬುಪಮೆಗಾಸ್ಪದಮಪ್ಪೆನೆಂಬಂತೆಯನಲ್ಪತಲ್ಪದೊಳಟ್ಟಿ ಮಧ್ಯಪ್ರದೇಶಮುಂ, ನಿತಂಬವಲ್ಮೀಕಮಂ ಪುಗಲೆಳಸಿದ ಫಣಾಧರಫಣಾಮಣಿಗಳೆಂಬಂತೆಸೆವ ಸೆಳ್ಳುಗುರ ಕಾಂತಿ ಬಳ್ಳಿವರಿಯೆ ನೀಡಿದ ದಕ್ಷಿಣಬಾಹುಲತೆಯುಂ, ಗಂಡಮಂಡಲಪೂರ್ಣಶಶಿಗೆ ಪರಿವೇಷಮಾದಂತಿರ್ದ ದಕ್ಷಿಣಕರ್ಣಪತ್ರಮುಂ, ವಾಮಕುಚಪೀಠದೊಳ್ ಚೀನಪಟಚಂದನಚರ್ಚೆಯಿಂ ರಂಜಿಸುವಪಸವ್ಯಕುಚಲಿಂಗಮುಂ, ಮುಖಪದ್ಮದೊಳ್ ಗಱಿವೊಯ್ವ ಪಱಮೆಯ ಮಱಿಗಳಂತರಮೆ ಅರಲ್ದ ಕಣ್ಮಲರ್ಗಳುಂ, ಅರುಣಸರಸಿರುಹಚುಂಬನಕ್ಕೆಳಸಿದ ತರಣಿಮಂಡಲದಂತೆ ಎಡಗಿವಿಯೊಳ್ ಕಡುಚೆಲ್ವಿಂದೆಸೆವ ರತ್ನದೋಲೆಯುಂ, ನಾಗಕನ್ಯಕಾನಿರ್ಮುಕ್ತನಿರ್ಮೋಕದಂತಿರ್ಪ ನಿರ್ಮಲವಸ್ತ್ರಾಭರಣಮುಂ, ಸುಧಾಬ್ಧಿತುಷಾರಮಂ ತಳೆದ ಸುಧಾ

ಸೂತಿಯಂತಿರ್ಪ ಮುಖಮೃಗಾಂಕಮಂಡಲಮುಂ, ನವರತ್ನಮಯತ್ರಿಸರಹಾರಮನೋರಣದಿಂದಲ್ಲಾಡಿಸುವ ಮೆಲ್ಲುಸಿರ್ಗಳುಮತಿರಮಣೀಯಮಾದುವು. ಅಂತುಮಲ್ಲದೆಯುಂ,

ಸುರುಚಿರಮಾದ ದಂತವಸನಂ ನಸುಗೆತ್ತುವಿನಂ ಸಿತಾಕ್ಷಿ ನೀ ।
ಳ್ದರೆಮುಗಿದಿರ್ಪನಂ ಕದಪು ನುಣ್ಬೆಮರೋಳ್ಮುನಾಂಪಿನಂ ಕುಚಾಂ ।
ತರದ ನಿಜೋತ್ತರೀಯುವಸನಂ ತೊಲಗಿರ್ಪನಸುಲ್ಪಮಧ್ಯಮು ।
ಬ್ದರೆ ಮೃದುತಲ್ಪದೊಳ್ ಮೆಱೆದಳಂಗನೆ ಮಂಗಳಮಾದ ನಿದ್ರೆಯಿಂ ॥

ದುಗ್ಧಾಂಬುಧಿಯೊಳ್ ಜನಿಸುವ ।
ಮುಗ್ಧೇಂದುಕಳಾವಿಳಾಸದಂತನುನಯದಿಂ ॥
ದಿಗ್ಧವಳತತಳ್ಪದೊಳ್ ವಿ ।
ದಗ್ಧಾಂಗನೆ ಮೆಱೆದಳೆಸೆವ ನಿದ್ರಾಭರದಿಂ ॥ ೨೯೭

ಕೆಳದಿಯರೆಲ್ಲರ್ ತಂತ ।
ಮ್ಮಳವಡಿಕೆಯ ಠಾವಿನಲ್ಲಿ ಕಲ್ಪಲತಾಕೋ ॥
ಮಳೆವೊಲ್ ಮೃದುತರಶಯ್ಯಾ ।
ತಳದೊಳ್ ಮೆಱೆದಿರ್ದರೆನ್ನ ಕಣ್ ಸೋಲ್ವಿನೆಗಂ ॥ ೨೯೮

ಅಂತಿರ್ದ ಕಾಂತೆಯುಂ ಕಂಡು

ಇಂದೆನ್ನಕ್ಷಿಗೆ ಪರ್ವಮಾಯ್ತು ಮದನತ್ರೈರಾಜ್ಯಮಂ ಕಂಡೆನಾ ।
ನಂದಂ ಮಿಕ್ಕುದು ಧೂಪವಾಸಿತಲಸತ್ಕನ್ಯಾಲಯಂಬೊಕ್ಕೆನೀ ॥
ಮಂದಶ್ವಾಸೆಯ ನಿದ್ರೆಯಂ ತೊಲಗಿಸಲ್ಕೇನೆಂಬಳೋ ಎನ್ನನೆಂ ।
ಬೊಂದುದ್ವೇಗದೊಳಿರ್ದೆನೊಂದು ನಿಮಿಷಂ ಸಾದಾವಮಣಿಸ್ತಂಭವುಂ ॥

ಅಂತವಳಂ ಕಂಡು ಪರವಶನಾದಂತೆಯುಂ, ರತಿಸಮಾಧಿಯಂ ಪಡೆದಂತೆಯುಂ, ಸ್ವರ್ಗಲೋಕಂಬೊಕ್ಕಂತೆಯುಂ, ಕಾಮನಿಧಾನಮಂ ಕಂಡಂತೆಯುಂ, ಸುಖಸಾಗರದೊಳ್ ಮುಳುಗಿದಂತೆಯುಂ, ಕುಸುಮಶರದಿಂ ಬದ್ಧನಾದಂತೆಯುಂ, ಮನಮುಂ ಮಱುಗೊಟ್ಟಂತೆಯುಂ ಇರ್ದು ಎಂತಾನುಂ ತಿಳಿದು ಕೆಲದ ಭಿತ್ತಿಭಾಗಮಂ ನೋಳ್ಪನ್ನೆಗಂ

ತಳತಳಿಸಿ ಪೊಳೆವ ನಿಮ್ಮಳ ।
ಫಳಕಂ ನೇಱೆದೊಡಂತದಂ ತೆಗೆದನದಱೊಳ್ ॥

ಬಳಪದಿನಾಗಳ್ ಬರೆದೆಂ ।
ಲಳನೆಯ ರೂಪಾತಿಶಯಮುಮನೆನ್ನ ಱವನಿತಂ ॥ ೩೦೦

ಅದೆಂತೆನೆ—

ತಳಿರಡಿಯಂ ನಯಂಬಡೆದ ಜಂಘೆಯನೊಳ್ಪಡರ್ದೂರುವಂ ಮೃದೂ ।
ಜ್ಜ್ವಳಕಟಿಯಂ ಸುರುಳ್ದ ಸುೞನಾಭಿಯನೊಳ್ನಡುವಂ ಕಳಾಪವಂ ॥
ಕಳಶಕುಚಂಗಳಂ ಭುಜಲತಾದ್ವಯಮಂ ಶಶಿಬಿಂಬವಕ್ತ್ರಮಂ ॥
ಡಳವಿನಲಂಪಿನಿಂ ಬರೆದೆನಂಗಜಚಿತ್ರಕನೋಜನಾದವೋಲ್ ॥ ೩೦೧

ಅಮ ಕುಸುಮಾಸ್ತ್ರಭಾಳಲಿಖಿತಂ ಶಶಿಯೋಲ್ಗೆಯ ಸೀಮೆ ಚೈತ್ರನ ।
ಭ್ಯುದಯದ ಮಂತ್ರವೃತ್ತಿ ಮಳಯಾನಿಳನೊಪ್ಪವ ಜೀವಮಿಾಕ್ಷಿಸ ॥
ಲ್ಕದು ರತಿಯೊಲೆಬಾಗ್ಯಮುಮ ಮೋಹನ ಮೂರ್ತಿಯೆನಲ್ಕೆ ರಂಜಿಸಿ ।
ರ್ದುದು ಬರೆದಿರ್ದ ಚಿತ್ರಮೆನಗಂ ಬೆಱಗಪ್ಪಿನೆಗಂ ಧರಾಧಿಪಾ ॥ ೩೦೨

ಅದಲ್ಲದೆಯುಂ,

ಉರುತರಮಂಚದೊಳ್ ಮಲಗಿದಂಗನೆಯಾಕೃತಿಯಂ ವಿಳಾಸದಿಂ ।
ಬರೆದು ತದಂಘ್ರಿಪಲ್ಲವಸಮಿಾಪದೊಳಂಗಜಕೇಳಿಯಾಸೆಯಿಂ ॥
ಕರಕಮಳಂಗಳಂ ಮುಗಿದು ಕಾಲ್ಗೆಱಗಿರ್ಪ ಮದೀಯಭಾವಮಂ ।
ನಿರವಿಸಿಯಾರ್ಯೆಯೊಂದನೊಲವಿಂ ಬರೆದೆಂ ನೃಪರೂಪಚಂದ್ರಮಾ ॥ ೩೦೩

ಅದೆಂತೆನೆ—

॥ ಆರ್ಯೆ ॥

"ತ್ವಾಮಯಮಾಬದ್ಧಾಂಜಲಿ ದಾಸಜನಸ್ತ್ವಿಮಮರ್ಥಮರ್ಥಯತೇ ।
ಸ್ವಪಿಹಿ ಮಯಾ ಸಹ ಸುರತವ್ಯತಿಕರಖಿನ್ನೈವ ಮಾ ವೈವಂ ॥"

[ಟೀಕೆ]

ನಿನ್ನಯ ದಾಸಂ ಕೆಯ್ಮುಗಿ ।
ದುನ್ನತಿಯಿಂ ಪ್ರಾರ್ಥಿಸುವನಿದಂ ಸತಿ ನೀಂ ಕೇಳ್ ॥
ನಿನ್ನೊಡನೆ ಸುರತಕಲಹದ ।
ಖಿನ್ನತೆಯಿಂದೊಱಗಿ ಸುಖದೊಳೊಪ್ಪವ ತೆಱನಂ ॥ ೩೦೪

ಎಂಬಿದಂ ಬರೆದನಂತರಂ

ಅಲ್ಲಿರ್ದ ಪೆಟ್ಟಿಯೊಳಗಣ ।
ಸಲ್ಲಲಿತಕ್ರಮುಕಪತ್ರಕರ್ಪೂರಮುಮನಾಂ ॥
ಬಲ್ಲನಿತಂ ಕೊಂಡು ಮುದಂ ।
ಪಲ್ಲವಿಸಲ್ ಸವಿದೆನಧಿಕರಾಗಂ ಮೆಱೆಯಲ್ ॥ ೩೦೫

ಅಂತು ಸವಿದು,

ಪೊಳೆವ ಸುಧಾಭಿತ್ತಿಯೊಳ ।
ಗ್ಗಳಮಾಗಲ್ ಪದ್ಮರಾಗವರ್ಣದ ಪೊಸತಂ ॥
ಬುಲದ ರಸಮುಂ ವಿಳಾಸದಿ ।
ನಳವಡಲುಗುೞ್ದೆಂ* ರಥಾಂಗರೂಪಪ್ಪಿನೆಗಂ ॥ ೩೦೬

ಬೞಿಕಲ್ಲಿಂ ಪೊಱಮಟ್ಟು ಪೂರ್ವಮಾರ್ಗದಿಂ ಕಾರಾಗೃಹಕ್ಕೆ ಬರಲೆನ್ನಂ ಕಾಂತಕಂ ಕಂಡು ಕನ್ನಕ್ಕೆನ್ನಂ ಬಲಿಗೆಯ್ಯಲೆಂದನುಮಾನಿಸೆ,

ತನ್ನೊಂದಲ್ಪಸುಖಕ್ಕೆ ಕೂರ್ತು ಪರರಂ ನಿಷ್ಕಾರಣಂ ಕೊಲ್ವನಂ ।
ಮುನ್ನಂ ಕೊಂದೊಡೆ ದೋಷಮಿಲ್ಲೆನಿಸ ನಾನಾನೀತಿಯಂ ಬಲ್ಲೆನಿಂ ॥
ದೆನ್ನಂ ಕೈತವದಿಂ ಕೊಲಲ್ ಬಗೆದನೀಕ್ರೂರಾತ್ಮನೆಂದಾಕ್ಷಣಂ ।
ಭಿನ್ನಾಂಗಾವಯವಂಗಳಾಗೆ ಪೊಡೆದೆಂ ತತ್ಕಾಂತಕಾಭಿಖ್ಯನಂ ॥ ೩೦೭

ತನ್ನಸಿಯುಂ ಕೊಂಡಾರ್ಪಿಂ ।
ಕೆನ್ನಂ ತಱಿದುದನೆ ನೋಡಿ ಕಾರಾಗೃಹದೊಳ್ ॥
ಮುನ್ನಿನ ತಳಮಾಱಿಂ ಕಡು ।
ಬನ್ನದೊಳಿರಲವನೊಳಾಗಳಾನಿಂತೆಂದೆಂ ॥ ೩೦೮

ಎನ್ನಿಂ ಕನ್ನವನಿಕ್ಕಿಸಿ ।
ಕನ್ನಿಕೆಯೊಡನಿರ್ದೆನೆಂದು ತಾನಱಿದಂ ನೀಂ ॥
ಚೆನ್ನಾಗಱಿಪಿದೊಡರಸಂ ।
ಗೆನ್ನಿಂ ನಿನಗಕ್ಕುಮುೞಿವುಮವನಿಪನೊಲವುಂ ॥ ೩೦೯

ಎಂದು ಪೇೞ್ದಲ್ಲಿಂ ಸೃಗಾಳಿಕೆವೆರಸು ಪೊಱಮಡುವಾಗಳ್

ವಿಹಿತಾಸ್ಥಾನಮೆನಿಪ್ಪ ವಿಷ್ಣುಪದಮಂ ಬಿಟ್ಟೊರ್ಮೊದಲ್ ಮಧ್ಯಗಂ ।
ಮಿಹಿರಂ ಕ್ಷೀಣವಯಸ್ಕನಾಗಿಯುಮಿದೇನಾನಾರ್ಯದಿಂ ವಾರುಣೀ ॥

ಸ್ಪೃಹೆಯಂ ಮಾಡಿವನೆಂದು ನಾಣ್ಚಿ ತಲೆವಾಗುತ್ತಿರ್ದುದೋ ಪದ್ಮಿನೀ ।
ಮಹಿಳಾಸಂಕುಳಮೆಂಬಿನಂ ದಿನಕರಂ ಪೊಕ್ಕಂ ಪ್ರತೀಚ್ಯಾಬ್ಧಿಯಂ ॥ ೩೧೦

ಅಂತು

ಇನನಸ್ತಾದ್ರಿಯನೆಯ್ದಿ ।
ರ್ದನೆಂಬುದೇಕಱಿಯದೆಯ್ದೆ ನಲಿದು ಜಗಲ್ಲೋ ॥
ಚನಬಿಂಬಂ ಪದೆಪಿಂದಂ—।
ಜನಸಂಗದಿನೊಳ್ಪುವೆತ್ತುದೆನ್ನದೆ ಲೋಕಂ ॥ ೩೧೧

ಅಂತು ಸೂರ್ಯಾಸ್ತಮಾನವಾಗಲೊಡಂ

ದೆಸೆಯುಂ ಬಾಸಣಿಸಿರ್ಪ ಕತ್ತಲೆಯೊಳಾಂ ಬರ್ಪನ್ನೆಗಂ ನಾಗರೀ ।
ಕಸಮೂಹಂ ತೊಳಲುತ್ತೆ ಮುಂದೆ ಸುಱುವೆನ್ನಂ ಕಂಡು ಪೋಯ್ಪೊಯ್ದು
ಬಂ ॥ ಧಿಸಲೆಂಬೆಯ್ದರೆ ಕಂಡಿದಿರ್ದೆಡೆದವರ್ಗಿರ್ಕೆಯ್ಗಳಂ ನೀಡಿ ಬಂ ।
ಧಿಸಿಮೆಂಬನ್ನೆಗಮಾಸ್ಯಗಾಳಿಕೆ ಸಮಂತೆಯ್ದಂದಳತ್ಯಾರ್ತದಿಂ ॥ ೩೧೨

ಅಂತು ಬಂದು

ಕಡುಜರದಿಂ ಕರಂ ನವೆದು ವಾಯುವಿಕಾರದೊಳಟ್ಟಿ ಕಂಡ ಕಂ ।
ಡೆಡೆಗೆ ನಿಜೇಚ್ಛೆಯಿಂ ಪರಿಯುಲಿರ್ಕರನಂ ಮಿಗೆ ಕಟ್ಟಿ ಕೋಣೆಯೊಳ್ ॥
ಮಡಗಿಡಲಿಂದು ಮಾಣ್ದೆ ತೆಱದಿಂದಿರಲಾಂ ಬಿಡೆ ಮತ್ತೆ ವಾಯು ಬಂ ।
ದಡಸಿತು ನೋಡಲಾಂ ಒಡವೆ ಮತ್ಸುತನಂ ಪಿಡಿದೀವುದೆಲ್ಲರುಂ ॥ ೩೧೩

ಎಂಬುದುಂ,

ಎಲೆ ವೃದ್ಧೆಯುವಂ ಮರುಳ್ಳೆ ।
ಸಲೆ ನೀಂ ಮರುಳಲ್ತೆ ಯುವನನಾರ್ ಪಿಡಿವರ್ ನೀ ॥
ನೊಲಿವತ್ತ ಪೋಗೆನಲ್ ಕ ।
ಟ್ಟಱಿಸಿದೆನಾಂ ವಾಯುದೇವರಿಂದಂತಾಗಳ್ ॥ ೩೧೪

ಅಂತಾದುರ್ಘಟವುಮಂ ಕಱಿದು ರಾಗಮಂಜರಿಯ ಮನೆಗೆ ಬಂದು

ಪಿರಿದಾಲಿಂಗಿಸಿದೆಂ ನಲಿ ।
ದು ರಾಗಮಂಜರಿಯನಾತಳೋದರಿಯೆನ್ನೊಳ್ ॥
ಪರಿರಂಭಸುಖದಿನಿರಲೊ ।
ರ್ಬರೊರ್ಬರಂ ಪೊರ್ದಿ ಕಳೆದೆನಂದಿನ ದಿನಮಂ ॥ ೩೧೫

ಅನ್ನೆಗಂ,

ರವಿ ಶಶಿಯುಂತೆ ತಣ್ಣ ದೀರ್ಗಳೆಯುದ್ದಯಾದ್ರಿಯೊಳುಣ್ಮಿ ಹಸ್ತ ಪ ।
ಲ್ಲವದಿನೊಱಲ್ದು ಸಾಧುಜನನುಘ್ಯ೯ವುನೆತ್ತಿ ಸರೋಜಷಂಡವುಂ ॥
ದವಿರಳಪುಷ್ಪತಸ್ತಿತಿಯಿನೊಪ್ಪೆ ಜಗಜ್ಜನನೇತ್ರ ಸ್ತೋತ್ರಕೋ ।
ತ್ಸವಫಲವಾಗಲೇನುದಯುವಾವನೊ ಪಂಕಜಜೀವಿತೇಶ್ವರಂ ॥ ೩೧೬

ಅಂತು ಸೂರ್ಯೋದಯುವಾಗಲೊಡಂ ಧನಮಿತ್ರನ ಮನೆಗೆ ಪೋಗಲಾತ ನೆನ್ನಂ ಕಂಡು

ಇಂದಸು ತುಂಬಿತೆನ್ನ ವಯುವಂಗಳೊಳಂದೆನಗೊಪ್ಪವೆತ್ತ ಕಣ್ ।
ಬಂದುವು ನೋಡಲಿಂದೆನಗನೇಕವುಹಾವ್ರತಸಿದ್ಧಿ ಸಾಧ್ಯವಾ ॥
ಯ್ತೆಂದನುರಾಗದಿಂ ಪುಳಕವುಣ್ಮಿವಿನಂ ಧನಮಿತ್ರನಾಕ್ಷಣಂ ।
ಬಂದವುರ್ದಪ್ಪಿ ಮನ್ನಿಸಿದನೆನ್ನನತೀವ ಮನಃಪ್ರಮೋದದಿಂ ॥ ೩೧೭

ಅಂತು ಮನ್ನಿಸಲಾಧನಮಿತ್ರನ ಮನೆಯೊಳ್ ಸುಖದಿನಿರ್ಪನಮೊಂದು ದಿನಂ,

ಲೀಲೆಯು ರಾಜ್ಯಮುಂ ನಿಜಶರೀರವುನೊಲ್ವೊಡೆ ತನ್ನ ಪುತ್ರಿಯುಂ ।
ಬಾಲಿಕೆಯುಂ ಮನೋಮುದದಿನೀವುದು ಕೂರ್ತೆನಗಲ್ಲದಂದು ಕಾ ॥
ಲಾಲಯದತ್ತಲೆಯ್ದಿಸುವೆನೆಂದತಿಗರ್ವಿತಚಂಡವರ್ಮನಂ ।
ದೋಲೆಯನಂಗಭೂಪತಿಗೆ ಭೀತಿ ಮಿಗಲ್ ಮುಳಿದಾತನಟ್ಟಿದಂ ॥ ೩೧೮

ಅಂತು ಚಂಡವರ್ಮಂ ಸಿಂಹವರ್ಮಂಗೆ ದೂತನಂ ಕಳಿಪಲದರ್ಕೆ ಸಿಂಹ ವರ್ಮಂ ಕನಲ್ದು

ಕುಡೆನೆನ್ನ ತನೂಜೆಯನಾ ।
ರ್ಪೊಡೆ ಯುದ್ಧಕ್ಕೆತ್ತಿ ಚಂಡವರ್ಮಂ ತಾಂ ಬಂ ॥
ದೊಡೆ ನೋಳ್ಪೆನೆಂದು ಚರನಂ ।
ಪಿಡದಲೆಯುಂ ಪಿಡಿದು ನೂಂಕಿಸಿದನವನೀಶಂ ॥ ೩೧೯

ಅಂತು ದೂತನಂ ನೂಂಕಿ,

ತನಗನುಕೂಲವುಪ್ಪಖಿಳಭೂಪತಿಗಳ್ಗೆ ಸುಹೃತ್ಪ್ರಸಿದ್ಧನೊ ।
ಲ್ದನುನಯದಿಂದನೇಕಮಣಿಭೂಷಣಕಾಂಚನದಿವ್ಯವಸ್ತ್ರವಾ ॥

ಹನವನೆಲಂಪಿನಿಂ ಕಳಿಪಿ ತತ್ಸಮಯಕ್ಕತಿಶೀಘ್ರಮಾರ್ಗದಿಂ ।
ಮನದೊಲವಿಂದೆ ಬರ್ಪುದೆನುತೋಲೆಯನಟ್ಟಿದನಂಗಭೂಭುಜಂ ॥ ೩೬೦

ಅಂತು ತನ್ನ ಮಿತ್ರಕ್ಷತ್ರಿಯಗೋತ್ರಕ್ಕೆ ಪತ್ರಮಂ ಕಳಿಪಲುತ್ತಲ್ ತನ್ನಿಂದವಮಾನಿತನಾದ ದೂತಂ ತನಗಾದ ಮಾನಹಾನಿಯುಂ ಚಂಡವರ್ಮಂಗೆ ಪೋಗಿ ಪೇೞೆ

ಗಿರಿಯುಂ ನುಂಗುವ ತಾರೆಯುಂ ತಿಱುವ ಧಾತ್ರೀಭಾಗಮುಂ ಪೋೞ್ವ ಸಾ॥
ಗರಮುಂ ತುಱ್ಕುವ ಚಾತುರಂಗಬಲದಿಂ ಸಂರಂಭಮುಂ ತಾಳ್ದು ನಿ ॥
ರ್ಭರದೋರ್ದರ್ಪದ ಚಂಡವರ್ಮನಬಲಾಸಂವಾಂಛೆಯಿಂದಂಗಭೂ ।
ವರನಂ ಮುತ್ತುವೆನೆಂದು ಬಂದನದಟಂ ಚಂಪಾಪುರಕ್ಕಾಕ್ಷಣಂ ॥ ೩೬೧

ಅಂತು ಬಂದು

ಪಱಿದುಱಿವಾಯ್ದುವೋಲ್ ಸಕಲಸೈನ್ಯಯುತಂ ಛಲಿ ಚಂಡವರ್ಮನಾ ।
ಗಳೆ ಮುಳಿದಂಗಭೂಪತಿಯು ಸತ್ವಮನೊರ್ಮೆಯೆ ಸೂಱೆಗೊಂಡು ಕಾ ॥
ಲ್ಗಳೊಳತಿಕೋಪದಿಂ ಪಿರಿಯ ಸಂಕಲೆಯುಂ ಮಿಗೆ ಸಾರ್ಚೆ ತನ್ನ ದೋ ।
ರ್ಬಲದವಲೇಪದಿಂ ಮದುವೆಯುಜ್ಜುಗಮಂ ತಳೆದಿರ್ದನಾಖಳಂ ॥ ೩೬೨

ಅಂತು ಚಂಡವರ್ಮನಂಗರಾಜನಂ ಭಂಗಿತನಂ ಮಾಡಿ ಮಱುದಿನಮುಂ ಬಾಲಕೆಯುಂ ಮದುವೆಯಾಗಲನುಗೆಯ್ಯೆ

ಅವನಂಬಾಲಿಕೆಯೊಳ್ ವಿವಾಹಸುಖಮಂ ತಾಳ್ದಿರ್ಪನೆಂಬೊಂದು ಕಾ ।
ರ್ಯವಿಶೇಷಕ್ಕತಿಕೋಪಮುಬ್ಬರಿಸಲಾಂ ಮುಂ ಕಂಡು ಕೂರ್ತಿರ್ದೆನಾ ॥
ಯುವತೀರತ್ನಮಿದೆನ್ನ ಭೂಷಣಮೆನುತ್ತಾಂ ನಿಶ್ಚಯಂಮಾಡಿಯೊ ।
ಪ್ಪುವಿನಂ ಕಂಕಣದಾರಮಂ ಕರದೊಳಾಂ ತಾಳ್ದಂ ಮನೋರಾಗದಿಂ ॥

ಅಂತು ಕಂಕಣದಾರಮಂ ಕಟ್ಟಿಕೊಂಡು ಧನಮಿತ್ರಂಗಿಂತೆಂದಂ:—

ಪಗೆಯ್ದು ಚಂಡವರ್ಮನ ।
ನೀಗಳ್ ತೀರ್ಚುವೆನವರ್ಕೆ ತಾವಂಜದೆ ಚೆ ॥
ಲ್ವಾಗಿರ್ಪುದೆಂದು ಪೇೞಿನು ।
ರಾಗದೆ ಪೌರರ್ಗೆ ರಾಗದಿಂ ಧನಮಿತ್ರಾ ॥ ೩೬೪

ಎಂದಲ್ಲಿಯ ಪೌರರ್ಗೆ ಪೇೞ್ದು,

ಅಂಗನೃಪಾಲನ ಸೀಮಾ ।
ರಂಗಕ್ಕೈತಂದುದಖಿಳಭೂಪರ ಸಂಗಂ ॥
ಮಂಗಳವಾರ್ತೆಯನುಸಿದ*ವ ।
ರಂ ಗುಣದಿಂ ಕೊಂಡು ಬರ್ಪುದನುನಯದಿಂದಂ ॥ ೩೦೫

ಎಂದು ಧನಮಿತ್ರನನತ್ತಲ್ ಕಳಿಪಿದೆಂ. ಇತ್ತಲ್ ಚಂಡವರ್ಮನಂಬಾಲಿಕೆಯಂ ಮದುವೆಯಾಗಲ್ ಮದವಣಿಗನಾಗಿ ಪಸೆಯ ಮೇಲೆ ನಿಂದಿರ್ದಾಗಳ್;

ಮಂಗಳಗಾಯಕರ್ ಸಕಲವಾದ್ಯವಿಚಕ್ಷಣರುದ್ಧನರ್ತಕರ್ ।
ಮಂಗಳಪಾಠಕರ್ ಗಣಿಕಸಂತತಿ ಸಂಭ್ರಮದಿಂ ಪುಗುತ್ತಿರಲ್ ॥
ಮಂಗಳಗೇಹಮಂ ಮುದದಿನಾನವರೊಳ್ ಬೆರಸಿಂದು ವೇಗದಿಂ ।
ಮಂಗಳಪಾಠಕಾಕೃತಿಯಿನೊರ್ಬ್ಬಳ್ ಪೊಕ್ಕೆ ಸಿಳಾಧಿನಾಯಕಾ॥ ೩೦೬

ಅಂತಾಂ ಪುಗುವಾಗಳ್ ಜವ ।
ನಾತುಟು ಕಿಱುಸುರಿಗೆವೊಂದನಾಪಿನಂ ಬಳಿಗೆ ॥
ಯಿನ್ನಂ ತಳೆದು ಪೊಕ್ಕು ಮಂಟಪಯ ।
ತಿಂತಿಣಿಯೊಳ್ ನೋಡುತಿರ್ದನಾತನ ಕದೆಯಂ॥ ೩೦೭

ಅನ್ನೆಗಮಾತಂ ತನ್ನಾಯುಷ್ಯಮನೊಪ್ಪುಗುಡುವಂತೆ ಪಾಣಿಗ್ರಹಣಾರ್ಥಂ ಕೆಯ್ಯಂ ನೀಡೆ,

ನೀಡಿದ ಕೆಯ್ಯನಾಂ ತುಡುಕಿ ಗಾಢಮೆನಲ್ ಪಿಡಿದೀರ್ಚ್ಚಿ ಬೀರ್ಚ್ಚನಂ ।
ಜೋಡಿಸಿ ಶಸ್ತ್ರದಿಂ ತಿವಿದುಬಂತೆದು ನುಣ್ಣನೆ ಜೆನ್ನೊಳೊವೊರ್ಗಿಂ ॥
ಮಾಡಲೊಡಲ್ಲಿ ಬಿಟ್ಟಿಸುವನಾಗಳೆ ಸೀಳನೆಂದು ಬಂಧುಗಳ್ ।
ನೋಡುವ ಮಾತ್ರೆಯಿಂ ಕೆಡೆಪಿದಂ ಪಸೆಯೊಳ್ ಕಲಿಚ್ಚಂಡವರ್ಮನಂ ॥

ಅಲ್ಲಿಂ ಬಿಟ್ಟುಯುಂ,

ಆರಿಸ್ರವಿನಾಪ್ತ ಬಲವಂ ।
ಮಾರಿಪೊಲಾಂ ಬೀದಿಸರಿದು ಭುಜಬಲದಿಂ ಸಂ ॥
ಹಾರಂಮಾಡ್ಪಾಗಳ್ ಗಂ ।
ಭೀರರವಂ ಪೆರ್ಮ್ಮೆಯಿಂದೆಂ ನಿಜಪದವಂ ॥ ೩೦೮

ಎಂದು ಅಪಹಾರವರ್ಮಂ ಪೇೞ್ದುದಂ ರಾಜವಾಹನಂ ಕೇಳ್ದು

ಶಿವಶಿವ! ಮರ್ತ್ಯಲೋಕದೊಳಪೂರ್ವಮಗೋಚರಮಲ್ತೆ ಭಾವಿಸ ।
ಲ್ಕಿವನ ಪರಾಕ್ರಮಂ ಬಗೆಗಮಾನುಷಮಾತಿಬಿಂ ತೊಱಲ್ದನಾ ॥
ವವನತಿಸಾಹಸಂಬೆರಸು ಪೇೞೆಮೆನುತ್ತಪಹಾರವರ್ಮನಂ ।
ನವಪುಳಕಂಗಳಂಕುರಿಸೆ ಬಿಗಿಯಪ್ಪಿದನಾಗಳಭಂಗವಿಕ್ರಮಂ ॥ ೩೩೦

॥ ಗದ್ಯ ॥

ಇದು ನಿಖಿಲಬುಧಜನಮನೋವನಜವನದಿವಾಕರಕಿರಣಪ್ರತಿಮಪ್ರಸನ್ನ

ಶ್ರೀಮದಭಂಗವಿಟ್ಠಲಪದಾಂಭೋಜಮತ್ತಮಧುಕರ

ಮಧುಸೂದನನಂದನ ಸರಸಕವಿ ಚಾವುಂಡರಾಜ ವಿರಚಿತಮಪ್ಪ

ಅಭಿನವ ದಶಕುಮಾರಚರಿತೆಯೊಳ್

ಅಪಹಾರವರ್ಮ ಕಥಾವೃತ್ತಾಂತಂ

ಅಷ್ಟಮಾಶ್ವಾಸಂ

॥ ನವಮಾಶ್ವಾಸಂ ॥

—ಅರ್ಥಪಾಲನ ಕಥೆ—

ಶ್ರೀಕೇಳೀಮುಖಕಮಳಂ ।
ಭೂಕಾಂತಾಧೀಶನರ್ಥಪಾಲಕನಂ ಸಾ ॥
ಮ್ಯಾಕಾರನನೀಕ್ಷಿಸಿದಂ ।
ಲೋಕಜನಸ್ತುತನಭಂಗವಿಟ್ಠಲಭೃತ್ಯಂ ॥ ೧

ಅಂತು ರಾಜವಾಹನನರ್ಥಪಾಲನ ಮುಖಾವಲೋಕನಂಗೆಯ್ದು ನೀನೆಸಗಿದ ಕಾರ್ಯಮಂ ಪೇಳೆನಲಾತಂ ಕೆಯ್ಗಳಂ ಮುಗಿದು,

ಸಹಚರರೆಲ್ಲರುಂ ನಿಜಪದಾಂಬುರುಹದ್ವಯಮಂ ನಿರಂತರಂ ।
ಮಹಿಯೊಳಲಂಪಿನಿಂದಱಸಲೆನ್ದೆಸೆಗೆಯ್ದಿದೊಡಾನುಮಂತೆ ಸ ॥
ಸ್ಪೃಹೆಯಿನತಿಪ್ರಸಿದ್ಧಿವಡೆದಿರ್ದ ಮನೋಹರಮಪ್ಪ ಕಾಶಿಯಂ ।
ಬಹಳಸುಖಾಧಿವಾಸಿಯನಶೇಷವಿನಾಶಿಯನೆಯ್ದಿದೆಂ ನೃಪಾ ॥ ೨

ದುರಿತವಿನಾಶಿಯಂ ಸುಕೃತಸತ್ಫಲರಾಶಿಯನಗ್ರಕಸರ್ಪದು ।
ರ್ಗರಗಳಪಾಶಿಯಂ ಸಕಳಮಂಗಳಸಾರ್ಥಕತೀರ್ಥವಾಸಿಯಂ ॥
ನರಕಹುತಾಶಿಯಂ ಕೃತಯುಗಾಂಬುಜನಿರ್ಮಳಬೀಜಕೋಶಿಯಂ ।
ನಿರುಪಮಕಾಶಿಯಂ ಭರದಿನೆಯ್ದಿದೆನೊಲ್ದು ಜಗತ್ಪ್ರಕಾಶಿಯಂ ॥ ೩

ಅದು ಸುಕೃತಪ್ರಸಿದ್ಧಿಯ ತವರ್ಮನೆ ಜ್ಞಾನಮಹಾಬ್ಧಿತೀರಮಂ ।
ಪದುಳದಿನೊಲ್ದು ತೋಱುಸುವ ಮಾರ್ಗಮನೂನಸುಖಂ ವಿಳಾಸದಿಂ ॥
ದುದಯಿಪ ಭೂಮಿಯೀಶನವಿತರ್ಕದಿನಿರ್ಪೆಡೆ ಮೋಕ್ಷಕಾಮಿನೀ ।
ಸದನಮೆನಲ್ಕೆ ವಾರಣಸಿ ರಂಜಿಪುದಲ್ತೆ ಧರಾಧಿನಾಯಕಾ ॥ ೪

ಸ್ಮರಹರನಿರ್ಕೆ ಶಂಕರನ ಮಂದಿರಮೀಶನ ಗೇಹಮದ್ರಿಜಾ ।
ವರನ ಗೃಹಂ ಗಿರೀಶನ ನಿಜಾಲಯಮುಗ್ರನ ಶಾಲೆ ಜಾಹ್ನವೀ ॥
ಧರನ ನಿಕೇತನಂ ಭವನ ವೇಶ್ಮ ಯಮಾರಿಯ ಧಾಮಮಿಂದುಶೇ ।
ಖರನ ನಿವೇಶನಂ ದಲೆನಲೊಪ್ಪುವ ಕಾಶಿಯನೆಯ್ದಿದೆಂ ನೃಪಾ ॥ ೫

ಪುಟ್ಟುವವರುಳ್ಳೊಡಂ ಜಡೆ ಲಲಾಟವಿಲೋಚನಮಿಂದುಲೇಖೆ ಕ ।
ಪ್ಪಿರ್ಟ್ಟ ಗಳಂ ಲಸದ್ಗಶಭುಜಂ ಫಣಿಕುಂಡಲವೊಪ್ಪಿರಲ್ಕೆ ತಂ ॥
ದುಟ್ಟ ಗಜಾಜಿನಂ ಗಿರಿಜೆ ತುಂಗವೃಷಂ ಸಹಿತಂ ನಿರಂತರಂ ।
ಪುಟ್ಟುವರೆಂದೊಡೇವೊಗಳ್ವೆನೊರ್ವನ ಕಾಶಿಯ ಪೆಂಪನುರ್ವಿಪಾ ॥ ೬

ಅಂತು ಕಮನೀಯಮಾದ ಕಾಶೀಕ್ಷೇತ್ರಮನೆಯ್ದಿ

ಈಕ್ಷಣಮಾತ್ರದಿ ದುರಿತಪಾತಕಮಂ ತವಿಪಭ್ರಗಂಗೆಯುಂ ।
ಮೋಕ್ಷಫಲಪ್ರಸಿದ್ಧಿ ನೆಲಸಿರ್ಪ ಲಸದ್ಗುಣಸಂಗೆಯುಂ ವಿರೂ ॥
ಪಾಕ್ಷಶಿರಸ್ಸರೋಜನವಗಂಧವಮಾಲಸದ್ಭೃಂಗೆಯುಂ ಜಗ ।
ದ್ರಕ್ಷಣಮೂರ್ತಿಯಪ್ಪಮರಗಂಗೆಯುಮಂ ಮಿಗೆ ಕಂಡೆನುರ್ವಿಪಾ ॥ ೭

ಮಲಿನಮನುಳ್ಳುವಂ ತವಿಸಲೆಂದು ಪಿನಾಕಿಯೊಳ್ ಮುಟುಂಗೆ ಪುಂ ।
ದಲೆ ಜಡೆಗಟ್ಟಿ ಕಣ್ ವಿಷಮಮಾಗಿ ಕೊರಲ್ ಕಪ್ಪುಗೆಟ್ಟಿ ಸರಸಾ ॥
ಕುಳಮೊತೆಗೊಂಡು ವಾಮತನು ಪದ್ಮೆಯಾಗಿ ಪಿಶಾಚಸಂಗಮು ।
ಗ್ಗಳಿಸಿರೆ ಪುಟ್ಟುತ್ತುಂದಿಗೆಯಲ್ಲದ ತೋರ್ಪರೆಪಾಸ್ತಾ ವಿಸ್ಮಯಂ ॥ ೮

ತನ್ನಂ ಘೋಂಕನೆ ಕಂಡವಂ ಕನಸಿನೊಳ್ ಕಾಣಂ ಪುನರ್ಜನ್ಮಮಂ ।
ತನ್ನಂ ಪೂರ್ವದ ಜೀವಿಗಳ್ ನರಕಮುಂ ಪೂರ್ದರ್ ಮನೋಭಕ್ತಿಯಿಂ ॥
ತನ್ನಾ ಧ್ಯಾನದೊಳಿರ್ಪವಂ ಪದೆಪಿನಿಂದಿರ್ಪಂ ಮಹಾನಂದದೊಳ್ ।
ತನ್ನೊಳ್ ಸ್ನಾನಮನೊಲ್ದು ಮಾಳ್ಪ ಮನುಜಂ ಮಾಳ್ಪಂ ಜಗತ್ಸೃಷ್ಟಿಯಂ॥

ಮತ್ತಮದು ನೀರಾಟಕ್ಕೆಳಸಿಪ್ಪೈರಾವತವಾರಣಶರೀರಗೌರವರ್ಣಂ ತೀರ್ಥಸಿಪಂತೆಯುಂ, ಜಳಪಾನಕ್ಕೆಳಸಿದ ಅಳಕೇಶ್ವರಪ್ರಿಯನ ವೃಷಭೇಂದ್ರನ ಕಮನೀಯಕಾಂತಿಯುಂ ಕವರ್ದಂತೆಯುಂ, ಅವಗಾಹನಪ್ರೀತಿಯಿಂದವತರಿಸಿದಭವನ ಧವಳದೇಹದಿಂದವಿರಳಮಾದಂತೆಯುಂ, ಸಲಿಲಕ್ರೀಡೆಗೆಲಸಯಾನದಿಂ ಬಂದ ದಿವಿಜನಾರಿಯರ ನಯನಕಾಂತಿಕಾಳಿಂದಿಯುಂ ಕಪ್ಪುಗೊಂಡಂತೆಯುಂ, ನೈರ್ಮಲ್ಯದಿಂ ನೂರ್ಮಡಿಸಿರ್ದ ಅಮರನದಿಯುಂ ಕಂಡು,

ಅದಱೊಳಗಣ ಕರ್ಣಿಕೆಯೊಳ್ ।
ಸದಮಳಮಪ್ಪಂತು ಮಿಂದು ದುರಿತಮನಾರ್ಪಿಂ ॥
ದೊಗೆದು ಕೃತಕೃತ್ಯನಾದೆಂ ।
ವಿದಿತಮೆನಿಪ್ಪಖಿಳಕರ್ಮಮಂ ಪ್ರಕಟಿಸಿದೆಂ ॥ ೧೦

ತತ್ಸ್ನಾನೋಚಿತವಿಧಿಯನ |
ತ್ರಿಸ್ಥಲಮನಲ್ಲಿ ಮಾಡಿ ಬಟುಕಾನಾಗಳ್ ||
ಸ್ವಸ್ಥಮನನಾಗಿಯುಮಲ್ಲಿ |
ರ್ದ್ ಸ್ಥಾಣುವಿನಂ ಪರಿಸರಕ್ಕೆಯ್ತಂದೆಂ || ೧೧

ಶಶ್ವನ್ಮಂಗಲಮೂರ್ತಿ ಪಾತಕಗಿರಿಪ್ರೋದ್ಭಿನ್ನದಂಭೋಳಿ ಸ |
ತ್ಪಾತ್ರಶ್ವೇತರುಚಿಪ್ರಸಿದ್ಧನಯನಂ ನೈರ್ಮಲ್ಯಲಿಂಗಂ ಜಗ ||
ದ್ವಿಶ್ವವ್ಯಾಪ್ತನಪಾರಸಾರಮಹಿಮಂ ಕಾರುಣ್ಯಕಲ್ಪದ್ರುಮಂ |
ವಿಶ್ವೇಶಂ ಭವನಾಶನಪ್ರತಿನಯಾಧೀಶಂ ಸಮಸ್ತಾಶ್ರಯಂ || ೧೨

ಅಂತಪ್ಪ ಜಗನ್ಮನೋಹರಮೂರ್ತಿಯಾದ ವಿಶ್ವೇಶ್ವರನಂ ನಮಸ್ಕರಿಸಿ,

ಸಂಸಾರಭ್ರಮಣವ ನಿ |
ಷ್ಚ್ರಸುವ ಬಗೆಯುಂ ಬಿಸುಟ್ಟು ವಿಶ್ವೇಶನಿಜಾ ||
ವಾಸವನುಷ್ಫ್ರಮಣಂಗೆ |
ಯ್ದಾಸುಖದಿಂದಿರ್ದೆನೆಂಬಪ್ಪೋಲ್ ಬಲವಂದೆಂ || ೧೩

ಅಂತು ಬಲವರುತ್ತಿರ್ಪಾಗಳ್

ಪೊಸನನೆಯಿಂ ಮುಗುಳ್ಗಳನರಲ್ಗಳನುಜ್ಜ್ವಲಮಾಗಿ ಗುಜ್ಜುಗೊಂ |
ಡೆಸೆವುದನೊಂದು ಚೆಲ್ವ ಕರವೀರದ ಕಂಪಿ(?)ನೊಳೊಲ್ದು ರಜ್ಜುವಂ ||
ಪೊಸೆದು ಕೊರಳ್ಗೆ ಸೇಂದಿಕೊಳುತಿರ್ಪತಿಸಾಹಸಕರ್ಮಧೂರ್ತನ |
ಪ್ಪಸಮಬಲಾಢ್ಯನೊರ್ಬ ನಿರಲಾನವನಂ ಮಿಗೆ ಕಂಡೆನುರ್ವಿಪಾ || ೧೪

ತೋರವೊಗಂ ಸಮುನ್ನತಗಳಂ ನಸುಗೆಂಪಡರ್ದಕ್ಷಿ ಸೀಳ್ದ ತೋಳ್ |
ಪೇರುರಮುಟ್ಟ ಗಂಡುಟಿಗೆ ಕರ್ಕಶದೇಹಮುತ್ತೀವಭೀಷಣಾ ||
ಕಾರಮನಸ್ಸಶಕ್ಯಯೆ ಸಲೆ ಸಾಹಸಕರ್ಮದೊಳಿರ್ದನೊರ್ಬನು |
ದ್ಗಾರಿತಬಾಷ್ಪವಾರಿಪರಿಲಗ್ನನವಂ ಮುವಭಗ್ನನುರ್ವಿಪಾ || ೧೫

ನಿರವಧಿಯೊಳಶ್ರುಜಲಮಂ |
ಸುರಿಯುತೊಡಂ ನಯನವಾರಿ ತೀವರ್ ಬಟುಕ್ಕಂ ||
ತಿರುಳಾದ ಮಾಂಸಮುಟುಮಂ |
ತಿರೆ ಕೆಂಪಡರ್ದಕ್ಷಿಯುಗಳವೊಪ್ಪಿದುದವನಾ || ೧೬

ಅಂತಿರ್ದನಂ ಕಂಡು

ಅವನಿಂಗಿತನುಂ ಕಂಡಾ ।
ನಿವನಾತ್ಮಸುಹೃದ್ವಿಯೋಗದಿಂದಸುವಂ ನೀ ॥
ಗುವ ಬಗೆಯೊಳಿರ್ದ ತೆಱನೆಂ ।
ದು ವಿಚಾರಿಸಿ ಬೞಿಯೊಳವನನಾನಿಂತೆಂದೆಂ ॥ ೧೭

ಈಸಾಹಸಕರ್ಮವನ ।
ತ್ಯಾಸುರಮೆನೆ ಮಾೞ್ಪೆಯೇಕೆ ನೀನೆತ್ತಣನೆಂ ॥
ದೋಸರಿಸದೆ ನಾಂ ಬೆಸಗೊಳೆ ।
ಲಾಸುಭಟಂ ಪೇೞಲಾಗಳವ್ಯತನಾದಂ ॥ ೧೮

ಪೆಸರ್ವೆತ್ತ* ಪೂರ್ವಕಾಮೋ ।
ಷುಶಯುವ ದೇಶದೊಳ್ಬೊರ್ಬ ವೈಶ್ಯನುಮಗನಾಂ ॥
ಪೊಸತೆನಿಪ ಚಾರ್ಯವೃತ್ತಿ ।
ವ್ಯಸನಂ ನೆಲೆಗೊಂಡುದೆನಗೆ ವಿಧಿವಶದಿಂದಂ ॥ ೧೯

ಆಯುಃಕರ್ಮಂ ವಿತ್ತಾ ।
ದಾಯುಂ ವಿದ್ಯಾದಿಲಾಭಮೆಂಬಿವು ಮೊದಲೊಳ್ ॥
ತಾಯ ಬಸಿಱಲ್ಲಿ ಪುಟ್ಟುವ ।
ಕಾಯಕ್ಕಾಗಿರ್ದವಱಿಯಲುೞಿದವರಳವೇ ॥ ೨೦

ಎನ್ನ ಪಿತೃಮಾತೃಸೋದರ ।
ರೆನ್ನಯ ನಡೆವೞಿಗೆ ಸೈರಿಸದೆ ಪೊಱಮಡಿಸಲ್ ॥
ಖಿನ್ನಮನನಾಗಿ ಬಂದಪೆ ।
ನೆನ್ನ ಪೆಸರ್ ಪೂರ್ಣಭದ್ರನೆಂಬುದು ಕೇಳಿಯಾ ॥ ೨೧

ಎಂದು ಮತ್ತಂ

ಈವಾರಣಾಸಿಪುರದ ಮ ।
ಹಾವೈಶ್ಯಾಧಿಪನ ಮನೆಗೆ ಕನ್ನವನಿಕ್ಕಲ್ ॥
ಕೋವಿದಪುರರಕ್ಷಕರಱಿ ।
ದೋವದೆ ಬಳ್ವಿಡಿದರೆನ್ನನವಟಂಬರ ಳೊಳ್ ॥ ೨೨

ಅಂತವರೆನ್ನುಂ ಪಿಡಿದು ಧರ್ಮಾಸನಕರ್ಮಶ್ರೇಷ್ಠರ್ಗೆ ತೋಱಲವರ್ ಧರ್ಮಸೂಕ್ಷ್ಮಪ್ರಯುಕ್ತಿಜ್ಞತ್ವದಿನಿಂತೆಂದರ್:—

ಮದರದನಿಯಂ ಪಾದಾಗ್ರದಿ ।
ನೊದೆಯಿಸಿದನಿವನುತ್ತಮಾಂಗಮಂ ನುರ್ಚಲ್ಕಂ ॥
ತಿದು ಧರ್ಮಮೀತನಂ ಬೇ ।
ಗದೆ ಕೊಂಡಯ್ಯೆಂದರವರ್ಗಳವರೊಡನಾಗಳ್ ॥ ೨೩

ಎಂದು ಪೇೞೆಪ್ಪಡವರೀಕಾಶೀವಲ್ಲಭನ ಮಂತ್ರಿ ಬಾಹತ್ರರನಪ್ಪ ಕಾಮಪಾಲಂಗೆ ತದ್ವೃತ್ತಾಂತಮಂ ಪೇೞ್ದೊಡಾತನೆನ್ನನಾನೆಗಿಕ್ಕಿಸಲೆಂದುಪ್ಪರಿಗೆಯೊಳಿರ್ದು ಮಾವತನನಾನೆಯುಂ ತರಲ್ವೇೞಲೊಡಂ

ಅದಟಿಂದದ್ರಿಜೆ ಮೂರ್ಮ್ಮನೊಳ್ ಭುಜಬಲಾವಷ್ಟಂಭದಿಂದಾಂತು ಕಾ ।
ದಿದ ಸೋನ್ಮಾದಗಜಾಸುರಂ ಸಹಜದಿಂ ತಾನೆಂಬಿನಂ ಘೋರರಾ ॥
ದ್ರವಗುಬ್ಬಿಂ ದಿಗಿಭಂಗಳಂ ಬೆದಱಿಸುತ್ತಾಟೋಪದಿಂ ಬಂದು ನಿಂ ।
ದುದು ಸಂಹಾರಮುಮಂಬೊಲುದ್ಧತಗಜಂ ಮೃತ್ಯುಂಜಯಾಖ್ಯಾನದಿಂ ॥ ೨೪

ಸಿಡಿಲಂ ಬೃಂಹಿತದೊಳ್ ತದುಗ್ರಶಿಖಿಯುಂ ರೌದ್ರೇಕ್ಷಣದ್ವಂದ್ವದೊಳ್ ।
ಕುಡುಮಿಂಚಂ ಕುಡುದಾಡೆಯೊಳ್ ಮಿಸುಪ ಕರ್ಪಂ ದೇಹದೊಳ್ ವಾರಿಯುಂ
ಕಡುಪೆಂಪಿಂ ಮದವಾರಿಯೊಳ್ ಕರಕಮಂ ಚಂಚತ್ತುಷಾರಂಗಳೊಳ್ ।
ಪಡೆದುದ್ವೃತ್ತರಿ ಕಾಳಮೇಘಘಟೆಯುಂ ತೊಪ್ಪಿರ್ದುದುತ್ಕೋಪದಿಂ ॥ ೨೫

ಅಂತಿರ್ಪುದೊಂದಾನೆಯುಂ ನಿಷಾದಿ ತರಲದಱ ಮುಂದೆನ್ನುಂ ನಿಲಿಸಿ ಕೊಲಿಸಲೆಂದು

ವ್ಯಾಳನನಾದುರ್ ಮಾವತಿಗನಂಕುಶಮಿಕ್ಕಿ ಬಿಡಲ್ಕೆ ಕಂಡು ಕೈ ।
ಕೋೞದೆ ಕೆಯ್ಗಳಂ ನೆಗಪಿ ತತ್ಪ್ರತಿಮಾನಮನಾಪೆರ್ನಿಂ ಗಜಂ ॥
ಘೀಳಿಡಲಾಂ ನಿಮಿರ್ದು ಪೊಡೆಯಲ್ಕದು ನೊಂದು ಮದದ್ವಿಪಂ ಗಜಾ ।
ಮೀಳನದಿಂ ನಿರೀಕ್ಷಿಸದೆ ಪೋಗಲೊಡರ್ಚಿತತೀವ್ರಭೀತಿಯಿಂ ॥ ೨೬

ಅಂತಾಂ ಪೊಡೆಯಲಾನೆ ನೊಂದು ಪಿಂದುಮುಂದಪ್ಪಿನಂ ಮಾವತಿಗಂ ಕೋಪಿಸಿ

ಸುಡು ಕುಂಜರಾಪಶದ ನಿ ।
ನ್ನೊಡಲಂ ನರಮಾತ್ರನಂ ಕೊಲಲ್ಕಾಱದೆ ಬೆಂ ॥

ಗೊಡಲಾಂ ಬಿಡುವೆನೆ ನಿನ್ನಂ ।
ಕಡಿದಿಕ್ಕುವೆನೆಂದು ಮಗುೞ್ದು ನೂಂಕಿದನಿಭಮಂ ॥ ೬೮

ಅಂತು ನೂಂಕಲ್

ಬರಿಕೆಯ್ಯಿಂ ನೆತ್ತಿ ಪೋೞ್ವಿಂತಿರೆ ಪೊಡೆಯಲತಿಕ್ರೂರದಂತಾಗ್ರದಿಂ ಮೆ।
ಯ್ಯೆರಡಾಗಲ್ ಸೀೞ್ವ ಸಂರಂಭದೊಳನಗಿದಿರಾಗೇೞ್ತರಲ್ ದಂತಿಯುಂ ಮ ॥
ತ್ಸರದಿಂದಾನಾರ್ಪಿನಿಂದಪ್ಪಳಿಸಲಖಿಳದಿಗ್ಭಿತ್ತಿಯೊಳ್ ಬೃಂಹಿತಂ ತೀ ।
ವಿರೆ ಘೀಳಿಟ್ಟಾನೆ ಮುಂಗೆಟ್ಟನುಪಮಭಯದಿಂ ನಿಲ್ಲದೋಡಿತ್ತು ಬೇಗಂ ॥

ಅಂತು ಪೋಪಾನೆಯುಂ ಕಂಡು

ಇದುವೆ ನಿಷಾದಿ ಕುಂಜರವಿಸರ್ಗಳ ಕೀಟಕನೆನ್ನ ಮುಂದೆ ನಿ।
ಲ್ಲದು ಮಗು*ೞ್ದೊಂದು ಮತ್ತಗಜಮುಳ್ಳೊಡೆ ನಿಲ್ಲದೆ ಕೊಂಡು ಬಾ ಬೞಿ॥
ಕ್ಕದಪನುಮಾನವಂ ತಿಳಿವೆನೆಂದವನಂ ಜಡಿಯುತ್ತೆ ಕಂಡು ಸಂ ।
ಮದದೊಳ್ ಕಾಮಪಾಲಸಚಿವಂ ಪದೆದೀಕ್ಷಿಸಿದಂ ಮದಾಸ್ಯಮಂ ॥ ೬೯

ಅಂತೆನ್ನಂ ಕಾಮಪಾಲಂ ನೋಡಿ ತನ್ನ ಸಾರಸ್ಗೆ ಕರೆದಿಂತೆಂದಂ —

ಈಚಾರ್ಯವೃತ್ತಿಯುಂ ಬಿ ।
ಟ್ಟಾಚಾರದಿನೆನ್ನ ಪೊರೆಯೊಳಿರ್ದೊಡೆ ನಿನ್ನಂ ॥
ಭೂಚಕ್ರಂ ಪೊಗ*ೞ್ವಿಂತತಿ ।
ವೈಚಿತ್ರ್ಯದಿನೊಲ್ದು ಪೊರೆವೆನೆಂದನಲಂಪಿಂ ॥ ೭೦

ಎಂಬುದುಮಾಂ ಮಹಾಪ್ರಸಾದಮಂತೆಗೆಯ್ವೆನೆಂದೊಡೆನ್ನ ಕೆಯ್ಯ ಕೋಳಮಂ ಕಳೆಯಲ್ವೇೞ್ವುದುಂ;

ನಿನ್ನಾಜ್ಞೆಗೋಸುಗಂ ಕೋ ।
ಳಂ ನೆಲಸಿತ್ತೆನ್ನ ಕರದೊಳಲ್ಲದೆ ಕೇಳಾ ॥
ನಿನ್ನೊರ್ವರ ಬಗೆವೆನೆ ನೋ ।
ಡೆನ್ನಳವನೆನುತ್ತೆ ನುಗ್ಗಿದೆಂ ಪಡಿಪರನಂ ॥ ೭೧

ಅಂತಾಕೋಳಮಂ ನುಗ್ಗಿ ಕೆಯ್ಗಳಂ ಮುಗಿಯುತ್ತೆನ್ನನಾತಂ ಮನ್ನಿಸೆ

ಅಂದು ಮೊದಲಾಗಿ ನೃಪಸಚಿ ।
ವಂ ದಯೆಯಿಂದಾಪ್ತಮಿತ್ರಭಾವದಿನೆನ್ನಂ॥

ಮುಂದಿಟ್ಟು ಕೊಂಡು ಸುಖಮಿಸೆ ।
ವಂದದೊಳೊಲವಿಂ ಸಮಂತು ರಕ್ಷಿಸುತಿರ್ದಂ ॥ ೩೦

ಅಂತಿರ್ಪುದುಮಾನೊಂದು ದಿನಂ ರಹಸ್ಯಸಮಯದೊಳ್ ಸಂತೋಷದಿ ನಿರ್ದಾಗಳ್ ಕಾಮಪಾಲಂಗಿಂತೆಂದೆಂ:—

ನಿಜಗುಣಮುಪ್ಪುರ್ವೆನಸುಂ ।
ಸುಜನತೆ ಪೊಸತಾವಗಂ ದಯಾಪರತೆ ಘನಂ ॥
ಋಜುಮಾರ್ಗಿ ನಲ್ಮೆಯಿಂ ನಿ ।
ನ್ನ ಜನ್ಮಮಂ ಪೇೞವೇೞ್ಪು ಜನಗಧಿನಾಥಾ ॥ ೩೩

ಎಂದಾಂ ಬಿನ್ನಪಂಗೆಯ್ಯಲಾತನಿಂತೆಂದಂ:—

ಮಗಧಧರಾಧಿನಾಥನೆನಲೊಪ್ಪುವ ವ್ಯೆಮೆಯ ರಾಜಹಂಸನಾ ।
ವಗಮುೞೆ ಕೂರ್ಪ ಮಂತ್ರಿಕುಲಶೇಖರನಪ್ಪ ಸುಮಿತ್ರಪುತ್ರನಾಂ ॥
ಮೃಗಶಿಶುಲೋಚನಾವ್ಯಸನದಿಂದಿರೆ ಪಿತೃಮಾತೃಬಂಧುಗಳ್ ।
ಮಿಗೆ ಜಡಿದೆನ್ನನೀವ್ಯಸನಮಂ ತೊಱೆಯೆಂದಪರತೀವ್ರಕೋಪದಿಂ ॥ ೩೪

ಅಂತವರೆನ್ನಂ ಜಡಿದೊಡಂ ಕಾಂತಾವ್ಯಸನಮನೆ ಪಿಡಿದಿರ್ಪುದುಂ,

ಸಚಿವರಕುಲಕ್ಕನೀತಿಗ ।
ಳುಚಿತಮೆ ಕೇಳ್ ಕಾಮಪಾಲ ನಿನ್ನಿಂ ಬಂಧು ॥
ಪ್ರಚಯಂ ಕಿಡುವುದಱಿಂ ನಿ ।
ನ್ನ ಚಿತ್ತಮೆಸೆವತ್ತ ಪೋಪುದಿಲ್ಲಿಂದೀಗಳ್ ॥ ೩೫

ಎಂದವರೆನ್ನಂ ಪುಷ್ಪಪುರದಿಂ ಪೊಱಮಡಿಸೆ,

ಕುಲಮಂ ನೋಡದಪಾಯಮಂ ಬಿಡದು ನಿಂದಾಭೀತಿಯುಂ ಪೊರ್ದದು ।
ಜ್ಜ್ವಲಮಪ್ಪಾಪ್ತರ ವಾಕ್ಯಮಂ ಬಗೆಯದಾರೇನೆಂದೊಡಂ ಲಜ್ಜೆಯಿಂ ॥
ತಲೆಯುಂ ಬಾಗದು ದೇಶವಿಭ್ರಮಣದಿಂ ಬೆಂಡಾಗದೊಳ್ಪತ್ತು ಮೆ ।
ಯ್ವಲಮಂ ಪೀರ್ವುದು ಕಾಮಮೆಂದೊಡವನಿನ್ನೇವಣ್ಣಿಪಂ ಬಣ್ಣಿಪಂ॥ ೩೬

ಅಲ್ಲಿಂ ತಳರ್ದೊರ್ಬನೆ ಅವ।
ರೆಲ್ಲರನುೞಿದಧಿಕದುಃಖಮಂ ತಳೆದೊಲವಿಂ ॥
ಸಲ್ಲಲಿತಮೆನಿಪ ಕಾಶಿಗೆ ।
ಮೆಲ್ಲನೆ ಬಂದಿಲ್ಲಿ ಪೊಕ್ಕು ಚರಿಯಿಸುತಿರ್ದೆಂ ॥ ೩೭

ಗಾಡಿಯೊಳಂಗನಾತತಿಯುತಂ ತದಿಳೇಶ್ವರಪುತ್ರಿ ತದ್ವನ ।
ಕ್ರೀಡೆಗೆ ಕೂರ್ತು ಕಾಂತಿಮತಿ ಬಂದಿರಲಾಂ ಮಿಗೆ ಕಂಡು ಕಾಮನಿ ॥
ಚ್ಚಾಡುವ ಬಲ್ಸರಲ್ಗೆ ಗುಱಿಯಾಗಿಯನಂಗದವಾಗ್ನಿತಾಪದೊಳ್ ।
ಕೂಡಿದೆನಾಕೆಯುಂ ಮದನಚೇಷ್ಟೆಯೊಳೀಕ್ಷಿಸಲೆನ್ನ ವಕ್ತ್ರಮಂ ॥ ೩೮

ಅಂತವಳಂ ಕಂಡಾಂ ಕಾಮವಶಗತನಾಗಿ ಬೞಿಯಂ

ಬಂದಾನೊಂದುಮುಪಾಯದಿಂ ಯುವತಿಯಿರ್ದಂತಃಪುರಕ್ಕೆಯ್ದಿ ಸಾ ।
ನಂದಂ ತತ್ಸತಿಯೊಳ್ ಮನೋಜವಿವಿಧಕ್ರೀಡಾನುರಾಗಾಬ್ಧಿಯೊಳ್ ॥
ಸಂಧಿರ್ಪನ್ನೆಗಮಾಕೆಗೆನ್ನ ದೆಸೆಯಿಂ ಗರ್ಭಂ ನಿಲಲ್ ನಾಡೆ ಪೆಂ ।
ಪಿಂದಂ ನಿತ್ಯರಹಸ್ಯಸೌಖ್ಯದೊದವಂ ತಾಳ್ದಿರ್ದನಿರ್ಪನ್ನೆಗಂ ॥ ೩೯

ಮತ್ತೆ ಕೆಲವಾನುಂ ದಿವಸಕ್ಕೆ ಕಾಂತಿಮತಿಗೆ ಪೂರ್ಣಗರ್ಭವಾಗಿ ಕುಮಾರನಂ ಪಡೆದು

ಮಾತೃಪಿತೃಬಂಧುಗೋತ್ರಜ ।
ಭೀತಿಯೊಳಬ್ಜಾಕ್ಷಿ ಕಾಂತಿಮತಿ ಪೆತ್ತ ತನೂ ॥
ಜಾತನನಾಗಳೆ ಮೃತಸಂ ।
ಜಾತಂ ತಾನಾದನೆಂದು ಬಿಸುಡುವ ಬಗೆಯಿಂ ॥ ೪೦

ಒರ್ಬ ವೃದ್ಧೆಯ ಕೆಯ್ಯೊಳ್ ಕೂಸಂ ಕೊಟ್ಟಿದಂ ಶ್ಮಶಾನದೊಳ್ ಬಿಸುಟ್ಟು ಬಾಯೆಂದೊಡವಳಂತೆಗೆಯ್ವೆನೆಂದು ಕೊಂಡು ಪೋಗಿ ಬಿಸುಡೆ

ಸುರತರುವಿಂ ಪೊದೞ್ದ ತನಿವಣ್ಣುಡಿದುರ್ವಿಗೆ ಬಿದ್ದುದೋ ವಿಯ ।
ಚ್ಚರಿಯರ ವೇಣಿಯಿಂ ಜಗುೞ್ದ* ತೊಂಡಲ ದಂಡೆಯೊ ಭಾವಿಸಲ್ಕೆ ಭಾ ॥
ಸ್ಕರನ ಕರಾಬ್ಜದಿಂದಿಳಿಗೆ ಬಿದ್ದರುಣಾಬ್ಜವೊ ಪೇೞೆನಲ್ಕೆ ತ ।
ತ್ಪುರದೆಸೆವ ಶ್ಮಶಾನದೊಳದೇನೆಸೆದಿರ್ದನೊ ತತ್ಕುಮಾರಕಂ ॥ ೪೧

ಅಂತಿರ್ದ ಕುಮಾರಕನಂ ಬಿಸುಟ್ಟು ವೃದ್ಧೆಯೊರ್ಬಳ್ ರಾತ್ರಿಯೊಳ್ ಬರುತಿರ್ಪಾಗಳ್

ಪುರರಕ್ಷಕರೆಣ್ದೆಸೆಯೊಳ್ ।
ಪರಿಪರಿದಾರೈದು ಕಂಡರಂ ಬಹುವಿಧದಿಂ ॥
ಪರಿಭವಿಸುತಿರ್ಪ ಸಮಯದೊ ।
ಳರವರಿಸದೆ ಬರ್ಪ ವೃದ್ಧೆ ಸಿಲ್ಕಿದಳಾಗಳ್ ॥ ೪೨

ಅಂತವಳ್ ಸಿಲ್ಕಲವಳಂ ಬಹುಪ್ರಕಾರದಿಂದಂ ದಂಡಿಸಿ ಈರಾತ್ರಿಯೊಳ್ಲ್ಲಿಗೆ ಪೋದೆಯೆಂದು ಕೇಳ್ವೊಡವಳನೇಕವಿಧದಿಂ ವಂಚಿಸಿ ದಂಡನೆಗಾಱದೆ ಬಱಿಕಿಂತೆಂದಳ್:—

ನೃಪನಂದನೆ ತನಗುಪಯಿಸಿ |
ದ ಪುತ್ರನಂ ರುದ್ರಭೂಮಿಯೊಳ್ ಬಿಸುಟು ಬರಲ್ ||
ಕೃಪೆಯಿಲ್ಲದೆನ್ನನಟ್ಟಿದ |
ಳಪರಾಧಂ ಬಂದುದೆನಗೆ ವಿಧಿವಶದಿಂದಂ || ೪೩

ಎಂದೊಡೆ ರಾಜಕನ್ಯೆಯಾವನಿಂದಂತರ್ವತ್ನಿಯಾದಳೆಂದವರ್ ಬೆಸಗೊಳೆ

ಎನ್ನೊಡನೆ ಬಂದೊಡಿಂಗಳ್ |
ಕನ್ನೆಗೆ ಪುರುಷನನೊಲ್ದು ತೋಱಿಪೆಂ ನೀ ||
ವೆನ್ನಂ ಬಿಡಿ ಪರಸೇವೆಯೊ |
ಳನ್ನರುಮೇನಾಗರೆನ್ನ ಬಡಿವರುಮೇನೋ || ೪೪

ಎಂದವರನೊಡಗೊಂಡು ಬಂದು

ನವರತ್ನಖಚಿತಕೃತಕಾ |
ದ್ರಿವಿಳಾಸಗೃಹಾಂತದಲ್ಲಿ ಪಟ್ಟಿರ್ದೆನ್ನಂ ||
ತವಕದೊಳಾವೃದ್ಧಾಂಗನೆ |
ಯವಿನೀತರೆನಿಪ್ಪವರ್ಗೆ ತೋಱಿದಳಾಗಳ್ || ೪೫

ಅಂತು ತೋಱಲೊಡಂ

ಉಪವನದ ಲತೆಗಳಂ ಪಱಿ |
ದು ಪವಡಿಸಿರ್ದೆನ್ನನೀಱ್ದು ಕಟ್ಟಿ ಬಱಿಕ್ಕೆ ||
ಯುದ್ಧಪರೋಧಿಸಿ ಕನ್ಯಾಚಾ |
ರ್ಯಪಾತಕಂ ದಂಡ್ಯನೆಂದವರ್ ಕಡುಮುಳಿಸಿಂ || ೪೬

ಊರಿಂ ಪೊಱಗುಯ್ದಾಗಳ್ |
ಕೂರಸಿಯಿಂದಿವನ ತಲೆಯನರಿಯೆಂದೊರ್ಬಂ ||
ಕ್ರೂರಾತ್ಮನ ಕಯ್ಗೆನ್ನಂ |
ಬೇರದೊಳತ್ತವರ್ಗಳತ್ತ ಪೋದರ್ ಬಱಿಯಂ || ೪೭

ಅಂತವರತ್ತ ಪೋದರ್. ಇತ್ತಲಾವಮಾದಿಗನೆನ್ನಂ ಚೌವಟಕ್ಕೆ ತಂದು
ಪರಸು ಪರಸೆಲವೊ ಕಾಶೀ ।
ಪುರೇಶನಂ ನೀಡು ಗೋಣನೆಂಬಾಗಳ್ ನಿ ॥
ರ್ಭರಸತ್ವದಿನಾನುರ್ಬಿರಲ್ ।
ಭರದಿಂ ಕಟ್ಟಿರ್ದ ಬಳ್ಳಿ ಪಱಿದುದು ಬೇಗಂ ॥ ೪೮
ಅಂತು ಪಱಿಯುಲೊಡಂ
ಆವಮಾದಿಗನನಿಸಿಯುಂ ಕೊಂ ।
ಡೇವಮಾತವನಂ ಪುರಾತ್ಮನಂ ಪೊಡೆದು ವನಂ ॥
ಪ್ರೇಮದಿನಲ್ಲಿಂ ತಳರ್ದನಟ ।
ವೀಮಧ್ಯಮನೆಯ್ದಿದೆಂ ಪಥಭ್ರಮೆಯಿಂದಂ ॥ ೪೯
ಇನಶಶಿರಶ್ಮಿಸಂತತಿಗಗೋಚರಮಪ್ಪ ಮಹಾಂಧಕಾರಸಂ ।
ಜನಿತಲತಾಳಿಗುಲ್ಮತರುಸಂಕುಳದಿಂದೆ ಶರಾರುಘೋರಕಾ ॥
ನನಮೃಗರಾಜಿಯಿಂದತಿಭಯಂಕರಮಪ್ಪಟವೀನಿವಾಸಮಂ ।
ಮನಮೊಸೆದೆಯ್ದಿದೆಂ ಪಥಪರಿಭ್ರಮೆಯಿಂ ಪಡೆದೊರ್ಬನಾಕ್ಷಣಂ ॥ ೫೦
ಅಂತೆಯ್ದಿವಪರ್ಗಗಳಲ್ಲಿ
ದಿವ್ಯವಧುವೊರ್ವಳೊಲ್ದು ಲ ।
ಸದ್ವ್ಯೋಮದಿನವನಿಗೆಯ್ದಿಯುಂಜಲಿಕರದಿಂ ॥
ಶ್ರವ್ಯವಚನಂಗಳಿಂದತಿ ।
ನವ್ಯಾಕೃತಿಯೆನ್ನ ಸಮ್ಮುಖಕ್ಕೊಪ್ಪಿದಳ್ ॥ ೫೧
ವಿಳಸನ್ಮುಕ್ತಾಗ್ರಹಾರಂ ಸುಲಲಿತನವಮಂದಾರಪುಷ್ಪಾವತಂಸಂ ।
ದಳಿತಶ್ವೇತಾಬ್ಜನೇತ್ರಂ ಘಟಕುಚಯುಗಳಂ ಚಿತ್ರಕಾಂಚೀನಿತಂಬ ॥
ಸ್ಥಳಮುದ್ಯದ್ವಲ್ಲಕೀರಂಜಿತಕರಮೆನಸುಂ ತನ್ನೊಳೊಪ್ಪಲ್ಕೆ ಹಸ್ತಂ ।
ಜಳಿಯಿಂ ಬಂದೊರ್ಬ ದಿವ್ಯಾಂಗನೆ ಭರವಸದಿಂದೆನ್ನಿದಿರ್ಗಾಗಿ ನಿಂದಳ್ ॥
ಅವತಂಸೀಕೃತಪಾರಿಜಾತಸುಮನಸ್ಸೌರಭ್ಯಮಾಶಾಸಿಕಾ ।
ಯುವನೆಯ್ದಲ್ ಪರಿವಾದಿನೀಮೃದುರವಂ ಮಾಧುರ್ಯಮಂ ಸಾಲಿಡಲ್ ॥
ಧವಳಾಪಾಂಗಮರೀಚಿ ಸಂತತಸುಧಾಸಂವೃಷ್ಟಿಯುಂ ಬೀಱಲೊ ।
ಪ್ಪುವ ದಿವ್ಯಾಂಗನೆ ಭೋಂಕೆನಲ್ ವನದೊಳಂದೆಯ್ತಂದಳಾನಂದದಿಂ ॥

ಅಂತೆನ್ನ ಸಂಮುಖಕ್ಕೆ ಬಂದವಳಂ ನೀನಾರ್ಗೆಯೆಂದು ಕೇಳಲೊಡಂ

ತಿಳಿ ಮಾಣಿಭದ್ರನಾತ್ಮಜೆ ।
ವಿಳಸಿತಗಂಧರ್ವಕುಲಸಮುದ್ಭವೆ ತಾರಾ ॥
ವಳಿಯೆಂಬಳಗಸ್ತ್ಯಾಶ್ರಮ ।
ದೊಳಗಿಂ ಪೊಱಮಟ್ಟು ಬರುತುಮಿರ್ಪವಸರದೊಳ್ ॥ ೫೪

ಈವಾರಣಸಿಯ ಪಿತೃವನ ।
ದೋವರಿಯೊಳ್ ಶಿಶುವದೊಂದಳುತ್ತಿರೆ ಕಂಡಾ ॥
ನೋವಿ ಪದೆದೆತ್ತಿ ಕೊಂಡು ಮ ।
ಹಾವಿಭವದಿನೆಯ್ದಿದೆಂ ಕುಬೇರನ ಸಭೆಯಂ ॥ ೫೫

ಕನಕದ ಭಿತ್ತಿ ಪೊನ್ನ ಪೊಸಕಂಭಮುದಂಚಿತಹೇಮಭೂಮಿ ಕಾಂ ।
ಚನಮಯಗೋಪುರಂ ನವಸುವರ್ಣದ ವೇದಿಕೆ ಶಾತಕುಂಭಸಂ ॥
ಜನಿತಸಮುಲ್ಲಸತ್ಕಳಶವೊಪ್ಪುವ ಓಲಗಸಾಲೆಯೊಳ್ ಕರಂ ।
ಧನಪತಿ ರಂಜಿಸಿರ್ಪನಮರೀಚಯಮಿಕ್ಕುವ ಚಾಮರಂಗಳಂ ॥ ೫೬

ಕಿನ್ನರಸಂಕುಳಂ ಜಯಜಯಧ್ವನಿಯಿಂ ಪರಿವೇಷ್ಟಿಸಿರ್ಪನಂ ।
ರನ್ನದ ಪಚ್ಚಮಚ್ಚರಿಯೆನಲ್ ಮಿಗೆ ದೇಹದೊಳೊಪ್ಪುತಿರ್ಪನಂ ॥
ಸೋನ್ನತಹೇಮವಿಷ್ಟರದೊಳಿರ್ದನಶೇಷದಿಶಾಧಿಪೋತ್ತಮಂ ।
ಪನ್ನಗಭೂಷಣಪ್ರಿಯಸಖಂ ಮನವೊಲ್ದಳಕಾಪುರೀಶ್ವರಂ ॥ ೫೭

ಅಂತೆಸೆವ ಕುಬೇರನೋಲಗಕ್ಕಾಶಿಶುಸಹಿತಂ ಪೋಗಲಾತನೆನ್ನಂ ಕಂಡು

ಈಹಸುಳೆಯಲ್ಲಿ ನಿನ್ನಯ ।
ಮೋಹಂ ಬಗೆಗೆಂತು ತೋರ್ಪುದೆಂದೊಲವಿಂ ನರ ॥
ವಾಹನನೆನ್ನಂ ಕೇಳಲ್ ।
ದೇಹಜನೆಂಬಂತೆ ತೋರ್ಪುದೆಂದೆನಲಂಪಿಂ ॥ ೫೮

ಎಂದೊಡುಳ್ಳುದಂ ಪೇೞ್ದೆಯೆಂದಾತನಾಶಿಶುವಿನ ವೃತ್ತಾಂತಮಂ ಪೇೞಲ್ ತಗುಳ್ದನದೆಂತೆನೆ:—

ವಿನಯವಿಳಾಸಿ ಕೇಳೆನಗೆ ಶೌನಕಶೂದ್ರಕಕಾಮಪಾಲನೆಂ ।
ಬನುಪಮನಾಮಮಂ ತಳೆದ ಮೂಱು ಭವಂ ನಿನಗೊಪ್ಪಲೈವರಂ ॥

ಗನೆಯುರವರ್ಗೆ ನಿನ್ನೊಡನೆ ಮೂಱು ಭವಂಗಳೊಡರ್ಚೆ ಮೂಱು ಮೂ ॥
ಱನುನಯುನಪ್ಪ ನಾಮಮವಗಾ*ದಪ್ರದೆಂದುಸಿರ್ದ*ಂ ಧನೇಶ್ವರಂ ॥ ೫೯

ಅದೆಂತೆನೆ.—

ಕ್ರಮದಿಂದೆ ಬಂಧುಮತಿ ವೇ ।
ದಿಮತಿ ಕರಂ ಚೆಲ್ವನಪ್ಪ ಹಂಸಾವಳಿಯು ॥
ತ್ತಮನಂದಿನಿ ಗೋಪಕುಮಾ ।
ರಿ ಮುಖ್ಯಮಾದಪ್ಪುರುಂ ಭವದ್ವಧುವಾದರ್ ॥ ೬೦

ಅಂತವರ್ಗೆ ನಿನ್ನ ಮೊದಲ ಜನ್ಮದ ಶೌನಕಾವಸ್ಥೆಯಲ್ಲಿ ಬಂಧುಮತಿ, ಎರಡನೆಯ ಶೂದ್ರಕಾವಸ್ಥೆಯಲ್ಲಿ ವಿನಯಮತಿ, ಮೂಱನೆಯ ಕಾಮಪಾಲಾವಸ್ಥೆಯಲ್ಲಿ ಕಾಂತಿಮತಿಯೆಂಬ ಮೂಱು ಜನ್ಮಂ ಬಂಧುಮತಿಯೊರ್ಬಳಾಗಿದುವು. ಆಕ್ರಮದಿಂ ಮಿಕ್ಕ ನಾಲ್ವರುಂ ವೇದಿಮತಿ ಯಜ್ಞದಾಸಿ ಕಾಮದೇವಿ, ಹಂಸಾವಳಿ ಶೂರಸೇನಿ ಸುಲೋಚನೆ, ನಂದಿನಿ ರಂಗಪತಾಕೆ ಇಂದ್ರಸೇನೆ, ಗೋಪಕುಮಾರಿ ಆರ್ಯದಾಸಿ ತಾರಾವಳಿ, ಎಂದೀ ಕ್ರಮದಿಂ ಸ್ತ್ರೀಯರಾದರಪ್ಪುದಱಿಂ

ನೀಂ ಶೂದ್ರಕನಾಗಿರ್ದಂ ।
ದಾಶಿಶುವಂ ವಿನಯಮತಿ ಕರಂ ಪೊರೆದುದಱಿಂ ॥
ದೀಶಿಶುಜನ್ಮದೊಳತಿವೊ ।
ಹಾಶೆಯೊಳಾಕಾಂತಿಮತಿಗೆ ಜನಿಸಿತ್ತೊಲವಿಂ ॥ ೬೧

ಅದುಕಾರಣದಿಂ ನಿನಗೆ ಪುತ್ರನ ಪುತ್ರನಪ್ಪುದಱಿಂ ನಿನ್ನ ಕಣ್ಗೊಲದೊಳಿರ್ದದೆಂದು ಕುಬೇರಂ ಪೇೞ್ದು ಮತ್ತಮಿಂತೆಂದಂ:—

ಇವನಂ ಕೊಂಡುಯ್ದಂಭೋ ।
ದ್ಭವಲೋಚನೆಯಪ್ಪ ವಸುಮತೀದೇವಿಗೆ ಕೊ ॥
ಟ್ಟು ವಿಳಾಸಿನಿ ನೀಂ ಪೋಗು ।
ತ್ಸವದಿಂದಂ ಕಾಮಪಾಲಸಿರ್ದೆಡೆಗೀಗಳ್ ॥ ೬೨

ಎಂದು ಕುಬೇರಂ ಪೇೞ್ದೊಡಾಕುಮಾರನಂ ವಸುಮತೀದೇವಿಗೆ ಕೊಟ್ಟು ನಿನ್ನ ಪದಪರಿಚರ್ಯಾರ್ಥಮನುಱಿಸುತ್ತುಂ ಬಂದೀಗಳ್ ಕಂಡೆನೆಂದು ತಾರಾವಳಿ ಪೇೞ್ದನಂತರಂ,

ವನಜದಳಾಕ್ಷಿ ತತ್ತರುಣಿ ಕಣ್ಮುಗಿದೊಯ್ಯನೆ ತನ್ನ ವಿದ್ಯೆಯಂ ।
ನೆನೆಯಲೊಡಂ ವಿಚಿತ್ರಮೆನಿಸಿರ್ದ ಮನೋಹರಚಿತ್ರಶಾಲೆ ಭೋಂ ॥
ಕನೆ ನೆಲಸಿತ್ತನೇಕಮಣಿರಂಜಿತಗೋಪ್ರರವೇದಿ ಮಾರುತಾ ।
ಯನಕಮನೀಯಹೇಮಕಲಶಂಗಳನಾವಿಪಿನಪ್ರದೇಶದೊಳ್ ॥ ೬೨

ಮೃದುತಲ್ಪಂ ಮಂಚಂ ಕಂ ।
ಪೊದವಿದ ಪುಷ್ಪಾನುಲೇಪನಂ ತಾಂಬೂಲಂ ॥
ತ್ರಿದಶಾಶನಸಮಭಕ್ಷ್ಯಂ।
ಸುದತಿಯ ವಿದ್ಯೆಗಳನಾಗಳೊಪ್ಪಿದುವೆನಸುಂ ॥ ೬೪

ಅಂತೊಪ್ಪಿದರ್ ಗಂಧರ್ವಗೃಹದಲ್ಲಿ

ತವಕದಿನಪ್ಪಿ ತಲ್ಲಣದೆ ಚುಂಬಿಸಿ ನಿಲ್ಲದೆ ನಾಣ್ಗೆ ಮಾಯ್ದು ಕೂ ।
ಡುವ ಬಗೆಯಿಂತುಟೆಂದುಸಿರ್ವ ಬಲ್ಮೆಯನಾನಱಿಯೆಂ ನಿರಂತರಂ ॥
ಸಮಸುಖಮಾಗಲೆನ್ನೊಳೊಡಗೂಡಿರೆ ಚಿತ್ರದ ಕಲ್ಲ ಲೆಪ್ಪದಂ ।
ಗವಸೆದೆಗೊಂಡುದೆನ್ನ ತನುವೇಪ್ಗೆಗೆಟ್ಟೆಂ ಖಚರೀವಿನೋದಮಂ ॥ ೬೪

ಅಂತವಳ್ ಬಹುವಿಧವಿನೋದದಿಂದೆನ್ನೊಳ್ ಸಂಭೋಗಮನೊಡರ್ಚು ತುಂ ಕೆಲವು ದಿನಮಂ ಕಳೆಯುತ್ತಿರಲೊಂದು ಸಮಯದೊಳಾನವಳೊಳಿಂತೆಂದೆಂ:—

ಕ್ಷಿತಿಪತಿ ಚಂಡಸಿಂಹನೃಪನೆನ್ನನಕಾಗಣದಿಂ ಕೊಲಲ್ಕೆ ದು ।
ರ್ಮತಿ ಬಗೆದಂ ಮಗುಳ್ದವನೊಳಾಂ ಮಿಗೆ ದುರ್ಘಟಮಪ್ಪ ಶಾಸ್ತಿಯಂ ॥
ಗತಿಗಿಡೆ ಮಾಡುವಿಚ್ಛೆಯೆನಗಾವಪ್ರದಂಗನೆ ಪೇೞಿದರ್ಕೆ ಪ ।
ದ್ಧತಿಯನೆನಲ್ಕವಳ್ ಕವನಕೀರ್ತಿಯ ಬೆಳ್ಪನೆ ನಕ್ಕಳಾಕ್ಷಣಂ ॥ ೬೫

ಅಂತು ನಕ್ಕು

ವನಜಮುಖಿ ಕಾಂತಿಮತಿಯಂ ।
ನೆನೆದಪೆಯಕ್ಕೆಂದು ನಕ್ಕು ತಾರಾವಳಿ ಭೋಂ ॥
ಕನೆ ತನ್ನ ವಿದ್ಯೆಯಿಂದಂ ।
ನೆನೆದಳ್ ಸಲೆ ಚಂಡಸಿಂಹನಿರ್ದಾಲಯಮಂ ॥ ೬೬

ಅಂತು ಕಾಶೀಪತಿಯಪ್ಪ ಚಂಡಸಿಂಹನರಮನೆಯಂ ನೆನೆದು

ತಾರಾವಳಿ ನಿಮಿಷಕೆ ಕಾಂ ।
ತಾರದಿನಳವಟ್ಟು ತನ್ನ ವಿದ್ಯಾಬಲದಿಂ ॥
ವಾರಾಣಸಿಪುರದಧಿಪನ ।
ಗಾರಕ್ಕಾಂ ಸಹಿತಮಿರುಳವಳ್ ನಸೆತಂದಳ್ ॥ ೬೭

ಅಂತವಳರ್ಧರಾತ್ರಿಯೊಳ್ ಬಂದಾರುಮಱಿಯದಂತೆ ಚಂಡಸಿಂಹನಿರ್ದ ಸಜ್ಜೆವನೆಯೊಳೆನ್ನಂ ಪುಗಿಸಿ ತಾಂ ಪೊಱಗಿರ್ಪುದುಂ

ತಲೆದೆಸೆಯೊಳಿರ್ದಡಾಯ್ದಮ ।
ನೊಲವಿಂದಾನುರ್ಚಿ ನಿದ್ರೆಯಿಂ ತನ್ನೃಪನಂ ।
ತಿಳಿಪಲತಿಭೀತಿಯಿಂದಂ ।
ತಳವೆಳಗಾಗುತ್ತುಮೆೞ್ದು ಕುಳ್ಳಿರ್ದಾಗಳ್ ॥ ೬೮

ಅಂತು ಚಂಡಸಿಂಹನೆೞ್ದು ಕುಳ್ಳಿರಲೊಡಂ

ಸೆಳೆದಿರ್ದಸಿಸಹಿತಂ ಕೆ ।
ಯ್ಗಳನೆರಡಂ ಮುಗಿದು ಕಾಂತಿಮತಿಯಧಿಪಂ ನಿ ॥
ನ್ನಳಿಯಂ ಯಕ್ಷಿಣಿ ತಾರಾ ।
ವಳಿಯೊಡನಾಂ ಬಂದೆನರ್ಧರಾತ್ರಿಯೊಳೀಗಳ್ ॥ ೬೯

ಎಂಬುದುಂ ನೃಪಂ ವಿಸ್ಮಯಸ್ವಾಂತನಾಗಿಂತೆಂದಂ:—

ಎನ್ನರ್ಥಂ ಪ್ರಾಣಮೆನ್ನಾಳ್ವವನಿಯುಮನಿತುಮಂ ಕೊಟ್ಟು ಮತ್ಪುತ್ರಿಯುಂ ಕೊ । ಟ್ಟೆನ್ನಾಣ್ಮಾತೇಕೆ ಪೇೞೆಂದೆನಗೆ ಮಱುದಿನಂ ತತ್ತನೂಜಾತೆಯುಂ ಕೊ ॥ ಟ್ಟೆನ್ನಂ ತಾರಾವಳಿಯಾ ಭೀತಿಯೊಳಧಿಕತರಸ್ನೇಹದಿಂ ಕೂಡಿಕೊಂಡಿ । ರ್ದನ್ನೋಡಕ್ಕೇಂ ಜನ್ಮಸ್ಥಿತಿಗತಿಯಿದು ಕೇಳ್ ಪ್ರೀತಿಯಿಂ ಪೂರ್ಣಭದ್ರಾ ॥ ೭೦

ಎಂದು ಕಾಮಪಾಲಂ ತನ್ನ ವೃತ್ತಾಂತಮನೆನ್ನೊಳ್ ಪೇೞ್ದನೆಂದು ಪೂರ್ಣಭದ್ರಂ ಸುಜ್ಞನೆ ಸುಯ್ಯಲ್ಕೆ ಸುಯ್ದುದರ್ಕೆ ಕಾರಣಮೇನೆಂದು ನಾಂ ಕೇಳಲಾತಂ ಮಗುೞ್ದಿಂತೆಂದಂ:—

ಭಾವಿಪೊಡೆ ಕಾಮಪಾಲನ ।
ಮಾನಂ ಗುಣಿ ಚಂಡಸಿಂಹನಱಿಯಲೊಡಂ ಸ ॥

ದ್ಭಾವದಿನಾತನ ಸುತನಖಿ ।
ಳಾವನಿಗರಸಾಗಿ ನಿಂದಪಂ ಕೆಲವು ದಿನಂ ॥ ೭೧

ಅಂತು ಚಂಡಸಿಂಹಂ ಕಾಲನಿಲಯಮನೆಯ್ದಲಾತನ ಪಿರಿಯ ಮಗನಪ್ಪ ಚಂಡಘೋಷಂ ಪಟ್ಟಮಂ ತಳೆದು

ಕತಿಪಯದಿನಕ್ಕೆ ತದ್ಭೂ ।
ಪತಿ ರಾಜ್ಯಶ್ರೀಯ ಸೌಖ್ಯಮನಿತಿಲ್ಲದೆ ಕೇಳ್ ॥
ಗತಜೀವಿತನಾದಂ ಸು ।
ಸ್ಥಿತಿಯುಂ ದುಸ್ಸ್ಥಿತಿಯುಮನೆಣಿಸಲಱಿವವರೊಳರೇ ॥ ೭೨

ಅಂತು ಚಂಡಘೋಷನುಮಱಿಯಲೊಡಂ,

ಅವನಿಂ ಕಿಱಿಯಂಗೆ ಮನೋ ।
ಭವಮೂರ್ತಿಗೆ ಸಿಂಹಘೋಷನೆಂಬ ಕುಮಾರಂ ॥
ಗೆ ವಿಲಾಸದಿಂದೆ ತತ್ಪ ।
ಟ್ಟವನಿತ್ತಂ ಕಾಮಪಾಲನತ್ಯುತ್ಸವದಿಂ ॥ ೭೩

ಅಂತಾಕಾಮಪಾಲಂ ಸಿಂಹಘೋಷನೆಂಬ ಕುಮಾರಂಗೆ ಪಟ್ಟಮಂ ಕಟ್ಟಿಲೊಡಮಂ ಕೆಲವು ದಿನಕ್ಕೆ ಯೌವನಮತ್ತನಾಗಿ ಧೂರ್ತವರ್ಗಮಂ ಕೂಡಿಕೊಂಡು ಪೇೞ್ದ ಕೊಂಡೆಯುಮಂ ಕೇಳಲ್ ಮನಂದರಲ್ ಪಿರಿಯರ್ ಪೊದಿರ್ ಯಿಂತೆಂದರ್:—

ಸಾಹಸವಂತನಿಂದ್ರಿಯರತಂ ಬಹುಮೂರ್ಖನತೀವಕಾಮುಕಂ ।
ಬಾಹುಪರಾಕ್ರಮಂ ಕುಟಿಲದೈವಪರಂ ಧನಧಾನ್ಯಯುಕ್ತನು ॥
ಗ್ರಾಹವಧೀರನಾದಧಿಕಮಂತ್ರಿಯನೇತೆಱದಿಂದೆ ದುಷ್ಟಕಾ ।
ಳಾಹಿಯ ಗೋಣನೊತ್ತಿ ಮುಱಿವಂತವನಂ ಮುಱಿದಿಕ್ಕುಗುರ್ವಿಪರ್ ॥

ತನ್ನಂ ಲೆಕ್ಕಿಸದವನಂ ।
ತನ್ನ ಸಮಶ್ರೀಯನುಳ್ಳನಂ ಸಾಹಸಿಯುಂ ॥
ತನ್ನಿಂದಧಿಕನನಾರ್ಪಿಂ ।
ಮುನ್ನಿಱಿವುದು ಧೂರ್ತಸಚಿವನಂ ಭೂಪಾಲರ್ ॥ ೭೪

ಎಂದು ಲೋಕನೀತಿಯುಂ ಪೇೞ್ವಂತೆ ಕಾಮಪಾಲಂಗಂ ಸಿಂಹಘೋಷಂಗಂ ವಿರೋಧಮಂ ಬಳೆಯಿಸಲೆಂದು

ನಿಮ್ಮಯ ತಂದೆಯುಂ ನಡುವಿರುಳ್ ಕೊಲಲೆಂದಸಿಯುಮಿರ್ಕೆ ಸಜ್ಜೆಯುಂ ।
ಕೆಮ್ಮನೆ ಪೊಕ್ಕನೊರ್ಬ ಖಚರೀಸಹಿತಂ ಸಲೆ ಕಾಮಪಾಲನಂ ॥
ದೊಮ್ಮೆ ವಧೂಟಿ ಕಾಂತಿಮತಿಯುಂ ನೃಪನಿತ್ತು ಬರ್ದುಂಕೆ ಮತ್ತೆ ಕೊಂ ।
ದಂ ಮನದಚ್ಚಿಱಿಂ ನೃಪತಿಯುಂ ಕುಟಿಲಂ ಮಿಗೆ ದುಷ್ಟಚೇಷ್ಟೆಯಿಂ ॥ ೨೬

ಅದಲ್ಲದೆಯುಂ ನಿಮ್ಮಗ್ರಜನಪ್ಪ ಚಂಡಘೋಷನಂ ಕಪಟದಿಂ ತೀರ್ಚಿದ ನೆಂದು ಪಲಬರ್ ಕೊಂಡೆಯಮಂ ಪೇೞಲಾಕುಮಾರನಿಂತೆಂದಂ:—

ಏಗೆಯ್ವೆಂ ಬಲ್ವಗೆಯುಂ ।
ನೀಗಲ್ಬಾರದು ಸಮರ್ಥೆ ತಾರಾವಳಿಯೆಂ ॥
ಬಾಗಣಿಕೆಯ ಭಯದಿಂದಂ ।
ಮೂಗರ್ ಮಿಗೆ ಕಂಡ ಕನಸಿನಂತಾಯ್ತೀಗಳ್ ॥ ೨೭

ಎಂದು ತಾರಾವಳಿಯ ಭೀತಿಯಿಂ ಕಾಮ ಪಾಲಂಗೆ ಪೊಲ್ಲಮಸಗಲಱಿ ಯದಿರ್ಪುದುಮೊಂದುದಿನಂ ಕಾಂತಿಮತಿ ಸಿಂಹಘೋಷನ ಕಾಂತೆಯಪ್ಪ ಲ ಕ್ಷಣೆಯ ಸಮೀಪಕ್ಕೆ ಪೋಗಲಾಲಕ್ಷಣೆ ಕಾಂತಿಮತಿಯ ಮುಖಮಂ ನೋಡಿ,

ಏನೆಲೆಗೆ ಕಾಂತಿಮತಿ ನಿ ।
ನ್ನಾನನಕಮಳಂ ಮುಸುಳ್ದುದೇಕಾರಣಮೆಂ ॥
ದಾನರಪನರಸಿ ಬೆಸಗೊಳ ।
ಲಾನಮ್ರಶಿರಸ್ಕೆ ಕಾಂತಿಮತಿಯಿಂತೆಂದಳ್ ॥ ೨೮

ನಿನಗೇನಂ ವಂಚಿಸೆಂ ಲಕ್ಷಣೆ ಪಡೆದು ಮದೀಯಪ್ರಿಯಂ ಕಾಮಪಾಲಂ ಮನೆಯೊಳ್ ಕುಳ್ಳಿರ್ದು ತಾರಾವಳಿಯನೊಸೆದು ಮಸ್ನೇಹದಿಂದಿತ್ತು ಬಾ ಕಾ ॥ ಮಿನಿಯೆಂದುತ್ಸಾಹದಿಂದಂ ಮಱೆದು ಕರೆಯೆ ತತ್ಕಾಂತೆ ಮಾತ್ಸರ್ಯ ದಿಂ ಭೋಂ । ಕೆನೆ ಪೋದಳ್ ತದ್ವಧೂಚಿಂತೆಯೊಳಳವಱಿಯುತ್ತಿರ್ದಪಂ ಮಂತ್ರಿಮುಖ್ಯಂ ॥ ೨೯

ಆದುಕಾರಣಮಾತನ ದುಗುಡಮೆ ಎನ್ನ ದುಗುಡಮಾಗಿರ್ದಪೆನೆಂದು ಪೇ ೞಲೊಡಂ

ಈಸುದ್ದಿಯನಾಲಕ್ಷಣೆ ।
ದೇಶಾಧಿಪಸಿಂಹಘೋಷನೊಳ್ ಪೇೞಲೊಡಂ ॥

ಕ್ಲೇಶಂ ಪೋಯ್ತೆಂದು ಧರಾ ।
ಧೀಶಂ ತನ್ನಾಪ್ತವರ್ಗಮಂ ಕರೆಯಿಸಿದಂ॥ ೮೦

ಅಂತು ಧೂರ್ತವರ್ಗಮಂ ಕರೆಯಿಸಿಯೋಲಗಂಗೊಟ್ಟಿರ್ದು

ಎನಸುಂ ತಾರಾವಳೀಕಾಂತೆಯ ವಿರಹದೊಳಂಗಂ ಬೆಳ್ತುರ್ಷ್ಣದಿಂ
ದಾ । ನನಬಿಂಬಂ ಬಾಡಿ ಚಿತ್ತವ್ಯಥೆ ಪಸರಿಸಿ ಚಿಂತಾಗ್ನಿ ಕೈಕೊಂಡು ಪು
ಷ್ಪಾ ॥ ಸ್ತ್ರನ ಬಾಣಂ ಮೆಯ್ಗಳೊಳ್ ಕೀಲಿಸಿದವೊಲಧಿಕೋನ್ಮಾದದಿಂ
ಕಾಮಪಾಲಂ । ಮನದೊಳ್ ಪುಂಗೆಟ್ಟು ಮತ್ತಂ ಧೃತಿಗಿಡದಿರವಂ ಕಂ
ಡನಾಸಿಂಹಘೋಷಂ ॥ ೮೧

ಅಂತು ಕಂಡು

ನೆರೆದಿರ್ದೋಲಗದೊಳ್ ಕೂ ।
ರ್ತರನೀಕ್ಷಿಸಿ ಸಂಜ್ಞೆಮಾಡಿ ರಾಜಕುಮಾರಂ ॥
ಭರದಿಂದೆ ಕಾಮಪಾಲನ ।
ನರವರಿಸದೆ ಪಿಡಿದು ಕಟ್ಟಿಸಿದನಾಕ್ಷಣದೊಳ್ ॥ ೮೨

ಅಂತು ಕಟ್ಟಿಸಿ ಮಿಥ್ಯಾದೋಷಂಗಳನುಗ್ಗಡಿಸಿಯನಂತರಂ

ಸಾಹಸವಿದನಂ ಸ್ವಾಮಿ ।
ದ್ರೋಹನನತ್ಯಧಮನಂ ನೃಪಾಲನ ಕನ್ಯಾ ॥
ಮೋಹಿ ಮನುಷ್ಯದ್ವಿಷಿಗಳಂ ।
ಲೋಹದ ಮೊನೆಯಿಂದೆ ಕಳೆಯಿಮೆಂದವನೀಶಂ ॥ ೮೩

ಅಂತು ಭೂಮಿಪಾಲಂ ಗ್ರಾಮಪಾಲರ ಕೆಯ್ಯೊಳ್ ಕಾಮಪಾಲನಂ ಕು
ಡಲವರ್ ಚಾವಟಕ್ಕೆ ಕೊಂಡು ಪೋಗಿ ಕುಳ್ಳಿರಿಸುವುದನಾಂ ಕಂಡು,

ದೊರೆವೆತ್ತಿನ್ನಾಪ್ತಮಿತ್ರಂಗಿಸಿತಳವಡಲುದ್ವೇಗಮಾಪತ್ಸಮೂಹಂ ।
ಬರೆ ಕಂಡಾಂ ಪ್ರಾಣದಿಂ ಜೀವಿಸುವುದುಚಿತಮಲ್ತೆಂದು ಮದ್ದೇಹಮಂ
ಗೋ ॥ ೞ್ಕುಱಿಗೊಂಡಾಸೀಗಳಟ್ಟಾಡುವ ಪೊಸವಗೆಯಿಂ ರಜ್ಜುವಂ ಮಾ
ಟ್ಪನೆಂದ । ಚ್ಚರಿಯಾಗಲ್ ಪೂರ್ಣಭದ್ರಂ ನಯನಜಲದೊಳಟ್ಟಾಡುತುಂ
ಪೇಳ್ದನೆನ್ನೊಳ್ ॥ ೮೪

ಅಂತು ಪೂರ್ಣಭದ್ರಂ ಪೇಳ್ದ ವೃತ್ತಾಂತಮಂ ಕೇಳ್ದಾನಿಂತೆಂದೆಂ:—

ತಾರಾವಳಿ ಸಲೆ ವಸುಮತಿ |
ನಾರಿಗೆ ಕೊಂಡುಯ್ದು ಕೊಟ್ಟಳೆಂಬ ಮಗಂ ವಿ ||
ಸ್ತಾರವೆನೆ ಕಾಂತಿಮತಿಯು ಕು |
ಮಾರಕನಾಂ ನಿನ್ನ ದುಃಖಮಂ ಬಿಡು ಬೇಗಂ || ೮೫

ಎಂಬುಗುಮಮಾತಂ ಕಣ್ಬನಿಯಂ ಬಿಟ್ಟೆನ್ನಾಸ್ಯಕಮಳಮಂ ನೋಡಿ ಬಳಿಕಂ ಬಿಗಿಯುಪ್ಪಿ ನಿತಾಂತಸುಖಾಂಬುಧಿಯೊಳ್ ಮುಳುಂಗಿ ದುಃಖವಾರ್ಧಿಯನುಳಿದು

ಕಾಂತಿಮತಿಗಾದ ಪುಣ್ಯಮ |
ನೆಂತೆಂತೆನಲೇಕೆ ಕಾಮಪಾಲನ ಕಣ್ಗಳ್ ||
ಮುಂತಿದಿರ್ದಡಮಿಲ್ಲದೊಡಮ |
ನಂತಸುಖಂ ಪುತ್ರನಾದಪಂ ತನಗೀಗಳ್ || ೮೬

ಎಂದು ಪೂರ್ಣಭದ್ರಂ ಸಂತಸದಂತಮನೆಯ್ದಲ್ ಮತ್ತಮಿಂತೆಂದಂ:—

ನೆರವಿಯನೆಲ್ಲಮಂ ಭರದೊಳೊರ್ವನೆ ಮತ್ತರಖಡ್ಗಘಾತದಿಂ |
ದೊರಸಿ ಬಿಸುಟ್ಟು ನಿಲ್ವಧಿಕಸಾಹಸಮೆನ್ನೊಳೆ ಕೂರ್ತು ಸಂದೊಡೇಂ ||
ದೊರಕಿದ ತಂದೆಯಂ ಬಳಿಕ ಕೊಂದಪರಾಖಳರೆಂಬ ಶಂಕೆಗೋ |
ಸರಿಸುವೆನಲ್ಲವಂದಿನಿತು ಸೈರಿಸಲಾರ್ಪನೆ ಪೂರ್ಣಭದ್ರಕಾ || ೮೭

ಎಂದು ಪೇಳ್ದು ಪಿತೃಪ್ರಾಣರಕ್ಷಣೋಪಾಯಮಂ ಚಿಂತಿಸುತಿರ್ಪನ್ನೆಗಂ ಆದೇವಾಲಯದ ಕೋಂಟೆಯ ಬಿಲದಿಂ

ಮೊರೆಯುತ್ತುಂ ಕಾಳಕೂಟಜ್ವಲನಮನುಗುಳುತ್ತುಂ ವಿಷಜ್ವಾಲೆಯಿಂ ಕಾ | ಯ್ದುರಿಪುತ್ತುಂ ಮಾರ್ಗಮಂ ಬಾಯ್ದೆರೆದರೆಗೆಳಸುತ್ತುಂ ನರಜ್ಞಾಯೆ ಮುಂದೇ || ತ್ತರೆ ಕಣ್ಣಿಂದಾಲಿಸುತ್ತುಂ ಪಸಿವಿನೆಸಕದಿಂ ಬೊಂದು ಗಂಭೀರಭಿದ್ರಾಂ | ತರದಿಂ ಕಾಳೋರಗಂ ಮೆಲ್ಲನೆ ಪೊಱಮಡಲಾಂ ಕಂಡೆನುರ್ವೀಶವರೇಣ್ಯಾ || ೮೮

ಅಂತು ಪಾವು ಪೊಱಮಡುವುದಂ ಕಂಡು

ಕಪಿಲಾಕ್ಷಂ ನೀಳ್ದ ತೋಳ್ಗಳ್ ನಿಶಿತಕುಟಿಲದಂಷ್ಟ್ರಾಂಕುರಂ ವಕ್ರನಾಸಂ |
ತಪನೀಯಪ್ರಾಯಕಾಯಂ ಫಣಿಗಣವಿವಿಧಾಲಂಕೃತಂ ತಳ್ತುಗೊಂಡಿ ||

ದರ್ ಪತತ್ರಂ ತನ್ನೊಳೊಪ್ಪಿರ್ಪಹಿಕುಲರಿಪುವಂ ಸಂತತಂ ಸದ್ವಿಹಂಗಾ |
ಧಿಪನಂ ಮಚ್ಚಿತ್ತದೊಳ್ ಭಾವಿಸಿದೆನತುಳಪಂಚಾಕ್ಷರೀಜಾಪ್ಯದಿಂದಂ ||

ಗರುಡಧ್ಯಾನಮನೊಲ್ದಂ |
ತರಂಗದೊಳ್ ನಿಱಿಸಿ ಪಂಚಮುಖಮಂತ್ರಮನು |
ಚ್ಚರಿಸಿಯುಪಸವ್ಯಕರದೊಳ್ |
ಭರವಸದಿಂ ಪಿಡಿದೆನಾಭುಜಂಗಾಧಿಪನಂ || ೯೦

ಅಂತು ಪಾವಂ ಪಿಡಿದು

ಎಲೆ ಪೂರ್ಣಭದ್ರ ಫಣಿ ಕೆ |
ಯ್ಗೊಳಗಾಯ್ತು ತಿಶೀಘ್ರದಿಂದಮೆಮ್ಮಯ ಕಾರ್ಯಂ ||
ಫಲವಾಯ್ತು ಚಿಂತೆಯಂ ಬಿಡು |
ತಿಳಿಯಲ್ ದೇಸಿಗರ್ಗೆ ದೈವಮುಳ್ಳುದು ಪುಸಿಯೇ || ೯೧

ಅದೆಂತೆನೆ:—

ಈಪಾವನುಯ್ದು ಮುತ್ತಿದ |
ಚಾಪಟದೊಳ್ ಪಿತನ ಮೇಲೆ ಬಿಸುಡಲ್ ವಿಷಸಂ ||
ತಾಪಮನಿದು ಮಾಣ್ಕಿಂ ಮೃತ |
ರೂಪಂ ತಾನಾದನೆಂದು ಜನಮುಱಿವಿನೆಗಂ || ೯೨

ಬಱಿಕಾಂ ಪ್ರಾಣಪ್ರತಿಷ್ಠೆಯಂ ಮಾಡಿ

ನಾಗಮತಮಂತ್ರದಿಂದಾ |
ನಾಗಳ್ ವಿಷಮಂ ನಿರಂತರಂ ಸ್ತೋಭಿಸಿ ನಾ ||
ನಾಗಾರುಡಿಗರ್ಗಸದಳ |
ಮಾಗಲ್ ಮಾಣ್ಪೆಂ ಸ್ವಕಾರ್ಯವಶದಿಂದೀಗಳ್ || ೯೩

ಅಂತು ವಿಷಮಂ ಸ್ತೋಭಿಸಲ್ ಕಾಮಪಾಲಂ ಕಾಲಭವನಮನೆಯ್ದಿದನೆಂದು ನೆರವಿಯೆಲ್ಲಂ ಪರೆದು ಪೋಗಲ್ ಬಱಿಕ್ಕಾಕಾಂತಿಮತಿ

ಎನ್ನ ಪತಿಯುಱಿದನೀಗೆನ |
ಗಿನ್ನಾರ್ ಶರಣಾತನಲ್ಲದನುಗಮನಕ್ಕಾ ||
ಸನ್ನಂ ಸಮಕಟ್ಟುವುದುಱಿ |
ಮನ್ನಣೆಯಿಂದೆನಗೆ ಸಿಂಹಘೋಷನರೇಂದ್ರಾ || ೯೪

ಎಂದರಸಂಗೆ ಪೇೞ್ದನುಗೆಮನಕ್ಕನುವಾಗಿ ಸರ್ವಾಲಂಕಾರಂಗೆಯ್ಯಲ್ ಕಾಮಪಾಲನ ಶವಮಂ ಕೊಂಡು ಪೊೞಗಲ್ ಬಱಿಕ್ಕಾನಲ್ಲಿಗೆ ಬಂದಾತನ ಪ್ರಾಣಮಂ ಪಡೆವೆನೆಂದು ಪೂರ್ಣಭದ್ರಂಗೆ ಪೇೞ್ದು ಮತ್ತಮಿಂತೆಂದಂ:—

ಎಮ್ಮಮ್ಮೆಗೆ ಪೇೞೊಲವಿಂ ।
ಕೆಮ್ಮನೆ ನೀಂ ಬಿಸುಡಲಿತ್ತ ನಿಜಸುತನೇೞ್ತಂ ॥
ದಮ್ಮಾಣುಮ್ಮಳಿಕೆಯನಧಿ ।
ಪಮ್ಮರಣದಿನುೞಿವನೆಂಬ ಶುಭವಾಚಕಮಂ ॥ ೯೬

ಎಂದು ಪೂರ್ಣಭದ್ರನಂ ಕಾಂತಿಮತಿಯ ಸಮೀಪಕತ್ತಲ್ ಕಳಿಪಿ ಇತ್ತಲಾಂ ಕಾಮಪಾಲನಿರ್ದ ಚಾವಟಕ್ಕೆ ಬಂದು ನೋೞ್ಪನಂ

ವಿಲಸದ್ಯೋಗವಿಲಾಸಮಂ ನಿಜವಪ್ರಸ್ವಾಭಾಗ್ಯದಿಂ ಧಾತ್ರಿಯೊಳ್ ।
ಬೆಳಗುತ್ತಿರ್ಪಮೃತಾಂಶುಬಿಂಬಕಳೆಗಳ್ ಚಂಚತ್ಸುಧಾಬಿಂದುಸಂ ॥
ಮಿಳಿತಂಗಳ್ ತವೆ ಕೊಂಬುಕೊಂಬಿನೆಡೆಯೊಳ್ ಸಿಲ್ಕಿರ್ದಪೋಲ್ ಪುಷ್ಪದಿಂ ।
ಫಲದಿಂ ರಂಜಿಸುತಿರ್ದುದೊಂದು ಸತತಂ ಚೆಲ್ವಾದ ಚಿಂಚಾದ್ರುಮಂ ॥

ಅಂತಿರ್ದುದೊಂದು ಪುಣಿಸೆಯ ಮರನಂ ಪಲಂಬರೇಱಿ ಕಾಮಪಾಲನಂ ನೋಡುತ್ತಿರಲಾನುಮೊಂಬೆಳಗೊಂಬಿನೊಳ್ ಕುಳ್ಳಿರ್ದಾಗಳ್

ಅರಸನುಮಂ ತತ್ಸುತನುಮ ।
ನರಮರಿಸದೆ ತೀರ್ಚಿದಂ ಮಗುೞ್ದಿರ್ದಂಗಂ ॥
ಗರಳಮನಿಕ್ಕಿ ಕೊಲಲ್ ಚೆ ।
ಚ್ಚರದಿಂ ಬಗೆದಂ ಸಮಸ್ತಮಿತ್ರದ್ರೋಹಂ ॥ ೯೭

ಎಂದೊರ್ಬ ಮಾತಂಗಕಂ ಮೂಱು ಸೂೞ್ ಸಾಱಿ ಕಾಮಪಾಲನ ಕಣ್ಗಳಂ ಗತಜೀವಿತನಪ್ಪ ಮಾಚ್ಕೆಯಿಂ ಪೆಡವಲೆಯೊಳ್ ತೋಡುವೆನೆಂಬ ಸಮಯದೊಳ್

ಮುಸುಕಿನೊಳಗಿರ್ದ ಪಾವಂ ।
ಪಸಿನಂ ಮತ್ತಿತನ ಮೇಲೆ ಬಿಸುಡಲೊಡಂ ಮುಂ ॥
ಪಸಿದಿರ್ದಾಂಡಿತತಿ ಸರ ।
ಭಸದಿಂ ಪಿತನುಮನೊಱಲ್ವ ಮಾತಂಗನ-ಮಂ ॥ ೯೮

ಅಂತು ಕಾಳೋರಗಂ ಕರ್ಚಲ್ ವತ್ರಿತನ ಪ್ರಾಣಪ್ರತಿಷ್ಠೆಯುನಾರುಮಱಿಯುದಂತು ಮಾಡಿ ವಿಷಮಂ ಸ್ತೋಭಿಸೆ,

ಮಾತಂಗಕಂ ಕೃತಾಂತನಿ ।
ಕೇತನಮಂ ಪ್ರೋಕ್ಷನೆಂದೊಡೀವಿಷದಿಂ ಮ ॥
ತ್ರೀತಂ ಬ*ರ್ದುಕುವನೆ ಎನು ।
ತ್ತೋತೆಲ್ಲರ್ ಕಾಮಪಾಲನೊಡಲಂ ಬಿಸುಟರ್ ॥ ೯೯

ಜನಪತಿ ಕೊಲಿಸದೆ ಕಳೆ ಲೋ ।
ಜನಮೊರಡನೆನಲ್ಕೆ ಪಾಪಿ ಮಾಡಿದ ಪಾಪಂ ॥
ಘನಮಾದುದಱಿಂ ದೈವಂ ।
ಮುನಿದಸುವಂ ಕೊಂಡುದಱಿದನಧಿಕದ್ರೋಹಂ ॥ ೧೦೦

ಎಂದಲ್ಲಿರ್ದವರೆಲ್ಲರುಂ ಕಾಮಪಾಲನ ಕಳೇವರಮಂ ಬಿಸುಟ್ಟು ಪೋಗಲಾಂ ಪೇಳ್ದ ತೆಱದಿಂ ಮುನ್ನಮೆ ಪೂರ್ಣಭದ್ರಂ ಕಾಂತಿಮತಿಗೆ ಬುದ್ಧಿವೇಳ್ದಾಕಾಂತಿಮತಿ ಸಿಂಹಘೋಷನಿರ್ದೆಡೆ ಪೋಗಿ,

ಎನ್ನಧಿಪಂ ನಿನಗೊಪ್ಪಿಸಿ ।
ಪನ್ನಯದಿಂ ಗಱಿದನಾತನೊಡನಾಂ ಪೋಗಲ್ ॥
ಮುನ್ನಮೆ ಸಿದ್ಧಂ ಸಹಗಮ ।
ನನ್ನೆಟ್ಟನೆ ಧರ್ಮಮಲ್ತೆ ನನಗೆ ನೃಪಾಲಾ ॥ ೧೦೧

ಪಾತಕನಾದೊಡಂ ಪಿಶುನನಾದೊಡಮೆಲ್ಲರೊಳುಗ್ರನಾದೊಡಂ ।
ಘಾತುಕನಾದೊಡಂ ಪತಿಯೆ ತನ್ನಧಿದೈವಮೆನಿಪ್ಪ ಕಾಂತೆ ಸಂ ॥
ಪ್ರೀತಿಯನಪ್ಪಕೆಯ್ದು ಪತಿಯಾದವೊಲಪ್ಪುದು ಧರ್ಮಮಲ್ತೆ ಕೇಳ್ ।
ಭೂತಳನಾಥ ಕೂರ್ತೆನಗನುಜ್ಞೆಯನಗ್ನಿಯೊಳೀವುದಱ್ತಿಯಿಂ ॥ ೧೦೨

ಎಂದು ಬಿನ್ನಪಂಗೆಯ್ಯಲಾತಂ ಮನದೊಳ್ ಗುಡಿಗಟ್ಟಿ ಶತ್ರುನಿಶ್ಶೇಷಮಕ್ಕೆಂದಗ್ನಿಪ್ರವೇಶಕ್ಕನುಜ್ಞೆಯುಂ ಕುಡಲೊಡಂ

ಶವಶೃಂಗಾರಂಗೆಯ್ಯಲ್ ।
ಭವನಕ್ಕಾಕಾಮಪಾಲಸಚಿವನ ನಿಜದೇ ॥
ಹವನುಯ್ದೋವರಿಯೊಳ್ ಸಂ ।
ತವಿಟ್ಟು ಮನ್ಮಾರ್ಗಮಂ ನಿರೀಕ್ಷಿಸುತಿರ್ದಳ್ ॥ ೧೦೩

ಅಂತು ಪೂರ್ಣಭದ್ರನುಂ ಕಾಂತಿಮತಿಯುಮೆನ್ನ ಬರವಂ ಪಾರುತ್ತಿರಲಾಂ ಪ್ರಚ್ಛನ್ನವೇಷದಿಂ ಬಂದು ಪೂರ್ಣಭದ್ರನಿಂ ಕಾಂತಿಮತಿಯು ಕುಱುಪನಱಿದು,

ಕಣ್ತೀವಿ ನೋಡಿ ಮತ್ತಂ ।
ಗೋಣ್ತೊಟ್ಟನೆ ಬಿಗಿಯೆ ಸೆರೆಗಳಿಂ ಮೋಹಕುಜಂ ॥
ಪಣ್ತೆಸೆಯಲೆಱಗಿದೆಂ ಸಲೆ ।
ಪೂಣ್ತನ್ನಯ ಪುಣ್ಯಸಿದ್ಧಿಯಾಯ್ತೆಂದಾಗಳ್ ॥ ೧೦೪

ಅಂತು ಕಾಂತಿಮತಿಗೆ ನಮಸ್ಕಾರಮಂ ಮಾಡಲೊಡಂ,

ಸ್ತನದಿಂ ಚುಮ್ಮೆಂದು ಪಾಲ್ಗಳ್ ಸುರಿಯೆ ಭುಜಯುಗಂ ಪೆರ್ಚೆ ವಕ್ತ್ರಂ
ಬುಜಂ ಪೆಂ । ಪಿನ ಸೊಂಪಂ ಬೀಱಲೆನ್ನಂ ಪರಸಿ ನೆಗಪಿಯೊಲ್ದಪ್ಪಿ ಮುಂ
ಡಾಡಿ ಮದ್ಭಾ ॥ ಗ್ಯನಿಧಾನಂ ಕೆಯ್ಗೆ ಸಾರ್ದತ್ತಿಳೆಯೊಳಧಿಕರಾರೆನ್ನವೋ
ಲೆಂದು ಕಣ್ತುಂ । ಬಿ ನಿತಾಂತಂ ನೋಡುತಿರ್ದಳ್ ಜನನಿ ನಲವಿನಿಂದೆನ್ನ
ನಾಗಳ್ ನರೇಂದ್ರಾ ॥ ೧೦೫

ಅಂತು ನೋಡಿ,

ಅಱಿದಿರ್ದುಂ ಹಾರಾವಳಿ ।
ಪೆಱಳ್ಗೆ ವಸುಮತಿಗೆ ಕೊಟ್ಟಳೆನ್ನಯ ಮಗನಂ ॥
ನೆಱೆನೋಂಪಿಯುನೆಸಗದವಳ್ ।
ತಱಿಸಲ್ವಳೆ ಪುತ್ರಸುಖದೊಳಿಂತೆಳಸಿದೊಡಂ ॥ ೧೦೬

ತೊದಳಿಸೆವ ನುಡಿಗಳಂ ಚೆ ।
ಲ್ವೊದವಿದ ದಟ್ಟಡಿಯನ*ಮರ್ದ ದೊಳ್ಳಾಟದ ಸಂ ॥
ಪದವನುಱೆ ಕೇಳ್ವ ಕಾಣ್ಬ ।
ಭ್ಯುದಯಂ ದೊರೆಕೊಳ್ವ ಪುಣ್ಯಮೆನಗಾದಪುದೇ ॥ ೧೦೭

ಎಂದು ಮಗುೞ್ದು ಮಗುೞ್ದಪ್ಪುವಂಬಿಕೆಗಾನಂದಮನೆಸಗಿಯನಂತರಂ ಸರ್ಪದಷ್ಟನಾಗಿ ಶವರೂಪದಿಂದಿರ್ದ ಕಾಮಪಾಲನೆಡೆಗೆ ಬಂದು

ಗಾರುಡಪಂಚಾಕ್ಷರಿಯಿಂ ।
ನೀರಂ ಮಂತ್ರಿಸುತುಮಮೃತಪಂಚಾಕ್ಷರಿಯಿಂ ॥

ದಾರಣೆಯಂ ಜಪಿಸುತ್ತುಂ ।
ಮಾರರಿಯ ನೀಲಕಂಠನಂ ಧ್ಯಾನಿಸಿದೆಂ ॥ ೧೦೮

ಸರಸಿಜನೇತ್ರನಿಂದ್ರನಜನಷ್ಟದಿಶಾಧಿಪರಾದಿಯಾದ ದೇ ।
ವರ ಗಡಣಕ್ಕೆ ಭೀತಿಯನೊಡರ್ಚುವ ದುರ್ಗಮಕಾಳಕೂಟಮಂ ॥
ಕರತಳಮುಳ್ಳಂಗಳ್ಗಂ ಗ್ರಾಸಿಸಿ ಸುಧಿನ ಮಾಟ್ಕೆಯೊಳೊಲ್ದು ಕಂಠದೊಳ್
ಧರಿಸಿದ ನೀಲಕಂಠನ ನಿಜಾಕೃತಿಯಂ ನೆನೆದೆಂ ನೃಪಾಲಕಾ ॥ ೧೦೯

ಕಪಿಲಾಕ್ಷಂ ನೀಳ್ದ ತೋಳ್ಗಳ್ ಮಿಸುಪ ನಿಶಿತದಂಷ್ಟ್ರಾಂಕುರಂ ವಕ್ರ
ನಾಸಂ । ತಪನೀಯಪ್ರಾಯಕಾಯಂ ಫಣಿಕುಲವಿವಿಧಾಲಂಕೃತಂ ತಳ್ತು
ಗೊಂಡಿ ॥ ಗರ ಪತತ್ರಂ ತನೆಸ್ಗಳೊಪ್ಪಿಪ ಹಿಂಗಣರಿಪ್ರವಂ ಶೀಘ್ರದಿಂ ತದ್ವಿ
ಹಂಗಾ । ಧಿಪನಂ ಮುಚ್ಚಿತ್ತದೊಳ್ ಭಾವಿಸಿದೆನರುಳಪಂಚಾಕ್ಷರೀಜಾಪ್ಯ
ದಿಂದಂ ॥ ೧೧೦

ಅಂತು ನೀಲಕಂಠಗರುಡರ ಧ್ಯಾನಮಂ ಮಾಡಿ ಯುಮ್ಮತಪಂಚಾಕ್ಷರಿಯಿಂ
ಮುದಕಮಂ ಮಂತ್ರಿಸಿ ಮುಖದೊಳ್ ತಳಿದು

ಜನನೀಕ್ಕುಮ ಪತ್ಕ್ಲಾಳತಿ ।
ಕ್ಷೇಮಸುಪೊಸಿಟ್ಟು ಸುಟಿ ಹಿಪ್ಪಳಿ ಮೊಗಸೆ ॥
ಜೀವಮೂಡುನೇತ್ರಜಲದಾ ।
ಶ್ರೀಮುದಿನಾತುಗ ಸವಿಯ ನಸ್ಯಂಗೆಯ್ಯಂ ॥ ೧೧೧

ಅಂತು ನಸ್ಯಂಗೆಯ್ಯಲೊಡಂ,

ತನುವಿನ ಕಾಳಮಂ ಪಱಿದು ಸುಕಿರ್ವ ಗೋಣ್ ಸರಿಸ್ಯೆತನಾಗಿ ತ ।
ನ್ನಿನ ಬೆಮರುಣ್ಮಿ ರೋಮನಿಕರಂ ತಳೆಯೊತ್ತಿ ಬೆರಳ್ ನಿಮಿರ್ದು ಲೋ॥
ಚನಮರಿನೀರಪಮರ್ ಸಿರ್ಗಳೊಯ್ಯನೆ ತುಂಬಿ ವಿಷಂ ಕಟಿಲ್ದು ಭೋಂ।
ಕನೆ ಪಿತನೊಲ್ದು ಕಣ್ದೆಱೆದು ನೋಡಿದನೆನ್ನ ಮುಖೇಂದುಬಿಂಬಮಂ ॥

ಅದೆಂತೆನೆ:–

ಮುನ್ನಮುಖಮಂದದಿಂ ಮುಕುರದೊಳ್ ಪ್ರತಿಬಿಂಬಮನೀಕ್ಷಿಪಂದದಿಂ ।
ತನ್ನ ಶರೀರಮೀಗಳಿಂತಾದ ಪ್ರದೆಂಬಭಿಶಂಕೆಯಿಂ ಮಗು ॥
ಟ್ಟೆನ್ನಯ ಜನ್ಮಕಾರಣನಿವಂ ಪೆಱನಲ್ತೆನಿಪಂದದಿಂ ಪುದ ।
ಟ್ಟೆನ್ನ ಮುಖಾಬ್ಜಮಂ ಸಗಪನಿಂಬವೆಯಿಕ್ಕದೆ ನೋಡಿದಂ ನೃಪಾ ॥೧೧೨

ಅಂತು ನೋಡಿ ಮೆಯ್ಮುಱಿದೆೞ್ದು ಕುಳ್ಳಿರಲೊಡಂ,

ಲಲನೆ ವಸುಮತಿಗೆ ತಾರಾ ।
ವಳಿ ಕೊಟ್ಟರಿಸಿಟ್ಟ ನಿಮ್ಮ ನಂದನನಾಂ ಕೇ ॥
ಳೆಲೆ ಪಿತ ಎಂದಾತನ ಪದ ।
ನಳಿನಕ್ಕಭಿವಾದನೋಕ್ತಿಯಿಂ ಪೊಡೆವಟ್ಟಂ ॥ ೧೧೪

ಅಂತು ಪೊಡೆವಡಲ್

ಗಾರುಡಮಂತ್ರೌಷಧಿಗಳ ।
ಕಾರಣದಿಂ ಬಂದುನಲ್ತು ಮಜ್ಜೀವಂ ವಿ ॥
ಸ್ತಾರಮೆನಲಾತ್ಮಜಾತಾ ।
ಕಾರಮನೀಕ್ಷಿಸುವುದರ್ಕೆ ಬಂದುದು ದಿಟದಿಂ ॥ ೧೧೫

ಇಂದೆನ್ನ ಜನ್ಮಫಲಮಾ ।
ಯ್ತಿಂದು ಪ್ರಸರ್ಸನ್ನಮಾಯ್ತು ಮನ್ನೇತ್ರಕ್ಕಾ ॥
ನಂದಂ ದೊರಕಿತ್ತೆಂದೊಲ ।
ವಿಂದಂ ಮುಯ್ಯಾಂತು ಪೆರ್ಚಿದಂ ಮಜ್ಜನಕಂ ॥ ೧೧೬

ಅಂತು ಸಂತೋಷಮಂ ತಳೆದಿರ್ದ ತಂದೆಗಾನಿಂತೆಂದೆಂ:—

ಮೇಲಪ್ಪ ಕಾರ್ಯಮಂ ಪದೆ ।
ದಾಲೋಚಿಸಿ ನಿಮ್ಮನಿಸಿತು ಬಾಧಿಸಿದರಿಯುಂ ॥
ಕಾಲನ ಮನೆಗಟ್ಟ ಧರಾ ।
ಪಾಲನೆಯುಂ ಮಾಪ್ಪುಪಾಯಮೆಂತುಟೊ ಜನಕಾ ॥ ೧೧೭

ಎಂದೊಡಾಕಾಮಪಾಲನಿಂತೆಂದಂ:—

ನೃಪನೊಳ್ ಪ್ರತಿಪಕ್ಷಿಗಳಾ ।
ದ ಪರರನೊಳಪೊಯ್ದುಕೊಂಡು ಸಮ್ಮರಮನೆಯೊಳ್ ॥
ಸೆಪೆರಿಗ್ರಹನಾಗಿರ್ದಂ ।
ಗಡಕಾರಮೆನಸಗುವಂ ದಿನಕ್ರಮದಿಂದಂ ॥ ೧೧೮

ಎಂದು ಸಕಲಪರಿವಾರಮನನ್ತರ್ಭೇದಂಗೆಯ್ವುಪಾಯದಿಂ ಕಾಂತಿಸುತಿ ಕಾಮಪಾಲನೊಳ್ ತನ್ಮಂದಿರದೊಳ್ ಸಹಗಮನಂಗೆಯ್ದಳೆಂಬ ಸುದ್ದಿಯುಂ ಪ್ರಸಿದ್ಧಂಮಾಡಿರಲಾನಿತ್ತಲ್,

ಅವನಿಪತಿ ಸಿಂಹಸೌಷಂ ।
ಪವಡಿಸುವಾಲಯಮನಱಿದು ರಾತ್ರಿಯೊಳಾಂ ಕ ॥
ನ್ನವನಿಕ್ಕಿ ಪೋಗುತಿರ್ಪ ।
ಲ್ಲಿ ವಿಳಾಸದೆ ಕಂಡೆನೊಂದು ನೆಲಮಾಳಗೆಯುಂ ॥ ೧೧೯

ಅದಱೊಳ್

ಕಮಲಜನಾಪ್ತಕಾಲಧನಮೊಂದಿರಿಸಿಟ್ಟ ಲಸದ್ವಧೂನಿಧಾ ।
ನಮೊ ರವಿಶಾಪದಿಂ ಸಿಡಿದು ಬಂದಡಗಿರ್ದ ರುಚಂದ್ರಕಾಸ್ರತಾ ॥
ನಮೊ ಭುಜಗೇಂದ್ರಕನ್ಯೆಯರನೀಕ್ಷಿಸಿ ಪ್ರೇಮಸುರಾಂಗನಾಸಮೂ ।
ಹಮೊ ಎನಿಪ್ಪೊಂದು ಶಂಕೆ ನೆಲಸಲ್ ಮೆಱೆದತ್ತ ಬಲಾಕದಂಬಕಂ ॥ ೧೨೦

ಅಂತು ನೆಲಮಾಳಗೆಯೊಳಿರ್ದ ಕನ್ನೆಯರನ್ನಂ ಕಂಡು

ಮುಱಿವುಲ್ಲ ಗಳಾದೆ ಸಗುಜ ।
ಬಿಸುಗಾಳಗೆ ಬೆದಱುವಂತೆ ಕಾಂತೆಯರೆನ್ನಂ ॥
ನೆಱೆ ಕಂಡು ಲಜ್ಜೆಯಿಂ ಮು ।
ಯ್ಮುಱಿದು ಕರಂ ಭೀತಿಯಿಂದೆ ತಳ್ವೆಳಗಾದರ್ ॥ ೧೨೧

ಅಂತು ಬೆರ್ಚಿರ್ದ ಕನ್ನೆಯರ್ಗಳ್ ನಂಜದಿರಿಮೆಂಬ ವಾಕ್ಯಸನ್ಮಾನಮಂ ತೋಱಿಸಲಲ್ಲಿ,

ತೊಳಪಕ್ಷಿದ್ಯುತಿಯುಂ ರದಚ್ಛವಿಗಳಂ ಕರ್ಣೋತ್ಪಲಜ್ಯೋತ್ಸ್ನೆಯುಂ ।
ವಿಳಸನ್ಮೌಕ್ತಿಕಹಾರದೀಧಿತಿಗಳಂ ಚಂಚನ್ನಖಜ್ಯೋತಿಯುಂ ॥
ತಲೆಯೊಳ್ ಪತ್ತಿಸೆ ಮಾತೆ ನಸ್ಗಱಿಗಳಂ ತಾಳ್ದಂಗಸೈಥಿಲ್ಯದಿಂ ।
ಲಲನಾಸಂಕುಳಮಧ್ಯದೊಳ್ ಮೆಱೆವನೊರ್ಬಳ್ ವೃದ್ಧೆಯಿರ್ದಳ್ ನೃಪಾ ॥

ಅಂತಿರ್ದ ವೃದ್ಧೆ ಅಲ್ಲಿರ್ದ ರಾಜಕುಮಾರಿಯುನೊರ್ಬಳಂ ತೋಱಿ

ಈಲಲನೆಗಿನಿಬರಂ ಪತೆ ।
ದೋಲಗಿಸಲ್ಕಿರಿಸಿಯುನ್ನಪಾನಾದಿಗಳಂ ॥
ಕಾಲಾವಧಿಗಿತ್ತೀಪಾ ।
ತಾಳಗೃಹಾಂತರದೊಳಿಮ್ಮನಿರಿಸಿದನರಸಂ ॥ ೧೨೨

ಕಾಂತಿಮತಿಗಾದ ಕಾರ್ಯದ ।
ಚಿಂತೆಯೊಳೀನೃಪಕುಮಾರಿಯುಂ ಧರಣೀಶಂ ॥

ಪಾತಾಳಗೃಹದೊಳಿರಿಸಿದ ।
ನೀತೆಱದಿಂದಂ ದಶಾಬ್ದಮಾದತ್ತೀಗಳ್ ॥ ೧೨೪

ಎಂದೊಡಾಂ ಕಾಂತಿಮತಿಯು ಕುಮಾರನೆಂದು ಸೂಚಿಸಲವಳ್ ಮತ್ತ ಮಿಂತೆಂದಳ್:—

ಪೂರ್ವದೊಳೊಲ್ದು ಕಾಂತಿಮತಿಗೊಸ್ಸವ ಲಕ್ಷಣೆ ನಸ್ನಿಯಿತ್ತಳಾ ।
ನೊರ್ವ ಕುಮಾರಿಯುಂ ಪಡೆದು ನೀಂ ಮಗನಂ ಪಡೆದಪ್ಪೆಯಾದೊಡೀ ॥
ನುರ್ವರೆ ಮೆಚ್ಚಲೀವೆನವಳಂ ನಿನಗಾದ ಕುಮಾರಂಗೆ ಪು ।
ತ್ರೋರ್ವರೊಳೊರ್ವರಿಂತುಸಿದುದಂ ಪದಾನಜುವಂ ಕುಮಾರಕಾ ॥

ಎಂದು ವೃದ್ಧೆ ಪೇೞ್ದುದಂ ಕೇಳ್ದಾಂ ಸಿಂಹಘೋಷನಿರ್ದೆಡೆಗ ಪ್ರೀ ಬಂದು ನಿನ್ನಭಿಮತಮಂ ಮಾಡ್ಪೆನೆಂಬುದುಮಾವೃದ್ಧೆಯಿಂತೆಂದಳ್ :—

ಇತ್ತಲಿದೆ ಮೂಲೆಗಂಭವ ।
ನೆತ್ತಲ್ ತಳದಲ್ಲಿ ಬಾಗಿಲಿರ್ಪುದದಱೊಳ್ ॥
ಬಿತ್ತರದಿಂ ನಡೆಯಲ್ ಭೂ ।
ಪೋತ್ತಮನಿರ್ದೆಡೆಯನೆಯ್ದಲಕ್ಕುಮಮೋಘಂ ॥ ೧೨೫

ಎಂದಾವೃದ್ಧೆ ಪೇೞ್ದೊಡಾಕ್ರಮದಿಂ ನೆಲಮಾಳಿಗೆಯ ಮೂಲೆಗಂಭವನೆತ್ತಿ ದಾರಿಯಂ ಕಂಡು ತನ್ಮಾರ್ಗದೊಳ್ ಸಿಂಹಘೋಷನ ಸಜ್ಜೆಯ ಮನೆಯಂ ಪೊಕ್ಕು

ಬಿಲದೊಳಗಿರ್ದಹಿಯಂ ಖಗ ।
ಕುಲಪತಿ ಪಿಡಿದೆೞೆವ ಮಾೞ್ಕೆಯಿಂದಂ ನಾಂ ಮೆ ॥
ಯ್ಗಲಿ ಸಿಂಹಘೋಷನಂ ಮುಂ ।
ದಲೆಯಂ ಪಿಡಿದೆೞೆದೆನಿರ್ದ ಸಜ್ಜೆಯ ಮನೆಯಿಂ ॥ ೧೨೬

ಅಂತವನಂ ಕೋಡಗಗ ।
ಟ್ಟಂ ತಡೆಯದೆ ಕಟ್ಟಿ ಬಂದ ಬಟ್ಟೆಯೊಳೆೞ್ತಂ ॥
ದೆಂ ತರುಣಿಯುರಿರ್ದೆಡೆಗೆ ನಿ ।
ತಾಂತಂ ಸಂಕಲ್ಪಸಿದ್ಧನಾಗಿ ನೃಪೇಂದ್ರಾ ॥ ೧೨೭

ಬಱಿಕಲ್ಲಿರ್ದ ಮಣಿಪುತ್ರಿಕೆ ಮೊದಲಾದ ಸ್ತ್ರೀಯರಂ ಸಿಂಹಘೋಷನಂ ಮನ್ಮಾತೃಪಿತೃಸಮೀಪಕ್ಕೆ ತಂದು,

ನಿಮಗೆ ವಿರೋಧಮಂ ಬಗೆದ ಗೋಷ್ಠಿಯನಗ್ಗಳ ಸಿಂಹಘೋಷಭೂ ।
ರಮಣನನೊಂದು ಚೆಲ್ವ ನೆಲನಾಳಗೆಯೊಳ್ ನೆಲಸಿರ್ದ ಕಾಮಿನೀ ॥
ಸಮುದಯಮಂ ನಿಜಾಂಘ್ರಿಯುಗಮಂ ಮಿಗೆ ಕಾಣಿಸಿ ಕೊಳ್ವುದೆಂದು ತ।
ತ್ಕ್ರಮದೊಳ್ ಸಾರ್ಚಿದಂ ಪಿತೃಗಳಬ್ಜರ ಮೆಲ್ಲಡಿಗಳ್ಗೆ ಭೂಪನಂ ॥

ಅಂತು ಸಿಂಹಘೋಷನಂ ತರ್ಪೊಡಂ ಕಾಂತಿಮತಿ ಕಂಡು ಕ್ಲೇಶಿತೆಯಾಗಿ ಬಿಡಲ್ವೇಳ್ದೊಡಂ ಬಿಡದೆ ಅದ ವ ಮುಹೂರ್ತವಾಗಿ ಮಣಿಪುತ್ರಿಕೆಯೊಳ್ ಮದುವೆನೆಱೆದನಂತರಂ ದುಷ್ಟನಿಗ್ರಹಂಗೆಯ್ದು ಕಾಮಪಾಲನಂ ರಾಜ್ಯಸ್ಥನಂ ಮಾಡಿ ದೇವರಂ ವಿಚಾರಿಸಲ್ ಪೊಱಮಡುವಾಗಳ್

ತನಗೆ ಬಲಪ್ಪಾಗಿ ಬರ್ಕೆಂ ।
ದನ ನಯದಿಂ ಸಿಂಹವರ್ಮನೊಲವಿಂ ಕೇಳ್ದು ॥
ಟ್ಟೆ ಸಿರಾಕುಳದಿಂದಿಲ್ಲಿಗೆ ।
ಮನವೊಸೆದೆತ್ತಂದು ದೇವ ನಿಮ್ಮಂ ಕಂಡೆಂ ॥ ೧೩೦

ಎಂದರ್ಥಪಾಲಂ ತನ್ನ ವೃತ್ತಾಂತಮಂ ರಾಜವಾಹನಂಗೆ ಪೇಳ್ದು ಕೆಯ್ಗಳಂ ಮುಗಿದಿರೆ,

ಸುಲಲಿತನೀತಿಯುಂ ಲಸದುಪಾಯಮುಮೊಪ್ಪುವ ಮಂತ್ರತಂತ್ರಸಂ ।
ಕುಳದಿನರಾತಿಯುಂ ಜಯಿಸ ಮಾಯತಮಂ ಪಡೆದರ್ಥಪಾಲನಂ ॥
ತಿಳಿಯೊಳದಾವಮಂ ತ್ರಿಳಿಯಲಾರ್ಸವನೆಂದನುರಾಗದಿಂ ಕಳಾ ।
ನಿಳಯನನಾರತಂ *ಪೊಗಳ್ದು ಮೆಚ್ಚಿದನಾಗಳಭಂಗವಿಕ್ರಮಂ ॥ ೧೩೧

॥ ಗದ್ಯ ॥

ಇದು ನಿಖಿಲಬುಧಜನಮನೋವನಜವನದಿವಾಕರಕಿರಣಪ್ರಸನ್ನ
ಶ್ರೀಮದಭಂಗವಿಟ್ಠಲಪದಾಂಭೋಜಮತ್ತಮಧುಕರ
ಮಧುಸೂದನನಂದನ ಸರಸಕವಿ ಚೌಂಡರಸ ವಿರಚಿತಮಪ್ಪ

ಅಭಿನವ ದಶಕುಮಾರಚರಿತೆಯೊಳ್

ಅರ್ಥಪಾಲಕಥಾವೃತ್ತಾಂತಂ
ನವಮಾಶ್ವಾಸಂ

॥ ದಶಮಾಶ್ವಾಸಂ ॥

—ಉಪಹಾರವರ್ಮನ ಕಥೆ—

ಶ್ರೀನಾರೀನಿಳಯಂ ವಿ ।
ದ್ಯಾನಿಧಿಯುಪಹಾರವರ್ಮನಂ ಕೇಳ್ದಂ ನೀ ॥
ನೇನಂ ಮಾಡಿದೆಯೆಂದ ।
ತ್ಯಾನಂದದಿನೊಲ್ದು ಭಂಗವಿಟ್ಟ ಲಭ್ಯತ್ವಂ ॥ ೧

ಎಂದೊಡುಪಹಾರವರ್ಮಂ ರಾಜವಾಹನಂಗೆ ಕೆಯ್ಗಳಂ ಮುಗಿದಿಂ ತೆಂದಂ:—

ಎಲ್ಲರ ಚೆಂದದಿಂದಱಸಲಾಂ ನಿಜಪಾದಪಯೋಜಯುಗ್ಮಮಂ ।
ಪಲ್ಲವ ಪಾರಿಯಾತ್ರ ಮಗಧಾಂಧ್ರ ತುರುಷ್ಕ ಕಳಿಂಗದೇಶಮಂ ॥
ಬೆಳ್ಗಡೆಯುಂ ತೊಟಿಲ್ದು ಮಿಥಿಳಾವಿಷಯಾಂತರದೊಳ್ ಬರುತ್ತಿರ ।
ಲ್ಕಲ್ಲಿ ಜಗತ್ಪ್ರಸಿದ್ಧಿವಡೆದಿರ್ಪುದು ಕೇಳ್ ಮಿಥಿಳಾಪುರಂ ನೃಪಾ ॥ ೨

ಅದು ಸತ್ಪಾತ್ರಹಸ್ತದಂತೆ ಪತಾಕಾಭಿರಾಮಮುಮುಂ, ವಿಶಿಷ್ಟಾಗ್ರಹಾರದಂತೆ ವಿಪ್ರಾಕಾರರಂಜಿತಮುಂ, ಮಥುರಾಪುರಿಯಂತೆ ವಸುದೇವಾಗಾರರಮ್ಯಮುಂ, ವ್ಯೋಮಮಂಡಲದಂತೆ ದ್ವಿಜರಾಜಸನ್ಮಾರ್ಗಮುಂ, ಸ್ವರ್ಗಲೋಕದಂತೆ ಸುಧಾಮಯಮಂದಿರಮುಂ, ಗ್ರಹಸಮೂಹದಂತೆ ಮಿತ್ರರಾಜಗೋತ್ರಜಬುಧಗುರುಕವಿಸಾರಿಸಮೃದ್ಧಿಯುಂ, ಸಾಮಭೂಮಿಯಂತೆ ಭದ್ರಗಜರಂಜಿತಮುಮೆನಿಸಿರ್ಪುದು. ಅಂತುಮಲ್ಲದೆಯುಂ,

ವಸುಧಾದೇವಿಯ ನೀಳ್ದ ತೋಳ್ಗಳೆನಿಸಲ್ ಸೋವರ್ಕಸದ್ವೀಥಿ ರಂ ।
ಜಿಸೆ ನಾನಾನವರತ್ನ ಹೇಮಕಲಶಂ ಸ್ವರ್ಣಾದ್ರಿಯಂ ಸೈತು ಸೋ ॥
ಲಿಸುವಂತೊಪ್ಪೆ ನಿಮಿರ್ಕೆಯುಪ್ಪರಿಗೆಗಳ್ ತಾರಾದ್ರಿಯಂ ಪೋಲ್ತು ಪೆಂ ।
ಪೆಸೆಯಲ್ ನಿತ್ಯವಿಳಾಸದಿಂ ಮಿಥಿಳೆಯೇಂ ಚೆಲ್ವಾಯ್ತೊ ಸಂಪತ್ತಿಯಿಂ ॥ ೩

ಅಂತೆಸೆವಮಿಥಿಳಾಪುರಮಂ ಪುಗುವಾಗಳದಱ ಬಹಿದ್ವಾರದ ಪಾರ್ಶ್ವದಲ್ಲಿ

ಸೆರೆಗಳ್ ತಳ್ತಂಗವೆಲ್ಲಲ್ಲಿಗೆ ಸುರುಳ್ದಿರೆ ಲಂಬಸ್ತನಂ ಮೆಲ್ಪಿನಿಂ ಜೋ ।
ಲ್ದಿರೆ ಗಲ್ಲಂ ಪತ್ತಿ ಕಣ್ಗಳ್ ಕುಳಿತಿರ್ದೆಯಾಗಲಂಬೆತ್ತು ತೋಳೊಳ್ ತೊವಲ್

ನೀ ॥ ಳ್ದರೆ ಪಶ್ಚಾತ್ತಾಪಮುಂ ತದ್ವದನಮುಮಿಪಲಿದರ್ಗಳ್ ಕರಂ ವೃದ್ಧೆ ದುಃ
ಖಾ । ತುರೆ ಚಿಂತಾಭ್ರಾಂತಿಯಿಂದಾಪಟೆಯ ಮಠದ ಗೊಂಟಿಂಗೆ ಗೆಂಟಾಗಿ
ಯೊರ್ವಳ್ ॥ ೪

ಅಂತಿರ್ದ ತಾಪಸರೂಪೆಯಪ್ಪ ವೃದ್ಧೆಯುಂ ಕಂಡು ನಾಂ ಆಮಠದೊಳ್ ನಿಮಿಷಂ ಕುಳ್ಳಿರ್ದುಮಾವೃದ್ಧೆ ಎನ್ನಂ ನೋಡಿ,

ಪೊಡಮಿದಾಂ ತನ್ನೊಳ್ ಮಾ ।
ತಾಡದ ಮುನ್ನಾಕೆಯೆನ್ನ ಮುಖಮಂಡಲಮಂ ॥
ನೋಡುತ್ತುಂ ಕಣ್ಬನಿಯೊಳ್ ।
ಮೂಡಿ ಮುಳುಂಗಿರ್ದಳೆನಗೆ ವಿಸ್ಮಯಮಾಗಲ್ ॥ ೫

ಅಂತು ವಿಸ್ಮಯಮೆನ್ನೊಳ್ ಪತ್ತಿ ಇದೇನೀದುಃಖಕ್ಕೆ ಕಾರಣಮೇನೆಂದಾನಾಕೆಯುಂ ಬೆಸಗೊಳ್ವುದುಮವಳಿಂತೆಂದಳ್.—

ಪೃಥುಳಬಳಮಾದಿಕಾಮರ್ಗಂ ।
ಪೃಥಿವೀಕಂಟಕನೃಪಾಲಕುಲಹಿಮಘರ್ಮರ್ಗಂ ॥
ಪ್ರಥಿತಪ್ರಹಾರವರ್ಮರ್ಗಂ ।
ಮಿಥಿಳಾಪುರದರಸನೆಂಬ ಮಹಿಮಾವರ್ಮರ್ಗಂ ॥ ೬

ಅಂತಾತಂಗಾಪ್ತಮಿತ್ರಂ ನೃಪಕುಲತಿಲಕಂ ರಾಜಹಂಸೋರ್ವಿಪಂ ತ ।
ತ್ಕಾಂತಾಸೀಮಂತಸಂಪ್ರೀತಿಗೆ ಕರೆಸೆ ಮದೀಯೋರ್ವಿಪಂ ಕೇಳ್ದು ಚೇತ ॥
ಸ್ಸಂತೋಷಂ ಮಿಕ್ಕು ತನ್ನಂಗನೆ ನಿಜಸುತರಿರ್ವರ್ ಬಲಂ ಕೂಡೆ ಪೋದಂ ।
ಮುಂತಪ್ಪಾಪಾನಿವೃದ್ಧಿಸ್ಥಿತಿಯನಜಿವರಾತ್ ಪೂರ್ವಸಂಸ್ಕಾರಕಲ್ಪಂ ॥ ೭

ಅಂತೀಮಿಥಿಳಾಪತಿಯಪ್ಪ ಪ್ರಹಾರವರ್ಮಂ ತನ್ನಾಪ್ತಮಿತ್ರಮಾಗಧೇಶ್ವರನಪ್ಪ ರಾಜಹಂಸನರಸಿ ವಸುಮತೀದೇವಿಯು ಸೀಮಂತಕ್ಕೆ ಪ್ರಿಯಮಂದೆಯುಂ ತನ್ನಿರ್ಬರ್ ಕುಮಾರರ್ ಸಹಿತಂ ಪುಷ್ಪಪುರಕ್ಕೆ ಪೋಗಲಲ್ಲಿ

ಮಾಳವನೃಪನೆಂಬ ಮಹೀ ।
ಪಾಳಂ ಮುಳಿದೆತ್ತಿ ಬಂದು ಮಾಗಧನೃಪನಂ ॥
ಸೋಲಿಸಲಂದು ಮದೀಯನೃ ।
ಪಾಳಂ ಮಾಳವನ ಕೆಯ್ಗೆ ಸಿಲ್ಕಿದನಾಗಲ್ ॥ ೮

ಅಂತು ಪ್ರಹಾರವರ್ಮಂ ಸಿಲ್ಕಿದೊಡೆ ಮಾಳವೇಶ್ವರನುಪಕಾರಕ್ಕೆ ಬಿಟ್ಟು ಕಳಿಪಲ್ ಬಟಿಕ್ಕಾತಂ ತನ್ನ ಕುಟುಂಬಂಬೆರಸು ನಿಜಜನಪದಕ್ಕೆ ಬರ್ಪಾಗಳ್

ದಾಯಾದ್ಯ ವಿಕಟವರ್ಮಂ ।
ದಾಯಂ ತನಗೆಂದು ಮಿಥಿಳೆಯೊಳ್ ಪಟ್ಟವನ ॥
ತ್ಯಾಯತದಿಂ ತಳೆದಿರ್ದಪ ।
ನೀಯಡೆಗಿನ್ನಾವ ಬುದ್ಧಿ ಪೇಟ್ ಮಿಥಿಳೇಶಾ ॥ ೯

ಅದಲ್ಲದೆಯುಂ, ನಿನ್ನ ಬರವಂ ಕೇಳ್ದಲ್ಲಿ ಸೈನ್ಯಮಂ ಕೂಡಿಕೊಂಡು ನಿನ್ನಂ ಕೊಲಲ್ ಬರುತಿರ್ದಪನೆಂದೊರ್ಬ ದೂತನಿದಿರಾಗಿ ಬಂದು ಪೇಳ್ವು ದುಂ ಪ್ರಹಾರವರ್ಮಂ ಬಿಟ್ಟರಣ್ಯಮಾರ್ಗದೊಳ್ ಪೋಪಾಗಳ್

ಶಬರಾಧಿಪರೆಲ್ಲರ್ ನೆರೆ ।
ದು ಬಂದು ಮುತ್ತಿಯು ಬಲವನಾಪಿಂ ಕನರ ॥
ಲ್ಕಬಲೆಯರತ್ತಿಭಯದಿಂ ಪಲ ।
ವು ಬಟ್ಟೆಯುಂ ಪತ್ತಿ ಪೋದರಿನ್ನೇವೇಳ್ವೆಂ ॥ ೧೦

ಎಂದು ಮತ್ತಮಿಂತೆಂದಳ್:—

ಅಂತು ಕಿರಾತಸಂತತಿ ಮುಟೀಯನ್ನೃಪಾಲಕನಾಪ್ತಸೈನ್ಯಮಂ ।
ತಿಂತಿಣಿಯುತ್ತರಣ್ಯಪಥದೊಳ್ ಕವರಲ್ ಬಟಿಕೆನ್ನ ಚಿತ್ತಮಿ ॥
ಭ್ರಾಂತಿಯಿನಂಜಿಯಾಂ ನೃಪಕನೀಯುಸಪುತ್ರನನೆತ್ತಿಕೊಂಡು ಪೋ ।
ದೆಂ ತರುಷಂಡಗುಲ್ಮಲತೆ ತೀವಿದಿಡುಂಕುಟಿಯೊಳೋಡಿಯಾಕ್ಷಣಂ ॥ ೧೧

ಅಂತೋಡಿಯಾತವೂಲಗ ಲ್ಕದೆಸೆಯೊಳ್ ಭೀತಿಯಿಂ ಕುಳ್ಳಿರಿರ್ಪಾಗಳ್

ಅತಿರೌದ್ರಂ ಕ್ರೂರದಂಷ್ಟ್ರಂ ಜ್ವಲಿತವಿಲಸದಂಗಾರನೇತ್ರಂ ಸಮುನ್ನ । ತಿಗತವಕ್ಷಃಕುಕ್ಷಿ ತೀಕ್ಷ್ಣಸ್ಫುಟನಖಮುಖಮುತ್ಕಂಚಿತಾಂಗಂ ನಟಿತ್ತೋ ॥ ನ್ನತಕರ್ಣಂ ಘೋರವಕ್ತ್ರಂ ಘನನಿನದದಿಂದಾರ್ದು ಪಾಯ್ದುತ್ತು ಸಿಂಹ । ಪ್ರತಿನಂ ಕಾಂತಾರದೊಳ್ ಪೆರ್ಬುಲಿ ಮುಳಿದವ ಟಿಂಬೆನ್ನನಾಗಳ್ ಕುಮಾರಾ ॥ ೧೨

ಅಂತು ಪುಲಿ ಪಾಯಾಲಾಂ ಬೆದಱಿ ಕೆಯ್ಯ ಮಗನಂ ಬಿಸುಡಲಾಮಗಂ

ಪಿರಿಯು ಕಪಿಲಾಶವಂ ಮುಂ ।
ದಿರಲದಱೊಡಲೊಳಗೆ ಭೀತಿಯಿಂ ಪೊಕ್ಕಂ ಭೂ ॥
ವರಸುತನಲ್ಲಿಗೆ ಪೆರ್ಬುಲಿ ।
ಭರದಿಂ ಪಾಯ್ದುತ್ತು ಕೋಪದಿಂ ಗರ್ಜಿಸುತುಂ ॥ ೧೩

ಅಂತು ಪುಲಿ ಪಾಯಲೊಡಂ,

ಕಾರಡವಿಯೊಳ್ ಬಾದಾವಿನ ।
ಪೇರೊಡಲೊಳ್ ಸುನ್ನಮುಂದು ಶಬರರ್ ಯಂತ್ರಂ ॥
ಕಾರದೆ ನಿಟ್ಟಂಬಂ ವಿ।
ಸ್ತಾರದಿನೊಲ್ದಿಟ್ಟರಾಗಳ್ ತ್ರಿಯಾಮ ಕಮವಿಂ ॥ ೧೪

ಅಳವಡಲೇಱಿಸಿಟ್ಟ ಸಂಭ್ರಾಂತ್ರದ ಬಲ್ಪಿನ ಬಿಲ್ ಸಿಡಿಲ್ದು ಪೆ ।
ರ್ಬುಲಿಯು ಪ್ರೇದಪ್ಪಿ ಗೋಣಿಚಿಮುರ್ಬಿಗನುಪ್ಪಿನಮೂರ್ಛೆ ಪಾಯ್ತರಲ್ ॥
ಪಲವೇಣನಾದಪ್ರೋಷ್ ವ ಬಿಯಿತಾಂ ಪ್ರಿಯಾನಪನೆಯ್ದು ಕಂಡು ಪೆ ।
ಪ್ಪಳಿಸಿ ತೆರಳ್ದನೊಂದು ಕಲ್ಗಾಗಳ್ ಶಿವಭಯಮಾಶಿಂಕದಿಂ ॥ ೧೫

ಅಂತಾನಲ್ಲಿಂ ತೆರಳ್ದು ಪೋಪಾಗಳೊರ್ಬ ತಾಪಸಕುಮಾರನಂ ಕಂಡು ತಚ್ಚಿತ್ರಮಂ ಪೇಳ್ದೊಂದೂರಂ ಸಾರ್ದೆನೆಂದು ಪೋಗುತಿರ್ಪಾಗಳ್

ಪಿರಿಯ ಕುಮಾರನನುಯ್ದುಂ ।
ಬುರುಹಾನನೆ ಮತ್ತನೂಜೆ ಪುಷ್ಕರಿಕೆ ಸುಟೇ ॥
ತರೆಯಾಗಿ ಬರ್ಪ್ಪವಂ ಕಂ ।
ಡುರಿನತ್ತೆನ್ನೊಡಲೊಳಂದು ದುಃಖಜ್ವಲನಂ ॥ ೧೬

ಅಂತೊರ್ಬ ಪಟುಘಟಸಹಿತಂ ಬರುತಿರ್ಪ ಪುಷ್ಕರಿಕೆಯುಮಾಂ ಕಾಣಲೊಡಂ

ಪಾತಕಿಯುಂ ನಿಕೃಷ್ಟೆಯುಮನಾಥೆಯುಮಾತ್ಮವಿಮೋಹಿಯುಂ ಮಹಾ ।
ಘಾತುಕಿಯುಂ ಸ್ವಬಂಧುಜನದೂರಿತೆಯುಂ ಖಳೆಯುಂ ದುರಂತದುಃ ॥
ಖಾತುರೆಯುಂ ಕುಮಾರಕನನೀಗಳೆ ನೀಗಿದ ಪಾಪಕರ್ಮೆಯುಂ ।
ಮಾತೆಯಿದೇಕೆ ಕಂಡೆಯೆನುತುರ್ವರೆಯೊಳ್ ಪೊರಳ್ದಿತ್ತತ್ಕ್ಷಣಂ ॥ ೧೭

ಅಂತವಳ್ ದುಃಖಿಸಲದನೆಂತಾನುಂ ಸಂತೈಸಿ ಬೞಿಕ್ಕೆಲೆ ನೀನೆತ್ತಿಕೊಂಡಿರ್ದ ಕುಮಾರಕನೇನಾದನೆಂದಾಂ ಕೇಳಲವಳಿಂತೆಂದಳ್:—

ಬರ್ಬರಳ್ ಪೋಗುತ್ತಿರಲಾ |
ನೊರ್ಬ ಕಿರಾತಂ ಭಯಂಕರಂ ಕಂಡೆನ್ನಂ ||
ಜಬ್ಬಿ ಕುಮಾರಕನಂ ನಿಜ |
ದೋರ್ಬಲದಿಂ ಸೆಳೆದು ಕೊಂಡು ಗುಹೆಯೊಳ್ ಪೊಕ್ಕಂ || ೧೮

ಅಂತವಂ ಪುಗಲೊಡಂ ಮತ್ತೊರ್ಬಂ ಬಂದೆನ್ನಂ ಪಿಡಿದು ತನ್ನಿರ್ಕೆಗೆ ಕೊಂಡು ಪೋಗಿ

ತನಗೆ ಸತಿಯಾಗವೇೞ್ಕುಂ |
ದನುನಯಮೊಲ್ದೆನ್ನನಲೆಯಲಾನೊಲ್ಲದಿರಲ್ ||
ಮುನಿದಾ ಕಿರಾತನೆನ್ನಂ |
ವನದೊಳ್ ಕೊಲಲೆಂದು ಮನದೊಳನುಗೆಯ್ವಾಗಳ್ || ೧೯

ಎನ್ನೊಡನಿರ್ಪಾತಂ ಪ್ರ |
ಚ್ಛನ್ನತೆಯಿಂ ಬಂದು ತತ್ಕಿರಾತನ ಶಿರಮಂ ||
ತನ್ನಸಿಯಿಂದರಿದು ಬೞಿ |
ಕ್ಕೆನ್ನಂ ವಧುವಾಗಿ ಮಾಡಿಕೊಂಡನಲಂಪಿಂ || ೨೦

ಬೞಿಯಿಂದೀತಂ ಪ್ರಹಾರವರ್ಮನಿಂ ಮನ್ನಿಸಿ ಕೊಳ್ಳ ಭೃತ್ಯನೆಂದು ಪೇೞ್ದೊಡವರ್ಗಂ ಹರ್ಷತೆಯಾಗಲನಂತರಂ,

ನಮ್ಮೊಡೆಯನಿರ್ದ ತಾವಿಂ |
ಗುಮ್ಮಹದಿಂ ಪೋಪೆನೆಂದು ಮತ್ಪತಿಯೆನ್ನಂ ||
ಸಮ್ಮಾನಿಸಿಯೊಡಗೊಂಡು |
ಯ್ದುಮ್ಮದದಿಂ ಮಾತೆ ಕೇಳದೆನಗಾದ ಹದಂ || ೨೧

ಎಂಬುದುಮಾನುಂ ನಿನ್ನಂತೆಯಾದೆನೆಂದೆನಗಾದವಸ್ಥೆಯನವಳ್ಗೆ ಪೇೞ್ದನಂತರಂ ಆವಿರ್ವರುಂ ಪ್ರಹಾರವರ್ಮನುಂ ಪ್ರಿಯಂವದೆಯುಮಿರ್ದೆಡೆಗೆಯ್ದಿ,

ಧಾತ್ರೀಶನಂ ತದೀಯಕ |
ಳತ್ರಮುಮಾಮಿರ್ವರೆಯ್ದಿ ಕಡುಪಿಂದಾಗಳ್ ||

ಪುತ್ರವಿಯೋಗದ ಶಿಖಿಯಿಂ ।
ಶ್ರೋತ್ರಂಗಳನುರಿಪಿ ಕಳೆದಿವೆಚ್ಚರಿಯಾಗಲಿ ॥ ೨೨

ಅಂತವರಿರ್ಬರ್ ಕುಮಾರರ್ ಪೋದರೆಂಬುದನಱಿದು ಕಡುದುಃಖದಿಂ ಪ್ರಹಾರವರ್ಮನಲ್ಲಿಂ ತಳರ್ದು ಸಹ್ಯದೇಶಮಾರ್ಗದೊಳ್ ಮಿಥಿಳಾಪುರಕ್ಕೆ ಪೋಗುತಿರ್ಪಾಗಳ್

ಸಂಹಾರವರ್ಮತನಯಂ ।
ಬಾಹಾಬಲದಿಂದೆ ಮಿಥಿಳೆಯೊಳ್ ಪಟ್ಟವಸಾಂ ॥
ಕಾಹನಕೆ ಬಂದನುದ್ಧತ ।
ಸಾಹಸದಿಂದಂ ಪ್ರಹಾರವರ್ಮನೊಳಾಗಳ್ ॥ ೨೩

ಅಂತು ಬಂದು,

ಜವದಿಂ ಮುಳಿದಾಗಳ್ ವಿಕ ।
ಟವರ್ಮನಾಪರಿಂ ಪ್ರಹಾರವರ್ಮನ ಸರ್ವ ॥
ಸ್ವಮನಂದು ಪಿಡಿದು ತನ್ನು ।
ತ್ಸವದಿಂ ಮಿಥಿಳಾಪುರಕ್ಕೆ ಬಂದನಲಂಪಿಂ ॥ ೨೪

ಅಂತು ಕೊಂಡು ಬಂದು ಪ್ರಹಾರವರ್ಮನಂ ಪ್ರಿಯಂವದೆಯುಂ ವಿಕಟವರ್ಮಂ ಸೆಱೆಗೆಯ್ದನೆಂದು ಮತ್ತಮಿಂತೆಂದಳ್:—

ಇಂದುಮುಖಿ ಪೂರ್ಣಕುಚೆ ಮ ।
ನ್ನಂದನೆ ಪುಷ್ಕರಿಕೆ ಕಲ್ಪಸುಂದರಿಯುಂ ಪೆಂ ॥
ಪಿಂದಂದೋಲಗಿಸುತ್ತಂ ।
ಬೆಂದೊಡಲಂ ಪೊರೆಯುತಿರ್ಪಳ್ ನೋಡೀಗಳ್ ॥ ೨೫

ಅಂತೀವಿಕಟವರ್ಮನರಸಿಯಪ್ಪ ಕಲ್ಪಸುಂದರಿಯುನೆನ್ನ ಮಗಳ್ ಪುಷ್ಕರಿಕೆ ಸೇವೆಗೆಯ್ವ ಕಾರಣಮಿಾಪ್ರಾಣಮಿಂ ತೊಲಗಲಾಱದೆ,

ಈಪರಿಯುವಸ್ಥೆಗಾಂ ಪರಿ ।
ತಾಪಂಬಟ್ಟಖಿಳಸೌಖ್ಯಮಂ ತೊಱೆದೀಗಳ್ ॥
ತಾಪಸಿಯಾಗಿರ್ದಪೆನಿಂ ।
ದಾಪರಿಣತವಯಸೆ ಪೇೞ್ದು ಮತ್ತಿಂತೆಂದಳ್ ॥ ೨೬

ಆಕಪಿಲಾಶವದೊಳ್ ಪೊ ।
ಕ್ಕಾಕುವರಂ ಸುಖದೊಳಿರ್ದನಾದೊಡೆ ನಿನ್ನಂ ॥
ತಾಕಾರಪೂಜ್ಯನಾಗಿ ನಿ ।
ಜಾಕೃತಿಯಂ ತಳೆವನೆಂದು ಶೋಕಿಸುತಿರ್ದಳ್ ॥ ೨೭

ಮತ್ತಂ,

ಅನುನಯದಿನಾಕುಮಾರಕ ।
ನಿನಿತುದಿನಂ ಸುಖದೊಳಿರ್ದನಾದೊಡೆ ತನ್ನೀ ॥
ಜನನೀಜನಕರ್ಗತಿಬಂ ।
ಧನಮೇಕಾದಪುದು ಪೆರ್ಚುವನೆ ದಾಯಾದ್ಯಾ ॥ ೨೮

ಎಂಬುದುಂ,………………

ತೊರೆಯೆ ಕುಚಂಗಳುಣ್ಮೆ ಪುಳಕಾಂಕುರಮುರ್ಬೆ ಮುದಶ್ರುಗಂಟಲಂ ।
ಸೆರೆ ಬಿಗಿಯಲ್ ನಿಜಾಕೃತಿ ಕರಂ ನಮುವೇಜೆ ಮುಖಂ ಪ್ರಸನ್ನಮಂ ॥
ಬಿರಮೆನಿಸಲ್ ಮನಂ ವಿನಯದಿಂ ಗುಡಿಗಟ್ಟೆ ಮಹಾಪ್ರಮೋದಮು ।
ಬ್ಬರದೊಳತೀವಸಂಭ್ರಮದೊಳನ್ನನಲಂಪಿನೊಳಾಕೆಯಪ್ಪಿದಳ್ ॥ ೨೯

ಅಂತು ಸಂತಸದಿಂದಪ್ಪಿಯನ್ನ ಮುಖಮಂ ನೋಡ್ಪುದುಮಾನಿಂತೆಂದೆಂ:-

॥ ಮಲ್ಲಿಕಾಮಾಲೆ ॥

ವಿಕಟಮರ್ಮನ ಮುಂಡಮಂ ಪೊಣೆಸೆಂಡನಾದಿ ಜಗಕ್ಕೆ ಕಾ।
ತುಕಮನಿತ್ತು ಬಟುಕ್ಕೆ ಮತ್ಪಿತೃಮಾತೃಮಂ ಧುಜದರ್ಪನಿಂ ॥
ಸಕಳರಾಜ್ಯಸುಖಕ್ಕೆ ಭಾಜನಮಪ್ಪ ಪೋಲ್ ಮಿಗೆ ಮಾಳ್ಪೆನಂ ।
ಬಿಕೆಯಿದಂ ಪ್ರಕಟಕ್ಕೆ ತಾರದೆ ನೀತಿಯಿಂದಿಲು ನಿಶ್ಚಯಂ ॥ ೩೦

ಎಂದು ಮತ್ತಂ,

† ಕಪಿಲಾಶವದೊಳ್ ಭಯದಿಂ ।
ದೆ ಪೊಕ್ಕನೆಂಬಾಕುಮಾರನಾಂ ಬಲಿಕಲ್ಲಿಂ ॥
ದುಪಚರಿಸಿಯೆನ್ನನೊರ್ಬಂ ।
ತಪಸ್ವಿ ಕೊಂಡುಯ್ದನೆಬ ಕಥಾವೃತ್ತಾಂತಂ ॥ ಈ ಗ ಪ ದ್ಯ ವು ಪ್ರತಿಯು ಕೊನೆ ಯೆಂದು ಬಿಳಿಯ ಪುಸ್ತಕದಲ್ಲಿ ಪಕ್ಕದಲ್ಲಿ ಬರೆದಿದೆ.

ಅಂ ಬಂದಿರ್ದದನೊಲ್ದು ।
ನ್ನಂಬಿಕೆಯುಂ ಜನಕನುಂ ದಿಟಕ್ಕಱಿಯದವೋ ॥
ಲಿಂಬಿನೊಳೆಸಗುಗೆ ಕಾರ್ಯವು ।
ನಂಬುಜಮುಖಿ ವಿಕಟವರ್ಮನಱಿಯದ ತೆಱದಿಂ ॥ ೩೧

ಎಂದಾಂ ಪೇೞ್ವುದುಮಾಕೆ ಸಂತೋಷಂಬಟ್ಟು ಮುಹುರ್ಮುಹುರಾಲೋಕನಂಗೆಯ್ದು,

ಕೂಡಿತೊಲವಿಂ ಪ್ರಿಯಂ ನದೆ ।
ಮಾಡಿದ ನೋಂಪಿಯ ಫಲಂ ದಲೆಂದಂದೆನ್ನಂ ॥
ನೋಡಿ ನಿಜಹರ್ಷದಿಂ ಮಾ ।
ತಾಡಿಸುತುಂ ಮಠದೊಳೊಲ್ದು ಸುಖಮಿರ್ದಾಗಳ್ ॥ ೩೨

ದಿನಸತ್ರೀ ರವಿರತ್ನಕುಂಭದಿನಲಂಪಿಂದೊಲ್ಮೆಯಿಂ ಪಶ್ಚಿಮಾ ।
ರ್ಣವಪಾನೀಯಮನೊಯ್ದು ಸಿನ್ದು ದಯಶೈಲಮಾಸಕಂಪಲ್ಲಿ ತುಂ ॥
ಬುವ ಪ್ರೀತ್ಯೊಂದು ಮಹೋಗ್ರಕಾಲಮುಕರಂ ತತ್ಕುಂಭಮಂ ಕಚಿ ಪ್ರೋ ।
ಯ್ತವಳಂ ಕೂಡಿಯೆನಲ್ಕೆ ಪಂಕಜಸಖಂ ಪೃಕ್ಕಂ ಪ್ರತೀಚ್ಯಬ್ಧಿಯಂ ॥

ಅಂತು ಸೂರ್ಯಾಸ್ತಮಾನಮಾಗಲೊಡನೆನಗೊಂದು ಪಱಿವ ತಟ್ಟಿಯುಂ ಮಾಠದ ಗೊಂಟಿನೊಳ್ ಪಾಸಿ ಕೊಟ್ಟೊಡಾಂ ವಿಶ್ರಮಿಸಿಯಾರಾತ್ರಿಯಂ ಕಳೆಯೆ,

ಉದಯಗಿರೀಂದ್ರಮೆಂಬ ಪ್ರಾಸಕಂಭದಿನಾರ್ಮ ಗಭಸ್ತಿಕೇಸರಂ ।
ಬಿದಿರ್ದು ಕರಂಗಳಂ ನೆಗಪಿ ಮುನ್ನರುಣೋದಯವಿಸ್ಫುಲಿಂಗಮಂ ॥
ಕೆದಱಿ ತಮಿಸ್ರದೈತ್ಯನೊಡಲಂ ಬಗಿದಾಕಮಳಾನುಮೋದದಿಂ ।
ದುದಯಿಸಿದಂ ದಿನಾಧಿಪನ್ನಕೇಸರಿಧಾತ್ರಹರಾತ್ಮಕಂ ಕರಂ ॥ ೩೩

ಅಂತುದಯವಾಗಲುದಯಕವರ್ಮನುಂ ತೀರ್ಚಿ ಕುಳ್ಳಿರ್ದ ಸಮಯದೊಳ್

ಮುಡಿಯುಂ ಸೆಕ್ಕಿದ ಪುಷ್ಪಗಂಧಮಳಕಾನೀಕಕ್ಕೆ ಕಸ್ತೂರಿ ಸಾ ।
ಲಿಡುವಂತಿಕ್ಕಿದ ಮಿಕ್ಕ ಕಂಪು ಕುಚದೊಳ್ ಶ್ರೀಖಂಡನುಂ ಚೆಲ್ವಿನಿಂ ॥
ತೊಡೆದಾಮೋದಮನಾರತಂ ನೆಲಸೆ ಭೃಂಗಶ್ರೇಣಿ ತನ್ನೊಳ್ ಸರಂ ।
ಗುಡುತಿರ್ದ್ದಿರ್ಪಿನಮಂದು ಪುಷ್ಕರಿಕೆ ಬಂದಳ್ ಸಂತತೋತ್ಸಾಹದಿಂ ॥ ೩೪

ಅಂತು ಕಲ್ಪಸುಂದರಿಗೆ ಶೃಂಗಾರಂಗೆಯ್ದು ಬಂದ ಪುಷ್ಕರಿಕೆಗೆ ಮಾದ್ರಿಯೆನ್ನಂ ತೋ

ಈತಂ ಮನ್ಮಥಪತಿಯ ತನು |
ಜಾತಂ ಕಾನನದೊಳಾಂ ಬಿಸುಟ್ಟೆಡೆಯೊಳ್ ನಿ ||
ರ್ಭೀತಿಯಿನುಜ್ಜೀವಿಸಿ ದೇ |
ಶಾಂತರಮುಖನಾಗಿ ಬಂದನಿದು ದಲ್ ಪುಣ್ಯಂ || ೩೬

ಎಂದು ಪೇಳ್ವುದುಮಾಪ್ರಷ್ಪರಿಕೆಯೆನ್ನಂ ನೋಡಿ
ಮಿಕ್ಕ ಪಸಿವಿಂ ಚಕೋರಿಗ |
ಳಟ್ಟಿಱದಿಂ ಪಸರಿಸಿರ್ದ ಬೆಳ್ದಿಂಗಳಂನು ||
ಡಟ್ಟಸಲಾಱದುಗುೞ್ದಪು |
ವಕ್ಕುಮೆನಲ್ ಸುರಿದಳಬಳೆ ಬಿಸುಗಣ್ಬನಿಯಂ || ೩೭

ಅಂತು ಶೋಕಿಸಲವಳಂ ಸಂತೈಸಿಯನಂತರಮುಪಹಾರವರ್ಮಂ ಸುಖದೊಳಿರ್ದಪನೆಂಬ ಸಂತೋಷಮನಪ್ಪ ಮಾಡಿ ಬೞಿಕಿಂತೆಂಗೆಂ:—

ನಿನ್ನೊಡೆಯಂ ಸುರೂಪಿಯೆ ಗುಣಜ್ಞನೆ ಕಾಮಕಳಾವಿಳಾಸಸಂ |
ಪನ್ನನೆ ಅಂಗಸೌಷ್ಠವಿಯೆ ನೀತಿಸಿಮಾಸನೆ ವಿಕ್ರಮಪ್ರಭಾ ||
ಪ್ರೋನ್ನತಬಾಹುಸಾಹಸಿಯೆ ಸಜ್ಜನಸಂಗಿಯೆ ದೇವತಾರ್ಚನಾ |
ಸನ್ನನೆ ಪೇೞಿಪ್ರಷ್ಪರಿಕೆ ಕೌತುಕಮಪ್ಪಿನೆಗಂ ವಿಳಾಸಿನೀ || ೩೮

ಸುರತವಿನೋದದಿಂ ವಿಕಟವರ್ಮನೃಪಂಗೆ ವಿದಗ್ಧ ಕಲ್ಪಸುಂ |
ದರಿ ಮಿಗೆ ಕೂರ್ಪಳೇ ನಿನಗೆ ತನ್ನನುತಾಪಮನೇನನಾದೊಡಂ ||
ಪರಮರಹಸ್ಯದಿಂದುಸಿರ್ವಳೇ* ನಿಜಮಂದಿರದೊಳ್ ಸ್ವತಂತ್ರಸಾಂ |
ದರದೊಳಗಿರ್ಪಳೇ ಪದೆದು ಪೇೞೆನಗಂಬುಜಲೋಲಲೋಚನೇ || ೩೯

ಎಂಬುದುಮವಳಿಂತೆಂದಳ್:—

ಧರೆಗೆ ಕುರೂಪಿ ದುರ್ಗುಣಿ ಮನೋಭವಕೇಳಿನಿಕೃಷ್ಟನಂಗದು |
ರ್ಧರನತಿದುರ್ವಿನೀತನನಿಶಂ ವನಸೈರಿಭಸಾಮ್ಯವಿಕ್ರಮಂ ||
ವಿರುಪಮದುಷ್ಟಸಂಗಿ ಬಹುಮೂರ್ಖನಬೋಧಿತ ದುರ್ವಿವೇಕಿ ದು |
ಶ್ಚರಿತನದಾವನೀವಿಕಟವರ್ಮನವೋಲ್ ಸುಕುಮಾರಶೇಖರಾ || ೪೦

ವನಜಮುಖಿ ಕಲ್ಪಸುಂದರಿ |
ಯನುದಿನಮಾವಿಕಟವರ್ಮನಂ ಕಾಣಲೊಡಂ ||

ಕಿನಿಸಿಂವಳೇಕೆಂದಱಿಯೆಂ ।
ತನಗವನೊಳ್ ಮೋಹಮೆಂಬುದಿಸಿತಂ ಕಾಣೆಂ ॥ ೪೧

ಎಂಬುದುಂ ಮತ್ಪಿತೃಮಾತೃಬಂಧನಮೋಕ್ಷಕ್ಕಿದೆ ಕಾರಣಮೆಂದವಳ್ಗಿಂತೆಂದೆಂ:—

ಎನ್ನಭಿಮತಮಿದು ನೀಂ ಪೋ ।
ಗಿನ್ನುಂ ಬೇಳ್ಪನಿತು ಕೋಪಮುಂ ನೃಪನೊಳ್ ತ ॥
ತ್ತನ್ನಿಗೆ ಪುಟ್ಟಿಸಿ ಮತ್ತಂ ।
ನಿನ್ನಱಿವಂ ತೋರ್ಪುದೆನಗೆ ಕಮಲದಳಾಕ್ಷೀ ॥ ೪೨

ಎಂಬುದುಮವಳಂತೆಗೆಯ್ವೆನೆಂದು ಬೀೞ್ಕೊಂಡು ರಾಜಭವನಕ್ಕೆ ಪೋಗಿ ಮಗುೞ್ದೆರಡುಮ್ಮೂಱು ದಿನಕ್ಕೆ ಬಂದು ನೀಂ ಪೇೞ್ದಂತೆ ಕಲ್ಪಸುಂದರಿಯೊಳಿಂತೆಂದೆನೆಂದಳ್:—

ಕಳ್ಳಗೆ ಕಲ್ಪವಲ್ಲಿ ರಸಕುಷ್ಟಿಗೆ ಚಂದನದಣ್ಪು ರೋಗಿಗಿಂ ।
ಪುಳ್ಳ ಸುಭೋಜನಂ ಕಪಿಗೆ ನಿಸ್ತುಲಮೌಕ್ತಿಕಹಾರಮುಷ್ಟ್ರಕಾ ॥
ಲ್ಪಳ್ಳಿಗೆ ಪಂಡಿತೋಕ್ತಿ ಮಿಗೆ ಮೂರ್ಖಕುರೂಪನೃಪಂಗೆ ಕಾಮಿನೀ ।
ಸಲ್ಲಲಿತಪ್ರಸಂಗಮೊಸೆದಿರ್ಪುದು ಚಿತ್ರಮಿದಲ್ತೆ ಧಾತ್ರಿಯೊಳ್ ॥ ೪೩

ನಿಸದಮಿಳಾತಳಕ್ಕೆ ಕರಕೌಶಲಮಂ ಮಿಗೆ ತೋಱಲೆಂದು ಭಾ ।
ವಿಸಿ ಪ್ರಮುಹಸ್ತದಿಂ ತರುಣಿಯಾಕೃತಿಯಂ ಸಮುದಾಯಶೋಭೆಯಂ ॥
ಪೊಸತೆನಿಪಂದದಿಂ ಬರೆದು ಜೀವಮನೋವದೆ ತೀವಿ ಪದ್ಮಜಂ ।
ಬಿಸುಟನದೇಕೆ ಮತ್ತೆ ಪಟಿಗಾಲದ ಕೋಟ್ಕೆಸಱೊಳ್ ಜಡಾತ್ರಯಂ ॥ ೪೪

ಎಂಬುದುಮಾಕಲ್ಪಸುಂದರಿಯೆನ್ನ ಮನಮನಱಿದು ತನ್ನನುತಾಪಮಂ ಪೇೞಲೆಂದಿಂತೆಂದಳ್:—

ಪಾರಿಜಮುಖಿಯೆನ್ನಯ ಸಂ ।
ಸಾರಂ ಮರ್ಕಟನ ಕೆಯ್ಯ ಪೂಮಾಲೆಯು ವಿ ॥
ಸ್ತಾರಮೆನಲ್ಕಾಯ್ತೆನುತುಂ ।
ಭೋರೆನೆ ಬಿಸುಸುಯ್ದು ತನ್ನ ಪತಿಯುಂ ಬಯ್ದಳ್ ॥ ೪೫

ಅಂತು ಪತಿಯುಂ ಬಯ್ವುದುಮಾನಿಂತೆಂದೆಂ:—

ಕಮಳಾಯತಮುಖಿ ನಿಂ ಪೊಱೆ ।
ದ ಮಲ್ಲಿಕಾಲತೆಯ ಪೂಗಳಂ ನಿನ್ನಧಿಪಂ ॥
ದಮಯಂತಿಗೆ ಮುಡಿಸಿದನೆ ।
ನ್ನ ಮುಂದೆ ಕೆಯ್ಯಿಕ್ಕಿಟ್ಟ ಮೋಹದಿಂದುಪವನದೊಳ್ ॥ ೪೮

ಎಂಬುದುಮಾಕಲ್ಪಸುಂದರಿ ಕಡುಮುಳಿದು,

ಈವಿದ್ರೂಪಿಯ ಸಂಗಮ ।
ನಾವ ದಿನಂ ಬಿಟ್ಟು ಸುಖದೊಳಾನಿರ್ಪೆನಲೇ ॥
ಭಾವಕಿ ಪೇೞೆಂದಾಕೆ ಮ ।
ಹಾವಸ್ಥೆಯನೆಯ್ದುವಂತಿರೆಸಗಿದೆನಾಗಳ್ ॥ ೪೯

ಎಂದು ಪುಷ್ಕರಿಕೆ ಬಂದು ಪೇೞಲಾಂ ಮತ್ಕಾರ್ಯಸಿದ್ಧಿಯಪ್ಪಂತು ಬೞಿಸಂ,

ಅವಳುನ್ಮಾದಿನಿಯಪ್ಪವೋಲ್ ನೃಪ ಮದೀಯಾಕಾರಮಂ ಪುಷ್ಪಸಂ ।
ಭವಮಂ(?) ದರ್ಶನಮಾತ್ರಮೋಹನತೆಯಂ ಸೀಮಂತಿನೀಚಿತ್ತವ ॥
ಶ್ಯವನೊಂದುಜ್ಜ್ವಲನವ್ಯದಿವ್ಯಪಟದೊಳ್ ಸರ್ವಾಂಗಸೌಂದರ್ಯದೊ ।
ಪ್ಪವನಾಂ ಚಿತ್ರಮೆನಲ್ಕೆ ಕೂರ್ತು ಬರೆದೆಂ ಷಡ್ವರ್ಣಸಂಪೂರ್ಣದಿಂ ॥

ಅದೆಂತೆನೆ:—

ನಗೆಮೊಗಮುಂ ಸಮುನ್ನತಭುಜಂಗಳನಜ್ಜಕರಂಗಳಂ ನೆಗ ।
ೞ್ದಗಲ್*ದುರಮಂ ಮೃಗಾಧಿಪಕೃಶೋದರಮಂ ದೃಢಪೀವರೋರುಜಂ ॥
ಘೆಗಳನತೀವಕೋಮಳಪದದ್ವಯಮಂ ಸಮುದಾಯಶೋಭೆಯಂ ।
ಸೊಗಸೆಸೆವಂತಿರೊಲ್ದು ಬರೆದೆಂ ಕಡುಕೂರ್ತು ಮದೀಯಮೂರ್ತಿಯಂ ॥

ಅಂತು ಬರೆದ ಚಿತ್ರಪಟಮಂ ಪುಷ್ಕರಿಕೆಯ ಕೆಯ್ಯೊಳ್ ಕಲ್ಪಸುಂದರಿಗೆ ಕಳಿಪಲವಳಾಪಟಮಂ ತೋಱಿ ಮಱುದಿನಂ ಮಗುೞ್ದು ಬಂದೆನ್ನೊಳಿಂತೆಂದಳ್:—

ಆಹಿಮಬಿಂಬರಶ್ಮಿಮುಖಿಯೊರ್ಬಳ್ ಕೂರ್ತು ವಿನೋದದಿಂ ಲತಾ ।
ಗೇಹದೊಳಿರ್ದೊಡೊಂದಿತು ರಹಸ್ಯದ ಪೊೞ್ತನುತೆಯ್ದಲಂತವಳ್ ॥
ಮೋಹದೊಳಂತಿರಲ್ಕೆ ಕರೆಯಲ್ ಪದೆದಾಂ ಬೞಿಕಿತ್ತೆನೊಲ್ದು ಸಂ ।
ಮೋಹನಪಾತ್ರಮಂ ಸ್ಮರತನುತ್ರಮನಾಕೆಗೆ ನಿನ್ನ ಚಿತ್ರಮಂ ॥ ೫೦

ಅಂತು ಕುಡಲೊಡಂ,

ಗಳಿಲನೆ ಕಾಂತೆ ಚಿತ್ರಪಟದೊಪ್ಪವನೀಕ್ಷಿಸಿಯಾಗಳೂರ್ವರದಲಿ ।
ಪುಳಕಿತೆಯಾಗಿ ಕಂಪಿಸಿ ಬೆಮರ್ತಳಾನಸು ಗೆತ್ತು ಲಜ್ಜೆ ಕೈ ॥
ಗಳೆಯ ಕಲಾಪವೊಯ್ಯನೆ ಸಡಿಲ್ದು ಕರಂ ಮರವಟ್ಟು ಚಿತ್ತದೊಳ್ ।
ತಳವೆಳಗಾಗಿ ಮೆಯ್ಮರೆದಳಂತುಟನೆನ್ ನಿಜಚಿತ್ರವಿಭ್ರಮಂ ॥ ೫೧

ಅಂತು ನೋಡಿ,

ಇದು ಶೃಂಗಾರರಸ ಸೀಮೆಯೋ ಇದು ಮನೋಜಾತಂಗೆ ಮೇಲಾಗಿಯೊ ।
ಡ್ಡಿದ ಮಾಱುಂಕವೊ ಮೋಹಿವಂಗನೆಯರೊಳ್ ಕಾಮಾಗ್ನಿಯಂ ವರ್ಧಿಸ ॥
ಲ್ಕೆದಯಂಗೆಯ್ದ ವಸಂತಮೂರ್ತಿಯೊ ದಿಟಂ ಪೇಳೆಂಬಿನಂ ಕೂರ್ತು ನೋ ।
ಡಿದಳಬ್ಜಾನನೆ ನಿನ್ನ ಚಿತ್ರಪಟಮಂ ನಟ್ಟಾಲಿ ಬೀಳ್ವನ್ನೆಗಂ ॥ ೫೨

ಅಂತೆವೆಯಿಕ್ಕದೆ ನೋಡುತ್ತಿ*ಂದೆಂದಳ್:—

ತೊಳಗುವ ತೋರಕಣ್ಮಲರ್ಗಳುನ್ನತಪೂರ್ಣವಿಶಾಲವಕ್ಷಮು ।
ಜ್ಜ್ವಳತರದೀರ್ಘಬಾಹು ಹರಿಮಧ್ಯಮನೂನಲಸತ್ಕಟೀತಟಂ ॥
ತಿಳಿಪೊಡಿದಲ್ತೆ ಸತ್ಪುರುಷಲಕ್ಷಣಮೆಂಬ ಕವಿಪ್ರಸಿದ್ಧಿ ಕೇ ।
ಳ್ಕೆಲೆಯೆನಿಸಿತ್ತೆನುತ್ತಬಲೆ ಚುಂಬಿಸಿದಳ್ ನಿಜಮೂರ್ತಿಚಿತ್ರಮಂ ॥ ೫೩

ಅಂತು ಚುಂಬಿಸಿ,

ಮದನಂ ತನ್ನಧಿದೈವದಾಕೃತಿಯನೊಲ್ದಾರಾಧಿಸಲ್ಕೆಂದು ಚಿ ।
ತ್ರದ ರೂಪಂ ಬರೆವಂಜೆ ಮತ್ತೆ ರತಿ ತತ್ಸೌಂದರ್ಯಮಂ ಕಂಡು ಮೋ ॥
ಹವಗುರ್ಬಿಂದಸುವೊಯ್ದಳಾಬೊಡವಮಿಂದಾಂ ರೂಪುಗೆಟ್ಟಪ್ಪಿನೆಂ ।
ದಿವನಂ ವಿರ್ತಳದೊಳ್ ಪ್ರತಿಷ್ಠಿಸಿದನೆಂದಾಕಾಂತೆ ಮುಂಡಾಡಿದಳ್ ॥ ೫೪

ಅಂತು ಮುಂಡಾಡಿಯೆನ್ನ ಮುಖಮಂ ನೋಡಿಯಿಂತೆಂದಳ್:—

ಈಕಾಂತಮೂರ್ತಿ ಮಾನವ ।
ಲೋಕದೊಳಿಲ್ಲೆಂತು ನಿನಗೆ ಸಾರ್ದತ್ತಬಲಾ ॥
ನೀಕತೆನುವಾಕ್ಯಚಿತ್ತವ ।
ಶೀಕರಣಮೆನಿಪ್ಪ ಚಿತ್ರಮೆಲೆ ಪುಷ್ಕರಿಕೇ ॥ ೫೫

ಎಂಬುದುಮಾನಿಂತೆಂದೆಂ:—

ದೇವಿಯರಿಂತಪೇಕ್ಷಿಸುವಿರಾವರೊಳೆ ಚಿತ್ರದ ರೂಪಿನಾತನಂ ।
ಭಾವಕನಂ ಕಳಾನಿಳಯನಂ ಪದೆದಿಲ್ಲಿಗೆ ತಂದು ತೋರ್ಪೆನೆಂ ॥
ದಾವಧುವಿಂಗೆ ಪೇಳಲವು ಪೋಗದ ಪೂರ್ವಮದಲ್ಲವಿದೋರ್ಡಿಂ ।
ತೀವಪ್ರ ತೋರ್ಪುದಾದೊಡತಿಭಾಗ್ಯಮೆನುತ್ತವಳೆನ್ನನಪ್ಪಿದಳ್ ॥ ೫೬

ದ್ವಿಪನಿಭಯಾನೆ ಪುಷ್ಕರಿಕೆ ತತ್ಸುಭಗಂ ಸ್ಮರಮೂರ್ತಿ ಸೂರ್ಯನಿಂ ।
ದಪರಗಿರೀಂದ್ರಮಸ್ತಕಮನೆಯ್ದುವೊಡಂ ಕಡುಮುಳಿರ್ನೊಳ್ ತಳ ॥
ರ್ತಪನಮಧ್ಯದೊಳ್ ಮೆಱೆವ ಪುಷ್ಪಲತಾಭವನಕ್ಕೆ ಬಂದು ಸ ।
ತ್ಕೃಪೆಯನಲುಪಿಸಿಂದೆನಗೆ ತೋರ್ಪುದು ಬೇಟ್ಪೆನಿವಂ ತಳೋದರೀ ॥ ೫೭

ಎಂಬೆನ್ನಂ ಕಳಿಪಿವಳೆಂದು ಪುಷ್ಕರಿಕೆ ಪೇಳಿಲಾಂ ಮನದೊಳ್ ಗುಡಿಗಟ್ಟಿ ಕಲ್ಪಸುಂದರಿ ಪೇಳ್ದ ಸಂಕೇತಸ್ಥಾನಕ್ಕೆ ಪೋಪೆನೆಂಬಾಗಳ್.

ಕಮಳಮುಖಿಮಂಗಸಂಗ ।
ಕ್ರಮಮಂ ಕಣ್ಣಾಱೆ ನೋಡಲಾಱದ ತೆಱದಿಂ ॥
ಕಮಳಸಹಾಯಂ ಪದೆದ ।
ಸ್ತಮಾನಗಿರಿಗೆಯ್ದಿದಂ ನೃಪಾಲನುಪೊಜಾ ॥ ೫೮

ಅಂತಸ್ತಮಾನನಾಗಲೊಡಂ,

ಪಸಿವ ಚಕೋರಿಗಳ್ ದ್ವಿಜಶರೀರಿಗಳೆಂದೆಱೆಯುತ್ತೆ ಸಂಜೆ ಭಾ ।
ವಿಸಿ ಪೊಸಜೊನ್ನಮಂ ಸಿಶೆಯು ಕರ್ಪನಿತ್ರಿಲ್ಲವ ಮಾಟ್ಕೆಯಿಂದೆ ಶೋ ॥
ಧಿಸಲವು ಶುದ್ಧಮಾಗೆ ಬಱಿಯಂ ಸಲೆ ಸಿಕ್ಕಿದ ಧಾರೆಪಟ್ಟಿಲೊಳ್ ।
ಸಸಿನಿರಿಸಿಟ್ಟಪೋಲ್ ಮೃದುಕಳಂಕದಿನೊಪ್ಪಿದುದಿಂದುಮಂಡಲಂ ॥ ೫೯

ಅಂತು ಚಂದ್ರೋದಯಮಾಗಲೊಡಂ,

ನೆಲೆನೋಡಲ್ ಸುರಗಂಗೆ ಕೋಟಿಮುಖದಿಂದೇೞ್ತಂದಳಲ್ತಲ್ತು ನಿ।
ರ್ಮಳದುಗ್ಧಾಂಬುಧಿ ಮೇರೆದಪ್ಪಿ ಕವಿದತ್ತಲ್ತಲ್ತು ಗೌರೀಶನು ॥
ಜ್ಜ್ವಲಸತ್ಪಂಚಕಮೂರ್ತಿ ಧಾರಿಣಿಯನಿಂದಪ್ಪಿರ್ದುದಲ್ತಲ್ತು ಕೇ ।
ಳಿಯೊಳ್ ಕೌತುಕಮಪ್ಪಿನಂ ಪಸರಿಸಿತ್ತಾನಂದಚಂದ್ರೋದಯಂ ॥ ೬೦

ಅಂತು ಬೆಳ್ದಿಂಗಳ್ ಪರ್ಬಲೊಡಂ ಚಂದ್ರಾಸ್ತಮಾನಮಪ್ಪನ್ನೆಗಮಿರ್ದನಂತರಂ ಪೋಪೆನೆಂದಿರ್ಪಾಗಳ್,

ಪರನಾರೀಸಂಗದೋಷಂ ವಿಷಮತರಮಹಾಬಾಂಧವದ್ರೋಹಮೆಂಬು |
ದ್ಧುರಮಪ್ಪೀದುರ್ಯಶಂ ಪ್ರೋದ್ಗಮಿಸುಗುಮಿಂದಲ್ಲದಿನ್ನೊಂದು ಕಾರ್ಯಂ ||
ಸ್ಥಿರಮಪ್ಪಂತಾಗಬೇಂದಾಂ ಪಲವುಪಾಯಗಳಂ ಚಿಂತಿಸುತ್ತಿರ್ದೆನಂ ನಿ |
ರ್ಭರನಿದ್ರಾಲಸ್ಯವಪ್ಪಾರಾತ್ರಿಯೊಳನುನಯದಿಂ ಮೋಹಿಸಿತ್ತಾಗಳೆನ್ನಂ ||

ಅಂತು ನಿದ್ರೆ ಬರಲೊಡಂ,

ಸಿತದೂರ್ವಾಂಕುರರಂಜಿತಾಗ್ರಮಕುಟಂ ಸೀಳ್ದೇಕದಂತಂ ಕರಾ |
ಗ್ರತಲೋದ್ಧೂತನಹೀಂದ್ರಬದ್ಧಪೃಥುಲೋದ್ಯತ್ಕುಕ್ಷಿ ಸಿಂದೂರಶೋ ||
ಭಿತಕುಂಭಂ ವಿಲಸದ್ಭುಜಂ ಮದಗಜೋದ್ಗಂಡಸ್ಥಳಾಶ್ಲಿಷ್ಟಷ್ಚರಘಂ |
ಕೃತಭೃಂಗಾವಳಿ ಪೆಂಪುವೆತ್ತಿಭಮುಖಂ ಮೆಯ್ದೋಱಿದಂ ಸ್ವಪ್ನದೊಳ್ ||

ಅಂತು ಸ್ವಪ್ನದೊಳ್ ತೋಱಿ ವಿನಾಯಕನಿಂತೆಂದಂ:—

ಲಲಿತತರಂಗಸಂಚಯದಿನುಣ್ಮಿನ ಬುದ್ಬುದಕೋಟಿಯಿಂ ಸಮು |
ಜ್ಜ್ವಲಶಫರೌಘದಿಂ ಕಮಳಕೈರವಸಂತತಿಯಿಂ ನಿರಂತರಂ ||
ಸಲೆ ಮೆಱೆದಿರ್ಪ ದೇವನದಿಯುಂ ಮಿಗೆ ಪ್ರಕ್ಕ ಕಲಂಕಲಾನವಳ್ |
ಮುಳಿದು ಮನುಷ್ಯನಾಗೆನುತೆ ಶಾಪಮನಂದೆನಗಿತ್ತಳುಗ್ರದಿಂ|| ೬೩

ಅಂತು ಗಗನಗಂಗೆ ಶಾಪಮಂ ಕುಡಲಾಂ ಮಗುಳ್ದು,

ವಾರಣಸಾಕುಲಕ್ಷ್ಯಚಿತಮಾಸ್ಪದನಾಸಸಗಕ್ಷ್ಯ ಗಂಗೆ ನಿ |
ಷ್ಕಾರಣಮಿತ್ತೆ ಶಾಪಮನದೇಕೆನಗೆಂದು ಮಗುಳ್ದವಳ್ಗೆ ನೀಂ ||
ಧಾರಿಣಿಯೊಳ್ ಮನುಷ್ಯಸತಿಯಾಗಿ ಪರಕೆ ನೆರೆನಂತು ಸೃಷ್ಟಿ ವಿ |
ಸ್ತಾರದೊಳಿರ್ಪೆಯೆಂದು ಮುಳಿದಾಂ ಮಿಗೆ ಶಾಪಮನಿತ್ತೆನಾಕ್ಷಣಂ|| ೬೪

ಅಂತು ಶಾಪಮಂ ಕುಡಲಾಗಂಗೆಯುಮಂಜಿ ಇಂತೆಂದಳ್:—

ಕನ್ನೆಯವಸ್ಥೆಯೊಳ್ ಪುರುಷನೊರ್ಬನೊಳೊಲ್ದು ವಿವಾಹಮಾಗಿ ಮ |
ತ್ತೆನ್ನಯ ಶಾಪದಿಂ ಮನುಜನಾಗಿ ಧರಾತಳದಲ್ಲಿ ನೀಂ ಬರಲ್ ||
ನಿನ್ನಯ ಸಂಗದಿಂ ಸುಖದೊಳಿರ್ಪನಿತೊಂದು ವರಪ್ರಸಾದಮಂ |
ಪನ್ನಗಭೂಷಣಾತ್ಮಭವ ನೀಂ ದಯೆಗೆಯ್ಯನುತಾಕೆ ಬೇಡಿದಳ್ || ೬೫

ಅಂತು ಬೇಡಲೊಡಮಂತಾಗಲೆಂದೆಂ. ಅದಱಿಂ

ಸುರಗಂಗಾಕೃತಿ ಕಲ್ಪಸುಂದರಿ ನಿಜಂ ಮನ್ಮಾತ್ರಿ ನೀನಾಗಿಯು |
ರ್ವರೆಯೊಳ್ ಸಂಭವಿಸಿರ್ದ ಕಾರಣದೊಳೀಸ್ತ್ರೀಸಂಗದೋಷಂ ನಿರಂ ||

ತರದಿಂ ಪೊರ್ದದು ನಿನ್ನನೊಲ್ದು ಪಿತೃಮಾತೃಪ್ರಾಣರಕ್ಷಾರ್ಥಮೆ ।
ನ್ನರುಮಂ ಬಾಧಿಸೆ ಪಾಪಮಿಲ್ಲ ನಿನಗೆಂಹಂ ವಾರಣೇಂದ್ರಾನನಂ ॥ ೬೬

ಆವ್ಯತಿಕರದೊಳಾಂ ಕಣ್ದೆಱೆಯೆ,

ತಾರಾಂಗನಾಸ್ವತಂತ್ರೋ ।
ದಾರವಹತ್ತೇಜಮೆಯ್ದೆ ಪೆರ್ಚಿತ್ತೆನ್ನಾ ॥
ಕಾರದಿನೆಂಬನುಶಯದಿಂ ।
ಭೋರೆನೆ ಕರಗಿದವೊಲಿಂದು ಕರಗಿದನಾಗಳ್ ॥ ೬೭

ಅಂತು ಚಂದ್ರಾಸ್ತಮಾನವಾಗಲೊಡಂ,

ಲೋಕಜನಶಫರನೇತ್ರಾ ।
ನೀಕಮನೊರ್ಮೊದಲೆ ಬಂಧಿಸಲ್ ಕಾಲಂ ನಿ ॥
ರ್ವ್ಯಾಕುಲದಿಂ ಮಿಗೆ ಬೀಸಿ ।
ಟ್ಟಾಕರ್ಪಿನ ಬಲೆವೊಲೆಯ್ದೆ ಪೆರ್ಚಿತ್ತು ತಮಂ ॥ ೬೮

ಅಂತು ಪೆರ್ಚಿದ ಕತ್ತಲೆಯೊಳಾಂ ಸಂಕೇತಸ್ಥಾನಕ್ಕೆ ಬರ್ಪಾಗಳ್,

ಪುರದಗೞೊತ್ತಿನೊಳಾಪು ।
ಷ್ಕರಿಕೆಯ ಮನೆಯಿಮುರ್ದಲ್ಲಿ ಪೆರ್ಬಿದಿರೊಂದಂ ॥
ಭರದಿಂ ತೆಗೆದಂಭೋಧಿಗೆ ।
ಸರಿಯೆನಿಸಿರ್ದಗೞಿನೊಲ್ದು ನೋಡಿದೆನಾಗಳ್ ॥ ೬೯

ಅಂತಿರ್ದಗೞಿಂ ನೋಡಿ

ಪಿರಿಯಗೞೊಳ್ ಬಿದಿರಂ ಪ ।
ಟ್ಟರಿಸಿಯುದಂ ದಾಂಟಿ ಮತ್ತದಂ ಕೋಂಟೆಗೆ ನಿಂ ॥
ದಿರಿಸಿಯೊಳಬಿಟ್ಟು ನಡೆದೆಂ ।
ಭರದಿಂ ಪುಷ್ಕರಿಕೆ ಪೇೞ್ದ ಪೊಲಬಿಂಗಾಗಳ್ ॥ ೭೦

ಅಂತು ನಡೆವಾಗಳ್ ಮುಂದೆ,

ರಸಮಂ ಸಾಲಿಡುತಿರ್ಪ ದಾಡಿಮಫಲಂ ಪೆರ್ಚಿರ್ಪ ಚೆಂದೆಂಗು ನು ।
ಣ್ಪಸುರೇಱಿರ್ದೆಳಗಾಂಗು ಮೋಹರಡಿಯೆ ಬಿಣ್ಪಿಂ ಜೋಲ್ವ ಪೊಂಬಾೞೆ ಪೆಂ
ಪೆಸೆವಿನ್ನಾವು ಪೊದಟ್ಟ ಮುಟ್ಟೆಗೆಯ ಗೊಂಚಲ್ ನೀಳ್ದ ಜಂಬೂಫಲ ।
ಪ್ರಸರಂ ತೀವಿರೆ ಪೊಂಪ್ರವೆತ್ತು ಪವನಂ ಚೆಲ್ವಾಯ್ತುಳಾಧೀಶ್ವರಾ ॥ ೭೧

ಅಂತಿರ್ದುದುಪವನವುಂ ಕಂಡು ಪ್ರಹೃಷ್ಟರಿಕೆ ಬೆಳೆದ್ದ ಮಾರ್ಗದೊಳ್
ಅಸುಕೆಯ ಕೆಂದಳಿರ್ದುದಾಗಲಂ ಬಗಿದಾವ ಪ್ರಸವ ಗೂಹವೀಥಿಯಂ ।
ನುಸುಳ್ದತಿವೇಗದಿಂ ಕೃತಕಶೈಲಮನೊಯ್ಯನಡದು ಪೊಕ್ಕು ಸ
ತ್ಕುಸುಮಲತಾಳಿಯೊಳ್ ತೊಡರ್ದು ಮಂದಸಮೀರನ ಮಾಚ್ಕೆಯಿಂ ಲತಾ ॥
ವಸಥವ ನೆಯ್ದಿ ನಾಲ್ದೆಸೆಯುನೀಕ್ಷಿಸಿದೆಂ ಭುವನಾಧಿನಾಯಕಾ ॥ ೭೦

ಅದು ರಂಭಾಸಂಭೂತಮಾಗಿಯುಂ ಸುರಾಧಿಪನಿವಾಸಮಲ್ತು; ಪುನ್ನಾಗಪರಿಪೂರ್ಣಮಾಗಿಯುಂ ವಿಷಧರನಿಳಯಮಲ್ತು; ಕೋಮಳಲತಾವೇಷ್ಟಿತಮಾಗಿಯುಂ ವೇಶ್ಯಾವಾಟಮಲ್ತು; ಸಕಲಸುಮನೋರಂಜಿತಮಾಗಿಯುಂ ಅಮರ್ತ್ಯಭವನಮಲ್ತು; ಮಧುಪ್ರಸವವಾಗಿಯುಂ ಪುರಪಿರೋಧಿಯಲ್ತೆನಿಸಿರ್ದ ಉಪವನದೊಳ್ ಕದಂಬಕುಸುಮರಾಗದಿಂ ಪಸರಿಸಿಟ್ಟ ನೆಲಗಟ್ಟನಿಂ ಪಸಿಯುಡಕೆಯ ಪ್ರಸಕಂಭದಿಂ, ರಸದಾಳಿಯುಸಿಯ ಗಂಧವಟ್ಟಿಗೆಯಿಂ, ಕುಳಿವ ಕುಳಿವೇರ ಕೇಗಟ್ಟನಿಂ, ಅಸುಕೆಯ ಕಿಸುಪಳಿರ ಪ್ರದಕೆಯಿಂ, ಪಜ್ಜಳಸುನ ಪನ್ನೀರ ಚಳಯದಿಂ, ಸಿಱಿಗೊಂಡ ಗಱಿವ್ರಾವಿನ ಬಾಳ್ವೇಲಿಯಿಂ, ಲೀಲೆವಡೆದ ಲತಾಗೃಹಂ ಲತಾಂತಶರಜನ್ಮಭವನದಂತಿರ್ದುದು ಅಂತುಮಲ್ಲದೆಯುಂ,

ಸುರಯಿಯು ಸೇವಂತಿಯು ಪಾ ।
ದರಿಗಳ ಮಲ್ಲಿಗೆಯು ಸಂಪಗೆಯು ಜಾಜಿಯು ತಾ ॥
ವರೆಯು ಸುರಹೊನ್ನೆಯಲಗ೯ಳ ।
ಪರಿಮಳದಲರೆಸೆಯುತಿರ್ದುವಾಪುಪವನದೊಳ್ ॥ ೭೩

ಅಂತೆಸೆವ ಉಪವನಮಧ್ಯದ ಲತಾಭವನಮಂ ನೋಡ್ಪೆನವಲ್ಲಿ,
ಇರ್ದೆಸೆಯಲ್ಲಿ ಮಾಣಿಕದ ದೀವಿಗೆ ಕೆಂದಳಿರ್ದೊಂಗಲಲ್ಲಿ ಪಾ ।
ಸಿರ್ದಮಳ್ವಾಸು ಪೊಸೆಸೆವ ನುಣ್ಪಿನ ತಣ್ಗಳಸಂಗಳಲ್ಲಿ ತೀ ॥
ವಿರ್ದ ಸುಗಂಧಶೈತ್ಯಜಲಮಿರ್ದಲಗಿಂಬೆಳತಾಳವೃಂತಮೊ ।
ಪ್ಪಿರ್ದ ಲತಾಗೃಹಂ ನಯನಕೌತುಕಮಂ ಪಡೆದತ್ತಿಳಾಧಿಪಾ ॥ ೭೪

ಅಂತು ಕೌತುಕಮಾದ ಲತಾಭವನಮಂ ಪೊಕ್ಕು ಕುಳ್ಳಿರ್ಪನ್ನೆಗಂ;
ನೂಪುರಮಂ ಕಟಿಲ್ಚಿ ನವಕಿಂಕಿಣಿರಂಜಿತಕಾಂಚಿಯಂ ಬಿಸು ।
ಟ್ಟೋಪನ ನಿದ್ರೆಯುಬ್ಬರವನಾಲಿಸಿಯೊರ್ಬಳ್ ಮರ್ಬಿನೊಳ್ ಬರಲ್ ॥

ಚಾಪಲನೇತ್ರೆ ಕಾಂತಿ ಕಡುಮಿಂಚಿನವೋಲ್ ಪೊಳೆಯಲ್ ಸುಗಂಧಶೋ ।
ಭಾಪವನಂ ಪುಸುಂಕಲವರ್ಪಿಂದಱಿದೆಂ ಸತಿ ಬರ್ಪಳೆಂಬುದಂ॥ ೭೪

ಅಂತಾನಾಕಲ್ಪಸುಂದರಿಯು ಬರವನಱಿದು ಲತಾಭವನದ ಮಾಧವೀಗುಲ್ಮದೊಳ್ ಮೆಯ್ಗರೆದಿರ್ಪುದುಮವಳ್ ಬಂದು ತದ್ಭವನವಲ್ಲೆನ್ನುಂ ಕಾಣದೆ,

ಎಲೆ ಕುಸುಮಾಸ್ತ್ರ ನಿರ್ದಯ ನಿರಂತರಮುಗ್ಧೆಯನೆನ್ನನಿಂತು ಕೋ।
ಟಲೆಗೊಳಪಂತಿರಂ ನಿನಗೆ ಮಾಡಿದ ಪೊಲ್ಲಮೆಯುಂಟೆ ಧಾರಿಣೀ ॥
ತಿಲಕನನೊಲ್ದು ಚಿತ್ರಪಟದೋಪನನಿಲ್ಲಿಗೆ ತಂದು ತೋಱಿದಿಂ ।
ತಲಿಲಿಪಿಯೇಕೆ ಯೆನ್ನನೆನುತಂಗನೆ ಮುಂಗಿಡುತಿರ್ದಳಾಕ್ಷಣಂ ॥ ೭೫

ಅಂತು ಮುಂಗಿಡುತಿರ್ದಳಂ ಕಂಡು ಗುಲ್ಮದಿಂ ಪೊಱಮಟ್ಟು

ನಿನ್ನಕ್ಷಿದ್ವಿತಯಂ ಸ್ಮರಾಸ್ತ್ರತತಿಯುಂ ನಿನ್ನಾನನಂ ಚಂದ್ರನುಂ ।
ನಿನ್ನಚ್ಛಸ್ತನಮೆಯ್ದೆ ಮನ್ಮಥನ ಕೇಳೀಕಂತುಕದ್ವಂದ್ವಮುಂ ।
ನನ್ನಂಗಂ ರತಿಯಾರ್ಪನೀಕ್ಷಿಸಿಗೊಳಲ್ ನೀಂ ಲೇಸನೇಗೆಯ್ದೆ ಕೇಳ್ ।
ನಿನ್ನಿಂ ವೈರಿಗಳುಂಟೆ ಕೇಳ ಮನಸಿಜಂಗೆಂದೊಲ್ದು ಬಂದಪ್ಪಿದೆಂ ॥ ೭೬

ಅಂತಪ್ಪಿ ಸತಿಯುಂ ನೋೞ್ಪನ್ನಂ,

ಸರಸಿಜನೇತ್ರೆ ಗುಜ್ಜಳಿಪ ತುಂಬಿಗುರುಳ್ ಕಮನೀಯಪಲ್ಲವಾ ।
ಧರೆಗೆ ಪಿಕಸ್ವನಂ ನವಸುಧಾಕಳಶಸ್ತನಿಗಾಕಪೋಳಬಂ ॥
ಧುರಮಣಿದರ್ಪಣಂ ಪುಳಿನಪೂರ್ಣನಿತಂಬೆಗೆ ರಾಜಹಂಸಮುಂ ।
ಧರಗತಿ ಸಂತತಂ ಮೆಱೆವುದೆಂಬುದು ನೋಡಲಿದಾವ ವಿಸ್ಮಯಂ ॥ ೭೭

ಅಂತೆಸೆವ ಕಾಂತೆಯನಾಲಿಂಗನಂಗೆಯ್ದನಂತರಂ

ಘಟಕುಚೆ ಪುಷ್ಕರಿಕೆಯ ನುಡಿ ।
ದಿಟಮಾಯ್ತೆಂದೆನಗೆನುತ್ತವಳ್ ನನ್ನನುರ ॥
ಸ್ತಟದೊಳ*ಮರ್ದಪ್ಪಿ ರತಿಲಂ ।
ಪಟದಿಂದಿರಲಾಗಳಱಿದೆನಾನಿಂಗಿತಮಂ ॥ ೭೮

ಅಂತಿಂಗಿತಮನಱಿದು,

ರಾಜಶುಕಂ ಕೆಂದಳಿರ್ಗಳ ।
ನೋಱೆಯಿನೊಳ್ಪೆಸೆಯೆ ಕ*ರ್ದುಕುವಂದದಿನಾಗಳ್ ॥

ಕೂಜಿತರವದಿಂ ಕರ್ದುಕಿದೆ ।
ನಾಜಂಗವ-ಕಲ್ಪಲತೆಯು ಬಿಂಬಾಧರವುಂ ॥ ೭೯

ಅಂತಧರಗ್ರಹಣಂಗೆಯ್ದು,

ನಿಯಮಸ್ಥಾನಮನಂಟೆ ಸತ್ವದೊದವಂ ಮುಂ ನೋಡಿ ಕಾಲಪ್ರಬೋ।
ಧೆಯನಾರಯ್ದು ನಿರಂತರಪ್ರಕೃತಿಯಂ ಭಾವೇಂಗಿತಜ್ಞಾನನಿ ॥
ರ್ಣಯದಿಂ ಭಾವಿಸಿಯಾತ್ಮಶುಕ್ಲಭರವುಂ ಹೃನ್ಮಾರುತವ್ಯಾಪ್ತಿಯೋ ।
ಳ್ಗಿಯಿನಾಂತಂಗಸುಯಿಚ್ಛೆಯಂ ಸಲಿಸಿದೆಂ ಸಂಭೋಗದೊಳ್ ಯೋಗದೊಳ್

ಸಹಜಪ್ರೀತಿ ಮನೋಹರಾಧರಮಣಿಪ್ರೋಚ್ಛುಂಬನಂ ಕುಂತಳ।
ಗ್ರಹಣಂ ಕೋಪಮಳದೀನಚಾಟುವಚನಂ ಜಿಹ್ವಾಂಕುರಾಚೊಷ್ಟಿ ...ನಂ॥
ವಿಹಗಾನೀಕಲಸನ್ನಿಹಾಗಳರವಂ ಲಜ್ಜಾಭಿಭಂಗಂ ಮುಹು ।
ರ್ಮುಹುರಾಲಿಂಗನಮಂತದೇಂ ಮೆಱೆದುದೋ ಸಂಭೋಗಕೋಳಾಹಳಂ॥

ಆಸಂಭೋಗದೊಳ್

ನೆಲಸಿದ ಲಜ್ಜೆಯೋಸರಿಸಿ ಘರ್ಮಜಲಂ ಪ್ರೊಱಪ್ರೊಣ್ಮಿ ಬುದ್ಧಿ ಸಂ ।
ಚಲಿಸಿ ಪ್ರೊವ..ದ ಲಲ್ಲಿ ಮಿಗಿಲಾಗಿಯುಸಿರ್ ನಿವಿರ್ತ್ತು ಲೋಚನೋ ॥
ತ್ಪಲವರೆಮುಚ್ಚೆಯುಪ್ಪಗೆ ಸಡಿಲ್ದು ಮನಂ ಬೆಱಗಾಗಿ ಪ್ರಷ್ಪಕೋ ।
ಮಲೆ ಮರವಟ್ಟಿರಲ್ ಸಮರತಿಸ್ಥಿತಿಯುಪ್ಪಪ್ರೊಲಾಂ ನೆಗಬ್ಬಿದೆಂ ॥ ೮೦

ಅಂತು ಸಮರತಿಯಾಗೆ

ವಿಲಸದ್ರಕ್ತವಿಲೋಚನಂ ಶ್ರಮಜಲವ್ಯಾಕೀರ್ಣಗಾತ್ರಂ ಮತಿ ।
ಸ್ಖಲನಂ ಶೀರ್ಣಚಳಾಳಕಂ ಶಿಥಿಲವೇಣೀ...ಮುತ್ತುಂಗನಿ ॥
ರ್ಮಳಬಿಂಬಾಧರಮಾಸ್ಯಸಂಭವಮದಂ ಚಿತ್ತಪ್ರಸನ್ನಂ ಮನ ।
ಕ್ಕೊಲವಂ ಪೆತ್ತುದು ಕಾಂತೆಯಾಕೃತಿ ಕರಂ ರತ್ಯಂತದೊಳ್ ಸಂತತಂ॥ ೮೧

ಅಂತಾದ ರತ್ಯಂತಸಮಯ-ದೊಳ್ ನಲ್ಲಳಂ ಲಲ್ಲೆನುಡಿಯಿಂದೆನಸುಂ ಪರಿತೋಷಂಬಡಿಸಿ ನಿಮಗಾದೊಡೆ ಸಂಕಲ್ಪಸಿದ್ಧಿಯಾಯ್ತಾಂ ಬೇವಿಯರಿಂ ಬೀಳ್ಕೊಂಡಪೆನೆಂಬುದುಂ,

ಅಲರ್ದ ಮುಖಾಬ್ಜಮೆಯ್ದೆ ಕುಡುಬಾಡಿ ಸಿತಾಕ್ಷಿಯುಗಂ ಬೆಱಂಗುವೆ ।
ತ್ತಲಘುನಿತಂಬದೊಳ್ ಮುಡಿ ಸಡಿಲ್ದು ತನುಪ್ರಭೆ ಕಂದಿ ಬುದ್ಧಿ ಸಂ ॥

ಚಲಿಸಿ ಮುದಂ ತೊಲಂಗಿಯನುರಾಗರಸಂ ತವೆ ಬತ್ತಿಯಾಕ್ಷಣಂ ।
ಲಲನೆ ವಿಷಾದದಿಂ ದುಗುಡಮಂ ತಳೆದಳ್ ಮರವಟ್ಟರಂದದಿಂ ॥ ೮೪

ಅಂತವಳ್ಗಾದ ದುಗುಡಮನಾಂ ಕಂಡು

ಇನಿತುದ್ವೇಗಕ್ಕದೇಂ ಸನ್ಮದಮುಬಲೆಯೆನಲ್ಕಾಮುಕ್ಕೈವಲ್ಯದೊಳ್ಪಂ ।
ದೆನಗೀಗಳ್ ಸಾರ್ದುದೆಂ ಮತ್ತಧಿಪತಿಯ ದುಸ್ಸಂಗದುದ್ವೇಗದನಾಯಾ॥
ತನೆಯೊಳ್ ಬೇಟ್ಟಂದವಾಯ್ತೆತೆಬಿಸನಬಿಸು ಮುಂಗೆಟ್ಟಳಂ ಬಾಲೆಯುಂ
ದುಃ । ಖಿನಿಯುಂ ನೀಂ ಕಾವುದೆಂದಂಗನೆ ಮಿಗೆ ಸುರಿದಳ್ ಘೋರೆನಲ್ ಕ
ಣ್ಣ ನೀರಂ ॥ ೮೫

ಬಟಾಕ್ಷಾನನೆಳ ಕಣ್ಣ ನೀರಂ ತೊಡೆದಿಂತೆಂದೆಂ:—

ನಿಜಪತಿಗೆನ್ನ ಚಿತ್ರಪಟದೊಪ್ಪಮನೊಯ್ಯನೆ ತೋರ್ಪಲಂತನಂ ।
ತ್ರಿಜಗದೊಳತ್ಯಪೂರ್ವಮೆನಿಸಿರ್ಪ ವಿಚಿತ್ರದ ರೂಪಿದೆಂತು ಮಾ ॥
ರಿಜಮುಖಿ ನಿನ್ನ ಕೆಯ್ಯೆಡೆಗೆ ಸಾರ್ದುದು ಪೇಳೆನೆ ಪೇಳ್ ಧರಿತ್ರಿಗ ।
ದ್ರಿಜೆಗೆಣೆ ಧರ್ಮರಕ್ಷಿತೆಯೆನಿಪ್ಪವಳೆಂದೆನಗೆಂದು ಕಾಮಿನೀ ॥ ೮೬

ಅಂತು ಚಿತ್ರಪಟಮಂ ತೋಱಿ ಇದನೆನ್ನ ಕುಲಗುರುವಪ್ಪ ಧರ್ಮರ
ಕ್ಷಿತೆಯೆಂಬ ಭಿಕ್ಷುಕಿ ಕೊಟ್ಟು ಮತ್ತಮಿಂತೆಂದಳೆಂದು ಪೇಳ್ದು,

ಈರೂಪಂ ಪಿಡಿದೊಂದು ಪೋಮುಮನಲಂಪಿಂ ಗಂಧಕಸ್ತೂರಿಕಾ ।
ಪೂರ್ಣರಾಜ್ಯಾಂಬರನಾಮಸಂತತಿಗಳಂ ಮಾಡಲ್ಕೆ ತಚ್ಚಿತ್ರದಾ ॥
ಕಾರಂ ಕೂರ್ತೆನಗಪ್ಪುದಾಂ ಪದೆಪಿನಿಂದಪ್ಪಲ್ಕೆ ನಿನ್ನಂ ತದಾ ।
ಕಾರಂ ಕೇಳ್ ನಿನಗಪ್ಪುದಾಂ ಸಹಜದಿಂದಿಪೆಂ ಧರಾವಲ್ಲಭಾ ॥ ೮೭

ಇದು ನಿನ್ನಾಪ್ತಪ್ರಧಾನರ್ಗಖಿಳಪರಿಜನಕ್ಕಾತ್ಮಚಿತ್ತಕ್ಕೆ ಪೆಂಪಿಂ ।
ಮುದಮಪ್ಪಂತಾದೊಡಾಂ ಪೋಮುಮನೆಸಗಿದಪೆಂ ದೇವ ನೀವೆಲ್ಲರುಂ ಕೇ ॥
ಳ್ದು ದಯಾಚಿತ್ತಪ್ರಸಾದಂಗೊಡಿಮೆನಲರಸಂ ತಾನೊಡಂಬಟ್ಟನಿಂ ಮಾ ।
ಡ್ಪುದು ಮುಂತೀಪೋಮುಮಂ ಕಾಮಿನಿಯುಪವನದೊಳ್ ವಸ್ತುಸಾಮ
ಗ್ರ್ಯದಿಂದಂ ॥ ೮೮

ಎಂಬುದುಂ,

ಹೋಮುಸಮಾಪ್ತಿಯೊಳೆನಗೆ ಮ ।
ಹಾಮಂತ್ರದಿನಾದ ಮೂರ್ತಿಯುಂ ನಿನಗೀಯಲ್ ॥

ಭೂಮೀಶ ನಿನ್ನ ಕರೆವೆಂ ।
ಹೋಮಸಮಭ್ಯರ್ಣಘಂಟಿಕಾಧ್ವನಿಯಿಂದಂ ॥ ೮೯

ಆಘಂಟೆಯ ಧ್ವನಿಯಾಗಲೊಡಂ ನೀಂ ಹೋಮಕುಂಡಕ್ಕೆ ಬಂದೊಡಾಂ ನಿನ್ನನಪ್ಪಲೆನಗಾದ ಚಿತ್ರದ ರೂಪು ನಿನಗಾಗಿಯಾಂ ಮುನ್ನಿನಂತಿರ್ಪೆನೆಂದು ಭಿಕ್ಷುಕಿ ಪೇೞ್ದಳೆಂದು ಪೇೞ್, ಮೇಲಪ್ಪ ಕಾರ್ಯಮನಾನೆಸಗುವೆನೆಂದು ಮತ್ತಂ,

ಕೋಮಳೆ ನೀನೆಸಗಿದ ತ ।
ದ್ಧೋಮದ ಧೂಮೋತ್ಕರಂ ಕರಂ ತಲೆದೋಱಲ್ ॥
ಪ್ರೇಮದೊಳಾನಲ್ಲಿಗೆ ಬಂ ।
ದುಂ ಮಾಡುವ ತೆಱನನಱಿಪುವೆಂ ನಿನಗಾಗಳ್ ॥ ೯೦

ಎಂದಿದೆಲ್ಲಮಂ ಕಲ್ಪಸುಂದರಿಗೆ ಕಲಿಸಿಯನಂತರಂ,

ಆಂ ಬಂದು ಪೋದ ಪಜ್ಜೆಯ ।
ನಂಬುಜಮುಖಿ ಪೆಱನದೊರ್ಬನಱಿಯದ ತೆಱದಿಂ ॥
ಬೆಂಬೞಿಯಿಂ ಪುಷ್ಕರಿಕೆಯಿ ।
ನಿಂಬಿಂ ತೊಱೆಯಿಸುವುದೆನುತುಮಾಂ ಪೊಱಮಟ್ಟೆಂ ॥ ೯೧

ಅಂತು ಪೇೞ್ದಾನಾವನದಿಂ ಪೊಱಮಟ್ಟೆತ್ತಲ್ ಬಂದೆಂ. ಅವಳತ್ತಲ್ ತನ್ನ ಪತಿಯ ಸಮೀಪಕ್ಕೆ ಪೋಗಿ ಯಾಂ ಪೇೞ್ದಂದದಿಂ ವಿಕಟವರ್ಮಂಗೆ ಪೇೞ್ದೊಡವನದರ್ಕೊಡಂಬಟ್ಟಿರೆ

ದೇವಿಯದೊಂದಪೂರ್ವತರಮೂರ್ತಿಯನೊಪ್ಪಿರೆ ಮಾಡುವಳ್ ಗಡಂ ।
ಭೂವರನಪ್ಪ ತದ್ವಿಕಟವರ್ಮನೃಪಂಗಿದಱೊಳ್ ವಿತರ್ಕಮಿ ॥
ನ್ನಾವುದೆನುತ್ತಶೇಷಜನಮುಚ್ಚರಿವಟ್ಟಿರೆ ಕಲ್ಪಸುಂದರೀ ।
ಭಾವಕಿ ಹೋಮಮಂ ಬನದೊಳೊರ್ವಳೆ ಕೇಳ್ ಸಮಕಟ್ಟಿದಳ್ ನೃಪಾ ॥

ರೂಪಪರಾವರ್ತನವಿವಿ ।
ಧೋಪಾಯಮನೆಸಗುವಳ್ ಗಡಂ ನರನಾಥಂ ॥
ಗೋಪಳ್ ಮಣಿಮಂತ್ರೌಷಧಿ ।
ಗೇ ಪೊಸತಾಧಿಕ್ಯಮೊಂದು ಗುಂಪೊಸೆವಿನೆಗಂ ॥ ೯೨

ಅಂತಖಿಳಜನಮಾಶ್ಚರ್ಯಂಬಡುತಿರಲಗುರುಚಂದನಕುಂಕುಮಕರ್ಪೂರಕಸ್ತೂರಿಕಾದಿಸುಗಂಧವಸ್ತುವಂ ಸಿತಸರ್ಷಪತಿಲವ್ರೀಹಿಯವಾದಿಹೋಮಧಾನ್ಯಮುಂ ಘೃತದುಗ್ಧಪಶುವಸಾದಿರಸದ್ರವ್ಯಮುಂ ಚೀನಿಮಹಾಚೀನಿದೇವಾಂಗದುಕೂಲಾದಿಪಟಕವರ್ಗಮುಂ ಖದಿರದೇವದಾರುನಿಂಬಲವಂಗಾದಿಸುಗಂಧಕಾಷ್ಠಚಯಮುಮಂ ಹೋಮಸಾಧನಂಗಳಾಗಿ ಮಾಡಿ,

ವನಜಮುಖಿ ವಿಕಟವರ್ಮನ ।
ತನುಸಾಧನಮುಮಂ ಚಿತಾಗ್ನಿಯೊಳ್ ಬೇಳ್ವಂತಾ ॥
ವನಮಧ್ಯದಗ್ನಿಕುಂಡದೊ ।
ಳನುನಯದಿಂ ಬೇಳ್ದಳೊಲ್ದು ತತ್ಸಾಧನಮುಂ ॥ ೯೪

ಸಕಲಸುಗಂಧವಸ್ತುಗಳನಂಗನೆ ತದ್ವನಮಧ್ಯದೊಳ್ ಹವಿ ।
ಪ್ರಕರಮೊನಲ್ಕೆ ಹೋಮಶಿಖಿಯೊಳ್ ಮಿಗೆ ಬೇಳ್ದೊಡೆ ಧೂಮದೇಳ್ಗೆ ದಿ ॥
ಙ್ನಿಕರದೊಳುರ್ಬಿ ಪರ್ಬಿ ಬರೆ ನಿಶ್ಚಯದಿಂದನಿಶಂ ಸುಗಂಧಕಾ ।
ತುಕಮೆನಿಸಿತ್ತದಲ್ಲದೊಡೆ ಗಂಧಗುಣಂ ಧರೆಗೆಂತು ಸಾರ್ದುದೋ ॥ ೯೫

ಆಹೋಮಧೂಮಸ್ತೋಮಂ ವ್ಯೋಮಮಂಡಲಮುಂ ದಿಶಾಮಂಡಲಮುಂ ಮಂಡಳಿಸಲದನಾಂ ಕಂಡು

ಭರದಿಂ ಬಂದೆನ್ನ ಮೇಗಾಲ್ಗಳನಮಳಡಿಯಿಂ ಮೆಟ್ಟಿ ದೂಂಟಿಕ್ಕಿ ಹ
ಸ್ತಾಂ । ಬುರುಹಾಗ್ರಶ್ಲೇಷದಿಂ ಬಾಗಿಸಿ ನಯನವ ಡಾಳಂ ಮದೀಯಾಸ್ಯ
ದೊಳ್ ಪ ॥ ರ್ಬಿರೆ ಮಧ್ಯಂ ಬಳ್ಕೆ ಕಕ್ಷಂ ಪೊಗರನುಗುಳೆ ರಾಗಂ ತು
ಳುಂಕಲ್ಕೆ ತಾಮ್ರಾ । ಧರಮಂ ತತ್ಕಾಂತೆ ಪೆಂಪಿಂ ಮುಗುಳ್ದು* ಮಗುಳ್ದು*
ವಳ್ ಚುಂಬನಂಗೆಯ್ದಳಾಗಳ್ ॥ ೯೬

ಅಂತು ಚುಂಬನಂಗೆಯ್ದನಂತರಮಿಂತೆಂದಳ್:—

ನೀನೆನ್ನೊಳ್ ಪೇಳ್ದ ಕ್ರಮ ।
ಮೇನುಂ ತಪ್ಪದವೊಲೆಸಗಿದೆಂ ಹೋಮಮನಿ ॥
ನ್ನೀನೆಸಪುತ್ತರಕಾರ್ಯವಿ ।
ಧಾನಮನೊಲ್ದಂತೆ ಮಾಳ್ಪುದೆಲೆ ಸುಕುಮಾರಾ ॥ ೯೭

ಎಂದವಳ್ ಮಗುಳ್ದಾಲಿಂಗನಂಗೆಯ್ಯೆ,

ಕಾಲಾತಿಕ್ರಮಮಾಗದೆ ।
ಕಾಲನ ನಿಲಯಕ್ಕೆ ವಿಕಟವರ್ಮನನೀಗಳ್ ॥
ಬಾಲೆ ಕಳಿಪಿದಪೆನೆಸೆವ ತ ।
ಮಾಳದೊಳಿರ್ದೀಕ್ಷಿಸಂದೆನಾನಂಗನೆಯಂ ॥ ೯೮

ಅಂತವಳನೊಂದು ತಮಾಲಗುಲ್ಮದೊಳಿರಿಸಿಯಾಂ ಹೋಮಕುಂಡದ ಸಮೀಪಕ್ಕೆ ಬರೆ,

ವಿವಿಧಜ್ವಾಳಾಕಳಾಪಂ ತುಡುಕೆ ಗಗನಮಂ ಧೂಮಸಂತಾನಕಂ ದಿ ।
ಗ್ವಿವರಕ್ಕೆಯ್ತರ್ಪಿನಂ ಪನ್ನಗನಿಲಯಮುಮಂಗಾರದುಗ್ರೋಷ್ಮವುಂ ತೀ ।
ವುವಿನಂ ಪಾಯ್ತರ್ಪಿನಂ ಬಲ್ಗಿಡಿಗಳ ಗಡಣಂ ರಂಜಿಸುತ್ತಿರ್ಪ ಹೋಮಾ ।
ಗ್ನಿವಿಶೇಷಂ ಮನ್ಮನಕ್ಕಚ್ಚರಿಯನೆಸಗಿದತ್ತಾಗಳುರ್ವೀವರೇಣ್ಯಾ ॥ ೯೯

ಅಂತಳುರ್ವರ್ ಹೋಮಕುಂಡದ ಸಮೀಪದೊಳ್ ಕುಳ್ಳಿರ್ದು

ಆವಿಕಟವರ್ಮನೃಪತಿಯು ।
ಜೀವನಮುಲ್ಲಾಡುವಂತೆ ಘಂಟೆಯನಾಗಳ್ ॥
ಭಾವಿಸಿಯುಲ್ಲಾಡಿದೆನಾ ।
ಶಾವಳಯಮನದಱಿ ಘೋರರವಮೊಯ್ದುವಿನಂ ॥ ೧೦೦

ಅದು ಮಿಗೆ [ಪ್ರೋಣ್ಕ್ರಿತಂ] ವಿಕಟವರ್ಮನ ಸಂಸೃತಿಭಾಗ್ಯಮೊಯ್ದೆ
ತೀರ್ದುದನಱಿಪ್ಪಂದು ದುರ್ಧ್ವನಿಕೃತಾಂತಲುಲಾಯಗಳಪ್ರಬದ್ಧಸಂ ॥
ಪದನವಘಂಟಿಕಾಧ್ವನಿ ಯುಗಾಂತಮಹೇಶ್ವರನಗ್ರಹಸ್ತದು ।
ರ್ಬಿದ ಡಮರುಪ್ರತಿಧ್ವನಿಯೆನಲ್ ಮಿಗೆ ಪ್ರೋಣ್ಕ್ರಿತು ಘಂಟಿಕಾರವಂ ॥ ೧೦೧

ಆಘಂಟಿಕಾಧ್ವನಿಯಂ ವಿಕಟವರ್ಮಂ ಕೇಳ್ದು

ಮಾರಿಯ ಮಂದಿರಕ್ಕೆ ಕುಱಿ ಸಿಂಹಗೃಹಕ್ಕೆ ಮತಂಗಜಂ ಯಮ ।
ದ್ವಾರಕೆ ಪಾತಕಂ ವಿಷಯಸಂತತಿಯಾಶೆಗೆ ಯೋಗಿ ಬರ್ಪವೋಲ್ ॥
ಭೋರೆನೆ ಬರ್ನೇ ಮನದ ಸಂಭ್ರಮದಿಂ ನಡೆತಂದನೊಲ್ದು ಘಂ ।
ಟಾರವದತ್ತಲಾವಿಕಟವರ್ಮನೃಪಂ ಸುಭಗತ್ವದಾಸೆಯಿಂ ॥ ೧೦೨

ಅಂತು ಬಂದು ಹೋಮಸಮೀಪದೊಳಿರ್ದನ್ನಂ ಕಂಡು

ನಿಬಿಡಮತಿ ನೃಪವರಂ ಬಂ ।
ದು ಬನದೊಳಾಂ ಬೇಳ್ದ ಹೋಮಮಂ ಕಂಡೀಗಳ್ ॥

ಅಬಲೇ ಪೇಟ್ದಿಂತಾಯ್ತಿಂ ।
ದು ಬೆಕ್ಕಸಂಬಟ್ಟು ನೋಡಿದಂ ಮದ್ರೂಪಂ ॥ ೧೦೩

ಅಂತೆನ್ನಂ ನೋಟ್ಪಿ ವಿಕಟವರ್ಮನನಿಂತೆಂದೆಂ:—

ಮುನ್ನಮತೀವಕಷ್ಟಮೆನಿಪಾಕೃತಿಯಾಗಿಯುಮೊಲ್ದನೇಕಧೂ ।
ರ್ತೋನ್ನತಿಯಂ ನೆಗಟ್ಚುವೆ ನೃಪಾಲಕ ಕೇಳ್ ನಿನಗಿಂದು ದೈವದಿಂ ॥
ಚೆನ್ನತರಂ ಬರಲ್ ದ್ವಿಗುಣಮಾಗದೆ ಮಾಣ್ಬುದೆ ನಿನ್ನ ಧೂರ್ತಮ ಪೇಟ್ ।
ಮುನ್ನಿನ ಚೆಂದಮಲ್ಲದೊಡೆ ತದ್ವಿಧಮಂ ನಿನಗೀವೆನೀಕ್ಷಣಂ ॥ ೧೦೪

ಎಂದು ಮತ್ತಂ,

ನಿನಗಾದೊಡೀಗ ದೇವಾಂ ।
ಗನೆಯರನನುಭವಿಪ ಚೆಲ್ವ ರೂಪಾದಪ್ಪುದೆ ॥
ನ್ನನುದಾಸೀನಂ ಮಾಡದೆ ।
ಮನವೊಸೆದಿರ್ದೊಡೆ ಮದೀಯಮೂರ್ತಿಯನೀವೆಂ ॥ ೧೦೫

ನೀನಿಂತು ಪೇಟ್ವುದಂ ಮ ।
ತ್ತೇನೆಂತುಂ ಮಾಡಿದಪ್ಪೆನಾದೊಡೆ ಬಱಿಕಂ ॥
ತಾನಿಹಲೋಕಸುಖಾತಿಶ ।
ಯಾನುನಯಕ್ಕೆಯ್ದೆ ಬಾಹ್ಯನಾಗೆನೆ ಸತತಂ ॥ ೧೦೬

ಎಂದವಂ ಪೇಟಿಲ್ ಬಱಿಕಾನಿಂತೆಂದೆಂ:—

ಮುನ್ನೆನೆದ ಕಾರ್ಯಮುಳ್ಳೊಡ ।
ಮೆನ್ನೊಳ್ ಪೇಟ್ದಿರಿಸು ರೂಪಪಲ್ಲಟಮಾಗಲ್ ॥
ನಿನ್ನ ಮತಿ ಚಲಿಸಿ ನಿಜಕಾ ।
ರ್ಯೋನ್ನತಿ ಕಿಡುಗುಂ ಬಱಿಕ್ಕೆ ಕೇಳ್ ಭೂಪಾಲಾ ॥ ೧೦೭

ಎಂಬುದುಮವಂ ತನ್ನೊಳ್ ಮುನ್ನಂ ನಿಶ್ಚಯಮಾಗಿರ್ದ ಕಾರ್ಯಮ ನೆನ್ನೊಳಿಂತೆಂದಂ:—

ಉಱುವಂ ಪ್ರಹಾರವರ್ಮಂ ।
ಕಿಱಿಯಯ್ಯಂ ತದ್ಗರೇಶನಿನ್ನಾತನನೆ ॥
ಟ್ಚಿ ಅದಂತೆ ಜೀರ್ಣಮಾಯ್ತಿಂ ।
ಬಱಿಕೆಯು ನೆನದಿಂದೆ ಕೊಲ್ವುದಾಬಂಧನದೊಳ್ ॥ ೧೦೮

ಶತಪಲಿಸುನಂತಪಲಿಗಳ್ ।
ಪ್ರತಿಪಕ್ಷಿಗಳಾಗಿ ತಮ್ಮೊಳಿರ್ದ ಪರಾಶರೂ ॥
ದ್ರತಮರನೊರ್ಬರನೊರ್ಬರೊ ।
ಳತಿಮಥನಮನೆಸಗಿ ಕೊಳ್ವುದವರೊಡಮೆಗಳಂ ॥ ೧೦೯

ಪದೆಪಿಂದೆ ಧನಜನಂ ಪೆ ।
ರ್ಚಿದ ಪೌಂಡ್ರಕದೇಶಮೆಲ್ಲಮಂ ಕಿಡಿಸೆಂದಾ ॥
ಮೊದಲೊಳ್ ಪೇಳ್ದೆನದಿನ್ನಾ ।
ಗದೆಂದು ಪೇಳ್ವೆಂ ಮಗುಳ್ದು ಸಚಿವರೊಳೋಲವಿಂ ॥ ೧೧೦

ಮಣಿಯೊಂದಸಿಲ್ಲಿಗೊರ್ಬಂ ।
ವಣಿಗ್ವರಂ ತಂದನದಱ ಮೂಲ್ಯಮನಿಂತೀ ॥
ಕ್ಷಣದೊಳ್ ಲಾಘವಮುಪ್ಪಂ ।
ತಣಿಯುರಮಾಡುತ್ತೆ ಕೊಳ್ವುದೆಂದಾಂ ಪೇಳ್ದೆಂ ॥ ೧೧೧

ಎಂದೀರಹಸ್ಯಕಾರ್ಯಮನೆಲ್ಲಮನೆನಗೆ ಪೇೞಲನಂತರಂ

ನಿನಗಿಂದಿತ್ತೆನಿವಲ್ತೆ ಸಂಸ್ಕೃತಿಯು ಸೌಖ್ಯಂ ಜೀವನಂ ನಿನ್ನ ಪ್ರಾ ।
ರ್ವನಿಬದ್ಧಸ್ಥಿತಿ ಪ್ರಣ್ಯಪಾಪಫಲಮಿನ್ನೆಂತಿರ್ದುದಂತಿರ್ಕೆ ಪೋ ॥
ಗೆನುತುಂ ತಳ್ಳಿಸಿಕೊಂಡು ಹೋಮಶಿಖಿಯೊಳ್ ತದ್ಭೂಪನಂ ನೂಂಕಿ ಚಂ ।
ದನಕರ್ಪೂರಮನಾಂ ಬಿಸುಟ್ಟೆನವಱೊಳ್ ಕಾಱೇೞದಂತಿರ್ಪವೋಲ್ ॥ ೧೧೨

ಅಂತಾನವನಂ ಹೋಮಶಿಖಿಯೊಳ್ ನೂಂಕಲವಂ ಭಸ್ಮಾವಶೇಷನಾಗ
ಲೊಡಂ,

ಅತಿಸಾಹಸನಿಜಕಾರ್ಯೋ ।
ನ್ನತಿಯಿಂ ತದ್ವಿಕಟವರ್ಮಭೂಪನ ಮರಣ ॥
ಸ್ಥಿತಿಯುಂ ಕಂಡಂಜಿ ಮನೋ ।
ಗತಚಿಂತೆಯೊಳಿರ್ದ್ದು ನಡುಗಿದಳ್ ಸತಿಯಾಗಳ್ ॥ ೧೧೩

ಅಂತು ಭಯಾತುರೆಯಾಗುತ್ತುಂ ಬಂದು

ಆದಿಯೊಳಂಗಜಂ ಜನಕನಾಗಿ ಕರಂ ನಿನಗಿತ್ತನೆನ್ನನಿಂ ।
ದಾದರದಿಂದೆ ಹೋಮಶಿಖಿಸಾಕ್ಷಿಯೊಳೊಪ್ಪಿರಲೆನ್ನನಾಂ ನಿಜಾ ॥

ಹ್ಲಾದದಿನಿತ್ತೆನೆಂದಬಲೆ ತನ್ನನುರಾಗದೊಳೆನ್ನನಪ್ಪಿ ಸಂ ।
ಮೋದದೊಳೋಷ್ಠಮಂ ಪಿಡಿದು ಚುಂಬಿಸಿದಳ್ ತಣಿವಪ್ಪ ಮಾಳ್ಕೆಯಿಂ॥

ಅಂತಪ್ಪಿದಳಂ

ಮಗು*ೞ್ದಾಲಿಂಗನಚುಂಬನಕ್ರಿಯೆಗಳಿಂ ಸಂತೋಷಸಂಭೂತಸೂ ।
ಕ್ತಿಗಳಿಂ ಪ್ರೇಮರಸಾತಿರೇಕಗತಿಯಿಂದಾನಾಗಳುತ್ಸಾಹದಿಂ ॥
ಮೃಗಶಾಬಾಕ್ಷಿಯ ಭೀತಿಯಂ ಬಿಡಿಸಿ ಪೆಂಪಿಂದವಳ್ಗೂಡಿ ರಾ ।
ಜಗೃಹಕ್ಕೆಯ್ದಿದೆನೆಲ್ಲರೀಕ್ಷಿಸುತಿರಲ್ ಮದ್ಗೇಹಕೆಯ್ತರ್ಪವೋಲ್ ॥ ೧೧೫

ಪಳಿಕಿನ ಬದ್ಧಭೂಮಿಕೆಯಿನುಜ್ಜ್ವಲಶಂಖನಿಘೃಷ್ಟಭಿತ್ತಿಮಂ ।
ಗಳಮಯನವ್ಯಚಿತ್ರತತಿಯಿಂ ಮಣಿತೋರಣನಿಬದ್ಧಪತ್ರಿಕಾ ॥
ಕುಳದಿನನೂನನಿರ್ಮಳವಿತಾನಸಮುನ್ನತಶೋಣರತ್ನಸ ।
ತ್ಕಳಶದಿನೊಪ್ಪುತಿರ್ಪ ನೃಪಗೇಹಮನಾಂ ಪುಗುತಂದೆನುರ್ವಿಪಾ ॥ ೧೧೬

ಸತಿ ಬಂದೆಸಗಿದ ಹೋಮೋ ।
ತ್ಥಿತಧೂಮಸ್ತೋಮಮೆಯ್ದೆ ಪರ್ಬಲ್ಕೆ ತಿರೋ ॥
ಹಿತನಾದನೆಂಬ ತೆಱದಿಂ ।
ದೆ ತರಣಿಯುಪರಾಂಬುರಾಶಿಯಂ ಮುಱಿಗೊಂಡಂ ॥ ೧೧೭

ಅಂತು ಸೂರ್ಯ್ಯಾಸ್ತಮಾನನಾಗಲೊಡಂ ಸಜ್ಜೆಯ ಮನೆಯೊಳ್ ಕಲ್ಪಸುಂದರಿಸಹಿತಮಾನಿರ್ದು,

ಅಂತಃಪುರದವ*ರ್ಗಳ ಪೆಸ ।
ರಂ ತರತರದಿಂದೆ ಕಲ್ಪಸುಂದರಿಯಿಂ ಕೇ ॥
ಳ್ದಂತವರೆಲ್ಲರನುಪಚಾ ।
ರಂ ತವೆ ಮೊಱೆಯಲ್ಕೆ ಕರೆದು ಮಿಗೆ ಮನ್ನಿಸಿದಂ ॥ ೧೧೮

ಅಂತವರಂ ಮನ್ನಿಸಿಯಾರಾತ್ರಿಯಂ ಕಳಿಯೆ,

ಉದಯಾದ್ರಿಸಿಂಹಪೀಠಾ ।
ಭ್ಯುದಯಾವನೊಸೆದೆಯ್ದಿ ಪಂಕಜಪ್ರಿಯನುರ್ವೀ ॥
ಮುದನನೊಡರ್ಚಿದನಂತ ।
ಲ್ತೆ ದಲುತ್ತಮರಪ್ಪ ಪುರುಷರಾದವರುದಯಂ ॥ ೧೧೯

ಅಂತು ಸೂರ್ಯೋದಯಮಾಗಲಾನುದಯವ್ಯಾಪಾರಮಂ ತೀರ್ಚಿ ನವರತ್ನರಂಜಿತಮಣಿಮಯವೇದಿಕಾಸುಧಾಮಯಭಿತ್ತಿಭಾಗದಿಂ, ಸ್ಫಟಿಕಪಾಷಾಣಘಟ್ಟಿತಕುಟ್ಟಿಮತಳದಿಂ, ಕದಂಬಮಣಿಕಮನೀಯಲಂಬಿತಭೂಷಣದಿಂ, ದೀಪಿತಸೋಪಾನದಿಂ ಮೆಱೆವಾಸ್ಥಾನಮಂಟಪಕ್ಕೆ ಕಲ್ಪಸುಂದರಿಸಹಿತಂ ಬರಲೆನಗಿದಿರೇೞ್ವ ಪ್ರಧಾನಪಸಾಯಿತಸಾಮಂತಸಂಧಿವಿಗ್ರಹಿಮಂಡಲಿಕಮನ್ನೆಯರಾಜಪುತ್ರರಾಪ್ತತರಂ ತಂತಮ್ಮ ಸ್ಥಾನದೊಳ್ ಕುಳ್ಳಿರವೇೞ್ತುಂ ಕಲ್ಪಸುಂದರಿಯುಮಾನುಂ ಸಿಂಹಾಸನಮನಲಂಕರಿಸಿಯಾಂ ಕುಳ್ಳಿರ್ದು ಪ್ರಧಾನರ ಮುಖಮಂ ನೋಡಿ,

ಮುನ್ನೆಡೆಗೊಂಡ ದುರ್ಗುಣಚಯಮಂ ವಿಕಟಾಂಗಮದೆಯ್ದೆ ಪೋಗಿ ಸಂ।
ಪನ್ನಮೆನಲ್ಕೆ ಸದ್ಗುಣಗಣಂ ಸುಭಗಾಕೃತಿ[ಯೆಂಬಿವೆ]ನ್ನೊಳೀ ॥
ಗನ್ನೆಲಸಿತವರ್ಕನುಗುಣಂಗಳಿನಲ್ ನಿಜಕಾರ್ಯಮಂ ಮಗು ।
ೞ್ದನ್ನೆಸಗಲ್ಕೆ ಪೇೞ್ವುದೊಸೆದೆಂದೆನಿವಂ ನಲವಿಂ ಪ್ರಧಾನರೊಳ್ ॥ ೧೨೦

ಅದೆಂತೆನೆ:— ಮುನ್ನಮಾಳೋಚಿಸಿದ ರಹಸ್ಯಕಾರ್ಯಮಂ ನೀಮಿಂತು ಗೆಯ್ವುವೆಂದು

ಮುನ್ನಂ ವಿಚಾರಿಸಿದ ಪೊಸ ।
ರನ್ನಮನತಿಹೀನಮೂಲ್ಯಮಂ ಕಾಣಲ್ಕೇ ॥
ಕಿನ್ನಾವಣಿಕ್ಷತ್ರಿಯ ಚಿ ।
ತ್ತನ್ನಲಿವನಿತರ್ಥಮಿತ್ತು ಕೊಳ್ವುದು ಮಣಿಯಂ ॥ ೧೨೧

ಇರ್ಬರ್ ಶೂದ್ರರ್ ಕಾಂಚನ ।
ಗರ್ಬದಿನೊರ್ಬೊರ್ಬರೊಳ್ ವಿವಾದಿಸಿದವರ್ಗಿಂ* ॥
ದಿರ್ಬಾಗಮನೆಸಗಿದರಾ ।
ಕೊರ್ಬಂ ತರ್ಗಿಸುವೆನವರ್ಗ*ಳಂ ಕರೆಯೆಂದೆಂ ॥ ೧೨೨

ಮುಳಿಸಿಂ ಪೌಂಡ್ರಕದೇಶವ ।
ನೞಿಯಲ್ ಬೇಡಿಗ ಬಹಳದುರ್ಭಿಕ್ಷದ ಕೋ ॥
ಟಲೆಯಿಂದಲ್ಲಿಯ ಜನಮಿ ।
ತ್ತಲೆ ಬರ್ಕುಂ ತನಗೆ ತಾನೆ ಸಮ್ಮದದಿಂದಂ ॥ ೧೨೩

ನೆಲಸಿಕುರ್ಗಿಂ ಮಿಗೆ ದುಯುರ್ಗಶಂ ಸರಕವುಕ್ಕುಂ ಪೆರ್ಚಿದಾಯುಷ್ಯವುಂ।
ಯ್ವುಟೀಗುಂ ಬಂಧುಜನಂ ಸಮಸ್ತಪರಿವಾರಂ ಪೇಸುಗುಂ ಮೈಮೆ ದು ॥
ರ್ಬಲಮುಕ್ಕುಂ ಚಿಮಿಯುಯ್ಯನಂ ಕೊಲಿಸಲಿನ್ನಂತಾತನಂ ಬಿಟ್ಟು ತ।
ನ್ನೊಲವಿಂ ರಾಜ್ಯಮನಾಳ್ವುಪ್ಪೇಳೆಸಗಿಮೆಂದಾಂ ಪೇಳ್ದೆನಂದೆಲ್ಲರೊಳ್ ॥

ಎಂದಿವು ಮೊದಲಾದ ಪೂರ್ವರಹಸ್ಯಕಾರ್ಯವಂ ಪ್ರಕಟಿಸುವುದುಂ, ಸಭಾಸದರೆಲ್ಲರ್ ವಿಸ್ಮಯಸ್ವಾಂತರಾಗಿ

ಭುವನದೊಳೀಕ್ಷಿಸಲ್ಕೆ ಪತಿಭಕ್ತಿಯೊಳಾವಳೊ ಕಲ್ಪಸುಂದರೀ।
ಯುವತಿಯುಪ್ರೋಲ್ ಮನೋಭವಸಮಾನನಿಜಾಕೃತಿಯಂ ಧರಾಧಿಪಂ ॥
ಗವಚವಿದೊಲ್ದು ಮಾಡಿದಳೆನುತ್ತೆ ಸಭಾಸದರುಬ್ಬಿಯಿಂ ಮುದೀ।
ಯುವಿವಿಧಮೂರ್ತಿಯಂ ಪಟಿಪಿನಿಂ ಪರಿಭಾವಿಸಿದರ್ ಧರಾಧಿಪಾ ॥ ೧೨೫

ಅಂತವರೆನ್ನ ಮೂರ್ತಿಯನೆವೆಯಿಕ್ಕದೆ ನೋಡಿ ಸಂತೋಷಂಬಟ್ಟು ರಹಸ್ಯಕಾರ್ಯಮನಾಂ ಪೇಳ್ದಂದದಿನೆಸಗಲನಂತರಂ,

ಅತಿಸನ್ಮತದಿಂ ಮಾತಾ।
ಪಿತೃಗಳ ಬಂಧನಮನಾಕ್ಷಣಂ ಕಳೆಗು ಸುಖ ॥
ಸ್ಥಿತಿಯುವರ್ಗಪ್ಪಂತಂಘ್ರಿ।
ದ್ವಿತಯಂಗಳ್ಗೆರಗಿದೆಂ ಕರಂ ಮಾನಸದೊಳ್ ॥ ೧೨೬

ಬಳಿಕ್ಕೊಲವಿಂದೆಲ್ಲರಂ ಕಳಪಿಯುಂತಃಪುರಕ್ಕೆ ಬಂದು ಪಿತೃಮಾತೃಗಳಂ ಕರೆಯಿಸಿ,

ನಿಜನಾಮಗೋತ್ರಮಂ ಪೇ।
ಳ್ದು ಜಲಕ್ಕನೆ ಮಾತೃಪಿತೃಗಳೊಪ್ಪುವ ಪದವಾ ॥
ರಿಜಯುಗಳಕೆರಗಿ ನಿಮ್ಮಾ।
ತ್ಮಜನಾನುಪಹಾರವರ್ಮನೆಂದವಗರ್ಸಿದೆಂ ॥ ೧೨೭

ಅಂತು ಪೇಟಲೊಡಂ

ತನುಪುಳಕಂಗಳುಣ್ಮೆ ಮನಮುತ್ಸವಮುರ್ಬಿ ನಿರಂತರಂ ತದಾ।
ನನವನಲಂಪಿನಿಂದಡರೆ ನೋಡಿ ಬಳಿಕ್ಕಮುದಪ್ಪಿ ಪೂರ್ವಕ ॥
ಲ್ಪನಕೃತ ಪುಣ್ಯವೃಕ್ಷಮೆನಸುಂ ಫಲಮಾಯ್ತು ಮಗಂದೆನುತ್ತೆ ಮ।
ಜ್ಜನಕನುಮಂತೆ ಮಜ್ಜನನಿಯುಂ ಪೊರೆಯೇಯಿದರುರ್ವರಾಧಿಪಾ ॥ ೧೨೮

ಅಂತು ಸಂತೋಷವಾತನನೆಯ್ದಿದಗೆ ಪುನಃಪುನಃಪ್ರಣತನಾಗಿಯುನಂತರಂ
ಸವಿನಯದೊಳೆಂದು ಸಾಮ್ರಾ ।
ಜ್ಯವನೆನ್ನಯ ಜನಕನಾಘ್ರಿಗೊಪ್ಪಿಸಿ ತತ್ಪಾ ॥
ದವನೋಲಗಿಸುತ್ತುಂ ನಾಂ ।
ದಿವಸಂಗಳ್ ಕೆಲವುಮಂ ಸುಖಂ ಮಿಗೆ ಕಳಿದೆಂ ॥ ೧೨೯

ಅಂತಿರ್ದನಂತರಂ ದೇವರನಱಸುವ ಬರ್ಬಂದಿರ್ಪುದುಂ
ಘನಚಂಪಾಪುರವಲ್ಲಭಂ ಸುಜನಮಿತ್ರಂ ಭಾವಿಸಲ್ ಸಿಂಹವ ।
ರ್ಮನೃಪೇಂದ್ರಂ ಮಿಗೆ ಶತ್ರುಪೀಡೆ ತನಗಾಗಲಿ ನಾಡೆಯುಂ ಮಿತ್ರರಾ ॥
ದ ನರೇಂದ್ರರ್ ಬಲಸಾಗಿ ಬರ್ಪುದೆನುತುಂ ಸಂಪ್ರೀತಿಯಿಂ ಪತ್ರಲೇ ।
ಖನಮಂ ತಾಂ ಕಳಿಪಲ್ ಮನೋಮುದದಿನಾವೆತ್ತಿಂದೆವುರ್ವೀಶ್ವರಾ ॥ ೧೩೦
ಪರಹಿತಮನೆಸಗಲೆಂದಾ ।
ದರದಿಂದೆತ್ತಿಂದ ಪುಣ್ಯಫಲದಿಂದಾಂ ದೇ ॥
ವರ ಪದಯುಗಮಂ ಕಂಡೆಂ ।
ಪಿರಿದುಂ ಸಂಕಲ್ಪಸಿದ್ಧಿಯಾಯ್ತೆನಗೀಗಳ್ ॥ ೧೩೧

ಎಂದು ಉಪಹಾರವರ್ಮಂ ತಾಂ ಮಾಡಿದ ವೃತ್ತಾಂತಮಂ ಪೇಳ್ದೊಡ
ದರ್ಕೆ ರಾಜವಾಹನಂ ಸಂತೋಷಂಬಟ್ಟು

ನೆಗಳ್ದು*ಪಹಾರವರ್ಮನಪ್ರೋಲಾಗರ್ಮಸಾಧ್ಯಮೆನಿಪ್ಪ ಸಾಹಸಂ ।
ಮಿಗುವ ದುರಂತಕರ್ಮದೊಳವಂ ಸಲೆ ಮಾಳ್ಪವನಾವನೆಂದು ಬ ॥
ಲ್ಕೆಗೆ ಮಿಗೆ ಮೆಚ್ಚಿ ಮಸ್ತಕಮನೊಯ್ಯನೆ ತೂಗಿ ಮನಃಪ್ರಸಾದದಿಂ ।
ಪೊಗ*ಳ್ದನ ರಾಗಸಾಗರತರಂಗದೊಳಿರ್ದನಭಂಗವಿಕ್ರಮಂ ॥ ೧೩೧

॥ ಗದ್ಯ ॥

ಇದು ನಿಖಿಲಬುಧಜನಮನೋವನಜವನದಿವಾಕರಕಿರಣಪ್ರಸನ್ನ
ಶ್ರೀಮದಭಂಗವಿಟ್ಠಲಪದಾಂಭೋಜಮತ್ತಮಧುಕರ
ಮಧುಸೂದನನಂದನ ಸರಸಕವಿ ಚಾಂಡರಾಜ ವಿರಚಿತಮಪ್ಪ
ಅಭಿನವ ದಶಕುಮಾರಚರಿತೆಯೊಳ್
ಉಪಹಾರವರ್ಮಕಥಾವೃತ್ತಾಂತಂ
ದಶಮಾಶ್ವಾಸಂ

—ಪ್ರಮತಿಯ ಕಥೆ—

ಶ್ರೀಮನ್ಮಂಗಲವೈಭವ ।
ಧಾಮಂ ಪ್ರಮತಿಯನಲಂಪಿನಿಂ ಕೇಳ್ದಂ ನೀಂ ॥
ಪ್ರೇಮದೊಳೆಸಗಿತ್ತೇನಂ ।
ದಾಮಹಿಮಂ ಕೂರ್ತಭಂಗವಿಟ್ಠಲಭೃತ್ಯಂ ॥ ೧

ಅಂತು ಕೇಳ್ವುದುಂ ಪ್ರಮತಿ ಕೆಯ್ಗಳಂ ಮುಗಿದು,

ನಿಮ್ಮಡಿಯಂ ವಿಚಾರಿಸಲನೇಕಧರಾತಳಮಂ ತೊಳಲ್ದು ಮ ।
ತ್ತೊಮ್ಮೆಯದೊಂದು ಘೋರತರಕಾನನದೊಳ್ ಬರುತಿರ್ಪ ತಾಣದೊಳ್ ॥
ಕೆಮ್ಮುಗಿಲಾಯ್ತು ಪಶ್ಚಿಮನಭಸ್ಥಳಿ ನೀಡನಿಕಾಯದತ್ತಲಾ ।
ದಮ್ಮನಮಿತ್ತು ವೆರ್ದೆಸೆಯೊಳೆಳ್ಚರಿದಾಡುವ ಪಕ್ಷಿಸಂಕುಳಂ ॥ ೨

ಅಂತು ಸಂಧ್ಯಾಲಕ್ಷಣಂ ತಲೆದೋಱಲಂಧಕಾರದ ಭೀತಿಯಿಂದಾಂ ತ್ವರಿತಗತಿಯಿಂ ಪೋಗೆ ಮುಂದೆ,

ನಿಮಿ*ದೊರ್ಗಳ್ಪಂಬೆತ್ತು ಬೀಱಲ್ಗರೆದ ಜಡೆಗಳಂ ನೀಳ್ದು ಚೆಲ್ವಾದ ಶಾಖಾ ।
ಸಮುದಾಯಂ ಪತ್ತು ತೋಳ್ಗಳ್ ಮಿಸುಗುವ ತನಿವಣ್ಗಂಪು ಭಾಳಾಕ್ಷಿಯಾಗ
ಲೆ॥ಕ್ರಮದಿಂದಂ ತಾಂಡವಾಡಂಬರಮನೆಸಗುವೀಶಂಬೊಲೊಪ್ಪಿರ್ದುದಾನಂ ।
ದಮುಮಂ ವಿಸ್ತಾರಿಯಭ್ರಂಕಷವಟತರು ಪತ್ರಪ್ರವಾಳಪ್ರಸಿದ್ಧಂ ॥ ೩

ಅಂತಿರ್ದುದೊಂದು ವಟಕುಜಮಂ ಕಂಡೆಯ್ದುವ ಸಮಯದೊಳ್

ಲೋಕಮನೆಲ್ಲಮಂ ಸಲೆ ತೊಳಲ್ದು ಬಳಲ್ದು ವರೂಥಮಂ ಹಯಾ ।
ನೀಕಮನೊಯ್ದು ಪೆಂಪಿನಪರಾದ್ರಿನಿಕುಂಜದೊಳಿಟ್ಟು ವತ್ತೆ ನಿ ॥
ವ್ರ್ಯಾಕುಳದಿಂ ತದದ್ರಿತಟದೊಳ್ ಸುಖನಿದ್ರೆಯೊಳಿರ್ಪನೆಂಬವೋಲ್ ।
ಕೋಕನದಪ್ರಿಯಂ ಪದೆಪಿನಿಂ ಪರಿದೆಯ್ದಿದನಸ್ತಶೈಲಮಂ ॥ ೪

ಅಂತು ಗಭಸ್ತಿಮಾಲಿಯಸ್ತಾಚಲಮನೆಯ್ದುವುದುಂ;

ಅಲ್ಲಿರ್ದ ಪಲ್ವಲೋದಕ ।
ದಲ್ಲಿಯೆ ತತ್ಕಾಲಕರ್ಮಮಂ ತೀರ್ಚಿ ಲಸ ॥

ತ್ಪಲ್ಲವದ ಪಾಸಿಕೆಯನಾಂ ।
ಮೆಲ್ಲಿತ್ತ್ತಪ್ಪಂತು ಪಾಸಿದೆಂ ಮರದಡಿಯೊಳ್ ॥ ೫

ಅಂತು ಸಂಧ್ಯಾವಂದನಂಗೆಯ್ದು ಪಲ್ಲವಮಂ ಪಾಸಿರ್ಪಿನಂ

ಧರೆಯೊಳ್ ಸತ್ವರಜೋಗುಣ ।
ಮೆರಡುಂ ಪುಸಿಯಾಗೆ ಘನತಮೋಗುಣಮೆಯ್ದಾ ॥
ವರಿಸಿತ್ತು ವಿಗೆಯನೆನಲ ।
ಚ್ಚರಿಯಿಂ ತೀವಿರ್ದುದಂಧಕಾರಂ ಕಾರಂ ॥ ೬

ಅಂತುಬಿಗಿದ ಮಬ್ಬಿನೊಳ್

ತರುವಿನ ಸುತ್ತಲ್ ನೆಲಸಿದ ।
ಶರಾರುಕುಲಮೆನಗೆ ಶರಣೆನುತಾ ಗಳ ನಿ ॥
ಬ್ಬರಮೆನಿಸುವ ಸುಖನಿದ್ರಾ ।
ಪರವಶನಾಗಿರ್ದೆನಿರ್ಪಿನಂ ತತ್ಕ್ಷಣದೊಳ್ ॥ ೭

ಉಪಮಿಸಲರಿದಂತಿಂತೆಂ ।
ದು ಪೇಟಿಲಳವಲ್ತು ವಚನಿಸಲ್ ವಶಮಲ್ತುಂ ॥
ಬಪರಿಮಿತಸ್ಪರ್ಶೇಂದ್ರಿಯ ।
ದ ಪರಮಸುಖಮನಾಯ್ತು ಮಚ್ಚರೀರಕ್ಕಾಗಳ್ ॥ ೮

ಆಪರಮಸುಖದೊಡನೆ ನಿದ್ರೆದಿಳದೆಡವ ದೆಸೆಯಂ ನೋಟ್ಪನ್ನೆಗಂ

ರಜತಗಿರೀಂದ್ರಮಂ ಕಡೆದು ಕಂಡರಿಸಿಟ್ಟವೊಲೊಲ್ದು ಭಾವಿಸಲ್ ।
ತ್ರಿಜಗದೊಳತ್ಯಪೂರ್ವಮೆನಿಸಿರ್ಪ ಮನೋಹರಸೌಧಶಾಲೆಯೊಳ್ ॥
ರಜನಿಕರಪ್ರಭಾಪಟಲದಂತೆ ಸುಷುಪ್ತಿಯೊಳೊಪ್ಪುತಿರ್ಪ ವಾ ।
ರಿಜಮುಖಿಯರ್ ಕೆಲರ್ ನಯನಕೌತುಕಮಂ ಪಡೆದರ್ ನೃಪಾಧಿಪಾ ॥ ೯

ಅತನುಮದದ್ವಿಪಂ ಬಿಸದಿಂ ಜಲಕೇಳಿಯೊಳಟ್ಟಿ ಪದ್ಮಿನೀ ।
ಲತೆಯೊ ನಿರಾಶ್ರಯಂ ಗಗನಮಂದಿಳೆಯೊಳ್ ನೆಲಸಿರ್ದ ಚಂದ್ರಿಕಾ ॥
ತತಿಯೊ ಹರಂಗೆ ಬೆರ್ಚಿ ಮದನಂ ಬಿಸುಟೋಡಿದ ಪುಷ್ಪಬಾಣಸಂ ।
ಹತಿಯೊ ಎನಲ್ಕೆ ಕೂರ್ತು ಸುಖನಿದ್ರೆಯೊಳಿರ್ದುದು ಕಾಮಿನೀಜನಂ ॥ ೧೦

ಸ್ತನಯುಗಭಾರದಿಂ ಕಚದ ಬಲ್ಪೊಱೆಯಿಂ ಪೃಥುವಾಲಿ ಬಿಣ್ಪಿನಿಂ ।
ವನಿತೆಯರಾವಗಂ ಪದೆಪಿನಿಂ ನಡೆಗೆಟ್ಟೊಱಗಿರ್ದರೆಂಬಿನಂ ॥

ವನಜನಿಭಾಸ್ಯೆಯರ್ ಕುಟಿಲಕುಂತಳೆಯರ್ ತನುಮಧ್ಯೆಯರ್ ಮನೋ ।
ಜನೊಳದಿರೊಡ್ಡಿ ಕಾದಿ ಪಡಲಿಟ್ಟವೊಲಿರ್ದರನೂನನಿದ್ರೆಯಿಂ ॥ ೧೧

ಇಂದು ಮನೋಜರಾಜನ ಧನುರ್ಲತೆಗುನ್ಮದಭೃಂಗಮಾರ್ವಿಯುಂ ।
ಸೌಂದರಿಯರ್ ಸಮಂತು ಪಡೆದಪ್ಪರೆನಿಪ್ಪವೊಲೊಪ್ಪುತಿರ್ಪ ಪು ॥
ರ್ಬಿಂದೆಳನೀಲ ವರ್ಣದೆವೆಯಿಂ ನಿಡುಗಣ್ಣರೆಮುಚ್ಚಿ ನಿದ್ರೆಯೊಳ್ ।
ಸಂದಬಲಾಜನಂ ನೆನೆಸಿದಪ್ಪರನಂಗನ ಶಸ್ತ್ರಶಾಲೆಯಂ ॥ ೧೨

ಬದೆದೊಡೆ ಕೂರ್ತು ನೋಡಿದೊಡೆ ಮಾಣದುಗುಳ್ದೊಡೆ ತೋಳ ನೀಡಿ
ಯು । ಪ್ಪಿದೊಡೆ ಮರಂ ಕೊನರ್ವುದಮಗೆಟ್ಟು ಪರಂಬೊಲಿದೇಕೆ ಭಾವಿಸ
ಲ್ ॥ ಸುದತಿಯರಿರ್ದರಾನಲಿದೆನಾತರುಸಂತತಿ ಸೋಲ್ತು ತಮ್ಮ ದೇ ॥
ಹದ ಸೊಬಗಂ ತವಂಗನೆಯರ್ಗಿತ್ತುದಿದಲ್ತೆ ಮಹಾತ್ಮರೊಳ್ಗುಣಂ ॥ ೧೩

ಅಂತು ಕುಸುಮಾಸ್ತ್ರಮಂ ಕವಿದಂತೆಯುಂ, ಕಮನೀಯಕನಕಪುತ್ರಿಕೆಗಳಂತೆಯುಂ, ಮುಚಿದೊಡಗಿದ ಮಣಿವಲ್ಲಿಗಳಂತೆಯುಂ, ಪಳತಸ್ಥಳಪದ್ಮದಂತೆಯುಂ, ನವಮಾಣಿಕ್ಯಶಲಾಕೆಯಂತೆಯುಂ, ಸೋಮಕಳಾಸಮೂಹದಂತೆಯುಂ, ಕಣ್ಗೆಯ್ವ ಕೇಕಿಗಳಂತೆಯುಂ, ಮೆಯ್ಮೆಱೆದ ಮರಾಳಮಂಡಲದಂತೆಯುಂ, ಕುಡಿಯಿಡುವ ಕಲ್ಪಲತೆಗಳಂತೆಯುಂ, ಪುಂಡರೀಕಷಂಡದಂತೆಯುಂ, ಕಾಮರಾಜಕೋಶದಂತೆಯುಂ, ಜಗನ್ಮೋಹನಮಂತ್ರದಂತೆಯುಂ, ಸೌಭಾಗ್ಯಶರಧಿಯಂತೆಯುಂ, ಸುರಕುಜದ ಸುಮನೋಮಂಜರಿಯಂತೆಯುಂ, ಮಱೆದೊಱಗಿ ನಿದ್ರೆಯೊಳಿರ್ಪ ಕೆಲಬರ್ ಸತಿಯರಂ ಕಂಡು ಚೋದ್ಯಂಬಟ್ಟು ಬಂದ ದೆಸೆಯಂ ನೋಟ್ಪನ್ನೆಗಂ,

ಶ್ರುತಿರಹಿತಂ ದ್ವಿಜಿಹ್ವನಪದಸ್ಥನಸಾರತವಕ್ರಗಂ ವಿಷಾ ।
ನ್ವಿತನುರುಛಿದ್ರವಾಸಿ ಕುಟಿಲಂ ಫಣಿವಲ್ಲಭನೆಂದು ತತ್ಫಣಾ ॥
ಸ್ಥಿತಿಯನದಂ ಬಿಸುಟ್ಟು ಮೃದುಶಯ್ಯೆಗೆ ಬಂದಳೊ ಕೂರ್ತು ಭೂಮಿದೇ
ವತೆಯೆನಿಪಂದದಿಂ ಪವಡಿಸಿರ್ದಳದೊರ್ಬ ಕುಮಾರಿಯುರ್ವಿಪಾ ॥ ೧೪

ತರುಣಿಯುತಿಮೃದುಳಚೀನಾಂ ।
ಬರಮಂ ಮುಸುಕಿಟ್ಟು ನಿದ್ರೆಯೊಳ್ ಮೆಱೆದಿರ್ದಳ್ ॥
ತೆರೆಮುಗಿಲ ಮಱೆಯ ಮಿಂಚಿನ ।
ತಿರುಳಸಿರಂ ಪಡೆದು ನೆಲೆಗೆ ನಿಂದವೊಲಾಗಳ್ ॥ ೧೫

ಸತಿಯ ತಲೆಗಿಂಬಿನೆಡೆಗೆಯ್ ।
ನುತಪೇಟಿಕೆಯಾಗೆ ಪೆಱನೊಸಲ್ಮೆಱೆವ ಮೊಗಂ ॥
ಸತತಂ ಮೌಕ್ತಿಕಲಿಂಗಾ ।
ಕೃತಿಯಂತೆಸೆದಿರ್ದುದಾಸರೋಜೇಕ್ಷಣೆಯಾ ॥ ೧೬

ವನಿತೆಯ ಬಲಗೆಯ್ ಸೆಳ್ಳುಗು ।
ಗೊರ್ನೆವೆಳಗಿಂ ಗುರುನಿತಂಬದೊಳ್ ನೀಡಿ ಕರಂ ॥
ನೆನೆಯಿಸಿದತ್ತದ್ರಿಗುಹಾ ।
ನನದಿಂ ಪೊಱಮಡುವ ನಿರ್ಝರಾಂಬುಪ್ಲವಮಂ ॥ ೧೭

ಕೋಕನದ ವದನೆ ಸಲೆ ಸಱ ।
ಸ್ಯೈಕನೆಯೊವರ್ಗಗ್ಗಲಾಗಿರಲ್ ಕುಚಮೆರಡುಂ ॥
ಏಕೀಕೃತವಾಗಲ್ಕವ ।
ಳೇಕಸ್ತನಿಯೆಂಬ ಮಾತ್ಕೆಯಿಂ ಕಣ್ಗೆಸೆದಳ್ ॥ ೧೮

ಅಂತು ನಿದ್ರೆಯೊಳಿರ್ದಳಂ ಕಂಡು ದೇವಸ್ತ್ರೀಯೆಂದು ನಿಶ್ಚಯಂ ಮಾಡಿ ಮತ್ತಂ

ಪೆಱನೊಸಲೊಳ್ ಕಪೋಳತಟದೊಳ್ ನಳತೋಳ ಮೊದಲ್ಗಳೊತ್ತಿ
ನೊಳ್ । ಕಿಱುಬೆಮರುಣ್ಮುತಿರ್ದಪುದು ಮೇಲುದಿನಿಕ್ಕಿದ ಚೀನವಸ್ತ್ರ
ದೊ ॥ ಳ್ಸೆಱಗೆನಸುಂ ತೆರಳ್ಚದಪುದಂಗವಣಂ ನಸುಗೆತ್ತಿದಪ್ಪುದೇ ।
ತೆಱದೊಳವಳ್ ಮನುಷ್ಯಸತಿಯೆಂದೊಸೆದೀಕ್ಷಿಸಿದೆಂ ಕುಮಾರಿಯಂ ॥ ೧೯

ನವತಾಂಬೂಲರಸಾಧರಂ ಮೃದುಹರಿದ್ರಾರಾಗದೇಹಂ ದುಕೂ ।
ಲವಿಶೇಷಂ ಶ್ರಮತೋಯಬಿಂದುನಿವಹಂ ಸುಯ್ಗಂಪು ನೋಡಲ್ ಮನೋ ॥
ಭವಕೇಳೀನಿಜಲಕ್ಷಣಂ ವಿಮಳನಿದ್ರಾಮುದ್ರಿತಾಕ್ಷಿದ್ವಯಂ ।
ದಿವಿಜಸ್ತ್ರೀಯರೊಳುಂಟೆ ತತ್ಸುಭಗರೂಪಾಯತ್ತಸಲ್ಲಕ್ಷಣಂ ॥ ೨೦

ಪೊರೆದ ದುಕೂಲವೊಂದಿನಿಸು ಮಾಸಿದೆ ಫಾಳದೊಳಿಟ್ಟ ಚಂದನಂ ।
ತೆರಳಿದೆ ವೇಣಿಯೊಳ್ ತೊಡರ್ದ ಮಲ್ಲಿಗೆ ಬಾಡಿದೆ ನೋಡೆ ನಿದ್ರೆಯು ॥
ಬ್ಬರವೊಳಮರ್ತ್ಯಕಾಂತೆಯಿವಳಲ್ತು ಮನುಷ್ಯಕುಮಾರಿಯೆಂದು ಬಿ ।
ತ್ತರದಿನೊಱಲ್ದು ಕಣ್ದಣಿಯೆ ನೋಡಿದೆನಾನವಳಂ ನೃಪಾಲಕಾ ॥ ೨೧

ಅನಿಮಿಷದೃಷ್ಟಿಯಾಗಿಯುಮಮರ್ತ್ಯವಿಳಾಸಿನಿಯಲ್ತು ಸುಪ್ತಿಸಂ ।
ಜನಿತಶರೀರಿಯಾಗಿಯುಮುದಗ್ರತಪಸ್ವಿನಿಯಲ್ತು ಭಾವಿಸಲ್ ॥
ಜನನುತಿ ರಂಜಿಪಬ್ಜಮುಖಿಯಾಗಿಯುಮಿಾಕೆ ಕಳಂಕೆಯಲ್ತೆನು ।
ತ್ತನವಧಿದೃಷ್ಟಿಯಿಂದವಳನೀಕ್ಷಿಸಿದೆಂ ಮಲಗಿರ್ದ ತಾಣದೊಳ್ ॥ ೨೧

ಆನಿರ್ದ ಭೂಜಮೆತ್ತಣ ।
ದೀನೃಪಮಂದಿರಮಿದೆತ್ತಣಿಂ ಬಂದತ್ತಂ ॥
ದಾನೊಂದರೆನಿಮಿಷಂ ತ ।
ದ್ಧ್ಯಾನದೊಳಿರ್ದೆಂ ನೃಪಾಲಕುಲಮಣಿದೀಪಾ ॥ ೨೨

ಅಂತು ವಿಸ್ಮಯಂಬಟ್ಟನಂತರಂ,

ಏನಾದೊಡಕ್ಕೆನುತೊ ।
ಲ್ಲಾನೊಯ್ಯನೆ ಪೋಗಿ ತದ್ವಧೂಟಿಯ ಶಯನ ॥
ಸ್ಥಾನದೊಳಾಕೆಯ ತೋಳ್ಗನಿ ।
ಸಾನುಂ ಸೋಂಕುವವ್ರೊಲಬ್ತಿಯಿಂದಂ ಸಾರ್ದೆಂ ॥ ೨೩

ಅಂತು ಸಾರ್ದಿರ್ಪನ್ನೆಗಂ,

ತೀಡುವ ಗಾಳಿಯಿಂ ಕುಸುಮಶಯ್ಯೆಗೆ ಮೆಲ್ಲಮುಸುಯೆ ಮೇಲೆ ಬಂ ।
ದಾಡುವ ತುಂಬಿಯಿಂಚರದಿನೆನ್ನಯ ಮುಯ್ಪಿನ ಸೋಂಕಿನಿಂ ಬೆಮ ॥
ರ್ಮೂಡುವ ತಣ್ಪಿನಿಂ ಪುದಿದ ನಿದ್ರೆ ಕರಂ ತಿಳಿದಾಗಳೊಲ್ದವಳ್ ।
ನೋಡಿದಳೆನ್ನ ಸುಂದರತೆಯಂ ಬೆಱಗಾಗಿ ಧರಾಧಿನಾಯಕಾ ॥ ೨೪

ನಲವಿಂ ಮೆಯ್ಮುಱಿದೆಬ್ದು ಕೆಯ್ಯ ಚಿಟಕಂ ಮೆಲ್ಪಿಂ ಕಳಲ್ದೊಯ್ಯನಾ । ಗುಱ ತೋಱಲ್ ಚಿಟುಕಿಕ್ಕಿ ಕಣ್ಗಡರ್ದ ನೀರಂ ಚಿಮ್ಮಿ ಜೋಲ್ದಿರ್ದ ಕುಂ ॥ ತಳಮಂ ತಿರ್ದಿ ಮಗುಬ್ದಿ ಮತ್ತನುಮನೊಲ್ದಾಪಾದಮೂರ್ಧಾಂತಮಾ । ಗಲಲಂಪಿಂ ಸತಿ ನೋಡಿ ಮತ್ತೆ ಸುಖದಿಂ ಕಣ್ಮುಚ್ಚಿದಳ್ ಶಯ್ಯೆಯೊಳ್ ॥ ೨೫

ಅಂತವಳ್ ಮಗುಬ್ದಿ ಕಣ್ಗೆಯ್ದುದನಾಂ ಪುಸಿನಿದ್ದೆಯೊಳಿರ್ದಿದೇನೆಂದಾಶ್ಚರ್ಯಂಬಡುವನ್ನೆಗಂ,

ತರುಣಿಯ ಮೆಯ್ಸೋಂಕಿಂ ಬಂ ।
ಧುರಶಯ್ಯಾಸೌಖ್ಯದಿಂ ಪಥಶ್ರಮದಿಂದಂ ॥

ಪರಿಣಾಮಮನಿದ್ರೆ ಬಂದಾ ।
ವರಿಸಿತ್ತೆನಗೇನನೆಂಬೆನತಿಕೌತುಕಮಂ ॥ ೨೭
ಆಂ ನಿದ್ರೆಯೊಳ್ ಕಿಱಿದು ಬೇಗಮಿರ್ಪುದುಂ,
ಮೊಳಗಲ್ಲಳೌಂಕೆ ಜಂಝಾ ।
ನಿಳನಾರ್ಪಿಂ ಬೀಸೆ ಶೀತಮಮಾವರಿಸಿ ಪಸು ॥
ರ್ದಳಿರೊಟ್ಟೈಲೊತ್ತೆ ಬೇಗಂ ।
ತಿಳಿಯಿತ್ತೆಂದೆನಗೆ ನಿದ್ರೆ ದುಃಖಂದೋಱಲ್॥ ೨೮
ಅಂತೆನಗೆ ನಿದ್ರೆ ತಿಳಿಯಲೊಡಂ,
ಆನೃಪಮಂದಿರಮಾಚಂ ।
ದ್ರಾನನೆಯಿರ್ಪಾಸುಮಂಚಮಿಲ್ಲದೆ ಮುನ್ನೊ ॥
ಲ್ದಾನಿರ್ದ ಮರದ ಕಠಿನ ।
ಸ್ಥಾನಂ ಮಗುಳ್ದೆ*ನಗೆ ಕಾಣಲಾಯ್ತಾಕ್ಷಣದೊಳ್ ॥ ೨೯

ಅಂತು ಮುನ್ನಿರ್ದ ಮರನಂ ಕಂಡು ರಾಜಭವನಮುಂ ತತ್ಕುಮಾರಿಯುಮಂ ಕಾಣದೆ

ಇದು ಕನಸೆಂಬೊಡಂ ಕನಸಿದಲ್ತು ದಿಟಂ ದಿಟಮೆಂಬೊಡಂ ಮಗು ।
ಳ್ದಿದು ದೊರೆಕೊಳ್ಳದಿರ್ಪ ದೆಸೆಯಿಂ ದಿಟಮಲ್ತು ಮದೀಯಚಿತ್ತಮಾ ॥
ಸುದತಿಗೆ ಮಾಱುವೋಯ್ತದಱ ಕಾರಣಮಂ ತಿಳಿವನ್ನೆಗಂ ಮನಂ ।
ತದೊಳೊಱಗಿರ್ಪೆನೆಂದು ಮುಸುಕಂ ಪದೆದೆನ್ನ ಮುಖಕ್ಕೆ ಸಾರ್ಚಿದೆಂ ॥
ದೊರೆವೆತ್ತ ಪೂರ್ವದಿಗ್ಭೂ ।
ಧರಗುಹೆಯಿಂ ಕಿರಣನಖರಮಂ ಮಸೆದಿನಕೇ ॥
ಸರಿ ಪೊಱಮಟ್ಟೈಳೆಯ ತಮಃ ।
ಕರಿಯಂ ಘುಡಿಕೆಂದು ನುಂಗಿದತ್ತಾಕ್ಷಣದೊಳ್ ॥ ೩೦

ಅಂತು ಸೂರ್ಯೋದಯಮಾಗಲಾಂ ನಿದ್ರೆಯಿಂದೆಬ್ದು ಸೌಧ್ಯಾವಂದನಂಗೆಯ್ದು ತತ್ಕುಜದ ತಣ್ಪಿನೊಳ್ ಕುಳ್ಳಿರ್ದಾರಾತ್ರಿಯ ವೃತ್ತಾಂತಮನೆನ್ನೊಳಾಂ ವಿಚಾರಿಸುತಿರ್ಪನ್ನೆಗಂ,

ಬಿಡುಜಡೆ ಕರ್ಣಕುಂಡಲಮುಡರ್ದ ಘಟಸ್ತನಮಿಟ್ಟ ಭಸ್ಮಮು ।
ಳ್ಳುಡೆಗಳವಟ್ಟ ವಲ್ಕವಸನಂ ಪೊಸಮುತ್ತೆಸೆವಕ್ಷಮಾಲೆಯೊ ॥

ಪೆರ್ಡಿನಡು ತನ್ನೊಳೊಪ್ಪುತಿರಲೊರ್ಬ ತಪಸ್ವಿನಿ ಬಂದು ಕೂರ್ಮೆ ನೂ।
ರ್ಮಡಿಸಿರೆ ಮಾತೃಮೋಹಮೊಸೆಯಲ್ ಪದೆದಪ್ಪಿದಳೆನ್ನನುರ್ವಿಪಾ ॥ ೨೦

ಅಂತೆನ್ನನಾತಪಸ್ವಿನಿಯುಪ್ಪಿ,

ಎಲೆ ಮಗನೆ ವನದೊಳೊರ್ಬನೆ ।
ತೊೞಲುತ್ತಿರ್ಪೇಕೆಯೆಂದೊಡಾಂ ನೀನಾರೆಂ ॥
ದೊಲವಿಂ ಕೇಳಲ್ ತಾರಾ ।
ವಳಯಾನೆಂದಾಕೆ ನಗುತೆ ಮತ್ತಿಂತೆಂದಳ್ ॥ ೨೨

ದೊರೆವೆತ್ತೊರ್ವ ತಪೋಧನಂ ವನದೊಳೆನ್ನಂ ಕಂಡೆಲೇ ಕಾಂತೆಯೀ ।
ಪರಿ ವೇಷಂ ನಿನಗಕ್ಕೆನುತ್ತೆ ಮುಱುಮಾತಂ ಕೇಳದಾತಂ ನಿರಂ ॥
ತರದಿಂ ಶಾಪಮನಿತ್ತನೀಯಲನಿಶಂ ಚಂಚಜ್ಜಟಾವಲ್ಕಲಾಂ ।
ಬರಭಸ್ಮಂ ನೆಲಸಿತ್ತು ಮತ್ತನುವಿನೊಳ್ ಕೇಳ್ ಪೆಂವಿನಿಂ ಪುತ್ರಕಾ ॥ ೨೪

ಅಂತಾತಪೋಧನಂ ನಿಷ್ಕಾರಣಂ ಶಾಪಮನೆನಗೆ ಕುಡಲ್,

ಈಶಾಪಮೋಕ್ಷಕಾರಣ ।
ಮೀಶಾನಪದಾಬ್ಜಸೇವೆಗೆಯ್ದಘಕುಲಮಂ ॥
ನಾಶಮನೆಯ್ದಿಸೆ ಪುಣ್ಯದ ।
ರಾಶಿಗೆ ಶ್ರಾವಸ್ತಿನಗರಿಗಾಂ ಪೋಪಾಗಳ್ ॥ ೨೫

ಇರುಳೊರ್ಬನೆ ನೀನಾಲದ ।
ಮರದಡಿಯೊಳ್ ನಿದ್ರೆಗೆಯ್ದಿರಲ್ ಕಂಡಾಂ ಮೋ ॥
ಹರಸಂ ಮಿಕ್ಕೆನ್ನಯ ಕರ।
ಸರಸಿಜದೊಳಗಾಂತು ಪೋಗುತಿರ್ಪಪದದೊಳ್ ॥ ೨೬

ಜನವಿಖ್ಯಾತಿಯನಾಂತು ರಂಜಿಸುವಿನಂ ಶ್ರಾವಸ್ತಿಯೊಳ್ ಧರ್ಮವ ।
ರ್ಧನರಾಜಾತ್ಮಜೆ ಪೆಂಪಿನುಪ್ಪರಿಗೆಯೊಳ್ ಕಾಂತಾಲಸನ್ಮಧ್ಯದ ॥
ಲ್ಲಿ ನಿತಾಂತಂ ನವಮಾಲಿಕಾಖ್ಯೆ ಮೃದುಶಯ್ಯಾಮಂಚದೊಳ್ ನಿದ್ರೆಗೆ ।
ಯ್ವ ನಿವಾಸಂ ಮೊಱೆದಿರ್ಪುದಂ ಪದೆಪಿನಿಂ ಕಂಡೆಂ ಮನಃಪ್ರೀತಿಯಿಂ ॥ ೨೭

ಅಂತು ಶ್ರಾವಸ್ತಿಯ ಧರ್ಮವರ್ಧನನ ಕುವರಿ ನವಮಾಲಿಕೆ ಉಪ್ಪರಿಗೆಯೊಳಿರ್ದುದಂ ಕಂಡು,

ಪರಿಯುದವನಂ ಭವಾನೀ ।
ವರನ ಗಣಿಸ್ತ್ರೀಯರಿರ್ದ ಠಾವಿಂಗುಯ್ಯಲ್ ॥
ಪಿರಿಯರಬೇನೆಂಬರೆನು ।
ತ್ತುರುಮುದದಿಂ ನಿನ್ನನಲ್ಲಿ ಮಡಗಿದೆನೊಲವಿಂ ॥ ೩೮

ಅಂತು ನಿನ್ನನಿರಿಸಿದಾಂ ಶ್ರಾವಸ್ತಿಯ ಪೊಱವೊೞಲ ತ್ರ್ಯಂಬಕನ ದೇವಾಲಯಕ್ಕೆ ಪೋಗಿ,

ಅಂಬಿಕೆಯಾಣ್ಮನಂ ಸುರನರೋರಗಕಿನ್ನರವೃಂದವಂದ್ಯಪಾ ।
ದಾಂಬುಜನಂ ಪುರತ್ರಯಮನೀಕ್ಷಣದಿಂ ತವೆ ಸುಟ್ಟ ವಿಕ್ರಮಾ ॥
ಡಂಬರನಂ ಮನೋಜಮದಕುಂಜರಭಂಜಿತಪಂಚವಕ್ತ್ರನಂ ।
ತ್ರ್ಯಂಬಕನಂ ನಮಸ್ಕರಿಸಿದೆಂ ಮನದುತ್ಸವದಿಂ ಕುಮಾರಕಾ ॥ ೩೯

ಸ್ನಿಗ್ಧಪಿಶಂಗಭಂಗುರಜಟಾಭರಮಂಬರಗಂಗೆ ಭಾವಿಸಲ್ ।
ಮುಗ್ಧಹಿಮಾಂಶುಲೇಖೆ ನಿಟಿಲಾಕ್ಷಿಯುಮುಗ್ರಫಣೀಂದ್ರಕಂಕಣಂ ॥
ದಗ್ಧನಿಧಿಪ್ರಕಾಶತನು ರಂಜಿಸುವಂಗೆ ಮುನೀಂದ್ರಶಾಪಮಂ ।
ದಗ್ಧಮನೆಯ್ದಿಸಲ್ಕೆಱಗಿದೆಂ ನಿಜಸಂಸ್ತವದಿಂ ಕುಮಾರಕಾ ॥ ೪೦

ಅಂತು ತ್ರ್ಯಂಬಕದೇವರನುಪಾಸ್ತಿಗೆಯ್ದು ಶಾಪಮೋಕ್ಷಮಂ ಪಡೆದು

ತ್ರ್ಯಂಬಕನಂ ಬೀೞ್ಕೊಂಡ ।
ಲ್ಲಿಂ ಬರ್ಪಾಗಳ್ ಮಗುೞ್ದು ನಿನ್ನುಮನಾಂ ಪೊಂ ॥
ಡಿಂಬಿನ ವಟಕುಜದಡಿಯೊಳ್ ।
ಮುಂ ಬನದೊಳಗಿರ್ದ ತೆಱದಿನಿರಿಸಿದೆನಾಗಳ್ ॥ ೪೧

ಎಂದು ಮತ್ತಮಿಂತೆಂದಳ್:—

ವಸುಮತಿ ನಿನ್ನೊಡನೇನುಮ ।
ನುಸಿರ್ದ*ಪಳಿಲ್ಲಕ್ಕನೊಯ್ದು ಪುತ್ರನನಾನಿ ॥
ತ್ತೆ ಸಕಲದ ಕಾರ್ಯಮನೆಂದೊ ।
ಲ್ದು ಸರೋರುಹವದನೆ ಕೇಳ್ದಳೆನ್ನನಿಳೇಶಾ ॥ ೪೨

ಅಂತು ಕೇಳ್ದನಂತರಮೆನ್ನಂ ತೊಪಿಱಿದು ಪರಸಿ—ಎನಗೆ ಶಾಪಮೋಕ್ಷಮಾದುದು; ಆಂ ನಿನ್ನ ಸ್ನೇಹಪಿತೃವಪ್ಪ ಕಾಮಪಾಲನ ಪಾದಸೇವೆಗೆ ಪೋದಪೆನೆಂದು ತಾರಾವಳಿ ಪೋಗಲೊಡಂ;

ಅವನಿಪೆ ತಾರಾವಳಿ ಪೋ |
ಟ್ವ ವಿಶೇಷಂ ಕಣ್ಗೆ ಕೌತುಕಂಬಡೆದಿರಲಾಂ ||
ನವಮಾಲಿಕೆಯೆಂಬಳನೊ |
ಳ್ದು ವಿಚಾರಿಪೆನೆಂದು ಮನದೊಳುದ್ಯೋಗಿಸಿದಂ || ೪೩

ಪೇಳ್ದತೆಱದಿನ್ನುದ್ಯೋಗ |
ಕ್ಕಾನಗವಮನುಕೂಲಮಕ್ಕೆನುತ್ತು ರಾಜ್ಯಪದಿಂ ||
ಶ್ರಾವಸ್ತಿಯೆಂಬ ಪಟ್ಟಣ |
ದಾಪರ್ತಂ ಬಿಡಿಸುವ ನಡೆದೆನತ್ಯುತ್ಸವದಿಂ || ೪೪

ಅಂತು ನಡೆವುದು ಮುಂದೆ

ಮಿಸುನಿಸು ಕೊಂಬಡೆದು ಕ್ರಮೆಗಳ್ |
ನಸು … ಕಣ್ಗೆ ದೂರದೊಳ್ ಕಂ ||
ಡೆಸೆದಂ ಮನದುತ್ಸವದಿಂ |
ಬೆಸರಿಂ ಶ್ರಾವಸ್ತಿ ತಾನಿದಪ್ಪುದೆನುತ್ತುಂ || ೪೫

ಅದಂ ಕಂಡು,

ಚರಣಕ್ಕೆ ಗಱಿಗಳಾಗೆದಂ |
ತಿರೆ ನವಮಾಲಿಕೆಯುಮಿರ್ದ್ದ ನೋಳ್ಪೆನೆನುತ್ತುಂ ||
ತ್ವರಿತಗತಿಯಿಂದೆ ನಡೆಯಲ್ |
ಪುರವೊಪ್ಪಿತ್ತೆಸ್ಸೆ ದಿಗ್ಗಜಂತೆನೆ ಪುರ್ವ್ವಂ || ೪೬

ಮನೆಮನೆಗಳ್ ರಂಜಿಸುವ ಪುರಂಗಳಿಸು ಮುಗೆ … |
ಜನನುತವಸ್ತು … ಪರಿಚಿಂತನೆಯುಮ್ಮ … ||
ಳ್ವನ … ಸಿಜಲೀಲೆಯೊಳ್ … |
ದ್ದಿನಿಯರ ಸಂಕುಳಂ ಮೆಱೆದಿರ್ದ್ದುದು ಪಸವೆತ್ತುದು ನೋಡೆ ತತ್ಪುರಂ || ೪೭

ಅಂತೆಸೆವ ಪುರದ ಕೇರಿಗಳಗೆ … ಬರುತ್ತುಂ

ಘಮಘಮಿಪ ಮೂಡಣ ಕೇರಿಗ |
ಳೊಡೆಯುತೆ ಕಲಕೊಡ್ಡಮಿರ್ಪ್ಪ ಕೊಟ್ಟಿಗಳೆಡೆಯಂ ||
ಸಡಗರದಿಂ ಕಾದಿಸುತ್ತಿ |
ರ್ಪ್ಪಡೆಯುಂ ಕಂಡಲ್ಲಿ ನಿಂದು ನೋಡುತ್ತಿರ್ದಂ || ೪೮

ತಲೆಯೊಳ್ ವಿದ್ರುಮಮಂ ಸಿಜಾಕ್ಷಿಯುಗದೊಳ್ ನೀಲೋತ್ಪಲಂ ಪಕ್ಷ್ಮಸಂ |
ಕುಳದೊಳ್ ಪಕ್ಷ್ಮಯುಸಿಂದ್ರನೀಲವನಲಂಪಿಂ ಗರ್ಭದೊಳ್ ಮೌಕ್ತಿಕಾ ||
ವಳಿಯಂ ಪದ್ಮಮನುಗ್ರಜಂಘೆ ತುಸ್ಫಟಿಕದೊಳ್ ಪಾದಂಗಳೊಳ್ ಮಿಕ್ಕ ನಿ |
ಮ್ನಗಳರತ್ನಂಗಳನಾನಗಂ ನೆನೆಯಿಸಲ್ಪಾರ್ದಿರ್ದರ್ ವಾತ್ಕೋಟಿಗಳ್ || ೪೯

ಚಲಿಸದ ದೃಷ್ಟಿ ಸುಪ್ತಿಯರ್ ಸಿಂಧಿನ ಗೊಂಡ ಬಿಂಬದಂ ತುದುಂಕಲು |
ವ್ಯಳಿಸುವ ಚಂದ್ರಾಸ್ತಿಮಿತಯಿಂದೆ ದೊರೆವ ನಾರಿ ಮಿಡುಂಕುತಿರ್ದ ತ್ರೊ ||
ಟ್ಟಿಳಿಕೆ ದಲಂ ಕವಲ್ತು ಕಿರಿದೆ ಟ್ಟಿನ ಬಲ್ಪು ವಿರಾಜಿಸಲ್ಕೆ ಮೊ |
ಯ್ಗತಿತನದಿಂ ಬೊಂಬೆಗಳ ತ್ರ ಕಾಳಗದಂ ಕದುಕೆಯಲ್ಲಿ ಕೋಟಿಗಳ್ ||೫೦

ಅಂತು ಕಾದಾಡುತ್ತಿರ್ದ ಕೋಳಿಗಳಂ ಕಂಡಾಗಡುಮಾ ಕೋಳಿಯೊ
ಡೆಯನಪ್ಪ ಮಿತ್ರಗುಪ್ತನಿಂತು ವ್ಯಸ್ತವಿಟನೊಳ್ ಪೇಳ್ದಂ:—

ಸೋಲದ ಗೊಂಡ ಸಿಲುಕಿದಂ |
ಪೊತ್ತಿಮನೆ ಘಾಸಿಸದ ಪ್ರಮುಪ್ರಣಂಗಳ್ ||
ನೋಡೆ ಬಲ್ಗಾಳಗವೀ |
ಕೂಡಿಕೊಂಡ ಬಾಹ್ವಾಸ್ಫಾಲನದಿನಕ್ಕುಂ || ೫೧

ಕುಸಿದ ತಲೆಬಸಿತಗೆಯ್ದಂ |
ಮಸಗಿಯು [illegible] ಪ್ರಯತ್ನಮಂ ಬಂ ||
ಜಿಸಿತ್ತು [illegible] |
ನೆಗ [illegible] || ೫೨

ಇಂತು ಬಲ್ಗಾಳಗ [illegible] ಕೋಳಿ ಇರ್ದುದು.
ಅಲ್ಲಿ,

ಸಿನ್ನ ಚರಣಾಯುಧಂ ಸ |
ಬ್ಬೋನ್ನತನಮ ಸಾಧಿಸಿರ್ದ ಪ್ರತಿಯುಮು ಸಂ ||
ಛಿನ್ನಚ್ಛಾಕಾಂತಿಯು |
ದಿನ್ನೀಗಳ್ ನೋಳ್ಪುದೀಕ್ಷಿಸದೆ ಮಿತ್ರಾ || ೫೩

ಎಂದು ನೋಳ್ಪನ್ನೆಗಂ,

ಚರಣಾಗ್ರದಿಂ ಬಳಾಕಾ |
ಚರಣಾಯುಧನಂ ಕಡಂಗಿಯೊಡೆದುರದಿಂ ಬ ||

ಲ್ಗರುಳ್ಳುನ್ನಂ ಕೆಡಪಿ ಗೆಲ್ದ |
ತುರುಸತ್ವಂ ನಾಳಿಕೇರಜಂ ತತ್ಕ್ಷಣದೊಳ್ ‖ ೫೪

ಅಧಿಕತರಸತ್ವದಿಂ ಸು |
ಜನ್ಯೈರ್ಯದಿಂ ನಾಳಿಕೇರಜಂ ಪ್ರಚುರತರಾ ‖
ಯುಧನಂ ಗೆಲೆ ಮಿತ್ರನಂ |
ನಿಧಿಯಂ ಪಡೆದಂತೆ ಪರ್ಷದೊಳ್ ನಲಿಸಿದಂ ‖ ೫೫

ಅಂತು ಮಿತ್ರವರಂ ತನ್ನ ಕೋಟಿ ಗೆಲ್ದುದಂ ಕಂಡನ್ನನಾದಿನಂ ಮೊದಲಾತ್ಮಮಿತ್ರನೆಂದು ಬಗೆದು ತನ್ನ ಮನಗೊಡಗೊಂಡು ಪೋಗಿ ಎನ್ನಂ ಮನ್ನಿಸಲಲ್ಲಿಯೂದಿನನುಂ ಕಳೆದು ಮಱುದಿವಸಂ

ಪ್ರಾವಸ್ತಿಯು ಪೊಱಪೊಱಲಧಿ |
ದೈವತ್ರ್ಯಂಬಕನ ಜಾತ್ರೆಗೆಲ್ಲರ್ ನಿಜಸ ‖
ವ್ಯಾಪದೊಳ್ಗೊಲವಿಂ ಪೋಗೆ ಮು |
ಹಾವಿಭವದೊಳವರ ಬೆನ್ನೊಳಾನುಂ ಪೋದೆಂ ‖ ೫೬

ಅಂತು ಪೋಗಿ,

ಅರ್ಧಶರೀರದ ಗಿರಿಜೆಗೆತ್ತ ನಸಾತುರ ಸಿಜೋತ್ತಮಾಂಗಮುಂ |
ಸ್ವರ್ಧುನಿಗಿತ್ತ ನಂ ನಾಕಮುಂಗಳ್ಕಾರಣಮೊಕ್ಷುಲಕ್ಷ್ಮಿಯುಂ ‖
ತರ್ಧನನಂ ಶಶಾಂಕಕಲೆಯಂ ತಳೆದನಸೊಲ್ವು ಪ್ರಿಯ್ಯಂ |
ವರ್ಧನನಂ ಹರಂ ಸ್ತುತಿಸಿ ನತ್ತುದನಂ ಪ್ರಯೋಜ್ಯನಂಗನಾ ‖ ೫೭

ಅಂತಾಂ ಪ್ರೀತಿಪೂರ್ವಕಂ ಸ್ತುತಿಯಿಸಿ ತ್ರ್ಯಂಬಕನ ಪಾದಕ್ಕೆ ನಮಸ್ಕಾರಂಗೆಯ್ದು ಪೊಱಮಟ್ಟು ದೇವಾಲಯದೊಳ್ ಕುಳ್ಳಿರ್ಪುದುಮಲ್ಲಿಗೆ

ರಣಿತಂ ನೂಪುರಕಿಂಕಿಣೀಕರಂ ಸ್ಫುರಿತಾಭರಣಪ್ರಭಾಸಮಂ ಗೆಲ್ವನಂ |
ಮಣಿಹಾರಂ ವಿಟನೇತ್ರನಾಗಪಾಶಂ ನೋಡೆ ಪೆಸಂ ಚೆಲ್ವಗಿತೆ ‖
ಗಣಿಕಾವಲ್ಲಭಸಂಕುಲಕ್ಕೆ ಮುಂನಾಳ ನಾಳಂಬನಂ ನೀಡಿದೇ |
ಕ್ಷಣದೊಳ್ ಕ ನಂ ಬಳ್ಳಿರತ್ನಿಪ್ರಳಂಬಕಾರಮುಂ ತಾಳ್ದುಪ್ಪಳ ‖ ೫೮

ಅರಮಣಿ ಸಕಳನುಂಗಳ |
ಕಾರಣಮುಂ ಪರಮಪುರುಷಲಕ್ಷಣಶುದ್ಧಾ ‖

ಕಾರವುನದೊಂದು ಚಿತ್ರವು ।
ನಾರಾಧಿಪ ಗೈವವಂದದಿಂ ತಳೆದಿರ್ದಳ್ ॥ ೫೯

ಅಂತೊಂದು ಚಿತ್ರಪಟವುಂ ತಳೆದು
ಅವಳೆನ್ನ ಮೊಗವನಾಚಿ ।
ತ್ರವನೊಲವಿಂ ಮಗುಳ್ದು ಮಗುಳ್ದು ನೋಡುತ್ತಿರಲಾಂ ॥
ಯುವತೀಭಾವವನರಿಪೇ ।
ಕೆ ವಿಲಾಸಿನಿ ನಿಲ್ವ ಕುಳ್ಳಿರಂ ಬೆಸಗೊಳ್ವಾ ॥ ೬೦

ಅಂತು ಕುಳ್ಳಿರಲ್ವೇಳ್ದು ಆವಳ ಕೆಯ್ಯ ಚಿತ್ರಪಟವುಂ ನೋಳ್ಪನವುಲ್ಲಿ
ಉನ್ನತವಕ್ಷಮುಂ ... ಯುವುಂ ವಿಳಸಲ್ಲಲಾಟಸಂ ।
ಪನ್ನವುಸೀಕ್ಷಮುಖಿಕ್ಷಿತ ತಾಫರಸನ್ನಿಭವುಂ ಸುಬಾಹ್ವುವುಂ ॥
ತನ್ನೊಡನಬ್ಬಿಯಿಂದೊದಗಿದಂದವುನೊಪ್ಪಿರೆ ಚಿತ್ರರೂಪದಿಂ ।
ದೆನ್ನಯ ರೂಪನೊಲ್ದು ನವಮಾಲಿಕೆ ಚಿತ್ರಿಸಲಿರ್ಪುದುರ್ವಿಪಾ ॥ ೬೧

ಅಂತೆನ್ನ ಚಿತ್ರವುಂ ಕಂಡವಟ ಕೆಲದೊಳ್
ಪವಕವುಲಂಗಳಂ ಗುರುನಿತುಬಿವುನಲ್ಪ ಸುಸಂಘ್ರಮುಂ ಕದ ।
ಕ್ಕದಿಪ ಕುಚಂಗಳಂ ಮಿಸುಸ ಪಲ್ಲವಿಯುಂ ವಿಳಸತ್ಕಪೋಳವುಂ ॥
ಸಪವುಳನೇತ್ರವುಂ ಪಟಿಪಿನಿಂ ಸುಬಿಸಿತ್ರರೊಳರ್ದ ಭಾವವುಂ ।
ಸುವಲಯ ರೂಪನಾಂ ಮಗುಳ್ದು ಚಿತ್ರಿಸಿದಂ ಕಲಿಯು ವಿಜ್ಞಾನದಿಂ ॥ ೬೨

ಅಂತಾಂ ಬಿಲ ಚಿತ್ರಪಟವುನವನ ಕೆಯ್ಯೊಳ್ ಕುಡುವಷ್ಟರೊಳ್ ಪ್ರೀವ
ಳ್. ಇತ್ತಲಾಂ ತಾಯುಗಿಲ್ಬಿಯಾರ್ತ್ತನ ಮಿತ್ರವರನೆಡೆಗೆ ಬಂದಿಂತೆಂದೆಂ:—
ಎಡರಪರೂಪದ ಮಗಳೊತ್ತಲಿಸಿದೊಡವುೆಯ್ದು ಮುಂದುಗೆ ।
ಟ್ಟೊಡಸುಳಿಪಿಂ ಮಹಾತ್ಮ್ಯನಸಬಾಳ್ ತೊಡರ್ದೊಡವುಸ್ಯವೇಕವಾ!
ದೊಗಮಿಟಿಕೆಯ್ಬರೊಂದ ತನುವೆಂಬಪ್ರಲಾಪ್ತ ಸಹಾಯನಂ ಕರಂ ।
ಬಿಡದೊಡಸಿರ್ದವಂ ಸುಜನಮಿತ್ರನನಂ ಕೃತಕೃತ್ಯನುವಿರ್ದಯೊಳ್ ॥ ೬೩

ಎಂಬುದುವರ್ಣಮಿತ್ರವರಂ ತುಷ್ಟನಾಗಿ ನಿನಗಾಂ ಮಾಡಲ್ವೇಳ್ಪ ಕಾರ್ಯ
ಮುಂ ಪೇಳೆಂಬುದುಂ;

ಆಂ ಪೇಳ್ದ ಕಾರ್ಯಮುಂ ನೀಂ ।
ಭೂಪಾಲಕನೆಡೆಗ ಪೋಗಿ ಭೂಸುರರೂಪಿಂ ॥

ದಂ ಪೇಱುವ್ವದೆಂಬೊನಾತನ |
ದೇಂ ಪೇೞೆನಲಾಂ ಬಿಜಯಸ್ವಮಿಂ[illegible] ‖ ೬೪

ಎನ್ನ ತನೂಜೆಯುಂ ಸ[illegible] ವಿ[illegible] |
ಮುನ್ನವೆ [illegible] ದಾನಮ[illegible] ಸಿಸಗಿ[illegible] ‖
ತನ್ನಿ ಜದೇಶದಿಂದಮಿ[illegible]ತುಂ ಬಿನ[illegible] |
ಕನ್ನೆ ಕರಂ ಪ್ರಬುದ್ಧೆ[illegible] ‖ ೬೫

ಆಂ ಬಡವನೆನ್ನ [illegible] |
ತುಂಬಿದ [illegible] ‖
ತಂ [illegible] |
ನಿಂಬಿನೊಳಿ[illegible] ‖ ೬೬

ಎಂದು ಧರ್ಮವರ್ಧನ [illegible]
ದು ಧರ್ಮವರ್ಧನ [illegible]

ಎನ್ನ [illegible] |
ಕನ್ನೆ [illegible] |
ದೆನ್ನ [illegible] |
ಬಿನ್ನ[illegible] ೬೭

[illegible] |
[illegible]
ಮಾತ್ರ [illegible] |
ಜ್ಞಾತಿಯ[illegible] ‖ ೬೮

ಪ್ರಜೆ[illegible] |
ದ್ವಿಜಕುಲಮಂ [illegible] ‖
ಭುಜ[illegible] |
ಕುಜ[illegible] ‖ ೬೯

ಎಂದು ಮಿತ್ರವರಂ ಧರ್ಮವರ್ಧನಂಗೆ ಬಿನ್ನಪಂಗೆಯ್ಯಲಾತಂ [illegible]
ಮುಗಳನೊಡಗೊಂಡು ಬಾಯೆಂದು ಕಳಿಪಲ್ ಬಿಜಯದಂ

[illegible] ಪರೋಕ್ಷಬಂಧವುಂ ।
ನುಣ್ಣಿಸಿ [illegible] ಕಣ್ಣಿಗಳ್ ॥
ಸನ್ನುತ ಸಲ್ಲ [illegible] ಅಂತಾವರ ।
[illegible] ॥ ೭೦

ಅಂತಾ [illegible] ಪುತ್ರ [illegible] ಹಿಂದನೆ ಧರ್ಮ
[illegible] ಮಂತಂ:—

[illegible] ।
[illegible] ।
[illegible]
[illegible] ೭೧

[illegible]
[illegible] ।
[illegible] ।
[illegible] ।
[illegible] ॥ ೭೨

[illegible] ಮಿತ್ರ [illegible]
ಗ [illegible] —

[illegible] ।
[illegible] ॥
[illegible] ।
ವಿ ಬಂದ [illegible] ॥ ೭೩

ಎಂದು [illegible] ತ್ರೀ
ಗ [illegible]

[illegible] ।
[illegible] ॥
[illegible] ಬಂಧನೋ ।
[illegible] ॥ ೭೪

ಅಂತಿರ್ದಳಂ ಕಂಡನಂತರಂ

ಅಲಸದ ನೋಟದಿಂ ಸಡಿಲದಪ್ಪುಗೆಯಿಂ ಗಱುಗಟ್ಟಿದೊಲ್ಮೆಯಿಂ ।
ಚಲಿಸದ ಚಿತ್ತದಿಂದೆ ತಣಿವಿಲ್ಲದ ಚುಂಬನದಿಂ ನಿರಂತರಂ ॥
ತೊಲಗದ ಕೂಟದಿಂ ಪದೆಪಿನಿಂ ಪ್ರಸರಾಗ ಮನೋನುರಾಗದಿಂ ।
ಕೆಲವುದಿನಂಗಳಂ ಕಳೆದನಾನವಳೊಳ್ ಸ್ವಪರೂಪಮನ್ಮಥಾ ॥ ೭೫

ಅಂತಾನವಮಾಲಿಕೆಯೊಳಷ್ಟಸುಖಾಮುಭೋಗಂಗಳನನುಭವಿಸುತ್ತಿರಲೊಂದು ದಿನಮಾನವಮಾಲಿಕೆ

ಅನಳನಾಸ್ಯೆ ಯೌವನರಸಾಂಬುಧಿರಾಜಮರಾಳಯಾನೆ ಪಾ ।
ಲೀನಸಮಾನನೇತ್ರೆ ವಿಮಳೋತ್ಪಳಕೇಸರವರ್ಣೆ ಸ್ಮಿತ ॥
ಸ್ತನನಿತಂಬೆ ಕೋಕಕುಚಕುಂಡಲೆಯಾಂ ಸಹಿತಂ ವಯಸ್ಯೆಸಂ ।
ತಾನಸಮನ್ವಿತಂ ಸಲಿಲಕೇಳಿಗೆ ಬಂದಳದೊರ್ಮೆ ಲೀಲೆಯಿಂ ॥ ೭೬

ಅವಳೊಡನೆ

ಜಲಗುಪವಕ್ತ್ರೆಯರ್ ಶಫರಲೋಚನೆಯರ್ ನವಕೂರ್ಮಪಾದೆಯರ್ ।
ಪುಳಿನನಿತಂಬೆಯರ್ ವಿಸುಪಕೈರವಳಂಬಾಮಳತಾವಿಳಾಸೆಯರ್ ॥
ಸುಲಲಿತಕಂಬುಕಂಧರೆಯರೊಪ್ಪುವವಿದ್ರುಮಸನ್ನಿಭೋಷ್ಠೆಯರ್ ।
ಲಲನೆಯರೊಪ್ಪಿದರ್ ನವಿಮ ಜಂಬುಜಾಸ್ಯೆಯರ್ ನಿರಂತರಂ ॥ ೭೭

ಸುತ್ತಿದ ವೇಣಿಯೆತ್ತಿದ ಕುರುಳ್ ನವಕಂಚುಕಮುಟ್ಟ ಚಲ್ಲಣಂ ।
ಕತ್ತರಿಬೊಟ್ಟು ಪಚ್ಚಗೊಳೊಡಂಬಡೆ ರೌಪ್ಯಸುವರ್ಣಶೃಂಗಮುಂ ॥
ಜೊತ್ತಿನೊಳೊತ್ತಿ ಜೇಕೊಂಡಚೆಯಿಂ ಪಿಡಿದೆಯ್ದಿದರಂಬುಕೇಳಿಗಂ ।
ದುತ್ತಮಕಾಂತೆಯರ್ ವಿನಯಮಂತೆಯರಂಗಜಕಾಂತಕಾಂತೆಯರ್ ॥ ೭೮

ಸೊಕ್ಕಿದ ಹಂಸೆಗಳ್ ನಡೆಗೆ ಕೋಕಯುಗಂ ಕುಚಕಾಂತುಕಕ್ಕೆ ನೀ ।
ರ್ವಕ್ಕಿಗಳಂಚರಕ್ಕೆ ಶಫರಪ್ರಕರಂ ನಯನಕ್ಕೆ ಭಕ್ತಿಯಿಂ ॥
ಮಿಕ್ಕಿದಿರ್ವರ್ಪಿನಂ ಲಲಿತಯಾನೆಯರುಚ್ಚಕುಚಪ್ರಸಿದ್ಧೆಯರ್ ।
ಅಕ್ಕಳಿನಾದೆಯರ್ ವಿಮಳಲೋಚನೆಯರ್ ಜಲಕೇಳಿಗೆಯ್ದಿದರ್ ॥ ೭೯

ಅಂತು ತ್ರ್ಯಂಬಕದೇವರ ಮುಂದಣ ಸರೋವರಕ್ಕೆ ಬಂದು,

ಸುೞಿ ಸುೞಿನಾಭಿಯಿಂ ವಳಿ ವಳಿತ್ರಯದಿಂ ಕಮಳಂ ಮುಖಾಬ್ಜದಿಂ ।
ಪೊಳೆವೆಳಮೀಂಗಳಕ್ಷಿಗಳಿಂ......ದ್ವಯದಿಂದೆ ಶೈವಳಂ ।
ಲಲಿತಭುಜಂಗಳಿಂದೊಗೆದ-ವೆಂಬಿನವಂಬುವಿನೊಳ್ ವಿಳಾಸಿನೀ ।
ಕುಲಮನುರಾಗದಿಂ ಸಲಿಲಕೇಳಿಯನಂದೆಸಗಿತ್ತು ಲೀಲೆಯಿಂ ॥ ೮೦

ಮಗಭೃಂಗಕ್ಕೆಣೆಯಪ್ಪ ನುಣ್ಗುರುಳ ಕರ್ಪಿಂ ಚಾರುಚಂಚತ್ಕಟಾ ।
ಕ್ಷದ ಬೆಳ್ಪಿಂ ನವಪಲ್ಲವಾಧರದ ಕೆಂಪಿಂ ನಾರಿಯರ್ ವಾರಿಯೊಳ್ ॥
ಮೃದುಕಸ್ತೂರಿಯನುದ್ಘಚಂದನಮನೊಳ್ಪಿಂ ಕುಂಕುಮಶ್ರೇಣಿಯಂ ।
ಕದಡಿಟ್ಟಂತಿರೆ ಮಾಡಿಯಾಕೊಳನೊಳೊಲ್ದೋಲಾಡಿದರ್ ಲೀಲೆಯಿಂ ॥ ೮೧

ವಿಕಸದರುಣಾಬ್ಜದೊಳ್ ಚಂ ।
ದ್ರಕಳಾಕೃತಿ ತೋರ್ಪುದಿದು ವಿಚಿತ್ರಮೆನಲ್ ಯಾ ॥
ವಕರಸದಿನೆಸೆವ ಕೆಯ್ಯೊಳ್ ।
ಸುಕರಮೆನಲ್ ಶೃಂಗವಿತತಿಯೇನೊಪ್ಪಿದುದೋ ॥ ೮೨

ಅಂಗಜನೃಪಂಗೆ ಬಾಣಸಿ ।
ಷಂಗಮನೊಲ್ದೀವ ರತಿಯವೊಲ್ ಪದೆಪಿಂದು ॥
ತ್ತುಂಗಸ್ತನಿಯರ್ ಜಲಮಂ ।
ತ್ರಂಗಳನುರುಕರದೊಳಾಂತು ಕಣ್ಗೆಸೆದಿರ್ದರ್ ॥ ೮೩

ಕಡುಪಿಂ ಬಂದೊರ್ಬಳಾರ್ಪಿಂ ಕುಳಿರ್ವ ಜಲವನಾದಂಪೆಯಿಂ ಪೊಯ್ಯ
ಲಿನ್ನಾ । ನೆಱೆಗೆಂತಾ ಪೊೞ್ವೆಯೊಡೆಯ್ದತ್ತೆನಗೆ ಮಗುೞ್ದಿ ನೀಂ ಚೆನ್ನ
ನೆಂದಾಗಳೆಯ್ತಂ । ದೆಡಗಾಲಂ ನೀಡಿ ಮುಂದಿಟ್ಟಡರ್ವ ಘಟಕುಚಂ ತೋಳ್ಗೆ
ಪರ್ಬಲ್ಕೆ ಶೃಂಗಂ । ಬಿಡವಂಗ್ಯೆ ಕೆನ್ನೆಗೆಯ್ದಲ್ ನಿಮಿರ್ದ ಕೆಳದಿಯಂ
ಪೊಯ್ದು ಪಿಂತಾದಳೊರ್ಬಳ್ ॥ ೮೪

ಭವನ ಲಲಾಟಲೋಚನವ ವಹ್ನಿಗೆ ಭಾಜನಮಾದ ಕಾಮದಾ ।
ಹವನುಜೆ ನಂದಿಸಲ್ ಮಗುಳ್ದು ಪುಟ್ಟಿಸಲಾರ್ತಪರಾಗೊಡೇಂ ಸದಾ ॥
ಶಿವನ ಪರಾಕ್ರಮಕ್ಕೆ ಪೞಿ ಬಂದಪುದೆಂದುಬಾವಂತರಂಗಸಂ ।
ಭವನವನೆಂದು ನೀರ್ಗಳೆವರೊರ್ಬರನೊರ್ಬರೊಳಾದವಿಗ್ಧೆಯರ್ ॥ ೮೫

ತರುಣಿಯರಂಬುಕೇಳಿಗೆ ಲಜ್ಜೆಳವಂ ಪುಗುವಾಗಳೊರ್ಬರೊ ।
ರ್ಬರ ನೆೞಲೊಂದನೇಕವಿಧದಿಂ ತೆರೆಯೊಟ್ಟಲೊಳೆಯ್ದೆ ತೋಱಲ ॥

ಚ್ಚರಿಯೆನಲೊಪ್ಪುತಿರ್ದುವಹಿಲೋಕದಿನೇೞ್ತ್ರಯ ನಾಗಕನ್ಯಕಾ |
ಪರಿಕರವೊಳ್ಪಿನಿಂ ಸಲಿಲಕೇಳಿಗೆ ಘೋರೆನೆ ಬರ್ಪ ವಾರ್ಪ್ಯೆಯಿಂ || ೮೭

ಕೆಳದಿಯರೊರ್ಬರೊರ್ಬರ ಮುಖಾಂಬುಜದೊಳ್ ಪೊಸ ಪೊನ್ನ ಚೆನ್ನ ಜೀ | ಕೊರ್ವಿಯನೊತ್ತಲಾಸಲಿಲಧಾರೆಯು ಬೆಂಬಳಿಯೊಳ್ ಸಿತಾಕ್ಷಿ ಕೋ || ಮಳರುಚಿ ಸೀರ್ಕ್ಕುರಲ್ಕೆ ಜಲಯಂತ್ರದ ಸೀರ್ ತವೆ ತೀರ್ದೊರ್ಪಂ ಪ್ರಗಂ | ಚಳರುಚಿ ಸೀರ್ಗಳಿಂದು ಜಲಯಂತ್ರಮನೊತ್ತಿ ಬೞಲ್ವರಾಕೆಯರ್ ||

ಅಂತು ಜಲದೇವತೆಯರ ವಿಳಾಸಿನಿಯರಾದಂತೆಯುಂ, ಎಳವಿಣ್ಣಂಗಳ್ ಕೆಳದಿಯರಾದಂತೆಯುಂ, ತೆರೆದುಱುಗಲೆ ತರುಣಿಯರಾದಂತೆಯುಂ, ಮರಾಳಮಂಡಳಿಯೆ ಮಾಸಿನಿಯರಾದಂತೆಯುಂ, ಜಲರುಹಪಟ್ಟಿಯೆ ಲಲನೆಯರಾದಂತೆಯುಂ, ಕುಮುದಕುಲಮೆ ರಮಣಿಯರಾದಂತೆಯುಂ, ಬಿಸಜಲತೆಯೆ ಶಶಿಮುಖಿಯರಾದಂತೆಯುಂ, ಲಾವಣ್ಯರಸಮೆ ಭಾವಕಿಯರಾದಂತೆಯುಂ ಜಲಕೇಳಿಯಾನೆಸಗುವ ಲಲನೆಯರ ನಡುವೆ

ನೂತನತಾರಕಾತತಿಯುತಂ ಶಶಿಲೇಖೆ ಸುಧಾಬ್ಧಿಯೊಳ್ ಪ್ರಸ |
ಜ್ಜಾತನನಾಂತಸ್ಫುರಲ್ ವಿಶದಮುಪ್ಪ ಜಲಪ್ಲವದೊಳ್ ವಿಳಾಸಿಸೀ ||
ವ್ರಾತಯುತಂ ವಿದಗ್ಧೆ ನವಮಾಲಿಕೆ ವಾರಿವಿನೋದದಿಂ ಮನೋ |
ಜಾತನ ಬೊಂಬೆಯಂತೆಸೆವಳೆಂಪ್ರೊಗೆತ್ತೆಂ ಸುಕುಮಾರಲೀಲೆಯಂ || ೮೮

ಅಂತು ನವಮಾಲಿಕೆ ಸಂಭ್ರಮದಿಂ ಜಲಕ್ರೀಡೆಯನಾಡುವ ಸಮಯದೊಳ್

ನಾರೀವೇಷಮನುೞಿದಾಂ |
ನೀರೊಳಗೆ ಮುಱುಂಗಿ ಬೇಗದಿಂ ಸ್ತ್ರೈಣಮನುತ್ಪ್ರ ||
ಕಾರದಿನುಚ್ಚಳಿಸಿ ಕರಂ |
ದೂರದೊಳಿರ್ದೆಂ ನತುಟಂತಜಲದೊಳ್ || ೮೯

ಮುಂ ನಾಂ ಪೇೞ್ದಂದದೊಳಾಲ |
ವಿಂ ನದಿಯೊಳದೊಂದು ಕುಮುದದೊಳ್ ಮಿತ್ರವರಂ ||
ತನ್ನಿಟ್ಟುಜಸಿದರ್ಂ ಬರ |
ವಂ ನೋಡುತ್ತಿರ್ದು ಸೀರೆಯುಂ ಪಿಡಿದೆನ್ನಾ || ೯೦

ಅಂತಿರ್ದ ಮಿತ್ರವರನಂ ಕಂಡಾತನ ಕೆಯ್ಯೊಳಿರ್ದ ಸೀರೆಯನೀಸಿಕೊಂಡು,

ನಿಱಿವಿಡಿದು ದುಗುಲಮಂ ಮುಂ ।
ಜೆಱಗೆಸೆವಂತುಟ್ಟು ಮೇಲೆಸುದಕಪ್ಲವದಿಂ ॥
ಪೊಱಮಟ್ಟು ಮಿತ್ರವರನೊಳ್ ।
ಮೊಱೆದಿರ್ಪಂತೊಂದು ಮಾತನಾಸಿಂತೆಂದಂ ॥ ೯೧

ಅದೆಂತೆನೆ—

ಎನ್ನನೊಡಗೊಂಡು ಪೋಗಿ ಮ ।
ಹೋನ್ನತಿಯಿಂ ನೃಪನ ಮುಂದೆ ನಿಂದಿರಿಸಿ ಮಗು ॥
ಳ್ದೆನ್ನಳಿಯನಿಂದು ಬಂದಂ ।
ಕನ್ನಿಕೆಯಂ ಕಱಸಿ ಕುಡುವುದೆಲೆ ಭೂಪಾಲಾ ॥ ೯೨

ಅಂತೆಂಬುದುಂ ಬೞಯಂ,

ಕನ್ನೆಯುಮಾತು ಕಾಣದೆ ।
ಮುನ್ನಮೆ ಪ್ರಾಯ್ತಂಗುಮೆಂದೊಡೆನ್ನಸುವಂ ಕೇಳ್ ॥
ನಿನ್ನಲ್ಲಿ ತೊಱೆವೆನೆಂದೊಡ ।
ವಿನ್ನಿಟ್ಟನೆ ವಹ್ನಿಕುಂಡಮಂ ಸವೆ ಬೇಗಂ ॥ ೯೩

ಎಂದು ಪೇೞಲಾತನಂತೆ ಗೆಯ್ವೆನೆಂದೆನ್ನಂ ಧರ್ಮವರ್ಧನನೆಡೆಗೆ ಕೊಂಡು ಪೋಗಿ

ಎನ್ನಳಿಯನಿಂದು ಬಂದಂ ।
ಮುನ್ನಂ ನಿನ್ನೊಡನೆ ಪೇೞ್ದ ತೆಱದಿಂ ವಿದ್ಯಾ ॥
ಸನ್ನತನಾಚಾರಪರಂ ।
ಮನ್ನಿಸಿ ಕುಡುವೆಡೆಗೆ ತಕ್ಕನೆಂದುಱೆ ಪೇೞ್ದಂ ॥ ೯೪

ಅಂತು ಪೇೞ್ದು ಮತ್ತಂ

ಸಕಳಾಮ್ನಾಯಮುನೊಪ್ಪವೆತ್ತುಪನಿಷದ್ವ್ಯಾಖ್ಯಾರ್ಥಮಂ ಕಾವ್ಯನಾ ।
ಟಕಮಂ ಲೌಕಿಕವಿದ್ಯೆಯಂ ಗಣಿತಮಂ ಷಟ್ತರ್ಕಮಂ ಗೀತಮಂ ॥
ವ್ಯಕಳಾಕೌಶಲಮಂ ಗೃಹಸ್ಥಿತಿಯನಾಯುರ್ವೇದಮುಮಂ ಶಿಲ್ಪಕಾ ।
ತುಕಮಂ ಭೂಪತಿ ನೀಂ ಪರೀಕ್ಷಿಸಿವನೊಳ್ ತೋರ್ಪಂ ಮ...

ವಾರಣಶಿಕ್ಷೆಯುಂ ತುರಗಶಿಕ್ಷೆಯನೊಪ್ಪುವ ಚಾಪವಿದ್ಯೆಯುಂ ।
ಚಾರಣಚೂರಣಾದಿ ತರವಾರಿಯ ವಿದ್ಯೆಯುನಾಗಮಂಗಳಂ ॥
ಮಾರಮತಂಗಳಂ ಸ್ಮೃತಿಪುರಾಣಕಥಾಕವಿತಾಪ್ರಸಂಗವಿ ।
ಸ್ತಾರಮನೀತನಲ್ಲದಿಳೆಯೊಳ್ ಮಿಗೆ ಬಲ್ಲವರಾರ್ ನೃಪಾಲಕಾ ॥ ೯೬

ಮತ್ತಂ

ಕನಕಪರೀಕ್ಷೆಯುಂ ಸಕಳರತ್ನಪರೀಕ್ಷೆಯನುತ್ತಮಾಂಗನಾ ।
ಜನದ ಪರೀಕ್ಷೆಯುಂ ನವಸುಗಂಧಪರೀಕ್ಷೆಯನುದ್ಘವಸ್ತ್ರಸಂ ॥
ಜನಿತಪರೀಕ್ಷೆಯುಂ ಭರತಶಾಸ್ತ್ರಪರೀಕ್ಷೆಯನೀತನಲ್ಲದಾ ।
ವನುಮಱಿಯಂ ಮದೀಯತನುಜಾತೆಗೆ ತಕ್ಕನಿಳಾಧಿನಾಯಕಾ ॥ ೯೭

ಎಲ್ಲಾ ಭಾಷೆಯನೀತಂ ।
ಬಲ್ಲಂ ದೇಶಾಂತರಂಗಳೊಳ್ ವಿಖ್ಯಾತಂ ॥
ಸಲ್ಲಲಿತನಂಶಜಂ ಭೂ ।
ವಲ್ಲಭ ಕೇಳೆನ್ನ ಕನ್ನೆಗೀತಂ ಕಾಂತಂ ॥ ೯೮

ಎಂದು ಮಿತ್ರವರಂ ಧರ್ಮವರ್ಧನಂಗೆನ್ನಂ ತೋಱಿ ಶೋಭಾವತಿಯುಂ ಕರಸೆಂಬುದುಮಾತನೊರ್ವ ಕಂಚುಕಿಯುಂ ಕನ್ಯಾಂತಃಪುರರಕ್ಷೆ ಕಳಿಪಲಾತಂ ಶೋಭಾವತಿಯಂ ಕಾಣದೆ ಮಗುಳ್ದು ಬಂದು

ಅವಧಾನ ಧರ್ಮವರ್ಧನ ।
ನವಮಾಲಿಕೆ ತನ್ನ ಕೆಳದಿಯುಂ ಕಾಣದೆ ದುಃ ॥
ಖವನೆಯ್ದಿಗೊಂಡಿರ್ದಪಳಂ ।
ತು ವಿಚಾರಮೆನುತ್ತೆ ಸಾವಿದಲ್ಲಂ ಪೇಳ್ದಂ ॥ ೯೯

ಅಂತು ಪೇೞಲೊಡಂ

ಭೂವಳಯಾಧಿಪಂ ಬೆಱಗುವೆತ್ತು ಮುದಂ ಪೆಱಪಿಂಗಿ ಪಂದೆಯುಂ ।
ಪಾವಡರ್*ಂತೆ ತೊಟ್ಟನೆ ಕಟಿಲ್ದಲೆ ಭೂಸುರ ನಿನ್ನ ಕನ್ನೆ ಶೋ ॥
ಭಾವತಿಯೆತ್ತ ಪೋದಳಱಿಯೆಂ ಪರಿಭಾವಿಸಲಿಂತಿದರ್ಕೆ ಪೇ ।
ೞಾವುದು ಬಟ್ಟೆ ಧರ್ಮವಱಿಯಿತ್ತೆನುತುಬ್ಬೆಗದೊಳ್ ಮುೞುಂಗಿದಂ ॥

ಅಂತು ಚಿಂತಿಸುತಿರ್ದ ಭೂಪನೊಳ್ ಮಿತ್ರವರನಿಂತೆಂದಂ:—

ಎಲೆ ಭೂಪಾಲಕ ನಿನ್ನ ಮಂದಿರದೊಳಾಂ ನಿಕ್ಷೇಪಮಾಗಿಟ್ಟ ಮ ।
ತ್ಕುಲಚೂಡಾಮಣಿಯಪ್ಪ ಮತ್ತನುಜೆಯಂ ನೀನಿಂತು ಪೋಗಾಡಿ ದು ॥
ರ್ಬಲನಪ್ಪೆನ್ನನುಪಾಯದಿಂ ಕಳಿಪಲಾಂ ಪೋದಪ್ಪೆನೇ ನಿನ್ನ ಕಾ ।
ಲ್ಗೊಲವಿಂ ಜೀವಮನೆಯ್ದೆ ನೀಗುವೆನಿದಂ ಕೇಳಿಂತು ನೀವೆಲ್ಲರುಂ ॥ ೧೦೧

ಎಂದು ಮತ್ತಂ

ಸಕಲೋಪಾಯದಿನಾಕ ।
ನ್ನಿಕೆಯಂ ತಂದಿತ್ತೊಡುಚಿತವೆನಲ್ಲದೊಡತಿಕಾ ॥
ತುಕವಾಗಿ ಜೀವಮಂ ಬಿ ।
ಟ್ಟು ಕೆಲರ್ ನಿಂದಿಸಲಧರ್ಮಮಂ ನಿನಗೀವೆಂ ॥ ೧೦೨

ಎಂದನಂತರಂ

ರಾಜದ್ವಾರದೊಳಗ್ನಿಕುಂಡಮನಲಂಪಿಂ ಮಾಡಿ ತಂದಿಕ್ಕಿ ನಾ ।
ನಾಜೀರ್ಣದ್ರುಮಶುಷ್ಕಮಂ ಬಳಿಯಿನಲ್ಲಿ ಪ್ರಾಣಮಂ ನೀಗಲೆಂ ॥
ದಾಜಾಣಂ ಶಿಖಿಯಂ ಸಮಂತು ಬಲವಂದಿರ್ಪಾಗಳುದ್ವಿಗ್ನಪಂ ।
ರಾಜೀವಾಕ್ಷಿಯನೆನ್ನ ನಂದನೆಯನಾನೊಲ್ದೀವೆನೆಂದಂ ನೃಪಾ ॥ ೧೦೩

ಎಂದಾಗಳ್

ಚಿತ್ತಜಸನ್ನಿಭಂ ದ್ವಿಜವರಂ ಶ್ರುತಿನೀತಿಕಳಾಪ್ರವೀಣನ ।
ತ್ಯುತ್ತಮನೀವರಂಗೆ ನವಮಾಲಿಕೆಯಂ ಕುಡಲಿಷ್ಟರೆಲ್ಲರುಂ ॥
ಸುತ್ತಣ ರಾಯರುಂ ಪೊಗ*ಟ್ವರೆಂದೊಲವಿಂ ಧರಣೀಶನೊಲ್ಮೆಯಿಂ ।
ಬಿತ್ತನಲಂಪಿನಿಂದೆನಗೆ ತನ್ನ ತನೂಜೆಯನುರ್ವರಾಧಿಪಾ ॥ ೧೦೪

ಭೂಮಿಪ ಧರ್ಮವರ್ಧನನೃಪಾಲಕನೊಪ್ಪಿರೆ ಕಾಮಧೇನುವಂ ।
ಕಾಮಿಸಿದಂತೆ ಬೇಟ್ಪನಿತು ಮಂಗಳಸಾಧನದಿಂ ಸಭಾಗ್ರದೊಳ್ ॥
ಪ್ರೇಮದೊಳಾಕ್ಷಣಂ ಕರೆಸಿ ತನ್ನ ತನೂಜೆಯನೆನ್ನೊಳಿತ್ತು ಸು ।
ಕ್ಷೇಮವನಾಗಿಸೆಂದೊಸೆದು ಸೇಸೆಯನಿಕ್ಕಿದನಾಮುಹೂರ್ತದೊಳ್ ॥ ೧೦೫

ತನಗೆ ಸುತರಿಲ್ಲದುದಱಿಂ ।
ದೆನಗೈಶ್ವರ್ಯಪ್ರಸಿದ್ಧಿಯಂ ಮಾಡಿದನಾ ॥

ಜನಪಂ ಬೞಿಯಿಂದಾಂ ತ ।
ದ್ವನಿತೆಯೊಳೊಡಗೂಡಿ ಸುಖದೊಳಿರ್ಪನ್ನೆವರಂ ॥ ೧೦೬
ಅಂಗಾಧಿರಾಜನೊಲವಿಂ ।
ಸಂಗರಸಾಹಾಯ್ಯಮಾಗಲೆನ್ನಂ ಕರೆಸಲ್ ॥
ಪಿಂಗದೆ ಬಂದು ನಿಜಾಂಘ್ರಿಯು ।
ಗಂಗಳ್ಗೆಱಗಿರ್ಪ ಸ್ನೈಪು ದೊರೆದತ್ತೀಗಳ್ ॥ ೧೦೭

ಎಂದು ರಾಜವಾಹನಂಗೆ ಪ್ರಮತಿ ತನ್ನ ವೃತ್ತಾಂತಮಂ ಪೇೞೆ,

ಪರರಱಿವಿಲ್ಲದಂತು ತನಗುತ್ಕಟಪಾತಕಮೊಯ್ಯದಂತು ಸ ।
ರ್ವರ ಬಗೆಗೊಪ್ಪುವಂತು ಪುರುಷಾರ್ಥಫಲಂ ತನಗೆಯ್ದುವಂತು ದು ॥
ಸ್ತರತರಕಾರ್ಯಮಂ ಪ್ರಮತಿಯಂತಿರೆ ಮಾಳ್ಪವನಾವನೆಂದು ಬಂ ।
ಧುರವಚನಂಗಳಿಂ *ಪೊಗೞ್ದು ಮೆಚ್ಚಿದನಾಗಳಭಂಗವಿಕ್ರಮಂ ॥ ೧೦೮

॥ ಗದ್ಯ ॥

ಇದು ನಿಖಿಲಬುಧಜನಮನೋವನಜವನದಿವಾಕರಕಿರಣಪ್ರತಿಮಪ್ರಸನ್ನ
ಶ್ರೀಮದಭಂಗವಿಟ್ಠಲಪದಾಂಭೋಜಮತ್ತಮಧುಕರ
ಮಧುಸೂದನನಂದನ ಸರಸಕವಿ ಚಾಮುಂಡರಾಜ ವಿರಚಿತಮಪ್ಪ

ಅಭಿನವ ದಶಕುಮಾರಚರಿತೆಯೊಳ್

ಪ್ರಮತಿಕಥಾವೃತ್ತಾಂತಂ

ಏಕಾದಶಾಶ್ವಾಸಂ

॥ ದ್ವಾದಶಾಶ್ವಾಸಂ ॥

—ಮಿತ್ರಗುಪ್ತನ ಕಥೆ—

ಶ್ರೀನಂದನಸನ್ನಿಭನಭಿ ।
ಮಾನಧನಂ ಮಿತ್ರಗುಪ್ತನಂ ನೋಡಿ ಮನ ॥
ಕ್ಕಾನಂದಮನೆಸಗೆಂದಂ ।
ಭೂನಾರೀಪತಿಯುಭಂಗವಿಟ್ಠಲಭೃತ್ಯಂ ॥ ೧

ಎಂಬುದುಂ ಮಿತ್ರಗುಪ್ತಂ ಕೆಯ್ಗಳಂ ಮುಗಿದು,

ಜನಪತಿ ಬಿನ್ನಪಂ ಸುರರೊಳೆಲ್ಲರ ಸಾಕ್ಷಿಯೊಳಾಂ ತ್ವದೀಯಪಾ ।
ವನಪದಪದ್ಮಮಂ ಬಗೆಪಿಸಿಂದುಸಲ್ ಪ್ರಾಣಮುಟ್ಟು ಸಂತತಂ ॥
ಜನಪದಮೆಲ್ಲಮಂ ತಿರಿಗಿ ಧರ್ಮನಿವಾಸದ ಸಿಂಹದೇಶಮಂ ।
ಮನವೊಸೆದಯ್ದಿ ಸಿಂಹಪುರಮಂ ಮಿಗೆ ಪ್ರೇಕ್ಷನತೀವರಾಗದಿಂ ॥ ೨

ಅಂತು ಸಿಂಹಪುರಮಂ ಪ್ರೇಕ್ಷಿಪೆನ್ನಗಂ

ಮನಸಿಜಚಿತ್ತಮೋಹಿನಿಗೆ ಸತ್ಪಥಗಾಮಿನಿಗುಗ್ರಪಾಶಲೋ ।
ಪಿನಿಗೆ ಪುರಾರಿಕಾಮಿನಿಗೆ ಭೀಕರಶೂಲಿನಿಗಗ್ನಿಭಾಳಲೋ ॥
ಚನಿಗೆ ಮೃಗೇಂದ್ರವಾಹಿನಿಗೆ ವರ್ಣಿತವರ್ಣನಿಗೊಲ್ದು ವಿಂಧ್ಯವಾ ।
ಸಿನಿಗೆ ಜಗಜ್ಜನಂ ಪರಕೆಯಂ ಸಲಿಸಲ್ ನೆರೆದಿರ್ದುದುರ್ವಿಪಾ ॥ ೩

ಅಂತಾವಿಂಧ್ಯವಾಸಿನಿಗೆ ಜಾತ್ರೆ ನೆರೆದಿರಲಾಂ ಪೋಗಲಲ್ಲಿ

ಏಕಾಂತಸ್ಥಳದೊಳ್ ಚಿ ।
ತ್ತಾಕುಳಮಂ ನೀಗಲೆಂದು ಕುಳ್ಳಿರ್ದ ವಿಸಂ ॥
ಚೇಕೇಳಿಯೊಳಿರ್ದಂ ಸಿ ।
ವ್ಯಾಕುಳದಿಂದೊರ್ಬ ಸೌಮ್ಯನುವೀರನಾಥಾ ॥ ೪

ತುವಿನೆರಲಿಂದೆ ಮುಟ್ಟಿಯಿಡಗೆಯ್ದೊಳಮಂಚಿರ್ ಸುಡಾಳದಿಂಪು ನು ।
ಗ್ರೋದವಿರೆ ಕೇಳ್ದು ಕೋವಿದರ ಕರ್ಣರಸಾಯನವೆಂಬ ವ್ಯಾಕ್ಯೆಯಿಂ ।
ತೊದಳನಿತಿಲ್ಲದೊಳ್ಪೆಸೆವ ವಾಣಿಯ ಜಾಣ್ನುಡಿ ಕೇಳಲಾಯ್ತನಲ್ ।
ಸವನುಳಿವೀಣೆಯಂ ಪದೆದು ಬಾಜಿಸುತಿರ್ದನನೇಕರೀತಿಯಿಂ ॥ ೫

ಅಂತಿರ್ದ ವೀಣಾಧರನಂ ಕಂಡು,

ನೆರವಿಯನುೞಿದೊರ್ಬನೆ ಬಂ ।
ದು ರಹಸ್ಯದೊಳೞ್ಕೆಯೇಕೆ ನಿನ್ನಯ ಪೆಸರೇಂ ॥
ಪರಿವಾದಿನಿಯುಂ ಸತತಂ ।
ಪರಮಪ್ರಿಯತಮೆಯುಮಪ್ಪ ಪಂತಪ್ಪರಲೇಂ ॥ ೬

ಎಂದಾಂ ಬೆಸಗೊಳಲಾತನಿಂತೆಂದಂ:—

ತನ್ನಯ ಮನಕ್ಕೆ ಬಾರದ ।
ರೆನ್ನರ್ ನೆರೆದಿರ್ದೊಡೇನದಂತಿರ್ಕೆ ನಿಜ ॥
ಕ್ಕೆನ್ನ ಪೆಸರಂ ವಿಚಾರಿಸೆ ।
ಸನ್ನುತಮತಿ ಕೋಶದಾಸನೆಂಬುದು ಕೇಳಯಾ ॥ ೭

ಎಂದು ತನ್ನ ಪೆಸರಂ ಪೇೞ್ದೆನ್ನಂ ಮಿತ್ರನಪ್ಪಂತು ಭಾವಿಸಿ ಕೋಶದಾಸಂ ವೀಣೆಯನಪ್ಪಿದ ಕಾರಣಮಂ ಪೇೞಲೆಂದಿಂತೆಂದಂ.—

*ಪೆಸರ್ವೆತ್ತ ಶುಭಸಿಂಹಪತ್ತನದಧೀಶಂ ತುಂಗಧನ್ವಂ ತದೀ ।
ಯಸತಿ ಪ್ರಸ್ತುತಿವೆತ್ತ ಮೇದಿನಿಯುಮರ್ ಬಂದಿಲ್ಲಿಗೀದುರ್ಗೆಯಂ ॥
ಪಸೆದಿರ್ದರ್ಚಿಸಿ ರತ್ನಸಂತತಿಗಳಿಂ ಮತ್ತಂತವರ್ ಬೇಡಿದರ್ ।
ವಸುಧಾವಂದಿತಪುತ್ರನಪ್ಪ ವರಮಂ ಚಂಚತ್ತಪೋನಿಷ್ಠೆಯಿಂ ॥ ೮

ಅಂತವರ್ ತಪೋನಿರ್ಬಂಧದಿಂದಿರಲೊಡಂ ವಿಂಧ್ಯವಾಸಿನಿ ಪ್ರಸನ್ನೆಯಾಗಿ

ಮನಸಿಜಮತ್ತಹಸ್ತಿನಿಯೆನಿಪ್ಪ ಕುಮಾರಿಯನೊರ್ಬಳಂ ಜಗ ।
ಜ್ಜನಹಿತಕಾರಿಯಪ್ಪ ಸುತನೊರ್ಬನನಂತವರ್ಗೊಲ್ದು* ವಿಂಧ್ಯವಾ ॥
ಸನಿ ಪದೆದಿತ್ತೆನೆಂದು ವರಮಂ ದಯೆಗೆಯ್ಯಲೊಡಂ ನೃಪಾಲನುಂ ।
ವನಿತೆಯುಮಿರ್ಬರುಂ ಸುಖಸುಧಾಂಬುಧಿಯೊಳ್ ಮುೞುಂಗಿರ್ದರೞ್ತಿಯಿಂ ॥

ಅಂತು ಸಂಕಲ್ಪಸಿದ್ಧರಾದ ದಂಪತಿಗಳ್ಗೆ ವಿಂಧ್ಯವಾಸಿನಿ ಮಗುೞ್ದಂತೆಂದಳ್

ನಿಮಗಾನಿತ್ತ ತನೂಜೆ ಬಂದೆನೆಗೆ ತತ್ಪೂರ್ವಾಹ್ಣದೊಳ್ ಕೂರ್ತು ಸಂ ।
ಭ್ರಮದಿಂ ಕಂತುಕಕೇಳಿಯಂ ಸಲಿಸುತಿರ್ಕಾಕಾಂತೆಯೊಳ್ ಕೂರ್ತವಂ ॥
ರಮಣಂ ತಾನೆನಿಸಿರ್ಕೆ ತದ್ರಮಣನಂ ನಿಮ್ಮಾತ್ಮಜಂ ಸೇವೆಗೆ ।
ಯ್ಗೆ ಮಗಳ್ಗೊಪ್ಪುವ ಕಂತುಕಾವತಿಯೆನಿಪ್ಪಾನಾಮಮುಂ ಸಲ್ಕಾವಗಂ ॥ ೧೦

ಎಂದು ಮತ್ತಮಿಂತ್ತೆಂದಳ್ :—

ನಿನ್ನ ಮಗಳುತ್ಸವಂ ಮಿಗ |
ಲೆನ್ನಿದಿರೊಳ್ ಮಾಪ್ಪಿ ಕಂತುಕಕ್ರೀಡಾಸಂ ||
ಪನ್ನದ ದೆಸೆಯಿಂ ತತ್ಸ |
ರ್ವನ್ನೋಡೆ ಸುಕಂತುಕಾಖ್ಯಮಂ ತಳೆದಿರ್ಕುಂ || ೧೧

ಎಂದು ಭವಿಷ್ಯದ್ವರ್ತಮಾನಮಂ ಪೇಳಲಾ ತುಂಗಧನ್ವಂ ಮಹಾಪ್ರಸಾದಮೆಂದು ವಿಂಧ್ಯವಾಸಿನಿಯುಂ ಬೀಳ್ಕೊಂಡು ಮೇದಿನೀಸಹಿತಂ ನಿಜನಿವಾಸಕ್ಕೆ ಬಂದಿರಲ್ ಕೆಲವು ದಿನಕ್ಕೆ

ಧರೆ ಪೊಗಳೆ ತುಂಗಧನ್ವಂ |
ಗರವಿಂದಾಮೋದೆ ಮೇದಿನೀದೇವಿಗೆ ಸು ||
ಸ್ಥಿರದಿಂದೆ ಜನಿಸಿದರ್ ಭಾ |
ಸ್ಕರದೀಧಿತಿಸನ್ನಿಭರ್ ಕುಮಾರಿಕುಮಾರರ್ || ೧೨

ಅಂತು ಜನಿಸಲೊಡಂ,

ತನಯಂಗೆ ಭೀಮಧನ್ವಂ |
ತನೂಜೆಗತಿಮುದದೆ ಕಂತುಕಾವತಿಯೆಂದೊ ||
ಳ್ಪಿನ ಪೆಸ*ರ್ಗಳನೊಸೆದಿಟ್ಟಂ |
ಜನನಾಥಂ ತುಂಗಧನ್ವನುತ್ಸವದಿಂದಂ || ೧೩

ಅಂತವರ್ಗೆ ಪೆಸರಿಡಲ್ ವರ್ಷಕ್ರಮದಿಂದವರ್ ಪರಿವರ್ಧಿಸೆ

ಪೆಸ*ರ್ವೆತ್ತ ಕಂತುಕಾವತಿ |
ಗೆ ಸಖಿತ್ವಮನಾಂತು ಜೀವದಂತಿರ್ಪಳ್ ಭಾ ||
ವಿಸೆ ಚಂದ್ರಸೇನೆಯೆಂಬಳ್ |
ಕುಸುಮಾಯುಧನರಲ ಸರಲನೀಬ್ಬಳಿಗೊಳ್ವಳ್ || ೧೪

ಪದನಖಕಾಂತಿ ತಾರಗೆಗಳಂ ಗೆಲೆ ನಿರ್ಮಳದಂತದೀಪ್ತಿ ಕಾ |
ಮುದಿಗೊಳಿಗಟ್ಟೆ ಲೋಚನಯುಗಾಂಚಲರಕ್ತಿ ಚಕೋರಿಗಳ್ಗೆ ಸಂ ||
ಪದಮನನುರ್ಚೆ ಮೆಲ್ನುಡಿ ಕರಂ ಸುಧೆಗಿಂಪನೊಡರ್ಚೆ ಕಾಮುಕ|
ರ್ಗದವಳಿಲಂ ಮುಖೇಂದು ಕುಡೆ ಬಣ್ಣಿಸದಿರ್ಪರೆ ಚಂದ್ರಸೇನೆಯಂ || ೧೫

ಆಚಂದ್ರಸೇನೆಗೆನಗೆ ಮ ।
ಹಾಚೇತಃಪ್ರೀತಿ ಪೆರ್ಚಲಂಗಜನಿರ್ಬ ॥
ರ್ಗಾಚಾರ್ಯನಾಗಿ ಮಂಗಳ ।
ವಾಚಕದಿಂಬೊಂದುಗೂಡಿವಂ ಮುದಮೊಸೆಯಲ್ ॥ ೧೬

ಅಂತಾಚಂದ್ರಸೇನೆಗಮೆನಗಮನ್ಯೋನ್ಯಸ್ನೇಹಂ ಸಂದಿರೆ,

ಈಗಳ್ ಕಾಮುಕಭೀಮಧನ್ವನವಳಂ ತನ್ನೊಲ್ಮೆಯಿಂ ನಿತ್ಯಸಂ ।
ಭೋಗಸ್ತ್ರೀಯನೆ ಮಾಡಿಕೊಂಡಿರಲವಂ ಮತ್ಸ್ವಾಮಿಪುತ್ರಂ ಕನ ॥
ಲ್ದೇಗೆಯ್ವಂ ಕೊಲಲಾಗದೆಂದು ಮನದೊಳ್ ಕಟ್ಟೇವಮೊಯ್ದಲ್ಕೆ ವೀ।
ಣಾಗಾಂಧರ್ವದ ಸೌಖ್ಯದಿಂ ಮಱೆವೆನೆಂದಿರ್ಪ್ಪೆ ನೀತಾಣದೊಳ್ ॥ ೧೭

ಮುದದೆಡೆಗೆ ದುಃಖದೆಡೆಗಂ ।
ಸುದತಿಯರ ವಿಯೋಗದೆಡೆಗೆ ಕೂಡಿರ್ದೆಡೆಗಂ ॥
ಕದಡಿರ್ದ ಚಿತ್ತದೆಡೆಗಂ ।
ಪದೆಪಿಂದಂ ಬಂಧುವಲ್ತೆ ಸಂಗೀತರಸಂ ॥ ೧೮

ಎಂದು ಕೋಶದಾಸು ತನ್ನ ವೃತ್ತಾಂತಮುಂ ಪೇೞ್ದ ಸಮಯದೊಳ್

ನೂಪುರದಿಂಚರಂ ನವಕಳಾಪಮನೂನ............... ।
...............ರತ್ನವಳಯ ಧ್ವನಿ ಚಿತ್ತಜಚಾಪಟಂಕೃತಂ॥
ವ್ಯಾಪಿಸಿದತ್ತು ನಾಲ್ದೆಸೆಯುಮೆಂಬಿನಮೊಂದೆಸೆಯುಲ್ಕದೊರ್ವ ಶೋ ।
ಭಾಪರಿಪೂರ್ಣೆ ಬಂದಳತಿಸಂಭ್ರಮದಿಂ ಪದೆವಲ್ಲಿಗಾಕ್ಷಣಂ ॥ ೧೯

ಅಂತವಳ್ ಬರಲೊಡಂ,

ಶಂಕಿಸದೆ ಕೋಶದಾಸಂ ।
ಭೋಂಕನಲೆೞ್ದವಳನಪ್ಪಿಯಂತಿಕದೊಳ್ ಪೆಂ ॥
ಪಿಂ ಕುಳ್ಳಿರಿಸಿ ಬಱಿಕ್ಕಾ ।
ತಂ ಕಡುಪಿಂದಂ ಪೇೞ್ದನೆನಗೆ ತತ್ಕೌತುಕಮಂ ॥ ೨೦

ಅದೆಂತೆನೆ:—

ನಿನ್ನೊಳ್ ಮುದದಿಂದಾಂ ಪೇ ।
ೞ್ದೆನ್ನ ಪ್ರಾಣಾಧಿನಾಥೆಯೀಕೆ ಕಳಾಸಂ ॥

ಪನ್ನಗುಣೆ ಚಂದ್ರಸೇನೆ ಮ ।
ಹೋನ್ನತಸೌಭಾಗ್ಯವಂತೆ ಭಾವಿಸು ಕೆಳೆಯಾ ॥ ೨೧

ಎಂದಾಚಂದ್ರಸೇನೆಯುನೆನಗೆ ತೋಱಿ ಮಗುೞ್ದಾಕೆಯೊಳಾತನಿಂತೆಂದಂ:—

ಪೀನನಿತಂಬೆಯರ್ ಗುರುಪಯೋಧರೆಯರ್ ನಳತೋಳ ಬಾಲೆಯರ್ ।
ಮೀನನಿಭಾಕ್ಷಿಯರ್ ಕುಟಿಲಕುಂತಳೆಯರ್ ನವಕಂಬುಕಂಠೆಯರ್ ॥
ಮಾನಿನಿಯರ್ ಕೆಲರ್ ಮದನಲಕ್ಷ್ಮಿಕ್ರಿಯರಂತಿರೆ ವಿಂಧ್ಯವಾಸಿನೀ ।
ಸ್ಥಾನಮನೆಯ್ದಿದರ್ ಪದೆದು ನೋೞ್ಪರ ಕಣ್ಗಳ ಪರ್ಬಮೆಂಬಿನಂ ॥ ೨೨

ಅಂತು ನೆರೆದು ಬಂದ ತರುಣಿಯರ ನಡುವೆ

ನಗೆಗಣ್ ಮಿಂಚಿನ ಗೊಂಚಲಂ ಮಿಗುವಿನಂ ಕರ್ಪಿಂ ಲಸದ್ವೇಣಿ ಕಾ ।
ರ್ಮುಗಿಲಂಗೆಲ್ವಿನಮಿಂದ್ರಚಾಪರುಚಿಯಂ ಭೂಷಾಮಣಿಜ್ಯೋತ್ಸ್ನೆಗಳ್ ॥
ನಗುವಂತಿರ್ಪಿನಮಾತ್ತಯೌವನರಸಂ ತೀರ್ದ್ಪಿನಂ ಧೂರ್ತರಂ ।
ಚೆಗಳಂತಂಜವಿನಂ ಪಯೋಧರೆಯುಮೊರ್ಬಳ್ ಕಣ್ಗೆ ಸಂದಳ್ ನೃಪಾ ॥

ಅಂತಿರ್ದ ವಿಳಾಸಿನಿಯುಂ ಕಂಡಿವಳಾರೆಂದಾಂ ಚಂದ್ರಸೇನೆಯುಂ ಕೇಳಲವಳಿಂತೆಂದಳ್:—

ಇವಳಲ್ತೆ ಕಂತುಕಾವತಿ ।
ಭುವನೇಶ್ವರಿಯೆನಿಪ ವಿಂಧ್ಯವಾಸಿನಿಗೆ ಮಹೋ ॥
ತ್ಸವದಿಂ ಕಂತುಕಕೇಳಿಯ ।
ನವಿಳದಿಂದೆಸಗಲೆಂದು ಬಂದಳ್ ನಲವಿಂ ॥ ೨೪

ಎಂದು ಮತ್ತಂ,

ನಿಮ್ಮಯ ಕಣ್ಗಳ ಪರ್ಬಮ ।
ನೆಮ್ಮರಸಿಯ ಸೆಂಡಿನಾಟದೊಳ್ ಪಡೆದೊಡೆ ನೀ ॥
ಪ್ರಮ್ಮಹದಿಂ ನೋೞ್ಕೆಯೆನು ।
ತ್ತಿಮ್ಮರ್ಬರನಾಕೆಯೆಡೆಗೆ ಸಖಿ ಕೊಂಡುಯ್ದಳ್ ॥ ೨೫

ಅಂತೆಮ್ಮಿರ್ಬರಂ ಚಂದ್ರಸೇನೆ ರಂಗಭೂಮಿಗೊಡಗೊಂಡು ಪೋಗಲ್ ಆಗಳ್ ಕಂತುಕಾವತಿ

ಅಳಕಂ ಜೋಲ್ದಿರೆ ಹಾರಮೊರ್ಗುಡಿಸೆ ಚಂಚತ್ಕರ್ಣಪತ್ರಂ ಕರಂ ।
ಪೊಳೆಯಲ್ ವೇಣಿ ಕೆಲಕ್ಕೆ ಜಾಱೆ ವಿಳಸತ್ಸಂವ್ಯಾನಬಂಧಂ ಕುಚ ॥
ಸ್ಥಳದಿಂದೊಯ್ಯನೆ ಪಿಂಗೆ ತೋಳ್ಗಳ ಮೊದಲ್ ಚೆಲ್ವಾಗಿರಲ್ ಕೋಮಳಾಂ ।
ಘ್ರಿಹಸ್ತಂಗಳನೊಲ್ದು ಕಾಂತೆ ಪೊಡೆವಟ್ಟಳ್ ದೇವಿಗಾನಂದದಿಂ ॥ ೨೬

ಅಂತು ಕಂತುಕಾವತಿ ವಿಂಧ್ಯವಾಸಿನಿಗೆ ನಮಸ್ಕರಿಸಿಯನಂತರಂ,

ಮಣಿಮಯಕಾಂಚಿಯುಂ ಬಿಗಿದು ಕಂಚುಕಮಂ ಕುಚಮಂಡಲಕ್ಕೆ ಕೇ ।
ವಣಿಸಿಯೆ ಬಿಲ್ಲ ಮುಂಜೆಱಗನೊಯ್ಯನೆ ಸಿಕ್ಕಿ ನವೀನರತ್ನಕಂ ॥
ಕಣಮೆಸೆವಂಗದಿಂ ದನಿಗುಡಲ್ಕೆ ಭವಾನಿಯ ಮುಂದೆ ಯಾವಕಾ ।
ರುಣಕರದೊಳ್ ಕುಮಾರಿ ತಳೆದಳ್ ಪೊಸಸೆಂಡನನಂಗಪಿಂಡಮಂ ॥ ೨೭

ಮದನನ ಶೃಂಗಾರಮನೊ ।
ರ್ಮೊದಲಂಗನೆ ಮುದ್ದೆಮಾಡಿ ತೋರ್ಪಂತೊಪ್ಪಿ ॥
ರ್ದುದು ಚೆಲ್ವ ಸೆಂಡು ವಿಟರ ।
*ಳ್ಳೆರ್ದೆಯೊಯ್ಕನೆ ಕಂತುಕಾವತಿಯ ಬಲಗೆಯ್ಯೊಳ್ ॥ ೨೮

ಅಂತಿರ್ದ ಸೆಂಡಂ ಕೊಂಡು

ಮೊದಲೊಳ್ ಮೆಲ್ಲನೆ ಸೆಂಡನಿಟ್ಟು ನೆಗೆಯಲ್ ಮೆಲ್ಪಿಂದಮಳ್ ಪೊಯ್ದುಪೊ
ಣ್ಮಿದ ಸೆಂಡಂ ನಖದೀಪ್ತಿ ರಂಜಿಸುವಿನಂ ಮೇಗೆಯ್ಯೊಳಾಂತಾಗಳಂ ॥
ತದನಾಹಿರ್ಗಂ ಮಗು*ಟ್ದುರ್ವಿಯೊಳ್ ಪೊಡೆದು ಗೋಮೂತ್ರಂಬೊಲೊರ್ಮೆ
ಯ್ಗೆ ತಾ । ಳದ ಸೂಳಿಂ ತ್ರಿಳದಾಡಿದಳ್ ಸುವತಿ ಪೆಂಪಿಂ ಕಂತುಕಕ್ರೀಡೆಯಂ ॥

॥ ಮಲ್ಲಿಕಾಮಾಲೆ ॥

ವಾರಿಜಾನನೆ ಸೆಂಡನಿರ್ಕೆಲದೊಳ್ ನಿಮಿರ್ದು ಕರಾಗ್ರದಿಂ ।
ಜಾಱೆ ಮೆಟ್ಟುತೆ ಪೊಯ್ಯಲಂಗದರತ್ನಕಂಕಣನೂತ್ನಮಂ ॥
ಜೇರಕಧ್ವನಿ ಪಂಚಬಾಣಶರಾಸನಧ್ವನಿಯಂತೆ ವಿ ।
ಸ್ತಾರದಿಂ ಪೊಱಪೊಣ್ಮಲಾಡಿದಳಂತು ಕಂತುಕಕೇಳಿಯಂ ॥ ೩೦

ಭ್ರಮರಿಗುಡುತ್ತೆ ಕಂತುಕಮನಂಗನೆ ಪೊಯ್ಯಲಲಾತಚಕ್ರದಂ ।
ತ*ಮರ್ದಿರೆ ಸೆಂಡು ವೃತ್ತತೆಯೊಳಂಗನೆ ಮಧ್ಯದೊಳೊಪ್ಪುತಿರ್ದಳು ॥
ತ್ತಮಪರಿವೇಷಮಧ್ಯದ ಶಶಾಂಕಕಳಾಕೃತಿಯಂತೆ ಚಿತ್ತವಿ ।
ಭ್ರಮಮನೊಡರ್ಚುತೆಲ್ಲರೊಳದೇಂ ಪೊಗ*ಟ್ಟಿಂ ಕಮನೀಯಕೇಳಿಯುಂ ॥

ಅಂತು ಭ್ರಮರಿಗುಡುವಾಗಳ್

ಸೊಗಸೆಸೆಯೆ ಕೋಶದಾಸನ ।
ಪೆಗಲೊಳ್ ಮುಂಗೆಯ್ಯನಿಱಿಸಿ ನಿಂದಿರ್ದೆನ್ನಂ ॥
ಮೃಗನೇತ್ರೆ ಕಂಡು ಚಿತ್ತಂ ।
ಬುಗುವಂತಿರೆ ಮುಗು*ೞ್ದು ಮುಗು*ೞ್ದು ನೋಡಿದಳಾಗಳ್ ॥ ೩೨

ಅಂತು ನೋಡಿ ಮತ್ತಂ,

ಬಡನಡುವಿಂಗೆ ಲಂಘಿಸಿ ಕುಚಕ್ಕಡರ್ದಿ*ಂದುಟಿಯುಂ ತುಡುಂಕಿ ಮೋ ।
ಱುಡಿಗಿರಬೆಯ್ದು ಮುಂದಲೆಗೆ ಪಾಯ್ದು ವಿಟಾಗ್ರಣಿಯಂತೆ ಕಂತುಕಂ ॥
ತೊ*ಡರ್ದಪುದೆಂದು ಕಾಂತೆ ಮೃದುಹಸ್ತದಿನೋವದೆ ಪೊಯ್ಯೆ ಮತ್ತೆ ಮಿ ।
ಲ್ಲಡಿಗಳನಂಟಿ ಪೆರ್ಚುಪುದದಲ್ತೆ ಗುಣಾಧಿಕನೀತಿ ಧಾತ್ರಿಯೊಳ್ ॥ ೩೩

ವಿಲಸತ್ಕಂತುಕಮಂ ಪುಟಂನೆಗೆವಪೋಲ್ ಮಾಪೊರ್ಯ್ದು ಸೆಂಡೆಯ್ತರಲ್
ನಲವಿಂದಂ ಪುಱಕೆಯ್ಯೊಳಾಂತು ಮುಗುೞ್ದಾರ್ಪಿಂ ಮಾಣದೋರಂತೆ ತಾ ।
ಳಲಯಂ ರಂಜಿಸೆ ಚಿತ್ರಬಂಧಗತಿಯೊಳ್ ಸೂೞ್ಮೆಕ್ಕಟ್ಟನೊಳ್ ಪೊಯ್ದು ಕೋ ।
ಮಳೆ ಪುಷ್ಪಾಸ್ತ್ರವನೀೞ್ದು ಮೂಡಿಗೆಗಳಂ ಪುಷ್ಪಾಸ್ತ್ರಮಂ ಪೊಯ್ಯಳೇ

ನಡೆಸೆಂಡಂ ಪೊಡೆಸೆಂಡನಾರ್ಪಿನೊದೆಸೆಂಡಂ ಪಾರ್ವಸೆಂಡಂ ಕರಂ ।
ಪಡಿಸೆಂಡಂ ಸುೞಿಸೆಂಡನಿರ್ದೆಸೆಗಳೊಳ್ ಪೊಯ್ಸೆಂಡನೂರ್ಧ್ವಕ್ಕೆ ಪೊ॥
ಯ್ದುಡುಸೆಂಡಂ ಪೊಱಕೆಯ್ಯೊಳಪ್ಪಳಿಪ ಸೆಂಡಂ ಚಿತ್ರಬಂಧಂಗಳೊಳ್ ।
ತೊ*ಡರ್ದೊಪ್ಪಂಬಡೆದಾಡಿದಳ್ ವಿಟಜನಂ ಕೊಂಡಾಡಿ ಬೆಂಡಪ್ಪಿನಂ ॥ ೩೪

ಅಂತು ಕಂತುಕಕ್ರೀಡೆಯುಂ ಮಾಡಿ ಕಾಮನಂ ಕಾಡಿ ವಿಂಧ್ಯವಾಸಿನಿಯಂ ಬೀೞ್ಕೊಂಡು ವಿಳಾಸಿನೀಜನಂಬೆರಸು ನಿಜನಿವಾಸಕ್ಕೆ ಪೋಗುತ್ತೆ

ಅಂತಾಕೆ ಮನೆಗೆ ಪೋಗು ।
ತ್ತುಂ ತಿರಿಗಿ ಮದೀಯವಕ್ತ್ರಮಂ ನೋಡಿದಳೋ ॥
ರಂತೆಸೆವ ತನ್ನ ಜೀವಂ ।
ಪಿಂತಿರ್ದತ್ತೆಂಬ ತೆಱನನನುಕರಿಸುತ್ತುಂ ॥ ೩೫

ಏಣವಿಶಾಲನೇತ್ರೆ ಪದೆದೆನ್ನ ಮನೋಹರವಕ್ತ್ರಪದ್ಮಮಂ ।
ಕೂಣಿತದೃಷ್ಟಿಯಿಂದಡ*ರ್ದು ನೋಡಲೊಡಂ ಕಡುಕೆಯ್ದು ಮನ್ಮಥಂ ॥

ಬಾಣಸಮೂಹಮಂ ಮುಳಿಸಿನಿಂ ಪಿಡಿದಾರ್ದುಮದೆನ್ನ ಮೇಲೆಮಂ ।
ಮಾಣದೆ ಸೂಸಲಾಂ ಮನದ ಧೈರ್ಯದ ಬಲ್ಪಿನೊಳಿರ್ದೆನುರ್ವಿಪಾ ॥ ೩೬

ಅಂತೆನ್ನಂ ನೋಡುತ್ತವಳತ್ತಲ್ ಪೋದಳ್. ಇತ್ತಲಾನುಂ ಕೋಶದಾಸನುಂ ಪೂರ್ವಸ್ಥಾನಕ್ಕೆ ಬಂದಿರ್ಪುದುಮಲ್ಲಿಗೆ ಚಂದ್ರಸೇನೆ ಬಂದು

ಪಾಪಾತ್ಮಭೀಮಧನ್ವಂ ।
ಕೋಪಿಸುವಂ ಪಿಂದೆ ತಡೆದಿರಲ್ಕೆನ್ನಂ ಕಾಂ ॥
ತಾ ಪತಿಯೊಡನಾಂ ಬೇಗಂ ।
ಪೋಪೆಂ ಕೇಳ್ ಕೋಶದಾಸ ಬೆಸಸೇಗೆಯ್ವೆಂ ॥ ೩೭

ಎಂದು ಚಂದ್ರಸೇನೆ ಕೋಶದಾಸಂಗೆ ಪೇಳ್ದು ಪೋಪೆನೆಂಬಾಗಳಾನವಳ್ಗಂತೆಂದೆಂ:—

ಆನೊಂದೌಷಧಿಯೀಯಲ್ ।
ವಾನರಿಯಾಗಿರ್ಪಯುವನ ಕಣ್ಗಳ್ಗೆ ಚಂ ॥
ದ್ರಾನನೆಯುದಱಿಂ ಬಿಡುಗುಂ ।
ಮಾನಿನಿ ನಿನ್ನಾಸೆ ಭೀಮಧನ್ವಂಗಾಗಳ್ ॥ ೩೮

ಎಂಬುದುಮವಳಿಂತೆಂದಳ್:—

ಇನಿತೊಂದಾಯಾಸಮೇತರ್ಕೆನಗೆ ಕಪಿಮುಖಂ ತಾನದೇತರ್ಕೆ ಕಾಂತಾ ।
ಜನರತ್ನಂ ತುಂಗಧನ್ವಾತ್ಮಜೆ ನಿನಗೆನಸುಂ ಕಾಂತೆಯಾಗಲ್ಕೆ ನಿನ್ನಾ ॥
ಳನಿಸಿರ್ಕುಂ ಭೀಮಧನ್ವಂ ಜನನಫಲಮವಂಗಾಂ ಬಱಿಕ್ಕಾತನಿಂ ಭೋಂ ।
ಕನೆ ಪಿಂಗಿರ್ಪಂತುಟಕ್ಕುಂ ಸತಿಯೆನಿಸುವೆನೀಕೋಶದಾಸಂಗೆ ಸತ್ಯಂ ॥ ೩೯

ಎಂದವಳ್ ಪೇೞೆ ಕಂತುಕಾವತಿ ಕಾಂತೆಯುಪ್ಪ ಕಾರಣಮೆಂತೆಂದಾಂ ಕೇಳ್ವುದುಮವಳಿಂತೆಂದಳ್:—

ಸೆಂಡಾಡುತ್ತಮೆ ಕಂತುಕಾವತಿ ಕಳಾಸಂಪನ್ನೆ ನಿನ್ನಾಸ್ಯಮಂ ।
ಕಂಡುನ್ಮಾದಮನೆಯ್ದಿ ಮೆಯ್ಮಱೆದು ತನ್ನೊಳ್ತಾನೆ ಮತ್ತಮ್ಮನಂ ॥
ಗಂಡಪ್ಪರ್ಕೆಲರೆಂದು ವಂಚಿಸಿಯನಂಗೋದ್ರೇಕದಿಂ ಪೋಗಲಾಂ ।
ಕಂಡೆಂ ಕಾಂತೆಯ ಭಾವಮಂ ನಿನಗವಳ್ ಸ್ತ್ರೀಯಪ್ಪಳೆಂಬಂದಮಂ ॥ ೪೦

ಭವಮೂರ್ತಿ ವಿಂಧ್ಯವಾಸಿನಿ ।
ಭವಿಷ್ಯದರ್ಥಮನಲಂಪಿನಿಂ ಪೇೞ್ದಳ್ ಕೇಳ್ ॥

ಯುವತಿಗೆ ವಲ್ಲಭನಾಗಿ ।
ರ್ಪವಂಗೆ ಮಿಗೆ ಭೀಮಧನ್ವನಾಳೆಂಬೊಲವಿಂ ॥ ೪೧

ಅದಱಿಂ ನಿನಗೆ ಕಂತುಕಾವತಿ ಕಾಂತೆಯುಂ ಭೀಮಧನ್ವಂ ಭೃತ್ಯನುಮ ಪ್ಪುದು ತಪ್ಪದೆಂದು ಚಂದ್ರಸೇನೆ ಪೇೞ್ದು ಮತ್ತಂ,

ಎನ್ನಯ ಮಾತೃ ತನ್ನೃಪತನೂಜೆಗೆ ಧಾತ್ರಿಕೆಯಪ್ಪಳಾನಿದಂ ।
ತನ್ನೊಡನಿಂದು ಪೇೞಲವಳೊಪ್ಪುವ ಮೇದಿನಿಗೊಲ್ದು ಪೇೞ್ದೊಡ ॥
ತ್ಯುನ್ನತತುಂಗಧನ್ವನೃಪನೊಳ್ ಸಲೆ ಮೇದಿನಿ ಪೇೞಲಾಕ್ಷಣಂ ।
ನಿನ್ನಯ ಕಾರ್ಯಮಪ್ಪುದಿದು ದೇವತೆಯಾಜ್ಞೆ ಕುಮಾರಶೇಖರಾ ॥ ೪೨

ಎಂದು ಪೇೞ್ದು ಚಂದ್ರಸೇನೆ ಪೋಗಲೊಡಂ,

ಎನ್ನಯ ಹೃದಯದ ತಾಪಂ ।
ತನ್ನಂ ಬಂದೆಯ್ದಲುಷ್ಣಮಿರ್ಮಡಿಸುಗುಮೆಂ ॥
ಬುನ್ನತಚಿಂತೆಯಿನೆಯ್ದಿದ ।
ನನ್ನಿಗಮಪರಾಬ್ಧಿಗಬ್ಜಿನೀಪ್ರಾಣೇಶಂ ॥ ೪೩

ಅಂತು ಸೂರ್ಯಾಸ್ತಮಯಮಾಗಲೊಡಂ,

ಬಂದಿರುಳನೇಕಯುಗದಂ ।
ತೊಂದಿರಲೆಂತಾನುಮೆನ್ನ ಪುಣ್ಯೋದಯಮೆಂ ॥
ಬಂದದಿನುದಯಾಚಲದೊಳ್ ।
ಬಂದಿರ್ದಂ ಕೂರ್ತು ಪದ್ಮಿನೀನಿಜಕಾಂತಂ ॥ ೪೪

ಅಂತುದಯಮಾಗಲ್ ಸಂಧ್ಯಾವಂದನಂಗೆಯ್ದು ವಿಂಧ್ಯವಾಸಿನಿಗೆ ನಮಸ್ಕಾರಂಗೆಯ್ಯಲೆಂದಾಂ ಪೋಪಾಗಳ್,

ಪೊಡವಿಪತಿ ಕೂರ್ತು ಕೆಲಬರ ।
ಗಡಣದಿನಾಭೀಮಧನ್ವನೊಲವಿಂದಾನಿ ॥
ರ್ದೆಡೆಗೆೞ್ತಂದೆನ್ನಂ ತ ।
ನ್ನೊಡನೆ ಬರಲ್ವೇೞ್ದು ಪಿರಿದು ಮನ್ನಿಸಿ ಕರೆದಂ ॥ ೪೫

ಅಂತು ಕರೆಯಲ್ಕಾನದರ್ಕೊಡಂಬಡಲೊಡಂ ಭೀಮಧನ್ವನೆನ್ನಂ ಮನೆಗೊಡಗೊಂಡು ಪೋಗಿ ಮಜ್ಜನಭೋಜನಾದಿಕ್ರಿಯೆಗಳಂ ಮಾಡಿಸಿ ಪಗಲಂ ಕಳೆಯಲೊಡಂ

ಗಗನಸ್ಥಲದೊಳ್ ತಿರುಗುವ ।
ಖಗನಪರಾಧೀಂದ್ರಕೋಟರಕ್ಷತಿಮವದಿಂ ॥
ದೊಗೆಯಲ್ ಪಡೆಪಿಂದಾಗಳ್ ।
ಜಗಜ್ಜನಂ ನಿದ್ರೆಗೆಳಸಿಯೊಱಗಿತ್ತಾಗಳ್ ॥ ೪೬

ಅಂತಸ್ತಮಾನಮಾಗಲೊಡಂ ಪ್ರಾಪ್ತಕಾಲದೊಳ್ ಸಜ್ಜೆವನೆಯೊಳಾನೊ
ಱಗಿರ್ಪಾಗಳ್

ನಡುವಿರುಳೆೞ್ತಂದು ಕೆಲರ್ ।
ಪಿಡಿದೆನ್ನಂ ಪೊಡೆದು ಕಟ್ಟಿ ಕುಳ್ಳಿರಿಸಲ್ಕೆ ವಿ ॥
ಗಡ ಭೀಮಧನ್ವನಲ್ಲಿಗೆ ।
ಸಡಗರದಿಂ ಬಂದು ನಸು ನಗುತ್ತಿಂತೆಂದಂ ॥ ೪೭

ನಿಮ್ಮೇಕಾಂತವಿಚಾರದ ।
ಸಮ್ಮಂಧಮನೆಮ್ಮ ದೂತಿ ವಾತಾಯನದಿಂ ॥
ಸುಮ್ಮನೆ ಬಂದಿರ್ದಱಿದಿ ।
ನ್ನೆಮ್ಮೊಳ್ ಪೇೞ್ದಿಳ್ ವಿಚಾರಮದು ದಿಟಮಲ್ತೇ ॥ ೪೮

ನೀನರಸಾಗಳ್ ನಿನಗಾಂ ।
ಮಾನಸನಾಗಿರ್ದು ಪೇೞ್ದುದಂ ಗೆಯ್ವೆಂ ಸ ॥
ನ್ಮಾನನಿಧಿ ಕಂತುಕಾವತಿ ।
ಮಾನಿನಿ ನಿನಗಾದಪಳ್ ಗಡಂ ದಿಟಮಲ್ತೇ ॥ ೪೯

ಎಂದೆನ್ನಂ ಭೀಮಧನ್ವಂ ಜಡಿದು
ನಿರ್ಬಂಧಿಸಿ ಸಂಕಲೆಯಂ ।
ಸರ್ಬಾಂಗದೊಳಿಕ್ಕಿ ಕಡಲ ನಡುನೀರೊಳ್ ತ ॥
ನ್ನುರ್ಬಿಱಿಯೆ ಬಿಸುಟು ಬಾಯೆಂ ।
ದೊರ್ಬನ ಕೆಯ್ಗಿತ್ತನೆನ್ನನಾನೃಪತನಯಂ ॥ ೫೦

ಅಂತು ಕುಡಲವನೆನ್ನಂ ಕೊಂಡು ಪೋಗಿ
ಲಲಿತಪ್ರೋದ್ವೃತ್ತರಂಗೋಚ್ಛಳಿತಕಮಠಪಾಠೀನನೀರೇಭಕೋಳಾ ।
ಹಳಚಂಚಚೀಕರೋದ್ವೃತ್ತಕುಸುಮಿತನವವೇಳಾವನಪ್ರಾಂತದಿಂ ಕ ॥

ತ್ತಲೆಯೊಂದುಂ ಪಿಂಗದೆಂಬಂತೆಸೆವ ಕಡಲ ತನ್ಮಧ್ಯದೊಳ್ ನಿರ್ದಯಂ ಸಂ।
ಕಲೆಯಿಕ್ಕಿರ್ದೆನ್ನನನ್ಯಾಯದಿನುೞಿ ಬಿಸುಟಂ ನೀರ್ಗಳ್ಬಾರ್ಗವಾಗಲ್ ॥

ಅಂತವನೆನ್ನಂ ಸಮುದ್ರಮಧ್ಯದೊಳ್ ಬಿಸುಟು ಪೋಗಲ್

ವಡಬಾಜ್ವಾಲೆಯೊಳುಣ್ಬೊಡಂ ವಿಷಧರಂ ಬಾಯ್ವಿಟ್ಟು ಮೇಲ್ವಾಯ್ದೊಡಂ
ಕಡಲೊಳ್ ಬಿಟ್ಟೊಡಮದ್ರಿಶೃಂಗದಿನಿಳಾಭಾಗಕ್ಕೆ ಪಾಯ್ದು ಪೋರ್ಡಂ॥
ಸಿಡಿಲಾರ್ಪಿಂ ಮಿಗೆ ಪಾಯ್ದೊಡಂ ನಿಜಲಲಾಟಪ್ರಾಪ್ತಸಿದ್ಧಾಕ್ಷರಂ।
ತೊಡೆವನ್ನಂ ಭಯಮೇಕೆ ದೇಹಿಗೆ ಬೞಿಕ್ಕಾರ್ ಬಾಧಿಪರ್ ಬಾಧೆಯಂ॥ ೫೩

ಎಂದೆನ್ನೊಳ್ ಪರಿಭಾವಿಸುತಿರ್ಪನ್ನೆಗಂ,

ಕಟ್ಟಿದ ಚಾರಿಗಳ್ ಗಗನಮಂ ಮಿಗೆ ಚುಂಬಿಪ ಕೂಪಕಂಭಮೊ।
ಟ್ಟಟ್ಟೆ ಸುವರ್ಣರತ್ನತತಿ ಗಾಳಿಯ ಕೋಟ್ಗನುಕೂಲಮಪ್ಪಿನಂ॥
ಬಿಟ್ಟ ಪಟಂ ಪ್ರಮಾದಫಲಕಸ್ಥಿತನಾದ ವಣಿಗ್ವರಂ ಕರಂ।
ದಿಟ್ಟಗೆ ಚೆಲ್ವನಾಗಿ ಕಡಲೊಳ್ ಬರುತಿರ್ದುದು ಯಾನಪಾತ್ರಕಂ॥ ೫೪

ಅಂತೊಂದು ಬಹಿತ್ರಂ ಬರಲದಱೊಳಿರ್ದ ವಣಿಕ್ಪತಿ

ಮುಡುಪಿಂದೀಸಾಡುತ್ತುಂ।
ಕಡಲೊಳಗಿರ್ದೆನ್ನನಾವಣಿಕ್ಪತಿಯೊಲವಿಂ॥
ಕಡುಪಿಂ ಕಂಡತಿವಯೆಯಿಂ।
ಸಿಡುನೇಣಂ ನೀಡಿ ತೆಗೆದುಕೊಂಡನಿಳೇಶಾ॥ ೫೫

ಅಂತೆನ್ನಂ ತೆಗೆದು ಮದ್ವೃತ್ತಾಂತಮನಾವಣಿಕ್ಪತಿ ಕೇಳುತ್ತಮಿರ್ಪಾಗಳ್

ತಂಬಟಮಂ ಸೂಚ್ಯೈಸು।
ತ್ತಂಬುಧಿಯೊಳ್ ಕಳ್ಳ ಪಡಗಿನವರ್ಗಳ್* ರತ್ನಂ॥
ತುಂಬಿರ್ದ ತದ್ಬಹಿತ್ರಮ।
ನಂಬುಗಳಿಂದೆಚ್ಚು ಮುಂದುಗಿಡಿಸಿದರಾಗಳ್॥ ೫೬

ಅಂತೊಂದು ಕಳ್ಳ ಪಡಗು ಬಂದು ಮುಂದುಗಿಡಿಸಲದಂ ಕಂಡು ತದ್ಬಹಿತ್ರದ ವಣಿಕ್ಪತಿಯೊಳಾನಿಂತೆಂದೆಂ:—

ಮುಳಿದಾಂತ ಪಡಗಿನವರ್ಗಳ ।
ಬಲಮುಂ ತತ್‌ಕ್ಷಣದೊಳಾಂತು ಕಿಡಿಸಿದಪೆಂ ಮ ॥
ದ್ಬಲದಿಂದೆನಗಿಕ್ಕಿದ ಸಂ ।
ಕಲೆಯುಂ ಬಿಡಿಮೆಂದೊಡಾತನಾಗಳೆ ಬಿಟ್ಟಂ ॥ ೫೭

ಅಂತೆನ್ನಂ ಬಿಡಲೊಡಂ,

ಕಡುಕಯ್ದ್ವಾನಾರ್ಪಿನಿಂ ಬಿಲ್ವಿಡಿದು ನಿಶಿತಬಾಣೋತ್ಕರಾಸಾರದಿಂ ಮಾ ।
ರ್ಪಡಗಂ ಪೂಣ್ದಿಯ್ದಿ ಬೇಗಂ ತುಡುಕಿ ಪಿಡಿದು ಕಳ್ಳರ್ಕಳಂ ನೀಳ್ದ ನೇಣಿಂ ॥
ಪಿಡಗೆಯ್ವಂ ಕಟ್ಟಿಯಲ್ಲಿರ್ದವರೊಡೆಯನೆನಿಪ್ಪಾತನಂ ನೋಡಲಿನ್ನೇಂ ।
ಪಡಿಮಾತಂ ಪೇಳ್ವೆನೆನ್ನಾ ನಿಜರಿಪುವೆನಿಪಾಭೀಮಧನ್ವಾಂಕನಾದಂ ॥ ೫೮

ಅಂತಾಂ ಪಿಡಿದ ಪಡಗಿನೊಡೆಯುಂ ಭೀಮಧನ್ವನಾಗಿರೆ

ಮಾಡಿತ್ತಂ ಪರಲೋಕದೊ ।
ಳಾಡುತ್ತನುಭವಿಪರೆಂಬರದು ಪುಸಿಯಿಹದೊಳ್ ॥
ನೋಡಲನುಭವಿಪ್ಪದದು ದಿಟ ।
ಮಾಡಂಬರಮೇಕದರ್ಕೆ ರಾಜಕುಮಾರಾ ॥ ೫೯

ಎಂದಾತನಂ ಮುಟ್ಟಿ ಮೂದಲಿಸಿಯುನಂತರಂ,

ಮುನ್ನೆನಗಿಕ್ಕಿದ ಸಂಕಲೆ ।
ಯನ್ನೀಳ್ದ ಶರೀರದಲ್ಲಿ ತುಡಿಸಿ ಕುಮಾರಂ ॥
ಗಿನ್ನೇಗೆಯ್ವೆನೆನುತ್ತುಂ ।
ಬಿನ್ನವಿಸಲ್ ಭೀಮಧನ್ವನೆರ್ದೆಗೆಟ್ಟಿರ್ದಂ ॥ ೬೦

ಅಂತು ಕಳ್ಳರಂ ಗೆಲ್ದು ಆತನಂ ಸಂಕಲೆಯೊಳಿಕ್ಕಿದುದರ್ಕೆ ಮೆಚ್ಚಿ ವಣಿಗ್ವರನೆನ್ನಂ ಮನ್ನಿಸಿ ಬಱಿಯುಂ,

ಸ್ವಾದೂದಕದಶನಂ ಚೆ ।
ಲ್ವಾದಾತಾಂಬೂಲಮೆಯ್ದೆ ಸವಿಯುಲ್ ತತ್ಸಂ ॥
ಪಾದನೆಗೆ ವಣಿಗ್ವರನ ।
ತ್ಯಾದರದಿಂ ಪಟಮನೆತ್ತಿ ತಡಿಗೇಱ್ತಂದಂ ॥ ೬೧

ಅಂತು ತಡಿಗೆ ಬರ್ಪನನಾನುಂ ತಡಿಗಿಱಿದೊಂದು ಕಡೆಯುಂ ನೋೞ್ಪಿನ್ನೆಗಂ,

ಭಾರತದಂತೆ ಭೀಮನಕುಲಾರ್ಜುನವಿಕ್ರಮದಿಂ ನೆಗರ್ದಿದೈ ।
ತ್ಯಾರಿಯ ವಕ್ಷದಂತೆ ಭೃಗುಸಂಪದದಿಂ ಹರನಂತೆ ಸದ್ಗುಹಾ ॥
ಕಾರವಿಳಾಸದಿಂ ರಘುಜನಂತೆ ವಿಚಿತ್ರಧರಿತ್ರಿಸಂಭವ್ರೋ ।
ದಾರದಿನಿರ್ದದೊಂದು ಕುಧರಂ ಗಗನಸ್ಥಳವಂ ತುಡುಂಕುತುಂ ॥ ೪೧

ಅದಂ ಕಂಡಲ್ಲಿಗೆಯ್ದಿಲದಱ ನಿತಂಬದಲ್ಲಿ

ಕುಮುದಾಬ್ಜಸ್ಥಿತಿ ರಾಜಹಂಸಗತಿಯಿಂ ಚೆಲ್ವಪ್ಪಿನಂ ತಣ್ಣನ ।
ಪ್ಪವೃತಂ ಸಾರ್ದನಿಮೇಷಸಂತತಿಗೆ ಪೆರ್ಚಂ ಮಾಳ್ಪಿನಂ ಕೂಲವಿ ॥
ದ್ರುಮವೊಳ್ಪಿಂದನುರಾಗಮಂ ಪಥಿಕರೊಳ್ ಕೂರ್ತೀರ್ವಿನಂ ಚಿತ್ತವಿ ।
ಭ್ರಮಮಂ ಪುಟ್ಟಿಸುತಿರ್ದದದ್ರಿತಟದೊಳ್ ತಾನಾಗಳಂ ಪ್ರಾಗೊಳಂ ॥

ಅಂತಿರ್ದ ಪೂಗೊಳನಂ ಕಂಡಲ್ಲಿ ನೀರ್ಗುಡಿಯಲೆಂದು ಪೋಪಲ್ಲಿ

ಕಿಡಿಯಂ ಸೂಸುವ ಕಣ್ ಕರಾಳವದನಂ ಕೂರ್ದಾಡೆ ಕೆಮ್ಮಿಾಸೆ ನಿ ।
ಟ್ಟೋಡಲಾವಾರ್ನಳದೇಹದೀಪ್ತಿಯುಡರ್ದಿದೂರ್ರುದ್ವಾಯಂ ನೀಳ್ದು ಕೆಂ ॥
ಜೆಡೆ ಕಾಳಾಯಸದಂಡಹಸ್ತಮೆನಸುಂ ಚೆಲ್ವಾಗಲೊರ್ಬಂ ಕರಂ ।
ದಡಿಗಂ ರಕ್ಕಸನೆನ್ನಿದಿರ್ಗೆ ಮುಳಿಸಿಂದೇಟ್ತಂದನಾಶ್ಯೆಲದಿಂ ॥ ೪೨

ಅಂತು ಬಂದೊರ್ಬ ಬ್ರಹ್ಮರಾಕ್ಷಸನೆನ್ನ ಪ್ರಶ್ನೆಗುತ್ತರಮಂ ಕೊಟ್ಟು
ನೀರ್ಗುಡಿಯೆಂದಿಂತೆಂದಂ:—

(ಪ್ರಶ್ನೆಗಳ್)

ಕ್ರೂರಮದಾವುದು ಗೃಹವಿ ।
ಸ್ತಾರಂ ತಾನಾವುದೆಸೆವ ಕಾಮದ ನೆಲೆಯೇಂ ॥
ಬಾರಿಯ ದುಃಖದ ಸಾಧನ ।
ಮಾರಯ್ಯಲದಾವುದೆನಗೆ ಪೇೞನುನಯದಿಂ ॥ ೪೩

ಎಂದೊಡಾನಿಂತೆಂದೆಂ:—

ಸ್ತ್ರ ೀಹೃದಯಂ ಕ್ರೂರಂ ನಿಜ ।
ಗೇಹಸುಖಂ ಸತಿಯರೊಳ್ಪು ಕಾಮಂ ಚಿತ್ತ ॥
ಸ್ನೇಹದ ಸಂಕಲ್ಪಂ ಮತಿ ।
ಯೂಹೆ ಮಹತ್ಕಾರ್ಯಸಾಧನಂ ತಾನಲ್ತೇ ॥ ೪೪

ಎಂದು ಮತ್ತಂ,

ಧೂಮಿನಿ ನೆಗಟ್ಟೆ ರಂಜಿಪ ।
ಗೋಮಿನಿ ಪೆಂಪಿಂ ನಿತಂಬವತಿ ನಿಂಬವತೀ ॥
ನಾಮಂ ಮೆಱೆವಬಲೆಯರೊಳ್ ।
ಧೀಮಾರ್ತ್ತ್ಯತ್ಸ್ವೈಯರ್ಥಮೆಸೆದಪುವಸುರಾ॥ ೬೮

ಅದೆಂತೆಂದು ರಾಕ್ಷಸಂ ಕೇಳಲಾನಿಂತೆಂದೆಂ:—

ಮೇದಿನಿಯೊಳ್ ಪ್ರಸಿದ್ಧಿವಡೆದಿರ್ಪ ತ್ರಿಗರ್ತದ ದೇಶದೊಳ್ ನಿಜಾ ।
ಹ್ಲಾದದಿನಾವಗಂ ಧನಿಕಧನ್ಯಕಧಾನ್ಯಕರೆಂಬ ಮೂವರುಂ ॥
ಸೋದರರಾದ ವೈಶ್ಯಪತಿಗಳ್ ಮೆಱೆಯುತ್ತಿರೆ ತದ್ಧರಿತ್ರಿಗಂ ।
ದಾದುದು ಘೋರಮಪ್ಪ ಬಱನೊರ್ಬರನೊರ್ಬರಡುತುರ್ ತಿಂಬವ್ರೋಲ್ ॥

ಕ್ಷಾಮಮುಡುತುರ್ ಧಾನ್ಯತೃಣಪತ್ರಜಲಂ ತವಿಲಾಗಲೆಲ್ಲರುಂ ।
ಗೋಮಹಿಷೀಪ್ರತಾನದಡಗಂ ತವೆ ತಿಂದು ನಿರಂತರಂ ಮನು ॥
ಷ್ಯಾಮಿಷಮಂ ತಿನಲೊಡ್ಡಗಲನ್ಯಜನಂ ನೆಱೆ ತೀರ್ದುರ್ ಪೆಂಡಿರಂ ।
ಪ್ರೇಮದ ಪುತ್ರರಂ ಸೊಸೆಯರಂ ಕ್ರಮದಿಂ ತಿನುತಿರ್ದರಾವಗಂ ॥ ೬೯

ಅಂತು ಬಱನಱೆಯುಟ್ಟಲೊರ್ಬರನೊರ್ಬರ್ ತಿನುತ್ತಿರೆ,

ಧನಿಕಂ ಧನ್ಯಂ ಧಾನ್ಯಕ ।
ನನುಪೂರ್ವಕ್ರಮದಿನೊರ್ಬರೊರ್ಬರ ವನಿತಾ ॥
ಜನಮಂ ತಿನಲನುಗೆಯ್ದರ್ ।
ಮನಮೊಳಸಲ್ ಜಠರವಹ್ನಿಯೇಂ ಕೇವಲಮೋ ॥ ೭೦

ಅಂತು ಧನಿಕಧನ್ಯಕರ್ ತಮ್ಮಿರ್ಬರ ಕಾಂತೆಯರನೆಲ್ಲರ್ ಕೂಡಿ ತಿಂದನಂತರಂ ಧಾನ್ಯಕನ ಕಾಂತೆಯುಪ್ಪ ಧೂಮಿನಿಯುಂ ನಾಳೆ ತಿನಲೆಂದುದ್ಯೋಗಿಸುವುದಂ ಧಾನ್ಯಕನಱಿದು,

ಇವರ್ಗಳ ಸಂಗಮಂ ತೊಱೆದು ಕಾನನದೊಳ್ ನವಕಂದಮೂಲಪ ।
ಲ್ಲವಚಯಭೈಕ್ಷದಿಂ ಬಱನನೊಯ್ಯನೆ ನೀಗುವೆನೆಂದು ಧಾನ್ಯಕಂ ॥
ಯುವತಿಯನಾಪ್ಪಿನಿಂ ಪೆಗಲನೇಱಿಸಿ ಕೊಂಡಿರುಳೆಟ್ದಿರಣ್ಯಮಾ ।
ರ್ಗ್ಗವನೊಲವಿಂದೆ ಪತ್ತಿ ಬರುತಿರ್ದನವಂ ಮಿಗೆ ರಾಕ್ಷಸೇಶ್ವರಾ ॥ ೭೧

ಅಂತರಣ್ಯಮಾರ್ಗಕ್ಕೆ ಪೋಪಾಗಳ್
ಕರಚರಣರಹಿತನೊರ್ವಂ ।
ಪೊರಬುತ್ತಿರಲೂರ ಪೊಱಗೆ ಮೋಟನನೆನ್ನಂ॥
ಕರುಣಿಸಿ ಪೇರಿದಪರಾರೆಂ ।
ದು ರೋದನಂಗೆಯ್ಯುತುಂ ಕರಂ ಸುಯ್ಯುತ್ತುಂ॥ ೭೦
ಅಂತಿರ್ದ ಮೋಟನಂ ಧಾನ್ಯಕಂ ಕಂಡು,
ಕರುಣಿಸಿಯುವನಂ ಧಾನ್ಯಕ ।
ನುರುಮುದದಿಂದೊಂದು ಪೆಗಲನೇಱಿಸಿ ಕೊಂಡಾ ॥
ದರದಿಂ ಮೆಲ್ಲನೆ ನಡೆಗೊಂ ।
ಡರಣ್ಯಮಂ ಪೊಕ್ಕದೊಂದು ತಾಣದೊಳಿರ್ದಂ ॥ ೭೩
ಚೂತಕುಜಾತಮಿಪ್ಪೆಯರನೇಱಲು ಬಿಕ್ಕೆ ಬೆಳಲ್ ತಳಿರ್ತ ನಾ ।
ನಾತರು ತೀವಿದೊಂದು ತರುಮಧ್ಯದೊಳೊಪ್ಪುವಗಾಧಕೂಪದಿಂ ॥
ನೂತನಶೋಭೆಯಂ ತಳೆದ ತಾಣಮದೊಪ್ಪಿರಲಿರ್ದನಲ್ಲಿ ಸಾ ।
ಖ್ಯಾತಿಶಯಂ ಕರಂ ನೆಲಸೆ ಧೂಮಿನಿಸಂಯುತನೊಲ್ದು ಧಾನ್ಯಕಂ ॥ ೭೪
ಅಂತಿರ್ದು
ಫಲಕಂದಮೂಲನಾನಾ ।
ಪಲಂಗಳಾನಾರ್ಪಿನಿಂದೆ ತಂದು ನಿಶಾಂತಂ॥
ಲಲನೆಯುನಾಮೋಟನನ ।
ಗ್ಗಳದಿಂ ಪೊರೆಯುತ್ತೆ ಧಾನ್ಯಕಂ ಸುಖಮಿರ್ದಂ ॥ ೭೫
ಅಂತಿರ್ದೊಂದು ದಿವಸಂ
ಪಲವು ದಿನಕ್ಕೆ ತಕ್ಕಶನಮಂ ಕಡುಪಿಂ ಗಳಿಸಲ್ಕೆ ವೇೞ್ಕುಮೆಂ ।
ದಲಸದೆ ಧಾನ್ಯಕಂ ಪಿರಿದು ದೂರದರಣ್ಯಕೆ ಪೋಗಲಿತ್ತಲ ॥
ಗ್ಗಲಿಸಿದನಂಗತಾಪದೊಗಮಿಂ ನಿಲಲಾಱದೆ ಮೋಟನೊಳ್ ಮನಂ ।
ಚಲಿಸದ ಕೂಟಮಂ ಬಯಸಿದಳ್ ಮಿಗೆ ಧೂಮಿನಿ ಸೀಮೆಗೆಟ್ಟವಳ್ ॥ ೭೬
ಏಕಾಕಿನಿ ಪತಿವಿರಹಿಣಿ ।
ಯೇಕಾಂತಸ್ಥಾನಮೊರ್ವ ಪುರುಷಸಮೀಪಂ ॥

ಪ್ರಾಕೃತಸತಿ ತಾನಾಗಿರ ।
ಲಾಕೆಯು ನಿಜಬುದ್ಧಿ ಚಲಿಸದಿರ್ಪುದೆ ಸತತಂ ॥ ೭೭

ಅದುಕಾರಣಂ

ಮೋಟನೊಡಂಬಡದಿರೆಯುಂ ।
ಬೇಟದ ಕೋಟಲೆಯೊಳವನ ಮೋಲ್ವಾಯ್ದು ಕರಂ ॥
ಕೂಟಮನೊಡರ್ಚಿದಳ್ ಸ್ತ್ರೀ ।
ನಾಟಕಮಂ ನಂಬುವವನೆ ಗಾವಿಲನಲ್ತೇ ॥ ೭೮

ಅಂತಾಧೂಮಿನಿ ಕಾಮೋದ್ರೇಕದಿಂ ಮೋಟನೊಳ್ ಕೂಟಮನೆಸಗುತ್ತಿರೆ ಮಱುದೆವಸಂ,

ವನತೃಣಧಾನ್ಯಮಂ ಸುರಸಪಕ್ವಫಲಂಗಳನಿಂಪ್ರವೆತ್ತ ಮಾಂ ।
ಸವನತಿಸೀಪೆಯುಪ್ಪ ಮಧುಮಂ ಪಲವುಂ ದಿವಸಕ್ಕೆ ತಕ್ಕವ ॥
ಸ್ತವನನುರಾಗದಿಂ ಗಳಿಸಿಕೊಂಡು ನಿಜಾಂಗನೆಯಿರ್ದ ತಾಣಮಂ ।
ತವಕದಿನೆಯ್ದಿದಂ ಪದೆದು ಧಾನ್ಯಕನುಗ್ರನಿದಾಘಕಾಲದೊಳ್ ॥ ೭೯

ಅಂತು ಧಾನ್ಯಕಂ ಬಂದು ಪೊತ್ತ ಪೊಱೆಯಂ ಪೊಱಗಿರಿಸಿ,

ಮಾರ್ಗಶ್ರಮದಿಂ ಬೆಮರ್*ಗಳ್ ।
ಭೋರ್ಗರೆದವಯವದೊಳೆಯ್ದೆ ಸುರಿಯುತ್ತಿರೆ ಸ ॥
ನ್ಮಾರ್ಗನಿಧಿ ವೈಶ್ಯಪುತ್ರಂ ।
ನೀರ್ಗುಡಿಯಲ್ ಬೇಡಿದಂ ನಿಜಪ್ರಿಯಸತಿಯಂ ॥ ೮೦

ಅಂತು ನೀರ್ಗುಡಿಯಲ್ ಬೇಡಲೊಡಂ

ನರಳುತ್ತುಂ ಸುಯ್ಯುತ್ತುಂ ।
ಶರೀರ ವಶಮಲ್ತೆನುತ್ತೆ ಧೂಮಿನಿ ಪತಿಗ ॥
ಚ್ಚರಿಯೆನೆ ಸೇದೆಯ ನೇಣಂ ।
ಕರಗಮನೊಲ್ದಿತ್ತು ಸೇದಿ ನೀರ್ಗುಡಿಯೆಂದಳ್ ॥ ೮೧

ಎಂದೊಡಾತಂ ನೀರನೆಯ್ದುತಿರ್ಪಾಗಳ್,

ಸಲೆ ಸಂಧ್ಯಾಂಗನೆ ಪಶ್ಚಿಮ ।
ಜಲನಿಧಿಯೊಳ್ ಜಲಜಮಿತ್ರನಂ ನೂಂಕುವವೋಲ್ ॥

ಮುಳಿಸಿಂ ಧೂಮಿನಿ ಕೂಪ ।
ಸ್ಥಲದೊಳ್ ಧಾನ್ಯಕನನಳುರ್ದು ನೂಂಕಿದಳಾಗಳ್ ॥ ೮೨

ತೊಲಗದ ಮೃತ್ಯುದೇವತೆಯವೊಲ್ ಸತಿ ಪಿಂತನೆ ಬಂದು ಗಂಡನಂ ।
ತಲೆಕೆಳಗಾಗಿ ಗುಪ್ಪೆಸೆವ ಬಾವಿಯೊಳೀವದೆ ನೂಂಕಿ ಮೋಟನೊಳ್ ॥
ಚಲಿಸದ ಸಂಗಮಂ ತಳೆದು ತದ್ವನದೊಳ್ ಸಲೆ ನಾಲ್ಕೆರೞ್ದಿನಂ ।
ನೆಲಸಿ ಬೞಿಕ್ಕವಳ್ ಪದೆದು ಮೋಟನನಾಂತು ತಳರ್ದಳೞ್ತಯಿಂ ॥ ೮೩

ತಾಟಕೆಯಂತೆ ವರ್ತಿಸುವ ಧೂಮಿನಿ ಬಾವಿಗೆ ನೂಂಕಿಯಾಳ್ದನಂ ।
ಮೋಟನನೆತ್ತಿಕೊಂಡು ಮನವೊಲ್ದು ಪತಿವ್ರತೆಯೆಂಬುದೊಂದು ಬ ॥
ಲ್ನಾಟಕಮಂ ಕರಂ ನಟಿಸಿ ನಾಲ್ದೆಸೆಯೊಳ್ ತೊೞಲುತ್ತದೊಂದು ಭ ।
ದ್ರಾಟವಿಯೆಂಬ ಪತ್ತನಮನೆಯ್ದಿದಳಾಕೆ ಮನೋನುರಾಗದಿಂ ॥ ೮೪

ಅಂತು ಭದ್ರಾಟವಿಯೆಂಬ ಪತ್ತನಕ್ಕೆ ಬಂದು ಅಲ್ಲಿ ನೀತಿವಿಳಾಸನೆಂಬರಸಿನಿಂ ಮನ್ನಿಸಿಕೊಳುತ್ತಿರೆ,

ಮಡದಿಯ ಭರ್ತೃಭಕ್ತಿ ಪೊಸತಲ್ತೆ ಕರಂ ಪತಿ ಮೋಟನಾದೊಡಂ ।
ಬಿಡದನುರಾಗದಿಂ ಪೆಗಲನೇಱಿಸಿಕೊಂಡು ತೊೞಲ್ದು ನಿಂದೆಯೊಳ್ ॥
ತೊಡರದೆ ಸರ್ವರುಂ ತನಗೆ ಕೆಯ್ಮುಗಿದಿರ್ಪತಿಭಾಗ್ಯದೊಳ್ಪಮಂ ।
ಪಡೆದವಳಾವಳೀಕೆಯವೊಲೆಂದೊಸೆದಿರ್ಪುದು ಪೌರನಾರಿಯರ್ ॥ ೮೫

ಅಂತವಳ್ ಭದ್ರಾಟವಿಯೊಳಿರಲಿತ್ತಲ್

ಕೆಲವರ್ ಪಥಿಕರ್ ಬರುತ ।
ಗ್ಗಲಿಸಿದ ತೃಷೆಯಿಂ ಬಿಗುರ್ತು ತತ್ಕಾನನದೊಳ್ ॥
ಜಲಮನಱಸುತ್ತೆ ಬಂದಾ ।
ಗಳ್ ಕಂಡರ್ ವೈಶ್ಯನಿರ್ದ ಕೂಪಸ್ಥಲಮಂ ॥ ೮೬

ಅಂತಾಪಥಿಕರಾಬಾವಿಯಂ ನೋೞ್ಪನಂ,

ಸ್ತ್ರೀಗೆ ಕಡುಕೂರ್ತ ಮನುಜರ ।
ಧೋಗತಿಯೊಳ್ ಬೀೞ್ವರೆಂಬುದಂ ಸಲೆ ತೋರ್ಪಂ ॥
ತಾಗಳ್ ಧಾನ್ಯಕನಿರ್ದಂ ।
ನಾಗಾಲಯದಂತಿರೆಸೆವ ಕೂಪಾಂತರದೊಳ್ ॥ ೮೭

ಅಂತಿರ್ದನಂ ಕಂಡು

ತೋಳ ಕಡುಪಿಂದದೊರ್ಬ ದ ।
ಯಾಳು ಮಹಾಕೂಪದಿಂದೆ ಧಾನ್ಯಕನಂ ನೇ ॥
ಣ್ಗೊಲಿಂ ತೆಗೆಯಲ್ ಬಂದಂ ।
ಗಾಳದ ನೇಣ್ ತೊಡರ್ದ* ಮೀನವೋಲ್ ತಡಿಗಾಗಳ್ ॥ ೮೮

ಅಂತು ತೆಗೆಯೆ ಧಾನ್ಯಕಂ ಪುನರ್ಜಾತನಾಗಿ,

ಕೃಪೆಯಿಂದಂ ಪ್ರಾಣಮನೊ ।
ಲ್ದುಪಕರಿಸಿದವಂಗೆ ಮಾಳ್ಪನಾವಂ ಕೇಳ್ ಪ್ರ ॥
ತ್ಯುಪಕಾರಮನೆಂದು ನಿಷಾ ।
ಧಿಪನನನಂ ಪಲವು ತೆಱದೊಳೊಲವಿಂ ಪೊಗಟ್ದಂ* ॥ ೮೯

ಅಂತು ಪೊಗಟ್ದು ಸಂತೋಷಮನೆಯ್ದಿಯನಂತರಂ,

ಅವಿರಳದೇಶಾಂತರಮಾ ।
ರ್ಗವಿನೋದದಿನೆಯ್ದಿ ಧಾನ್ಯಕಂ ಬರೆವರೆ ಸಂ ॥
ಭವಿಸಿದ ಮುದದಿಂ ಭದ್ರಾ ।
ಟವಿಗೆಟ್ದಂದಂ ಯದೃಚ್ಛೆಯಿಂ ಕೇಳಸುರಾ ॥ ೯೦

ಅಂತು ಭದ್ರಾಟವಿಗೆ ಬಂದು

ಕೇರಿಯ ಚೆಲ್ವನಂಗಡಿಯ ಸೊಂಪನಿಳಾಧಿಪಗೇಹರಮ್ಯಮಂ ।
ವಾರವಿಳಾಸಿನೀಗೃಹವಿಳಾಸಮನೊಪ್ಪುವ ಸೂಳೆಗೇರಿಯಾ ॥
ಕಾರಮನಾನೆಸಾಲೆಗಳ ಸಂಭ್ರಮಮಂ ಪುರಮಧ್ಯದೇವತಾ ।
ಗಾರವಿಶೇಷಮಂ ಪದೆದು ಧಾನ್ಯಕನೀಕ್ಷಿಸುತಿರ್ದನಾವಗಂ ॥ ೯೧

ಅಂತೆಲ್ಲೆಡೆಯೊಳ್ ತೊಟಲುತ್ತಿರ್ದ ಧಾನ್ಯಕನಂ ಕೈತವಪತಿವ್ರತೆಯಪ್ಪ ಧೂಮಿನಿ ಕಂಡು

ನೀತಿವಿಳಾಸನೃಪಾಲಂ ।
ಗೋತಱಿವುವೆನಿವನನೀಕ್ಷಣಂ ಕೊಲಿಸುವೆನೆಂ ॥
ದಾತುರದೊಳೆಯ್ದಿದಳ್ ದು ।
ರ್ನೀತಿಯೊಳರಮನೆಗೆ ಧೂರ್ತೆ ಧೂಮಿನಿಯಾಗಳ್ ॥ ೯೨

ಅಂತರಮನೆಗೆ ಪೋಗಿ ಬಾಗಿಲೊಳಿರ್ದು ಪತಿವ್ರತೆ ಬಂದಿರ್ದಳೆಂದು ನೀತಿವಿಳಾಸಂಗಱಿಪೆಂದು ದೌವಾರಿಕರ್ಗೆ ಪೇೞಲವರ್ ಪೋಗಿ

ನೃಪತಿ ಪತಿವ್ರತೆ ಬಂದಿ ।
ರ್ದಪಳರಮನೆಯೆಸೆವ ಬಾಗಿಲೊಳ್ ಸಮಯಂಬಾ ॥
ರ್ದುಪಚರಿಸಿ ಕರೆಯಲೋ ಕಾ ।
ಣ್ಬ ಪೊೞ್ತಿದಲ್ಲೆಂದು ಕಳಿಪಲೋ ಬೆಸಸೊಲವಿಂ ॥ ೯೩

ಎಂಬುದುಮರಸಂ ಪರಮಪತಿಭಕ್ತೆಯಂ ಕರೆಯೆಂದು ಕರೆಯಿಸಲವಳ್ ಬಂದರಮನೆಯಂ ಪೊಕ್ಕರಸನಂ ಕಂಡಿಂತೆಂದಳ್:—

ನೀತಿವಿಳಾಸ ಕೇಳ್ ಪಗಲೊಳಾಂತ ಮದೀಶನ ಹಸ್ತಪಾದಮಂ ।
ಘಾತಕನಾರ್ಪಿನಿಂ ಕಡಿದ ಪಾತಕನಿಲ್ಲಿಗೆ ಬಂದನಾತನಂ ॥
ಭೂತಪಿಶಾಚಸಂತತಿಗೆ ದಿಗ್ಬಲಿಗೊಟ್ಟು ಕರಂ ಪತಿವ್ರತಾ ।
ಪ್ರೀತಿಯನೀವುದೆಂದು ನೃಪನೊಳ್ ಮಿಗೆ ಧೂಮಿನಿ ಪೇೞ್ದಳಾಕ್ಷಣಂ ॥ ೯೪

ಅಂತು ಪೇೞ್ದು ಮತ್ತಂ

ಅತಿದುಷ್ಟಶಾಸ್ತಿ ಶಿಷ್ಟ ।
ಪ್ರತಿಪಾಲನೆಯಿಲ್ಲದರಸಿನರಸುತನಂ ಹಾ ॥
ಸ್ಯತೆವಡೆದು ಹಗರಣಿಗರರ ।
ಘುತನಂ ತನಗಕ್ಕುಮಲ್ತೆ ಕಜ್ಜದ ಕಡೆಯೊಳ್ ॥ ೯೫

ಮಱೆ ಕೊಳ್ಳದು ಕಾಲದೊಳೆಳೆ ।
ಫಲವಾಗದು ಧಾನ್ಯವಸ್ತು ವಾಹನನಿಚಯಂ ॥
ನೆಲಸದು ಪತಿವ್ರತಾವಾ ।
ಕ್ಯಲಂಘನಂಗೆಯ್ಯಲರಸ ಕೇಳಿದು ಸತ್ಯಂ ॥ ೯೬

ಎಂದು ದೃಢಮಪ್ಪಂತು ಪೇೞ್ದವನಂ ಕೊಲ್ಲಿಸಿದೊಡಲ್ಲದೆ ಇಲ್ಲಿಂ ಪೋಗೆನೆಂದಿರ್ಪುದುಂ,

ಪುರಮಿದು ಚೋದ್ಯಮೆನಲ್ಕಾ ।
ದುರಾತ್ಮನಂ ಕೇರಿಕೇರಿಯೊಳ್ ಮೆಱೆಸಿ ದಿಶಾಂ ॥
ತರದೊಳ್ ಕಡಿದು ಬಿಸುಟ್ಟತಿ ।
ನಿರವಯಮಲೆಯ್ದಿಸುವುದೆಂದು ಬೆಸಸಿದನರಸಂ ॥ ೯೭

ಅಂತು ಬೆಸಸಲೊಡಂ ತಳವಱರ್ ಪತಿವ್ರತೆಯ ಗಂಡನ ಕೆಯ್ಕಾಲ್ಗಳಂ ಕಡಿದ ದುರಾತ್ಮಂ ಸಿಲ್ಕಿದನೆಂದಾತನಂ ಪಿಡಿದು

ಪೆಡಗೆಯ್ಯಂ ಪಿಡಿದಿೞ್ದು ಕಟ್ಟಿ ತಲೆಯೊಳ್ ಪೂವಮಾಲೆಯುಂ ಸುತ್ತಿ ಬೊ।
ಬ್ಬಿಡುತುಂ ಭಂಡಿಯ ಮೇಲೆ ಕುಳ್ಳಿರಿಸಿ ನಾನಾವಾದ್ಯದಿಂ ಪೆರ್ಚಿನಿಂ ॥
ಗಡಿಯೊಳ್ ಕೇರಿಯೊಳಾತನಂ ಮೆಱಸಿ ಖಂಡಂಗೊಯ್ವೆನೆಂಬಾಗಳಾಂ ।
ಕಡಿದಂಗಂಗಳ ಮೋಟನಂ ಕರಸಿಮೆಂದಂ ಧಾನ್ಯಕಂ ಧೈರ್ಯದಿಂ ॥ ೯೮

ಎಂಬುದುಮಾತಳವಱರಿವನಂ ದಿಗ್ಬಲಿಗುಡುವುದಂ ನೋಡಲ್ವೇೞ್ಕೆಂದು ಮೋಟನಂ ಧಾನ್ಯಕನೆಡೆಗೆ ಕೊಂಡು ಬಪ್ಪುದುಂ

ಕಾಣಲೊಡನಶ್ರುವಿಂ ಮುಂ ।
ಗಾಣದೆ ಗಡಗಡನೆ ನಡುಗಿ ಮೋಟಂ ತನ್ನಾ ॥
ಪ್ರಾಣಂ ಬಂದಂತಾಗಳ್ ।
ಮಾಣದೆ ಧಾನ್ಯಕನ ಮೆಱೆವ ಕಾಲ್ಗೆಱಗಿರ್ದಂ ॥ ೯೯

ಅಂತು ಕಾಲ್ಗೆಱಗಿ,

ಅರೆವೆಣನಾಗಿರೆ ಪ್ರಸ್ಣೊಳ್ ।
ಮಱುಗುತ್ತಿರ್ದೆನ್ನನೆತ್ತಿ ಕೊಂಡಾವನದೊಳ್ ॥
ಬಱನೊಳ್ ಸಾಕಿದ ನಿನ್ನಂ ।
ಮಱೆದೊಡೆ ನರಕಕ್ಕೆ ಭಾಜನಂ ತಾನಲ್ತೇ ॥ ೧೦೦

ಎಂಬ ಮೋಟನ ಮಾತಿಂಗೆ ತಳವಱರ್ ವಿಸ್ಮಯಂಬಟ್ಟು ಧಾನ್ಯಕನಂ ಮೋಟನಂ ನೀತಿವಿಳಾಸನೆಡೆಗೆ ತಂದು ತತ್ಕೌತುಕಮುಂ ಪೇೞೆ, ನೀತಿವಿಳಾಸಂ ಮೋಟನೊಳಿಂತೆಂದಂ:—

ಎಲೆ ಮಹಿಮ ಪಾತಕನ ಕಾ ।
ಲ್ಗಳ ಮೇಲೆಱಗಿರ್ದಯೇಕೆ ನಿನ್ನಯ ಕೈಕಾ ॥
ಲ್ಗಳನೋವದೆ ಕಡಿದುಂ ಮಗು ।
*ಬ್ದಳೆಯೊಳ್ ಸಾಧುವಿನ ತೆಱದಿನಿರ್ದಪನಲ್ತೇ ॥ ೧೦೧

ಎಂಬುದುಂ ಮೋಟನಿಂತೆಂದಂ:—

ಎನ್ನ ಪಿತೃಮಾತೃಗುರುಮೀ ।
ತನ್ನೆಟ್ಟನೆ ಪುತ್ರನಪ್ಪೆನೀತಂಗಾಂ ಕೇ ॥

ಳಿನ್ನು ಕರಚರಣಮೂಂ ಮಿಗೆ ।
ಮುನ್ನೆಸಗಿದ ಕರ್ಮದಿಂದೆ ಪೋದುವಿಳೇಶಾ ॥ ೧೦೨

ಎಂದರಸಂಗೆ ಪೂರ್ವವೃತ್ತಾಂತಮೇನುಮುಱಿಯದಂತು ಪೇೞ್ದು ಮತ್ತ ಮಿಂತೆಂದಂ:—

ಏಗೆಯ್ವೆಂ ದುರ್ಬಲಂ ಧೂಮಿನಿ ಮನದೊಳುಪಿಂ ಮೇಲೆ ಬೀೞಲ್ಕೆ ಬೇಡೆಂ।
ದಾಗಂ ನೂಂಕಲ್ಕೆ ಕೆಯ್ಯಿಲ್ಲಳವಿಗೞಿದು ಪೋಗಲ್ಕೆ ಕಾಲಿಲ್ಲ ತನ್ನೊಳ್ ॥
ಕೂಗಿಟ್ಟಾಂ ಪೇೞ್ದೊಡಂ ತನ್ನಯ ಬರವಿಸಿತಂ ಕಾಣೆನಂತಿರ್ದೊರ್ವೆನ್ನೊಳ್
ಬೇಗಂ ನಾಣ್ಗೆಟ್ಟು ತನ್ನಂಗನೆ ನಗೆಗೆಡೆಯಂ ಮಾಡಿದಳ್ ಪೇೞ್ವೆನೇನಂ ॥

ಎಂಬುದುಂ ಸೀತ್ರಿವಿಳಾಸಂ ವಿಸ್ಮಯಂಬಟ್ಟು, ಅವಿಚಾರದಿಂದೆನಗೆ ದೋಷಂ ಬರುತ್ತಿರ್ದುದೆಂದು ಕೋಪದೊಳಿರ್ದ ಧೂಮಿನಿಯುಂ ನೋಡಿ,

ಎಲೆ ಪಾತಕಿ ನಿಜಕಾಂತನ ।
ನುಱಿದೀಮೋಟಂಗೆ ಕೂರ್ತ ಪತಿಹಿತೆಯುಂಬೀ ॥
ಬಲೆಯುಂ ಬೀಸಿ ಧರಾವಂ ।
ಛಲಮಂ ವಂಚಿಸಿದೆ ನೋಡಲಾಗದು ನಿನ್ನಂ ॥ ೧೦೪

ಎಂದು ಧಾನ್ಯಕಂಗೆ ಮಾಡುವ ಶಾಸ್ತಿಯಂ ಧೂಮಿನಿಗೆ ಮಾಡಿಯನಂತರಂ

ಗುಣಸಿಧಿ ಧಾನ್ಯಕಂಗೆ ಸುಮುಹೂರ್ತದೊಳೊಲ್ದು ವಿಲಾಸಿಸೀಕುಲಾ ।
ಗ್ರಣಿಯೆನಿಸಿರ್ಪ ವೈಶ್ಯಕುಲಕನ್ನಿಕೆಯಂ ತರಿಸಿತ್ತು ನಲ್ಮೆಯಿಂ ॥
ವಣಿಗಧಿನಾಥನೆಂಬ ಪೆಸರಿಟ್ಟೊಲವಿಂ ಪೊರೆದಂ ನೆಗೞ್ದು ಧಾ ।
ರಿಣಿಪತಿ ಕೇಳ್ ನಿಶಾಚರ ದುರಾತ್ಮಿಕೆ ಧೂಮಿನಿ ಮಾಡಿವರ್ತಮಂ ॥ ೧೦೫

ಅದಱಿಂ ಸ್ತ್ರೀಹೃದಯಂ ಕ್ರೂರಮೆಂದು ಬ್ರಹ್ಮರಾಕ್ಷಸಂಗೆ ಪೇೞ್ದು ಗೋಮಿನೀವೃತ್ತಾಂತಮಂ ಪೇೞಲ್ ತಗುಳ್ದನದೆಂತೆನೆ:—

ಪ್ರಕಟಪ್ರಸ್ತುತಿವೆತ್ತ ಕಾಂಚಿಪುರದೊಳ್ ವಿಖ್ಯಾತಿಯಿಂದಿರ್ಪ ಶ ।
ಕ್ತಿಕುಮಾರಾಖ್ಯನದೊರ್ಬ ತಾಂ ಮದುವೆಯಾಗಲ್ವೇೞ್ಕುಮೊಲ್ದೆನ್ನ ಚಿ ॥
ತ್ತಕೆ ಬರ್ಪಂತು ಸಲಕ್ಷಣಂ ಮೆಱೆವ ಜಾಯಾಸದ್ಗುಣಂ ತೋರ್ಪ ಕ ।
ನ್ನಿಕೆಯಂ ಕಾಣೆನೆನುತ್ತಮಂ ಮನದೊಳಂದುದ್ವೇಗಮಂ ತಾಳ್ದಿದಂ ॥ ೧೦೬

ಅಂತು ಚಿಂತೆಯಂ ತಾಳ್ದು ಮತ್ತಂ

ಪತಿಹಿತಕಾರ್ಯೆಯುಂ ವಿನಯಭಾಷಿಣಿಯುಂ ಕಮನೀಯಲಕ್ಷಣಾ ।
ನ್ವಿತೆಯುನತೀವಶೀಲವತಿಯುಂ ಗೃಹಕಾರ್ಯನಿಮಗ್ನಚಿತ್ತೆಯುಂ ॥
ಸತತವಿಕಾಸವಕ್ತ್ರೆಯುನಪಾರಗುಣಾಧಿಕೆಯುಂ ಕಳತ್ರಮಂ ।
ದತಿಶಯದಿಂದೆ ಪಾಲಿಸುವುದಲ್ಲದ ಪೆಂಡಿರನಿಕ್ಕೆ ಕಿಚ್ಚಿನೊಳ್ ॥ ೧೦೭

ಅಂತೆಂದು

ಇಳೆಯೊಳ್ ಪುಟ್ಟಿದ ಕನ್ಯಾ ।
ಕುಳಮಂ ತವೆ ನೋಳ್ಪೆನೆಂದು ಶಕ್ತಿಕುಮಾರಂ ॥
ಘಳಲನೆ ಸೆಱಗಿನೊಳಂದೊ ।
ರ್ಬಳ ನೆಲ್ಲಂ ಕಟ್ಟಿಕೊಂಡವಂ ಪ್ರೌಢಿಮೆಯಿಂ ॥ ೧೦೮

ಕಾಂತಾಲಕ್ಷಣಮಂ ನಾ ।
ನಾತೆಱದಿಂ ನೋಡಲಱಿವೆನೆಂದೆಲ್ಲರುಮಂ ॥
ಕೈತವದಿಂ ನೋಡುತ್ತುಂ ।
ಜ್ಯೋತಿಷ್ಕನುಮೆನಿಪ ನಾಮಮಂ ತಳೆದಿರ್ದಂ ॥ ೧೦೯

ಅಂತು ಶಕ್ತಿಕುಮಾರಂ ಕಾಂತಾರ್ಥಿಕನಾಗಿ ಕಂಡ ಕಂಡ ಕನ್ನಿಕೆಯ ಲಕ್ಷಣಮಂ ನೋಡಿ ನೋಡಿ,

ಎಲ್ಲೆಲ್ಲಿ ಪುಗುವನವನೊ ।
ಲ್ದಲ್ಲಲ್ಲಿಯ ಕನ್ಯಕಾಗೃಹಂಗಳೊಳೆನಗೊ ॥
ಲ್ದೊಳ್ಳಿತುಣಿಸನಿಕ್ಕುವೊರ್ಬಳ ।
ನೆಲ್ಲಂ ಕೊಂಡೆಂದು ಕೇಳ್ವನತಿಮುದದಿಂದಂ ॥ ೧೧೦

ಅಂತಾತಂ ಕೇಳಲೊಡಂ,

ಇನ್ನೊರ್ಬಳ ನೆಲ್ಲಂ ನಿನ ।
ಗೆನ್ನಂ ನೆಱೆವಂತು ಕುಡುವೆನೆಂದವರೆಲ್ಲರ್ ॥
ತನ್ನಂ ಕಳಪಲ್ ನಡೆಗೊ ।
ಳ್ವಂ ನಯದಿಂ ಮುಗುಟಿದ್ದು* ಮತ್ತಮೊಂದೆಡೆಗಾಗಳ್ ॥ ೧೧೧

ಅಂತೆಲ್ಲಿಯುಂ ತನ್ನ ಮನಕ್ಕನುಗುಣವಪ್ಪ ಕನ್ನಿಕೆ ದೊರಕದಿರ್ಪುದುಂ,

ನಿರವಧಿಬೇಶನಮಂ ಸಕಳಪತ್ತನಮಂ ಸತತಂ ತೊಟಿಲ್ವೆಬಂ ।
ಧುರಕುಲಕನ್ಯಕಾವಿತತಿಯುಂ ತನಗಪ್ಪವೊಲೆಲ್ಲಿ ನೋಡೆಯುಂ ॥

ದೊರೆಕದಿರಲ್ಕೆ ಚಿಂತೆ ತಲೆದೋಱಿ ಮಗುೞ್ದತಿಧೈರ್ಯವೃತ್ತಿಯಿಂ ।
ಭರವಶದಿಂದವಂ ಶಿಬಿಕದೇಶದ ರತ್ನಪುರಕ್ಕೆ ಸಾರಿದಂ ॥ ೧೧೨

ಅಂತು ರತ್ನಪುರಕ್ಕೆ ಬಂದು,

ಮನೆಮನೆದಪ್ಪದೆ ಸತತಂ ।
ವನಿತಾಲಕ್ಷಣಮನೊಲ್ದು ನೋಡುತ್ತುಂ ಬ ॥
ರ್ಪನವೊಂದು ಭವನದೊಳ್ ಗೋ ।
ಮಿನಿಯೆಂಬ ಕುಮಾರಿಯಂ ಕುಮಾರಂ ಕಂಡಂ ॥ ೧೧೩

ಅಂತವಳಂ ಕಂಡು ಲಕ್ಷಣಮಂ ನೋೞ್ಪನಂ,

ಪೊಂಗಿದ ಪಾದಮುಂ ಸಮಪದಾಂಗುಲಿಯುಂ ಮೃದುಗೂಢಗುಲ್ಫಮುಂ ।
ಮಂಗಳವೃತ್ತಜಂಘೆಗಳುಮೊಪ್ಪುವ ಕೋಮಳಪೂರ್ಣಜಾನುಯು ॥
ಗ್ಮಂಗಳುಮೊಲ್ಮೆವೆತ್ತುರುನಿತಂಬಮುಮಲ್ಪಸುಮಧ್ಯಮುಂ ಸಮು ।
ತ್ತುಂಗಕುಚಂಗಳುಂ ವಿಕಸಿತಾನನಮುಂ ಮೆಱೆದಿರ್ಪುವಾಕೆಯೊಳ್ ॥ ೧೧೪

ಎವೆ ವಜ್ರಾಂಕುಶಚಕ್ರಚಾಪಚಮರೋದ್ಯಚ್ಚಿಹ್ನಮಂಗಯ್ಯೊಳ್ ।
ರ್ಪವಳಂ ನೀರಜಮೂರ್ಧ್ವರೇಖೆ ಪದೆಪಿಂದಂಗಾಲೊಳೊಪ್ಪಿರ್ಪಳಂ ॥
ಕಿವಿಯಂ ಚುಂಬಿಪ ಕಣ್ಗಳೊಳ್ ಧವಳನೀಲಾರುಣ್ಯಚಂಚತ್ತ್ರಿಭಾ ॥
ಗಮನಾಂತಿರ್ದವಳಂ ವಿಳಾಸಪರನೊಲ್ದಾನಂದದಿಂ ನೋಡಿದಂ ॥ ೧೧೫

ಮುಡಿಯಿನೆಬಿಲ್ವ ನೀಳಕಚಮುದ್ವಲಲಾಟಮರೋಮಜಂಘೆ ಮೆ ।
ಲ್ನಡಿ ಮದಗಂಧಮಾಂಸಳಮನೋಹರವಕ್ಷಮುವಭ್ರಗಂಡಮಿ ॥
ಟ್ಟೆಡೆಯೆನಿಸಿರ್ಪಡರ್ದ ಜಘನಂ ಪರಿಪೂರ್ಣಪಯೋಧರಂ ಕರಂ ।
ಕುಡಿನಿಮಿರ್ದ*ಕ್ಷಿಗಳ್ ಮೆಱೆವ ಕನ್ನೆಯನೀಕ್ಷಿಸಿದಂ ಕಳಾವಿದಂ ॥ ೧೧೬

ಸಲೆ ಚೆನ್ನೆಯ್ದಿಲ ಕಾವನಿರ್ಮಡಿಸಿದಂತೊಪ್ಪಿರ್ಪ ಕರ್ಣಂ ನಿಮಿ ।
ರ್ದೆಳನೀಲಚ್ಛವಿಯಂತೆ ರಂಜಿಪ ಲಸದ್ಭ್ರೂಲೇಖೆಗಳ್ ಕುಂದಕು ॥
ಟ್ಮಲಮಂ ಸೇರಿಸಿದಂತೆ ತೋರ್ಪ ರದನೋದ್ಯತ್ಪಙ್ಕ್ತಿ ನೂತ್ನಪ್ರವಾ ।
ಳಲತಾಸಾರದೊಳೞ್ದಂತೆಸೆದುದಾಬಿಂಬಾಧರಂ ಕನ್ನೆಯಾ ॥ ೧೧೭

ಅಂತಿರ್ದ ಗೋಮಿನಿಯನಾಪಾದಮಸ್ತಕಸಂಪೂರ್ಣಲಕ್ಷಣಮಂ ಶಕ್ತಿ ಕುಮಾರಂ ನೋಡಿ ಸಂತೋಷಂಬಡುತ್ತಿಂತೆಂದಂ:—

ಈನೆಲ್ಲೊ ಬರ್ಗಳನಂ ಕೊಂ ।
ಡೇನಂ ಮತ್ತುಱಸದೆನಗೆ ಪರ್ಯಾಪ್ತಮೆನಲ್ ॥
ಸಾನಂದದಿನುಣಲಿಕ್ಕಲ್ ।
ಮಾನಿನಿ ನೀನಾರ್ಪೆಯೆಂದು ಕೇಳ್ದನಲಂಪಿಂ ॥ ೧೧೮

ಎಂದು ಕೇಳ್ದೊಡವಳಂತೆಗೆಯ್ವೆನೆಂದು ನೆಲ್ಲನೀಸಿಕೊಂಡು,
ಕಟ್ಟೊಣಗಿಲಾಗದೊಣಗಿಸಿ ।
ಕುಟ್ಟಲ್ ನುಚ್ಚಾಗದಂತೆ ನುಸ್ವೆಸೆವಿನೆಗಂ ॥
ನೆಟ್ಟಕ್ಕಿ ಮಾಡಿಯುಃಸ್ಯಂ ।
ಕೊಟ್ಟಳ್ ಸತಿ ಕರೆದು ತನ್ನ ದಾದಿಯ ಕೆಯ್ಯೊಳ್ ॥ ೧೧೯

ಅಂತಾದಾದಿಯ ಕೆಯ್ಯೊಳುಯ್ಯಂ ಕೊಟ್ಟು,
ಇದನಕ್ಕಸಾಲೆಗಳ್ಗ ।
ತ್ತದಱಿಂದಂ ಬಂದ ಕಾಸಿನಿಂ ಮಡಕೆಗಳಂ ॥
ಪದೆದಿಂಧನೋಪದಂಶಮು ।
ನೊದವಿಸಿ ಕೊಂಡೀಗ ಬರ್ಪುದೊಲವಿಂ ಧಾತ್ರೀ ॥ ೧೨೦

ಎಂಬುದುಮವಳಾಪರಿಯೊಳುಯ್ಯಂ ಕೊಟ್ಟು ಮಡಕೆಯಿಂಧನಮಾದು
ರಂಗಳಂ ತಪ್ಪ್ಪದುಂ; ಬೞಯಂ

ಹದನಱಿದೆಸಱಿಟ್ಟೊಯ್ಯನೆ ।
ಮೃದುವಹ್ನಿಯನೆಸಗಿ ಪದೆದೆಸಜ್ ಕಾದುಲ ನಿ ॥
ಲ್ಲದೆಯುಕ್ಕಿಯೆರಡನೊಲೆಯೊಳ್ ।
ಬಿದಿರ್ದೆಸಱೊಳ್ ಪೊಯ್ದು ಳಕ್ಕಿಯಂ ಸತಿಯಾಗಳ್ ॥ ೧೨೧

ಅಂತಕ್ಕಿಯಂ ಪೊಯ್ದು ತೊಳಸಿ
ಕುದಿ ಬರಲೊಯ್ಯನೆ ಮೇಲು ।
ರ್ಬಿದ ನೊರೆಯಂ ತೆಗೆದು ಬಿಸುಟು ಮೇಲೆಸಱಂ ಸಾ ॥
ಲ್ದದನೆಱೆದು ಮಗುಳ್ದಗುಳ್ಗಳ ।
ಹದನಂ ತೆಗೆದೊತ್ತಿನೋಡಿ ಬಾಗಿದಳಾಗಳ್ ॥ ೧೨೨

ಅಂತು ಓಗರಮಂ ಬಾಗಿ,

ತಿಳಿಗಂಜಿಯುನೊಪ್ಪುವ ತಂ ।
ಗಳಸದೊಳಿಱಿದಿರಿಸಿ ದೊರಕಿದುಪದಂಶಮನಾ ॥
ಗಳೆ ಪಾಕಂಗೆಯ್ದಿಲೆಯೊಳ್ ।
ತಿಳಿನೀರಂ ತಳೆದು ಮಸಿಯನಾಗಳ್ ತೆಗೆದಳ್ ॥ ೧೦೩

ಅಂತಾಮಸಿಯುಂ ತೆಗೆದು ತನ್ನ ದಾಸಿಯುಂ ಕರೆದು
ಏರಣಿಗಗೀ ಮಸಿಯುಂ ।
ಧೋೀರೆನೆ ಕೊಟ್ಟುವರ್ಗಳತ್ತ ಕಾಸಿಂಗೀಗಳ್ ।
ಗೋೀರಸಮುಂ ದೊರಕಿಸಿ ಕೊಂ ।
ಡೋೀರಂತಿರೆ ಬರ್ಪುದೆಂದು ಕಳಿಪಿದಳವಳಂ ॥ ೧೦೪

ಎಂದು ಕಳಿಪಲವಳಾಕ್ರಮದಿಂ ಸ್ನೇಹದ್ರವ್ಯಮಂ ಕೊಂಡು ಬರಲೊ
ಡಂ, ಶಕ್ತಿಕುಮಾರನಂ ಕರೆದು
ತಿಂಗಳ ಬೆಳಗಿನ ದಾರೆಯು ।
ಸಂಗಡಮೆನೆ ಮೆಱೆಯುತಿರ್ಪ ಗಂಜಿಯನಾಗಳ್ ॥
ತೆಂಗಿನ ತಿಳಿವಟ್ಟಲೊಳಾ ।
ತಂಗೆಱೆದಳ್ ತೊಳಸಿ ತೊಳಸಿ ಸವಿಯುಪ್ಪನೆಗಂ ॥ ೧೦೫

ಅಂತೆಱೆಯಲಾಗಂಜಿಯುಂ ಕುಡಿಯಲೊಡಂ
ನೆರೆಯಮೃತರಸಕ್ಕಿನಿದಂ ।
ದೊರೆಗಟ್ಟುವ ಗಂಜಿ ಪೊಕ್ಕು ತತ್ತನುರಸಮಂ ॥
ಪೋೞಮಡಿಸಿದಂತೆ ಬೆಮರ್ಗಳ್ ।
ಪೊಱಪೊಣ್ಮಿದುವವನ ರೋಮಕೂಪದೊಳಾಗಳ್ ॥ ೧೦೬

ಅಂತವನ ದೇಹಂ ಬೆಮರಲ್
ಅರೆದಿರಿಸಿದ ನೆಲ್ಲಿಯು ಸ ।
ಟ್ಟುರುಳಿಯೊಳತಿನಯಮದಾಗಲೆಣ್ಣೆಯು ಪನಿಯುಂ ॥
ಬೆರಸಿಟ್ಟು ಕೊಟ್ಟಳಾತಂ ।
ಗಿರದೀಗಳೆ ಮಿಂದು ಬರ್ಪುದೆಂದವಳಾಗಳ್ ॥ ೧೦೭

ಅಂತಾತನಂ ಮಿಯಿಸಲ್ ಕಳಿಪಿ, ಮನೆಯೊಳಡೆಮಾಡಿಯಿಡಿಸಿ ಮಗುೞ್ದು
ತಂ ಬರಲೊಡಂ,

ಎಳೆಯುಳ್ ಪಿತ್ತಿಲ ಬಾಳೆಗ ।
ಳೆಲೆಯೊಳ್ ಮೂಡನೆಯು ಬಾಗವಂ ಬಿಟ್ಟಗ್ರಂ ॥
ತಳರೆಸೆಯುತಿರ್ಪ ಕದಳೀ ।
ದಳಮುಂ ಮೆಲ್ಪೆಸೆಯೆ ಚಿವ್ರುಟ ತಂದಳ್ ಬೇಗಂ ॥ ೧೨೮

ಅನಂತರಂ

ನೆಲದೊಳ್ ಕುಡಿತೆಯು ನೀರಂ ।
ತಳದೊಯ್ಯನೆ ತೊಡೆದು ಪೆಂಟಿನಿಂ ಚತುರಶ್ರ ॥
ಸ್ಥಳಮನೊಸೆದಿಟ್ಟು ರಂಭಾ ।
ದಳಮಂ ನೀಗೊರ್ಟ್ಟಳೊಂದು ಪೊಸತಂಬುಗೆಯಿಂ ॥ ೧೨೯

ಅಂತು ನೀಗರ್ಡಲಾತಂ ಕರಚರಣಪ್ರಕ್ಷಾಳನಂಗೆಯ್ದು ಕುಳ್ಳಿರ್ದುಂ,

ಪವಣಱಿದಿಕ್ಕಿಯೋಗರಮನುಪ್ಪಿನ ಕಾಯ್ಗಳನಿಕ್ಕಿದೊಂದು ಶಾ ।
ಕವನೊಸೆದಿಕ್ಕಿಯಲ್ಪಘೃತವಂ ತಲೆದೋಱಿ ಮಗುಬ್ದು ತುತ್ತಗಳ್ ॥
ಸವಿವಡೆವಂತು ಪೊಂಬೆಸಱ ಸೂಪವನೊಪ್ಪವ ಮಾದುರಂಗಳಂ ।
ಯುವತಿ ತೆರಳ್ಚ ಬಡ್ಡಿಸಿದಳಾಸುಖಿಯೊಳ್ ಪರಿತೃಪ್ತಿಯುಪ್ಪಿನಂ ॥ ೧೩೦

ಅಂತಾತಂ ಭೋಜನದಿಂ ತುಪ್ಟನಾಗೆ

ಸುರುಚಿರಮಪ್ಪ ತೆಂಗಿನೆಳನೀರ್ಗಳಸಂದಳದಂತೆ ಕಾಂತೆ ತ ।
ಣ್ಗರಗಮನೆತ್ತಿ ಶೈತ್ಯಜಲಮಂ ಪದೆಪಿಂದಱಿಪುಲ್ಕೆ ಶೀಕರೋ ॥
ತ್ಕರಮೆದೆ*ಯೊಳ್ ನಿಮಿರ್ದ್ದೆಸೆವ ಮಿಾಸೆಗಳೊಳ್ ತುಱುಗಲ್ ಪೊದಟ್ದಿ ಕ ।
ಣ್ಗರೆಮುಗಿವಂತಿರಿಂಟಿ ಕಡೆಯೊಳ್ ತಲೆದೂಗಿ ಮಗುಬ್ದು ತೇಗಿದಂ ॥ ೧೩೧

ಅಂತು ತೇಗಿ ಗೊಟ್ಟಂಗೊಂಡು ಕೈದೊಳೆದು ಗೃಹೀತತಾಂಬೂಲನಾಗಿ ಸಂತೋಷಂಬಟ್ಟವಳಂ ವಿವಾಹಮಾಗಿ ಸುಖದಿನಿರ್ದಂ.

ಅದಱಿಂ ಗೃಹಸುಖಂ ಸತಿಯಾರೊಳ್ಪೆಂದು ರಾಕ್ಷಸಂಗೆ ಪೇೞಲ್ ಸಂತೋಷಂಬಟ್ಟು ನಿಂಬವತಿಯು ಕ್ರಮಮೆಂತೆಂದು ಕೇಳಲಾತಂ ಪೇೞಲ್ ತಗುಳ್ದನದೆಂತೆನೆ:—

ಪದೆಪಿಂ ಸೌರಾಷ್ಟ್ರದೊಳ್ ರಂಜಿಪುದು ವಳಭಿ ವಾಣೀವಿಲಾಸಕ್ಕೆ ಶೋಭಾ ।
ಸದನಂ ತಾನೆಂಬಿನಂ ತತ್ಪುರದೊಳೆ ಗೃಹಗುಪ್ತಂ ವಣಿಙ್ಮುಖ್ಯನಿರ್ಪಂ ॥

ಮುವದಿಂ ಕಲ್ಯಾಣದಿಂದಂ ತವೆಯದ ನವರತ್ನಂಗಳಿಂ ರಾಜರಾಜಾ।
ಭ್ಯುದಯಂ ತನ್ನೇಕದೇಶಕ್ಕೆಣೆವಡೆಯದೆನಿಪ್ಪಂದದಿಂ ಸಂದಗುರ್ಬಿಂ ॥

ಅಂತಿರ್ಪ ಗೃಹಗುಪ್ತಂಗೆ

ಸತತಂ ರೋಹಣಶೈಲದೊಳ್ ಮಣಿ ಸುಧಾಂಭೋರಾಶಿಯೊಳ್ ಚಂದ್ರಲೇ।
ಖೆ ತಪಶ್ಶಕ್ತಿಯೊಳುದ್ಘಶಾಂತಿ ಕವಿತಾವಿಸ್ತಾರದೊಳ್ ಪ್ರಾರ್ಥಿಸ್ತು ॥
ಪ್ರಿತಪದ್ಮಸ್ಥಳದೊಳ್ ಲಸತ್ಸುಮಳೆ ಪೆಂಪಿಂ ಪುಟ್ಟುವಂತಾವಣಿ।
ಕ್ಪತಿಯೊಳ್ ಪುಟ್ಟಿದಳೊಲ್ದು ರತ್ನವತಿಯೆಂಬಳ್ ಶಂಬರಾರಿಪ್ರಿಯಳ್ ॥

ವಿಲಸನ್ಮಾಣಿಕ್ಯಮಂ ಚೆಲ್ವಧರದ ರುಚಿಯಿಂ ನವ್ಯನೈರ್ಮಲ್ಯಮುಕ್ತಾ।
ವಳಿಯಂ ದಂತಪ್ರಭಾಸಂಪದದಿನುರುಮರುನ್ನೀಲಮಂ ಸಂತತಂ ಕುಂ ॥
ತಳಚಂಚತ್ಕಾಂತಿಯಿಂ ವಿದ್ರುಮಮನಮಳಹಸ್ತಾಬ್ಜದಿಂ ಗೆಲ್ದು ತತ್ಕೋ।
ಮಳೆ ಮತ್ತಂ ರತ್ನಪಾಂಚಾಲಿಕೆಯೆನಲೆಸೆವಳ್ ತನ್ನ ದೃಗ್ದೀಪ್ತಿಯಿಂದಂ॥

ಅಂತೆಸೆದಿರ್ಪ ರತ್ನವತಿಯುಂ ಗೃಹಗುಪ್ತನೊಲಿಲ್ದು ತತ್ಕಳಾ।
ವಂತನೆನಲ್ಕೆ ಸೊಲ್ವ ಬಲಭದ್ರನೆನಿಪ್ಪ ವಣಿಗ್ವರಂಗೆ ಕೊ ॥
ಟ್ಟಂ ತಪನೀಯರತ್ನವಿವಿಧಾಂಬರಸಂತತಿಯಿಂ ಸುಹೃಜ್ಜನಂ।
ಸಂತತವರ್ತಿಗಳ್ ತಣಿವಿನಂ ವಿಭವಸ್ಥಿತಿ ಚೆಲ್ವನಪ್ಪಿನಂ ॥　　೧೩೫

ಅಂತು ರತ್ನವತಿಯುಂ ಮಧುರಾಪುರಿಯ ಬಲಭದ್ರಂಗೆ ಗೃಹಗುಪ್ತಂ ಕು
ಡಲೊಡಂ,

ರಜನಿಕರಾಸ್ಯೆ ರತ್ನವತಿ ಪೂರ್ವದೊಳಾರ್ಜಿಸಿದುಗ್ರಕರ್ಮದಿಂ।
ನಿಜಪತಿ ಸಂತತಂ ಮದುವೆಯಾದ ದಿನಂ ಮೊದಲಾಗಿ ತನ್ನ ವಾ ॥
ರಿಜಮುಖಮಂ ನಿರೀಕ್ಷಿಸದೆ ತನ್ನೊಡಗೂಡದಿರಲ್ ದುರಾತ್ಮನಂ।
ಗಜನ ಸುಮಾಸ್ತ್ರಸಂತತಿಗೆ ತತ್ಸತಿಯುಂ ಗುರಿಮಾಡಿ ಕಾಡಿದಂ॥　೧೩೬

ಅಂತಿರ್ದ ರತ್ನವತಿಯುಂ ಕಂಡು

ಈವನಿತೆ ರತ್ನವತಿಯು।
ಲ್ತಾವಗಮಿನ್ನೇಕೆ ನಿಂಬವತಿಯೆಂದು ಪುರ ॥
ಸ್ತ್ರೀವೃಂದಂ ಪೆಸರಿಡೆ ತ।
ದ್ಭಾವಕಿ ಕಡುನಾಣ್ಚಿ ಚಿಂತೆಯಂ ತಳೆದಿರ್ದಳ್ ॥　　೧೩೭

ಅಂತು ಚಿಂತಿಸುತ್ತಿರ್ಪೊರ್ಗಳ್

ತನಗನುರಕ್ತೆಯೆನಲ್ ಮು ।
ನ್ನನುಕೂಲೆಯೆನಲ್ಕೆ ಮೆಱೆವ ಭಿಕ್ಷುಕಿಯೊರ್ವಳ್ ॥
ಮನೆಗೆ ಬರಲ್ಕಾಕೆಗೆ ಭೋಂ ।
ಕೆನೆ ಮುಗುಡವಾನಾಂತ ರತ್ನವತಿಯಿಂತೆಂದಳ್ ॥ ೧೩೮

ಎನ್ನಿನಿಸುಮೆನ್ನಸೆಂದುಂ ।
ಮನ್ನಿಸನೇನೆಂದು ನುಡಿಸನೇಂ ಕಾರಣಮೋ ॥
ಮುನ್ನೆಸಗಿದ ದುಷ್ಕರ್ಮವೊ ।
ತನ್ನಯ ದೌರ್ಭಾಗ್ಯಲಕ್ಷಣಮೊ ಪೇೞೊಲವಿಂ ॥ ೧೩೯

ಅದಂ ಕಂಡಲ್ಲಿಯ ವಿಳಾಸಿನಿಯರ್ ರತ್ನವತಿಯೆಂಬುದಂ ಮಾಣ್ದು ನಿಂಬವತಿಯೆಂಬ ಪೆಸರಂ ಕೊಟ್ಟರೆಂದು ಭಿಕ್ಷುಕಿಗೆ ಪೇೞಲವಳಿಂತೆಂದಳ್:—

ವನಜಮುಖಿ ರತ್ನವತಿ ನಿ ।
ನ್ನಿನಿಯಂ ನಿಧಿಪತಿ ವಣಿಗ್ವರೇಣ್ಯನ ಸುತೆ ತ ॥
ತ್ಕನಕಲತಾಖ್ಯೆಗೆ ಕೂರ್ಪಂ ।
ನಿನಗಮವಳ್ಗಂ ಸ್ವರೂಪಮೊಂದೆನಿಸಿರ್ಕುಂ ॥ ೧೪೦

ಎಂಬುದುಮಾಭಿಕ್ಷುಕಿಗೆ ರತ್ನವತಿಯಿಂತೆಂದಳ್:—

ಆದೊಡೆ ನಿಧಿಪತಿಯ ಪ್ರಾ ।
ಸಾದದ ಮೇಲಿರ್ಪ ಕನಕಲತೆಯುಪ್ರೌಲಾ ಸ ॥
ಮ್ಮೋದದೆ ಸೆಂಡಾಡುವ ಪ್ರಾ ।
ಟ್ಟದರದಿಂದಲ್ಲಿಗಧಿಪನಂ ಬರಿಸೊಲವಿಂ ॥ ೧೪೧

ಅಂತು ಬರಿಸಲೊಡಂ,

ಸೆಂಡಂ ಭೋಂಕೆನೆ ಕಾಂತನ ।
ಮಂಡೆಯೊಳಾಂ ಮೆಲ್ಲನಿಡಲೊಡಂ ನೀನಾಗಳ್ ॥
ಕಂಡಾಸತಿಯೊಲವಂ ನೀಂ ।
ಕೊಂಡುಯ್ಯಲ್ಲಿಂದೆ ಕನಕಲತೆಯುಂ ಬೇಗಂ ॥ ೧೪೨

ಎಂದು ನೀಂ ಪೇೞ್ವುದಾತನೆನ್ನಂ ಕನಕಲತೆಯೆಂಬ ಭಾವನೆಯಿಂದಿಲ್ಲಿಂದಂ

ಕೊಂಡುಯ್ಯಲಾಂ ಕೂಡೆ ಸುಖದಿನಿರ್ಪೆನೆಂಬುದುಂ ಭಿಕ್ಷುಕಿಯಂತೆಗೆಯ್ವೆನೆಂದು,

ಬಲಭದ್ರನೆಡೆಗೆ ಭಿಕ್ಷುಕಿ ।
ನಲವಿಂದಂ ಪೋಗಿ ಕೇಳ್ ಮನೋಹರೆ ತತ್ಕ್ರೀ ॥
ಮಲೆ ಸೆಂಡನಾಡುವಳ್ ಕನ ।
ಕಲತಾವಧು ನೋೞ್ಪವೇೞೆನುತ್ತುಂ ಪೇೞ್ದಳ್ ॥ ೧೪೩

ಅಂತು ಪೇೞಲಾತನಾಗಳ್ ನಿಧಿಪತಿಯರಮನೆಯ ಪ್ರಾಸಾದದ ಕೆಳಗೆ ಬಂದಿರ್ಪುದುಂ,

ತ್ರಿಜಗನ್ಮೋಹನಮಿಶ್ರಿತಾಂಜನಕರಂಡಂ ವಶ್ಯಕಾಂಡಂ ರಘುಷ ।
ಧ್ವಜಕಾಂಡಂ ವಿಟಚಿತ್ತಖಂಡನಮನುರಾಗಾಪೂರ್ಣಭಾಂಡಂ ಗುಣ ॥
ವ್ರಜಷಂಡಂ ಒರದಂಡತುಂಡಮುಕುಳೋದ್ದಂಡಂ ದಿಟಕ್ಕೆಂಬಿನಂ ।
ನಿಜದಿಂ ರಂಜಿಪ ಸೆಂಡನಿಟ್ಟಳದಿರೊಳ್ ತತ್ಕಾಂತೆ ತನ್ಮೋಹನಾ ॥ ೧೪೪

ಅಂತು ನಿಂಬವತಿ ಕನಕಲತಾವ್ಯಾಜದಿಂ ಕಂತುಕಮಂ ಕಾಂತನ ಮೇಲೆಡಲೊಡಮಾತಂ ಪರಮಾನಂದದಿಂ ಪ್ರಾಸಾದದ ಮೇಲಂ ನೋೞ್ಪನಂ,

ಪ್ರಾಸಾದಶಿಖರಗಗನಾ ।
ವಾಸದೊಳಮಳಾಂಗಿನಿಂಬವತಿರುಚಿರಾಂಶು ॥
ನ್ಯಾಸಂ ಬಲಭದ್ರನ ಕ ।
ಣ್ಗಾಸುರವೆನಿಪಂತು ತೋಱಿಸಿತ್ತನುನಯದಿಂ ॥ ೧೪೫

ಅಂತಿರ್ದ ಸತಿಯನಾತಂ ನೋಡಲ್ ಭಿಕ್ಷುಕಿಯಿಂತೆಂದಳ್:—

ಮನಸಿಜನವ್ಯಮೂರ್ತಿ ಬಲಭದ್ರವಣಿಗ್ವರ ಕೇಳ್ ನಿರಂತರಂ ।
ಕನಕಲತಾಖ್ಯೆ ನಿನ್ನೊಡನಿರಲ್ ಬಯಸಿರ್ಪಳಲ್ಲಿರಕ್ತೆ ತ ॥
ಜ್ಜನಕನ ಬಾಧೆಗಂಜವಳಿರುಳ್ ಕವಿದಾಕ್ಷಣಮನ್ಯದೇಶದ ।
ತ್ತನುನಯದಿಂದೆ ಪೋಪುದವಳಂ ಧನಮುಂ ಮಿಗೆ ಕೊಂಡು ಬೇಗದಿಂ ॥

ಎಂದು ಮತ್ತಂ

ಇಂದಿರುಳಾಂ ಕನಕಲತಾ ।
ಸುಂದರಿಯುಂ ಬೇೞ್ಪ ರತ್ನಮುಂ ಬಹುಧನಮುಂ ॥

ತಂದಿತ್ತಪೆನಾಂ ನೀನಿ ।
ಲ್ಲಿಂದಂ ಪೋಗನ್ಯದೇಶದತ್ತಲ್ ನಲವಿಂ ॥ ೧೪೭

ಎಂದೊಡಾತನಂತೆಗೆಯ್ವೆನೆಂಬುದುಮೊಂದುದಿನಂ,

ದೆಸೆಯುಂ ಬಾಸಣಿಸಿರ್ದ ಕತ್ತಲೆಯೊಳಂದೀಷ್ಯಾರ್ಳುಮೋಹಂ ಮಿಗು ।
ರ್ವಿಸೆ ತದ್ಭಿಕ್ಷುಕಿ ಕೂಡೆ ನಿಂಬವತಿಯುಂ ಬೇಟ್ಪರ್ಥವಂ ರತ್ನಮುಂ ।
ಪೊಸತಪ್ಪಂಬರಮುಂ ನೆಗಟ್ಟೆ ಬಲಭದ್ರಂಗಾಕೆ ತಂದಿತ್ತು ಪೋ ।
ಗು ಸುಖಂ ರಂಜಿಸುವಂತಿವಂ ತಳೆದು ನೀಂ ದೂರಕ್ಕೆನುತ್ತಾತನೊಳ್ ।

ಅಂತೆನಲವಂ ನಿಂಬವತಿಯುಂ ಕನಕವತಿಯುಮೊಂದೆ ಚಂದಮಪ್ಪುದ
ಱಿಂದವಳಂ ಕೊಂಡು ನಿಶಾಮಾರ್ಗದಿಂದೆ ವಳಭಿಯುಂ ಪೊಱಮಟ್ಟು ಪೋ
ಗುತುಂ ದಾರಿಯೊಳ್,

ಪ್ರಿಯೆಗೆ ನುಡಿ ನೆರವು ಪರಿಚ ।
ರ್ಯೆಯುನೊಲವಿಂ ಮಾಳ್ಪಳೆಂದು ಬಲಭದ್ರಂ ದಾ ॥
ಸಿಯನೊರ್ಬಳಂ ನಿತಾಂತ ।
ಕ್ರಯಮಾಗಲಕೊಂಡು ಪೊಱಿಸಿದಂ ಬಲ್ಮೆಯಿಮಂ ೧೪೯

ಅಂತವಳ ಮಂಡೆಯೊಳ್ ಪೊಱೆಯುನಿಟ್ಟು,

ದಿವಸಕ್ರಮದಿಂ ಪೊಕ್ಕಂ ।
ಯುವತಿಯುತಂ ಶೂರಸೇನದೇಶದೊಳಂದೊ ।
ಪ್ಪುವ ಮಧುಮತಿಪತ್ತನಮಂ ।
ನವರತ್ನಾಧಿಪಮಣಿಗ್ರೈರಂ ಬಲಭದ್ರಂ ॥ ೧೫೦

ಅಂತಾಮಧುಮತೀಪತ್ತನಮಂ ಪೊಕ್ಕು

ದಿನದಿನದೊಳ್ ಬಲಭದ್ರಂ ।
ಧನಕನಕಸಮೃದ್ಧಿಯಿಂ ಕರಂ ಪೆರ್ಚಿ ದಿಶಾ ॥
ನನದೊಳ್ ಕೀರ್ತಿಯನಾಂತಂ ।
ತನಗಾರ್ಜಿತಪುಣ್ಯಮುಳ್ಳೊಡೆಲ್ಲಿರ್ದೊಡಮೇಂ ॥ ೧೫೧

ಅಂತಿರ್ಪುದುಂ,

ಇತ್ತಲ್ ಗೃಹಗುಪ್ತಂ ನಿಜ ।
ಚಿತ್ತದೊಳತಿಚಿಂತಿಸುತ್ತುಮೆನ್ನಳಿಯಂ ತಾ ।

ನೆತ್ತಲ್ ಪೋಗಪನೊಡಗೊಂ ।
ಡುತ್ತಮುಗಜಗಮನೆ ರತ್ನವತಿಯನಲಂಪಿಂ ॥ ೧೫೨

ಎಂದು ಚಿಂತಿಸುತ್ತಿರ್ಪುದುಮತ್ತಲ್ ಮಧುಮತಿಪತ್ತನದೊಳ್

ಅಡಿಗಳನೊತ್ತುತ್ತುಂ ತೂಂ ।
ಕಡಿಸುವ ನಿಜದಾಸಿಯಂದಮುಂ ಕಂಡಾಗಳ್ ॥
ಕುಡುಗುಣಿ ತೊಟ್ಟೆಯೆನುತ್ತುಂ ।
ಪೊಡೆದಳ್ ಕಡುಮುಳಿದು ನಿಂಬವತಿಯಂತವಳಂ ॥ ೧೫೩

ಅಂತು ಆತೊಟ್ಟಿಂ ಜಡಿದು ಪೊಡೆಯಲವಳ್

ಕಂಡವರೆಲ್ಲರೊಳ್ ಕಪಟದಿಂ ಬಲಭದ್ರನದೊರ್ಬ ಸೆಟ್ಟಿಯಾ ।
ಪೆಂಡತಿಯಂ ಸಮಸ್ತಧನಮಂ ನವರತ್ನಮನೀಟ್ದಿ ತಂದು ಭೂ ॥
ಮಂಡಲದೊಳ್ ಕರಂ ಶುಚಿಯೆನಿಪ್ಪವೊಲಿರ್ದಪನೆಂದು ಕೋಪದು ।
ದ್ದಂಡತೆಯಿಂದೆ ಪೇೞ್ದಳತಿಚೋದ್ಯಮೆನಲ್ ನಿಜದಾಸಿ ಸಾಸದಿಂ ॥ ೧೫೪

ಅಂತು ಪೇೞ್ದುದುಮಲ್ಲಿಯ ಸಮಯಸಂಕೇತದವರೊಂದುಗೂಡಿ ಬಲಭದ್ರನಂ ಕರೆಯಿಸಿ

ಪರಸತಿಯಂ ಪರಾತ್ತಧನಮಂ ಮಿಗೆ ವಂಚಿಸಿ ತಂದ ದೋಷಿ ಮ ।
ತ್ಪುರದೊಳಿರಲ್ಕೆ ನಿಂದೆಯೆಮಗಪ್ಪುದೆನುತ್ತೆ ವಣಿಗ್ವರರ್ಕಳುಂ ॥
ಪರಿಭವಮಪ್ಪಿನಂ ಪೊಜಮಡೀಪ್ರೊಲಿಲಿಂ ಪರಸತ್ತಿಯುಂ ಪರರ ।
ದೊರಕಿಸಿದರ್ಥಮುಂ ಸುಖದೊಳಲ್ಲಿರಿಸೆಂದವರೆಲ್ಲರಾತನಂ ॥ ೧೫೫

ಅಂತೆಂಬುದುಮಾಬಲಭದ್ರಂ ಚಿಂತಾಕ್ರಾಂತನಾಗಿ ಮನೆಗೆ ಬಂದು ನಿಜಸತಿಯೊಳ್ ಪೇೞಲಾಕೆಯಿಂತೆಂದಳ್:—

ಪರಸತಿಯಲ್ಲು ಮತ್ಸತಿ ಪರಾರ್ಥಮದಲ್ಲು ಮದೀಯವಿತ್ತಮುಂ ।
ಪರಸಿನ ಮುಂದೆ ನಿಂದು ಕಡುಬಾಸೆಯನೊಲ್ಲದೊಪೋಲೆಯುಂ ಮನು ॥
ಷ್ಯರನತಿವೇಗದಿಂ ವಳಭಿಗಟ್ಟಿ ವಿಚಾರಿಪ್ರುದೆನ್ನ ಕಾಂತೆಯಿ ।
ರ್ದರವನ .... † ೧೫೬

ಎಂದೊಡಾತಂ ಮಗುಳ್ದರಸನಿರ್ದೆಡೆಗೆ ಪೋಗಿ ಬಿನ್ನವಿಸಿ ಸಕಲರಂ

---

† ದಲ್ಲದೀಯೆಡೆಗೆ ಬಂದನು ಪಡೆದಿಂದುವಲ್ಲಭಾ, ಎಂದು ಬಂದು ಪ್ರತಿಯಲ್ಲಿದೆ.

ಕರೆಯಿಸಿ ತನ್ನ ಕಾಂತೆ ಪೇಳ್ದ ಕ್ರಮಮಂ ಪೇೞಲವರಿದು ನ್ಯಾಯ ಮೊಂದು ವಳಭಿಗೋಲೆಯುಂ ಕಳಿಪಲದಱೊಳ್,

ಇಲ್ಲಿ ಬಲಭದ್ರನೆಂಬವ ।
ನಲ್ಲಿಂದಂ ಕನಕಲತೆಯುಮಿಪ್ಪಂಗನೆಯುಂ ॥
ಬಲ್ಲಿದತನದಿಂ ತಂದೆ ।
ವ್ಮೆಲ್ಲರೊಳವಳೆನ್ನ ಕಾಂತೆಯುಂದೆನುತಿರ್ಪಂ ॥ ೧೫೭

ಎಂದಿರ್ಪ ಲೇಖಾರ್ಥಮಂ ಗೃಹಗುಪ್ತಂ ಕಂಡು

ಇಂದು ತನೂಜೆಯುಂ ಪಡೆದೆನೆನ್ನಳಿಯುಂ ನಲವಿಂದೆ ಕೂರ್ತು ಮ ।
ನ್ನಂದನೆಯೊಳ್ ಸುಖಂಬಡೆಯುತಿರ್ಪ ಪನಿಲ್ಲಿಗೆ ನಾಣ್ಚಿ ಪತ್ತ ಬೇ ॥
ಱೊಂದು ವಿಳಾಸದಿಂ ಮಧುಮತೀಪ್ರರಮೆಂಬುದಱೊಳ್ ಪ್ರಸಿದ್ಧಿಯಿಂ ॥
ದೆಂದು ಮನೋನುರಾಗದೊದವಿಂ ಗೃಹಗುಪ್ತನವರ್ಗೆ ಮೆಚ್ಚಿದಂ ॥ ೧೫೮

ಅಂತು ಗೃಹಗುಪ್ತನೋಲೆಯಂ ತಂದವರ್ಗೆ ಬೇಳ್ಪುದಂ ಕೊಟ್ಟನಂತರಂ

ಬಹಳಾಲಂಕಾರಮಂ ಮಾಡಿಸಿ ನಿಜಸುತೆಯಂ ನೋಡಲೆಂದಿಷ್ಟವರ್ಗಂ।
ಸುಹೃದಾಪ್ತರ್ ಬಂಧುಗಳ್ ಸೇವಕತತಿ ಬುಧಸಂತಾನಕಂ ತನ್ನ ಕಾಂತಾ॥
ಸಹಿತಂ ಸಂರಂಭದಿಂದಂ ಮಧುಮತಿನಗರಕ್ಕೆಯ್ದಿದಂ ನಲ್ಮೆಯಿಂದಂ ।
ಗೃಹಗುಪ್ತಂ ಲೇಖ್ಯಮಂ ತಂದವರೊಡನೊಲವಿಂ ಸಂತತಂ ಶೀಘ್ರಯಾನಂ॥

ಅಂತು ಮಧುಮತೀಪತ್ತನಕ್ಕೆ ಬಂದು ಬಲಭದ್ರನ ಮನೆಯಂ ಪುಗುವುದುಂ,

ಜನಕಂ ಮಾತೃಸಹೋದರರ್ ಪರಮಬಂಧುಶ್ರೇಣಿಗಳ್ ಭೋಂಕನಲ್ ।
ಮನೆಗೆಯ್ತಂದೊಡೆ ಪೆರ್ಚಿ ನಿಂಬವತಿಯುತ್ಸಾಹದಿಂ ತಂದೆಗೊ ॥
ಳ್ದನಸುಂ ವಂದಿಸಲಂದು ಕಂಡು ಬಲಭದ್ರಂ ವಿಸ್ಮಯಂಬಟ್ಟಿದೇ ।
ನೆನುತುಂ ನೋಡಿದನಲ್ತೆ ರತ್ನವತಿಯುಂ ಮತ್ಕಾಂತೆಯೆಂದಾವಗಂ ॥ ೧೬೦

ಬೞಿಕ್ಕಾ ಬಲಭದ್ರಂ ತನ್ನ ಕಾಂತೆಯಪ್ಪ ರತ್ನವತಿಯೆ ಕನಕಲತಾಭ್ರಾಂತಿಯುಂ ಮಾಡಿದಳ್. ಇಂದೆನ್ನ ಮಾನಮುೞಿಯಿತ್ತೆಂದು ಸಂತೋಷಂಬಟ್ಟು

ಸೆಲೆದಪ್ಪಿದೆಡೆಗೆ ಮತಿ ಸಂ ।
ಚಲಿಸಿರ್ದೆಡೆಗನ್ಯದೇಶಮಾದೆಡೆಗೆ ಖಳರ್ ॥

ಮುಳಿವೆಡೆಗೆ ಬುದ್ಧಿವೇೞಿಲ್ ।
ಕುಲವಧುವೇ ಕಾರಣಂ ಪರೀಕ್ಷೆಯಿದಲ್ತೇ ॥ ೧೬೧

ಎಂದು ಬೞಿಕಂ ಬಲಭದ್ರಂ ಗೃಹಗುಪ್ತಂಗೆ ನಮಸ್ಕರಿಸಿ ಕ್ಷೇಮಕುಶಲಮಂ ಕೇಳ್ದನಂತರಂ,

† .....ಮಧುಸುತ್ರಿಪತ್ತನ ।
ದವರೆಲ್ಲರ್ ಬಂದುಬಂದು ಸಮ್ಮುದದಿಂ ಬೊ ॥
ಪ್ಪುವ ಗೃಹಗುಪ್ತನನಪ್ಪಲ್ ।
ಸವಿಲಾಸದಿನಂದು ನೋಡಿದಂ ಬಲಭದ್ರಂ ॥ ೧೬೨

ಅಂತು ನೋಡಿ ಬಲಭದ್ರನಂ ತನ್ನಳಿಯನೆಂದಲ್ಲರ್ಗೆ ಪೇೞಲವರ್ ಬೞಿಕಾತನಂ ಸಂಪ್ರೀತಿಯಿಂದೊಡಗೂಡಿರ್ದರ್.

ಅದಱಿಂ ಕಾಮಸಂಕಲ್ಪಮೊಂದಾರಾಕ್ಷಸಂಗೆ ನಿಂಬವತೀವೃತ್ತಾಂತಮಂ ಪೇೞ್ದೊಡದಕಾರ್ತಂ ಮೆಚ್ಚಿ—ನಿತಂಬವತಿ ಪಿಗೆಯಳೆಂದು ಕೇಳಲಾಂ ಪೇೞಿಲ್ ತಗುಳ್ದನದೆಂತೆನೆ.—

ಜವವಿವ ಪೆಂಪಿನಿಂ ವಸುಮತೀಮುಖದರ್ಪಣಮಾದವಂತಿದೇ ।
ಶದೊಳೆಸೆದಿರ್ಪುಗುಜ್ಜಯಿನಿಯೆಂಬ ಪುರಂ ಸಲೆ ತತ್ಪುರಾಧಿಪಂ ॥
ಮದವದರಾತಿಮತ್ತಗಜಮರ್ದನಸಿಂಹನನಂತಕೀರ್ತಿಯೆಂ ।
ಬುದಿತಯಶೋಧಿಕಂ ಭುವನಸಾಧಕನರ್ಥಿದರಿದ್ರಬಾಧಕಂ ॥ ೧೬೩

ಅಂತಿರ್ಪನಂತಕೀರ್ತಿಗೆ

ಅತಿರೂಪವಂತೆ ಕುಸುಮಾ ।
ಯಿತತನು ಪೆಂಪಿಂ ನಿತಂಬವತಿಯೆಂಬಳ್ ಭೂ ॥
ಪತಿಯಪ್ಪನಂತಕೀರ್ತಿಗೆ ।
ಸತಿಯಾದಳ್ ನಿಚ್ಚ ನಲ್ಮೆಯೆಸೆದಿರ್ಪನೆಗಂ ॥ ೧೬೪

ಲತೆಯಿಂ ಕಲ್ಪಕುಜಂ ಮದಾಳಿಯಿನರಲ್ದೋಂಟಂ ಮರಾಳೀಲಸ ।
ದ್ಗತಿಯಿಂ ಪುಷ್ಪಸರೋವರಂ ಪ್ರತಿಭೆಯಿಂ ವಾಕ್ಯಂ ಶಮಾಸಂಗದಿಂ ॥
ಯತಿ ದಾನೋನ್ನತಿಯಿಂ ಧನಂ ಮೆಱೆವವೋಲ್ ಪ್ರಾಣೇಶ್ವರೀಸ್ನೇಹದಿಂ ।
ಸತತಂ ರಂಜಿಸುವಂ ನಿತಂಬವತಿಯಿಂ ತದ್ಭೂಭುಜಂ ಭೂಮಿಯೊಳ್ ॥

---

† ನಲವಿಂ. ಎಂದು ಒಂದು ಪ್ರತಿಯ ಪಾಠ.

ಅಂತಾನಿತಂಬವತಿ

ಕುವಲಯನೇತ್ರೆ ಸುವರ್ಣದರ್ಪಣಸಕೋಮಳ ದೇಹದೀಪ್ತಿ ಸಂ।
ಭವೆ ವಿಲಸತ್ಪಯೋಧರಿಯನಿಪ್ಪುದಱಿಂ ರವಿರಶ್ಮಿಗಳ್ಗೆ ಬೀ ॥
ಸುವ ಬಿಱುಗಾಳಿಗಳ್ಗೆಯೊಳಗಿರ್ದೊಡವೇಂ ಸೊಗಸು ಪ್ರಸಿದ್ಧಿ ದಿ ।
ಗ್ವಿವರದೊಳೊಪ್ಪುಗುಂ ಸ್ಫಟಿಕಭಾಂಡವ ದೀಪ್ತಿ ಕವ್ರೊಲ್ ನಿರಂತರಂ ॥

ಅಂತು ನಿತಂಬವತಿ ಮಾನ್ಯತೆಯು ಮಹಿಮೆಯಿಂ ಪ್ರಸಿದ್ಧಿವಡೆದಿರೆ,

ಬೆಸನಮನಾರತಂ ತಮಿವನಾಂತುಮೆ ಕೈತವವೆಯ್ದೆ ರೂಪುವೆ ।
ತ್ತೆಸೆದುದೆ ಧೂರ್ತವಿದ್ಯೆ ಮಿಗೆ ಮೆಯ್ವಡೆದಿರ್ದುದೆ ವಂಚನಾಗುಣಂ ॥
ಪುಸಿ ಕುಟಿಲಪ್ರಸಿದ್ಧಿ ನಿಜಮೂರ್ತಿಯೊಳಿರ್ದುದೆ ಪೇಟಿನಲ್ಕೆ ರಂ ।
ಜಿಸಿವನದೊಬ್ಬಂ ಕಲಹಕಂಟಕನೆಂಬನನೇಕಬುದ್ಧಿಯಿಂ ॥ ೧೬೭

ಅಂತಿರ್ದ ಕಲಹಕಂಟಕನೆಂಬ ಧೂರ್ತಂ ನಿತಂಬವತಿಯ ಪ್ರಸಿದ್ಧಿಯುಂ ಕೇಳ್ದುಜ್ಜಯಿನಿಗೆ ಬಂದು

ಕಾಲಜ್ಞಂ ಜ್ಯೋತಿಷ್ಕಂ ।
ಸ್ತ್ರೀಲಕ್ಷಣದೊಳ್ಪನೆಮಿವನತಿಮಂತ್ರಜ್ಞಂ ॥
ಭೂಲೋಕದೊಳಾನಲ್ಲದೆ ।
ಮೇಲಾರೆನಗೆಂದು ಪೊಟಲೊಳಾಡುತ್ತಿರ್ಪಂ ॥ ೧೬೮

ಪಗಲೆಲ್ಲಂ ಪೊಟಲೊಳ್ ತಿರು ।
ಗಿ ಗಿರೀಶವಿಹಾರದಡೆಯೊಳಿರುಳೆಲ್ಲಂ ಕ ॥
ಣ್ಮುಗಿದು ತನಸಿಯಮ್ರೊಲಿರ್ಪಂ ।
ಮಿಗೆ ಧೂರ್ತನೆನಿಪ್ಪ ಕಲಹಕಂಟಕನೊಲವಿಂ ॥ ೧೬೯

ಅಂತು ಕೆಲವು ದಿನಮಲ್ಲಿರ್ದುಕೊಂಡೊಂದು ದಿನಂ ನಿತಂಬವತಿಯ ಪರಿಚಯರ್ಯನುಳ್ಳೊರ್ವ ಭಿಕ್ಷುಕಿಯುಂ ಕಂಡು

ಭಿಕ್ಷುಕಿ ಕೇಳ್ ನಿನ್ನರಸಿಯ ।
ಚಕ್ಷುಃಕರವಾದದೆಡೆಗಳಂ ನೋಡಿ ಲಸ ॥
ಲ್ಲಕ್ಷಣಮಂ ಪೇಳ್ವೆಂ ನೀಂ ।
ಸುಕ್ಷೇಮದೊಳುಯ್ವುದೆನ್ನನರಮನೆಗೀಗಳ್ ॥ ೧೭೦

ಎಂದು ಕಲಹಕಂಟಕಂ ಪೇಳ್ದೊಡನಾತನೆ ಗೆಯ್ವೆನೆಂದು ಭಿಕ್ಷುಕಿಯುವ ನನಾರುಮಱಿಯದಂತೊಡಗೊಂಡು ಪೋಗಿಯರಮನೆಯ ಬಾಗಿಲೊಳಿರಿಸಿ ತತ್ಪ್ರಪಂಚಮನರಸಿಗೆ ಪೇೞೆ ನಿತಂಬವತಿಯಿಂತೆಂದಳ್:—

ಪರಪುರುಷಮುಖನಿರೀಕ್ಷಣ ।
ನರಕಕ್ಕಾಂ ಪಾತ್ರಮಲ್ತೆನವೆ ಕೇಳ್ ಸತಿಯ ॥
ಬರ್ಪರ ನಡುವೆ ತೆಱೆಯನಿಟ್ಟು ।
ದರದಿಂ ಪೋಱಗಣ್ಗೆ ನೀಡು ಚರಣಮನಂಸೀ ॥ ೧೭೧

ಎಂದು ಭಿಕ್ಷುಕಿ ಪೇೞ್ದೊಡಾತನನೊಡಗೊಂಡು ಬಾಯೆಂಬುದುಂ, ಆವ ಳೊಡಗೊಂಡು ಬಂದು, ನಿತಂಬವತಿಯು ಕಲಹಕಂಟಕನ ನಡುವೆ ತೆಱೆಯನಿ ಟ್ಟನ್ನುದೇವಿ ಪಾದಮಂ ಲಕ್ಷಣಮಂ ನೋಡಲ್ ಪೊಱಗೆ ನೀಡೆಂಬುದುಂ

ಸೋಲದೊಳಾತ್ಮವಲ್ಲಭನಲಂಪು ಮಿಗಲ್ ಪರಿಚುಂಬಿಸಲ್ಕೆ ತಾಂ ।
ಬೂಲರಸದ್ರವಂ ವಿಮಳತದ್ದಶನದ್ಯುತಿ ಪತ್ತಿದಂತೆ ಸ ॥
ಲ್ಲೀಲೆಯೊಳಾಂತಲಕ್ತಕರಸಂ ನಖದೀಪ್ತಿ ಕರಂ ಕವಲ್ತಿರಲ್ ।
ಬಾಲಕಿ ನೀಡಿಗಳ್ ಪದೆದು ನೂಪುರರಂಜಿತಪಾದಪದ್ಮಮಂ ॥ ೧೭೨

ಅಂತು ನಿತಂಬವತಿ ಪೊಱಗಣ್ಗೆ ಪಾದಮಂ ನೀಡಲದಂ ಕಲಹಕಂಟಕಂ ಪಿಡಿದು,

ಜಗತೀಕಾಂತನ ಸತಿಯಂ ।
ಖಗೆ ಲಕ್ಷಣಮಂ ನಿಧಾನಿಸಲ್ಕಱಿಯೆಂ ಕೇಳ್ ॥
ಮೃಗನಯನೆ ನಿನ್ನ ಪದಮಂ ।
ಬಗೆ ಮಿಗಲಾಂ ನೋಂಕಿ ಲಕ್ಷಣಂಬಡೆದಿರ್ದೆಂ ॥ ೧೭೩

ಎಂದನಂತರಂ,

ಚರಣಾಂಗುಷ್ಠಮನೀಕ್ಷಿಸ್ದು ನೂಪುರಮನಾಪಿರ್ಂದುಚಿರ್ ಕೈನೀಡಿ ಬಂ।
ಧುರಮಪ್ಪೊಳ್ದೊಡೆಯೊಳ್ ನಖಾಗ್ರಪತಿಯಿಂ ನೀಬ್ವಿಂದದಿಂ ರೇಖೆಯೊಂ ॥
ದಿರಡಂ ಮಾಡಿ ಕೞಲ್ದು ನೂಪುರಮನೊಂದಂ ಕೊಂಡು ತದ್ವ್ಯಾಜಮಂ ।
ಬಿರದಿಂದಂ ತಳೆದಂ ಮಹಾತ್ವರಿತದಿಂದಾಧೂರ್ತನಿಂಪ್ರದ್ವಿಷಾ ॥ ೧೭೪

ಅಂತವನೊಳ್ದೊಡೆಯಂ ಕೀೞು ನೂಪುರಮಂ ಕೊಂಡು ಪೋಗಲೊಡಂ,

ಏಗೆಯ್ವೆನಿದೇಕಾರಣ ।
ಮೀಗಳ್ ಧೂರ್ತಂಗೆ ಚರಣಮಂ ತೋಱಿದೆನು ॥

ದ್ವೇಗಮನೇತೆಱದಿಂದಂ ।
ನೀಗುವೆನಾನೆಂದು ಕಾಂತೆ ತಳವೆಳಗಾದಳ್ ॥ ೧೬೫

ಅಂತು ನಿತಂಬವತಿ ದುಗುಡದಿಂ ಮುಸುಕಿಟ್ಟೊಱಗಿರಲಿತ್ತಲ್,

ಸುರಗಿರಿಯೊಳ್ ಏನನಾಯಂಕ ।
ಕಿರಣಂ ಮೊಱೆವಂತೆ ತಪ್ತಹೇಮಾಶ್ರಯಬಂ ॥
ಧುರರತ್ನದಿನೊಪ್ಪುವ ನೂ ।
ಪುರಮಂ ಪೌರಗೆ ತೋಱಿದಂ ತಮ್ಮಾತರ್ಗಂ ॥ ೧೬೬

ಅಲ್ಲಲ್ಲಿ ತೋಱಿಸುತ್ತುಂ ।
ವೆಲ್ಲನೆ ಕೊಂಡುಯ್ದನಂತಕೀರ್ತಿಗೆ ತೋಱಲ್ ॥
ವಲ್ಲಭೆಯ ನೂಪುರಂ ತಾ ।
ನಿಲ್ಲಿಗೆ ಬಂದಂದನಾವುದೆಂದನಿಳೇಶಂ ॥ ೧೬೭

ಎಂದನಂತಕೀರ್ತಿಯೆಂಬುದುಂ ಕಲಹಕಂಟಕನಿಂತೆಂದಂ:—

ನಿನ್ನಿರುಳೊಂ ಶ್ಮಶಾನದೆಡೆಯಲ್ಲಿ ಸಮಾಧಿಯೊಳಿರ್ದ ವೇಳೆಯೊಳ್ ।
ಕನ್ನೆಯ ರೂಪಿನಿಂ ಪೆಣನನೀಬ್ದು ತಿನಲ್ಬರುತಿರ್ದ ದೈತ್ಯೆಯುಂ ।
ಬನ್ನಮನೆಯ್ದಿಸಲ್ಪಿಡಿದು ಸೂಲದೊಳಾನಿಱಿಯಲ್ಕೆ ನೊಂದವಳ್ ।
ತನ್ನನಡುತರ್ಪ ಪೋಗುತಿರೆ ಬಿಬ್ದುದು ನೂಪುರಮಾಕೆಯಂಘ್ರಿಯಿಂ॥ ೧೬೮

ಎಂಬುದುಮನಂತಕೀರ್ತಿ ವಿಚಾರಂಗೆಯ್ದು,

ಚರಿಕಿಸಿ ನಿತಂಬವತಿ ತ ।
ನ್ನೆರಡುಂ ನೇವುರಮನೊಲ್ದು ಕಳಪುವುದೆಂದಾ ॥
ದರದಿಂ ಕಂಚುಕಿಯಂ ನೃಪ ।
ವರನಟ್ಟಲ್ ಪೋಗಿ ಬಂದನವನನಾಕ್ಷಣದಿಂ ॥ ೧೬೯

ಅಂತಾಕಂಚುಕಿ ಬಂದು

ದೇವಿಯುರಿದೊಂದು ನೇವುರ ।
ಮಾವೆಡೆಯೊಳ್ ಬಿಬ್ದುದೆಂದು ತಿಳಿಯೆಂ ನೀನೊ॥
ಲ್ದೀವುದೊಂದು ನೇವುರಮನವ ।
ನೀವಲ್ಲಭನೆಡೆಗೆ ಕೊಂಡು ಪೋಗೆಂದಿತ್ತಳ್ ॥ ೧೭೦

ಅದಲ್ಲದೆಯುಂ,

ತೊಡೆಯೊಳ್ ಪುಣ್ಣೊಂದಾದ ।
ತ್ತೊಡಿಯನಿಡಲ್ಬಾರದೆಂದು ನರಳುತ್ತುಂ ತಾಂ ॥
ಕಡಿಕೆಯನೊಳಕೊಂಡಿರ್ದಳ್ ।
ಮಡದಿ ಕರಂ ದುಗುಡದಿಂ ಧರಿತ್ರೀನಾಥಾ ॥ ೧೮೧

ಎಂದು ಪೇೞಲೊಡಂ,

ಪೆಱತೇಂ ವಿಚಾರವುಂಗನೆ ।
ನೆಱೆ ರಕ್ಕಸಿಯಪ್ಪಾದಳಲ್ಲದಿದಿರ್ದೊಡೆ ರತ್ನಂ ॥
ತುಱುಗಿದ ಪೊಸಕಾಲ್ಗೊಡವೇ ।
ತೆಱದಿಂದೀತಂಗೆ ಬಂದುದಾಪಿತೃವನದೊಳ್ ॥ ೧೮೨

ಎಂದನಂತಕೀರ್ತಿ ಮತ್ತಂ,

ಇಲ್ಲಿರ್ದೊಡೆ ತತ್ಪತಿ ನ ।
ಮ್ಮೆಲ್ಲರನಿಂದಿರುಳ್ ತಿಂದು ನುಂಗುವಳದಱಿಂ ॥
ಮೆಲ್ಲನೆ ತತ್ಪಿತೃವನದೊಳ್ ಬ ।
ಲ್ಲಂದದಿನಿರ್ಪುದೆಂದು ನೂಂಕುವೆನವಳಂ ॥ ೧೮೩

ಎಂದನಂತಕೀರ್ತಿ ನಿತಂಬವತಿಯುಂ ನಡುವಿರುಳೊಳೆಯ್ದಿ ಶ್ಮಶಾನದೊಳ್ ನೂಂಕಿ ಪೋಗೆ,

ಮದಮುಱಿಯಲ್ ನಿತಂಬವತಿ ತನ್ನ ಮನೋವ್ಯಥೆಯಿಂ ಶ್ಮಶಾನಮ ।
ಧ್ಯದೊಳಿಸೆದಿರ್ದ ತತ್ಕಲಹಕಂಟಕನಂ ತಪೆ ಕಂಡು ನೀನೆ ಮಾ ॥
ಡಿದ ಕುಹಕಂ ಫಲಂಬಡೆದುದಿನ್ನೆನಗಾರ್ ಗತಿ ನೀನೆ ರಕ್ಷಿಸೋ ।
ವಿದೆ ತನುವೆಂದು ಬಿದ್ದಳಡಿಯೊಳ್ ಕರುಣಂ ಕಡೆಗಣ್ಮುತಿರ್ಪಿನಂ ॥ ೧೮೪

ಅಂತವಳ್ ದೈನ್ಯಭಾವದಿಂ ಪೇೞಲೊಡಂ

ತಾನೆಸಗಿದ ಕಾರ್ಯಂ ಸ ।
ನ್ಮಾನದಿನೆಯ್ತಂದುದಿರ್ದ ತಾವಿಂಗೆಂದಾ ॥
ಮಾನಿನಿಯುಂ ಕೊಂಡೊಯ್ದಂ ।
ತಾನೊಲವಿಂ ಕಲಹಕಂಟಕಂ ಸುರವೈರೀ ॥ ೧೮೫

ಅದಱಿಂ ಮತಿಯೂಹೆಗೆ ಸಾಧ್ಯಮಪ್ಪುದಿಲ್ಲೆಂದು ಬ್ರಹ್ಮರಾಕ್ಷಸಂಗಾಂ ಪೇೞಲಾತನತಿತುಷ್ಟನಾಗಿ ಎನ್ನಂ ಮನ್ನಿಸಿದಪೆನೆಂಬ ಸಮಯದೊಳ್

ಆಲಿವರಲ್ಗಳುಂ ಮುಱಿಯ ಬಲ್ವಸಿಯುಂ ಮುಗಿಲಿಂದೊಸರ್ವವೋಲ್ ।
ಡಾಳದ ಕಣ್ಣ ಸೀರ್ವನಿಗಳುಂ ಪೊಸಮುತ್ತುಗಳುಂ ನಭೋಂತದೊಳ್ ॥
ಸಾಲಿಡಲುರ್ವಿಯೊಳ್ ಪದೆದು ಕಂಡಿದು ಚೋದ್ಯಮೆನುತ್ತೆ ಭೋಂಕನಲ್ ।
ವೆಱಲನೋಱಲ್ದು ನೋಡಿ ಮಿಗೆ ಕಂಡೆನದೊರ್ಬ ಮಹೋಗ್ರದೈತ್ಯನಂ ॥

ಕಡುಪೆಸೆಯಲ್ಕೆ ಪೂರ್ಣಶಶಿಮಂಡಲಮಂ ಮುಳಿಸಿಂ ವಿಧುಂತುದಂ ।
ಪಿಡಿದೆಳೆವಂತೆ ಚಂದ್ರಮುಖಿಯೊರ್ಬಳನಂದು ಮಹೋಗ್ರರಾಕ್ಷಸಂ ॥
ಜಡಿಯುತೆ ತಾರಕಾಪಥದೊಳಾರ್ಪಿನೊಳಂಜದೆ ಕೊಂಡು ಪೋಪನಂ ।
ತಪೆಯದೆ ಕಂಡು ವಿಸ್ಮಯದೊಳೀಕ್ಷಿಸುತಿರ್ದನಿಳಾಧಿನಾಯಕಂ ॥ ೧೮೭

ಅಂತು ನೋಡಿ,

ಸುಡುಸುಡು ಮುಚ್ಚರೀರದಿರಮಂ ಪವನಾಧ್ವದೊಳಾರ್ದು ರಾಕ್ಷಸಂ ।
ಮಡದಿಯನೊರ್ಬಳಂ ಕಡುಪಿನಿಂದೆಳೆಮುಯ್ದಪನೆಯ್ದೆ ಕಂಡು ಬೆಂ ॥
ಬಿಡಿಯದೆ ನೋಡುತಿರ್ಪ ತಿಱನಾಯ್ತೆನಗಂಬರಯಾನವಿದ್ಯೆಯಂ ।
ಕುಡನೆ ವಿಧಾತ್ರನೆಂದುಸಿರ್ದನೆನ್ನೊಡನಿರ್ಪ ನಿಶಾಚರೇಂದ್ರನೊಳ್ ॥೧೮೮

ಅಂತೆನ್ನೊಡನಿರ್ದ ಬ್ರಹ್ಮರಾಕ್ಷಸಂಗೆ ಪೇೞ್ದಾಕಾಶದೊಳ್ ಪೋಪ ರಾಕ್ಷಸನಂ ತೋಱಲವನಂ ಬ್ರಹ್ಮರಾಕ್ಷಸಂ ಕಂಡು

ಬಿಡುಬಿಡು ದೈತ್ಯ ಕೋಮಳೆಯನೆಲ್ಲಿಗೆ ಪೋವಪೆಯೆಂದು ದಾಡೆಯಂ ।
ಜಡಿವ ಪದಾಗ್ರದಿಂ ನೆಲಮನುಯ್ಗ್ಗು ಪ್ರಟಂನೆಗೆದಂಬರಕ್ಕೆ ಬೆಂ ॥
ಬಿಡದೆ ತುಡುಂಕಿ ತದ್ದನುಜನಂ ಗಗನಸ್ಥಳದಲ್ಲಿ ವಿಘಾಱಿಯೊಂ ।
ದಡಿಯಿಡಲೀಸದಾಂತು ಕಡುಪಿಂ ಪೊಣರ್ದಂ ಕಲಿ ಬೊಮ್ಮರಕ್ಕಸಂ ॥೧೮೯

ಅದೆಂತೆನೆ:—

ದಾಡೆಗೆ ದಾಡೆ ಗರ್ಜನೆಗೆ ಗರ್ಜನೆ ಘಾತಿಗೆ ಘಾತಿ ತೋಳ ಬ ।
ಲ್ಗಾಡಿಗೆ ಗಾಡಿ ವಂಚನೆಗೆ ವಂಚನೆಯುಗ್ರತೆಗುಗ್ರಮಸ್ತ್ರಸಂ ॥
ಪೀಡೆಗೆ ಪೀಡನಂ ನಿಜಕರಾಳಮುಖಕ್ಕೆ ಕರಾಳವಕ್ತ್ರಮು ।
ಲ್ಗಾಡದೆ ನಿಂದು ತಳ್ತಱಿದರೊರ್ಬರನೊರ್ಬರುದಗ್ರದಾನವರ್ ॥ ೧೯೦

ಅಂತವರಿರ್ಬರಾಕಾಶದೊಳತ್ಯಾತುರಮಾಗಿ ಕಾದುವ ಸಮಯದೊಳ್

ಸೂಸುವ ಕುಂತಳಂ ನಸು ಬೞಲ್ದ ಕುಚಂ ಪಱಿಪಟ್ಟ ಹಾರಮು ।
ಬ್ಬಾಸವದೊಳ್ ತೊಡರ್ದ ನಱುಸುಯ್ ಕುಚದಿಂ ತೆರಳ್ದುತ್ತರೀಯಕಂ ॥

ಗಾಸಿಗೆ ಕಂದಿದಂಗಮೆನಸುಂ ಭಯಮುಂ ತಳ್ದಿರ್ದ ಚಿತ್ತಮು ।
ತ್ಯಾಸುರಮಪ್ಪಿನಂ ಗಗನದಿಂ ಸತಿ ಭೋಂಕನೆ ಬಿಳ್ದಳುರ್ವಿಯೊಳ್ ॥ ೯೧

ಅಂತೊರ್ಬಳ್ ಕಾಂತೆ ಗಗನದಿಂದವನಿಗೆ ಬಿಳ್ದುದಂ ಭೋಂಕನೆ ಕಂಡಾಂ ಪೆದಿರ್ ನೋಳ್ಪನಂ

ಅದನೇವೇಳ್ಪುದೊ ಕಂತುಕಾವತಿಯವಳ್ ತಾನಾದಳಾಂ ನೋಳ್ಪುದಂ ।
ಕದಪಂ ಕೆಯ್ಯೊಳವುಚಿರ್ ಪೂರ್ಣಕುಚಯುಗ್ಮಕ್ಕೊಪ್ಪೆ ಸಂವ್ಯಾನಮಂ ॥
ಪದುಳಂ ಮಾಡಿ ನಭೋಂತರಂಬಿಳಗೆ ಬಿಳ್ದಳ್ ಕ್ಲೇಶದಿಂ ನಾಣ್ಚಿ ಬಾ ।
ಡಿದ ವಕ್ತ್ರಾಂಬುಜದಿಂ ಮದೀಯಮುಖಮಂ ಸಾಪೇಕ್ಷದಿಂ ನೋಡಿದಳ್ ॥

ಅಂತವಳನ್ನಂ ನೋಳ್ಪ ಸಮಯದೊಳ್

ಗಗನಸ್ಥಳದೊಳ್ ದಾನವ।
ರಗಣಿತಶಸ್ತ್ರಾಸ್ತ್ರಹತಿಗಳಿಂ ತಳ್ತುಱಿದು ॥
ರ್ವಿಗೆ ಕಡಿಗಳಾಗಿ ಬಿಳ್ದರ್ ।
ಮಿಗೆ ರೌದ್ರಶರೀರಿಗಳ್ ಗತಪ್ರಾಣರ್ಕಳ್ ॥ ೯೩

ಅಂತಿರ್ಬರ್ ದೈತ್ಯರ್ ಗತಪ್ರಾಣರಾಗಿ ಬಿಳ್ದುದಂ ಕಂಡನಂತರಂ ಕಂತುಕಾವತಿಯನಾಶ್ವಾಸಿಸಿ ತತ್ಕಾಂತೆಸಹಿತಲ್ಲಿಂ ತೆರಳ್ದು ಪೂರ್ವಬಹಿತ್ರಮನೇಱಲೊಡಂ,

ಸ್ಫುಟದಿಂ ಭಾವಿಸಿ ಸಿಂಹದೇಶದ ದಿಶಾಭಾಗಕ್ಕೆ ಪೋಪಂದದೊಳ್
ಪಟಮಂ ಬಿಟ್ಟೊಡೆ ತದ್ಬಹಿತ್ರಮನಿಲೋದ್ಯನ್ಮಾರ್ಗದೊಳ್ ಬೇಗದಿಂ ॥
ತಟಮಂ ಸಾರ್ದಿರೆ ಕಂತುಕಾವತಿಯನಾಗಳ್ ಭೀಮಧನ್ವಾಂಕನಂ ।
ದಿಟಮಾಂ ಕೊಂಡಿಳಿದೆಂ ನೆಲಕ್ಕೆ ಪದೆಪಿಂದಾಯಿರ್ವರಂ ಭೂಮಿಪಾ ॥ ೯೪

ಅಂತಾಂ ತಡಿಗಿಳಿಯಲೊಡಂ,

ಸುತೆಯುಂ ರಾಕ್ಷಸನುಯ್ದನಾತ್ಮತನಯಂ ವಾರಾಸಿಯೊಳ್ ಪೋದನೆ ।
ನ್ನ ತನೂಜೀವನಮೇವುದೆಂಬ ಬಹುಚಿಂತಾವಹ್ನಿಯಿಂ ಜೀವಮಂ ॥
ಕ್ಷಿತಿನಾಥಂ ಮಿಗೆ ತುಂಗಧನ್ವನೊಲವಿಂ ಬಿಟ್ಟಂದಮೊಂದೆಂಬ ವಾ ।
ರ್ತೆ ತರಂಗೊಂಡಿರೆ ಕೇಳ್ದನಲ್ತೆ ತಡಿಯೊಳ್ ಭೂಪಾಲಚೂಡಾಮಣೀ ॥

ಅಂತಾನಾವಾರ್ತೆಯುಮಂ ಕೇಳುತ್ತುಂ ಸಿಂಹಪುರಕ್ಕೆ ಬಂದು

ಅನುವಾಗಿರ್ದ ನೃಪಾಲನಂ ವಿವಿಗಳೋಂಕಂ ನೂತ್ನಸಾಮ್ರಾಜ್ಯಮುಂ ।
ಗನೆಯುರ ತಚ್ಚತುರಂಗಸೇನೆ ಜನತಾವಿಸ್ತಾರಸಂಪತ್ತಿಯುಂ ॥
ದೆನಗಾಗಲಿ ಸಲೆ ಭೀಮಧನ್ವನದಱಿಂ ಮುಷ್ಟಭೃತ್ಯನಾದಂ ಮನ ।
ಕ್ಕನುರಾಗಂ ಮಿಗೆ ಕಂತುಕಾವತಿಯೊಳಾಂ ಕೂಡಿರ್ದೆನಾಮೀಶ್ವರಾ ॥

ಅಂತು ಭೀಮಧನ್ವನೆನಗೆ ಭೃತ್ಯನಾಗಿ ಕಂತುಕಾವತಿ ಸತಿಯೆನಗಾಗಿರೆ ಕೋಶದಾಸಂಗೆ ಚಂದ್ರಸೇನೆಯುಂ ಕೊಟ್ಟನಂತರಂ ನಿಮ್ಮಡಿಯುನಱಸಲೆಂದಿಪೊಂಗಳ್

ನಿಮ್ಮಡಿಗಳ್ಗೆ ಮಿತ್ರನೆನಲೊಪ್ಪುವ ಸದ್ಗುಣಿಯಂಗರಾಜನೆ ।
ನ್ನಮ್ಮದದಿಂ ಸಹಾಯಗುಣಮಂ ಮೆಱೆಯಲ್ಕಱಸಲ್ಕೆ ಸೇನೆಯುಂ ॥
ಗಮ್ಮನೆ ಕೂಡಿಕೊಂಡು ಮನದುತ್ಸವದಿಂ ನಡೆತಂದು ದೇವ ಕಂ ।
ಡೆಮ್ಮೃದುಪಾದಪದ್ಮಯುಗಮಂ ನಿಜಮೂರ್ತಿಯನೆನ್ನ ಪುಣ್ಯದಿಂ ॥ ೧೯೩

ಎಂದು ಮಿತ್ರಗುಪ್ತಂ ತನ್ನ ವೃತ್ತಾಂತಮಂ ರಾಜವಾಹನಂಗೆ ಪೇೞ್ದುದುಂ,

ಕೂಡಿದ ವಿಂಧ್ಯವಾಸಿನಿಯ ಜಾತ್ರೆಗೆ ಪೋಗಿ ವಿಪಂಚಿನಾದಮಂ ।
ಗಾಡಿ ಮಿಗಲ್ಕೆ ಕೇಳ್ದು ನಯನೇಂದ್ರಿಯಮುಬ್ಬುರ್ತಿರಲ್ಕೆ ಕಂತುಕ ॥
ಕ್ರೀಡೆಯನೊಲ್ದು ನೋಡಿ ಸುಖದಿಂ ಪರರಾಜ್ಯಮನಿಂತು ಸಾಧ್ಯಮಂ ।
ಮಾಡಿದ ಮಿತ್ರಗುಪ್ತ ನಿನಗಾರ್ ಸರಿಯೆಂದನಭಂಗವಿಕ್ರಮಂ ॥ ೧೯೪

॥ ಗದ್ಯ ॥

ಇದು ನಿಖಿಲಬುಧಜನಮನೋವನಜವನದಿವಾಕರಕಿರಣಪ್ರತಿಮಪ್ರಸನ್ನ
ಶ್ರೀಮದಭಂಗವಿಟ್ಠಲಪದಾಂಭೋಜಮತ್ತಮಧುಕರ
ಮಧುಸೂದನನಂದನ ಸರಸಕವಿ ಚಾವುಂಡರಾಜ ವಿರಚಿತಮಪ್ಪ

ಅಭಿನವ ದಶಕುಮಾರಚರಿತೆಯೊಳ್

ಮಿತ್ರಗುಪ್ತಕಥಾವೃತ್ತಾಂತಂ

ದ್ವಾದಶಾಶ್ವಾಸಂ

॥ ತ್ರಯೋದಶಾಶ್ವಾಸಂ ॥

—ಮಂತ್ರಗುಪ್ತನ ನಿರೋಷ್ಠ್ಯದ ಕಥೆ—

ಶ್ರೀರಂಜಿತವಕ್ಷಂ ಧಾ ।
ತ್ರೀರಮಣಂ ಮಂತ್ರಗುಪ್ತನಂ ನೋಡಿ ತದಾ ॥
ಕಾರಸ್ಥಿತಿಯಂ ಕೇಳ್ದಂ ।
ಧೀರಂ ಕಡುಗೂರ್ತಭಂಗವಿಟ್ಠಲಭೃತ್ಯಂ ॥ ೧

ಅಂತು ರಾಜವಾಹನಂ ಮಂತ್ರಗುಪ್ತನ ಮುಖಮಂ ನೋಡಿ ನೀನೆಸಗಿದ ಕಾರ್ಯಮಂ ಪೇಳೆಂಬುದುಂ,

ತನ್ನಧರಂ ಮನೋರಮೆಯ ದಂತಪರಿಕ್ಷತದಿಂ ಪಿಸುಳ್ದರ ।
ಕ್ತಂ ನೆಲೆಗೆಟ್ಟಿರಲ್ಕೆ ತುಟಿ ಮುಟ್ಟದೆ ಕೂರ್ತು ಕಥಾಪ್ರಪಂಚಮಂ ॥
ಬಿನ್ನವಿಸಲ್ಕೆವೇಟ್ವಡೆನುತುಂ ಸುಭಗಂ ಸುಖಿ ಮಂತ್ರಗುಪ್ತನ ।
ತ್ಯುನ್ನತಬುದ್ಧಿಯಿಂ ಸಹಜಕಾರ್ಯಮನಂದುಸಿರ್ದಂ ನಿರೋಷ್ಠ್ಯದಿಂ ॥ ೨

ಅದೆಂತೆನೆ:—

ಧರಣೀನಾಯಕ ಕೇಳ್ ನಿಜಾಂಘ್ರಿಸರಸೀಜಾತಂಗಳಂ ಕಾಣಲಾ ।
ದರದಿಂ ಸಾಗರಚೇಲಧಾರಿಣಿಯನೆಲ್ಲಾ ಚೆಂದದಿಂ ಸಂತತಂ ॥
ತಿರುಗಿ ಶ್ರೀಗೆ ನಿರಂತರಂ ನೆಲೆಯೆನಲ್ ಸಾರ್ದಿರ್ದ ಸಲ್ಲಕ್ಷಣಂ ।
ಸ್ಥಿರದಿಂದಿರ್ದ ಕಳಿಂಗದೇಶದೆಡೆಯಂ ಸಾರ್ದೆಂ ಸದಾನಂದದಿಂ ॥ ೩

ಅಂತು ಕಳಿಂಗದೇಶಮನೆಯ್ದಿ

ಧರಣಿಯ ಕಂಠದೆಕ್ಕಸರದಂದದಿನಗ್ಗಳದಿಂ ನೆಗಳ್ತೆಯಿಂ ।
ದಿರೆಯ ನಿಜಾನನಕ್ಕೆಡರ್ದ ರತ್ನದ ಕನ್ನಡಿಯಂದದಿಂ ನಿರಂ ॥
ತರನಯಕಾಂತಿಯಂ ತಳೆದ ಸಜ್ಜನಸಂತತಿಯಿಂದೆ ಕೀರ್ತಿಯಂ ।
ಧರಿಸಿದ ತತ್ಕಳಿಂಗನಗರಾವತಿಯಂ ಸಲೆ ಕಂಡೆನುರ್ವಿಪಾ ॥ ೪

ಅಂತಾ ಕಳಿಂಗನಗರಿಯಂ ಕಂಡಾಕ್ಷಣದಿಂ

ಸಂತತರಥಾಂಗತತಿಗತಿ ।
ಚಿಂತಾಹತಿ ನೆಲಸೆ ಧರೆಗೆ ನಿದ್ರಾಲಸ್ಯಂ ॥

ತಿಂತ್ರಿಣೀವಿಪಿನಾಗ್ರೆ ಸರಸಿಜ ।
ಕಾಂತಂ ತಾನಸ್ತಗಿರಿಗೆ ನೆಟ್ಟನೆ ಸಾರ್ದಂ ॥ ೫

ಅಂತಸ್ತಗಿರಿಯನೆಯ್ದಲ್ಕಾಕಳಿಂಗನಗರಿಯಂತಿಕಶಾಖೆಗಳಲ್ಲಿ ಕಣ್ಗೆಯ್ಯಲೆಂದಿರ್ದ ಕಿನ್ನರಜಾಯಾಕಾಂತರ

ಇನಿತಾಯಾಸಂಗೆಯ್ದಲ್ ।
ತನಗೇತಱ ಸಿದ್ಧಿ ತಾನದೆಲ್ಲಿಯು ಸಿದ್ಧಂ ॥
ಸನಯಂ ಆನಲ್ತೆ ಸಿಸಿದ ।
ದನಿ ಕಣ್ಗೆಯ್ದಲನಱ ಸರಿಸಕೆ ನಡೆದೆಂ ॥ ೬

ಆವನಿಯು ಪಿಂದನೆ ನಡೆಯೆ,

ಹರಯಲ್ ಜಾಯಾಕಾಂತರ್ ।
ತರದಿಂ ಕಿನ್ನರಶರೀರಿಗಳ್ ನಡಗರದಿಂ ॥
ದಿರದೆಯ್ದಿದರಾಕ್ಷಣದಿಂ ।
ಪರಧರಣಿಗೆ ಕಂಡನಾನದಂ ಧರಣೀಶಾ ॥ ೭

ಅಂತಾಕಿನ್ನರಜಾಯಾಕಾಂತರ್ ಚಿತಾಗ್ನಿಸ್ಥಾನಕ್ಕೆಯ್ದಲೊಡಂ,

ಜಡೆ ಚಂಚತ್ಕಂಥೆ ರಕ್ಷಾಂಕಿತನಿಖಿಳಶರೀರಂ ಸಸಿದ್ಧಾರ್ಥಹಸ್ತಂ ।
ಕಿಡಿಗಣ್ ಕಾಯಾರ್ಥಚಿತ್ತಂ ನರನಿಕರಲಸಜ್ಜಾಂಗಲಸ್ಥಾಲಿ ಲಕ್ಷ್ಯಂ ॥
ಗಡಿಗೆಟ್ಟಿದ್ದಿಗ್ರಂಥನಂ ತನ್ನಿದಿರ್ಗತಿಶಯದಿಂದಿರ್ದ ಕಿರ್ಚಿಯ್ದ ಚೆನ್ನಿಂ ।
ಗೆಡೆಯಾಗಲ್ಕಿರ್ದನಂದಗ್ಗಳದ ಯತಿಗಣಶ್ರೇಷ್ಠನಾಗಳ್ ಯಥೇಷ್ಟಂ ॥ ೮

ಏತೆಱದಟವಿಯೊ ಘನಶಾ ।
ಖಾತತಿಯಿಂದಲಗ್ಗಳಿಕೆಯಿಂದೆಸೆದಿರ್ದ ॥
ತ್ತಾತನ ಕೆಲದಲ್ಲಿ ದಳ ।
ವ್ರಾತಂ ತಱಿದಿರ್ದ ಶಾಖೆ ದೆಸೆಗೆಡೆವರ್ನಿಶಂ ॥ ೯

ಅಂತಾಪರಧರಣಿಯ ಶಾಖೆಯಲ್ಲಿರ್ದ ಯತಿಶ್ರೇಷ್ಠಂ ಕಿನ್ನರಜಾಯಾಕಾಂತರಂ ನಿರೀಕ್ಷಿಸಿಂತೆಂದಂ:—

ಸರಸಿಜನೇತ್ರೆಯುಂ ಘನಚಳಾಳಕಿಯುಂ ಕಳಕಂಠನಾದೆಯುಂ ।
ತರಳಕಟಾಕ್ಷೆಯುಂ ಕನಕಕಾಂತಿಶರೀರೆಯುನಿಲ್ಲಿಗೆಯ್ದಿಸಾ ॥

ದರದೆ ಕಳಿಂಗಕನ್ಯಕೆಯುಮಂದಿನೆ ಸಾಹಸದಲ್ಲಿ ಸಂದ ಕಿ |
ನ್ನರನಿರದೆಯ್ದಿ ತತ್ಸತಿಯುಮಾಯುವತಿಯುಮಾಜ್ಞೆಗೆ ತಂದನಾಕ್ಷಣಂ ‖ ೧೦

ಕನಕಘಟಸ್ತನಂ ರಜನಿರಂಜಿತದೀರ್ಘವಿಸತ್ತ್ರಳಾಳಕಾ |
ನನ ಗಜಯಾನಸದ್ಗತಿಯುಮನಂಗಶರಾಗ್ರಕಟಾಕ್ಷಕಾಂತಿ ಚಂ ‖
ದನಸನಸಾರಗಂಧ ನಿಜದೇಹಲತಾಸ್ಥಿತಿ ಜಾತರಕ್ಷೆಗಳ್ |
ಮಸುನಿದೆರ್ದೆಗಿರ್ಚನೀಯುದಿಲೆ ರಾಜಗೃಹೇಶ ಶಶಾಂಕಲೇಖೆಯುಮಾ ‖ ೧೧

ಅಂತಿರ್ದ ಕಳಿಂಗಕನ್ಯೆಯೆನಿಸಿರ್ದ ಶಶಾಂಕಲೇಖೆಯುಮಾಕಷ್ಟಯುವತಿಗಾಕಿನ್ನರಂ ತಾದೀಯೆ,

ಯುವತಿಯುವತಿಶೀಘ್ರದಿನಾಗಳ್ |
ಸತಿಯುಡಗಿಂದಗ್ನಿಯಾನನಕ್ಕಾನಂದ ‖
ಸ್ಥಿತಿಯುನೆಸಗಲ್ಕೆ ತಾಂ ತ |
ತ್ಸತಿಯುಂ ನೆನೆವಸಿಯುನಂಗಲತೆಗಾಗಿಸಿದಂ ‖ ೧೨

ಅಂತಾಯುವತಿ ಶಶಾಂಕಲೇಖೆಯುಂ ಪತಂಗೆಯ್ವ್ಯಲಾನವಂ ಕಾಣಲಾಱದೆ

ಎಲೆಲೆ ಕಷ್ಟ ನೀಂ ಯುವತಿಯ ಅಂತಕನಲ್ಲವೆ ಖಡ್ಗಧಾರೆಯುಂ |
ಲಲನೆಯ ಕಂಧರಕ್ಕೆ ಜಡಿದಾನಿಸವಿರ್ ತೆಗೆಯೊಂದಗಲ್ಚಿ ತ ‖
ತ್ಸ್ರಳಯುವತಿನಾಥನಂ ನಿಜಕರಾಸಿಯಿನಿರ್ಕಡಿಗೆಯ್ದನಾತನಾಂ |
ತೆಳ್ ಜಡೆ ಕಂಥೆಯುಂ ಸನಿನೆ ಶಾಟಿಯ ಸಂಧಿಗೆ ಸ್ಯೆತೆ ಸಾರ್ಚದೆಂ ‖ ೧೩

ಅದಲ್ಲದಾಯುವತಿಯ ಕಡಿಖಂಡಂಗಳಂ ಚಿತಾಗ್ನಿಗೀಡಾಡಲದಂ ಶಶಾಂಕಲೇಖೆ ನಿರೀಕ್ಷಿಸಿ

ಎನ್ನ ಶರೀರಂ ಸತತಂ |
ನಿನ್ನಿಂ ವಿಶಸನದ ದೆಸೆಯಿನಗಲಿತ್ತದಱಿಂ ‖
ನಿನ್ನೆಡೆಗೆ ತೆರಳ್ವಲ್ಲದೊ |
ಡೆನ್ನೆಡೆಗೆಯ್ತಂದೊಡೆನಗೆ ಸಲೆ ನೀಂ ಕೆಳೆಯಂ ‖ ೧೪

ಅದಲ್ಲದೆಯುಂ,

ಶರಣಕ್ಕೆ ನೀನೆ ಕರ್ತಂ |
ನಿರಾಶೆಯಿನ್ನಿತರಕಾಂತರೆನಗದಱಿಂದಾ ‖

ದರದಿಂ ಕಳಿಂಗನಗರಿಗೆ ।
ತೆರಳಲ್ಕಿನಿತರ್ಥಸಿದ್ಧಿಯೊಂದಲ್ ನಯದಿಂ ॥ ೧೫

ಎಂದೆನ್ನಂ ಶಶಾಂಕಲೇಖೆ ತನ್ನ ನಗರಿಗೆ ತೆರಳ್ವೆಲೆಂದಾಗ್ರಹಿಸಲನಂತರಂ ಕಿನ್ನರನಿಂತೆಂದಂ:—

ಜಾಯಾಕಾಂತರ ನಿಚ್ಚ ।
ಕ್ಕಾಯಾಸಂ ನಿನ್ನ ದೆಸೆಯಿನೀಗಳ್ ಕಳೆದ ॥
ತ್ರೀಯೆಗಾನೇಗೆಯ್ವೆಲ್ ।
ಶ್ರೇಯಸ್ಕರಕಾರ್ಯದೀಕ್ಷೆಯಂ ಪಡೆಗೆಯ್ವಾ ॥ ೧೬

ಎನಲಾತಂಗಿಂತೆಂದೆಂ:—

ಎನ್ನಂ ಶಶಾಂಕಲೇಖಾ ।
ಕನ್ನಿಕೆಯಂ ತತ್ಕಳಿಂಗನಗರಿಗೆ ತೀವ್ರಂ ॥
ಕಿನ್ನರ ನಡಸೆನಲಾತಂ ।
ತನ್ನಾಜ್ಞೆಯಿನಾಗಳಿಟ್ಟನಲ್ಲಿ ನಿತಾಂತಂ ॥ ೧೭

ಅಂತೆನ್ನಂ ಕಳಿಂಗಕನ್ಯೆಯಂ ಕಿನ್ನರಂ ಕಳಿಂಗನಗರಿಯಲ್ಲಿರಿಸಿ ತಾಂ ತನ್ನ ದೇಶಕ್ಕೆ ತೆರಳ್ವಂ ಇತ್ತಲ್ ಕಳಿಂಗಕನ್ಯೆ ತನ್ನ ಕನ್ಯಾಸ್ಥಾನದಲ್ಲಿ

ತನ್ನ ಸಖಿ ಚಂದ್ರಲೇಖೆಯು ।
ನೆನ್ನಯ ಕೆಲದಲ್ಲಿ ನಿಱಿಸಿ ತದನಂತರದಿಂ ॥
ಕನ್ನೆ ನಿಜಜನನಿಜನಕ ।
ರ್ಗನ್ನಿಟ್ಟನೆ ತಿಳುಹಲೆಯ್ದಿದಳ್ ತತ್ಕಥೆಯಂ ॥ ೧೮

ಅಂತಾಕೆ ರಾಜಾಲಯಕ್ಕೆಯ್ದಿ ತನಗಾಯತಿಯಿಂದಾದ ಸಂಕಟಸ್ಥಿತಿಯ ನಱುಹಿಯನಂತರಂ

ತೆರಳಿದ ನೇಪಧ್ಯ ಧರಣಿನಾಥನ ನಂದನೆ ನಿಚ್ಚನಿಚ್ಚಲಾ ।
ವರಿಸಿಯನೇಕತಂತ್ರಿಗಳನಗ್ಗದ ಗೀತರಸಾತಿರೇಕದಿಂ ॥
ಸ್ವರತರಸಂಗದಿಂ ಸಕಲಗಂಧದಿನೇತ್ರೆಯಬರ್ಗಳಂ ಕಳಾ ।
ಧರೆ ನಲಿದೆನ್ನ ನೀತಱದಿನಲ್ಲಿರಿಸಿಟ್ಟಳಳಾಧಿನಾಯಕಾ ॥ ೧೯

ಅಂತಾನಲ್ಲಿರಲಾಕೆ ನಾಲ್ಕೆರಡ್ದಿನಂ ಕಳಿಯೆ ಚಂದ್ರಲೇಖೆಯಾದಿಯಾದ ಸಖೀಜನರ್ ಸಹಿತಂ,

ನೆರೆವ ಸಖೀಜನಂ ಸಹಿತ ಸತ್ವರಕೆಯ್ದಿ ಶಶಾಂಕಲೇಖೆಯು ।
ಚ್ಚರಿಯೆನಲಾಗಳಲ್ಲಿ ಜಲಕೇಳಿಯನಂದೆಸಗಲ್ಕೆ ನೀಳ್ದ ತ ॥
ತ್ಸರಸಿಯನೆಯ್ದಲಾಂಧ್ರದರಸಂ ಜಯಸಿಂಹನಗಲ್ದಿ ತಾಣದಿಂ ।
ತರಳೆಯನಾಕ್ಷಣಂ ನಡೆಸಿದಂ ನಿಜದೇಶಕೆ ತನ್ನ ಕಾಂಕ್ಷೆಯಿಂ ॥ ೨೦

ಅಂತಾಂಧ್ರದೇಶದರಸು ಜಯಸಿಂಹಂ ಶಶಾಂಕಲೇಖೆ ಜಲಕ್ರೀಡೆಯಾಡಲದಂ ಕಂಡಾಕೆಯುಂ ಚಂದ್ರಲೇಖೆಯಾದಿಯಾದ ಸಕಲಸ್ತ್ರೀಯರುಂ ನೇಹದಿಂ ತನ್ನ ದೇಶಕ್ಕೆ ನಡೆಯಿಸಲಂತವನಾಂ ಕೇಳ್ದನ್ನಲ್ಲಿಯಾಸಿಂತೆಂದೆಂ:—

ಎಲ್ಲಿಯು ಕಿನ್ನರಂ ಯತಿಯುಮೆಲ್ಲಿದನೆಲ್ಲಿಯು ದೇಶಧಾತ್ರಿ ತಾ ।
ನೆಲ್ಲಿದಳಾ ಕಳಿಂಗನರನಾಥನ ನಂದನೆಯಾಕೆಯೆಂದೆನಾ ॥
ನಿಲ್ಲಿರಲಾಂಧ್ರರಾಜಜಯಸಿಂಹನರೇಶನಗಲ್ದಿಯಾಕೆಯಂ ।
ನಿಲ್ಲದೆ ತಾಳ್ದಿ ತನ್ನ ಧರೆಗೆಯ್ದಿದನೆಂದಳಲ್ದೆಂ ನಿರಂತರಂ ॥ ೨೧

ಎಂದಾಚಿಂತೆಯಿಂ ಕಳಿಂಗನಗರಿಯಲ್ಲಿರೆ

ನಾನಾದೇಶಂಗಳನ ।
ತ್ಯಾನಂದದಿನೆಯ್ದಿ ತಿರುಗಿದಾಯಾಸಂ ತ ॥
ನ್ನಾನನದೊಳಮಿಯಲಾಗಿರೆ ।
ದೀನಂ ನಡೆತಂದನಲ್ಲಿಗಾರೆಂದರಿಯೆಂ ॥ ೨೨

ಅಂತಿರ್ದ ದೇಶಾಂತರಿಯಾನಿರ್ದಲ್ಲಿಗೆಯ್ತರಲಾತನಂ ಕಂಡಿಂತೆಂದೆಂ:—

ನೀನೆತ್ತಣನೆಂದಾಂ ತ ।
ದ್ದೀನನನತ್ಯಾರ್ತದಿಂದೆ ಕೇಳಲ್ ನೀಂ ಕೇ ॥
ಳಾಂಧ್ರದೇಶದಿಂ ತತ್ತ ।
ಸ್ಥಾನಕ್ಕೆಯ್ತಂದೆನೆಂದನಾತಂ ನಯದಿಂ ॥ ೨೩

ಆದೊಡಾಂಧ್ರದೇಶದಲ್ಲಿಯ ಹದನೇನೆಂದಾಂ ಕೇಳಲಾತನಿಂತೆಂದಂ:—

ಜಯಸಿಂಹಕ್ಷಿತಿನಾಥನೀಯೆಡೆಯಿನಂದೆಯ್ತಂದ ಚಂದ್ರಾಸ್ಯೆ ನಿ ।
ಶ್ಚಯದಿಂ ಚೆನ್ನ ಕಳಿಂಗಕನ್ನೆ ನಿಜದಿ ಕಷ್ಟಗ್ರಹಾವಿಷ್ಟೆಯಾ ॥
ಗಿಯದಾರಂ ನೆನೆದೀಕ್ಷಿಸಲ್ ಕರೆಯೆ ಕೇಳಳ್ ನಾಡೆ ಸಂಜ್ಞಾತಚಿಂ ।
ತೆಯಿನಿರ್ದಂ ತದಿಳೇಶನೀಹದನನಾಂ ಕೇಳ್ದೆಂ ಕರಂ ಸಂತತಂ ॥ ೨೪

॥ ವೃತ್ತ ॥

ಗ್ರಹಂ ನೆಲಸಿ ಕಾಂತೆ ಕಣ್ದೆಱೆಯುಳ್ಳಾಗಳನ್ನಕ್ಕೆ ಕಾ ।
ಯ್ದಹಂ ಸತತರಾತ್ರಿಯೆಂದಱೆಯದೆಯ್ದೆ ಚಿಂತಾಕುಲಂ ॥
ರಹಸ್ಯದೆಡೆಗೆಯ್ದಿ ತನ್ನಯ ಸಖೀಜನಂ ಕಾಯ್ದಿರ ।
ಲ್ಕಿಹಂ ತನಗೆ ಹೇೞ್ದಳೀಸಿಖೀವೃತ್ತವಂ ಕಾಣ್ಕೆಯಿಂ ॥ ೨೫

ಅಂತಾಕೆಯಿರಲ್ ಜಯಸಿಂಹಂ
ಈಕನ್ನಿಕೆಯಂಗದಿನಾ ।
ರೀಕಷ್ಟಗ್ರಹದ ಚೇಷ್ಟೆಯಂ ಸಲೆ ಯಂತ್ರಾ ॥
ನೀಕದಿನೀಗಳ್ ಕಳೆಯಲ್ ।
ಸಾಕೆನಿಸಿರ್ದರ್ಥತತ್ರಿಯನೀಯೆನೆ ಸತತಂ ॥ ೨೬

ಎಂದತಿಚಿಂತೆಯಂ ಧರಿಸಿ

ಎಲ್ಲಾ ದೇಶದ ಪಿರಿಯರ ।
ನಲ್ಲಲ್ಲಿಗೆ ಚರರನಟ್ಟಿ ಕರಸಿದನಾತಂ ॥
ನಲ್ಲಳ್ಗದ ಗರಂ ತಾಂ ।
ನಿಲ್ಲದುದರ್ಕೆಯ್ದೆ ಚಿಂತೆಸ್ವಾಂತನಿಳೇಶಂ ॥ ೨೭

ಇದಾನಱಿದ ಪದನೆಂದಾದೇಶಾಂತರೀಯನಗೞಹರೆನ್ನ ಚಿತ್ತದೊಳಾನಿಂ
ತೆಂದೆಂ:—

ಕದಡಿಲ್ಲದೆನ್ನ ಕಾರ್ಯ ।
ಕ್ಕಿದಲ್ತೆ ಹದನಾಗಶಾಂಕರೀಯಸೀಮಂ ॥
ಪದಿನಿಲ್ಲಿಗೆಯ್ದಿಸಲ್ಕಿಂ ।
ದದಟಿಂದಾಂ ನೆನೆದೆನಧಿಕಧಿಷಣಸ್ಥಿತಿಯಂ ॥ ೨೮

ಅದೆಂತೆನೆ:

ಹಿಂದೆ ಶಶಾಂಕಶೇಖರಧರಾತ್ಪದಂತ್ರಿಕದಲ್ಲಿ ಶಾಖೆಯಿಂ ।
ಚೆಂದದಿನಿರ್ದ ಶಾಖೆವೆಡೆಯಲ್ಲಿರಿಸಿಟ್ಟ ಜಟಾಳಕಂಥೆಯಂ ॥
ತಂದತಿರಾಗದಿಂ ತಳೆದೆನಾಯತಿಯಂತಿರಲಂತ್ರದೇಶಕಾ ।
ನಂದದಿನೆಯ್ದಿ ರಾಜನಗರಕ್ಕಿರದಾಂ ಸಲೆ ಸಾದರ್ನಾಕ್ಷಣಂ ॥ ೨೯

ಅಂತಾನಂತ್ರನಗರಕ್ಕೆಯ್ದಲಪಜಂತಿಕವಲ್ಲಿ

ಕಳಹಂಸಯಾನದಿಂ ಶೀ ।
ತಳಜಳದಿಂ ಸರಸಿಜಾತಸಂತತಿಯಿಂದಂ ॥
ತಿಳಿದಿರ್ದ ತೀರಸಹಕಾ ।
ರಳತಾಳಿಯಿನಲ್ಲಿ ರಂಜಿಸಿತ್ತಧಿಕಸರಂ ॥ ೩೦

ಧೀರನರೇಂದ್ರನೀತಿನಯವಂತನಿಶಂ ಖರದಂಡರಂಜಿತಾ ।
ತಾರಗೆದಾಣಗಂತೆ ಯತಿಸಂತತಿಯಂತಿರೆ ಹಂಸಸಂಗತಂ ॥
ನಾರಿಯುರಗ್ರಹಸ್ತಚಯದಂತೆ ನಿರಂತರಕಂಕಣಸ್ಥಿತಂ ।
ಸಾರಸದೇಶ್ಯಯಿಂ ಸರಸಿ ಕಣ್ಗೆಸೆದಿರ್ದುದಿಳಾಧಿನಾಯಕಾ ॥ ೩೧

ಅಂತಿರೆ,

ಜಯಸಿಂಹನ ನಗರಿಗೆ ಸಾ ।
ರೆಯಾವ ಖರದಂಡಷಂಡವಂತಿಕವಲ್ಲಿ ॥
ಕರ್ಗಯನೆಸಗಿ ಯತಿಯು ಚೆಂವದೆ।
ನಿಯತಿಯಿನಿರ್ದಂತ್ರರಾಜನುಂ ನಲಿದೆಜಗಲ್ ॥ ೩೨

ಆಗಳ್ ಕೆಲರಂ ಶಿಷ್ಯರ ।
ನಾಗಿಸಿಯಮಾರಾಧ್ಯನಾಚನಧಿಕಧ್ಯಾನ ॥
ಕ್ಕಾಗರನಾದಂತೆ ನಿಜಕ್ಕಾ ।
ಗಗನಕ್ಕಡರ್ದ ವೃಷ್ಟಿಯಿಂದೆಸೆದಿರ್ದಂ ॥ ೩೩

ಅರಿದೆನೆ ಧರಾತಳಕ್ಕ ।
ಕ್ಷರಜ್ಞಾನಾಯಂತ್ರತಂತ್ರಸಾಧನನೆಂದೆ ॥
ಲ್ಲರ ಸನ್ನಿಧಿಯಲ್ಲಿ ನಿರಂ ।
ತರದಿಂದೆಬ್ಬಿಜಿಸೆ ಕೇಳ್ದನಾ ಜಯಸಿಂಹಂ ॥ ೩೪

ಅಂತಾನಾಸರಸಿಯ ತಡಿಯಲ್ಲಿಕರ್ಗಯನೆಸಗಿಯನಿಲಧಾರಣೆಯಿನಿರ್ದ ತಿಜನಂ ಜಯಸಿಂಹನಾಗಳ್ ಕೇಳ್ದು,

ತಪೆಯದೆಯಂತ್ರದೇಶವರಸಂ ಸಲೆಯನ್ನೆಡೆಗೆಯ್ದಿ ತ್ರೀವದಿಂ ।
ದಡಿಗೆಜಗಿವೆರ್ಲೇ ಯತಿಯ ಕೇಳ್ ದಯೆಯಿಂದೆ ಶಶಾಂಕಲೇಖೆಯಂ ॥
ಹಿಡಿವ ಗರಕ್ಕೆ ಶಾಸ್ತ್ರಗಳನಂಜದೆ ನೀನೆಸಗಂತದಂ ಕರಂ ।
ಜಡಿಯದೊಡೆನ್ನ ದೇಹಗತಿ ನಿಲ್ಲದಿದೇ ನೆಲೆಯೆಂದನಾಕ್ಷಣಂ ॥ ೩೫

ಅಂತೆನಲಾಗಳಾನತಿಧ್ಯಾನದಿಂ ಕಣ್ದೆಱೆಯದಿರ್ದೊಡೆ
ಕೆಲದಲ್ಲಿ ನಿಂದ ಶಿಷ್ಯರ್ ।
ಕೆಲರೆಲೆ ಯತಿನಾಥ ಚಾನದಿಂದೆ ನಿಶಾಂತಂ ॥
ನೆಲಸಿರದೆ ದಯೆಯಿನೀಕ್ಷಿಸಿ ।
ಸಲಹಂತ್ರಧರೇಶನಂ ಧರಾಧರಧೈರ್ಯಾ ॥ ೩೬

ಕಂಗಳನರೆದೆಱೆದೀಕ್ಷಿಸಿ ।
ಯಂಗಜಹರರಕ್ಷೆ ನಿನಗೆ ನೆಲಸಲಿ ಘನದೇ ॥
ಶಂಗಳ್ ನಿನಗಾಗಲಿ ನಿಜ ।
ಸಂಗತಜಯಸಿದ್ಧಿಯಕ್ಕೆ ಕೇಳ್ ಜಯಸಿಂಹಾ ॥ ೩೭

ಎಂದಾತನಂ ಹರಸಿಯನಂತರಂ ಶಶಾಂಕಲೇಖೆಗಾದ ಗ್ರಹಸಂಹಾರಸ್ಥಿತಿ ಯನಿಂತೆಂದಂ:—

ಧರೆಯಧಿನಾಥ ಕೇಳ್ ನಿನಗೆ ರಕ್ಷೆಯನಂತಿಕದಲ್ಲಿ ಕಟ್ಟಿ ತ ।
ಳ್ತರೆ ನಿಜಕರ್ಣದಲ್ಲಿ ಕಿಱಿದಕ್ಕರದಾಯತಿಯಂ ತೆರಳ್ದಲೀ ॥
ಸರಸಿಯ ನೀಳ್ದಗಾಧಜಲದಲ್ಲಿರಲನ್ಯಶರೀರಿಯಾಗಿ ನೀಂ ।
ತರಳೆಯನಂಟಲೊಕೆಯ ಗರಂ ಸಲೆ ನಿಲ್ಲದಿದಿವಳ್ತು ಸಾಧನಂ ॥ ೩೮

ಎಂದಾತನನಾಸರಸಿಯ ಜಲಾಂತದಲ್ಲಿರಲೊಟ್ಟಿಗೆಯ್ಯಲಾತನದನಂಗೀಕ ರಿಸಿ, ಆಬೞಿಕ ರಕ್ಷೆಯ ಸಿದ್ಧಾಕ್ಷರಂಗಳಂ ನೀನೆನಗೆ ದಯೆಗೆಯ್ಯೆನಲಾನಿಂ ತೆಂದಂ:—

ಕಡೆಗಣಿಸಿ ನಾಲ್ಕೆರಡ್ದಿನ ।
ದೆಡೆಯಂ ಸ್ಮರಿಸಿಯನಂತರಂ ನೀನಾನಿ ॥
ರ್ದೆಡೆಗೆಯ್ತರೆ ತದ್ರಕ್ಷೆಯ ।
ನಡಿಯಿಡದಿತ್ತಲ್ಲದಿಲ್ಲಿ ಜಾನಂಗೆಯ್ವಂ ॥ ೩೯

ಎಂದೊಡಂತೆಗೆಯ್ವೆನೆಂದಾತಂ ನಿಜಾಲಯಕ್ಕೆಯ್ದಿದಂ. ಇತ್ತಲಾಂ
ಸಿಕ್ಕಿದ ನರಸಂತತಿಯಂ ।
ಚಕ್ಕನೆ ತದ್ಧರೆಯನೀಗಳಾಳಲ್ಕಾನೇ ॥
ತಕ್ಕನೆನಿಸಲ್ಕೆ ಸಂದೆಗ ।
ದಕ್ಕಜದೆಡೆಯಿಲ್ಲ ನಿಶ್ಚಯಂ ತಾನಲ್ತೇ ॥ ೪೦

ಎಂದನಂತರಂ,

ಸರಸಿಯು ನೀಳ್ದಗಾಧಜಲದಲ್ಲಿ ನಿಜೇಚ್ಛೆಯಿನಗ್ರಶಾಲೆಯುಂ ।
ಸೆರಸದಿನಾಗಳಾನೆಸಗಿಯಿಟ್ಟಿಗೆಯಿಂ ನೆರೆ ಕಟ್ಟಿ ಚಿಕ್ಕ ಛಿ ॥
ದ್ರರಚನೆಯುಂ ತೆರಳ್ಚಿ ಯುಗಲಂ ನೆಱೆದಿರ್ದಱೆಗಲ್ಲನಲ್ಲಿ ತಾಂ ।
ದಿರಿಸಿದುನಂತರಂ ಸರಸಿಯಿಂ ತಳದಿಂ ತಡಿಗಂಜದಬ್ಜಯಿಂ ॥ ೪೧

ಅಂತಾನೀರಲ್ಲಿ ಶಾಲೆಯುನೆಸಗಿ ತಡಿಗೆಯ್ದಿ ನಾಲ್ಕೆರಬ್ದಂನಂ ಕಱಾಯೆ

॥ ಉಪೇಂದ್ರವಜ್ರ ॥

ಕಳಿಂಗಕನ್ಯಾಗ್ರಹದೇಹದಾಹ ।
ಕ್ಕೆಳಾಧಿನಾಥಂ ಸರಸೀತಪಕ್ಕಂ ॥
ಸಲೀಲೆಯಿಂದೆಯ್ದ ರಲಾಕನಂತ ।
ಜರ್ಳಾಶಯಕ್ಕಾನಿಜಾಸಬ್ ನೆಗಳ್ವಂ ॥ ೪೨

ಅಂತಾತಂಗೆ,

ರಕ್ಷೆಗಳಂ ಕಟ್ಟಿ ಲಸ ।
ದ್ದೀಕ್ಷೆಯುನಾನೆಸಗಿ ಸರಸಿಯಲ್ಲಿ ನಿತಾಂತಂ ॥
ರಕ್ಷೆಯನಿರ್ಕಲದಿಂದಾ ।
ನಕ್ಷಯನಿಧಿಗೆಯ್ದಿ ತಂತ್ರಿಸಿದೆನತಿನಯದಿಂ ॥ ೪೩

ಅಂತಾನಾತಂಗೆ ರಕ್ಷೆಯುಂ ಕಟ್ಟಿ

ಎಲೆ ಜಯಸಿಂಹನೆ ಸರಸಿಯು ।
ಕೆಲನಂ ನಾಲ್ದೆಸೆಯುನನ್ಯರಿಲ್ಲದ ತೆಱದಿಂ॥
ತ್ರಿಳದಾಗಳ್ ಜೇಗಟೆಯುಂ ।
ಸಲೆ ತಾಟಿಸಲಾಗಳಾ ಜಲಕ್ಕತಿಶಯದಿಂ ॥ ೪೪

ತಳತಂತ್ರಸಂತತಿಯುನಾ ।
ಜಳಜಾಕರದೆಲ್ಲ ದೆಸೆಗಳಲ್ಲಿರಿಸಿ ಜಲ ॥
ಕ್ಕೆಳಾದಾಗಳ್ ಜಾನದೊಳರೆ।
ಲಳನೆಯು ಗರದೇಟ್ಟಿ ನಿಲ್ವುದಿದು ಸಿದ್ಧಾಂತಂ ॥ ೪೫

ನಿನಗಲ್ಲದೆ ದೀಕ್ಷೆಯುನ ।
ನ್ಯನರಗಾರ್‍ ನೀಯೆನನಱಿನನ್ಯಶರೀರಂ ॥

ನಿನಗಾಗಿ ಕಡೆಗೆ ನಿನ್ನಂ ।
ಗನೆಯು ಗರಂ ನಿಲ್ವುದೀಗಳೀಕ್ಷಿಸಿಯುತ್ತೇ ॥ ೪೬

ಈತ್ತೆಬನಂ ನಾಳೆಸಗಿಂ ।
ದೀತಡಿಯಿಂದಿಚ್ಛೆಯಾದ ತಾಣಕ್ಕಾನಿಂ ॥
ದೇತಿರುಗಿ ತೆರಳ ನಾನಾ ।
ಖ್ಯಾತಿಯುನಜಸಲ್ಕೆ ಹದನಿದಂ ಕೇಳ್ ನಯುದಿಂ ॥ ೪೭

ಎಂದಾಗಳಾನಾತನಿದಿರಿಂ ತೆರಳ್ದಂತೆಗೆಯ್ದಾರಾತ್ರಿಯುಲ್ಲಿಗೆ ತಿರುಗಿಯಾಸರಸಿಯುಡಿಯುಲ್ಲಿಯಾನೆಸಗಿದ ಶಾಲೆಗೆ

ಆನಾರಜಿಯುದ ತೆಜದಿಂ ।
ಸಾನಂದದಿನೆಯ್ದಿ ರಾತ್ರಿಯಲ್ಲಿ ನಯುಂಗಂ ॥
ಡಾನಳನಾಕರಜಲದೆಸೆ।
ಗಾನೆಸಗಿನ ಶಾಲೆಯುಲ್ಲಿ ನೆಲಸಿದೆನರಸಾ ॥ ೪೮

ಅಂತಾನಲ್ಲಿಯುಡಂಗಿರೆ,

ಜಲಜಾಕರದೆಸ್ಸೆಸೆಯಂ ।
ತಳತಂತ್ರದಿನೆಯ್ದಿ ರಕ್ಷೆಗೆಯ್ದರಸಂ ತ ॥
ಜ್ಜಳದಂತಕ್ಕತಿಶಯುದಿಂ ।
ಗಳಲನೆ ಜೋಗಟೆಯು ದನಿಯುನೆಸಗಲ್ಕಾಗಳ್ ॥ ೪೯

ಅಂತಲ್ಲಿರ್ದ ಜೋಗಟೆಯ ದನಿಯುನೆಸಗಲಾನಿರ್ದ ಶಾಲೆಯು ಛಿದ್ರದಿಂದಾ ದನಿಯುಂ ಕೇಳ್ದು,

ಜಯಸಿಂಹಕ್ಷಿತಿನಾಥನಿರ್ದ ಜಲವತ್ತಲ್ ಶೀಘ್ರದಿಂದಾಗಳಾ ।
ಲಯದಿಂದಾಂ ನಿಜಕಾಯುಸಿದ್ಧಿತರದಿಂದೀಸಾಡಿ ಕಂಡಾಗ ನಿ ॥
ರ್ದಯದಿಂದಾತನನೆನ್ನ ಶಾಲೆಗೆಪತುದಲ್ಲಿರ್ದ ಕಲ್ಲಿಂ ಕರಂ ।
ರಯದಿಂದಿಕ್ಕಿದೆನಳ್ಳಿಯುಟ್ಟೆ ಸವದೆಂ ತದ್ರಾಜನಂ ತೀವ್ರದಿಂ॥ ೫೦

ದಾನಗಜಂ ಲಸತ್ಸರಸಿಗಾತಿ ಟೀವಲ್ಲಿಯ ನೀರಜಂಗಳಂ।
ತಾನೆ ಕರಾಗ್ರದಿಂ ಕಡಿ ಕಿಟ್ಟಡಿಮಿಕ್ಕಿದೊಡಂದದಿಂ ನೆಗ ॥
ಟ್ದಾನರನಾಥನೀಟ್ಕೆಯೆನಿಸಿರ್ದ ಶಿರಸ್ಸರಸೀಜದಿಂಡೆಯುಂ ।
ಜಾನಿಸದಾಗಳಾಂ ಜಲದ ಜಕ್ಕಿಯುಗೇಱಿಸಿದೆಂ ನಿರಂತರಂ ॥ ೫೧

ಇಡಿದಿಡಿದಱೆಗಲ್ಲಿಂದಾ ।
ಜಡನಂ ಗಪ್ಪಸಿದೆನಾಗಳಟ್ಟೆಗೆಯಿಂದಾ ॥
ಯೆಡೆಯಂ ಕಟ್ಟಿದೆನಾತನ ।
ಕಡೆ ತಿರಿತನಱಿದೆನಾಕ್ಷಣಂ ನರನಾಥಾ ॥ ೫೦

ಅಂತದನಱಿದನಂತರಂ

ಜಡೆಯಂ ಜಂಘೆಯನಾಸರಸ್ಸಲಿಲವಲ್ಲೀಡಾಡಿ ಕೇಶಾಳಿಯಂ ।
ಕಡೆಗಂಟಿಕ್ಕಿ ಧರೇಶನಾಂತ ನಿಚಯಾಲಂಕಾರರತ್ನಾದಿಯಂ ॥
ಗಡಣಂ ರಂಜಿಸೆ ತಾಳ್ದಿ ಸುಂಶಯುವ ಚಿಹ್ನಂ ಚೇಷ್ಟೆಯೊಂದಿಲ್ಲದಾಂ ।
ತಡಿಗೇಱಿಂದೆನನೇಕರೀಕ್ಷಿಸಿ ಲಸಚ್ಚಿತ್ರಂ ಜಗಕ್ಕೆಂದೆನಲ್ ॥ ೫೧

ಇದೆ ಚಿತ್ರಂ ಜಯಸಿಂಹನೀಸರಸಿಯುಳ್ಮಿದಿರ್ಗಗಳಂ ಕೇಳಲಿ ।
ಕ್ಕಿದಲಂಕಾರಚಯಂ ಲಸತ್ತ್ರಿಚಯಸಂಘಂ ದೇಹದಿಂದಂ ಕಟಿ ॥
ಲ್ಚಿದೆ ತಾನನ್ಯಶರೀರಿಯಾದನಿದೆ ಯಂತ್ರಂ ತಂತ್ರಸಂಸಿದ್ಧಿಯಿಂ ।
ದವನೆಲ್ಲರ್ ಸಲೆ ಕೀರ್ತಿಸಲ್ಕೆ ನಡೆದೆಂ ರಾಜಾಲಯಕ್ಕಾಕ್ಷಣಂ ॥ ೫೨

ಅಂತಾಂ ನಡೆಯೆ

ಎನಗಿದಿರಲ್ಲಿ ರಂಜಿಸಿತಳಂಕೆಯ ದೇಹಳಿಯಿಂ ನೆಗಟ್ದಿ ಕಾಂ ।
ಚನಕಲಶಂಗಳಿಂ ಸಕಲರತ್ನನಿಷಕ್ತಿತಚಂದ್ರಶಾಲೆಯಿಂ ॥
ಘನತರನಿಸ್ತುಳಸ್ಥಗಿತಜಾಳಕದಿಂ ಶಶಿಕಾಂತಖಂಡಸಂ ।
ಜನಿತಧರಾಚಿರ್ಯಿಂ ನಿಖಿಳಚಿತ್ರದಿನಾನರನಾಥನಾಲಯಂ ॥ ೫೩

ಅಂತಾರಾಜಶಾಲೆಯನೀಕ್ಷಿಸಿ ನಡೆಯುತಿದಿರಲ್ಲಿ,

ನಯನಾನಂದಕರಂ ನಿರಂತರಲಸದ್ರತ್ನಾರ್ಚಿ ಕಾಂತಂ ಕಥಾ ।
ಶ್ರಯಚಿತ್ರಂ ಜಯಘಂಟಿಕಾಂಚಿತದಿಶಂ ಸಿಂಹಾಸನಾಧಿಷ್ಠಿತಂ ॥
ಜಯಸಿಂಹಕ್ಷಿತಿನಾಥನಾದರಿಸಿದ್ದೈದೇಟಿಕೆಯಾಸ್ಥಾನಶಾ ।
ಲೆಯನಾನೀಕ್ಷಿಸಿಯಾಕ್ಷಣಂ ನೆಲಸಿದೆಂ ಸಂದೇಹಿಗಳ್ ಕಣ್ಗೆಡಲ್ ॥ ೫೪

ಅದಲ್ಲದೆ ಆಸ್ಥಾನಗೇಹಂ ಚಿತ್ರಾಂಕಿತದಿಂದಾಕಾಶದೇಟಿಕೆಯಂ, ಚಂದ್ರಶಾಲಾರಂಜಿತದಿಂ ಚಂದ್ರಿಕಾರಾತ್ರಿಯಂ, ಸಿಂಹಾಸನಾಸ್ಥಾನದಿಂದರಣ್ಯರಾಜಿಯಂ, ಜಾಳಕಸಂತಾನದಿಂದಲರ್ಗಳ ಲತೆಯಂ, ಘನಸಾರಖಂಡಿತದಿಂ ಕಾ

ಗರ್ಾಲದಗ್ಗಳಿಕೆಯುಂ, ರತ್ನರಜಸ್ಸನ್ನಿಘದಿಂ ಕನಕಾದಿ ಯು, ಕಾಷ್ಠಾದಿಜಾ
ತಕನ್ಯಾಕಾರದಿಂ ದಿಶಾರಾಶಿಪಙ್ಕ್ತಿಯುಂ ಗೆಲ್ದು ಸಾರ್ದಿದಾರ್ಸ್ಥಾನದೆಡೆಗೆ

ನರನಾಥಂಗೆ ಕಳಿಂಗಕನ್ನಿಕೆಯು ದೇಹಗ್ರಸ್ತಕಷ್ಟಗ್ರಹ ।
ಕ್ಕಿರದೀಗಲ್ ಘನಶಾಸ್ತಿಯುಂ ನೆಗಳ್ದುದಾಯುಸ್ತ್ಯದೇಹಂ ಗಡಾ ॥
ದರದಿಂದಾನವಸೀಕ್ಷಿಸಲ್ ಮುಜಿದೆನೆಂದೆಯ್ತುಂವಳಾಚಂದ್ರಲೇ ।
ಖೆ ರಣತ್ಕಂಕಣಕಿಂಕಿಣೀಹಸನದಿಂದಾಸ್ಥಾನಕಂದಲ್ತಿಯಿಂ ॥ ೫೭

ಅಂತಾಕಶಾಂಕಲೇಖೆಯು ಕೆಳದಿ ಚಂದ್ರಲೇಖೆಯಾಸ್ಥಾನದಲ್ಲಿರ್ದನ್ನನೀ
ಕ್ಷಿಸಿ

ಈಯುರಸಂ ಕಳಿಂಗಸತಿಯುಂ ದಯೆಯಿಂ ಹರಸಿಕ್ಕೆದಾಣದಿಂ ।
ದಾಯುತಿನಾಥನಂ ಹತಿಸಿ ತಂವತಿಸಾಹಸಿಯುಂತಿರಿರ್ಪನೆಂ ॥
ದಾಯುತನೇತ್ರೆಯೀಕ್ಷಿಸಿದ ರೀತಿ ತದಾಸ್ಯದ ಚೇಷ್ಟೆಯಿಂ ಧರಾ ।
ಶ್ರೀಯಧಿನಾಥ ಕೇಳಖಿಯುಲಾಯ್ತೆನಗಂದಿದಿರಲ್ಲಿ ನಿಷ್ಠೆಯುಂ ॥ ೫೮

ಅಂತಾಕೆಯಾಸ್ಯಚೇಷ್ಟೆಯುನಱಿದಾಗಳಿಂತೆಂದಂ:—

ಕಂಡೆಗ ಚಂದ್ರಲೇಖೆ ಜಯಸಿಂಹನನಂತಕನಿಕ್ಕೆಗಟ್ಟಿಯಾಂ ।
ಗಂಡಿಗನಾಗಿ ತನ್ನಿಲಯುಕೆಯ್ದಿದನೀಪನನಂ ಸಹೀಸ್ರದಿಂ ॥
ಖಂಡಶಶಾಂಕಸನ್ನುತಲಲಾಟೆಗೆ ಚೆನ್ನೆ ಕಳಿಂಗಕನ್ನೆಗಾ ।
ದಂಡಿಗಳೀಗಳಿಂತಖಿಯುದಂತಜುಹೆಂದೆಸಿಳಾಧಿನಾಯಕಾ ॥ ೫೯

ಎನಲಾಚಂದ್ರಲೇಖೆ,

ಸಲಿಸನೆಯಿಾಯಾಕಾರಂ ।
ನೆಲೆಯಾದೊಡೆ ತತ್ಕಳಿಂಗಕನ್ನಿಕೆಯು ಗರಂ ॥
ನೆಲೆಯುಳ್ಳದಲ್ಲದಿದೊರ್ಡೆ ।
ನೆಲೆಯಾಕೆಗೆ ಕಡೆಗೆ ಗರದ ಚೇಷ್ಟೆ ನಿತಾಂತಂ ॥ ೬೦

ಎಂದೊಡಾಕೆಗಿಂತೆಂದಂ:—

ಸಂದೇಹಂ ನಿನಗೇಕೆ ಶಂಕರಧರಾಸ್ಥಾನಾಂತದಿಂ ಕನ್ನೆಯುಂ ।
ತಂದಾತಂ ಜಯಸಿಂಹನಂ ಹತಿಸಿ ತದ್ರಾಜ್ಯಕ್ಕೆ ಕೇಳೀಗಳ್ ॥
ಯ್ತಂದಾತಂ ನಿಜರೀತಿಯೆಂದಖಿಯುಲೀ ನಿನ್ನಾಕೆಯೆ ದಾಕೆಯುಂ ।
ಚಂದಂ ರಂಜಿಸಲಟ್ಟಿದೆಂ ಕೆಳದಿಯಿದಾರ್ತಾಣಕಾನಂದದಿಂ ॥ ೬೧

ಅಂತಾಕೆಯುನತ್ತಲೆಕಳುಹಿ ಇತ್ತಲಾಸ್ಥಾನದಲ್ಲಿರ್ದೆಲ್ಲರಂ ಸತ್ಕರಿಸಿ ಕಳಿಂಗಕನ್ನೆಯುಂ ಗ್ರಹಕಾರಣಂ ತದಾಕಾರಸ್ಥಿತಿಯೆನಗಾಯ್ತೆಂದಱುಹಿಸುನಂತರಂ ಶಶಾಂಕಲೇಖೆಯಿರ್ದೆಡೆಗೆಯ್ದಿ

ಎನ್ನಂ ಕಂಡಾಗಳಾಕನ್ನಿಕೆ ಮುಂತಿರೆಯುದಿಂ ಕಾಂತಿಯಂ ತಾಳ್ದಿಯೆನ್ನಂ |
ತನ್ನಿರ್ಕೆಯ್ಯಿಂ ಕರಂ ತಳ್ಕಿಸಿಯ ಧರಲಸತ್ಕಾರದಿಂ ಪೆರ್ಚಿಸಿರ್ದಂ ॥
ತನ್ನಂಗಶ್ರೇಷ್ಠಸಂಗಸ್ಥಿತಿಯೆನಧಿಕರಾಗಾದಿಕಂ ಸಂದಿರಲ್ಕಂ |
ಡೆನ್ನಂ ತನ್ನಿಂದೆ ಕಾರ್ಯಂ ನೆಲೆಯೆಸಿಸಿರಲಾನಂದದಿಂದಿರ್ದೆನಾಗಳ್ ॥ ೬೦

ಅಂತೆನ್ನ ಸ್ನೇಹದಿಂ ಕಳಿಂಗಕನ್ನೆಗಾದ ಗರಂ ಕಱಿದಾಕಾರ್ಯದೇಶ್ಯೆಯುಂ ಕಳಿಂಗರಾಜಂಗಱುಹಲ್ ಚರರಂ ಕಳುಹಿಯುನಂತರಂ ನಿನ್ನಂ ಪ್ರಿಯುನಱಿಸಲೆಂದಿರಲನ್ನೆಗಂ

ಜಗದಧಿನಾಥ ಕೇಳ್ ನಿಜಸಹಾಯನೆನಲ್ ನೆಱೆದಂಗರಾಜನೇ |
ಳ್ಗೆ ನಿಂದಿಂ ಸಹಾಯುವೆನಗೆಂದೆನಗಾಜ್ಞೆಯುನಟ್ಟಲೀಗಳೆ ॥
ಲ್ಲಿಗೆ ನಲಿದೆಯ್ದಿ ನಿನ್ನ ಚರಣಂಗಳನೀಕ್ಷಿಸಿ ಧನ್ಯನಾದೆಂ ॥
ದಗಣಿತಕಾರ್ಯಸಿದ್ಧಿ ನೆಲೆಯಾಯ್ತೆನಗೆಂದಱಿದೆಂ ನಿರಂತರಂ ॥ ೬೩

ಎಂದು ರಾಜವಾಹನಂಗೆ ಮಂತ್ರಗುಪ್ತಂ ತನ್ನವೃತ್ತಾಂತಮಂ ಪೇಳ್ದುದುಂ;

ಧರಣೀಶ ನಿನ್ನ ಮಂತ್ರಮೆ ಫಲಂ ನಿಜಸತ್ವಮತೀವವಿಸ್ಮಯಂ |
ಪಿರಿದು ತಪಂ ಕರಂ ಪ್ರೋಸತು ಬುದ್ಧಿ ವಿಚಿತ್ರಮೆನುತ್ತನೇಕಸಾಂ ॥
ದರವಚನಂಗಳಿಂ ಪದೆದು ಮನ್ನಿಸಿ ಸನ್ನುತಮಂತ್ರಗುಪ್ತನಂ |
ನಿರವಧಿತುಷ್ಟಿಯಿಂ ನಲಿದು ಮೆಚ್ಚಿದನಾಗಳಭಂಗವಿಕ್ರಮಂ ॥ ೬೪

॥ ಗದ್ಯ ॥

ಇದು ನಿಖಿಲಬುಧಜನಮನೋವನಜವನದಿವಾಕರಕಿರಣಪ್ರತಿಮಪ್ರಸನ್ನ
ಶ್ರೀಮದಭಂಗವಿಟ್ಠಲಪದಾಂಭೋಜಮತ್ತಮಧುಕರ
ಮಧುಸೂದನನಂದನ ಸರಸಕವಿ ಚಾವುಂಡರಾಜ ವಿರಚಿತಮಪ್ಪ

ಅಭಿನವ ದಶಕುಮಾರಚರಿತೆಯೊಳ್

ಮಂತ್ರಗುಪ್ತ ನಿರೋಷ್ಠ್ಯಕಥಾವೃತ್ತಾಂತಂ

ತ್ರಯೋದಶಾಶ್ವಾಸಂ

॥ ಚತುರ್ದಶಾಶ್ವಾಸಂ ॥

—ವಿಶ್ರುತನ ಕಥೆ—

ಶ್ರೀನಂದನಮೂರ್ತಿ ಕಳಾ ।
ಸ್ಥಾನಂ ವಿಶ್ರುತನ ಮುಖಮನೀಕ್ಷಿಸಿ ಕೇಳ್ದಂ ॥
ನೀನೆಸಗಿತ್ತೇನೆಂದಱಿ ।
ಮಾನಧನಂ ಕೂರ್ತರ್ಭಂಗವಿಟ್ಟಲಭ್ಯತ್ವಂ ॥ ೧

ಅಂತು ಕೇಳ್ದು ರಾಜವಾಹನಂಗೆ ವಿಶ್ರುತಂ ಕೆಯ್ಗಳಂ ಮುಗಿದು,

ಸೋದರರೆಲ್ಲರಂದದಿನಿಳಾತಳದೆಡ್ಡೆಸೆಯೊಳ್ ತ್ವದೀಯಸ ।
ತ್ಪಾದಪಯೋಜಮಂ ತ್ವರಿತದಿಂದಱಸುತ್ತಿರಲೆನ್ನ ಪೂರ್ವಪು ॥
ಣ್ಯೋದಯದಿಂದನೇಕಸುಕೃತಂ ನೆಲೆಗೊಂಡವೊಲಿರ್ದುದೊಂದು ಚೆ ।
ಲ್ವಾದೆಡೆಯಂ ಮನೋಮುದದಿನೆಯ್ದಿದೆನಾಂ ಭುವನಾಧಿನಾಯಕಾ ॥ ೨

ಅದಾವುದೆನೆ:— †

ಹರಿಪದಸಂಗಮಂ ವಿವಿಧಮೋಕ್ಷವಧೂನವನೃತ್ತರಂಗಮಂ ।
ಪರಮುದಯಾಂಗಮಂ ಸುಖಸುಧಾಬ್ಧಿತರಂಗಮನುಗ್ರಪಾಪಸಿಂ ॥
ಧುರಮದಭಂಗಮಂ ಭುವನಮಂಗಳಗೇಹಸೃದಂಗಮಂ ।
ಸ್ಥಿರಗಿರಿಶೃಂಗಮಂ ಭರದಿನೆಯ್ದಿದೆನೊಪ್ಪುವ ಪಾಂಡುರಂಗಮಂ ॥ ೩

ಅದಱ ಮಹತ್ವಮಂ ಪೊಗೞಲೆನ್ನೊಳವಲ್ತು ಸಮಸ್ತದೇವತಾ ।
ಸದನಮನಂತತೀರ್ಥನಿಲಯಂ ಸಕಲೋತ್ತಮಭೂಮಿ ವಿಷ್ಣುವೊ ॥
ಚ್ಚಿದ ಮನೆ ಲೋಕಲೋಚನಮನೋಹರಮಾಗಮಶಾಸ್ತ್ರಕೋಟಿ ಪು ।
ಟ್ಟಿದ ನೆಲೆ ಪಾಂಡುರಂಗೆ ಮದನಂಗೆಡೆಯಾಟದ ತಾಣಮೆಂಬಿನಂ ॥ ೪

ಅದಲ್ಲದೆಯುಂ,

ಅದಱೊಳ್ ಗೋಪಾಲಕೇಳೀವ್ಯಸನಮನುಱದಾನಂದದಿಂ ಕೃಷ್ಣರಾ
ಯಂ । ಪದುಳಂ ನಿಂದಿರ್ದು ಬೇಟ್ಪರ್ಗಭಿಮತಫಲಮಂ ಕೊಟ್ಟು ಸನ್ಮಾ
ತ್ರರ್ಸಾಕಾ ॥ ರದ ಚೆಲ್ವಿಂದಂ ನಿರಾಕಾರಿಗಳ ಬಗೆಯನೀಡಾಡಿ ಸಂದೇಹಮಂ

---

† ಇಲ್ಲಿಂದ ಮುಂದೆ ಬರುವ ಪಂಡರಪುರದ ವರ್ಣನೆಯು ಸಂಸ್ಕೃತದಶಕುಮಾರ ಚರಿತ್ರೆಯಲ್ಲಿಲ್ಲ.

ಪೊ। ರ್ದದೆ ತೋರ್ಪಂ ದಿವ್ಯರೂಪಂ ಮನುಜತತಿಗೆ ಕೇಳ್ ವಿಟ್ಠಲಾಖ್ಯಾ
ನದಿಂದಂ ॥ ೫

ಮತ್ತಮಲ್ಲಿ,

ತಾಪಿ ಪಯೋಷ್ಣಿ ನರ್ಮದೆ ಸುಗೌತಮಿ ಜಾಹ್ನವಿ ಕೃಷ್ಣವೇಣಿ ಗೋ।
ದಾವರಿ ತುಂಗಭದ್ರೆ ಸುರಗಂಗೆ ಕವೇರತನೂಜೆಯೆಂಬ ನಾ ॥
ನಾವಿಧಮಪ್ಪನೇಕನದಿಗಳ್ಗಧಿಕಂ ಹರಿಸನ್ನಿಧಾನಮು ।
ರ್ವೀವಳಯಪ್ರಸಿದ್ಧಮೆನೆ ಭೀಮರಥೀನದಿಯೆಂಬುದೊಪ್ಪುಗುಂ ॥ ೬

ಹರಿ ಗೋಪಾಲರೊಳಾಡಿದೊಂದಪೆ ಪೆಗಲ್ಗೊ[1] ಟುಂಡ ತಾಣಂ ಮನೋ।
ಹರಕೇಳೀಸ್ಥಳ ಗೋವ್ರಜಂ ನಡೆದ ಚಿಪ್ಪಂ ತನ್ನದೀತೀರದೊಳ್ ॥
ತರದಿಂ ರಂಜಿಪ್ರಮೆಲ್ಲರೀಕ್ಷಿಸಲೆನಲ್ ಸತ್ಪಾಂಡುರಂಗಕ್ಕೆ ಭೀ ।
ಮರಥೀದೇವಿ ಸುದರ್ಶನಂ ಗಡಮೆನಲ್ ಚೆಲ್ವಾಗಿ ಕಣ್ಗೊಪ್ಪುಗುಂ ॥ ೭

ಮತ್ತಮಲ್ಲಿ,

ಪಲವು ಯುಗಂ ಸಮುದ್ರನದಿಕಾನನದೇವಗೃಹಾದ್ರಿಯೆಂಬ ಸು ।
ಸ್ಥಳದೊಳತೀವಘೋರತಪದಿಂ ಯತಿಗಳ್ ಮಿಗೆ ಕಾಣದಿರ್ಪ ವಿ ॥
ಟ್ಠಲನನನಂತರೀಕ್ಷಿಸಿ ನಿಜೇಚ್ಛೆಗೆ ಬೆಂಬಳಿಯಾಗಿ ತಂದ ನಿ ।
ಷ್ಠಳಮತಿ ಪುಂಡರೀಕಮುನಿ ತೀರದೊಳಿರ್ಪನಿಳಾಧಿನಾಯಕಾ ॥ ೮

ಅಂತಿರ್ಪ ದಿವ್ಯಕ್ಷೇತ್ರಮಂ ಕಂಡು

ಎಲ್ಲಾತೀರ್ಥಂಗಳ್ಗಂ ವಗ್ಗಳಮೆನಿಸುವ ತತ್ತೀರ್ಥಮಂ ಮಿಂದು ಮತ್ತಾ ।
ನಲ್ಲಿಂ ಮೆಯ್ಯಿಕ್ಕುತಂ ವಿಟ್ಠಲ ಜಯ ಜಯ ಎಂಬುತ್ತ ಸುಧ್ಯಾನದಿಂ ಚಿ ॥
ತ್ತೋಲ್ಲಾಸಂಮಿಕ್ಕು ಬರ್ಪನ್ನೆಗಮೆನಗಿದಿರೊಳ್ ತೋಱುವತ್ತುಚ್ಚಶಾಖಾ ।
ಸಲ್ಲೀಲಂ ರಂಜಿಪ್ಪುದುನ್ನತತರಪಿಚುಮಂದಾಳವಾಳಂ ಕಂಜಾಳಂ ॥

ಬೇವಿನ ಕಟ್ಟೆ ಪುಣ್ಯವಧು ತನ್ನೊಲವಿಂ ಬರುತಿರ್ಪ ಬಟ್ಟೆ ನಾ ।
ನಾವಿಧಪಾಪದುಷ್ಟಮೃಗಮಂ ಕೆಡೆಯಟ್ಟುವ ಮಿಟ್ಟೆ ನವ್ಯಪು ॥
ಣ್ಯಾವಳಿರತ್ನಮಂ ಬಯಸಿ ಕಟ್ಟಿದ ಮೊಟ್ಟೆ ಕುಶಾಸ್ತ್ರಮಾರ್ಗಮಂ ।
ಭಾವಿಸೆ ಗೆಲ್ದ ಬಟ್ಟೆಯೆನೆ ರಂಜಿಪುವಲ್ತೆ ಧರಾಧಿನಾಯಕಾ ॥ ೯

---

1. ಪಸಲ್ಗೊ. ಎಂದು ಪ್ರತಿಗಳ ಪಾಠ.

ಸನಕಾದಿಗಳಖಿಳಾಗಮ ।
ವಿನಿಶ್ಚಯಯುಕ್ತಿಪ್ರವರ್ ತಾಣಮೊಂದಾನಾಗಳ್ ॥
ಮನವೊಲ್ದದರ್ಕೆ ಪೊಡೆವು ।
ಟ್ಟನುನಯದಿಂ ಮತ್ತೆ ಮುಂದೆ ನಡೆಗೊಳ್ವಾಗಳ್ ॥ ೧೦

ನಲಿನಭವಾದಿದೇವನಿಕರಕ್ಕಮಗೋಚರಮಾದಭಂಗಿವಿ ।
ಟ್ಠಲನ ಮನೋಹರಾಕೃತಿಸನಾತನ ಪಾದಪಯೋಜಯುಗ್ಮಮಂ ॥
ಚಲಿಸದ ದೃಷ್ಟಿಯಿಂ ಪದೆದು ನೋಡುತೆ ಕೈಮುಗಿದಿರ್ಪ ಪಕ್ಷಿಸಂ ।
ಕುಲಪತಿಯುಪ್ಪ ಭೀಕರಗರುತ್ಮನನಾಂ ಮಿಗೆ ಕಂಡೆನುರ್ವಿಪಾ ॥ ೧೧

ಅಂತಾಗರುಡಂಗೆ ನಮಸ್ಕರಿಸಿ ಮತ್ತಂ ಪೋಗೆ ಮುಂದೆ

ಮದಗಂಧಕ್ಕೆ ಮದಾಳಿಗಳ್ ಮುಸುಱಿದೋಲ್ ಸರ್ವಾಂಗದೊಳ್ ನೀಲರ।
ತ್ನಗಲಂಕಾರಮನಾಂತ.....ಪರಮುಹಸ್ತಂ ಶೂರ್ಪಕರ್ಣದ್ವಯಂ ॥
ರದನೈಕಂ ನವರಕ್ತಚಂದನವಿಲಿಪ್ತಾಂಗಂ ಗಜಾಸ್ಯಂ ವರ ।
ಪ್ರದನಿರ್ದಂ ಪೊಡೆಮಟ್ಟೆನೆನ್ನ ಬಗೆಯುಕ್ಕಂದಾಗಳುರ್ವೀಶ್ವರಾ ॥ ೧೨

ಅಂತಾಂ ವಿನಾಯಕಂಗೆ ಪೊಡೆಮಟ್ಟಲ್ಲಿಂ ತಳರ್ದು ಮುಂದೆ

ಜ್ವಲನಾಕ್ಷಂ ಕ್ರೂರದಂಷ್ಟ್ರಾಪ್ರಹಸಿತವದನಂ ಕುಂಡಲಂ ರುಂಡಮಾಲಾ।
ಗಲನುಗ್ರಾಹೀಂದ್ರಹಾರಂ ಡಮರುಗವಿಲಸಚ್ಛೂಲಕಾಪಾಲಪುಷ್ಪಾ ॥
ವೀಹಸ್ತಂ ಕ್ಷುದ್ರಘಂಟಾಂಚಿತಜಘನತಟಂ ರಂಜಿಸಲ್ ಕ್ಷೇತ್ರಪಾಲಂ ।
ನೆಲಸಿರ್ದಂ ಬಾಗಿಲೊಳ್ ಕಂಡೆಱಗಿದೆನಸುಂ ಭಕ್ತಿಯಿಂದಂ ನೃಪಾಲಾ ॥

ಅಂತಾಂ ಕ್ಷೇತ್ರಪಾಲಂಗೆಱಗಿ ಮುಂದಂ ನೋೞ್ಪನಂ

ಅಭಿನವರತ್ನತೋರಣಮನೇಕಲಸತ್ಕಲಶಂ ಗರುತ್ಮವ ।
ಲ್ಲಭನ ಪತಾಕೆ ವೈಷ್ಣವಜಯಧ್ವನಿ ನಿರ್ಮಳಭಿತ್ತಿಕಾಸುಧಾ ॥
ಪ್ರಭೆ ನವಧೂಪಧೂಮಲತೆ ಮಂಗಳವಾದಕಗೇಯನರ್ತಕೀ ।
ರಭಸಮನಾರತಂ ಮೆಱೆವ ವಿಟ್ಠಲರಾಯಗೃಹಂ ವಿರಾಜಿಕುಂ ॥ ೧೪

ಅಂತಾದೇವತಾಯತನಮಂ ಕಂಡಾಂ ಪ್ರದಕ್ಷಿಣಂಗೆಯ್ಯುತ್ತಲ್ಲಿ

ದೇವನಿತಂಬಿನೀಸಮುದಯಂ ಬೆಸಕೆಯ್ವ ಸಮಸ್ತಭಾಗ್ಯಜ ।
ನ್ಮಾವನಿಯಾದ ತನ್ನ ನಯನಾಂಚಲದಿಂ ಭುವನಕ್ಕೆ ಸಂತತಂ ॥

ಜೀವನಮಂ ಪ್ರತಿಪಿಳ್ಳಿಸುವ ವಿಟ್ಠಲರಾಯನ ರಾಣಿ ರುಕ್ಮಿಣೀ ।
ದೇವಿಯರಂಘ್ರಿಗಂ ನಲಿದು ದೂರದೊಳಿರ್ದೆಱಗಿರ್ದನುರ್ವಿಪಾ ॥ ೧೫

ಅಂತಾದೇವಿಯರಂ ನಮಸ್ಕರಿಸಿಯನಂತರಂ

ಹಿಮಕರವಕ್ತ್ರೆಯರ್ ತ್ರಿದಶಕಾಮಿನಿಯರ್ ನವತಾರಕಾಸಮು ।
ದ್ಗಮಮೆನಲಿರ್ಪ ತನ್ಮ ನಯನಪ್ರಭೆಯಿಂ ಸಮಕಟ್ಟಿ ರುಕ್ಮಿಣೀ ।
ರಮಣನ ಕೋಮಳಾಂಘ್ರಿಯುಗಳಕ್ಕೆ ನಿವೇದಿಸುವಂದದಿಂ ಸವಿ ।
ಭ್ರಮಮನೆಸಗಿರ್ಪ ಪ್ರೇಕ್ಷ್ಯಸ್ರಗ್ಮಾಲೆಯನೆತ್ತಿ ಪರಲ್ಲಿ ಬಾಲೆಯರ್ ॥ ೧೬

ಅಂತವರೊಳ್ ಪವಣಿಲ್ಲದ ಪೂಗಳಂ ಪರಮಪುರುಷಂಗೆ ಪಡೆದನಂತರಂ

ಪುಲಕಾಂಗಳ್ ಮೆಯ್ಯೊಳ್ ಕಣ್ಣಿರ್ದ್ವಯದೊಳಗಸುರ್ವಜಿನ್ಮಾತ್ರ ಜಿಹ್ವಾಗ್ರ
ದೊಳ್ ಸಿರಿವಿಟ್ಠಲನಾಮಂ ಫಾಳದೊಳ್ ಸಂಪುಟಕರಮೆನಸುಂ ಚಿತ್ತದೊಳ್
ಭಕ್ತಿಭಾವಂ । ನೆಲಸಲ್ ಮದ್ಭಾಗ್ಯಸಂವೃದ್ಧಿಗೆ ಮಿಗೆ ನಲಿಯುತ್ತುಂ ಮ
ನಃಪ್ರೀತಿಯಿಂ ವಿ । ಟ್ಠಲನಂ ಕಂಡಾರ್ತದಿಂ ಮೆಲ್ಲಡಿಗೆಱಗಿ ಕೃತಾರ್ಥಾತ್ಮ
ನಾದೆಂ ನೃಪಾಲಾ ॥ ೧೭

ಅಂತೆಱಗಿ,

ಅತಿಗೆಱಗಿರ್ದ ತ್ರಿರೂಪಿನ ।
ಸಡಗರಮಂ ಕಾಣಲಿದೆನುತ್ತಾನಾಗಳ್ ।
ಕಡುಪಿಂ ವಿಟ್ಠಲಮೂರ್ತಿಯ ।
ನೆಡವೆಱೆಯದೆ ನೋಡುತಿರ್ದೆನನಿಮಿಷಗತಿಯಿಂ ॥ ೧೮

ವರಮಕುಟಂ ಮುಗುಳ್ನಗೆ ತುಳುಂಕುವ ಮುದ್ದುಮೊಗಂ ಜಗನ್ಮನೋ ।
ಹರಕರಕುಂಡಲಂ ಪೆಗಲ ಕಲ್ಲಿ ಲಸತ್ಪದಕಂ ನಿತಂಬದೊಳ್ ॥
ಸ್ಥಿರಮೆನಲಿಟ್ಟ ಹಸ್ತಯುಗಳಂ ಪ್ರಸಗೋವಳಗೋಲ ನಿಲೀನಸ ।
ಚ್ಚರಣಸರೋರುಹಂ ಮೆಱೆವ ಚೆನ್ನಿಗ ವಿಟ್ಠಲರಾಯನೊಪ್ಪಿದಂ ॥ ೧೯

ನವಮೌಕ್ತಿಕಛವಿ ಮೆಯ್ಗೆ ಮಂದಹಸಿತಂ ವಕ್ತ್ರಕ್ಕೆ ಶಂಖಂ ನವೀ ।
ನವೆನಲ್ ವಾಮಕರಕ್ಕೆ ಸತ್ಕಟಿಗೆ ಸತ್ಪಾಣಿದ್ವಯಂ ಪಾದಪ ।
ಲ್ಲವಯುಗ್ಮಕ್ಕೆ ನೆಗಟ್ಟೆಯಿಟ್ಟಿಗೆ ಲಸತ್ಸೌಂದರ್ಯಭಾಗ್ಯಂ ಸಮ ।
ಸ್ತವಿಶೇಷಂ ಸಮುದಾಯಶೋಭೆಯೆಸೆಯಲ್ಕಂದೊಪ್ಪಿದಂ ವಿಟ್ಠಲಂ ॥ ೨೦

ಅಂತಿರ್ದ ವಿಟ್ಠಲದೇವನಂ ಕಂಡು

॥ ಪದ್ಧಳಿ ॥

ಜಯ ಜಯ ಜಯ ಜಗನ್ಮೋಹನಮೂರ್ತಿ ।
ಜಯ ದೇವ ಸುರಾಸುರಚಕ್ರವರ್ತಿ ॥
ಜಯ ಭಾಗವತಸ್ಥಿರಭಾಗ್ಯರೂಪ ।
ಜಯ ನಾಗನಿವಾಸಚಿತಪ್ರತಾಪ ॥
ಜಯ ನಿತ್ಯನಿರ್ಮಳಮುಖಪ್ರಸಾದ ।
ಜಯ ಸತ್ಯಲೋಕಲಂಭಿತಸುಪಾದ ॥
ಜಯ ಸರ್ವಲೋಕಪರಿಪೂರ್ಣದೇಹ ।
ಜಯ ಗರ್ವಿತಾಸುರಮುಖಾಬ್ಜದಾಹ ॥
ಜಯ ಜನ್ಮದುರ್ಘಟಮಹಾಬ್ಧಿತೀರ ।
ಜಯ ಮನ್ಮಥಾದಿವಿಜಯೋಪಕಾರ ॥
ಜಯ ಪೂತನಾಪ್ರಬಲಜೀವನೀತ ।
ಜಯ ದೂತದುಶ್ಶಕಟನಷ್ಟಭೂತ ॥
ಜಯ ವೃಕ್ಷರೂಪಯಮಳಾರ್ಜುನಾರಿ ।
ಜಯ ರಾಕ್ಷಸಪ್ರಕರಜನ್ಮವೈರಿ ॥
ಜಯ ನಂದಗೋಪಕುಲಕಲ್ಪವೃಕ್ಷ ।
ಜಯ ಚಂದ್ರಸೂರ್ಯರಂಜಿತನಿಜಾಕ್ಷ ॥
ಜಯ ಧೇನುವೃಂದನಿತ್ಯಪ್ರಸಾದ ।
ಜಯ ಗಾನನಿರ್ಗಳಿತವೇಣುನಾದ ॥
ಜಯ ಘೋರಕಾಳಿಯಭುಜಂಗಕಾಲ ।
ಜಯ ವೀರಕೇಶಿಮುಹೃರ್ದಯಶೂಲ ॥
ಜಯ ಕಷ್ಟಕುಕ್ಕುಟಕೃತಾಂತನೀಡ ।
ಜಯ ದುಷ್ಟರಜಕದಾನವವಿಭಾಡ ॥
ಜಯ ಪಂಡರೀಪುರವರಪ್ರಮೋದ ।
ಜಯ ಪುಂಡರೀಕಮುನಿಪಪ್ರಸಾದ ॥
ಜಯ ಪಾಂಡವಪ್ರಕರಜೀವರೂಪ ।
ಜಯ ಪಾಂಡವಪ್ರಚುರರತ್ನದೀಪ ॥

ಜಯ ಭುಕ್ತಿಮುಕ್ತಿಫಲಸಿದ್ಧಿಕಾರ್ಯ |
ಜಯ ಭಕ್ತವತ್ಸಲ ಸುರೇಂದ್ರಧೈರ್ಯ ||
ಜಯ ರುಕ್ಮಿಣೀಮುಖಸರೋಜಭೃಂಗ |
ಜಯ ರುಕ್ಮಿಣೀವಿಪುಳಹೃದಯಸಂಗ ||
ಜಯ ಪನ್ನಗೇಂದ್ರಕಮನೀಯತಲ್ಪ |
ಜಯ ಚೆನ್ನ ವಿಟ್ಠಲ ಸುರದ್ರುಕಲ್ಪ ||

—ವಿಟ್ಠಲಾಷ್ಟಕಂ—

ಶ್ರೀಗೆ ನಿರಂತರಂ ಬಯಸಿ ದುರ್ನರರಂ ಸಲೆ ಸೇವೆಗೆಯ್ದು ಬೆ |
ಳ್ಪಾಗಿ ದುರಾಸೆಯಿಂದಿಪಪರಕ್ಕತಿನಿಂದಿತನಾಗಿ ತೀವ್ರದೈ ||
ನ್ಯಾಗಮುಮಂ ಕಟಿಲ್ದು ನಿಜಪಾದಪಯೋರುಹಭಕ್ತಿ ಭಾಗ್ಯಸಂ |
ಯೋಗದೊಳಿರ್ಪ ಚಿತ್ತಮನಲಂಪಿನೊಳೀವುದಭಂಗವಿಟ್ಠಲಾ || ೧

ಸಿರಿ ದೊರಕಲ್ಕೆ ಮೆಯ್ಮಱೆದು ಗರ್ವಿಸಿ ಮತ್ತೆ ದರಿದ್ರನಾಗೆ [illegible] |
ಲ್ಲರ ಮನೆಗಳ್ಗೆ ಪೋಣಗೆಡೆಯಾಡಿ ನಿವಾರಿಸಿಕೊಂಡು ಸು[illegible] ಕಾ
ತರಿಸುವ ದುರ್ವಿವೇಕಗುಣಮಂ ಮಿಗೆ ಮಾಣಿಸಿ ನಿನ್ನ ಭಕ್ತಿ [illegible]
ಪರಿಣತಮಪ್ಪ ಬುದ್ಧಿಯನಲಂಪಿನೊಳೀವುದಭಂಗವಿಟ್ಠಲಾ

ನಿಜಗುಣನಾಮಮಂ ಭುವನಮೋಹನಮಂಗಳಮೂರ್ತಿ [illegible]
ಭಜಿಸುವೆನೆಂಬ ಪೋಟು ಧನಪುತ್ರಕಳತ್ರನಿವಾಸದಿಂ[illegible] ||
ಬಜಗರಮೆಯ್ದೆ ನುಂಗಿ ನೆರೆ ದುರ್ಗತಿಗಿಕ್ಕು[illegible]ದಂ [illegible]ಗೇಶ್ವರ |
ಧ್ವಜ ಬೆಱಗಿಕ್ಕಿ ನಿನ್ನಧಿಕಭಕ್ತಿಯನೀವುದಭಂಗವಿಟ್ಠಲಾ

ಪ್ರೌಢವಿಯೆಯೊಳೋರ್ಮೆ ದೈವವಶದಿಂ ಮಿಗೆ ಮಾನುಷ ನ[illegible]
ದೊಡೆ ನಿಜದೈವಮಂ ಭಜಿಸಲೊಲ್ಲದೆ ದುರ್ನರರಂ [illegible]ಗಬ್ಬಿ
ದೊಡಲನನಾರತಂ ಪೊರೆವೆನೆಂಬ ದುರಾಸೆಯನೊಕ್ಕು ನಿನ್ನ ಮೆ |
ಲ್ಲಡಿಗಳನಾವಗಂ ಭಜಿಪ ಬುದ್ಧಿಯನೀವುದಭಂಗವಿಟ್ಠಲಾ ||

ಪೆಱರ ಗುಣಾಗುಣಂಗಳನನೇಕವಿಧಂ ಪಱಿಯಲ್ ಸಿಮಿದ್ರುವ
ಚ್ಚರಿಯೆನೆ ಜಿಹ್ವೆಯಾತ್ಮಗುಣಮಂ ಪೊಗೞಲ್ ಮಿಗಿಲಪ್ಪನಂಬುಜೋ
ದರ ನಿಜನಾಮಮಂ ಭಜಿಸಲೊಲ್ಲದದರ್ಕೆ ಸುಬುದ್ಧಿವೇೞ್ದು ನಿ |
ನ್ನುರುತರನಾಮಮಂ ಭಜಿಪ ಚಿತ್ತಮನೀವುದಭಂಗವಿಟ್ಠಲಾ || ೫ ೪

ಹಿತಮುಹಿತಂಗಳೆಂಬೆರಡಱೊಳ್ ತಿಳಿವಿಲ್ಲದೆ ದೈವನಿಂದೆಯುಂ ।
ಶ್ರುತಿಮತಹಾಸ್ಯಮುಂ ಸಮಯಭೇದಮುನಗ್ಗಳಮಾಗೆ ಮಾಡಿ ದು ॥
ರ್ಗತಿಗಳೆವಪ್ಪ ಮನ್ಕೃತಿಗೆ ಸತ್ಪಥಮಂ ಮಿಗೆ ತೋಱಿಯಿಂದಿರಾ ।
ಪತಿ ಭವದಂಘ್ರಿಭಕ್ತಿಯನಲಂಪಿನೊಳೀವುದಭಂಗವಿಟ್ಠಲಾ ॥ 6 ೫

ಮಾನಸಸಂಯೋಗಭೂಮಿಯೊಳನಂತಸುಖಕ್ಕೆ ಮದೀಯದೇಹಮಂ ।
ನಿನಗೊಲಿದಿತ್ತ ಪ್ರೀತಿಸಿ ಮಗುಳ್ದಱಲ್ಲಿ ಗುಣಾಗುಣಂಗಳಂ ॥
ದಾಸನಪ್ಪ ಭಾವ ... ನೀತಿಯ ಮಾತ್ತನುವಿಂಗೆ ಸಾ...ಸಂ ।
ತಾನನುನಿತ್ತು ನಿನ್ನ ಪದಮಿಯುಂ ಪರಿಕ್ಷಿಸಂಗವಿಟ್ಠಲಾ ॥ 7 ೬

ಎನಿತು ದಿನಂ ಬಹುರ್ಗಂಕುವನಿತುಂ ಜನಮೊಪ್ಪೆ ಶರೀರಭೋಗದಿಂ ।
ತನೆಯುನತೀವಪ್ರಾಜ್ಯಮೆನೆ ಮಾಡಿ ಬಱಿಕ್ಕನಸಾನಕಾಲದೊಳ್ ॥
ನವರತಿಮೋಹದಿಂ ಚಲಿಸವಂತು ನಿಜಾಂಘ್ರಿನಿವಾಸವಲ್ಲಿ ನೆ ।
ಟ್ಟನೆ ನೆಲಸಿರ್ಪ ಬಳ್ಳಿಗೆಯನೀವುದು ಜೀಯ್ವನಭಂಗವಿಟ್ಠಲಾ ॥ 8 ೭

ಎಂದು ಮನೋರಥಸಿದ್ಧಿಯುಂ ಪಡೆಯಲೆಂದಾನಭಿಷ್ಟುತಿಗೆಯ್ದನಂತರಂ

ಹೃದಯಸರೋಜದೊಳ್ ನಲಿದು ವಿಟ್ಠಲರಾಯನ ಮೂರ್ತಿಲಕ್ಷ್ಮಿಯುಂ ।
ಪಮುಳದೊಳಿಟ್ಟು ನಾಮಬಲದಿಂ ವಸೆಕೋಟಿಯುನೆಯ್ದೆ ಗೆಲ್ದು ಪೆ ॥
ರ್ಚಿದ ಸುಖರಾಜ್ಯಮಂ ಪಡೆದು ವೈಷ್ಣವಬಂಧುಸಮೂಹಸಂಗದಿಂ ।
ಸದಮಳಬೋಧೆಯುಂ ತಿಳಿದು ಸತ್ಪಥಮಂ ಮಿಗೆ ಕಂಡೆನುರ್ವಿಪಾ ॥ ೮

ಬೞಿಯಂ,

ಜೀಯ ನಿಜಾಂಘ್ರಿಯನಱಸ ।
ಲ್ಕಾಯಿತೆಯಿಂದಂ ತೆರಳ್ದು ಪೋಪಾಗಳ್ ಕಂ ॥
ಡಾಯಿತಸುಪುಣ್ಯವೃಕ್ಷನಿ ।
ಕಾಯಂ ತೀವಿರ್ದರಣ್ಯಮಂ ಮಿಗೆ ಕಂಡೆಂ ॥ ೯

ಫಲಮೆಸೆದಿರ್ದ ಮಾನುರಸಮುಳ್ಳಿಳರೊಪ್ಪುವ ಶಾಖೆ ಪುಷ್ಪಸಂ ।
ಕುಲಮಲರ್ದಿರ್ದ ಸಂಪಗೆ ಮುಗುಳ್ಗಳನಾಂತದಿರ್ಪುರ್ತ್ತಿ ನನ್ನೈಶೀ ॥
ತಲಧವಲಾಂಗಮುಳ್ಳಲರ್ದ ಪಾದರಿ ಕಂಪಿನ ನುಣ್ಪುವೆತ್ತ ಕೋ ।
ಮಲಸುರಪರ್ಣಿಕಾವಿತತಿ ರಂಜಿಪರಣ್ಯಮನೆಯ್ದಿದೆಂ ನೃಪಾ ॥ ೧೦

ಅಂತೆಯದ್ದಲ್ಲಿ

ಜಿತಸಂವರ್ಧಿತತಾಪಮಂ ಘನಪಿಪಾಸಾಲೋಪಮಂ ತೀರ್ಥಸಂ ।
ತತಿಸಂಕ್ಷೇಪಮನುರ್ವಿಸಂಕುಲಲಸತ್ಸಂವೇಪಮಂ ಭೀಕರಾ ॥
ಕೃತಿಘೋರಾಂಬುಚರಾವಲೇಪಮಮನೂನದ್ವೀಪಮಂ ಪಕ್ಷಿಸಂ ।
ತತಿಸಲ್ಲಾಪಮನೊಲ್ದು ಕಂಡೆನೆನಸುಂ ಸದ್ರೂಪಮಂ ಕೂಪಮಂ ॥ ೧೧

ಅವಲ್ಲದೆಯುಂ

ತ್ರಿದಶಾಂಗನೆಯುರ ಪನ್ನಗ ।
ಸುದತಿಯುರಂ ನೋಡಲಿಳಿವ ಪಾತಾಳನಿವಾ ॥
ಸದ ಬಟ್ಟೆಯಂತೆ ಮೆಱೆದಿ ।
ರ್ದುದು ಕೂಪಂ ಸಲಿಲದೇವತಾನಿಜರೂಪಂ ॥ ೧೨

ಆಕೂಪದ ತಡಿಯೊಳ್ ಸಾ ।
ವ್ಯಾಕಾರಂ ಸೂರ್ಯಸನ್ನಿಭಂ ಕುಳ್ಳಿರ್ದಂ ॥
ಕೋಕನದಷಂಡತಟದೊಳ್ ।
ತೂಕಡಿಸುವ ಹಂಸನಂತಿರೊರ್ಬ ಕುಮಾರಂ ॥ ೧೩

ಆತನ ಕೆಲದೊಳ್ ದೀರ್ಘಮ ।
ಹಾತನು ನಿಶ್ಶಂಕಚಿತ್ತನಧಿಕಬಲಂ ಸಂ ॥
ಪ್ರೀತಿಯಿನಿರ್ದಂ ನೀತಿಕ ।
ಳಾತತಿ ಸನ್ಮೂರ್ತಿವೇದಪ್ರೋಕ್ತ ಮತ್ತೊರ್ಬಂ ॥ ೧೪

ಅಂತವರಿರ್ಬರಂ ಕಂಡಾನಾಬಾವಿಯ ತಡಿಗೆ ಪೋಗಿ

ನಯನದಿನೀಂಟುವಂತೆ ತಡಿಯೊಳ್ ಮಿಗೆ ನಿಂದು ಕುಸಾಂಗಿ ರೂಪವಾ ।
ರಿಯ ಮಿಗೆ ನೋಡಿ ನಿ[illegible]ಗೆ ಸ್ವರೂಪಾಯುಮನಾಂ ಮಿಗೆ ಕಂಡ[illegible] ॥
ಳ್ಳಿಯ ಕಪೆಯಲ್ಲಿ ಪೆರ್ಚಿದ ನಾಳಿಯನಾರ್ಗನೆ ಕಟ್ಟ ವೆಲ್ಲಿ ।
ಲ್ಲಿಯ ಲಲಿತಾಂಬುವಂ ಪದೆದು ನೀಂದಿದೆನಾಗಳಳಂಧಿಸಾಸಂಕಾ ॥ ೧೫

ಅಂತು ನೀಂದಿ

ಕರಚರಣಾದ್ಯವಯವಮಂ ।
ಭರವಶದಿಂ ಕರ್ಚಿ ಮಿಕ್ಕ ಶೀತಾಂಬುವನಾ ॥

ದರದಿಂದೀಂಟಿ ಬೞಿಕ್ಕಾಂ ।
ಪರಿಹರಿಸಿದೆನಧ್ವಖೇದಮಂ ನೃಪತಿಲಕಾ ॥ ೧೬

ಅಂತು ಬೞಿಕ್ಕಯುಂ ಪಿಂಗಿಸಿಯಾಕುಮಾರನ ಕೆಲದೊಳದಾರ್ತನ ಮೊಗಮಂ ನೋಡಿ ನೀನೆತ್ತಣವನೆಂದಾಂ ಕೇಳಲಾತನಿಂತೆಂದಂ:—

ಕೇಳೆಲೆ ಜೀವದಯಾಪರ ।
ಭೂಲೋಕವಿಳಾಸಮಖಿಳವಿದ್ಯಾವಾಸಂ ॥
ಶ್ರೀಲಲನಾಜನ್ಮಗೃಹಂ ।
ಲೀಲೆಯೊಳೆ ವಿದರ್ಭದೇಶಮತಿರಮಣೀಯಂ ॥ ೧೭

ದೇಶಂ ಸೌಖ್ಯಪ್ರದೇಶಂ ಸಕಲಸುಕೃತಕೋಶಂ ಪವಿತ್ರೈಕಪಂಚ ।
ಕ್ರೋಶಂ ನಿತ್ಯಪ್ರಕಾಶಂ ದುರಿತನಿಕರಪಾಶಂ ವಿಶಾಲಪ್ರಬದ್ಧಾ ॥
ಕಾಶಂ ಸ್ತೋತ್ರಪ್ರದೇಶಂ ಮದನಕದನದೇಶಂ ಜಗನ್ಮಾತೃಕಾಸ ।
ದ್ವಾಸಂ ತಾನೆಂಬ ಪೆಂಪಂ ತಳೆದು ಮೆಱೆವುದಾನೇಪ್ಪೊಗೞ್ವೆಂ ನಿತಾಂತಂ ॥

ಅಂತಾವಿದರ್ಭದೊಳ್ ಜನ ।
ಸಂತತಿಗಾನಂದಮಂ ನಿರಂತರಮೀಯಲ್ ॥
ಕಂತುವಿನ ನಗರಿಯಂತೆ ನಿ ।
ತಾಂತಂ ರಂಜಿಪುದು ನೋಡೆ ಧಾರಾನಗರಂ ॥ ೧೮

ನರರೆಲ್ಲರ್ ಚದುರರ್ ವಿಳಾಸಿನಿಯರೆಲ್ಲರ್ ಪಾರ್ಥಿಯರ್ ವಾಕ್ಯದ ।
ಚ್ಚರಿಯೆಲ್ಲಂ ಸ್ಮರಶಾಸ್ತ್ರದೋಜೆ ಜನಮೆಲ್ಲಂ ಕಾಮಪರ್ವಂ ಸರೋ ॥
ವರಮೆಲ್ಲಂ ಜಲಕೇಳಿಯಿಕ್ಕೆ ವನಮೆಲ್ಲಂ ಕಂತುಗೇಹಂ ಫಳೋ ।
ತ್ಕರಮೆಲ್ಲಂ ರಸವತ್ಫಲಂ ನಿಜಮೆನಲ್ ತತ್ಪತ್ತನಂ ರಂಜಿಕುಂ ॥ ೧೯

ಪುರಮವನಿದೇವಿಯಾನನ ।
ಪುರಮಖಿಳಜಗನ್ನಿವಾಸದಿದಿಗೊರ್ಪ್ಪವ ಗೋ ॥
ಪುರಮೆಸೆವ ವಿಟರ ಮೊಯ್ಸಂ ।
ಪು ರತೀಶನ ಪೆಂಪು ಸುಜನರಂಪು ನಿತಾಂತಂ ॥ ೨೦

ಆಪುರದರಸಂ ಸಕಳಕ ।
ಳಾಪತಿ ಪೆಸರ್ವೆತ್ತ ಭೋಜವಂಶಂ ನಿಖಿಳಾ ॥

ಶಾಪರಿಪೂರಿತಕೀರ್ತಿಧ ।
ರಾಪಾಲಂ ಪುಣ್ಯವರ್ಮನೆಂಬ ನರೇಂದ್ರಂ ॥ ೨೧

ಆಪುಣ್ಯವರ್ಮಂಗೆ

ನೀತಿಗಳೋಜೆಯುಂ ಸಕಳಧರ್ಮರಹಸ್ಯಮನೊಪ್ಪವಾಗಮು ।
ಖ್ಯಾತಿಯನುದ್ಧಶಾಸ್ತ್ರದಱಿವಂ ಪರಮಾರ್ಥನಿಧಾನಮಂ ಪರ ॥
ಪ್ರೀತಿಯನೊಂದುಗೂಡಿ ಪಡೆದಾ ಕಮಳೋದ್ಭವನೆಂಬ ಮಾಳ್ಕೆಯಿಂ ।
ಭೂತಳವಲ್ಲಭಂಗೆ ವಸುರಕ್ಷಿತನೆಂಬನಮಾತ್ಯಶೇಖರಂ ॥ ೨೨

ಬೞಿಕ್ಕಾಪುಣ್ಯವರ್ಮಂ ಕೆಲವುಕಾಲದಿಂ ಮೇಲೆ ಕಾಲಮಂದಿರಮನೆಯ್ದೆ

ಜನವಿನುತಪುಣ್ಯವರ್ಮನ ।
ತನಯಂ ಪೆಸರ್ವೆತ್ತನಂತವರ್ಮಂ ನವಯೌ ॥
ವನಮದದಿಂ ವ್ಯಸನಾಸಕ್ತ ।
ತ್ತನಾಗಿ ದುರ್ವೃತ್ತಸಂಗದಿಂದಿರ್ಪನೆಗಂ ॥ ೨೩

ಅದಂ ಕಂಡು ವಸುರಕ್ಷಿತಂ ಬುದ್ಧಿವೇೞಲೆಂದನಂತವರ್ಮಂಗಿಂತೆಂದಂ:—

ಅಷ್ಟಮದಂಗಳಂ ತೊಱೆದು ಸಾತ್ವಿಕಭಾವದೊಳಿರ್ದು ಧರ್ಮದೊಳ್ ।
ಶಿಕ್ಷಿಸಿ ಶಾಸ್ತ್ರದೊಳ್ ತಿಳಿದು ಸಜ್ಜನಗೋಷ್ಠಿಯೊಳಿರ್ದು ಸಂತತಂ ॥
ಶಿಷ್ಟರನೊಲ್ಮೆಯಿಂ ಪೊರೆದು ದುಷ್ಟರನೋವದೆ ತೀರ್ಚಿ ಸರ್ವಸಂ ।
ತುಷ್ಟಿಮನಿತ್ತು ಪಾಲಿಪುದು ನೀತಿಯಿದಲ್ತೆ ಧರಾಧಿನಾಯಕಾ ॥ ೨೪

ನವವಿಧನೀಚಸಂಚನೆಗಳಂ ದ್ವಿಜಪಾಲನೆಯಿಂ ಸಮಸ್ತಜೀ ।
ವನನೊಸೆದಾಳ್ಕೆವೆಂಬ ಬಗೆಯಿಂ ಮನವೊಲ್ದು ಗುರೂಪದೇಶಮಾ ॥
ರ್ಗವನೊಳಕೊಂಡು ಸಚ್ಚರಿತದಿಂ ವ್ಯಸನಕ್ಕೊಳಗಾಗದೋಜೆಯಿಂ ।
ತವೆಯುವ ಪಾಪಪುಣ್ಯದಱುಪಿಂದಿರದಾತನ ಬಾಳ್ಕೆ ನಿಷ್ಫಲಂ ॥ ೨೫

ಕನಸಿನ ರಾಜ್ಯದಂತೆ ಮುಗಿಲೊಳ್ತಿನ ರೂಪುಗಳಂತೆ ವಾರ್ಧಿಯೊ ।
ಗ್ಗಿನ ತೆರೆಯಂತೆ ಗಾಳಿಗಿದಿರೊತ್ತಿದ ಕೆಂಜೊಡರಂತೆ ಪಲ್ಲಕಿ ॥
ಚರ್ಮನ ಸಿರಿಯಂತೆ ಜೋಡೆಯರ ಮೆಚ್ಚಿನ ಮೋಹನದಂತೆ .... ।
† ......ರಂದವೊಂದಱಿದು ಪ್ರೋಪ್ರದು ಸತ್ಪಥದೊಳ್ ಕಳಾವಿದಂ ॥ ೨೬

---

† ಜೀವವಜಿರಂ ಎಂದು ಪಾಠ.

ಮದನಮುಖಿಗಳ್ಗೆ ದುರ್ವ್ಯಸನಿಗಳ್ಗೆ ನಿರಂತರಪಾಪಕರ್ಮಿಗ ।
ಳ್ಗೊದಗಿದ ನಾಸ್ತಿಕಗೆ ಪ್ರಸಿಕರ್ಗೆ ಕರಂ ಪಿಶುನಪ್ರಿಯರ್ಗೆ ಧ ॥
ರ್ಮದ ರುಚಿಯಿಲ್ಲದರ್ಗೆ ಖಳನೀತಿಗಳಂ ಮಿಗೆ ಪೇಳ್ವಲೇಕೆ ಬ ।
ಪ್ಪುದೆ ಹೃದಯಕ್ಕೆ ಪ್ರಣ್ಯಗತಿ ಸಜ್ಜನಸಂಗಮದಿಲ್ಲದಿರ್ಪರೊಳ್ ॥ ೧೭

* * * * †

॥ ಗದ್ಯ ॥

ಇದು ನಿಖಿಲಬುಧಜನಮನೋವನಜವನದಿವಾಕರಕಿರಣಪ್ರತಿಮಪ್ರಸನ್ನ

ಶ್ರೀಮದಭಂಗವಿಟ್ಠಲಪದಾಂಭೋಜಮತ್ತಮಧುಕರ

ಮಧುಸೂದನನಂದನ ಸರಸಕವಿ ಚಾಮರಾಜ ವಿರಚಿತಮಪ್ಪ

ಅಭಿನವ ದಶಕುಮಾರಚರಿತೆಯೊಳ್

ವಿಶ್ರುತಕಥಾವೃತ್ತಾಂತಂ

ಚತುರ್ದಶಾಶ್ವಾಸಂ

ಅ ಭಿ ನ ವ ದ ಶ ಕು ಮಾ ರ ಚ ರಿ ತೆ

ಸಂ ಪೂ ರ್ಣ ಂ

† ನಮಗೆ ದೊರೆತ ಪ್ರತಿಗಳಲ್ಲೆಲ್ಲಾ ಇಲ್ಲಿಂದ ಮುಂದೆ ಗ್ರಂಥಪಾತ.

ವಿಷಯವಿವರಣಂ.

- ದ್ವಿತೀಯ ಸಂಪುಟಂ -

		ಪುಟಾದಿಸಂಖ್ಯೆ.
ಅಷ್ಟಮಾಶ್ವಾಸಂ,	ಅಪಹಾರವರ್ಮಕಥಾವೃತ್ತಾಂತಂ	೧
* ನವಮಾಶ್ವಾಸಂ	ಅರ್ಥಪಾಲಕಥಾವೃತ್ತಾಂತಂ	೬೭
ದಶಮಾಶ್ವಾಸಂ,	ಉಪಹಾರವರ್ಮಕಥಾವೃತ್ತಾಂತಂ	೯೪
ಏಕಾದಶಾಶ್ವಾಸಂ,	ಪ್ರಮತಿಕಥಾವೃತ್ತಾಂತಂ	೧೨೨
ದ್ವಾದಶಾಶ್ವಾಸಂ,	ಮಿತ್ರಗುಪ್ತಕಥಾವೃತ್ತಾಂ	೧೪೩
ತ್ರಯೋದಶಾಶ್ವಾಸಂ,	ಮಂತ್ರಗುಪ್ತನಿರೋಷ್ಠಕಥಾವೃತ್ತಾಂತಂ	೧೮೩
ಚತುರ್ದಶಾಶ್ವಾಸಂ,	ವಿಶ್ರುತಕಥಾವೃತ್ತಾಂತಂ	೧೯೬
	(ಅಸಂಪೂರ್ಣಂ)	

* ಒಂದು ಪ್ರತಿಯಲ್ಲಿ ಉಪಹಾರವರ್ಮನ ಕಥೆಯನ್ನು ನವಮಾಶ್ವಾಸವಾಗಿಯೂ, ಅರ್ಥಪಾಲನ ಕಥೆಯನ್ನು ದಶಮಾಶ್ವಾಸವಾಗಿಯೂ ಕೊಟ್ಟಿದೆ.